Digitization by eGangotri and Sarayu Trust. Funding by MoE-IKS

ಚಂದ್ರಜ್ಞಾನಾಗಮ

(ಕನ್ನಡ ಅನುವಾದ ಟಿಪ್ಪಣಿ ಸಹಿತ)

ಸಂಪಾದಕರು ಮತ್ತು ಅನುವಾದಕರು

ಡಾ. ಎಂ. ಶಿವಕುಮಾರ ಸ್ವಾಮಿ

ವೀರಶೈವ ಅನುಸಂಧಾನ ಸಂಸ್ಥಾನ

'ನಾಎನ್ನ' 365/ಸಿ, 5ನೇ 'ಎ' ಮುಖ್ಯರಸ್ತೆ, ರೆಂಕೋ ಬಡಾವಣೆ,

ವಿಜಯನಗರ 2ನೇ ಹಂತ, ಬೆಂಗಳೂರು – 560 040

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವ ಅನುಸಂಧಾನ ಕಿರಣ-೯

ಶ್ರೀ ಚಂದ್ರಜ್ಞಾನಾಗಮ

ಉತ್ತರಭಾಗ

ಕ್ರಿಯಾಪಾದ ಮತ್ತು ಚರ್ಯಾಪಾದ

(ಕನ್ನಡ ಅನುವಾದ ಟಿಪ್ಪಣಿ ಸಹಿತ)

ಅನುವಾದಕರು ಮತ್ತು ಸಂಪಾದಕರು

ಡಾ|| ಎಂ. ಶಿವಕುಮಾರ ಸ್ವಾಮಿ

ಪ್ರಕಾಶಕರು

ವೀರಶೈವ ಅನುಸಂಧಾನ ಸಂಸ್ಥಾನ

'ನಾವೀನ್ಯ', ೩೬೫/ಸಿ, ೫ನೇ 'ಎ' ಮುಖ್ಯರಸ್ತೆ

ರೆಂಕೋ ಬಡಾವಣೆ, ವಿಜಯನಗರ ೨ನೇ ಹಂತ

ಬೆಂಗಳೂರು-೫೬೦ ೦೪೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

SRI CHANDRAJNANAGAMA : Translated and Edited with notes by : Dr. M. Sivakumara Swamy, Professor of Sanskrit (Retd.), Bangalore University, Res: No.88, 4th Cross, Diagonal Road, 8th Main Road, R.P.C. Layout, Vijayanagar 2nd Stage, Bangalore-40. Published by : Veerashaiva Anusandhana Samsthana, 'Navinya', 365/C, 5th 'A' Main Road, Remco Layout, Vijayanagar 2nd Stage, Bangalore-40 ✆ : 3302537

Pages : xxii+265

© Veerashaiva Anusandhana Samsthana

First Impression : December 2002

Price : Rs. 120/-

DTP by:
Varshini Graphics, Bangalore-40 *✆ : 3402575*

Printed at:
Sneha Printers
No. 114, 4th Cross, B.C.C. Layout, Attiguppe
Vijayanagar 2nd Stage, Bangalore-40 *✆ : 3392814*
E-Mail-snehaprinters1@rediffmail.com
karthikenterprisesin@yahoo.com

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ವಿಶ್ವಾರಾಧ್ಯಃ ಪ್ರಸನ್ನಃ

ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ
ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ

ಆಶೀರ್ವಚನ

ಸನಾತನವಾದ ವೀರಶೈವ ಧರ್ಮದ ಸಿದ್ಧಾಂತ ಹಾಗೂ ಆಚಾರ ಸಂಹಿತೆಯು ಮೂಲತಃ ಕಾಮಿಕಾದಿ ವಾತುಲಾಂತಗಳಾದ ೨೮ ಶಿವಾಗಮಗಳಲ್ಲಿ ಪ್ರತಿಪಾದಿತವಾಗಿದೆ. ಅಂತೆಯೇ ಶ್ರೀ ಶಿವಯೋಗಿ ಶಿವಾಚಾರ್ಯರು-

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಂ।। (ಸಿ.ಶಿ. ೫.೧೪)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬುದಾಗಿ ಪ್ರತಿಪಾದಿಸಿ ಅದನ್ನು ಸಮರ್ಥಿಸಿದ್ದಾರೆ. ಇಪ್ಪತ್ತೆಂಟು ಶಿವಾಗಮಗಳ ಉತ್ತರಭಾಗದಲ್ಲಿ ವೀರಶೈವ ಸಿದ್ಧಾಂತದ ವಿವಿಧ ವಿಷಯಗಳು ನಿರೂಪಿತವಾಗಿವೆ. ಸಮಗ್ರ ವೀರಶೈವ ಸಿದ್ಧಾಂತವನ್ನು ನೂರೊಂದು ಸ್ಥಲದಲ್ಲಿ ವಿವೇಚಿಸಿದ ವೀರಶೈವ ಧರ್ಮಗ್ರಂಥವಾದ ಶ್ರೀಸಿದ್ಧಾಂತಶಿಖಾಮಣಿಗೆ ಶಿವಾಗಮಗಳೇ ಮೂಲಭೂತ-ವಾದವುಗಳು. ಹಿಂದೊಂದು ಕಾಲದಲ್ಲಿ ವಿಪುಲವಾಗಿ ಪ್ರಚಲಿತವಾಗಿದ್ದ ಶಿವಾಗಮ ಸಾಹಿತ್ಯವು ಅದೆಷ್ಟೋ ನಶಿಸಿ ಹೋಗಿದ್ದರೂ ಉಳಿದಷ್ಟನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಶ್ರೀ ಕಾಶೀ ಜ್ಞಾನಸಿಂಹಾಸನದ ಜಂಗಮವಾಡಿ ಮಹಾಮಠದಲ್ಲಿ 'ಶ್ರೀ ಜಗದ್ಗುರು ವಿಶ್ವಾರಾಧ್ಯ ಜನ ಕಲ್ಯಾಣ ಪ್ರತಿಷ್ಠಾನ'ವೆಂಬ ರಿಜಿಸ್ಟರ್ಡ್ ಸಂಸ್ಥೆಯನ್ನು ಸಂಸ್ಥಾಪಿಸಿ ಅದರ ಅಡಿಯಲ್ಲಿ ಅನೇಕ ಜನಕಲ್ಯಾಣ ಯೋಜನೆಗಳನ್ನು ರೂಪಿಸಿರುವುದರ ಜೊತೆಗೆ "ಶೈವಭಾರತೀ ಶೋಧ ಪ್ರತಿಷ್ಠಾನ" ಎಂಬ ಶಿವಾಗಮಗಳ ಸಂಶೋಧನಾ ಕೇಂದ್ರವನ್ನು ಸಂಸ್ಥಾಪಿಸಲಾಗಿದ್ದು ಈಗ ಹತ್ತು ವರ್ಷಗಳಿಂದ ಈ ಪ್ರತಿಷ್ಠಾನ ಗಮನೀಯ ಗುರಿಯನ್ನು ಸಾಧಿಸಿದೆ. ಈ ಪ್ರತಿಷ್ಠಾನದಿಂದ ಈಗಾಗಲೇ ಚಂದ್ರಜ್ಞಾನಾಗಮ, ಮಕುಟಾಗಮ, ಸೂಕ್ಷ್ಮಾಗ್ರಮ, ಕಾರಣಾಗಮ, ಪಾರಮೇಶ್ವರಾಗಮ ಮತ್ತು ವೀರಶೈವ ಭಾಷ್ಯ ಯುಕ್ತಗಳಾದ ಈಶ, ಕೇನ, ಸಿದ್ಧಾಂತ ಶಿಖೋಪನಿಷತ್ತುಗಳು ಹಿಂದಿ ಮತ್ತು ಇಂಗ್ಲೀಷ್ ಅನುವಾದದೊಂದಿಗೆ ಪ್ರಕಟಗೊಂಡು ವಿದ್ವತ್ ಸಮಾಜದಲ್ಲಿ ಮನ್ನಣೆಯನ್ನು ಪಡೆದಿವೆ. ಈ ಸಂಶೋಧನಾ ಕಾರ್ಯವನ್ನು ಪರಿಗಣಿಸಿ ಹೊಸದಿಲ್ಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನವು ಶೈವಭಾರತೀ ಶೋಧ ಪ್ರತಿಷ್ಠಾನಕ್ಕೆ ಸಂಪೂರ್ಣ ಮಾನ್ಯತೆಯನ್ನು ಕೊಟ್ಟಿದೆಯಲ್ಲದೇ ಅವಶ್ಯಕ ಅನುದಾನವನ್ನು ಸಹ ಪ್ರತಿವರ್ಷ ಕೊಡುತ್ತಲಿದೆ.

ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಭಾಷೆಗಳಲ್ಲಿ ಅನುವಾದ ಹೊಂದಿ ಪ್ರಕಟವಾಗುವ ಹಾಗೂ ಪ್ರಕಟವಾಗಲಿರುವ ಸಮಗ್ರ ಸಾಹಿತ್ಯವನ್ನು ಪ್ರಾಂತೀಯ ಭಾಷೆಯಲ್ಲಿ ಅನುವಾದಗೊಳಿಸುವ ಕಾರ್ಯವನ್ನು ಸ್ವತಃ ಕೈಗೆತ್ತಿಗೊಳ್ಳಲಾಗಿದೆ. ಅದರಲ್ಲಿಯೂ ಪ್ರಥಮವಾಗಿ ಕನ್ನಡ ಭಾಷೆಗೆ ಅನುವಾದಗೊಳಿಸುವ ಉದ್ದೇಶದಿಂದ ಬೆಂಗಳೂರು ಮಹಾನಗರದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಅಡಿಯಲ್ಲಿ **"ವೀರಶೈವ ಅನುಸಂಧಾನ ಸಂಸ್ಥಾನ"** ಎಂಬ ಶೋಧ ಸಂಸ್ಥೆಯನ್ನು ಸ್ಥಾಪಿಸಲಾಗಿದ್ದು, ಈ ಶೋಧ ಸಂಸ್ಥೆಯ ಮುಖ್ಯಸ್ಥರಾಗಿ ಬೆಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿದ್ದ ಡಾ।। ಎಂ. ಶಿವಕುಮಾರ ಸ್ವಾಮಿಗಳವರು ಕಾರ್ಯ ನಿರ್ವಹಿಸುತ್ತಲಿದ್ದಾರೆ. ಇವರ ನಿರ್ದೇಶನದಂತೆ ಅನೇಕ ಜನ ಸಂಸ್ಕೃತ ವಿದ್ವಾಂಸರು ಕೆಲವು ಆಗಮಗಳನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯವನ್ನು ಮುಗಿಸಿದ್ದಾರೆ. ಪ್ರಸ್ತುತ ಡಾ।। ಎಂ. ಶಿವಕುಮಾರ ಸ್ವಾಮಿ ಅವರೇ ಶ್ರೀ ಚಂದ್ರಾಜ್ಞಾನಾಗಮವನ್ನು ಕನ್ನಡ ಭಾಷೆಗೆ ಬಹು ಸುಂದರವಾಗಿ ಅನುವಾದಿಸಿ ಕನ್ನಡನಾಡಿನ ಜನರಿಗೆ ಮಹದುಪಕಾರವನ್ನು ಮಾಡಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಂದ್ರಜ್ಞಾನಾಗಮವು ಕಾಮಿಕದಿಂದ ವಾತುಲದವರೆಗಿನ ಇಪ್ಪತ್ತೆಂಟು ಶೈವಾಗಮಗಳಲ್ಲಿ ಒಂದು. ಶ್ರೀರುದ್ರನಿಂದ ಬೋಧಿಸಲ್ಪಟ್ಟ ಹದಿನೆಂಟು ಶೈವಾಗಮಗಳಲ್ಲಿ ಇದು ಒಂಬತ್ತನೆಯದು. ಶಿವಸಂಹಿತೆಗಳೆಂದು ಕರೆಯಲಾಗುವ ಮೊದಲ ಹತ್ತನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಆಗುವ ಒಟ್ಟು ಇಪ್ಪತ್ತೆಂಟು ಶೈವಾಗಮಗಳಲ್ಲಿ ಇದು ಹತ್ತೊಂಬತ್ತನೆಯದು. ಇದರಲ್ಲಿ ಅನಂತರುದ್ರನು ದೇವತೆಗಳ ಗುರುವಾದ ಬೃಹಸ್ಪತಿಗೆ ವೀರಶೈವದ ಆಚಾರ-ವಿಚಾರಗಳನ್ನು ಬೋಧಿಸಿದ್ದಾನೆ. ಇದು ಕ್ರಿಯಾಪಾದ ಮತ್ತು ಚರ್ಯಾಪಾದಗಳೆಂಬ ಎರಡು ಭಾಗಗಳನ್ನು ಒಳಗೊಂಡಿದೆ.

ಈ ಆಗಮದ ಪ್ರಕಟನೆಗಾಗಿ ಬೆಂಗಳೂರಿನ ಪ್ರಮುಖ ಕೈಗಾರಿಕೋದ್ಯಮಿಗಳಲ್ಲಿ ಒಬ್ಬರಾದ ಶ್ರೀ ಎಂ.ಕೆ. ರಾಜಮಾನೆ ಅವರು ಆರ್ಥಿಕ ಸಹಕಾರವನ್ನು ನೀಡಿದ್ದಾರೆ. ಅವರಿಗೂ ಮತ್ತು ಅವರ ಕುಟುಂಬದವರಿಗೂ, ಈ ಗ್ರಂಥವನ್ನು ಅನುವಾದ ಮಾಡಿ ಟಿಪ್ಪಣಿಗಳೊಂದಿಗೆ ಸಂಪಾದಿಸಿಕೊಟ್ಟ ಡಾ|| ಎಂ. ಶಿವಕುಮಾರ ಸ್ವಾಮಿಗಳವರಿಗೆ ಮತ್ತು ಸಂಪಾದಕ ಮಂಡಲಿಯ ಸಮಸ್ತ ಸದಸ್ಯರಿಗೆ ಹಾಗೂ ಈ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸದಾ ಕಾರ್ಯತತ್ಪರವಾಗಿರುವ ಪೋಷಕ ಮಂಡಲಿಯ ಸಮಸ್ತ ಪದಾಧಿಕಾರಿಗಳಿಗೆ ಶ್ರೀ ಜಗದ್ಗುರು ವಿಶ್ವಾರಾಧ್ಯರು ಅನಂತ ಮಂಗಲ ಪರಂಪರೆಯನ್ನುಂಟುಮಾಡಲೆಂಬುದಾಗಿ ಆಶೀರ್ವದಿಸಲಾಗಿದೆ.

ವಾಚಕರು ಈ ಗ್ರಂಥವನ್ನು ಅಭ್ಯಸಿಸಿ ತಮ್ಮ ಜ್ಞಾನವನ್ನು ಅಭಿವೃದ್ಧಿಗೊಳಿಸಿ-ಕೊಳ್ಳುವವರಾಗಲಿ ಎಂಬುದಾಗಿ ಆಶೀರ್ವದಿಸಿ ಈ ಆಶೀರ್ವಚನವನ್ನು ಪೂರ್ಣಗೊಳಿಸುತ್ತೇವೆ.

ಇತ್ಯಾಶಿಷಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗ್ರಂಥದಾನಿಗಳ ಪರಿಚಯ

ಶ್ರೀಮಾನ್ ಎಂ.ಕೆ. ರಾಜಮಾನೆಯವರು ಬೆಳಗಾಂ ಜಿಲ್ಲೆಯ ಕುಡುಚಿ ಗ್ರಾಮದಲ್ಲಿನ ಸುಸಂಸ್ಕೃತ ಮನೆತನದವರಾದ ಲಿಂ. ಶ್ರೀ ಕಲ್ಲಪ್ಪ ರಾಜಮಾನೆ ಮತ್ತು ಲಿಂ. ಸುಂದರಮ್ಮ ಇವರ ಸುಪುತ್ರರು. ೧೯೬೫ರಲ್ಲಿ ಇಂಜಿನೀಯರಿಂಗ್ ಪದವೀಧರರಾಗಿ ತಮ್ಮ ಉದ್ಯೋಗ ಜೀವನವನ್ನು ಶರಾವತಿ ಪವರ್ ಸ್ಟೇಷನ್‌ನಲ್ಲಿ ಆರಂಭಿಸಿ ಮುಂದೆ N.G.E.F. ನಲ್ಲಿ ಡಿಸೈನ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದ್ದಾರೆ.

ವಿದ್ಯಾರ್ಥಿ ಜೀವನದಲ್ಲೇ ಕೈಗಾರಿಕೋದ್ಯಮಿ ಆಗಬೇಕೆಂಬ ಕನಸು ಕಂಡಿದ್ದ ರಾಜಮಾನೆಯವರು ಎನ್.ಜಿ.ಇ.ಎಫ್.ನ ಉದ್ಯೋಗಕ್ಕೆ ರಾಜಿನಾಮೆ ಇತ್ತು ತಮ್ಮದ್ದೇ ಆದ Rajamane Telestric Pvt.Ltd. ಎಂಬ ಕಾರ್ಖಾನೆಯನ್ನು ೧೯೭೧-೭೨ರಲ್ಲಿ ಆರಂಭಿಸಿ ತಮ್ಮ ಕನಸನ್ನು ನನಸಾಗಿಸಿಕೊಂಡರು. ನನಸಾಗಿಸಿಕೊಂಡ ಕಾರಣ ಸತತ ಶ್ರಮ, ಶ್ರದ್ಧೆ ಪ್ರೀತಿಯಿಂದ ಹಗಲಿರುಳು ಶ್ರಮಿಸಿ ಟೆಲಿಫೋನಿಗೆ ಸಂಬಂಧಿಸಿದ ಬೇರೆ ಬೇರೆ ವಸ್ತುಗಳನ್ನು ತಯಾರಿಸಲಾರಂಭಿಸಿದರು. ಅದರ ಫಲವಾಗಿ ಇಂದು ಭಾರತದಲ್ಲಿ ಶೇ. ೯೫ರಷ್ಟು ಉತ್ತಮ ದರ್ಜೆ ದೂರವಾಣಿಯ ಬಿಡಿ ಭಾಗಗಳನ್ನು ಒದಗಿಸುವಷ್ಟು ದೊಡ್ಡದಾಗಿ ಬೆಳೆದಿದ್ದಾರೆ, ಎಂಬುದು ವೀರಶೈವ ಸಮಾಜಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಇವರ ಕಾರ್ಖಾನೆಯಲ್ಲಿ ತಯಾರಾಗುವ ಟೆಲಿಫೋನಿನ ಬಿಡಿ ಭಾಗಗಳು ಹೊರ ದೇಶದಲ್ಲಿ ತಯಾರಿಸಲ್ಪಡುವ ಬಿಡಿ ಭಾಗಗಳಿಗಿಂತ ಹೆಚ್ಚು ಗುಣಮಟ್ಟದ್ದಾಗಿದ್ದ ಕಾರಣ ಕಳೆದ ಏಳು ವರ್ಷಗಳಿಂದ ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು ಬಂದಿರುವುದಲ್ಲದೆ ವಿದೇಶದಿಂದ ಟೆಲಿಫೋನಿನ ಬಿಡಿ ಭಾಗಗಳು ಭಾರತಕ್ಕೆ ಆಮದಾಗದಂತೆ ನೋಡಿಕೊಳ್ಳುತ್ತಿದ್ದಾರೆ.

ಮೊಬೈಲ್ ಫೋನಿಗೆ ಬೇಕಾಗಿರುವ ಬ್ಯಾಟರಿಯನ್ನು ತಯಾರಿಸುವ ಹೊಸ ಯೋಜನೆಯನ್ನು ಆರಂಭಿಸಿದ ಏಕೈಕ ಕಾರ್ಖಾನೆಯ ಸ್ಥಾಪಕರು ಇವರು ಎಂಬ ಹೆಗ್ಗಳಿಕೆ ಇವರದ್ದಾಗಿದೆ.

೨೫ ವರ್ಷಗಳ ಪರಿಶ್ರಮದ ಫಲವಾಗಿ ರಾಜಮಾನೆಯವರಿಗೆ ಅನೇಕ ಪ್ರಶಸ್ತಿಗಳು ದೊರೆತು, ಕೈಗಾರಿಕಾ ಕ್ಷೇತ್ರದಲ್ಲಿ ಗಮನಾರ್ಹ ಮೈಲಿಗಲ್ಲುಗಳನ್ನು ಸ್ಥಾಪಿಸಿದ್ದಾರೆ.

೧. ೧೯೭೪ರಲ್ಲಿ Import Substitutionಗಾಗಿ ಗಣರಾಜ್ಯೋತ್ಸವ ಪ್ರಶಸ್ತಿ,

೨. ೧೯೭೮ರಲ್ಲಿ ಬಹು ಹೆಚ್ಚಿನ ರಫ್ತು ಮಾಡಿದ್ದಕ್ಕಾಗಿ ಕರ್ನಾಟಕದ ಸಣ್ಣ ಕೈಗಾರಿಕೋದ್ಯಮಿ ಪ್ರಶಸ್ತಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩. ೧೯೮೬ರಲ್ಲಿ ಸ್ವಂತ ಉದ್ಯಮಿದಾರ ಎಂದು ಭಾರತದ ಉಪರಾಷ್ಟ್ರಪತಿಗಳಿಂದ ಪ್ರಶಸ್ತಿ,

೪. ೧೯೮೨ರಲ್ಲಿ ಉತ್ತಮ ಉತ್ಪಾದಕರಾದ ಕಾರಣ Karnataka Productivity Council ಪ್ರಶಸ್ತಿ,

೫. ೨೦೦೧ರಲ್ಲಿ ಚೀನಾ ದೇಶದೊಂದಿಗೆ ಸ್ಪರ್ಧಿಸಿ ಶೇ. ೯೫ ಭಾಗಕ್ಕೂ ಹೆಚ್ಚು ರಿಸೀವರ್ಸ್‌ಗೆ ಇದ್ದ ಮಾರ್ಕೆಟ್‌ನ್ನು ಉಳಿಸಿಕೊಂಡ ದಿಟ್ಟ ಕಾರಣಕ್ಕೆ "National Award from FIE foundation" ಪ್ರಶಸ್ತಿ,

ಇಂತಹ ಅತ್ಯುತ್ತಮ ಪ್ರಶಸ್ತಿಗಳು ಅವರ ಕೊರಳನ್ನು ಅಲಂಕರಿಸಿದ್ದರೂ ಶ್ರೀ ರಾಜಮಾನೆಯವರು ನಿಗರ್ವಿಗಳಾಗಿದ್ದಾರೆ. ಮಿತಭಾಷಿ, ಮೃದು ನಡವಳಿಕೆಯ ರಾಜಮಾನೆಯವರು ಸಮಾಜದಿಂದ ಅಭಿವೃದ್ಧಿ ಹೊಂದಿರುವ ಕಾರಣ, ಸಮಾಜಕ್ಕಾಗಿ ಸೇವೆ ಸಲ್ಲಿಸಬೇಕೆಂಬ ಮನೋಭಾವದಿಂದ ಅನೇಕ ಸಂಸ್ಥೆಗಳ ಸದಸ್ಯರಾಗಿ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

ಕಾಸಿಯ (K.A.S.S.I.A.) ದಲ್ಲಿ, Great Bangalore Industries Association ನಲ್ಲಿ, I T I Ancillary Industries ನಲ್ಲಿ, Rotary Down Town ನಲ್ಲಿ ಅಧ್ಯಕ್ಷರಾಗಿಯೂ B.M.A.ಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಹಾಗೆ ವೀರಶೈವ ಸಮಾಜದ ಏಳ್ಗೆಗಾಗಿ ಕಾಳಜಿ ಹೊಂದಿರುವ ರಾಜಮಾನೆಯವರು ವೀರಶೈವ ಕ್ಷೇಮಾಭಿವೃದ್ಧಿ ಸದಸ್ಯರಾಗಿಯೂ, ವೀರಶೈವ ಅನುಸಂಧಾನ ಸಂಸ್ಥಾನದ ಪೋಷಕ ಮಂಡಲಿ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ರಾಜಮಾನೆಯವರ ಯಶಸ್ವೀ ಬದುಕಿಗೆ ಹೆಗಲೆಣೆಯಾಗಿ ನಿಂತಿರುವವರು ಅವರ ಧರ್ಮಪತ್ನಿಯಾದ ಡಾ. ನರ್ಮದಾ ಅವರು. ವೈದ್ಯಕೀಯ ವೃತ್ತಿ ಅವರದ್ದಾದರೂ ಪತಿಯ ಎಲ್ಲಾ ಸೇವಾಕಾರ್ಯಗಳಲ್ಲೂ ಸಮಭಾಗಿಗಳಾಗಿದ್ದಾರೆ. B.E., M.B.A., ಪದವೀಧರರಾದ ಇವರ ಹಿರಿಯ ಪುತ್ರ ಪ್ರಭು ರಾಜಮಾನೆ ಅವರು ತಂದೆಯ ಇಂಡಸ್ಟ್ರೀಸ್ ಅನ್ನು ನಡೆಸುತ್ತಿದ್ದಾರೆ. ಎರಡನೆಯ ಪುತ್ರ ಮಹೇಶ್ ರಾಜಮಾನೆ ಅವರು ಬಿ.ಇ. ಓದುತ್ತಿದ್ದಾರೆ. ಮೊನಿಕಾ ಪ್ರಭು ಇವರ ಹಿರಿಯ ಸೊಸೆಯಾಗಿದ್ದಾರೆ. Software ಇಂಜಿನಿಯರ್ ಆಗಿದ್ದು ಅವರ ಪತಿಯೊಡನೆ ಜೊತೆಗೂಡಿ ತಮ್ಮ ಕಾರಖಾನೆಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಇವರಿಗೆ ಇವರ ಕುಟುಂಬದ ಸರ್ವಸದಸ್ಯರಿಗೂ ಜಗದಾದಿ ಜಗದ್ಗುರು ವಿಶ್ವಾರಾಧ್ಯರು ಆಯುರಾರೋಗ್ಯ ದಯಪಾಲಿಸಲೆಂದು ವೀರಶೈವ ಅನುಸಂಧಾನ ಸಂಸ್ಥಾನದ ಸದಸ್ಯರು ಹಾರೈಸುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಪಣೆ

ದಿ|| ಶ್ರೀ ಕಲ್ಲಪ್ಪ ಶಿವಪ್ಪ ರಾಜಮಾನೆ

ದಿ|| ಶ್ರೀಮತಿ ಸುಂದರಮ್ಮ ಕಲ್ಲಪ್ಪ ರಾಜಮಾನೆ

ಗ್ರಂಥದಾನಿಗಳಾದ ಶ್ರೀ ರಾಜಮಾನೆ ಅವರು 'ಚಂದ್ರಜ್ಞಾನಾಗಮ' ಗ್ರಂಥವನ್ನು ಅವರ ತಾಯಿ ತಂದೆಯವರಿಗೆ ಅರ್ಪಿಸಿದ್ದಾರೆ.



ಕುಳಿತಿರುವವರು : ಶ್ರೀ ಎಂ.ಕೆ. ರಾಜಮಾನೆ ಮತ್ತು ಡಾ|| ನರ್ಮದಾ ಎಂ. ರಾಜಮಾನೆ
ನಿಂತಿರುವವರು : ಶ್ರೀ ಪ್ರಭು ಎಂ. ರಾಜಮಾನೆ, ಶ್ರೀಮತಿ ಮೋನಿಕಾ ಪಿ. ರಾಜಮಾನೆ ಮತ್ತು ಶ್ರೀ ಮಹೇಶ್ ಎಂ. ರಾಜಮಾನೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನ್ನುಡಿ

ಶೈವ ಮತವು ಭಾರತದಲ್ಲಿ ಅತ್ಯಂತ ಪ್ರಾಚೀನಮತ ಅಷ್ಟೇ ಅಲ್ಲ ಪ್ರಪಂಚದಲ್ಲೇ ಅತ್ಯಂತ ಪ್ರಾಚೀನ. ವೇದಗಳಲ್ಲಿ ಶಿವನಿಗೆ ಈಶ, ಈಶ್ವರ, ರುದ್ರ, ಶಿತಿಕಂಠ, ಸರ್ವಜ್ಞ, ಕಪರ್ದಿ ಇತ್ಯಾದಿ ಅನೇಕ ಹೆಸರುಗಳಿವೆ. ಋಗ್ವೇದದ ೬೦-೭೦ ಸೂಕ್ತಗಳಲ್ಲಿ ಶಿವನ ಹೆಸರು, ಪ್ರಭಾವ ಹಾಗೂ ಸ್ವರೂಪಗಳ ವರ್ಣನೆಯಿದೆ. ಯಜುರ್ವೇದದಲ್ಲಿ ಶತರುದ್ರದ ದೇವತೆಯು ಶಿವ. ಈ ವೇದದ ೧೬ನೇ ಅಧ್ಯಾಯವಂತೂ ರುದ್ರ-ಶಿವ ಮಹಿಮೆಯ ವರ್ಣನೆಗೆ ಮೀಸಲಾಗಿದೆ. ಶೈವರ ಪವಿತ್ರ ಮಂತ್ರವಾದ ಶಿವಪಂಚಾಕ್ಷರಿ ಮಂತ್ರದ ಮೂಲವೆಂದರೆ ಇದೇ ರುದ್ರಾಧ್ಯಾಯದ ೮ನೇ ಅನುವಾಕ. ಅಥರ್ವವೇದದಲ್ಲಿ ಶಿವನನ್ನು ಸಹಸ್ರಚಕ್ಷು, ತಿಗ್ಮಾಯುಧ, ವಿದ್ಯುಚ್ಛಕ್ತಿ ಮುಂತಾಗಿ ವರ್ಣಿಸಲಾಗಿದೆ. ಹರಪ್ಪಾ ಮತ್ತು ಮಹೆಂಜೋದಾರೋ (ಸಿಂಧು) ಸಂಸ್ಕೃತಿಯಲ್ಲಿ ಶೈವಮತವು ಪ್ರಚಾರದಲ್ಲಿದ್ದ ಕುರುಹುಗಳು, ಚಿಕ್ಕಚಿಕ್ಕ ಲಿಂಗಗಳು ಮುಂತಾಗಿ ದೊರೆತಿವೆ. ವೇದಗಳಲ್ಲಿ ಮಾತ್ರವಲ್ಲ, ತಂತ್ರಸಾಹಿತ್ಯ, ರಾಮಾಯಣ, ಮಹಾಭಾರತ, ಪುರಾಣ, ಸ್ಮೃತಿ ಗ್ರಂಥಗಳಲ್ಲಿ ಶಿವನ ಉಪಾಸನೆ ವರ್ಣಿತವಾಗಿದೆ. ತಂತ್ರಗಳ (ಆಗಮಗಳ) ರಚನೆಯೇ ಉಮಾ-ಮಾಹೇಶ್ವರ, ರುದ್ರ-ಮಹೇಶ್ವರ ಇವರ ಸಂವಾದಗಳ ರೂಪದಲ್ಲಿದೆ. ಆಗಮಗಳ ಮೂಲಕ ಶಂಕರನು ತನ್ನ ಮಹತ್ತ್ವವನ್ನು ಪ್ರತಿಪಾದಿಸುವುದರ ಜೊತೆಗೆ ಅನೇಕ ರಹಸ್ಯವಿದ್ಯೆಗಳನ್ನು ಪ್ರತಿಪಾದಿಸಿದ್ದಾನೆ.

ಕಾಮಿಕಾದಿ ವಾತುಲಾಂತ ಶೈವಾಗಮಗಳು ಇಪ್ಪತ್ತೆಂಟು. ಇವುಗಳಲ್ಲದೆ ಇನ್ನೂರ ಎಂಟು ಉಪಾಗಮಗಳು ಪರಿಗಣಿತವಾಗಿವೆ. ಇವುಗಳಲ್ಲಿ ಕೆಲವು ಮೂಲ ಆಗಮಗಳು ಮತ್ತು ಕೆಲವು ಉಪಾಗಮಗಳು ಉಪಲಬ್ಧವಾಗಿವೆ. ದೊರೆತವುಗಳೂ ಕೂಡ ಸಮಗ್ರವಾಗಿ ದೊರೆತಿಲ್ಲ. ಸಾಮಾನ್ಯವಾಗಿ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ ಮತ್ತು ಜ್ಞಾನಪಾದವೆಂದು ಆಗಮಗಳಲ್ಲಿ ನಾಲ್ಕು ನಾಲ್ಕು ಪಾದಗಳಿರಬೇಕು. ಉಪಲಬ್ಧವಾದ ಕೆಲವು ಆಗಮಗಳಲ್ಲಿ ನಾಲ್ಕು ಪಾದಗಳು ದೊರೆತಿಲ್ಲ. ಅಲ್ಲದೆ ಆಗಮಗಳು ಪೂರ್ವ ಮತ್ತು ಉತ್ತರವೆಂದು ಎರಡೆರಡು ಭಾಗಗಳನ್ನು ಹೊಂದಿವೆ. ಪೂರ್ವಭಾಗದಲ್ಲಿ ಸಾಮಾನ್ಯ ಶೈವದ ವಿಚಾರಗಳು, ಉತ್ತರಭಾಗದಲ್ಲಿ ವೀರಶೈವದ ವಿಚಾರಗಳೂ ಬರುತ್ತವೆ. ಇದಕ್ಕೆ ಶ್ರೀಸಿದ್ಧಾಂತಶಿಖಾಮಣಿ, ಇತರ ಪ್ರಮಾಣ ಗ್ರಂಥಗಳು ಮತ್ತು ಬಸವಣ್ಣ, ಚೆನ್ನಬಸವಣ್ಣ ಮುಂತಾದ ಶರಣರ ವಚನಗಳಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಲ್ಲೇಖಿಸಲ್ಪಟ್ಟ ಆಗಮೋಕ್ತಿಗಳು ಸಾಕ್ಷಿ. **ಶ್ರೀಸಿದ್ಧಾಂತಶಿಖಾಮಣಿ**ಯಂತೂ ಸ್ಪಷ್ಟವಾಗಿ ಹೇಳುತ್ತದೆ:

> **ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।**
> **ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥**
>
> **(ಸಿ.ಶಿ. ೫.೧೪)**

ಆದರೆ ಕೆಲವು ಆಗಮಗಳ ಪೂರ್ವಭಾಗ ಮಾತ್ರ ಮತ್ತೆ ಕೆಲವು ಆಗಮಗಳ ಉತ್ತರಭಾಗ ಮಾತ್ರ ದೊರೆತಿವೆ. ಇವುಗಳಲ್ಲಿ ಕೆಲವು ಮಾತ್ರ ಪ್ರಕಟಿತವಾಗಿವೆ. ಇನ್ನೂ ಕೆಲವು ಅಪ್ರಕಟಿತ ಆಗಮಗಳು ಹಸ್ತಪ್ರತಿರೂಪದಲ್ಲಿ ಪ್ರಾಚ್ಯ ಹಸ್ತಪ್ರತಿ ಸಂಗ್ರಹಾಲಯಗಳಲ್ಲಿ ದೊರೆಯುತ್ತವೆ. ಪ್ರಕಟಿತವಾದವುಗಳೂ ಕೂಡ ಪ್ರತಿಗಳು ಎಂದೋ ಮುಗಿದ ಕಾರಣ ಈಗ ದೊರೆಯುತ್ತಿಲ್ಲ. ಹೀಗೆ ಆಗಮಗಳ ಪ್ರಚಾರ ಮತ್ತು ಪ್ರಸಾರ ಕಡಿಮೆಯಾಗಿರುವುದರಿಂದ ಧಾರ್ಮಿಕ ಜಿಜ್ಞಾಸುಗಳಿಗೆ ಅವುಗಳ ಲಾಭ ದೊರೆಯುತ್ತಿಲ್ಲ. ಇದೆಲ್ಲವನ್ನೂ ಮನಗಂಡು, ಈ ನ್ಯೂನತೆಯನ್ನು ಪೂರ್ಣಗೊಳಿಸುವ ಸಲುವಾಗಿ ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಜಂಗಮವಾಡಿ ಮಠ, ಅವರು **ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ**ವನ್ನು ತಮ್ಮ ಶ್ರೀಮಠದಲ್ಲಿ ಸ್ಥಾಪಿಸಿ ಅದರ ಮೂಲಕ ಚಂದ್ರಜ್ಞಾನಾಗಮ, ಸೂಕ್ಷ್ಮಾಗ್ರಮ, ಮಕುಟಾಗಮ, ಪಾರಮೇಶ್ವರಾಗಮ ಮತ್ತು ಕಾರಣಾಗಮ ಎಂಬ ಐದು ಆಗಮಗಳ ಉತ್ತರಭಾಗಗಳನ್ನು ಹಿಂದಿ ಮತ್ತು ಇಂಗ್ಲಿಷ್ ಅನುವಾದಗಳೊಂದಿಗೆ ಪ್ರತ್ಯೇಕವಾಗಿ ಪ್ರಕಟಿಸಿದ್ದಾರೆ. ಶ್ರೀ ಶ್ರೀ ಜಗದ್ಗುರುಗಳ ಸಂಕಲ್ಪದಂತೆ ಬೆಂಗಳೂರಿನಲ್ಲಿ **ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ**ದ ಅಂಗಸಂಸ್ಥೆಯನ್ನು **'ವೀರಶೈವ ಅನುಸಂಧಾನ ಸಂಸ್ಥಾನ'** ಎಂಬ ಹೆಸರಿನಲ್ಲಿ ಸ್ಥಾಪಿಸಿ ಅದರ ಮೂಲಕ ಕನ್ನಡ ಅನುವಾದ ಮತ್ತು ಭೂಮಿಕೆಗಳೊಂದಿಗೆ ಆ ಆಗಮಗಳನ್ನು ಇತರ ಆಗಮಗಳನ್ನು, ವೀರಶೈವ ಗ್ರಂಥಗಳನ್ನು ಮತ್ತು ನಡೆಸಿದ ವಿಚಾರ ಸಂಕಿರಣಗಳ ಪ್ರಬಂಧಗಳನ್ನು ಪ್ರಕಟಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಅದರ ಅಂಗವಾಗಿ ಈಗಾಗಲೇ ಮಕುಟಾಗಮ, ಸಿದ್ಧಾಂತ ಶಿಖಾಮಣಿ ವಿಚಾರ ದೀಪ್ತಿ, ಶೈವಾಗಮಗಳಲ್ಲಿ ವೀರಶೈವ, ಕಾರಣಾಗಮ, ಪಾರಮೇಶ್ವರಾಗಮ, ಸೂಕ್ಷ್ಮಾಗ್ರಮ, ಚಂದ್ರಜ್ಞಾನಾಗಮ ವಿಚಾರರಶ್ಮಿ ಮತ್ತು ಸೂಕ್ಷ್ಮಾಗ್ರಮ ವಿಚಾರ ಪ್ರಭೆ ಎಂಬ ಎಂಟು ಗ್ರಂಥಗಳು ಪ್ರಕಟವಾಗಿವೆ. ಪ್ರಸ್ತುತ ಶ್ರೀ ಚಂದ್ರಜ್ಞಾನಾಗಮವನ್ನು ಕನ್ನಡ ಅನುವಾದದೊಂದಿಗೆ ಸಿದ್ಧಪಡಿಸಿದ್ದೇನೆ. ಅದಕ್ಕೆ ಮುನ್ನುಡಿಯ ರೂಪದಲ್ಲಿ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ.

ಶೈವಾಗಮಗಳು ಶೈವ ಮತ್ತು ವೀರಶೈವ ಆಚಾರ-ವಿಚಾರಗಳಿಗೆ ಸಮಾನವಾದ ಮೂಲ ಆಕರಗಳು. ಅವುಗಳ ಅಧ್ಯಯನವು ಶೈವ ಮತ್ತು ವೀರಶೈವ ಪರಂಪರೆಗಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವತಾರಾಧನೆ, ಸದಾಚಾರ ಮತ್ತು ಸದ್ವಿಚಾರಗಳಿಂದ ಮುಪ್ಪುರಿಗೊಂಡ ಸಂಸ್ಕೃತಿಯ ಆಧಾರಗಳನ್ನೂ, ಬೆಳವಣಿಗೆಗಳನ್ನೂ ತಿಳಿಯಲು ಅನಿವಾರ್ಯ. ದೊರೆತ ಆಗಮಗಳ ವಿಷಯ ವಿಸ್ತಾರವನ್ನೂ, ದೊರೆಯದವುಗಳ ಪರಂಪರಾಗತ ಉಲ್ಲೇಖಗಳನ್ನೂ ನೋಡಿದರೆ ಅವುಗಳ ಸಾಹಿತ್ಯವು ವಿಪುಲವಾಗಿತ್ತೆಂದು ತಿಳಿದುಬರುತ್ತದೆ. ಕಲಾತ್ಮಕವಾದ ದೇವಾಲಯಗಳ ನಿರ್ಮಾಣ, ಭಗವಂತನ ಲೀಲಾ-ವಿಭೂತಿಗಳ, ಮೂರ್ತಿಗಳ ರಚನೆ, ಆ ಮೂರ್ತಿಗಳ ಸಂಸ್ಕಾರ ಮತ್ತು ಪೀಠಗಳಲ್ಲಿ ಸ್ಥಾಪನೆ, ಬಹುವಿಧ ಉಪಚಾರಗಳಿಂದ ಕೂಡಿದ ಅರ್ಚನೆ, ವಾಹನೋತ್ಸವ, ಕಲ್ಯಾಣೋತ್ಸವ, ರಥೋತ್ಸವಾದಿಗಳ ಆಚರಣೆ ಮುಂತಾದ ವಿವರಗಳೊಂದಿಗೆ ಶೈವ, ವೀರಶೈವ ದೀಕ್ಷೆ, ಸಾಧನಮಾರ್ಗ, ಮಂತ್ರ-ಭಸ್ಮ-ರುದ್ರಾಕ್ಷಗಳ ಮಹತ್ವ, ಅವುಗಳ ಜಪ ಮತ್ತು ಧಾರಣೆಗಳ ವಿಧಾನ, ಆಚಾರ್ಯ ಪರಂಪರೆಯ ಇತಿಹಾಸ, ದಾರ್ಶನಿಕ ತತ್ತ್ವಗಳ ನಿರೂಪಣೆ ಮುಂತಾದ ವಿಷಯಗಳ ವಿಸ್ತಾರವು ಅವುಗಳಲ್ಲಿ ಬರುತ್ತದೆ. ಪರಂಪರೆಯಲ್ಲಿ ಆ ಎಲ್ಲಾ ವಿಷಯಗಳ ಪರಿಷ್ಕಾರವೂ ಆಗಿದೆ.

ಆಗಮ ಎಂದರೇನು?

'ಆಙ್' ಉಪಸರ್ಗಪೂರ್ವಕವಾದ 'ಗಮ್ಲೃ-ಗತೌ' ಧಾತುವಿನಿಂದ 'ಆಗಮ' ಶಬ್ದವು ನಿಷ್ಪನ್ನವಾಗಿದೆ. 'ಆಙ್' ಉಪಸರ್ಗವು ಪರಂಪರೆಯ ಅರ್ಥವನ್ನು ಕೊಡುತ್ತದೆ. ಎಲ್ಲಾ ಗತ್ಯರ್ಥಕಧಾತುಗಳೂ ಜ್ಞಾನದ ಅರ್ಥವನ್ನು ಕೊಡುತ್ತವೆ ಎಂಬ ನಿಯಮದಂತೆ 'ಗಮ್ಲೃ' ಧಾತುವಿಗೂ ಜ್ಞಾನಾರ್ಥವು ಸಿದ್ಧಿಸುತ್ತದೆ. ಹೀಗೆ 'ಆಗಮ'ವೆಂದರೆ 'ಪರಂಪರಾಗತವಾದ ಜ್ಞಾನ'; ಅಂತಹ ಜ್ಞಾನವನ್ನು ಸಂಗ್ರಹಿಸಲಾಗಿರುವ ಗ್ರಂಥರಾಶಿಗೂ ಕೂಡ 'ಆಗಮ'ವೆಂದು ಹೆಸರು. ಆಗಮಗಳಲ್ಲಿಯೇ 'ಆಗಮ' ಶಬ್ದದ ನಿರ್ವಚನವು ಬಂದಿದೆ. ಅಂತಹ ಒಂದು ನಿರ್ವಚನದಂತೆ 'ಆ' ಎಂಬುದು ಶಿವನ ಪಂಚಮುಖಗಳಿಂದ ಬಂದದ್ದೆಂದೂ, 'ಗ' ಎಂಬುದು ಗಿರಿಜೆಗೆ ಹೇಳಲ್ಪಟ್ಟಿದ್ದೆಂದೂ, 'ಮ' ಎಂಬುದು ವಾಸುದೇವನಿಗೆ ಸಮ್ಮತವಾದದ್ದೆಂದೂ 'ಆಗಮ' ಶಬ್ದದ ಮೂರು ಅಕ್ಷರಗಳು ಸೂಚಿಸುತ್ತವೆ:

> **ಆಗತಂ ಪಂಚವಕ್ತ್ರಾತ್ತು ಗತಂ ಚ ಗಿರಿಜಾನನೇ।**
> **ಮತಂ ಚ ವಾಸುದೇವಸ್ಯ ತಸ್ಮಾದ್ ಆಗಮಮುಚ್ಯತೇ॥**
> (ತಂತ್ರಸಮುಚ್ಚಯ, ಪೀಠಿಕೆ. ಪು. ೨)

ಹೀಗೆ **'ಆಗತಂ ಗತಂ ಮತಂ ಚೇತಿ ಆಗಮಮ್'** ಎಂದು 'ಆಗಮ' ಶಬ್ದದ ಅಕ್ಷರ ನಿರ್ವಚನ. ಒಟ್ಟಿನಲ್ಲಿ ಪರಮಾತ್ಮನಿಂದ ಉದ್ಭವಿಸಿ ಪರಂಪರೆಯಿಂದ ಪರಿಷ್ಕೃತವಾದುದು ಆಗಮವೆಂಬ ಶಾಸ್ತ್ರ. 'ಆಗಮೋ ನಾಮ ಆಮಹೇಶ್ವರಾತ್ ಗುರುಪಾರಂಪರ್ಯಾಗತಂ ಶಾಸ್ತ್ರಮ್' (ಪಾಶುಪತ ಸೂತ್ರ).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಗಮಗಳಿಗೆ 'ತಂತ್ರ' ಎಂಬ ಹೆಸರುಂಟು. 'ತನು-ವಿಸ್ತಾರೇ' ಧಾತುವಿಗೆ ತ್ರನ್ ಪ್ರತ್ಯಯ ಸೇರಿ (ತನ್+ತ್ರ) 'ತಂತ್ರ' ಶಬ್ದವು ನಿಷ್ಪನ್ನವಾಗಿದೆ. 'ತಂತ್ರ' ಎಂದರೆ 'ಜ್ಞಾನವನ್ನು ವಿಸ್ತರಿಸುವುದು ಎಂದರ್ಥ. ಈ ಅರ್ಥವನ್ನು ಇಟ್ಟುಕೊಂಡು ಅಜಿತಾಗಮವು 'ತಂತ್ರ' ಶಬ್ದದ ಅರ್ಥವನ್ನು ಹೀಗೆ ನಿಷ್ಪನ್ನಗೊಳಿಸಿದೆ:

ತನೋತಿ ವಿಪುಲಾನರ್ಥಾನ್ ತತ್ತ್ವಮಂತ್ರಸಮಾಶ್ರಿತಾನ್।
ತ್ರಾಣಂ ಚ ಕುರುತೇ ಪುಂಸಾಂ ತೇನ ತಂತ್ರಮಿತಿ ಸ್ಮೃತಮ್॥
(ಅಜಿತಾಗಮ, ಸಂ.೧, ಕ್ರಿ.ಪಾ. ಪ. ೧ ಪದ್ಯ ೧೧೫)

ತತ್ತ್ವ ಮತ್ತು ಮಂತ್ರಗಳನ್ನು ಆಶ್ರಯಿಸಿದ ವಿಪುಲವಾದ ಅರ್ಥವನ್ನು ವಿಸ್ತರಿಸುವ ಮತ್ತು ಮಾನವರನ್ನು ರಕ್ಷಿಸುವ ಶಾಸ್ತ್ರವೇ 'ತಂತ್ರ'.

ವೇದ ಮತ್ತು ಆಗಮ

ಭಾರತೀಯ ಪರಂಪರೆಯಲ್ಲಿ ವೇದ ಮತ್ತು ಆಗಮಗಳಿಗೆ ಸಮಾನವಾದ ಪ್ರಾಶಸ್ತ್ಯ. ವೇದವೆಂದರೆ ಪರಮಾತ್ಮನ ಉಸಿರು, ಆಗಮವೆಂದರೆ ಪರಮಾತ್ಮನ ವಾಣಿ. ಹೀಗೆ ಎರಡೂ ಪರಮಾತ್ಮನಿಂದಲೇ ಬಂದವುಗಳಾದ್ದರಿಂದ ಎರಡಕ್ಕೂ ಸಮಾನ ಪ್ರಾಮಾಣ್ಯ. ಶ್ರೀಪತಿ ಪಂಡಿತರು ಉಲ್ಲೇಖಿಸಿರುವ ಸ್ಮೃತಿಯೊಂದು ಹೇಳುವಂತೆ ಎಲ್ಲಾ ತತ್ತ್ವಗಳ ಪ್ರಕಾಶಕವಾದ ಪರಶಿವನ ವಿಮರ್ಶಶಕ್ತಿಯೇ ನಿಗಮ ಮತ್ತು ಆಗಮಗಳ ರೂಪವನ್ನು ಧರಿಸಿತು:

ವಿಮರ್ಶರೂಪಿಣೀ ಶಕ್ತಿಃ ಶಿವಸ್ಯ ಪರಮಾತ್ಮನಃ।
ನಿಗಮಾಗಮರೂಪಾ ಸ್ಯಾತ್ ಸರ್ವತತ್ತ್ವಪ್ರಕಾಶಿನೀ॥
(ಶ್ರೀಕರ ಭಾಷ್ಯ, ೧.೧.೩)

ಪುರಾತನ ಋಷಿಗಳು ಸತ್ತ್ವೋದ್ರೇಕದ ಸ್ಥಿತಿಯಲ್ಲಿದ್ದಾಗ ಸಾಕ್ಷಾತ್ಕರಿಸಿಕೊಂಡ ಸತ್ಯತತ್ತ್ವಗಳೇ ಮಂತ್ರಗಳು. ಅವುಗಳ ಸಂಕಲನಗಳೇ ವೇದಗಳು. ಹಾಗೆಯೇ ಪರಶಿವನ ಅನುಗ್ರಹಕ್ಕೆ ಪಾತ್ರರಾದ ಜ್ಞಾನಿಗಳಿಗೆ ಗೋಚರವಾಗಿ ಪರಂಪರೆಯಿಂದ ಬಂದ ಜ್ಞಾನವೇ ಆಗಮಗಳಾಯಿತು. ವೇದ ಮತ್ತು ಆಗಮಗಳ ಸಮಾನ ಪ್ರಾಮಾಣ್ಯದ ಬಗ್ಗೆ ಶಿವಯೋಗಿ ಶಿವಾಚಾರ್ಯರು ಹೀಗೆ ಹೇಳಿದ್ದಾರೆ:

ವೇದೈಕದೇಶವರ್ತಿಭ್ಯಃ ಸಾಂಖ್ಯಾದಿಭ್ಯೋ ಮಹಾಮುನೇ।
ಸರ್ವವೇದಾನುಸಾರಿತ್ವಾಚ್ಛೈವತಂತ್ರಂ ವಿಶಿಷ್ಯತೇ॥

ಶೈವತಂತ್ರಮಿತಿ ಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಮ್।
ಸರ್ವವೇದಾರ್ಥರೂಪತ್ವಾತ್ ಪ್ರಮಾಣಂ ವೇದವತ್ಸದಾ॥
(ಶ್ರೀಸಿದ್ಧಾಂತಶಿಖಾಮಣಿ, ೫.೭-೮)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇದದ ಒಂದೊಂದು ಭಾಗದಲ್ಲಿ ಬರುವ ಸಾಂಖ್ಯ ಮುಂತಾದ ಶಾಸ್ತ್ರಗಳಿಗಿಂತಲೂ ಸಮಗ್ರ ವೇದವನ್ನು ಅನುಸರಿಸುವ ಶೈವಾಗಮ ಶಾಸ್ತ್ರವು ವಿಶೇಷ ಮಹತ್ವವನ್ನು ಪಡೆದಿದೆ. ಶಿವನಿಂದ ಉಕ್ತವಾದ ಶೈವಾಗಮಶಾಸ್ತ್ರಕ್ಕೆ ಸಿದ್ಧಾಂತವೆನ್ನುತ್ತಾರೆ. ಅದು ಸಮಸ್ತ ವೇದಾರ್ಥವೇ ಆಗಿರುವುದರಿಂದ ಯಾವಾಗಲೂ ವೇದದಂತೆ ಪ್ರಮಾಣವಾಗಿದೆ. ಶ್ರೀಕಂಠ ಶಿವಾಚಾರ್ಯರು "ವಯಂ ತು ವೇದಾಗಮಯೋಃ ಭೇದಂ ನ ಪಶ್ಯಾಮಃ" ಎಂದು ಹೇಳಿ "ಬ್ರಹ್ಮ, ಪ್ರಣವಪಂಚಾಕ್ಷರೀ, ಪ್ರಸಾದ ಮುಂತಾದ ಮಂತ್ರಗಳಿಗೆ, ಪತಿ-ಪಶು-ಪಾಶ ಎಂಬ ತತ್ತ್ವತ್ರಯಕ್ಕೆ, ಭಸ್ಮೋದ್ಧೂಲನ, ತ್ರಿಪುಂಡ್ರಧಾರಣೆ, ರುದ್ರಾಕ್ಷಧಾರಣ, ಲಿಂಗಪೂಜೆ ಮುಂತಾದ ಮುಖ್ಯ ಧರ್ಮಗಳಿಗೆ ಹಾಗೂ ಎಲ್ಲಾ ವ್ಯವಹಾರಗಳಿಗೆ ವೇದ-ಆಗಮಗಳೆರಡೂ ಸಮಪ್ರಮಾಣವೆನಿಸಿವೆ" -ಎಂದು ಸಮರ್ಥಿಸಿದ್ದಾರೆ. (ಶ್ರೀಕಂಠಭಾಷ್ಯ, ೨.೨.೩೭).

ಆಗಮಗಳು ವೇದದ ಉದ್ದೇಶವನ್ನು ಸಾಧಿಸಲು ಪರಂಪರೆಯಲ್ಲಿ ಮೂಡಿಬಂದಿವೆ. ವೇದಮಂತ್ರಗಳು ಫಲಪ್ರದವಾಗಬೇಕಾದರೆ ಅನುಷ್ಠಾನ ಬೇಕು. ಆಗಮಗಳು ಈ ಮಂತ್ರಗಳ ಅನುಷ್ಠಾನ ವಿಧಾನವನ್ನು ನಿರೂಪಿಸುತ್ತವೆ. ವೇದದಲ್ಲಿ ಬಂದಿರುವ ಮಂತ್ರಗಳಿಗೆ ಋಷಿ, ದೇವತೆ, ಛಂದಸ್ಸು, ಪಲ್ಲವ ಮುಂತಾದವುಗಳನ್ನು ಸೂಚಿಸಿ ಆಗಮಗಳು ಆಯಾ ಮಂತ್ರಗಳ ಅನುಷ್ಠಾನವನ್ನು ಬೋಧಿಸುತ್ತವೆ. ವೇದಮಂತ್ರಗಳು ಸತ್ಫಲವನ್ನು ನೀಡಬೇಕಾದರೆ ಅವು ಸ್ವಾಧೀನವಾಗಬೇಕು. ಅವು ಸ್ವಾಧೀನವಾಗಲು ಪುರಶ್ಚರಣವಿಧಿಯು ಆವಶ್ಯಕ. ಪುರಶ್ಚರಣದಲ್ಲಿ ಪಂಚಾಂಗೋಪಾಸನೆ, ಜಪ, ಹೋಮ, ತರ್ಪಣ, ಅಭಿಷೇಕ ಮತ್ತು ರುದ್ರಭೋಜನ ಎಂಬ ಆರು ಅಂಗಗಳಿವೆ. ಗೀತೆ, ಸಹಸ್ರನಾಮ, ಸ್ತವ, ಕವಚ ಮತ್ತು ಹೃದಯ ಎಂಬವು ಪಂಚಾಂಗೋಪಾನೆಯಲ್ಲಿ ಬರುತ್ತವೆ. ಪ್ರತಿ ಮಂತ್ರಕ್ಕೂ ನಮಃ-ಸ್ವಾಹಾ-ವೌಷಟ್-ಹುಮ್-ಫಟ್ ಎಂಬ ಪಲ್ಲವಗಳು, ಅಂಗನ್ಯಾಸ, ಕರನ್ಯಾಸ, ದಿಗ್ಬಂಧನ ಮುಂತಾದವುಗಳು ಬೇಕು. ಈ ಎಲ್ಲಾ ವಿಚಾರಗಳು ಆಗಮಗಳಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿರುವುದರಿಂದ ವೇದಮಂತ್ರಗಳ ಅನುಷ್ಠಾನವು ಸಾಧ್ಯವಾಗಿದೆ. ಹೀಗೆ ವೇದ ಮತ್ತು ಆಗಮಗಳು ಪರಸ್ಪರ ಸಂಬಂಧವನ್ನು ಹೊಂದಿವೆ.

ಆಗಮಗಳ ಕಾಲ

ಆಗಮಗಳ ಕಾಲವನ್ನು ನಿರ್ಣಯಾತ್ಮಕವಾಗಿ ಹೇಳುವುದು ಬಹುಶಃ ಯಾರಿಗೂ ಸಾಧ್ಯವಿಲ್ಲ. ಉಪಲಬ್ಧವಾದ ಆಗಮಗಳು ಒಂದೇ ಕಾಲದಲ್ಲಿ ಸಂಗ್ರಹಿಸಲ್ಪಟ್ಟವುಗಳೆಂದು ಹೇಳುವುದು ಸಾಧ್ಯವೇ ಇಲ್ಲ. ಅವು ಪರಂಪರೆಯಲ್ಲಿ ಬೆಳೆಯುತ್ತಾ, ಪರಿಷ್ಕೃತವಾಗುತ್ತಾ ಬಂದವುಗಳೆಂಬ ವಿಷಯವು ನಿರ್ವಿವಾದವಾಗಿದೆ. ಭಾಷೆಯ ದೃಷ್ಟಿಯಿಂದ ನೋಡಿದಾಗ ಆಗಮಗಳು ವೇದಗಳ ಕಾಲಕ್ಕಿಂತ ಬಹು ಅರ್ವಾಚೀನ ಕಾಲಕ್ಕೆ ಸೇರಿದವುಗಳೆಂಬುದು ಸ್ಪಷ್ಟ. ಆಗಮಗಳಲ್ಲಿ ನಿರೂಪಿಸಲ್ಪಟ್ಟ ಆಚಾರ-ವಿಚಾರಗಳನ್ನು ನೋಡಿದರೆ ಅವುಗಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಲ ಅಷ್ಟು ಪ್ರಾಚೀನವೆಂದು ಹೇಳಲಾಗದಿದ್ದರೂ ಆಗಮಿಕ ಸಂಸ್ಕೃತಿಯು ಪ್ರಾಚೀನವೆಂಬುದನ್ನು ಒಪ್ಪಬೇಕಾಗುತ್ತದೆ. ಇಲ್ಲಿ "ಯಜ್ಞಯಾಗಾದಿಗಳಿಗೆ ವೇದ ಮಂತ್ರಗಳನ್ನು ಅನ್ವಯ ಮಾಡಿಕೊಂಡು ಸಿದ್ಧವಾದವು ಬ್ರಾಹ್ಮಣಗಳೆಂಬ ಭಾಗಗಳು. ಈ ಬ್ರಾಹ್ಮಣಗಳ ಕಾಲಾನುಕ್ರಮ ಪರಿವರ್ತನೆಯೇ ಆಗಮಗಳೆಂದು ತೋರುತ್ತದೆ" ಎಂಬ ಪ್ರೊ|| ಎಸ್.ಕೆ. ರಾಮಚಂದ್ರರಾವ್ ಅವರ ಮಾತು ಮಾರ್ಮಿಕವಾಗಿದೆ. (ಶಿವಾಗಮ ಸೌರಭ, ಮುನ್ನುಡಿ, ಪು. ೩).

ವೇದಮಂತ್ರಗಳ ಅನುಷ್ಠಾನ ಪದ್ಧತಿಗೆ ಸಂಬಂಧಪಟ್ಟ ವಿವರಣೆಯೂ ಕೆಲವು ಪ್ರಾಚೀನ ಪೂಜಾ ಪದ್ಧತಿಗಳೂ ಆಗಮಗಳ ಆರಂಭಕಾಲಕ್ಕೆ ಸೇರಿದವುಗಳು. ಅನಂತರ ದೇವಮಂದಿರ ನಿರ್ಮಾಣ, ಮೂರ್ತಿಗಳ ರಚನೆ ಮತ್ತು ಪ್ರತಿಷ್ಠಾಪನೆ ಮುಂತಾದ ವಿವರಗಳು ಆಗಮಗಳಲ್ಲಿ ಸೇರಿರಬೇಕು. ಆಗಮಗಳ ಆರಂಭ ಕಾಲವನ್ನು ಸ್ಥೂಲವಾಗಿ ನಿರ್ಧರಿಸಲು ಕೆಲವು ಆಧಾರಗಳು ದೊರೆಯುತ್ತವೆ. ಮೊದಲನೆಯದಾಗಿ ಶೈವಾಗಮಗಳಲ್ಲಿ ಜೈನ ಮತ್ತು ಬೌದ್ಧ ಮತಗಳ ಉಲ್ಲೇಖವು ಸ್ಪಷ್ಟವಾಗಿದೆ. ಉದಾಹರಣೆಗೆ:

> ಆದೌ ತು ಸೌಗತಮತಂ ತಚ್ಚ ಪಂಚವಿಧಂ ಪ್ರಿಯೇ।
> ಬೌದ್ಧ-ಸೌಗತ-ಚಾರ್ವಾಕ-ಜೈನಾರ್ಹತ-ವಿಭಾಗತಃ।।
> (ಪಾರಮೇಶ್ವರಾಗಮ, ಮೊದಲನೇ ಪುಟ)

ಎರಡನೆಯದಾಗಿ ಭಾಷೆಯ ದೃಷ್ಟಿಯಿಂದ ಆಗಮಗಳು ಪಾಣಿನಿಯ ಅನಂತರದ ಕಾಲಕ್ಕೆ ಸೇರಿದವುಗಳು. ಹೀಗೆ ಆಗಮಗಳ ಆರಂಭಕಾಲ ಕ್ರಿ.ಶ. ೬೦೦ರ ಸುಮಾರಿಗೆ ಎಂದು ಸ್ಥೂಲವಾಗಿ ನಿರ್ಧರಿಸಬಹುದು. ಕ್ರಿ.ಪೂ. ೨೦೦ಕ್ಕೆ ಸೇರಿದ್ದೆಂದು ತಿಳಿದ ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟ ಪಾಂಚರಾತ್ರಾಗಮೋಕ್ತಪೂಜಾ ಪದ್ಧತಿ ಮತ್ತು ಕ್ರಿ.ಪೂ. ೫೦೦ಕ್ಕೆ ಸೇರಿದ್ದೆಂದು ಹೇಳಲಾದ ಭಗವದ್ಗೀತೆಯಲ್ಲಿ ಪಾಂಚರಾತ್ರಾಗಮೋಕ್ತ ವಾಸುದೇವ ಮಹತ್ತ್ವ (ಶಿವಾಗಮ ಸೌರಭ, ಪೀಠಿಕೆ, ಪು. XVIII) ಇವುಗಳು ಆಗಮಾರಂಭಕಾಲವನ್ನು ಸೂಚಿಸುತ್ತವೆ. ಈ ಕಾಲ ಇನ್ನೂ ಹಿಂದಕ್ಕೆ ಹೋಗಬಹುದು. ಎಷ್ಟು ಹಿಂದೆ ಎಂದು ನಿಖರವಾಗಿ ಮಾತ್ರ ಹೇಳುವುದು ಸಾಧ್ಯವಿಲ್ಲ.

ಪಾಂಚರಾತ್ರಾಗಮಗಳಲ್ಲಿ ಶೈವಾಗಮಗಳ ಉಲ್ಲೇಖವಿರುವುದು, ಆದರೆ ವೈಷ್ಣವಾಗಮಗಳ ಉಲ್ಲೇಖವು ಶೈವಾಗಮಗಳಲ್ಲಿ ಇಲ್ಲದಿರುವುದು ಶೈವಾಗಮಗಳು ವೈಷ್ಣವಾಗಮಗಳಿಗಿಂತ ಹಿಂದಿನವು ಎಂಬ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುತ್ತದೆ. (ಡಾ|| ಎಸ್.ಸಿ. ನಂದೀಮಠ, ಶಿವಾನುಭವ, ಸಂ. ೭, ಸಂಖ್ಯೆ-೧, ಏಪ್ರಿಲ್ ೧೯೩೧). "ಎಲ್ಲಾ ಆಗಮಗಳು ಅಥವಾ ಆಗಮ ವಾಙ್ಮಯವು ಬಹಳ ಆಧುನಿಕವಿರಬಹುದೆಂಬುದು ಅಥವಾ ಅದು ಒಂದು ಸಾವಿರ ವರ್ಷಕ್ಕಿಂತ ಈಚಿನದಿರುವುದು ಎಂದು ಪ್ರತಿಪಾದಿಸುವುದು ಯೋಗ್ಯವಲ್ಲ. ಹಲವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಪನಿಷತ್ತುಗಳಂತೆ ಕೆಲವು ಆಗಮಗಳು ಈಚಿನವಿರಬಹುದು. ಆದರೆ ಅವುಗಳಲ್ಲಿ ಪ್ರಾಚೀನವಾದವುಗಳು ಸುಮಾರು ೨೦೦೦ ವರ್ಷಗಳ ಹಿಂದಿನವಾದರೂ ಇದ್ದಿರಬೇಕು" ಎಂಬ ಅಭಿಪ್ರಾಯವು ಸಮಂಜಸವಾಗಿದೆ. (ಆರ್.ಆರ್. ದಿವಾಕರ, ವಚನಶಾಸ್ತ್ರ ರಹಸ್ಯ, ೧೯೩೬, ಪು. ೨೪೯). **ಶ್ರೀಸಿದ್ಧಾಂತಶಿಖಾಮಣಿ** (ಕ್ರಿ.ಶ. ೮ ಮತ್ತು ಕ್ರಿ.ಶ. ೧೦ನೇ ಶತಮಾನಗಳ ಮಧ್ಯಭಾಗ) -ಈ ಕೃತಿಯು ಶೈವಾಗಮಗಳಲ್ಲಿನ ವೀರಶೈವ ಭಾಗಗಳ ಸಾರಸಂಗ್ರಹ. **ಶ್ರೀಕಂಠಭಾಷ್ಯ** ಮತ್ತು **ಶ್ರೀಕರಭಾಷ್ಯ** (ಕ್ರಿ.ಶ. ೧೧ನೇ ಶತಮಾನ), ಬಸವಣ್ಣ, ಚನ್ನಬಸವಣ್ಣ ಮುಂತಾದವರ ವಚನಗಳು (ಕ್ರಿ.ಶ. ೧೨ನೇ ಶತಮಾನ) ಮುಂತಾದವುಗಳಲ್ಲಿ ಬರುವ ಶೈವಾಗಮಗಳ ಉಲ್ಲೇಖಗಳು ಸೂಚಿಸುವಂತೆ ೨೮ ಶೈವಾಗಮಗಳ ಬಹುಮಟ್ಟಿನ ಭಾಗಗಳು ಕ್ರಿ.ಶ. ೮ನೇ ಶತಮಾನಕ್ಕಿಂತ ಹಿಂದಿನ ಕಾಲಕ್ಕೆ ಸೇರಿದವುಗಳೆಂದು ಹೇಳಬಹುದು. ಆದರೆ ಅವುಗಳಲ್ಲಿ ಅನಂತರ ಕೆಲವು ಭಾಗಗಳು ಸೇರಿರಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಶ್ರೀ ಚಂದ್ರಜ್ಞಾನಾಗಮವು ಕಾಮಿಕದಿಂದ ವಾತುಲದವರೆಗಿನ ಇಪ್ಪತ್ತೆಂಟು ಶೈವಾಗಮಗಳಲ್ಲಿ ಒಂದು. ಶ್ರೀರುದ್ರನಿಂದ ಬೋಧಿಸಲ್ಪಟ್ಟು ರುದ್ರಸಂಹಿತೆಯೆಂದು ಕರೆಯಲಾಗುವ ಹದಿನೆಂಟು ಶೈವಾಗಮಗಳಲ್ಲಿ ಇದು ಒಂಬತ್ತನೆಯದು. ಶಿವಸಂಹಿತೆಗಳೆಂದು ಕರೆಯಲಾಗುವ ಹತ್ತನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಆಗುವ ಒಟ್ಟು ಇಪ್ಪತ್ತೆಂಟು ಶೈವಾಗಮಗಳಲ್ಲಿ ಇದು ಹತ್ತೊಂಬತ್ತನೆಯದು. ಇದರಲ್ಲಿ ಅನಂತರುದ್ರನು ದೇವತೆಗಳ ಗುರುವಾದ ಬೃಹಸ್ಪತಿಗೆ ವೀರಶೈವದ ಆಚಾರ-ವಿಚಾರಗಳನ್ನು, ವಿಶೇಷವಾಗಿ ಅಷ್ಟಾವರಣ, ಪಂಚಾಚಾರ, ಶಿವಮೇಧಕ್ಕೆ ಸಂಬಂಧಪಟ್ಟ ವಿಚಾರಗಳನ್ನು, ಬೋಧಿಸಿದ್ದಾನೆ. ಇದು ಹನ್ನೆರಡು ಪಟಲಗಳುಳ್ಳ ಕ್ರಿಯಾಪಾದ ಮತ್ತು ಎಂಟು ಪಟಲಗಳುಳ್ಳ ಚರ್ಯಾಪಾದ ಎಂಬ ಎರಡು ಭಾಗಗಳನ್ನು ಒಳಗೊಂಡಿದೆ.

ಈ ಚಂದ್ರಜ್ಞಾನಾಗಮದ ಆರಂಭದಲ್ಲಿ ಬೃಹಸ್ಪತಿಯು ಅನಂತರುದ್ರನನ್ನು ಕುರಿತು ಮಾಡಿಕೊಳ್ಳುವ ವಿಜ್ಞಾಪನೆ ಹೀಗಿದೆ:

ಭಗವನ್ ಕರುಣಾಸಿಂಧೋ ಸರ್ವಜ್ಞಾನಸಮಾಶ್ರಯ।
ನಾವಿಷ್ಕೃತಾಶ್ಚೇದ್ ಭವತಾ ಸ್ಫುಟಮಾಗಮಸಂಹಿತಾಃ॥
ಜಗತ್ ಕಿಲಾಂಧತಾಮಿಶ್ರೇ ನಿಮಜ್ಜೇದ್ ಜ್ಞಾನವರ್ಜಿತಮ್॥
ಅವಿಜ್ಞಾಯೈವ ಯೋ ಲೋಕೇ ಭವದಾಗಮಸಂಹಿತಾಃ॥
ವಿಪಶ್ಚಿತಂ ಸ್ವಂ ಮನುತೇ ನ ತಸ್ಮಾದ್ ವಿದ್ಯತೇ ಪಶುಃ॥
ಭವತ್‌ಪ್ರಸಾದಸಂಪತ್ತ್ಯಾ ಭವದೀಯಾಗಮಾಮೃತಮ್।
ನಿಪೀಯೈವಾಮರಗುರುರಭವಂ ಸಿದ್ಧಸಾಧನಃ॥
ಆಕರ್ಣಿತಾ ಮಯಾ ಭಾಗಾಶ್ಚಂದ್ರಜ್ಞಾನಾಗತಾಃ ಶುಭಾಃ।
ಬಹವಸ್ತದಿಹ ಬ್ರೂಹಿ ಕೃಪಯಾ ಶಿವಶಾಸನಮ್॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೋಕ್ಷಧರ್ಮಾ ವಿಶೇಷಣ ತತ್ರೋಚ್ಯಂತೇ ಇತಿ ಶ್ರುತಮ್।
ಅಹಂ ಶ್ರುತೇನ ಯೇನ ಸ್ಯಾಂ ವಿದಿತಾಶೇಷವೇದನಃ॥

"ಭಗವಂತನೇ, ಕರುಣಾಸಮುದ್ರನೇ, ಎಲ್ಲಾ ಜ್ಞಾನಗಳಿಗೆ ಆಶ್ರಯವಾದವನೇ, ನಿನ್ನಿಂದ ಆಗಮಸಂಹಿತೆಗಳು ಸ್ಪಷ್ಟವಾಗಿ ನಿರೂಪಿಸಲ್ಪಡದೇ ಹೋಗಿದ್ದರೆ ಈ ಜಗತ್ತು ಜ್ಞಾನವಿಲ್ಲದೆ ಗಾಢವಾದ ಕತ್ತಲಲ್ಲಿ ಮುಳುಗಿಹೋಗುತ್ತಿತ್ತು. ಈ ಲೋಕದಲ್ಲಿ ನಿನ್ನ ಆಗಮ ಸಂಹಿತೆಗಳನ್ನು ತಿಳಿಯದೇ ಯಾರು ತನ್ನನ್ನು ತಾನು ಜ್ಞಾನಿಯೆಂದು ತಿಳಿಯುತ್ತಾನೋ ಅವನಿಗಿಂತ ಪಶುವು (ಅಜ್ಞಾನಿಯು) ಇನ್ನೊಬ್ಬನಿಲ್ಲ. ನಿನ್ನ ಅನುಗ್ರಹದ ಸಂಪತ್ತಿನಿಂದ ನಾನು ನಿನ್ನ ಆಗಮಗಳ ಅಮೃತವನ್ನು ಸೇವಿಸಿ ಸಾಧನಗಳಿಂದ ಸಿದ್ಧಹಸ್ತನಾಗಿ ದೇವತೆಗಳ ಗುರುವಾಗಿರುವೆನು. ಶ್ರೀ ಚಂದ್ರಜ್ಞಾನಾಗಮದ ಮಂಗಲಕರವಾದ ಬಹಳ ಭಾಗಗಳನ್ನು ನಾನು ಕೇಳಿದ್ದೇನೆ. ಈಗ ದಯವಿಟ್ಟು ಅದರಲ್ಲಿನ ಶಿವಶಾಸನವನ್ನು ಹೇಳು. ಅದರಲ್ಲಿ ವಿಶೇಷವಾಗಿ ಮೋಕ್ಷಧರ್ಮಗಳು ಹೇಳಲ್ಪಟ್ಟಿವೆಯೆಂದು ಕೇಳಿದ್ದೇನೆ. ಅದನ್ನು ಕೇಳುವ ಮೂಲಕ ನಾನು ತಿಳಿಯಬೇಕಾದುದನ್ನು ಎಲ್ಲವನ್ನು ತಿಳಿದವನಾಗುತ್ತೇನೆ."

ಇಲ್ಲಿ ಚಂದ್ರಜ್ಞಾನಾಗಮದ ಬಗ್ಗೆ ಎರಡು ಮಾರ್ಮಿಕ ವಿಚಾರಗಳು ಪ್ರಸ್ತಾಪಿಸಲ್ಪಟ್ಟಿವೆ. ಮೊದಲನೆಯದಾಗಿ 'ಈ ಆಗಮಸಂಹಿತೆಗಳು ನಿರೂಪಿಸಲ್ಪಡದೇ ಇದ್ದಿದ್ದರೆ ಜಗತ್ತು ಗಾಢವಾದ ಅಜ್ಞಾನವೆಂಬ ಕತ್ತಲಲ್ಲಿ ಮುಳುಗಿಹೋಗುತ್ತಿತ್ತು' ಎಂಬ ಮಾತಿನಿಂದ ಚಂದ್ರಜ್ಞಾನವೆಂಬ ಹೆಸರಿನ ಔಚಿತ್ಯವು ಸ್ಪಷ್ಟವಾಗುತ್ತದೆ. ಈ ಆಗಮದಲ್ಲಿ ಅಡಕವಾಗಿರುವ ಜ್ಞಾನ ಚಂದ್ರನಂತೆ ಕಾಂತವೂ ಶಾಂತವೂ ಆಹ್ಲಾದಕರವೂ ಆಗಿದ್ದು ನಲಿವನ್ನುಂಟು ಮಾಡುವುದರ ಜೊತೆಗೆ ಅಜ್ಞಾನಾಂಧಕಾರವನ್ನೂ ದೂರ ಮಾಡುತ್ತದೆ. ಇದರಲ್ಲಿ ವೀರಶೈವವೆಂದು ಕರೆಯಲಾಗುವ ಪಾಶುಪತವ್ರತಕ್ಕೆ ಮೂಲಾಧಾರವಾದ ಅಷ್ಟಾವರಣ ಮತ್ತು ಪಂಚಾಚಾರಗಳ ವಿಚಾರವು ವಿವರಿಸಲ್ಪಟ್ಟಿದೆ. ಅದರಿಂದ ನಮ್ಮೊಳಗಿನ ಜ್ಞಾನಪ್ರಕಾಶವು ಬೆಳಗುವುದು. ಈ ದೃಷ್ಟಿಯಿಂದ ಈ ಆಗಮಕ್ಕೆ ಚಂದ್ರಜ್ಞಾನಾಗಮವೆಂಬ ಹೆಸರು ಅತ್ಯಂತ ಔಚಿತ್ಯಪೂರ್ಣವಾಗಿದೆ.

ಎರಡನೆಯದಾಗಿ, 'ಈ ಆಗಮಸಂಹಿತೆಗಳನ್ನು ಅರಿಯದೆ ನಾನು ಅರಿತವನೆಂದು ಬೀಗುವ ವ್ಯಕ್ತಿ ಪಶುವಿಗೆ ಸಮಾನ', ಎಂಬ ಮಾತು ಈ ಆಗಮದ ಮಹತ್ತ್ವವನ್ನು ಬಿಂಬಿಸುತ್ತದೆ. ಇದರ ಜ್ಞಾನವಿಲ್ಲದೆ ಯಾರ ಜ್ಞಾನಕ್ಕೂ ಪರಿಪೂರ್ಣತೆಯೆಂಬುದಿಲ್ಲ. ಮೋಕ್ಷಕ್ಕೇರುವ ಮೆಟ್ಟಲುಗಳನ್ನು ತೋರುವ ವೀರಶೈವದ ಆಚಾರ-ವಿಚಾರಗಳನ್ನು ತಿಳಿಸುವ ಈ ಆಗಮದ ಅಧ್ಯಯನ ಅಪರಿಹಾರ್ಯವೆಂಬುದು ಈ ಮಾತಿನ ಮರ್ಮ. ಅವನೇ ಹೇಳುವಂತೆ ಬೃಹಸ್ಪತಿಯೂ ಕೂಡ ಈ ಆಗಮಾಮೃತವನ್ನು ಆಸ್ವಾದಿಸಿ ಎಲ್ಲಾ ಸಾಧನ ಸಂಪತ್ತಿನಿಂದ ಕೂಡಿದವನಾಗಿ ದೇವಗುರುವಾಗುವ ಅರ್ಹತೆಯನ್ನು ಪಡೆದನು ಎಂಬುದೂ ಕೂಡ ಈ ಆಗಮದ ಮಹತ್ತ್ವವನ್ನೇ ಸಾರುತ್ತದೆ. ಈ ಆಗಮಕ್ಕೆ ಸಂಬಂಧಿಸಿದ ಮಂಗಲಕರವಾದ ಬಹಳ ಭಾಗಗಳನ್ನು ಬೃಹಸ್ಪತಿಯು ಮೊದಲೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೇಳಿದ್ದ. ಅಂದರೆ ಶ್ರೀ ಚಂದ್ರಜ್ಞಾನಾಗಮದ ಪೂರ್ವಭಾಗದ ಪಟಲಗಳನ್ನು ಕೇಳಿದ್ದ. ಉಳಿದ ಭಾಗಗಳೆಂದರೆ ಶ್ರೀ ಚಂದ್ರಜ್ಞಾನಾಗಮದ ಉತ್ತರ ಭಾಗಕ್ಕೆ ಸೇರಿದ ಪಟಲಗಳು. ಇವುಗಳನ್ನೇ ಮೋಕ್ಷಧರ್ಮಗಳನ್ನು ಬೋಧಿಸುವ ಪಟಲಗಳೆಂದು ಬೃಹಸ್ಪತಿಯು ಕರೆದಿರುವುದು. ವೇದಕ್ಕೆ ವೇದಾಂತವು ತಿರುಳೆನ್ನಿಸುವಂತೆ ಶೈವಾಗಮಗಳಿಗೆ ಆಗಮಾಂತವೆನ್ನಿಸುವ ವೀರಶೈವವೇ ತಿರುಳು, ಅದರ ವಿಚಾರವೇ ಮೋಕ್ಷಧರ್ಮ.

ಇಲ್ಲಿ ಕ್ರಿಯಾಪಾದದ **ಶಿವಾಧಿಕ್ಯಕಥನ**ವೆಂಬ ಮೊದಲನೆಯ ಪಟಲದಲ್ಲಿ **ತತ್ತ್ವತ್ರಯ ವಿಚಾರ** ಬಂದಿದೆ. ಇದರಲ್ಲಿ ಶೈವ ಮತ್ತು ವೀರಶೈವವೆಂಬ ಎರಡು ಸಂಪ್ರದಾಯಗಳಿಗೂ ಸಂಮತವಾದ ಪತಿ, ಪಶು ಮತ್ತು ಪಾಶ ಎಂಬ ಮೂರು ತತ್ತ್ವಗಳ ವಿಚಾರವನ್ನು ಪ್ರತಿಪಾದಿಸಲಾಗಿದೆ. ಚರಾಚರ ಜಗತ್ತಿನ ಒಡೆಯನಾದ ಪರಶಿವನೇ ಪತಿ, ಬ್ರಹ್ಮನಿಂದ ಹಿಡಿದು ಸ್ಥಾವರಗಳವರೆಗೆ ಇರುವ ವ್ಯಕ್ತಚೈತನ್ಯಯುಕ್ತ ಹಾಗೂ ಗೂಢಚೈತನ್ಯಯುಕ್ತಗಳಾದ ಎಲ್ಲವೂ ಪಶುಗಳು ಮತ್ತು ಮಲ-ಮಾಯಾದಿಗಳು ಪಾಶಗಳು. ಇವುಗಳನ್ನು ಉಲ್ಲೇಖಿಸಿ ಶ್ರೀ ಚಂದ್ರಜ್ಞಾನಾಗಮವು ಪರಮಾತ್ಮನ ವಿಶ್ವವ್ಯಾಪಾರವನ್ನು ವರ್ಣಿಸುವ ಮೂಲಕ ಮೂರೂ ತತ್ತ್ವಗಳ ಸ್ವರೂಪವನ್ನು ನಿರೂಪಿಸಿದೆ.

ಗುರುಸ್ವರೂಪ ನಿರೂಪಣ ಎಂಬ ಎರಡನೆಯ ಪಟಲದಲ್ಲಿ ಹಿಂದೂ ಸಂಪ್ರದಾಯದಲ್ಲಿ ಮತ್ತು ವಿಶೇಷವಾಗಿ ವೀರಶೈವ ಪರಂಪರೆಯಲ್ಲಿ ಇರುವ ಗುರುವಿನ ಉನ್ನತ ಸ್ಥಾನವನ್ನು ಗುರುತಿಸಿ ಗುರುವಿನ ಮಹತ್ತ್ವವನ್ನು ವಿವರಿಸಿ, ಹೇಗೆ ಹರ ಮುನಿದರೂ ಗುರು ಕಾಯ್ವನು ಎಂಬುದನ್ನು ನಿರೂಪಿಸಿ ಗುರುವಿನ ಮಹಿಮೆಯನ್ನು ಮನೋಹರವಾಗಿ ವರ್ಣಿಸಲಾಗಿದೆ. ಮೋಕ್ಷಕ್ಕೆ ಅರ್ಹತೆಯನ್ನು ಗಳಿಸಿಕೊಡುವ ದೀಕ್ಷೆಗೆ ಗುರುವೇ ಅಧಿಕೃತನು. ಗುರುವು ಮತ್ತು ಶಿವನು ಬೇರೆಯಲ್ಲ, ಶಿವನ ವ್ಯಕ್ತ ಸ್ವರೂಪವೇ ಗುರುವು ಎಂಬುದನ್ನು ಪ್ರತಿಪಾದಿಸಿ ಗುರುವಿನ ಸ್ವರೂಪ, ಶಿಷ್ಯನ ಲಕ್ಷಣ, ಶಿಷ್ಯನು ಗುರುವನ್ನು ಸತ್ಕರಿಸುವ ರೀತಿ, ಗುರುಸೇವೆ, ಪ್ರದಕ್ಷಿಣೆ, ಗುರುಯಾತ್ರೆ, ಗುರುಸನ್ನಿಧಿಯಲ್ಲಿ ಶಿಷ್ಯನ ವರ್ತನೆ, ಗುರುವಿನ ಅನುಗ್ರಹದಿಂದ ದೊರೆಯುವ ಸತ್ಫಲ ಮುಂತಾದ ವಿಚಾರಗಳನ್ನು ಮಂಡಿಸಲಾಗಿದೆ.

ಲಿಂಗಸ್ವರೂಪ ನಿರೂಪಣ ಎಂಬ ಮೂರನೆಯ ಪಟಲದಲ್ಲಿ ಲಿಂಗತತ್ತ್ವ ನಿರೂಪಣೆ ಬಂದಿದೆ. ಲಿಂಗದ ಸ್ವರೂಪ ಮತ್ತು ಮಹತ್ತ್ವವನ್ನು ನಿರೂಪಿಸಲಾಗಿದೆ. ಲಿಂಗಶಬ್ದದ ನಿಷ್ಪತ್ತಿ; ಲಿಂಗವು ಬಿಂದು-ನಾದಾತ್ಮಕ, ಅದರಲ್ಲಿ ಬಿಂದುವೆಂದರೆ ಶಕ್ತಿ ಮತ್ತು ನಾದವೆಂದರೆ ಶಿವ, ಅದೇ ಜಗತ್ತಿಗೆ ಕಾರಣ; ಮಾತಾಪಿತೃಸ್ವರೂಪವಾದ ಆ ಲಿಂಗವು ಮೊದಲು ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳೆಂದು ಮೂರು, ಆ ಮೂರೇ ಎರಡೆರಡಾಗಿ ಮಹಾಲಿಂಗ, ಪ್ರಸಾದಲಿಂಗ, ಚರಲಿಂಗ, ಶಿವಲಿಂಗ, ಗುರುಲಿಂಗ ಮತ್ತು ಆಚಾರಲಿಂಗಗಳೆಂದು ಆರು ವಿಧ; ಮೂರು ದೀಕ್ಷೆಗಳ ಮೂಲಕ ಇಷ್ಟ, ಪ್ರಾಣ ಮತ್ತು ಭಾವ ಎಂಬ ಮೂರು ಲಿಂಗಗಳನ್ನು ಸ್ಥೂಲ, ಸೂಕ್ಷ್ಮ ಮತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರಣ ಶರೀರಗಳಲ್ಲಿ ಸ್ಥಾಪಿಸುವ ಮೂಲಕ ಆಣವ, ಮಾಯೀಯ ಮತ್ತು ಕಾರ್ಮಿಕ ಎಂಬ ಮೂರು ಮಲಗಳ ನಾಶ, ಲಿಂಗದ ಆರಾಧನೆಯ ಮಹಿಮೆ, ಮುಂತಾದ ವಿಚಾರಗಳನ್ನು ಪ್ರತಿಪಾದಿಸಲಾಗಿದೆ.

ಜಂಗಮಸ್ವರೂಪ ನಿರೂಪಣವೆಂಬ ನಾಲ್ಕನೆಯ ಪಟಲದಲ್ಲಿ ಜಂಗಮ-ಸ್ವರೂಪ ಮತ್ತು ಮಾಹಾತ್ಮ್ಯಗಳು ನಿರೂಪಿಸಲ್ಪಟ್ಟಿವೆ. ಜಂಗಮ ಶಬ್ದದ ಅರ್ಥವನ್ನು ವಿವರಿಸಿ, ಜಂಗಮ ಶಬ್ದದ ಪರ್ಯಾಯ ಪದಗಳು, ಜಂಗಮರ ದ್ವೈವಿಧ್ಯ, ಅದರಲ್ಲಿ ಸಹಜ ಜಂಗಮರಲ್ಲಿ ಬ್ರಹ್ಮಚಾರಿ, ಗೃಹಸ್ಥ ಮತ್ತು ನಿರಾಭಾರಿಯೆಂಬ ತ್ರೈವಿಧ್ಯ; ವಿವಿಧ ಜಂಗಮರ ಲಕ್ಷಣಗಳು ಮತ್ತು ಅವರಿಗೆ ವಿಧಿಸಲಾದ ನಿಯಮಗಳು, ಜಂಗಮ ಭಕ್ತಿಯ ಚಿಹ್ನೆಗಳು, ಮುಂತಾದ ವಿಚಾರಗಳನ್ನು ನಿರೂಪಿಸಲಾಗಿದೆ.

ಪಾದೋದಕ ಪ್ರಸಾದ ಸ್ವರೂಪ ನಿರೂಪಣವೆಂಬ ಐದನೆಯ ಪಟಲದಲ್ಲಿ ಪಾದೋದಕ ಮತ್ತು ಪ್ರಸಾದಗಳ ವಿಷಯವನ್ನು ಪ್ರತಿಪಾದಿಸಲಾಗಿದೆ. ಪಾದೋದಕ ಮತ್ತು ಪ್ರಸಾದಗಳ ಸ್ವರೂಪ, ಪ್ರಕಾರಗಳು, ಅವುಗಳ ಪ್ರಭಾವ ಮತ್ತು ಪರಿಣಾಮಗಳನ್ನು ವಿವರಿಸಲಾಗಿದೆ.

ಭಸ್ಮಸ್ವರೂಪ ನಿರೂಪಣವೆಂಬ ಆರನೆಯ ಪಟಲದಲ್ಲಿ ಭಸ್ಮದ ಮಹತ್ತ್ವ, ನಿರ್ಮಾಣ ಮತ್ತು ಉಪಯೋಗಗಳು ನಿರೂಪಿಸಲ್ಪಟ್ಟಿವೆ. ಭಸ್ಮ ನಿರ್ಮಾಣವಿಧಿ, ಭಸ್ಮದ ಪ್ರಭೇದಗಳು, ಭಸ್ಮಧಾರಣ ವಿಧಿ, ಭಸ್ಮಸ್ನಾನ, ತ್ರಿಪುಂಡ್ರಧಾರಣೆ ಮತ್ತು ಅದರ ಸ್ಥಾನಗಳು, ಭಸ್ಮಧಾರಣ ಫಲ ಮತ್ತು ಮಹಿಮೆ ಎಂಬ ವಿಷಯಗಳು ವಿಸ್ತಾರವಾಗಿ ಬಂದಿವೆ.

ರುದ್ರಾಕ್ಷ ಸ್ವರೂಪ ನಿರೂಪಣವೆಂಬ ಏಳನೆಯ ಪಟಲದಲ್ಲಿ ರುದ್ರಾಕ್ಷದ ಉತ್ಪತ್ತಿ, ಧಾರಣವಿಧಿ ಹಾಗೂ ಮಹಿಮೆಗಳು ನಿರೂಪಿಸಲ್ಪಟ್ಟಿವೆ. ರುದ್ರಾಕ್ಷದ ಉತ್ಪತ್ತಿಗೆ ಸಂಬಂಧಿಸಿದ ಪೌರಾಣಿಕ ಕಥೆಯನ್ನು ನಿರೂಪಿಸಿ, ರುದ್ರಾಕ್ಷಗಳ ಪ್ರಕಾರಗಳು, ಧರಿಸಲು ಯೋಗ್ಯವಾದ ಹಾಗೂ ಯೋಗ್ಯವಲ್ಲದ ರುದ್ರಾಕ್ಷಿಗಳು, ಶಾಸ್ತ್ರೋಕ್ತ ರುದ್ರಾಕ್ಷಧಾರಣವಿಧಿ (ಸ್ಥಾನ ಮತ್ತು ಸಂಖ್ಯೆ), ಮುಖಭೇದದಿಂದ ರುದ್ರಾಕ್ಷದ ಮಹಿಮೆ ಮುಂತಾದ ವಿಚಾರಗಳನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

ಪಂಚಾಕ್ಷರ ಸ್ವರೂಪ ನಿರೂಪಣೆ ಎಂಬ ಎಂಟನೆಯ ಪಟಲದಲ್ಲಿ ಪಂಚಾಕ್ಷರ ಮಂತ್ರದ ಸ್ವರೂಪ; ಅದರ ಹೆಸರುಗಳು; ಋಷಿ-ಛಂದಸ್ಸು-ದೇವತೆ-ಬೀಜ-ಶಕ್ತಿ-ಕೀಲಕಗಳು; ಮಂತ್ರನ್ಯಾಸದ ಪ್ರಕಾರಗಳು, ಜಪದ ವಿಧಾನ, ತ್ರಿವಿಧ ಜಪ, ಸಗರ್ಭ-ಅಗರ್ಭ ಜಪಗಳು; ಮಂತ್ರಪುರಶ್ಚರಣ ಕ್ರಮ; ಜಪದಲ್ಲಿ ಬೆರಳು ಮುಂತಾದವುಗಳ ಉಪಯೋಗ ಮತ್ತು ಅದರ ಮಹಿಮೆ; ಜಪಕಾಲದಲ್ಲಿ ವರ್ಜನೀಯವಾದವುಗಳು; ಮಂತ್ರದ ಮಹಿಮೆ, ಮುಂತಾದ ವಿಚಾರಗಳನ್ನು ಪ್ರತಿಪಾದಿಸಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಚಾಚಾರ ಸ್ವರೂಪ ನಿರೂಪಣವೆಂಬ ಒಂಬತ್ತನೆಯ ಪಟಲದಲ್ಲಿ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರವೆಂಬ ಐದು ಆಚಾರಗಳನ್ನು ವಿಸ್ತಾರವಾಗಿ ನಿರೂಪಿಸಲಾಗಿದೆ. ಲಿಂಗಾಚಾರಕ್ಕೆ ಸಂಬಂಧಿಸಿದಂತೆ ವೇಧಾ-ಮನು-ಕ್ರಿಯಾ ದೀಕ್ಷೆಗಳಲ್ಲಿ ಅಂತರ್ಗತವಾದ ಏಳೇಳು ಅವಾಂತರ ದೀಕ್ಷೆಗಳ ಅಂದರೆ ಒಟ್ಟು ೨೧ ಅವಾಂತರ ದೀಕ್ಷೆಗಳ ವಿಚಾರ, ಸದಾಚಾರದ ಅಂತರ್ಗತವಾಗಿ ೮ ವಿಧವಾದ ಶೀಲಗಳು, ಶಿವಾಚಾರಾಂತರ್ಗತವಾಗಿ ೧೬ ಶುದ್ಧಿಗಳು, ಗಣಾಚಾರದ ಪ್ರಸ್ತಾವದಲ್ಲಿ ೬೪ ಶೀಲಗಳು, ಅವುಗಳಲ್ಲಿನ ನಿಷ್ಠೆಯಿಂದ ಆಗುವ ಶಿವಸಾಯುಜ್ಯಪ್ರಾಪ್ತಿರೂಪದ ಫಲವನ್ನು ವರ್ಣಿಸಿ, ಭೃತ್ಯಾಚಾರದ ವೈಶಿಷ್ಟ್ಯವನ್ನು ವಿವರಿಸಲಾಗಿದೆ.

ಶೈವಭೇದ ಎಂಬ ಹೆಸರಿನ ಹತ್ತನೆಯ ಪಟಲದಲ್ಲಿ ಅನಾದಿ ಶೈವ, ಆದಿಶೈವ, ಪೂರ್ವಶೈವ, ಮಿಶ್ರಶೈವ, ಶುದ್ಧಶೈವ, ಮಾರ್ಗಶೈವ, ಸಾಮಾನ್ಯಶೈವ ಮತ್ತು ವೀರಶೈವವೆಂಬ ಎಂಟು ಶೈವಭೇದಗಳ ಲಕ್ಷಣಗಳನ್ನು ಕೊಟ್ಟು, ವಿಶೇಷವಾಗಿ ವೀರಶೈವದ ಸಾಮಾನ್ಯ ವೀರಶೈವ, ವಿಶೇಷ ವೀರಶೈವ ಮತ್ತು ನಿರಾಭಾರಿ ವೀರಶೈವಗಳನ್ನು ವಿವರಿಸಲಾಗಿದೆ.

ಆಹ್ನಿಕ ವಿಧಿಯೆಂಬ ಹನ್ನೊಂದನೆಯ ಪಟಲದಲ್ಲಿ ವೀರಶೈವರ ದೈನಂದಿನ ಆಚರಣೆಗಳು ಬಂದಿವೆ. ಶಿವಭಕ್ತನ ಆಹ್ನಿಕವು ಬ್ರಾಹ್ಮೀಮುಹೂರ್ತದಿಂದು ಹಿಡಿದು ರಾತ್ರಿ ಮಲಗುವವರೆಗೆ ಹೇಗಿರುತ್ತದೆ, ಹೇಗಿರಬೇಕು ಎಂಬುದು ಈ ಪಟಲದಲ್ಲಿ ವಿವರಿಸಲ್ಪಟ್ಟಿದೆ. ಶೌಚವಿಧಿ, ಸ್ನಾನವಿಧಿ, ತ್ರಿಪುಂಡ್ರಧಾರಣ, ಸಂಧ್ಯಾವಂದನ, ಗಾಯತ್ರೀ ಮಂತ್ರಾರ್ಥ, ಹೋಮವಿಧಿ, ಸಾಯಂವಿಧಿ, ಮಲಗುವ ಕ್ರಮ, ಎಂಬ ವಿಚಾರಗಳು ಇಲ್ಲಿ ನಿರೂಪಿತವಾಗಿವೆ.

ವರ್ಣಾಶ್ರಮಧರ್ಮಾವಶ್ಯಕತಾ ನಿರೂಪಣವೆಂಬ ಹನ್ನೆರಡನೆಯ ಪಟಲದಲ್ಲಿ ಜ್ಞಾನ-ಕರ್ಮ ಸಮುಚ್ಚಯವನ್ನು ಅಂಧಪಂಗುನ್ಯಾಯದ ಆಧಾರದ ಮೇಲೆ ಹೇಳಿ, ಜೀವವಿರುವವರೆಗೂ ಕರ್ಮಾನುಷ್ಠಾನದ ಆವಶ್ಯಕತೆಯನ್ನು ಬಿಂಬಿಸಿ, ಕರ್ಮ ಪರಿತ್ಯಾಗದಿಂದ ಮನುಷ್ಯನು ಪತಿತನಾಗುತ್ತಾನೆಂದು ವರ್ಣಿಸಲಾಗಿದೆ.

ಅನಂತರ **ಚರ್ಯಾಪಾದ**ದ ಎಂಟು ಪಟಲಗಳಲ್ಲಿ ವೀರಶೈವರ ಶಿವಮೇಧಕ್ಕೆ (ಅಂತ್ಯೇಷ್ಟಿಗೆ) ಸಂಬಂಧಿಸಿದ ಕಾರ್ಯಗಳನ್ನು ಮತ್ತು ಆಶೌಚ-ಪ್ರಾಯಶ್ಚಿತ್ತಗಳನ್ನು ನಿರೂಪಿಸಲಾಗಿದೆ. ಶಿವಮೇಧ ಪ್ರಶಂಸಾ, ಉತ್ಕ್ರಾಂತಿಸಮಯಾಚಾರ ವರ್ಣನ, ಉತ್ಕ್ರಾಂತ್ಯನಂತರ ಕಾರ್ಯಕರ್ತೃಕ್ರಮ ನಿರ್ಣಯ, ಔರ್ಧ್ವದೇಹಿಕ ವಿಧಿಕಥನ, ಪ್ರಕೀರ್ಣವಿಧಿ ಕಥನ -ಎಂಬ ಹೆಸರಿನ ಐದು ಪಟಲಗಳು ಶಿವಮೇಧದ ವಿವಿಧ ಕ್ರಿಯೆಗಳನ್ನು ವರ್ಣಿಸುತ್ತವೆ. ಆಶೌಚ ಶುದ್ಧಿಕಥನವೆಂಬ ಆರನೆಯ ಪಟಲದಲ್ಲಿ ಜನನ ಮತ್ತು ಮರಣಸೂತಕಗಳ ವಿಷಯವು ನಿರೂಪಿತವಾಗಿವೆ. ಪ್ರಾಯಶ್ಚಿತ್ತ ಕಥನ ಮತ್ತು ಪ್ರಾಯಶ್ಚಿತ್ತ ವಿಧಿಕಥನ ಎಂಬ ಏಳನೆಯ ಮತ್ತು ಎಂಟನೆಯ ಪಟಲಗಳಲ್ಲಿ ಪ್ರಾಯಶ್ಚಿತ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಧಿಗಳ ನಿರೂಪಣೆಯನ್ನು ಕಾಣುತ್ತೇವೆ. ಏಳನೆಯದರಲ್ಲಿ ಉರುಲು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡವರನ್ನು ಸಂಸ್ಕಾರ ಮಾಡಿದುದಕ್ಕೆ, ಪತಿತರ ಸಂಪರ್ಕ ರೂಪದ ಪಾಪಕ್ಕೆ, ನರಿ-ನಾಯಿ ಕಡಿದ ಮೈಲಿಗೆ ಮುಂತಾದವುಗಳಿಗೆ ವಿಧಿಸಿದ ಪ್ರಾಯಶ್ಚಿತ್ತ ವಿಧಿಗಳನ್ನು ಹೇಳಿದ್ದರೆ ಎಂಟನೆಯದರಲ್ಲಿ ಮಹಾಪಾಪಾದಿಗಳಿಗೆ (ಅಗಮ್ಯಗಮನಗಳಿಗೆ) ಸಂಬಂಧಿಸಿದ ಪ್ರಾಯಶ್ಚಿತ್ತಗಳನ್ನು ವಿವರಿಸಲಾಗಿದೆ.

ಈ ಅನುವಾದದೊಂದಿಗಿನ ಟಿಪ್ಪಣಿಗಳಲ್ಲಿ ವಿವಿಧ ಆಗಮಗಳಿಂದ ಮತ್ತು ಇತರ ಮೂಲಗಳಿಂದ ಆಯಾಯ ವಿಚಾರಕ್ಕೆ ಸಂಬಂಧಪಟ್ಟಂತೆ ಅಭಿಪ್ರಾಯದಲ್ಲಿ ಸಾಮ್ಯ ಮತ್ತು ಭೇದಗಳನ್ನು ಚರ್ಚಿಸಿದ್ದೇನೆ. ಆಗಮಗಳನ್ನು ಅಧ್ಯಯನ ಮಾಡುವ ಅಧ್ಯೇತೃಗಳಿಗೆ ಇದು ಸಹಾಯಕವಾದೀತೆಂದು ಆಶಿಸಲಾಗಿದೆ.

ಈ ಆಗಮವನ್ನು ಸಂಪಾದಿಸಿ, ಸಮುಚಿತ ಟಿಪ್ಪಣಿಗಳೊಂದಿಗೆ ಅನುವಾದಿಸುವ ಸದವಕಾಶವನ್ನು ಅನುಗ್ರಹಿಸಿದ ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಡಾ|| ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಗೆ ನಾನು ಶಿರಸಾಷ್ಟಾಂಗ ನಮಸ್ಕಾರ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಆಗಮದ ಸಂಪಾದನೆ, ಅನುವಾದ ಮತ್ತು ಟಿಪ್ಪಣಿಗಳನ್ನು ರಚಿಸುವುದು, ಈ ಎಲ್ಲದರಲ್ಲಿಯೂ ಇದರ ಹಿಂದಿ ಅನುವಾದ ಟಿಪ್ಪಣಿಗಳ ರಚಯಿತೃಗಳಾದ ಹಿರಿಯ ವಿದ್ವಾಂಸ ಪಂಡಿತ ವ್ರಜವಲ್ಲಭ ದ್ವಿವೇದಿ ಅವರಿಗೆ ನಾನು ಋಣಿಯಾಗಿದ್ದೇನೆ. ಇದರ ಪ್ರಕಟಣೆಗೆ ನೆರವಾದ ಶ್ರೀ ಎಂ.ಕೆ. ರಾಜಮಾನೆ ಅವರಿಗೆ ನನ್ನ ಕೃತಜ್ಞತೆಗಳು. ಈ ಪ್ರಕಟಣೆಯ ಕಾರ್ಯದಲ್ಲಿ ಎಲ್ಲಾ ಹಂತಗಳಲ್ಲೂ ಅತ್ಯಂತ ನಿಗಾವಹಿಸಿ ಸಕಾಲದಲ್ಲಿ ಮುದ್ರಣಗೊಂಡು ಹೊರಬರುವಂತೆ ಶ್ರಮವಹಿಸಿದ ವೀರಶೈವ ಅನುಸಂಧಾನ ಸಂಸ್ಥಾನದ ಕಾರ್ಯದರ್ಶಿಗಳಾದ ಡಾ|| ಸಿ.ಯು. ಉಮಾದೇವಿ ಮತ್ತು ಶ್ರೀ ಉಮಾಶಂಕರ್ ದಂಪತಿಗಳಿಗೆ ನನ್ನ ಧನ್ಯವಾದಗಳು ಸಲ್ಲುತ್ತವೆ. ಈ ಆಗಮದ ಅನುವಾದದ ಪರಿಶೀಲನೆಯಲ್ಲಿ ಮತ್ತು ಕರಡು ಪ್ರತಿಯನ್ನು ತಿದ್ದುವುದರಲ್ಲಿ ಅತ್ಯಂತ ಸಹಕಾರವನ್ನು ನೀಡಿದ ಡಾ|| ಸಿ. ಶಿವಕುಮಾರ ಸ್ವಾಮಿ ಅವರಿಗೆ ನನ್ನ ಮೆಚ್ಚುಗೆಯ ಶುಭಾಶಯಗಳು. ಅವರೇ ಈ ಆಗಮದ ಶ್ಲೋಕಾರ್ಧಾನುಕ್ರಮಣಿಕೆಯನ್ನು ತಯಾರಿಸಿ ಕೊಟ್ಟು ಸಹಕರಿಸಿದ್ದಾರೆ. ಇದರ ಛಾಯಾಕ್ಷರ ಜೋಡಣೆಯನ್ನು ಮಾಡಿದ ವರ್ಷಿಣಿ ಗ್ರಾಫಿಕ್ಸ್ ಅವರಿಗೆ ಮತ್ತು ಮುದ್ರಣ ಕಾರ್ಯವನ್ನು ಸಕಾಲಕ್ಕೆ ಮಾಡಿಕೊಟ್ಟ ಸ್ನೇಹಾ ಪ್ರಿಂಟರ್ಸ್ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಬೆಂಗಳೂರು
ಶಾ.ಶ. ೧೯೨೪ ಚಿತ್ರಭಾನು
ಸಂ ಮಾರ್ಗಶಿರ ಶು|| ದ್ವಾದಶಿ
೧೬.೧೨.೨೦೦೨

ಇತಿ ನಿಮ್ಮ
ಡಾ|| ಎಂ. ಶಿವಕುಮಾರ ಸ್ವಾಮಿ
ಅನುವಾದಕ ಮತ್ತು ಸಂಪಾದಕ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಯಾನುಕ್ರಮಣಿಕೆ

ಶ್ರೀಮತ್ಕಾಶೀ ಜಗದ್ಗುರುಗಳ ಆಶೀರ್ವಚನ iii

ದಾನಿಗಳಾದ ಶ್ರೀ ಎಂ.ಕೆ. ರಾಜಮಾನೆ ಅವರ ಪರಿಚಯ vi

ಮುನ್ನುಡಿ ix

ಕ್ರಿಯಾಪಾದೇ

೧. ಪ್ರಥಮಃ ಪಟಲಃ ಶಿವಾಧಿಕ್ಯಕಥನಮ್ ೧

೨. ದ್ವಿತೀಯಃ ಪಟಲಃ ಗುರುಸ್ವರೂಪನಿರೂಪಣಮ್ ೧೪

೩. ತೃತೀಯಃ ಪಟಲಃ ಲಿಂಗಸ್ವರೂಪನಿರೂಪಣಮ್ ೩೪

೪. ಚತುರ್ಥಃ ಪಟಲಃ ಜಂಗಮಸ್ವರೂಪನಿರೂಪಣಮ್ ೪೯

೫. ಪಂಚಮಃ ಪಟಲಃ ಪಾದೋದಕಪ್ರಸಾದಸ್ವರೂಪನಿರೂಪಣಮ್ ೫೬

೬. ಷಷ್ಠಃ ಪಟಲಃ ಭಸ್ಮಸ್ವರೂಪನಿರೂಪಣಮ್ ೬೫

೭. ಸಪ್ತಮಃ ಪಟಲಃ ರುದ್ರಾಕ್ಷಸ್ವರೂಪನಿರೂಪಣಮ್ ೮೧

೮. ಅಷ್ಟಮಃ ಪಟಲಃ ಪಂಚಾಕ್ಷರಸ್ವರೂಪನಿರೂಪಣಮ್ ೯೧

೯. ನವಮಃ ಪಟಲಃ ಪಂಚಾಚಾರಸ್ವರೂಪನಿರೂಪಣಮ್ ೧೧೨

೧೦. ದಶಮಃ ಪಟಲಃ ಶೈವಭೇದಃ ೧೩೫

೧೧. ಏಕಾದಶಃ ಪಟಲಃ ಆಹ್ನಿಕವಿಧಿಃ ೧೪೮

೧೨. ದ್ವಾದಶಃ ಪಟಲಃ ವರ್ಣಾಶ್ರಮಧರ್ಮಾವಶ್ಯಕತಾಕಥನಮ್ ೧೭೧

ಚರ್ಯಾಪಾದೇ

೧೩. ಪ್ರಥಮಃ ಪಟಲಃ ಶಿವಮೇಧಪ್ರಶಂಸಾ ೧೭೫

೧೪. ದ್ವಿತೀಯಃ ಪಟಲಃ ಉತ್ಕ್ರಾಂತಿಸಮಯಾಚಾರವರ್ಣನಮ್ ೧೭೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೫.	ತೃತೀಯಃ ಪಟಲಃ	ಉತ್ಕ್ರಾಂತ್ಯನಂತರಕಾರ್ಯಕರ್ತೃಕ್ರಮನಿರ್ಣಯಃ	೧೮೬
೧೬.	ಚತುರ್ಥಃ ಪಟಲಃ	ಔರ್ಧ್ವದೇಹಿಕವಿಧಿಕಥನಮ್	೧೯೦
೧೭.	ಪಂಚಮಃ ಪಟಲಃ	ಪ್ರಕೀರ್ಣಕವಿಧಿಕಥನಮ್	೨೦೪
೧೮.	ಷಷ್ಠಃ ಪಟಲಃ	ಆಶೌಚಶುದ್ಧಿಕಥನಮ್	೨೧೨
೧೯.	ಸಪ್ತಮಃ ಪಟಲಃ	ಪ್ರಾಯಶ್ಚಿತ್ತಕಥನಮ್	೨೧೬
೨೦.	ಅಷ್ಟಮಃ ಪಟಲಃ	ಪ್ರಾಯಶ್ಚಿತ್ತವಿಧಿಕಥನಮ್	೨೨೪
೨೧.	ಪರಿಶಿಷ್ಟ-೧	ಮೂಲಪಂಚಾಕ್ಷರಮಂತ್ರನ್ಯಾಸಾಃ	೨೩೦
೨೨.	ಪರಿಶಿಷ್ಟ-೨	ಶ್ಲೋಕಾರ್ಧಾನುಕ್ರಮಣೀ	೨೩೨

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಚಂದ್ರಜ್ಞಾನಾಗಮಃ
ಕ್ರಿಯಾಪಾದಃ
ಪ್ರಥಮಃ ಪಟಲಃ

॥ ಶಿವಾಧಿಕ್ಯಕಥನಮ್ ॥

ಕಲಧೌತಾಚಲೋತ್ತುಂಗಶೃಂಗರಿಂಗನ್ನಿಕೇತನಮ್।
ಧರ್ಮಮೂರ್ತಿಧರಂ ಶ್ರೀಮನ್ಮಹಾವೃಷಭಕೇತನಮ್ ॥ ೧ ॥

ಅನಂತರುದ್ರಪ್ರಮಥಪರಿಷನ್ನಿಕಷೋಜ್ಜ್ವಲಮ್।
ಅನಂತರುದ್ರಮಾಸಾದ್ಯ ಧಿಷಣೋ ಧಿಷಣೋನ್ನತಃ ॥ ೨ ॥

ಪರಿಸ್ಪೃಶನ್ ಶೀಪದಾಬ್ಜಪೀಠಂ ಮೂರ್ಧ್ನಾ ಮುಹುರ್ಮುಹುಃ।
ಬದ್ಧಾಂಜಲಿಃ ಸುಪ್ರಸಾದ್ಯ ನೀಚೈರ್ವಾಚಮುವಾಚ ಹ ॥ ೩ ॥

ಸುಮೇರು ಪರ್ವತದ ಶಿಖರದ ಮೇಲೆ ಯಾರ ಲೀಲಾಮಂದಿರವಿದೆಯೋ, ಯಾರು ಸಾಕ್ಷಾತ್ತಾಗಿ ಧರ್ಮದ ಮೂರ್ತಿಯೋ, ಯಾರ ಧ್ವಜದ ಮೇಲೆ ಮಹಾ ನಂದಿಯ ಚಿತ್ರವಿದೆಯೋ, ಭಗವಂತನಾದ ರುದ್ರನ ಪ್ರಮಥಗಣಗಳ ವಿಶಾಲವಾದ ಸಭೆಯಲ್ಲಿ ಯಾರಿಗೆ ಉನ್ನತ ಸ್ಥಾನವಿದೆಯೋ ಅಂತಹ ಭಗವಂತ ಅನಂತರುದ್ರನ ಬಳಿಗೆ, ಬುದ್ಧಿವಂತರಲ್ಲಿ ಶ್ರೇಷ್ಠನಾದ ದೇವಗುರುವಾದ ಬೃಹಸ್ಪತಿಯು ಅವನ ಚರಣ ಕಮಲಗಳಲ್ಲಿ ತನ್ನ ಮಸ್ತಕವನ್ನು ಮತ್ತೆ ಮತ್ತೆ ಬಾಗಿಸಿ, ಕೈ ಮುಗಿದು ಅವನ ಅನುಗ್ರಹವನ್ನು ಪಡೆಯಲು ಮಂದ ಧ್ವನಿಯಲ್ಲಿ ಹೀಗೆ ಹೇಳಿದನು. (೧-೩).

ಟಿಪ್ಪಣಿ : ಅನಂತ, ಸೂಕ್ಷ್ಮ, ಶಿವೋತ್ತಮ, ಏಕನೇತ್ರ, ಏಕರುದ್ರ, ತ್ರಿಮೂರ್ತಿ, ಶ್ರೀಕಂಠ ಮತ್ತು ಶಿಖಂಡಿ ಎಂಬ ಎಂಟು ವಿದ್ಯೇಶ್ವರರ ಹೆಸರುಗಳು ದೊರೆಯುತ್ತವೆ. ನೋಡಿರಿ : ಶ್ರೀಸಿದ್ಧಾಂತಶಿಖಾಮಣಿ ವ್ಯಾಖ್ಯಾನ (೩.೪೪). ಅವರಲ್ಲಿ ಅನಂತನು ಮುಖ್ಯನು. ಅವನು ಮಾಯೆಯನ್ನು ಕ್ಷುಬ್ಧಗೊಳಿಸಿ ಮಲಿನ ಸೃಷ್ಟಿಯನ್ನು ಮಾಡಿದವನು. ಅವನೇ ಅನಂತರುದ್ರನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೃಹಸ್ಪತಿರುವಾಚ

ಭಗವನ್ ಕರುಣಾಸಿಂಧೋ ಸರ್ವಜ್ಞಾನಸಮಾಶ್ರಯ।
ನಾವಿಷ್ಕೃತಾಶ್ಚೇದ್ ಭವತಾ ಸ್ಫುಟಮಾಗಮಸಂಹಿತಾಃ।
ಜಗತ್ ಕಿಲಾಂಧತಾಮಿಸ್ರೇ ನಿಮಜ್ಜೇದ್ ಜ್ಞಾನವರ್ಜಿತಮ್ ॥ ೪ ॥

ಅಭಿಜ್ಞಾಯ್ಯೆವ ಯೋ ಲೋಕೇ ಭವದಾಗಮಸಂಹಿತಾಃ।
ವಿಪಶ್ಚಿತಂ ಸ್ವಂ ಮನುತೇ ನ ತಸ್ಮಾದ್ ವಿದ್ಯತೇ ಪಶುಃ ॥ ೫ ॥

ಭವತ್ಪ್ರಸಾದಸಂಪತ್ತ್ಯಾ ಭವದೀಯಾಗಮಾಮೃತಮ್।
ನಿಪೀಯೈವಾಮರಗುರುರಭವಂ ಸಿದ್ಧಸಾಧನಃ ॥ ೬ ॥

ಆಕರ್ಣಿತಾ ಮಯಾ ಭಾಗಾಶ್ಚಂದ್ರಜ್ಞಾನಾಗತಾಃ ಶುಭಾಃ।
ಬಹವಸ್ತದಿಹ ಬ್ರೂಹಿ ಕೃಪಯಾ ಶಿವಶಾಸನಮ್ ॥ ೭ ॥

ಮೋಕ್ಷಧರ್ಮಾ ವಿಶೇಷೇಣ ತತ್ರೋಕ್ತ್ಯತ ಇತಿ ಶ್ರುತಮ್।
ಅಹಂ ಶ್ರುತೇನ ಯೇನ ಸ್ಯಾಂ ವಿದಿತಾಶೇಷವೇದನಃ ॥ ೮ ॥

ಬೃಹಸ್ಪತಿಯು ಹೇಳಿದನು

ಭಗವಂತನೆ, ಕರುಣಾಸಮುದ್ರವೇ, ಎಲ್ಲಾ ಜ್ಞಾನಗಳ ಆಶ್ರಯನೇ, ಆಗಮ ಸಂಹಿತೆಗಳು ನಿನ್ನಿಂದ ಸ್ಪಷ್ಟವಾಗಿ ವ್ಯಕ್ತಗೊಳಿಸಲ್ಪಡದೆ ಇದ್ದಿದ್ದಲ್ಲಿ ಜಗತ್ತೆಲ್ಲವೂ ಜ್ಞಾನ ಶೂನ್ಯವಾಗಿ ಗಾಢ ಅಂಧಕಾರದಲ್ಲಿ ಮುಳುಗಿರುತ್ತಿತ್ತು. (೪). ಯಾರು ನಿನ್ನ ಆಗಮ ಸಂಹಿತೆಗಳನ್ನು ತಿಳಿಯದೇ ಲೋಕದಲ್ಲಿ ತನ್ನನ್ನು ತಾನು ಜ್ಞಾನಿಯೆಂದು ತಿಳಿಯುತ್ತಾನೋ ಅವನಿಗಿಂತ ಪಶುವು ಮತ್ತೊಬ್ಬನಿಲ್ಲ. (೫). ನಿನ್ನ ಅನುಗ್ರಹದ ಸಂಪತ್ತಿನಿಂದ ನಿನ್ನ ಆಗಮ ಸುಧೆಯನ್ನು ಕುಡಿದೇ ನಾನು ದೇವತೆಗಳ ಗುರುವಾಗಿ ಎಲ್ಲಾ ಸಾಧನಗಳನ್ನು ಹೊಂದಿದವನಾಗಿದ್ದೇನೆ. (೬). ಚಂದ್ರಜ್ಞಾನಾಗಮದಲ್ಲಿ ಬರುವ ಬಹಳ ಮಂಗಲ-ಕರವಾದ ಭಾಗಗಳನ್ನು ಕೇಳಿದ್ದೇನೆ. ಈಗ ಕೃಪೆಯಿಟ್ಟು ಶಿವಶಾಸನವನ್ನು ಹೇಳು. (೭). ಅದರಲ್ಲಿ ವಿಶೇಷವಾಗಿ ಮೋಕ್ಷ ಧರ್ಮಗಳೇ ಹೇಳಲ್ಪಡುತ್ತವೆ ಎಂದು ಕೇಳಿ ಬಂದಿದೆ ಅದನ್ನು ಕೇಳುವ ಮೂಲಕ ನಾನು ಅಶೇಷ ಜ್ಞಾನವನ್ನು ತಿಳಿದವನಾಗುವೆನು. (೮).

ಅನಂತರುದ್ರ ಉವಾಚ

ಯುಕ್ತಂ ಪೃಷ್ಟಂ ಹಿ ಸುಧಿಯಾ ತ್ರಿದಿವೇಶಗುರೋ ತ್ವಯಾ।
ಶೃಣುಷ್ವಾವಹಿತೋ ಭೂತ್ವಾ ವಕ್ಷ್ಯಾಮಿ ಶಿವಶಾಸನಮ್ ॥ ೯ ॥

ಅನಂತರುದ್ರನು ಹೇಳಿದನು

ದೇವತೆಗಳ ಗುರುವೇ, ನೀನು ಅತ್ಯಂತ ಬುದ್ಧಿವಂತಿಕೆಯಿಂದ ಯೋಗ್ಯವಾದುದನ್ನೇ ಕೇಳಿದೆ. ನಾನು ಶಿವನಶಾಸನವನ್ನು ಹೇಳುತ್ತೇನೆ. ಏಕಾಗ್ರಚಿತ್ತದಿಂದ ಕೇಳು. (೯).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಶುಪತಿಪಾಶಪದಾರ್ಥನಿರ್ವಚನಮ್

ಬ್ರಹ್ಮಾದ್ಯಾಃ ಸ್ಥಾವರಾಂತಾಶ್ಚ ದೇವದೇವಸ್ಯ ಶೂಲಿನಃ।
ಪಶವಃ ಪರಿಕೀರ್ತ್ಯಂತೇ ಸಂಸಾರವಶವರ್ತಿನಃ ॥ ೧೦ ॥

ತೇಷಾಂ ಪತಿತ್ವಾದ್ ವಿಶ್ವೇಶಃ ಶಿವಃ ಪಶುಪತಿಃ ಸ್ಮೃತಃ।
ಮಲಮಾಯಾದಿಭಿಃ ಪಾಶೈಃ ಸ ಬಧ್ನಾತಿ ಪಶೂನ್ ಪತಿಃ ॥ ೧೧ ॥

ಸ ಏವ ಮೋಚಕಸ್ತೇಷಾಂ ಭಕ್ತ್ಯಾ ಸಮ್ಯಗುಪಾಸಿತಃ।

ಪಶು-ಪತಿ-ಪಾಶಪದಾರ್ಥಗಳ ವಿವರಣೆ

ಬ್ರಹ್ಮನಿಂದ ಹಿಡಿದು ಸ್ಥಾವರದವರೆಗೆ ಎಲ್ಲ ಪ್ರಾಣಿಗಳೂ ದೇವತೆಗಳಿಗೆ ದೇವನಾದ ತ್ರಿಶೂಲಧಾರಿಯ (ಶಿವನ) ಪಶುಗಳೆಂದು ಕರೆಯಲ್ಪಡುತ್ತವೆ. ಅವು ಸಂಸಾರಕ್ಕೆ ವಶರಾಗಿ ವರ್ತಿಸುತ್ತಾರೆ. (೧೦). ಅವುಗಳ ಒಡೆಯನಾದ್ದರಿಂದ ವಿಶ್ವೇಶನಾದ ಶಿವನು ಪಶುಪತಿಯೆನ್ನಿಸಿದ್ದಾನೆ. ಪತಿಯಾದ ಅವನು ಮಲ, ಮಾಯಾ ಮುಂತಾದ ಪಾಶಗಳಿಂದ ಪಶುಗಳನ್ನು ಕಟ್ಟಿಹಾಕುತ್ತಾನೆ. (೧೧). ಭಕ್ತಿಯಿಂದ ಸರಿಯಾಗಿ ಉಪಾಸಿಸಲ್ಪಟ್ಟವನಾಗಿ ಅವನೇ ಅವುಗಳಿಂದ ಮುಕ್ತಗೊಳಿಸುವನು.

ಟಿಪ್ಪಣಿ : ಪಾರಮೇಶ್ವರಾಗಮ, ೧೨. ೬೦-೬೨ ಇವೇ ಶ್ಲೋಕಗಳು. ಪತಿ, ಪಶು ಮತ್ತು ಪಾಶಗಳಿಗೆ ಶೈವಶಾಸ್ತ್ರದಲ್ಲಿ ತತ್ತ್ವತ್ರಯವೆಂದು ಹೆಸರು. ಸೂಕ್ಷ್ಮಾಗ್ರಮ ೫.೨೦ ಇದೇ ತತ್ತ್ವತ್ರಯವನ್ನು ಉಲ್ಲೇಖಿಸುತ್ತದೆ : "ಬ್ರಹ್ಮಾದಿಸ್ತಂಬಪರ್ಯಂತಂ ಪಶವಃ ಪರಿಕೀರ್ತಿತಾಃ। ಶಿವಃ ಪತಿರಿತಿ ಪ್ರೋಕ್ತಃ ಪಾಶಃ ಕರ್ಮಮಲಾದಿಕಮ್॥" (ಬ್ರಹ್ಮನಿಂದ ಹುಲ್ಲುಕಡ್ಡಿಯವರೆಗೆ ಎಲ್ಲವೂ ಪಶುಗಳೆಂದು ಕರೆಯಲ್ಪಡುತ್ತವೆ. ಶಿವನು ಪತಿಯೆಂದು ಕರೆಯಲ್ಪಡುತ್ತಾನೆ. ಕರ್ಮ, ಮಲ, ಮುಂತಾದವು ಪಾಶ). ಇಲ್ಲಿ ಮಲ, ಮಾಯಾ ಮತ್ತು ಕರ್ಮ ಎಂದು ಪಾಶ ತ್ರಿವಿಧ. ಕೆಲವರು ತಿರೋಧಾನ ಶಕ್ತಿಯನ್ನು ಪರಿಗಣಿಸಿ ಪಾಶಗಳು ನಾಲ್ಕು ಎಂದು ಹೇಳುತ್ತಾರೆ. ಮತ್ತೆ ಕೆಲವರು ಮಹಾಮಾಲಾ (ಬಿಂದು) ಶಕ್ತಿಯನ್ನೂ ಸೇರಿಸಿ ಐದು ಪಾಶಗಳು ಎನ್ನುವರು. ವೀರಶೈವ ಮತ್ತು ಪ್ರತ್ಯಭಿಜ್ಞಾ ಶಾಸ್ತ್ರಗಳಲ್ಲಿ ಮಲ, ಮಾಯಾ ಮತ್ತು ಕರ್ಮ ಎಂಬ ಮೂರೇ ಪಾಶಗಳು.

ಚತುರ್ವಿಂಶತಿತತ್ತ್ವಾನಾಂ ಪಾಶತ್ವಮ್

ಚತುರ್ವಿಂಶತಿತತ್ತ್ವಾನಿ ಮಾಯಾಕರ್ಮಗುಣಾ ಅಮೀ॥
ವಿಷಯಾ ಇತಿ ಕಥ್ಯಂತೇ ಪಾಶಾ ಜೀವನಿಬಂಧನಾಃ ॥ ೧೨ ॥

ಬ್ರಹ್ಮಾದಿಸ್ತಂಬಪರ್ಯಂತಾನ್ ಪಶೂನ್ ಬದ್ಧ್ವಾ ಮಹೇಶ್ವರಃ।
ಪಾಶೈರೇತೈಃ ಪತಿರ್ದೇವಃ ಕಾರ್ಯಂ ಕಾರಯತಿ ಸ್ವಕಮ್ ॥ ೧೩ ॥

ಚತುರ್ವಿಂಶತಿ ತತ್ತ್ವಗಳು ಪಾಶಗಳು

ಮಾಯಾ ಮತ್ತು ಕರ್ಮಗಳೆಂಬ ಹಗ್ಗಗಳಿಂದ ಬಂಧಿತವಾದ ಇಪ್ಪತ್ನಾಲ್ಕು ತತ್ತ್ವಗಳೇ ವಿಷಯಗಳೆಂದು ಕರೆಯಲ್ಪಡುತ್ತವೆ. ಅವೇ ಜೀವರುಗಳನ್ನು ಬಂಧಿಸುವ ಪಾಶಗಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೧೨). ದೇವನಾದ ಮಹೇಶ್ವರನು ಬ್ರಹ್ಮನಿಂದ ಹಿಡಿದು ಸ್ತಂಬದ (ಹುಲ್ಲು ಕಡ್ಡಿ)ವರೆಗೆ ಇರುವ ಪಶುಗಳನ್ನು ಈ ಪಾಶಗಳಿಂದ ಬಂಧಿಸಿ ತನ್ನ ಕಾರ್ಯವನ್ನು ಮಾಡಿಸುತ್ತಾನೆ. (೧೩).

ಟಿಪ್ಪಣಿ : ಪಾರಮೇಶ್ವರಾಗಮ, ೧೨. ೬೩-೬೪ ಇವೇ ಶ್ಲೋಕಗಳು. ಚತುರ್ವಿಂಶತಿ ತತ್ತ್ವಾನಿ - ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್, ಶ್ರೋತ್ರ, ತ್ವಕ್, ನೇತ್ರ, ಜಿಹ್ವಾ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ತೇಜಸ್, ಜಲ ಮತ್ತು ಪೃಥಿವಿ ಎಂಬ ತತ್ತ್ವಗಳೇ ಇಪ್ಪತ್ನಾಲ್ಕು (ಚತುರ್ವಿಂಶತಿ) ತತ್ತ್ವಗಳು. ಇವುಗಳಿಗೆ ಅಶುದ್ಧ ತತ್ತ್ವಗಳೆನ್ನುತ್ತಾರೆ. ಇಲ್ಲಿ ಸೇಶ್ವರ ಸಾಂಖ್ಯ ಪದ್ಧತಿಯಂತೆ ಸೃಷ್ಟಿ ಪ್ರಕ್ರಿಯೆಯು ವರ್ಣಿತವಾಗಿದೆ. ಶೈವಾಗಮ ಶಾಸ್ತ್ರದಲ್ಲಿ ಭಗವಂತ ಶಿವನ ಅಶುದ್ಧ ಸೃಷ್ಟಿಗೆ ಸೇರಿದವುಗಳು ಈ ಇಪ್ಪತ್ನಾಲ್ಕು ತತ್ತ್ವಗಳು. ಇವಲ್ಲದೆ ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ ಎಂಬ ಐದು ಶುದ್ಧ ತತ್ತ್ವಗಳು ಮತ್ತು ಮಾಯಾ, ಪುರುಷ, ಕಲಾ, ವಿದ್ಯಾ, ರಾಗ, ಕಾಲ ಮತ್ತು ನಿಯತಿ ಎಂಬ ಏಳು ಶುದ್ಧಾಶುದ್ಧ ತತ್ತ್ವಗಳು ಸೇರಿ ಶೈವಾಗಮ ಶಾಸ್ತ್ರದ ಪ್ರಕಾರ ಮೂವತ್ತಾರು ತತ್ತ್ವಗಳು. ಸೂಕ್ಷ್ಮಾಗ್ರಮ ೧೦.೪ರಲ್ಲಿ ಪರಮಾತ್ಮನನ್ನು ಷಟ್‌ತ್ರಿಂಶತ್ ತತ್ತ್ವರೂಪನೆಂದು ಕರೆಯಲಾಗಿದೆ : "ಷಟ್‌ತ್ರಿಂಶತ್‌ತತ್ತ್ವರೂಪಾಯ ತತ್ತ್ವಾತೀತಾಯ ಶಂಭವೇ। ಪರತತ್ತ್ವ ಸ್ವರೂಪಾಯ ತತ್ತ್ವವೇದ್ಯಾಯ ತೇ ನಮಃ॥" (೩೬ ತತ್ತ್ವಗಳ ಉತ್ಪತ್ತಿಯ ಬಗ್ಗೆ 'ಚಂದ್ರಜ್ಞಾನಾಗಮ ವಿಚಾರ ರಶ್ಮಿ' ಪು.೨-ಳನ್ನು ನೋಡಿರಿ : ವೀರಶೈವ ಅನುಸಂಧಾನ ಸಂಸ್ಥಾನ, ಬೆಂಗಳೂರು, ೨೦೦೧, ಕಿರಣ-೭).

ಪರಶಿವಸ್ಯಾಜ್ಞಯಾ ಸರ್ವತತ್ತ್ವೋತ್ಪತ್ತಿಃ

ತಸ್ಯಾಜ್ಞಯಾ ಮಹೇಶಸ್ಯ ಪ್ರಕೃತಿಃ ಪುರುಷೋಚಿತಾಮ್।
ಬುದ್ಧಿಂ ಪ್ರಸೂತೇ ಸಾ ಬುದ್ಧಿರಹಂಕಾರಮಹಂಕೃತಿಃ ॥ ೧೪ ॥

ಇಂದ್ರಿಯಾಣಿ ದಶೈಕಂ ಚ ತನ್ಮಾತ್ರಾ ಪಂಚಕಂ ತಥಾ।
ಶಾಸನಾದ್ ದೇವದೇವಸ್ಯ ಶಿವಸ್ಯ ಶಿವದಾಯಿನಃ ॥ ೧೫ ॥

ತನ್ಮಾತ್ರಾಣ್ಯಪಿ ತಸ್ಯೈವ ಶಾಸನೇನ ಮಹೀಯಸಾ।
ಮಹಾಭೂತಾನ್ಯಶೇಷಾಣಿ ಭಾವಯಂತ್ಯನುಪೂರ್ವಶಃ ॥ ೧೬ ॥

ಬ್ರಹ್ಮಾದೀನಾಂ ತೃಣಾಂತಾನಾಂ ದೇಹಿನಾಂ ದೇಹಸಂಗತಿಮ್।
ಮಹಾಭೂತಾನ್ಯಶೇಷಾಣಿ ಜನಯಂತಿ ಶಿವಾಜ್ಞಯಾ ॥ ೧೭ ॥

ಪರಶಿವನ ಆಜ್ಞೆಯಿಂದ ಎಲ್ಲಾ ತತ್ತ್ವಗಳ ಉತ್ಪತ್ತಿ

ಪರಮೇಶ್ವರನ ಆಜ್ಞೆಗೆ ಅನುಸಾರವಾಗಿ ಪ್ರಕೃತಿಯು ಪುರುಷನಿಗೆ ಉಚಿತವಾದ ಬುದ್ಧಿಗೆ ಜನ್ಮಕೊಡುತ್ತಾಳೆ. ಆ ಬುದ್ಧಿಯು ಅಹಂಕಾರಕ್ಕೆ ಮತ್ತು ಅಹಂಕಾರವು ಹನ್ನೊಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಂದ್ರಿಯಗಳು (೫ ಜ್ಞಾನೇಂದ್ರಿಯಗಳು + ೫ಕರ್ಮೇಂದ್ರಿಯಗಳು+೧ಮನಸ್ಸು) ಮತ್ತು ಐದು ತನ್ಮಾತ್ರಗಳಿಗೆ ಜನ್ಮ ಕೊಡುತ್ತದೆ. ದೇವತೆಗಳ ದೇವನಾದ ಮಂಗಲಕರನಾದ ಶಿವನ ಶಾಸನದಿಂದ. ಆ ತನ್ಮಾತ್ರಗಳು ಕೂಡ ಅವನ ಮಹಾನ್ ಶಾಸನದಿಂದ ಅನುಕ್ರಮವಾಗಿ ಮಹಾಭೂತಗಳನ್ನು ಉಂಟುಮಾಡುತ್ತವೆ. ಅದೇ ಶಿವಾಜ್ಞೆಯಿಂದ ಅಶೇಷ ಮಹಾಭೂತಗಳು ಬ್ರಹ್ಮನಿಂದ ತೃಣದವರೆಗಿನ ಎಲ್ಲಾ ಶರೀರಗಳ ದೇಹ ನಿರ್ಮಾಣವನ್ನು ಮಾಡುತ್ತವೆ. (೧೪-೧೭).

ಟಿಪ್ಪಣಿ : ದಶೈಕಂ ಇಂದ್ರಿಯಾಣಿ - ಶ್ರೋತ್ರ, ತ್ವಕ್, ನೇತ್ರ, ಜಿಹ್ವಾ ಮತ್ತು ಘ್ರಾಣವೆಂಬ ೫ ಜ್ಞಾನೇಂದ್ರಿಯಗಳು, ವಾಕ್, ಪಾಣಿ, ಪಾದ, ಪಾಯು ಮತ್ತು ಉಪಸ್ಥವೆಂಬ ೫ ಕರ್ಮೇಂದ್ರಿಯಗಳು ಹಾಗೂ ಮನಸ್ಸು ಸೇರಿ ಹನ್ನೊಂದು ಇಂದ್ರಿಯಗಳು. ಪಂಚತನ್ಮಾತ್ರಗಳೆಂದರೆ ಶಬ್ದತನ್ಮಾತ್ರ, ಸ್ಪರ್ಶತನ್ಮಾತ್ರ, ರೂಪತನ್ಮಾತ್ರ, ರಸತನ್ಮಾತ್ರ ಮತ್ತು ಗಂಧತನ್ಮಾತ್ರ. ಮಹಾಭೂತಗಳೆಂದರೆ ಆಕಾಶ, ವಾಯು, ತೇಜಸ್, ಜಲ ಮತ್ತು ಪೃಥಿವಿ. ಇವು ಒಟ್ಟು ೨೧ ತತ್ತ್ವಗಳು. ಇವುಗಳೊಂದಿಗೆ ಪ್ರಕೃತಿ, ಬುದ್ಧಿ ಮತ್ತು ಅಹಂಕಾರಗಳು ಸೇರಿದರೆ ೨೪ ತತ್ತ್ವಗಳು.

ಬುದ್ಧ್ಯಾದೀನಾಂ ವ್ಯಾಪಾರಾಃ

ಅಧ್ಯವಸ್ಯತಿ ವೈ ಬುದ್ಧಿರಹಂಕಾರೋಽಭಿಮನ್ಯತೇ।
ಚಿತ್ತಂ ಚೇತಯತೇ ಚಾಪಿ ಮನಃ ಸಂಕಲ್ಪಯತ್ಯಪಿ ॥ ೧೮ ॥

ಶ್ರೋತ್ರಾದೀನಿ ಚ ಗೃಹ್ಣಂತಿ ಶಬ್ದಾದೀನ್ ವಿಷಯಾನ್ ಪೃಥಕ್।
ಸ್ವಾನೇವ ನಾನ್ಯಾನ್ ದೇವಸ್ಯ ದಿವ್ಯೇನಾಜ್ಞಾಬಲೇನ ವೈ ॥ ೧೯ ॥

ವಾಗಾದೀನ್ಯಪಿ ಯಾನ್ಯಾಸಂಸ್ತಾನಿ ಕರ್ಮೇಂದ್ರಿಯಾಣಿ ಚ ।
ಯಥಾ ಸ್ವಂ ಕರ್ಮ ಕುರ್ವಂತಿ ನಾನ್ಯತ್ ಕಿಂಚಿಚ್ಛಿವಾಜ್ಞಯಾ ॥ ೨೦ ॥

ಶಬ್ದಾದಯೋಽಪಿ ಗೃಹ್ಯಂತೇ ಕ್ರಿಯಂತೇ ವಚನಾದಯಃ।
ಅವಿಲಂಘ್ಯಾ ಹಿ ಸರ್ವೇಷಾಮಾಜ್ಞಾ ಶಂಭೋರ್ಗರೀಯಸೀ ॥ ೨೧ ॥

ಬುದ್ಧಿ ಮುಂತಾದವುಗಳ ಕಾರ್ಯಗಳು

ಬುದ್ಧಿಯು ನಿಶ್ಚಯಿಸುತ್ತದೆ. ಅಹಂಕಾರವು ಅಭಿಮಾನವನ್ನು ತಾಳುತ್ತದೆ. ಚಿತ್ತವು ಚೇತನವನ್ನು ಕೊಡುತ್ತದೆ. ಮನಸ್ಸು ಸಂಕಲ್ಪವನ್ನು ಮಾಡುತ್ತದೆ. ಶ್ರೋತ್ರ ಮುಂತಾದ ಇಂದ್ರಿಯಗಳು ಶಿವನ ಆಜ್ಞೆಗೆ ಅನುಸಾರವಾಗಿ ಶಬ್ದ ಮುಂತಾದ ತಮ್ಮದೇ ವಿಷಯಗಳನ್ನು ಗ್ರಹಿಸುತ್ತವೆ, ಬೇರೆ ವಿಷಯಗಳನ್ನಲ್ಲ. ವಾಕ್ ಮುಂತಾದ ಐದು ಇಂದ್ರಿಯಗಳು, ಇವೇ ಕರ್ಮೇಂದ್ರಿಯಗಳು, ಶಿವನ ಆಜ್ಞೆಯಿಂದ ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತವೆ, ಬೇರೆ ಕಾರ್ಯಗಳನ್ನಲ್ಲ. ಶಬ್ದ ಮುಂತಾದ ವಿಷಯಗಳನ್ನು ಶ್ರೋತ್ರ ಮುಂತಾದವು ಗ್ರಹಿಸುತ್ತವೆ ಮತ್ತು ವಚನ (ಮಾತು) ಮುಂತಾದ ಕ್ರಿಯೆಗಳನ್ನು ವಾಕ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂತಾದ ಇಂದ್ರಿಯಗಳು ಮಾಡುತ್ತವೆ. ಶಂಭುವಿನ ಮಹತ್ತರವಾದ ಆಜ್ಞೆಯನ್ನು ಯಾರೂ ಮೀರುವಂತಿಲ್ಲ. (೧೮-೨೧).

ಟಿಪ್ಪಣಿ : ಸಾಂಖ್ಯ ದರ್ಶನದಲ್ಲಿ ಬುದ್ಧಿ, ಅಹಂಕಾರ ಮತ್ತು ಮನಸ್ಸು ಎಂದು ತ್ರಿವಿಧ ಅಂತಃಕರಣವು ಮಾತ್ರ ಸ್ವೀಕೃತವಾಗಿದೆ. ವೇದಾಂತದರ್ಶನದಲ್ಲಿ ಚಿತ್ತವೆಂಬ ನಾಲ್ಕನೆಯದು ಅಂತಃಕರಣದಲ್ಲಿ ಸೇರುತ್ತದೆ. ತದನುಸಾರವಾಗಿ ಇಲ್ಲಿ ಚಿತ್ತದ ಬಗ್ಗೆ ಹೇಳಿದೆ. ೩೬ ತತ್ತ್ವಗಳಲ್ಲಿ ಚಿತ್ತತತ್ತ್ವವೆಂಬುದು ಇಲ್ಲ. ಚಿತ್ತವನ್ನು ತೆಗೆದುಕೊಂಡರೆ ಅಶುದ್ಧ ತತ್ತ್ವಗಳು ೨೫ ಆಗುತ್ತವೆ.

ಪಂಚಭೂತೋತ್ಪತ್ತಿ-ಕಾರ್ಯೇ

ಅವಕಾಶಮಶೇಷಾಣಾಂ ಭೂತಾನಾಂ ಸಂಪ್ರಯಚ್ಛತಿ।
ಆಕಾಶಃ ಪರಮೇಶಸ್ಯ ಶಾಸನಾದೇವ ಸರ್ವಗಃ ॥ ೨೨ ॥

ಪ್ರಾಣಾದ್ಯೈಶ್ಚ ತಥಾ ನಾಮಭೇದೈರಂತರ್ಬಹಿರ್ಜಗತ್।
ಬಿಭರ್ತಿ ಸರ್ವಂ ಶರ್ವಸ್ಯ ಶಾಸನೇನ ಪ್ರಭಂಜನಃ ॥ ೨೩ ॥

ಹವ್ಯಂ ವಹತಿ ದೇವಾನಾಂ ಕವ್ಯಂ ಕವ್ಯಾಶಿನಾಮಪಿ।
ಪಾಕಾದ್ಯಂ ಚ ಕರೋತ್ಯಗ್ನಿಃ ಪರಮೇಶ್ವರಶಾಸನಾತ್ ॥ ೨೪ ॥

ಸಂಜೀವನಾದ್ಯಂ ಸರ್ವಸ್ಯ ಕುರ್ವಂತ್ಯಾಪಃ ಶಿವಾಜ್ಞಯಾ।
ವಿಶ್ವಂಭರಾ ಜಗನ್ನಿತ್ಯಂ ಧತ್ತೇ ವಿಶ್ವೇಶ್ವರಾಜ್ಞಯಾ ॥ ೨೫ ॥

ಪಂಚಭೂತಗಳ ಉತ್ಪತ್ತಿ ಮತ್ತು ಕಾರ್ಯ

ಆಕಾಶವು ಪರಮೇಶ್ವರನ ಆಜ್ಞೆಯಂತೆ ಎಲ್ಲಾ ಪ್ರಾಣಿಗಳಿಗೆ ಅವಕಾಶವನ್ನು ನೀಡುತ್ತದೆ ಮತ್ತು ಸರ್ವವನ್ನು ಆವರಿಸಿದೆ. (೨೨). ಭಗವಂತ ಶಿವ(ಶರ್ವ)ನ ಆಜ್ಞೆಯಂತೆ ವಾಯುವು ಪ್ರಾಣ ಮುಂತಾದ ಹೆಸರುಗಳಿಂದ ಎಲ್ಲವನ್ನೂ ಒಳಗೂ ಹೊರಗೂ ರಕ್ಷಿಸುತ್ತದೆ. (೨೩). ಪರಮೇಶ್ವರನ ಶಾಸನದಂತೆ ಅಗ್ನಿ ದೇವತೆಯು ಹವಿಸ್ಸನ್ನೂ ಕವ್ಯವನ್ನು ಸ್ವೀಕರಿಸುವ ಪಿತೃಗಳಿಗೆ ಕವ್ಯವನ್ನೂ ಕೊಂಡೊಯ್ಯುತ್ತದೆ ಮತ್ತು ಅಡಿಗೆ ಮುಂತಾದವನ್ನು ಮಾಡುತ್ತದೆ. (೨೪). ಶಿವನ ಆಜ್ಞೆಯ ಪ್ರಕಾರ ನೀರು ಎಲ್ಲರಿಗೂ ಜೀವನವನ್ನು (ತೃಪ್ತಿ) ಕೊಡುತ್ತದೆ. ವಿಶ್ವಂಭರೆಯು (ಪೃಥ್ವಿಯು) ವಿಶ್ವೇಶ್ವರನ ಆಜ್ಞಾನುಸಾರ ಜಗತ್ತನ್ನು ಧರಿಸುತ್ತದೆ. (೨೫).

ದಿಕ್ಪಾಲಾನಾಂ ಶಿವಾಜ್ಞಯೈವ ಪ್ರವೃತ್ತಿಃ

ದೇವಾನ್ ಪಾತ್ಯಸುರಾನ್ ಹಂತಿ ತ್ರಿಲೋಕಾನಭಿರಕ್ಷತಿ।
ಆಜ್ಞಯಾ ತಸ್ಯ ದೇವೇಂದ್ರಃ ಸರ್ವದೇವೈರಲಂಘ್ಯಯಾ ॥ ೨೬ ॥

ಜೀವತಾಂ ವ್ಯಾಧಿಭಿಃ ಪೀಡಾಂ ಮೃತಾನಾಂ ಚೈವ ಯಾತನಾಃ ।
ಅಧಾರ್ಮಿಕಾಣಾಂ ಧರ್ಮೇಶಃ ಕರೋತಿ ಶಿವಶಾಸನಾತ್ ॥ ೨೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರ್ಋತಿರ್ವಿಧಿ ಹೀನಾನಾಂ ಫಲಂ ಹರತಿ ಕರ್ಮಣಾಮ್।
ನಿಶಾಚರಾಧಿಪತ್ಯಂ ಚ ಕುರುತೇ ಶಂಕರಾಜ್ಞಯಾ ॥ ೨೮ ॥

ಆಧಿಪತ್ಯಮಪಾಂ ನಿತ್ಯಂ ಕುರುತೇ ವರುಣೋಽಪಿ ಚ।
ಪಾಶೈರ್ಬಧ್ನಾತಿ ಬಧ್ಯಾಂಶ್ಚ ಪರಮೇಶ್ವರಶಾಸನಾತ್ ॥ ೨೯ ॥

ದದಾತಿ ನಿತ್ಯಂ ಯಕ್ಷೇಶೋ ದ್ರವಿಣಂ ದ್ರವಿಣೇಶ್ವರಃ ।
ಪುಣ್ಯಾನುರೂಪಂ ಭೂತೇಭ್ಯಃ ಪುರಶಾಸನಶಾಸನಾತ್ ॥ ೩೦ ॥

ಕರೋತಿ ಸಂಪದಃ ಶಶ್ವಜ್ ಜ್ಞಾನಂ ಚಾಪಿ ಸುಮೇಧಸಾಮ್।
ನಿಗ್ರಹಂ ಚಾಪ್ಯಸಾಧೂನಾಮೀಶಾನಃ ಶಿವಶಾಸನಾತ್॥
ಧತ್ತೇ ತು ಧರಣೀಂ ಮೂರ್ಧ್ನಾ ಶೇಷಃ ಶಿವನಿಯೋಗತಃ ॥ ೩೧ ॥

ದಿಕ್ಪಾಲರು ಶಿವಾಜ್ಞೆಯಂತೆ ವರ್ತಿಸುವರು

ಎಲ್ಲಾ ದೇವತೆಗಳಿಗೆ ಮೀರಲಾಗದ ಅವನ (ಪರಮೇಶ್ವರನ) ಆಜ್ಞೆಯಂತೆ ದೇವೇಂದ್ರನು ದೇವತೆಗಳನ್ನು ರಕ್ಷಿಸುತ್ತಾನೆ, ರಾಕ್ಷಸರನ್ನು ಸಂಹರಿಸುತ್ತಾನೆ ಮತ್ತು ಮೂರು ಲೋಕಗಳನ್ನು ಕಾಪಾಡುತ್ತಾನೆ. (೨೬). ಶಿವನ ಶಾಸನದಂತೆಯೇ ಧರ್ಮೇಶನು (ಯಮನು) ಅಧಾರ್ಮಿಕರಿಗೆ ಜೀವಂತವಿರುವಾಗ ರೋಗಗಳಿಂದ ಸತ್ತಾಗ ಮತ್ತೆ ಯಾತನೆಗಳಿಂದ ಪೀಡಿಸುತ್ತಾನೆ. (೨೭). ನಿರ್ಋತಿಯು ಶಂಕರನ ಆಜ್ಞಾನುಸಾರ ದುರ್ದೈವಿಗಳಿಂದ ಕರ್ಮ ಫಲವನ್ನು ಅಪಹರಿಸುತ್ತಾಳೆ ಮತ್ತು ರಾಕ್ಷಸರ ಆಧಿಪತಿತ್ವವನ್ನು ವಹಿಸುತ್ತಾಳೆ. (೨೮). ಪರಮೇಶ್ವರ ಶಾಸನದಂತೆ ವರುಣನು ನೀರಿನ ಅಧಿಪತಿತ್ವವನ್ನು ಹೊತ್ತಿದ್ದಾನೆ ಮತ್ತು ಬಂಧನಕ್ಕೆ ಅರ್ಹರನ್ನು ತನ್ನ ಪಾಶಗಳಿಂದ ಬಂಧಿಸುತ್ತಾನೆ. (೨೯). ತ್ರಿಪುರಸಂಹಾರಿ ಶಿವನ ಆಜ್ಞೆಯ ಪ್ರಕಾರವೇ ಯಕ್ಷರ ಒಡೆಯನಾದ, ಸಂಪತ್ತಿಗೆ ಅಧಿಪತಿಯಾದ ಕುಬೇರನು ಪ್ರಾಣಿಗಳಿಗೆ ಅವರ ಪುಣ್ಯಕ್ಕೆ ಅನುಗುಣವಾಗಿ ಹಣವನ್ನು ಕೊಡುತ್ತಾನೆ. (೩೦). ಶಿವನ ಶಾಸನದಂತೆಯೇ ಈಶಾನನು ಸರ್ವದಾ ಸಂಪತ್ತನ್ನು ಅನುಗ್ರಹಿಸುತ್ತಾನೆ, ಜ್ಞಾನಿಗಳಿಗೆ ಜ್ಞಾನವನ್ನು ಕೊಡುತ್ತಾನೆ ಮತ್ತು ಕೆಟ್ಟವರನ್ನು ನಿಗ್ರಹಿಸುತ್ತಾನೆ. ಶಿವನ ಆಜ್ಞೆಯಂತೆ ಶೇಷನು ಭೂಮಿಯನ್ನು ತನ್ನ ತಲೆಯ ಮೇಲೆ ಹೊತ್ತಿದ್ದಾನೆ. (೩೧).

ಟಿಪ್ಪಣಿ : ನಿರ್ಋತಿ ಎಂದರೆ ಅಲಕ್ಷ್ಮಿ ದರಿದ್ರತಾ, ಋಗ್ವೇದದಲ್ಲಿ ಪಾಪ ದೇವತೆಗಳ ಅರ್ಥದಲ್ಲಿ ಈ ಶಬ್ದದ ಪ್ರಯೋಗವಿದೆ "ದೂತೋ ನಿರ್ಋತ್ಯಾ ಇದ ಮಾಜಗಾಮ" (೧೦.೧೬೦.೧) ನಿರ್ಋತಿಯ ಇಲ್ಲಿ ನೈರ್ಋತ್ಯ ದಿಕ್ಕಿನ ಅಧಿ ದೇವತೆ.

ಶಿವಶಾಸನಾದೇವ ಬ್ರಹ್ಮಾದೀನಾಂ ಸೃಷ್ಟ್ಯಾದಿಕರ್ತೃತ್ವಮ್

ಸೃಜತ್ಯಶೇಷಮೀಶಸ್ಯ ಶಾಸನಾಚ್ಚತುರಾನನಃ।
ತಿಸೃಭಿರ್ಮೂರ್ತಿಭಿಃ ಸ್ವಾಭಿಃ ಪಾತಿ ಚಾಂತೇ ನಿಹಂತಿ ಚ ॥ ೩೨ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷ್ಣುಃ ಪಾಲಯತೇ ವಿಶ್ವಂ ವಿಶ್ವೇಶ್ವರನಿಯೋಗತಃ।
ಸೃಜತೇ ಗ್ರಸತೇ ಚಾಪಿ ಸ್ವಕಾಭಿಸ್ತನುಭಿಸ್ತಥಾ ॥ ೩೩ ॥

ಹರತ್ಯಂತೇ ಜಗತ್ ಸರ್ವಂ ಹರಸ್ತಸ್ಯೈವ ಶಾಸನಾತ್।
ಸೃಜತ್ಯಪಿ ಚ ವಿಶ್ವಾತ್ಮಾ ತ್ರಿಧಾ ಭಿನ್ನಸ್ತು ರಕ್ಷತಿ ॥ ೩೪ ॥

ಶಿವನ ಶಾಸನದಿಂದಲೇ ಬ್ರಹ್ಮಾದಿಗಳ ಸೃಷ್ಟಿ ಇತ್ಯಾದಿ

ಈಶ್ವರನ ಶಾಸನದಂತೆ ಚತುರ್ಮುಖ ಬ್ರಹ್ಮನು ತನ್ನ ಮೂರು ಮೂರ್ತಿಗಳಿಂದ ಈ ಎಲ್ಲಾ ಜಗತ್ತನ್ನು ಸೃಷ್ಟಿಸುತ್ತಾನೆ, ರಕ್ಷಿಸುತ್ತಾನೆ ಮತ್ತು ಕಡೆಯಲ್ಲಿ ಸಂಹರಿಸುತ್ತಾನೆ. (೩೨). ವಿಶ್ವೇಶ್ವರನ ನಿಯುಕ್ತಿಯಂತೆ ವಿಷ್ಣುವು ತನ್ನ ಮೂರು ರೂಪಗಳಿಂದ ವಿಶ್ವವನ್ನು ಪಾಲಿಸುತ್ತಾನೆ, ಸೃಷ್ಟಿಸುತ್ತಾನೆ ಮತ್ತು ನುಂಗುತ್ತಾನೆ. (೩೩). ಅವನ ಶಾಸನದಂತೆಯೇ ಮೂರು ರೂಪದಲ್ಲಿ ಭಿನ್ನನಾಗಿ ವಿಶ್ವಾತ್ಮನಾದ ಹರನು ಜಗತ್ತನ್ನು ಸಂಹರಿಸುತ್ತಾನೆ, ಸೃಷ್ಟಿಸುತ್ತಾನೆ ಮತ್ತು ರಕ್ಷಿಸುತ್ತಾನೆ. (೩೪).

ಟಿಪ್ಪಣಿ : ಬ್ರಹ್ಮ ವಿಷ್ಣು, ರುದ್ರರ ಮೂರು ರೂಪಗಳನ್ನು ಪರಮಾತ್ಮನ ರೂಪಗಳೆಂದು ವರ್ಣಿಸಲಾಗಿದೆ. ಒಂದೇ ಪರವಸ್ತು ಮೂರು ರೂಪಗಳು. ಅವುಗಳಿಂದ ಮೂರು ವೈಶ್ವಿಕ ಕಾರ್ಯಗಳು. ಕಾಳಿದಾಸ ಹೇಳುತ್ತಾನೆ "ಏಕೈವ ಮೂರ್ತಿರ್ಬಿಭಿದೇ ತ್ರಿಧಾ ಸಾ ಸಾಮಾನ್ಯಮೇಷಾಂ ಪ್ರಥಮಾವರತ್ವಮ್। ವಿಷ್ಣೋರ್ಹರಸ್ತಸ್ಯ ಹರಿಃ ಕದಾಚಿದ್ ವೇಧಾಸ್ತ್ರಯೋಸ್ತಾವಪಿ ಧಾತುರಾದ್ಯಾ॥" (ಕುಮಾರಸಂಭವ, ೭.೪೪) "ಒಂದೇ ಮೂರ್ತಿಯು ಬ್ರಹ್ಮ ವಿಷ್ಣು, ಶಿವನೆಂದು ಮೂರು ವಿಧವಾಗಿ ಬೇರ್ಪಟ್ಟಿತು. ಅವರಲ್ಲಿ ಹಿರಿ-ಕಿರಿತನವೆಂಬುದು ಸಮಾನವಾಗಿದೆ. ಒಮ್ಮೆ ಹರನು (ಶಿವನು) ವಿಷ್ಣುವಿಗಿಂತ ಹಿರಿಯನು; ಒಮ್ಮೆ ಹರಿಯು (ವಿಷ್ಣುವು) ಹರನಿಗಿಂತ ಹಿರಿಯನು; ಒಮ್ಮೆ ಬ್ರಹ್ಮನು ಹರಿಹರರಿಗಿಂತ ಹಿರಿಯನು; ಮತ್ತೊಮ್ಮೆ ಹರಿಹರರು ಬ್ರಹ್ಮನಿಗಿಂತ ಹಿರಿಯರು." ಹೀಗೆ ಈ ಮೂರು ಭೇದಗಳು ಔಪಾಧಿಕವೇ ಹೊರತು ವಾಸ್ತವಿಕವಲ್ಲ.

ಶಿವಶಾಸನಾದೇವ ಕಾಲಾದಯಃ ಪ್ರವರ್ತಂತೇ

ಕಾಲಃ ಕರೋತಿ ಸಕಲಂ ಕಾಲಃ ಸಂಹರತಿ ಪ್ರಜಾಃ।
ಕಾಲಃ ಪಾಲಯತೇ ವಿಶ್ವಂ ಕಾಲಕಾಲಸ್ಯ ಶಾಸನಾತ್ ॥ ೩೫ ॥

ತ್ರಿಭಿರಂಶೈರ್ಜಗದ್ಬಿಭ್ರತ್ ತೇಜೋಭಿರ್ವೃಷ್ಟಿಮಾದಿಶನ್।
ದಿವಿ ವರ್ತತ್ಯಸೌ ಭಾನುರ್ದೇವದೇವಸ್ಯ ಶಾಸನಾತ್ ॥ ೩೬ ॥

ಪುಷ್ಯತ್ಯೋಷಧಿಜಾತಾನಿ ಭೂತಾನಿ ಹ್ಲಾದಯತ್ಯಪಿ।
ದೇವಸ್ಯೈಷ ಪೀಯತೇ ಚಂದ್ರಶ್ಚಂದ್ರಭೂಷಣಶಾಸನಾತ್ ॥ ೩೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನ ಆಜ್ಞೆಯಿಂದಲೇ ಕಾಲ ಮಂತಾದವರು ಪ್ರವರ್ತಿಸುತ್ತಾರೆ

ಕಾಲಕಾಲನಾದ ಶಿವನ ಆಜ್ಞೆಯಂತೆ ಕಾಲನು ಎಲ್ಲವನ್ನೂ ಮಾಡುತ್ತಾನೆ, ಪ್ರಜೆಗಳನ್ನು ಸಂಹರಿಸುತ್ತಾನೆ ಮತ್ತು ವಿಶ್ವವನ್ನು ಸಂಹರಿಸುತ್ತಾನೆ (೩೫). ದೇವ ದೇವನಾದ ಶಂಭುವಿನ ಶಾಸನದಂತೆ ತನ್ನ ಮೂರು ಅಂಶಗಳಿಂದ ಜಗತ್ತನ್ನು ರಕ್ಷಿಸುತ್ತಾನೆ, ಕಿರಣಗಳಿಂದ ಮಳೆಯನ್ನು ಕಳುಹಿಸುತ್ತಾನೆ ಮತ್ತು ಆಕಾಶದಲ್ಲಿ ಸಂಚರಿಸುತ್ತಾನೆ. (೩೬). ಚಂದ್ರಶೇಖರನ ಆಜ್ಞಾನುಸಾರ ಚಂದ್ರನು ಔಷಧಿಗಳನ್ನು ಪೋಷಿಸುತ್ತಾನೆ, ಪ್ರಾಣಿಗಳಿಗೆ ಆನಂದವನ್ನು ನೀಡುತ್ತಾನೆ ಮತ್ತು ದೇವತೆಗಳಿಂದ ಕುಡಿಯಲ್ಪಡುತ್ತಾನೆ. (೩೭).

ಸರ್ವಂ ಶಿವಶಾಸನಾದೇವ ಪ್ರವರ್ತತೇ

ಆದಿತ್ಯಾ ವಸವೋ ರುದ್ರಾ ಅಶ್ವಿನೌ ಮರುತಸ್ತಥಾ।
ಖೇಚರಾ ಋಷಯಃ ಸಿದ್ಧಾ ಭೋಗಿನೋ ಮನುಜಾ ಮೃಗಾಃ ॥ ೩೮ ॥

ಪಶವಃ ಪಕ್ಷಿಣಶ್ಚೈವ ಕೀಟಾದ್ಯಾ ಸ್ಥಾವರಾಣಿ ಚ।
ನದ್ಯಃ ಸಮುದ್ರಾ ಗಿರಯಃ ಕಾನನಾನಿ ಸರಾಂಸಿ ಚ ॥ ೩೯ ॥

ವೇದಾಃ ಸಾಂಗಾಶ್ಚ ಶಾಸ್ತ್ರಾಣಿ ಮಂತ್ರಾಃ ಸೋಮಮುಖಾದಯಃ।
ಕಾಲಾಗ್ನ್ಯಾದಿ-ಶಿವಾಂತಾನಿ ಭುವನಾನಿ ಸಹಾಧಿಪೈಃ॥
ಬ್ರಹ್ಮಾಂಡಾನ್ಯಪ್ಯಸಂಖ್ಯಾನಿ ತೇಷಾಮಾವರಣಾನಿ ಚ ॥ ೪೦ ॥

ವರ್ತಮಾನಾನ್ಯತೀತಾನಿ ಭವಿಷ್ಯಂತ್ಯಪಿ ಕೃತ್ಸ್ನಶಃ।
ದಿಶಶ್ಚ ವಿದಿಶಶ್ಚೈವ ಕಾಲಭೇದಾಃ ಕಲಾದಯಃ ॥ ೪೧ ॥

ಯಚ್ಚ ಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ।
ತತ್ಸರ್ವಂ ಶಂಕರಸ್ಯಾಜ್ಞಾಬಲೇನ ಸಮಧಿಷ್ಠಿತಮ್ ॥ ೪೨ ॥

ಆಜ್ಞಾಬಲಾತ್ತಸ್ಯ ಧರಾ ಸ್ಥಿತೇಹ
ಧಾರಾಧರಾ ವಾರಿಧರಾಃ ಸಮುದ್ರಾಃ।
ಜ್ಯೋತಿರ್ಗಣಾಃ ಶಕ್ರಮುಖಾಶ್ಚ ದೇವಾಃ
ಸ್ಥಿರಂ ಚರಂ ವಾ ಚಿದಚಿದ್ಯದಸ್ತಿ ॥ ೪೩ ॥

ಎಲ್ಲವೂ ಶಿವನ ಆಜ್ಞೆಯಂತೆಯೇ ಪ್ರವರ್ತಿಸುತ್ತದೆ

ಆದಿತ್ಯರು, ವಸುಗಳು, ರುದ್ರರು, ಅಶ್ವಿನಿ ದೇವತೆಗಳು, ಮರುತರು, ಆಕಾಶಚಾರಿಗಳು, ಋಷಿಗಳು, ಸಿದ್ಧರು, ಸರ್ಪಗಳು, ಮನುಷ್ಯರು, ಮೃಗಗಳು, ಪಶುಗಳು, ಪಕ್ಷಿಗಳು, ಕೀಟ ಮುಂತಾದವು, ಸ್ಥಾವರಗಳು, ನದಿಗಳು, ಸಮುದ್ರಗಳು, ಗಿರಿಗಳು, ಅರಣ್ಯಗಳು, ಸರೋವರಗಳು, ವೇದಗಳು, ವೇದಾಂಗಗಳು, ಶಾಸ್ತ್ರಗಳು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂತ್ರಗಳು, ಸೋಮಯಾಗ ಮುಂತಾದವು. ಕಾಲಾಗ್ನಿಯಿಂದ ಹಿಡಿದು ಶಿವನವರೆಗಿನ ಸಕಲ ಭುವನಗಳು, ಅಸಂಖ್ಯಾತ ಬ್ರಹ್ಮಾಂಡಗಳು, ಅವುಗಳ ಆವರಣಗಳು, ವರ್ತಮಾನ ಭೂತ-ಭವಿಷ್ಯತ್ತಿನ ಎಲ್ಲಾ ಪದಾರ್ಥಗಳು, ದಿಕ್ಕುಗಳು, ವಿದಿಕ್ಕುಗಳು, ಕಾಲಭೇದಗಳು, ಕಲಾಭೇದಗಳು, ಹೀಗೆ ಏನೇನೆಲ್ಲಾ ಈ ಜಗತ್ತಿನಲ್ಲಿ ಕಾಣುವುದೋ ಕೇಳಿಬರುವದೋ ಅದೆಲ್ಲವೂ ಶಂಕರನ ಆಜ್ಞೆಯ ಬಲದ ಮೇಲೆ ನಿಂತಿದೆ. (೩೮-೪೨). ಅವನ ಆಜ್ಞೆಯ ಬಲದಿಂದಲೇ ಧರೆಯು ನಿಂತಿದೆ; ಧರೆಯನ್ನು ಧರಿಸುವ ಪರ್ವತಗಳು, ಮೋಡಗಳು, ಸಮುದ್ರಗಳು, ಜ್ಯೋತಿರ್ಗಣಗಳು (ನಕ್ಷತ್ರಾದಿಗಳು), ಇಂದ್ರ ಮುಂತಾದ ದೇವತೆಗಳು, ಸ್ಥಿರ, ಚರ, ಚಿತ್ ಮತ್ತು ಅಚಿತ್ (ಚೇತನ ಮತ್ತು ಅಚೇತನ) ಎಲ್ಲವೂ ಇವೆ (೪೩).

ಟಿಪ್ಪಣಿ : ಆದಿತ್ಯರು ೧೨ : ಇಂದ್ರ, ಧಾತೃ, ಭಗ, ತ್ವಷ್ಟೃ, ಮಿತ್ರ, ವರುಣ, ಅರ್ಯಮನ್, ವಿವಸ್ವಾನ್, ಸವಿತೃ, ಪೂಷನ್, ಅಂಶುಮಾನ್ ಮತ್ತು ವಿಷ್ಣು. ವಸುಗಳು ೮ : ಮಹಾಭಾರತದ ಪ್ರಕಾರ-ಧರ, ಧ್ರುವ, ಸೋಮ, ವಿಷ್ಣು, ಅನಿಲ, ಅನಲ, ಪ್ರತ್ಯೂಷ, ಮತ್ತು ಪ್ರಭಾಸ; ಭಾಗವತದ ಪ್ರಕಾರ-ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸ್ತು ಮತ್ತು ವಿಭಾವಸು. ರುದ್ರರು ೧೧- ಅಜ, ಏಕಪಾತ್, ಅಹಿರ್ಬುಧ್ನ್ಯ, ಪಿನಾಕೀ, ಅಪರಾಜಿತ, ತ್ರ್ಯಂಬಕ, ಮಹೇಶ್ವರ, ವೃಷಾಕಪಿ, ಶಂಭು, ಹರಣ ಮತ್ತು ಈಶ್ವರ. ಅಶ್ವಿನೀ ದೇವತೆಗಳು ೨ : ನಾಸತ್ಯ ಮತ್ತು ದಸ್ರ ಎಂಬ ಯುಗಲ ದೇವತೆಗಳು. ಮರುತರು-ಆವಹ, ಪ್ರವಹ ಮುಂತಾದ ಏಳು; ವಾತಸ್ಕಂಧಗಳಲ್ಲಿ ಒಂದೊಂದರಲ್ಲೂ ಏಳರಂತೆ ಮರುತರು ಇರುವರು; ಹೀಗೆ ಅವರ ಒಟ್ಟು ಸಂಖ್ಯೆ ೪೯. ವೇದಗಳು ೪-ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ. ವೇದಾಂಗಗಳು ೬-ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಜ್ಯೋತಿಷ ಮತ್ತು ಛಂದಸ್. ಭುವನಗಳು ೨೨೪ ಕಾಲಾಗ್ನಿಯಿಂದ ಹಿಡಿದು ಅನುಪ್ತರ ಶಿವನವರೆಗೆ; ನೋಡಿರಿ ತಂತ್ರಯಾತ್ರಾ (ಪು. ೨೬-೨೭).

ಶಿವವಶೇ ಬಂಧಮೋಕ್ಷೌ

ಏತಾವತಾಂ ಪಶೂನಾಂ ಹಿ ದ್ವಿಪದಾಂ ಚ ಚತುಷ್ಪದಾಮ್।
ಈಶಃ ಶಿವೋ ಬಂಧಮೋಕ್ಷೌ ತದ್ವಶೇ ತಿಷ್ಠತೋ ಧ್ರುವಮ್ ॥ ೪೪ ॥

ಇಷ್ಟೆಲ್ಲಾ ದ್ವಿಪಾದ ಚತುಷ್ಪಾದ ಪಶುಗಳ ಒಡೆಯನು ಶಿವನು. ಅವುಗಳ ಬಂಧ-ಮೋಕ್ಷಗಳೆರಡೂ ನಿಶ್ಚಿತವಾಗಿ ಅವನ ವಶದಲ್ಲಿವೆ. (೪೪).

ಟಿಪ್ಪಣಿ : ಸೂಕ್ಷ್ಮಾಗ್ರಮ, ೧.೧೮ರಲ್ಲಿ ಪರಮಾತ್ಮನೇ ಪಶುಗಳಿಗೆ ಮೋಕ್ಷವನ್ನು ಕೊಡುವವನು "ಏವಂರೂಪಃ ಪರಾತ್ಮಾ ಹಿ ಪಶುಪಾಶ ವಿಮೋಚಕಃ।" ಬಂಧನಕ್ಕೆ ಒಳಪಡಿಸುವವನೂ ಶಿವನೇ, ಮೋಕ್ಷವನ್ನು ಕೊಡುವವನೂ ಶಿವನೇ "ಮಲಮಾಯಾದಿಭಿಃ ಪಾಶೈರ್ಬಧ್ನಾತಿ ಸ ಪಶೂನ್ ಪತಿಃ। ಸ ಏವ ಮೋಚಕಸ್ತೇಷಾಂ ಭಕ್ತ್ಯಾ ಸಮ್ಯಗುಪಾಸಿತಃ॥" (ಹಿಂದೆ ೧೧ನೇ ಶ್ಲೋಕ; ಪಾರಮೇಶ್ವರಾಗಮ, ೧೨.೬೨)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೀಕ್ಷಯಾ ಶಿವಪ್ರಸಾದಪ್ರಾಪ್ತಿಃ

ಅನಂತಜನ್ಮಮರಣಕಾರಣಾತ್ ಪಾಶಸಂಚಯಾತ್।
ಮುಮುಕ್ಷುರಾಚರೇದ್ದೀಕ್ಷಾಂ ಶಾಂಭವೀಂ ಪಾಶಕೃಂತಿನೀಮ್ ॥ ೪೫ ॥

ನ ವಿನಾ ತತ್ಪ್ರಸಾದೇನ ಪ್ರಾಣಿನಾಂ ಬಂಧವಿಚ್ಯುತಿಃ।
ಲಭ್ಯತೇ ತತ್ಪ್ರಸಾದೋಽಪಿ ನಾನಯಾ ದೀಕ್ಷಯಾ ವಿನಾ॥
ವೇದಾನುಶಾಸನಮಿದಮೇತದ್ ವೈ ಶಿವಶಾಸನಮ್ ॥ ೪೬ ॥

ದೀಕ್ಷೆಯಿಂದ ಶಿವಪ್ರಸಾದದ ಪ್ರಾಪ್ತಿ

ಅನಂತವಾದ ಜನನ-ಮರಣಗಳ ಕಾರಣದಿಂದ ಪಾಶಗಳು ಸಂಚಿತವಾಗುವುದರಿಂದ, ಮೋಕ್ಷಾಪೇಕ್ಷಿಯು ಪಾಶಗಳನ್ನು ಕತ್ತರಿಸುವ ಶಾಂಭವೀ ದೀಕ್ಷೆಯನ್ನು ಪಡೆದುಕೊಳ್ಳಬೇಕು. (೪೫). ಅವನ (ಶಿವನ) ಅನುಗ್ರಹವಿಲ್ಲದೆ ಪ್ರಾಣಿಗಳಿಗೆ ಬಂಧದಿಂದ ಮುಕ್ತಿಯಿಲ್ಲ. ಅವನ ಅನುಗ್ರಹವು ಈ (ಶಾಂಭವೀ) ದೀಕ್ಷೆಯಿಲ್ಲದೆ ದೊರೆಯದು. ಇದು ವೇದದ ಅನುಶಾಸನ, ಇದೇ ಶಿವಶಾಸನ. (೪೬).

ಟಿಪ್ಪಣಿ : ಸೃಷ್ಟಿ (ಜನ್ಮ), ಸ್ಥಿತಿ, ಲಯ (ಧ್ವಂಸ), ತಿರೋಧಾನ (ತಿರೋಭಾವ) ಮತ್ತು ಅನುಗ್ರಹ (ವಿಮುಕ್ತಿ) ಇವು ಭಗವಂತನ (ಶಿವನ) ಪಂಚ ಕೃತ್ಯಗಳು: "ಜಗಜ್ಜನ್ಮ ಸ್ಥಿತಿ-ಧ್ವಂಸ-ತಿರೋಭಾವ-ವಿಮುಕ್ತಯಃ। ಕೃತ್ಯಂ ಸಕಾರಕಫಲಂ ಜ್ಞೇಯಮಸ್ಯೈತದೇವ ಹಿ ॥" (ಮೃಗೇಂದ್ರಾಗಮ, ೨.೩). ಇಲ್ಲಿ ಅನುಗ್ರಹ ಅಥವಾ ವಿಮುಕ್ತಿಗೆ ಪ್ರಸಾದವೆಂದು ಕರೆಯಲಾಗಿದೆ. ಶಿವೈಕ್ಯವೇ ವಿಮುಕ್ತಿ. ಅದು ಶಾಂಭವೀ ದೀಕ್ಷೆಯ ಪ್ರಭಾವದಿಂದ ದೊರೆಯುವ ಶಿವನ ಅನುಗ್ರಹ : "ಗುರುದೀಕ್ಷಾಪರಿಪ್ರಾಪ್ತ-ಶಿವಲಿಂಗಾಂಗಯೋಗತಃ। ದ್ವಿರೇಫಕೀಟನ್ಯಾಯೇನ ಶಿವೈಕ್ಯಂ ಪ್ರಾಪ್ತವಾನ್ ದ್ವಿಜಃ ॥" (ಮಕುಟಾಗಮ, ಕ್ರಿ.ಪಾ, ೩.೭.) ಗುರುವು ಅನುಗ್ರಹಿಸಿದ ದೀಕ್ಷೆಯ ಮೂಲಕ ಪ್ರಾಪ್ತವಾದ ಲಿಂಗ ಮತ್ತು ಅಂಗಗಳ (ಶಿವ-ಜೀವರ) ಯೋಗವು ಹಂತ ಹಂತಕ್ಕೂ ಹದಗೊಂಡು ದುಂಬಿ-ಕೀಟ ನ್ಯಾಯದಂತೆ ಷಟ್‌ಸ್ಥಲಬ್ರಹ್ಮಿದ್ವಿಜನು ಶಿವೈಕ್ಯವನ್ನು ಹೊಂದುತ್ತಾನೆ.

ಶಾಂಭವವ್ರತಸ್ಯ ಭವನಿವಾರಕತ್ವಮ್

ವೇಧಾಮನುಕ್ರಿಯಾಭಿಖ್ಯದೀಕ್ಷಾತ್ರಿತಯ-ಶೋಭಿತಮ್।
ಷಡಧ್ವಶುದ್ಧಿಕಲಿತಂ ಗುರುಕಾರುಣ್ಯಸಂಭೃತಮ್॥
ಭಸ್ಮರುದ್ರಾಕ್ಷಶೀಲಿಂಗಧಾರಣಾತ್ಮಕಮುತ್ತಮಮ್ ॥ ೪೭ ॥

ಶಾಂಭವವ್ರತಮೇತದ್ಧಿ ವೇದಶಾಸ್ತ್ರೈಕಚೋದಿತಮ್।
ಇದಂ ಶಿವಪ್ರಸಾದೈಕಕಾರಣಂ ಭವವಾರಣಮ್ ॥ ೪೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಕೈಕಮಪಿ ಚಾಸ್ಯಾಂಗಂ ಮುಕ್ತಿದಂ ಕೀರ್ತಿತಂ ಶ್ರುತೌ||
ಕಿಮು ವಾಚ್ಯಂ ನು ಸರ್ವಾಂಗಕಲಿತಂ ಮೋಕ್ಷದಂ ತ್ವಿತಿ || ೪೯ ||

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರಬೃಹಸ್ಪತಿಸಂವಾದೇ ಕ್ರಿಯಾಪಾದೇ ಶಿವಾಧಿಕ್ಯಕಥನಂ ನಾಮ ಪ್ರಥಮಃ ಪಟಲಃ || ೧ ||

ಶಾಂಭವ ವ್ರತವು ಭವ (ಸಂಸಾರ)ವನ್ನು ನಿವಾರಿಸುತ್ತದೆ

ವೇಧಾ, ಮನು, ಕ್ರಿಯಾ ಎಂಬ ಹೆಸರಿನ ಮೂರು ದೀಕ್ಷೆಗಳಿಂದ ಶೋಭಿಸುವ, ಷಡಧ್ವ (ಆರು ಅಧ್ವ)ಗಳ ಶುದ್ಧಿಯಿಂದ ಯುಕ್ತವಾದ, ಗುರುವಿನ ಅನುಗ್ರಹದಿಂದ ಓತಪ್ರೋತವಾದ, ಭಸ್ಮ, ರುದ್ರಾಕ್ಷ, ಶ್ರೀ ಲಿಂಗ ಧಾರಣೆಗಳ ಉತ್ತಮ ಸ್ವರೂಪವುಳ್ಳ ಈ ಶಾಂಭವ ವ್ರತವೇ (ವೀರಶೈವ ವ್ರತವೇ) ವೇದ ಮತ್ತು ಶಾಸ್ತ್ರಗಳಲ್ಲಿ ಉಪದೇಶಿಸಲ್ಪಟ್ಟ ಏಕೈಕ ವ್ರತ. ಇದೇ ಶಿವನ ಅನುಗ್ರಹಕ್ಕೆ ಏಕ ಮಾತ್ರ ಕಾರಣ; ಇದೇ ಸಂಸಾರವನ್ನು ನಿವಾರಿಸುವಂತಹದು. (೪೭-೪೮). ಶ್ರುತಿ (ವೇದ ಮತ್ತು ಆಗಮ ಶಾಸ್ತ್ರ)ಯಲ್ಲಿ ಇದರ ಒಂದೊಂದು ಅಂಗವೂ ಮುಕ್ತಿಯನ್ನು ಕೊಡುವಂತಹದು ಎಂದು ಹೇಳಲ್ಪಟ್ಟಿದೆ. ಎಲ್ಲಾ ಅಂಗಗಳ ಅನುಷ್ಠಾನವನ್ನು ಮೋಕ್ಷವನು ಕೊಡುವಂತಹದು ಎಂದು ಮತ್ತೆ ಹೇಳಬೇಕೇನು? (೪೯).

ಇಲ್ಲಿಗೆ ಶ್ರೀಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ ಅನಂತರುದ್ರ ಮತ್ತು ಬೃಹಸ್ಪತಿ ಸಂವಾದದಲ್ಲಿ ಕ್ರಿಯಾಪಾದದಲ್ಲಿ ಶಿವಾಧಿಕ್ಯಕಥನವೆಂಬ ಪ್ರಥಮ ಪಟಲವು ಮುಗಿಯಿತು. (೧).

ಟಿಪ್ಪಣಿ : ಇಲ್ಲಿ ಸಂಕ್ಷಿಪ್ತವಾಗಿ ಶಾಂಭವ ವ್ರತವೆಂದು ಕರೆಯಲಾಗುವ ವೀರಶೈವ ಸಾಧನ ಮಾರ್ಗ ಮತ್ತು ಅದಕ್ಕೆ ಪ್ರವೇಶವಿತ್ತ ವೀರಶೈವ ದೀಕ್ಷೆಗಳ ಬಗ್ಗೆ ಹೇಳಲಾಗಿದೆ. ಈ ಆಗಮದ ಮುಂದಿನ ಪಟಲಗಳಲ್ಲಿ ಅಷ್ಟಾವರಣ, ಪಂಚಾಚಾರಗಳ ಬಗ್ಗೆ ವಿಶದವಾದ ನಿರೂಪಣೆಯು ಬಂದಿದೆ. ವೇಧಾದೀಕ್ಷೆ, ಮನು(ಮಂತ್ರ)ದೀಕ್ಷೆ ಮತ್ತು ಕ್ರಿಯಾದೀಕ್ಷೆ ಎಂಬವು ವೀರಶೈವ ದೀಕ್ಷೆಯ ಮೂರು ಅಂಗಗಳು. ಯಾವ ಕ್ರಿಯೆಯಿಂದ (ಸಂಸ್ಕಾರದಿಂದ) ಶಿಷ್ಯನಿಗೆ ಲಿಂಗ ಸಂಬಂಧವುಂಟಾಗಿ, ಅವನಲ್ಲಿರುವ ಮಲತ್ರಯವು ನಾಶವಾಗುತ್ತದೆಯೋ ಅದೇ ದೀಕ್ಷೆ: "ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಮ್। ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ||" (ಕಾರಣಾಗಮ, ಕ್ರಿ.ಪಾ. ೧.೧೨; ಸೂಕ್ಷ್ಮಾಗ್ರಮ, ಕ್ರಿ.ಪಾ. ೮.೧೧ನ್ನೂ ನೋಡಿರಿ). ಶ್ರೀ ಗುರುವು ಶಿಷ್ಯನನ್ನು ಕೃಪಾ ದೃಷ್ಟಿಯಿಂದ ನೋಡಿ, ಆತನ ಮಸ್ತಕದ ಮೇಲೆ ಹಸ್ತವನ್ನಿಟ್ಟು ಆತನಲ್ಲಿ ಶಿವಕಲೆಯನ್ನು ಜಾಗೃತಗೊಳಿಸಿ, ಅವನ ಕಾರಣ ತನುವಿನಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವ ಲಿಂಗವನ್ನು ನೆಲೆಗೊಳಿಸುವುದು 'ವೇಧಾದೀಕ್ಷೆ'; ಶ್ರೀ ಗುರುವು ಪರಮ ಪವಿತ್ರ ಪಂಚಾಕ್ಷರೀ (ಓಂಕಾರದೊಂದಿಗೆ ಷಡಕ್ಷರೀ) ಮಂತ್ರವನ್ನು ಶಿಷ್ಯನಿಗೆ ಉಪದೇಶಿಸಿ ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿ ಮಾರ್ಪಡಿಸಿ, ಪ್ರಾಣಲಿಂಗವನ್ನು ಸೂಕ್ಷ್ಮದೇಹದಲ್ಲಿ ನೆಲೆಗೊಳಿಸುವ ವಿಧಾನಕ್ಕೆ 'ಮಂತ್ರದೀಕ್ಷೆ' ಎಂದು ಹೆಸರು; ಶಿವದೀಕ್ಷೆಯ ಅಂಗವಾಗಿ ಷಡಧ್ವಶುದ್ಧಿಯಿಂದ ಸಂಸ್ಕರಿಸಿದ ಇಷ್ಟಲಿಂಗವನ್ನು ಹಸ್ತದಲ್ಲಿ (ಸ್ಥೂಲ ಶರೀರದಲ್ಲಿ) ಸ್ಥಾಪಿಸುವುದು 'ಕ್ರಿಯಾದೀಕ್ಷೆ' - "ಹಸ್ತಮಸ್ತಕ ಸಂಯೋಗಾದ್ದೃಷ್ಟೇ-ರ್ವೇಧೇತಿ ಕೀರ್ತ್ಯತೇ। ಗುರುಣೋದೀರಿತಾ ಕರ್ಣೇ ಸಾ ಹಿ ಮಂತ್ರಾತ್ಮಿಕಾ ಭವೇತ್। ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾ ಭವೇತ್॥" (ಕಾರಣಾಗಮ, ಕ್ರಿ.ಪಾ. ೧.೧೩). ದೀಕ್ಷಾ ವಿವರಗಳಿಗೆ ಕಾರಣಾಗಮ, ಕ್ರಿ.ಪಾ, ೧ನೇ ಪಟಲವನ್ನು ನೋಡಿರಿ; ಸಿದ್ಧಾಂತ ಶಿಖಾಮಣಿ ೬.೧೧-೨೧ನ್ನು ನೋಡಿರಿ. ಷಡಧ್ವಶುದ್ಧಿಯ ವಿಷಯ ಹೀಗಿದೆ- ಸೃಷ್ಟಿಯ ಸಮಯದಲ್ಲಿ ಶಬ್ದದ ವರ್ಣ, ಪದ ಮತ್ತು ಮಂತ್ರ ರೂಪದಲ್ಲಿ ಮತ್ತು ಅರ್ಥದ ಕಲಾ, ತತ್ತ್ವ ಮತ್ತು ಭುವನ ರೂಪದಲ್ಲಿ ವಿಸ್ತಾರ ಉಂಟಾಗುತ್ತದೆ. ಈ ವಿಸ್ತಾರವೇ ಷಡಧ್ವಸ್ವರೂಪದ ಸಂಸಾರದ ಹೆಸರಿನಲ್ಲಿ ವ್ಯವಹರಿಸಲ್ಪಡುತ್ತದೆ. ದೀಕ್ಷಾ ಸಮಯದಲ್ಲಿ ಶ್ರೀಗುರುವು ಶಿಷ್ಯನ ಶರೀರದಲ್ಲಿ ಇರುವ ಆರು ವಿಧ ಅಧ್ವಗಳ ಶುದ್ಧಿಯನ್ನು ಮಾಡುತ್ತಾನೆ. ಈ ಪ್ರಕ್ರಿಯೆಯ ಬಗ್ಗೆ 'ತಂತ್ರಾಲೋಕ' ೬-೧೨ ಆಹ್ನಿಕಗಳನ್ನು ನೋಡಿರಿ.

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವಿತೀಯಃ ಪಟಲಃ

॥ ಗುರುಸ್ವರೂಪನಿರೂಪಣಮ್॥

ಬೃಹಸ್ಪತಿರುವಾಚ

ಸರ್ವಜ್ಞಾನಸುಧಾಂಬೋಧೇ ಕರುಣೈಕವಿಭೂಷಣ।
ಶಾಂಭವೀಯವ್ರತಾಂಗಾನಾಂ ಮಾಹಾತ್ಮ್ಯಂ ವಿನಿಬೋಧಯ ॥ ೧ ॥

ಬೃಹಸ್ಪತಿಯು ಹೇಳಿದನು

ಎಲ್ಲಾ ಪ್ರಕಾರದ ಜ್ಞಾನಾಮೃತದ ಸಮುದ್ರವೇ, ಕರುಣೆಯೇ ಭೂಷಣವಾಗಿ ಉಳ್ಳವನೇ, ಶಾಂಭವವ್ರತದ ಅಂಗಗಳ ಮಹತ್ತ್ವವನ್ನು ತಿಳಿಯಪಡಿಸು. (೧).

ಅನಂತರುದ್ರ ಉವಾಚ

ಅಷ್ಟಾವರಣನಾಮಾನಿ

ಗುರುರ್ಲಿಂಗಂ ಜಂಗಮಶ್ಚ ತೀರ್ಥಂ ಚೈವ ಪ್ರಸಾದಕಃ।
ಭಸ್ಮರುದ್ರಾಕ್ಷಮಂತ್ರಾಶ್ಚೇತ್ಯಷ್ಟಾವರಣಸಂಜ್ಞಿತಾಃ ॥ ೨ ॥

ಇಮಾನಿ ಶಿವಭಕ್ತಾನಾಂ ಭವದೋಷತತೇಃ ಸದಾ।
ನಿವಾರಣೈಕಕಾರ್ಯಾಣಿ ಖ್ಯಾತಾನ್ಯಾವರಣಾಖ್ಯಯಾ ॥ ೩ ॥

ಅಷ್ಟಾನಾ ಮಾದಿತಸ್ತ್ವೇಷಾಂ ಸ್ವರೂಪಂ ಮಹಿಮಾऽಪಿ ಚ ।
ಸಂಗ್ರಹೇಣ ಪ್ರವಕ್ಷ್ಯಾಮಿ ಶೃಣುಷ್ವೈಕಾಗ್ರಚೇತಸಾ ॥ ೪ ॥

ಅನಂತರುದ್ರನು ಹೇಳಿದನು

ಅಷ್ಟಾವರಣಗಳ ಹೆಸರುಗಳು

ಗುರು, ಲಿಂಗ, ಜಂಗಮ, ತೀರ್ಥ (ಪಾದೋದಕ), ಪ್ರಸಾದ, ಭಸ್ಮ ರುದ್ರಾಕ್ಷ ಮತ್ತು ಮಂತ್ರ, ಇವುಗಳು ಅಷ್ಟಾವರಣವೆಂಬ ಹೆಸರನ್ನು ಹೊಂದಿವೆ. (೨). ಇವು (ಎಂಟು) ಶಿವಭಕ್ತರ ಸಂಸಾರವೆಂಬ ದೋಷ ಸಮೂಹವನ್ನು ಪರಿಹರಿಸುವಂಥವುಗಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆದ್ದರಿಂದ ಆವರಣವೆಂಬ ಹೆಸರಿನಿಂದ ಪ್ರಸಿದ್ಧವಾಗಿವೆ. (೩). ಈ ಎಂಟರ ಸ್ವರೂಪ ಮತ್ತು ಮಹಿಮೆಗಳನ್ನು ಆರಂಭದಿಂದ ಸಂಕ್ಷಿಪ್ತವಾಗಿ ಹೇಳುವೆನು ಏಕಾಗ್ರಚಿತ್ತದಿಂದ ಕೇಳು. (೪).

ಟಿಪ್ಪಣಿ: 'ಆವರಣ'ವೆಂದರೆ ಯಾವುದರಿಂದ ದೇಹ ಮುಂತಾದವು ಆಚ್ಛಾದಿಸಲ್ಪಡುತ್ತವೆಯೋ ಅದು "ಆವ್ರಿಯತೇ ದೇಹಾದಿಕಂ ಯೇನ ತದ್ ಆವರಣಮ್." ಯಾವುದು ಭಕ್ತನನ್ನು ಎಲ್ಲಾ ರೀತಿಯಿಂದ ರಕ್ಷಿಸುತ್ತದೆಯೋ ಅದು ಆವರಣ. ಗುರು, ಲಿಂಗ, ಜಂಗಮ ಮುಂತಾದವು ಭಕ್ತನ ಶ್ರದ್ಧೆಯನ್ನು ರಕ್ಷಿಸುವ ಸಾಧನಗಳು. ಹಾಗೆಂದೇ ಅವುಗಳಿಗೆ ಆವರಣಗಳೆಂದು ಸಾರ್ಥಕ ಹೆಸರು.ಇವುಗಳಲ್ಲಿ ಮೊದಲ ಮೂರು ಪೂಜ್ಯ ಆವರಣಗಳು; ಮಧ್ಯದ ಎರಡು (ತೀರ್ಥ ಮತ್ತು ಪ್ರಸಾದ) ಪೂಜಾಫಲರೂಪದ ಆವರಣಗಳು; ಕಡೆಯ ಮೂರು (ಭಸ್ಮ, ರುದ್ರಾಕ್ಷ ಮತ್ತು ಮಂತ್ರ) ಪೂಜಾಸಾಧನಭೂತ ಆವರಣಗಳು. ಇವುಗಳಲ್ಲಿ ಮೊದಲನೆಯದಾದ ಗುರುವಿನ ಸ್ವರೂಪ ಮತ್ತು ಮಹಿಮೆಗಳನ್ನು ಪ್ರಸ್ತುತ ಪಟಲದಲ್ಲಿ ನಿರೂಪಿಸಲಾಗಿದೆ.

೧. ಗುರುಸ್ವರೂಪಂ ಮಹಿಮಾ ಚ

ಮೋಕ್ಷಸ್ಯ ದೀಕ್ಷಾಸಂಪ್ರಾಪ್ತ್ಯೈ ಗುರುಃ ಸ್ಯಾನ್ಮೂಲಕಾರಣಮ್।
ನ ವಿನಾ ಗುರುಣಾ ಸಿದ್ಧ್ಯೈ ಸಾಧನಾನಿ ಭವಂತ್ಯಲಮ್ ॥ ೫ ॥

ಶಿಷ್ಯಸ್ತು ಶಿಕ್ಷಣೀಯತ್ವಾಮ್ ಗುರುರ್ಗೌರವಕಾರಣಮ್।
ತಸ್ಮಾತ್ಸರ್ವಪ್ರಯತ್ನೇನ ಗುರೋರ್ಗೌರವಮಾಚರೇತ್ ॥ ೬ ॥

ಯೋ ಗುರುಃ ಸ ಶಿವಃ ಪ್ರೋಕ್ತೋ ಯಃ ಶಿವಃ ಸ ಗುರುಃ ಸ್ಮೃತಃ।
ಗುರುರ್ವಾ ಶಿವ ಏವಾಥ ವಿದ್ಯಾಕಾರೇಣ ಸಂಸ್ಥಿತಃ ॥ ೭ ॥

ಯಥಾ ಶಿವಸ್ತಥಾ ವಿದ್ಯಾ ಯಥಾ ವಿದ್ಯಾ ತಥಾ ಗುರುಃ।
ಶಿವವಿದ್ಯಾಗುರೂಣಾಂ ಚ ಪೂಜಯಾ ಸದೃಶಂ ಫಲಮ್ ॥ ೮ ॥

ಗುರುವಿನ ಸ್ವರೂಪ ಮತ್ತು ಮಹಿಮೆ

ಮೋಕ್ಷಕ್ಕೆ ಮತ್ತು ದೀಕ್ಷೆಯನ್ನು ಪಡೆಯಲು ಗುರುವೇ ಮೂಲ ಕಾರಣನು. ಗುರುವಿಲ್ಲದೆ ಯಾವ ಸಾಧನಗಳೂ ಸಿದ್ಧಿಗೆ ಪರ್ಯಾಪ್ತವಾಗಲಾರವು. (೫). ಶಿಷ್ಯನೆಂದರೆ ಶಿಕ್ಷಣಕ್ಕೆ ಒಳಗಾಗ ಬೇಕಾದವನು, ಗುರುವು ಗೌರವಕ್ಕೆ ಕಾರಣ. ಆದ್ದರಿಂದ ಎಲ್ಲಾ ಪ್ರಯತ್ನಗಳಿಂದ ಗುರುವಿಗೆ ಗೌರವವನ್ನು ತೋರಿಸಬೇಕು. (೬). ಯಾರು ಗುರುವೋ ಅವನೇ ಶಿವನು ಮತ್ತು ಯಾರು ಶಿವನೋ ಅವನೇ ಗುರುವೆಂದು ಸ್ಮರಿಸಲ್ಪಡುವನು. ಗುರುವಾಗಲಿ, ಶಿವನಾಗಲಿ, ಇಬ್ಬರೂ ವಿದ್ಯೆಯ (ಜ್ಞಾನದ) ಸ್ವರೂಪದಿಂದ ಪ್ರತಿಷ್ಠಿತರು. (೭). ಶಿವನಿದ್ದ ಹಾಗೆ ವಿದ್ಯೆ, ವಿದ್ಯೆಯಿದ್ದ ಹಾಗೆ ಗುರುವು; ಶಿವ, ವಿದ್ಯೆ ಮತ್ತು ಗುರುಗಳ ಪೂಜೆಯಿಂದ ಸಮಾನವಾದ ಫಲ ದೊರೆಯುತ್ತದೆ. (೮).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಮೋಕ್ಷಕ್ಕೆ ದಾರಿ ತೋರುವವನು ಶ್ರೀಗುರುವು. ಮೋಕ್ಷಕ್ಕೆ ದಾರಿಯೆಂದರೆ ಷಟ್‌ಸ್ಥಲ ಮಾರ್ಗ. ಆ ಮಾರ್ಗಕ್ಕೆ ಪ್ರವೇಶ ದೊರೆಯಬೇಕಾದರೆ ದೀಕ್ಷೆಯು ಅತ್ಯಂತ ಆವಶ್ಯಕ. ಅಂತಹ ದೀಕ್ಷೆಯನ್ನು ಅನುಗ್ರಹಿಸುವವನು ಶ್ರೀ ಗುರುವು. ಇಲ್ಲಿ ಸಾಧನಗಳೆಂದರೆ ಅಷ್ಟಾವರಣಗಳು ಮತ್ತು ಪಂಚಾಚಾರಗಳು. ಇವುಗಳ ಸಿದ್ಧಿಗೂ ಕೂಡ ಶ್ರೀ ಗುರುವಿನ ಅನುಗ್ರಹ ಬೇಕೇ ಬೇಕು. ಗುರುವಿಗೂ ಶಿವನಿಗೂ ಭೇದವಿಲ್ಲ. ಏಕೆಂದರೆ ಇಬ್ಬರೂ ವಿದ್ಯಾಸ್ವರೂಪರು. ಶಿವ, ವಿದ್ಯೆ ಮತ್ತು ಗುರು-ಇವರಲ್ಲಿ ಸ್ವರೂಪ ಭೇದವೂ ಇಲ್ಲ, ಮಹಿಮಾಭೇದವೂ ಇಲ್ಲ ಮತ್ತು ಪೂಜೆಯಿಂದ ಫಲಭೇದವೂ ಇಲ್ಲ. "ಯೋ ಗುರುಃ ಸ ಶಿವಃ ಪ್ರೋಕ್ತೋ ಯಃ ಶಿವಃ ಸ ಗುರುಃ ಸ್ಮೃತಃ" ಈ ಉಕ್ತಿಯನ್ನು ಚನ್ನಬಸವಣ್ಣನವರು ತಮ್ಮ 'ಗುರುದೇವೋ ಮಹಾದೇವೋ ಎಂಬುದಾಗಿ' ಎಂದು ಪ್ರಾರಂಭವಾಗುವ ವಚನದಲ್ಲಿ ಉಲ್ಲೇಖಿಸಿದ್ದಾರೆ. ನೋಡಿರಿ ಚನ್ನಬಸವಣ್ಣನವರ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ವ.ಸಂ. ೬೬೪.

ಗುರ್ವಾಜ್ಞಾಪಾಲನೇನ ಸತ್ಫಲಪ್ರಾಪ್ತಿಃ

ಸರ್ವದೇವಾತ್ಮಕಶ್ಚಾಸೌ ಸರ್ವಮಂತ್ರಮಯೋ ಗುರುಃ।
ತಸ್ಮಾತ್ ಸರ್ವಪ್ರಯತ್ನೇನ ತಸ್ಯಾಜ್ಞಾಂ ಶಿರಸಾ ವಹೇತ್ ॥ ೯ ॥

ಶ್ರೇಯೋರ್ಥೀ ಯದಿ ಗುರ್ವಾಜ್ಞಾಂ ನ ಲಂಘಯೇತ್।
ಗುರ್ವಾಜ್ಞಾಪಾಲಕೋ ಯಸ್ಮಾದ್ ಜ್ಞಾನಸಂಪತ್ತಿಮಶ್ನುತೇ ॥ ೧೦ ॥

ಗಚ್ಛಂಸ್ತಿಷ್ಠನ್ ಸ್ವಪನ್ ಭುಂಜನ್ ಯದ್ಯತ್ಕರ್ಮ ಸಮಾಚರೇತ್।
ಸಮಕ್ಷಂ ಯದಿ ಕುರ್ವೀತ ತತ್ಸರ್ವಂ ಗುರ್ವನುಜ್ಞಯಾ ॥ ೧೧ ॥

ಗುರೋರ್ಗೇಹೇ ಸಮಕ್ಷೇ ವಾ ನ ಯಥೇಷ್ಟಾಸನೋ ಭವೇತ್।
ಗುರುರ್ದೇವೋ ಯತಃ ಸಾಕ್ಷಾತ್ ತದ್ಗೃಹಂ ದೇವಮಂದಿರಮ್ ॥ ೧೨ ॥

ಪಾಪಿನಾಂ ಚ ಯಥಾ ಸಂಗಾತ್ ತತ್ಪಾಪಫಲಭಾಗ್ ಭವೇತ್।
ತದ್ವದಾಚಾರ್ಯಸಂಗೇನ ತದ್ಧರ್ಮ ಫಲಭಾಗ್ ಭವೇತ್ ॥ ೧೩ ॥

ಯಥೇಹ ವಹ್ನಿಸಂಪರ್ಕಾನ್ಮಲಂ ತ್ಯಜತಿ ಕಾಂಚನಮ್।
ತಥೈವ ಗುರುಸಂಪರ್ಕಾತ್ ಪಾಪಂ ತ್ಯಜತಿ ಮಾನವಃ ॥ ೧೪ ॥

ಯಥಾ ಪ್ರಜ್ವಲಿತೋ ವಹ್ನಿರ್ನಿಷ್ಕಾಂ ಕಾಷ್ಠಸ್ಯ ನಿರ್ದಹೇತ್।
ತಥಾಯಮಪಿ ಸಂತುಷ್ಟೋ ಗುರುಃ ಪಾಪಂ ಕ್ಷಣಾದ್ದಹೇತ್ ॥ ೧೫ ॥

ಗುರುವಿನ ಆಜ್ಞೆಯನ್ನು ಪಾಲಿಸುವುದರಿಂದ ಸತ್ಫಲ

ಈ ಗುರುವು ಎಲ್ಲಾ ದೇವತೆಗಳ ಸ್ವರೂಪನು ಮತ್ತು ಮಂತ್ರಗಳ ಸ್ವರೂಪನು. ಆದ್ದರಿಂದ ಎಲ್ಲಾ ಪ್ರಯತ್ನಗಳಿಂದ ಅವನ ಆಜ್ಞೆಯನ್ನು ಶಿರಸಾವಹಿಸಿ ನಡೆಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(೯). ಶ್ರೇಯಸ್ಸನ್ನು ಬಯಸುವವನಾದರೆ ಗುರುವಿನ ಆಜ್ಞೆಯನ್ನು ಮನಸ್ಸಿನಿಂದ ಕೂಡ ಉಲ್ಲಂಘಿಸ ಕೂಡದು, ಏಕೆಂದರೆ ಗುರುವಿನ ಆಜ್ಞೆಯನ್ನು ಪಾಲಿಸುವವನು ಜ್ಞಾನದ ಸಂಪತ್ತನ್ನು ಪಡೆಯುತ್ತಾನೆ. (೧೦). ನಡೆಯುವಾಗ, ಮಲಗಿದಾಗ, ಊಟ ಮಾಡುವಾಗ ಯಾವುದೇ ಕರ್ಮವನ್ನು ಮಾಡುವಾಗಲೂ ಗುರುವಿನ ಎದುರಿಗೆ ಮಾಡುವುದಾದರೆ ಅದೆಲ್ಲವನ್ನೂ ಗುರುವಿನ ಒಪ್ಪಿಗೆಯನ್ನು ಪಡೆದು ಮಾಡಬೇಕು. (೧೧). ಗುರುವಿನ ಮನೆಯಲ್ಲಿ ಎದುರಿಗೆ ಬೇಕಾದ ಆಸನದ ಮೇಲೆ ಕುಳಿತುಕೊಳ್ಳಬಾರದು, ಏಕೆಂದರೆ ಗುರುವು ಸಾಕ್ಷಾತ್ ದೇವನು ಮತ್ತು ಆ ಮನೆಯು ದೇವ ಮಂದಿರ. (೧೨). ಪಾಪಿಗಳ ಸಂಪರ್ಕದಿಂದ ಹೇಗೆ ಅವರ ಪಾಪದ ಫಲದಲ್ಲಿ ಭಾಗಿಯಾಗಬೇಕಾಗುತ್ತದೋ ಹಾಗೆಯೇ ಶ್ರೀಗುರುವಿನ ಸಂಪರ್ಕದಿಂದ ಅವನ ಧರ್ಮದ ಫಲವನ್ನು ಪಡೆದವನಾಗುತ್ತಾನೆ. (೧೩). ಹೇಗೆ ಬೆಂಕಿಯ ಸಂಪರ್ಕದಿಂದ ಚಿನ್ನವು ತನ್ನ ಕೊಳೆಯನ್ನು ಬಿಡುವುದೋ ಹಾಗೆಯೇ ಶ್ರೀ ಗುರುವಿನ ಸಂಪರ್ಕದಿಂದ ಮನುಷ್ಯನು ಪಾಪವನ್ನು ತೊಡೆದುಕೊಳ್ಳುತ್ತಾನೆ. (೧೪). ಹೇಗೆ ಉರಿಯುತ್ತಿರುವ ಬೆಂಕಿಯು ಕಟ್ಟಿಗೆಯ ಕಠಿಣತೆಯನ್ನು ಸುಡುತ್ತದೋ ಹಾಗೆ ಶ್ರೀ ಗುರುವು ಸಂತುಷ್ಟನಾದಾಗ ಕ್ಷಣದಲ್ಲಿ ಪಾಪವನ್ನು ದಹಿಸುತ್ತಾನೆ. (೧೫).

ಗುರೋಃ ಕ್ರೋಧೇನ ಸರ್ವನಾಶಃ

ಮನಸಾ ಕರ್ಮಣಾ ವಾಚಾ ಗುರೋಃ ಕ್ರೋಧಂ ನ ಕಾರಯೇತ್।
ತಸ್ಯ ಕ್ರೋಧೇನ ದಹ್ಯಂತೇ ಹ್ಯಾಯುಃ ಶ್ರೀಜ್ಞಾನಸತ್ಕ್ರಿಯಾಃ ॥ ೧೬ ॥

ತತ್ಕ್ರೋಧಕಾರಿಣೋ ಯೇ ಸ್ಯುಸ್ತೇಷಾಂ ಯಜ್ಞಾಶ್ಚ ನಿಷ್ಫಲಾಃ।
ಯಮಾಶ್ಚ ನಿಯಮಾಶ್ಚೈವ ನಾತ್ರ ಕಾರ್ಯಾ ವಿಚಾರಣಾ ॥ ೧೭ ॥

ಗುರೋರ್ವಿರುದ್ಧಂ ಯದ್ವಾಕ್ಯಂ ನ ವದೇಜ್ಜಾತುಚಿನ್ನರಃ।
ವದೇದ್ ಯದಿ ಮಹಾಘೋರೇ ರೌರವೇ ಪತತಿ ಧ್ರುವಮ್ ॥ ೧೮ ॥

ನೈರ್ಗುಣ್ಯೇ ಖ್ಯಾಪಿತೇ ತಸ್ಯ ನೈರ್ಗುಣ್ಯಶತಭಾಗ್ಭವೇತ್।
ಗುಣೇ ತು ಖ್ಯಾಪಿತೇ ತದ್ವತ್ ಸರ್ವಂ ಪುಣ್ಯಫಲಂ ಭವೇತ್ ॥ ೧೯ ॥

ಗುರೋರ್ಹಿತಂ ಪ್ರಿಯಂ ಕುರ್ಯಾದಾದಿಷ್ಟೋ ವಾ ನರಃ ಸದಾ।
ಅಸಮಕ್ಷಂ ಸಮಕ್ಷಂ ವಾ ತಸ್ಯ ಕಾರ್ಯಂ ಸಮಾಚರೇತ್ ॥ ೨೦ ॥

ಗುರುವಿನ ಕ್ರೋಧದಿಂದ ಸರ್ವನಾಶ

ಮನಸ್ಸಿನಿಂದ, ಕೃತಿಯಿಂದ ಮತ್ತು ಮಾತಿನಿಂದ ಗುರುವಿಗೆ ಕೋಪವುಂಟಾಗುವಂತೆ ಮಾಡಬಾರದು. ಅವನ ಕ್ರೋಧದಿಂದ ಆಯುಷ್ಯ, ಸಂಪತ್ತು ಮತ್ತು ಪುಣ್ಯಗಳು ದಹಿಸಿಹೋಗುತ್ತವೆ. (೧೬). ಯಾರು ಅವನಿಗೆ ಕೋಪವನ್ನುಂಟುಮಾಡುವರೋ ಅವರ ಯಜ್ಞಗಳು, ಯಮ-ನಿಯಮಗಳು ನಿಷ್ಫಲವಾಗುವುವು. ಈ ಬಗ್ಗೆ ವಿಚಾರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡುವುದೇ ಬೇಡ. (೧೭). ಗುರುವಿನ ವಿರುದ್ಧ ಯಾವ ಮನುಷ್ಯನೂ ಎಂದೂ ಯಾವ ಮಾತನ್ನೂ ಆಡಬಾರದು. ಅದನ್ನು ಆಡಿದ್ದಾದರೆ ಅಂಥವನು ಅತ್ಯಂತ ಘೋರವಾದ ರೌರವ ನರಕದಲ್ಲಿ ಬೀಳುತ್ತಾನೆ. (೧೮). ಅವನ ದೋಷವನ್ನು ಪ್ರಚಾರ ಮಾಡಿದ್ದಾದರೆ ಅಂಥವನು ನೂರು ದೋಷಗಳಲ್ಲಿ ಭಾಗಿಯಾಗುವನು. ಅವನ ಗುಣವನ್ನು ಪ್ರಚಾರ ಮಾಡಿದ್ದಾದರೆ ಅಂಥವನಿಗೆ ಎಲ್ಲಾ ಪುಣ್ಯಗಳ ಫಲವು ದೊರೆಯುವುದು. (೧೯). ಗುರುವಿಗೆ ಹಿತವಾದುದನ್ನು ಪ್ರಿಯವಾದುದನ್ನು ಮಾಡಬೇಕು; ಅವನ ಆಜ್ಞೆಯನ್ನು ಪಡೆದ ವ್ಯಕ್ತಿಯು ಸರ್ವದಾ ಅವನ ಎದುರಿಗೆ ಅಥವಾ ಪರೋಕ್ಷವಾಗಿ ಅವನ ಕಾರ್ಯವನ್ನು ಮಾಡಬೇಕು. (೨೦).

ಟಿಪ್ಪಣಿ : ಯಮಾಃ = ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬವು ಐದು ಯಮಗಳು (ಪಾತಂಜಲಯೋಗಸೂತ್ರ ೨.೩೦). ನಿಯಮಾಃ = ಶೌಚ, ಸಂತೋಷ, ತಪಸ್, ಸ್ವಾಧ್ಯಾಯ, ಈಶ್ವರ ಪ್ರಣಿಧಾನವೆಂಬ ಐದು ನಿಯಮಗಳು (ಪಾತಂಜಲಯೋಗಸೂತ್ರ, ೨.೩೨).

ಗುರೋರಾಗಮನೇ ಶಿಷ್ಯಸ್ಯಾಚರಣಮ್

ಗುರುಂ ಸ್ವಗೃಹಮಾಯಾಂತಂ ದೃಷ್ಟ್ವಾ ಭಕ್ತಿಯುತೋ ಜನಃ।
ನತ್ವಾ ತದಾಸನಂ ದತ್ವಾ ಚಾಸೀತ ತದನುಜ್ಞಯಾ ॥ ೨೧ ॥

ಸ್ವಾಚಾರ್ಯಚರಣದ್ವಂದ್ವಪ್ರಕ್ಷಾಲಿತಜಲಂ ಸದಾ।
ಯಃ ಪಿಬೇದ್ಧಾರಯೇದ್ಭಕ್ತ್ಯಾ ಸರ್ವಪಾಪೈಃ ಪ್ರಮುಚ್ಯತೇ ॥ ೨೨ ॥

ಚಂದನಂ ಚಾಕ್ಷತಂ ಪುಷ್ಪಂ ಸ್ವರ್ಣಂ ತಾಂಬೂಲಮಂಬರಮ್।
ಪಾತ್ರೇ ನಿಧಾಯ ಗುರವೇ ಶಿಷ್ಯೋ ದದ್ಯಾನ್ನ ಪಾಣಿನಾ ॥ ೨೩ ॥

ಸಂಭೋಜಯಿತ್ವಾ ಸ್ವಗುರುಂ ಪಶ್ಚಾದ್ ಭುಂಜೀತ ಬುದ್ಧಿಮಾನ್।
ಗುರೋಃ ಪುರಸ್ತಾದ್ಯೋ ಭುಂಕ್ತೇ ಗುರುದ್ರೋಹೀ ಸ ಉಚ್ಯತೇ ॥ ೨೪ ॥

ತಾಂಬೂಲಮುತ್ತಮಂ ತಸ್ಮೈ ತತಃ ಪಾತ್ರೇಣ ದಾಪಯೇತ್।
ಪಶ್ಚಾದಿಷ್ಟಾನಿ ವಸ್ತೂನಿ ದತ್ವಾ ನತ್ವಾ ಕ್ಷಮಾಪಯೇತ್ ॥ ೨೫ ॥

ಶುಭಕಾರ್ಯೇಷು ಸರ್ವೇಷು ವಿವಾಹಾದಿಷು ಭಕ್ತಿತಃ।
ಗುರುಮಭ್ಯರ್ಚಯೇಚ್ಛಿಷ್ಯೋ ವಸ್ತ್ರೈರ್ಹೈಮಾಂಗುಲೀಯಕೈಃ ॥ ೨೬ ॥

ದರಿದ್ರಶ್ಚೋದಿತೇಷ್ವೇಷು ನಿಜಶಕ್ತಿಮವಂಚಯನ್।
ಅವಶ್ಯಮರ್ಚಯೇಚ್ಛಿಷ್ಯೋ ಗುರುಂ ಲಬ್ಧಧನೇನ ವಾ ॥ ೨೭ ॥

ಗುರುವು ಆಗಮಿಸಿದಾಗ ಶಿಷ್ಯನ ಆಚರಣೆ

ಭಕ್ತಿವಂತನಾದ ವ್ಯಕ್ತಿಯು ಗುರುವು ತನ್ನ ಮನೆಗೆ ಬಂದದ್ದನ್ನು ಕಂಡು ನಮಸ್ಕರಿಸಿ, ಅವನಿಗೆ ಆಸನವನ್ನು ನೀಡಿ ಆಮೇಲೆ ಅವನ ಅನುಜ್ಞೆಯನ್ನು ಪಡೆದು ತಾನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕುಳಿತುಕೊಳ್ಳಬೇಕು. (೨೧). ತನ್ನ ಗುರುವಿನ ಪಾದಗಳನ್ನು ತೊಳೆದ ನೀರನ್ನು (ಪಾದೋದಕವನ್ನು) ಯಾರು ಯಾವಾಗಲೂ ಸ್ವೀಕರಿಸುತ್ತಾನೋ ಅಥವಾ ಭಕ್ತಿಯಿಂದ ಧರಿಸುತ್ತಾನೋ ಅವನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ. (೨೨). ಶಿಷ್ಯನು ಗುರುವಿಗೆ ಗಂಧ, ಅಕ್ಷತೆ, ಹೂವು, ಚಿನ್ನ, ತಾಂಬೂಲ, ವಸ್ತ್ರಗಳನ್ನು ಪಾತ್ರೆಯಲ್ಲಿ ಇಟ್ಟು ಅರ್ಪಿಸಬೇಕು, ಕೈಯಿಂದ ಅಲ್ಲ. (೨೩). ತನ್ನ ಗುರುವಿಗೆ ಮೊದಲು ಊಟ ಮಾಡಿಸಿ ಅನಂತರ ಬುದ್ಧಿವಂತನಾದ ಶಿಷ್ಯನು ಊಟ ಮಾಡಬೇಕು. ಗುರುವಿಗಿಂತ ಮೊದಲು ಯಾರು ಊಟ ಮಾಡುತ್ತಾನೋ ಅವನು ಗುರದ್ರೋಹಿಯೆಂದು ಕರೆಯಲ್ಪಡುತ್ತಾನೆ. (೨೪). ಅನಂತರ ಉತ್ತಮವಾದ ತಾಂಬೂಲವನ್ನು ಪಾತ್ರೆಯಲ್ಲಿಟ್ಟು ಗುರುವಿಗೆ ಅರ್ಪಿಸಬೇಕು. ಅನಂತರ ಅವನಿಗೆ ಇಷ್ಟವಾದ ವಸ್ತುಗಳನ್ನು ಕೊಟ್ಟು ನಮಸ್ಕರಿಸಿ ಕ್ಷಮೆಯನ್ನು ಕೋರಬೇಕು. (೨೫). ವಿವಾಹವೇ ಮುಂತಾದ ಎಲ್ಲಾ ಕಾರ್ಯಗಳಲ್ಲಿ ಶಿಷ್ಯನು ಭಕ್ತಿಯಿಂದ ಗುರುವನ್ನು ವಸ್ತ್ರ ಮತ್ತು ಚಿನ್ನದ ಉಂಗುರಗಳಿಂದ ಸತ್ಕರಿಸಬೇಕು. (೨೬). ಬಡವನಾದ ಭಕ್ತನು ತನ್ನ ಶಕ್ತಿಯಿದ್ದಷ್ಟು ವಂಚನೆಯಿಲ್ಲದೆ ಗುರುವು ಕೇಳಿದ್ದನ್ನು ಅವಶ್ಯವಾಗಿ ದೊರೆತ ಹಣದಿಂದ ಅರ್ಪಿಸಿ ಸತ್ಕರಿಸಬೇಕು. (೨೭).

ಗುರುಯಾತ್ರಾಫಲಾಧಿಕ್ಯಮ್

ಗುರುಯಾತ್ರಾ ದೇವಯಾತ್ರಾ ತೀರ್ಥಯಾತ್ರೇತಿ ಚ ತ್ರಿಧಾ।
ಆಸಾಂ ತ್ರಿವಿಧಯಾತ್ರಾಣಾಂ ಗುರುಯಾತ್ರಾ ಫಲಾಧಿಕಾ ॥ ೨೮ ॥

ಗುರುಸಂದರ್ಶನಾರ್ಥಾಯ ಭಕ್ತ್ಯಾ ಯಾತ್ರಾಂ ಕರೋತಿ ಯಃ।
ಪುಣ್ಯದೇಹೀ ಸ ವಿಜ್ಞೇಯಃ ಸಮಸ್ತಾಮರವಲ್ಲಭಃ ॥ ೨೯ ॥

ಶಿಷ್ಯೋ ಗುರುಸ್ಥಿತಂ ಗ್ರಾಮಂ ಪ್ರವಿಶನ್ ವಾಹನಾದಿಕಮ್।
ವರ್ಜಯೇದ್ ಗೃಹಸಾಮೀಪ್ಯೇ ತಥಾ ವೈ ಪಾದುಕಾನಿ ಚ ॥ ೩೦ ॥

ಗುರುಯಾತ್ರೆಯ ಫಲ ಎಲ್ಲಕ್ಕಿಂತ ಹೆಚ್ಚು

ಗುರುಯಾತ್ರೆ, ದೇವಯಾತ್ರೆ ಮತ್ತು ತೀರ್ಥಯಾತ್ರೆ ಎಂದು ಯಾತ್ರೆ ಮೂರು ವಿಧ. ಈ ಮೂರು ವಿಧ ಯಾತ್ರೆಗಳಲ್ಲಿ ಗುರುಯಾತ್ರೆಯು ಅಧಿಕ ಫಲವನ್ನು ನೀಡುವುದು. (೨೮). ಗುರುವಿನ ದರ್ಶನಕ್ಕೋಸ್ಕರ ಯಾರು ಭಕ್ತಿಯಿಂದ ಯಾತ್ರೆ ಮಾಡುತ್ತಾನೋ ಅವನು ಪುಣ್ಯ ಶರೀರವುಳ್ಳವನು, ಎಲ್ಲಾ ದೇವತೆಗಳಿಗೆ ಪ್ರಿಯನು ಎಂದು ತಿಳಿಯಬೇಕು. (೨೯). ಶಿಷ್ಯನು ಗುರುವು ನೆಲೆಸಿರುವ ಗ್ರಾಮವನ್ನು ಪ್ರವೇಶ ಮಾಡುವಾಗ ವಾಹನ ಮುಂತಾದವನ್ನು ಬಿಡಬೇಕು ಮತ್ತು ಅವನ ಮನೆಯ ಸಮೀಪದಲ್ಲಿ ಹಾಗೆಯೇ ತನ್ನ ಪಾದರಕ್ಷೆಗಳನ್ನು ಕಳಚಬೇಕು. (೩೦).

ಟಿಪ್ಪಣಿ : "ಗುರುಯಾತ್ರಾ ಸದಾ ಕಾಶೀಯಾತ್ರಾ" (ಪಾರಮೇಶ್ವರಾಗಮ, ೧೪.೯೭)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಸೇವಾವಿಧಾನಮ್

ಗುರುಂ ದಿದೃಕ್ಷುರ್ಯಃ ಶಿಷ್ಯಃ ಸದ್ಭಕ್ತ್ಯಾನುದಿನಂ ಮುದಾ।
ರಿಕ್ತಪಾಣಿರ್ನ ಸಂಪಶ್ಯೇದ್ಯಥಾ ರಾಜಾ ತಥಾ ಗುರುಃ ॥ ೩೧ ॥

ಫಲಂ ಪ್ರಸೂನಂ ತಾಂಬೂಲಮನ್ಯತ್ ಕಿಮಪಿ ವಸ್ತು ಚ।
ತೇಷ್ವೇಕಂ ಗುರವೇ ದತ್ತ್ವಾ ನಮಸ್ಕುರ್ಯಾತ್ ತತೋ ಗುರುಮ್॥ ೩೨ ॥

ಶ್ರೀಮಾನಪಿ ತಪಸ್ವೀ ಚ ಶಾಸ್ತ್ರಜ್ಞಃ ಕುಲಶೀಲವಾನ್।
ಕುರ್ಯಾದ್ದಂಡನಮಸ್ಕಾರಂ ನಿರ್ಲಜ್ಜೋ ಗುರುಸನ್ನಿಧೌ ॥ ೩೩ ॥

ಉಪಚಾರೇಷು ಸರ್ವೇಷು ದ್ವಾವೇವಾತ್ಯಂತಶೋಭನೌ।
ಪ್ರಿಯವಾಣೀ ಪ್ರಣಾಮಶ್ಚ ತೌ ವಿನಾನ್ಯೇ ವೃಥಾ ಸ್ಮೃತಾಃ ॥ ೩೪ ॥

ಗುರುಸೇವೆಯ ವಿಧಾನ

ಯಾವ ಶಿಷ್ಯನು ಸದ್ಭಕ್ತಿಯಿಂದ ಸಂತೋಷದಿಂದ ಪ್ರತಿದಿನವೂ ಗುರುವನ್ನು ನೋಡುವ ಇಚ್ಛೆಯುಳ್ಳವನೋ ಅವನು ಗುರುವನ್ನು ಬರಿ ಕೈಯಲ್ಲಿ ನೋಡಬಾರದು. ಹೇಗೆ ರಾಜನೋ ಹಾಗೆಯೇ ಗುರುವು. (೩೧). ಹಣ್ಣು, ಹೂವು, ತಾಂಬೂಲ ಅಥವಾ ಏನಾದರೂ ಬೇರೆ ವಸ್ತು, ಇವುಗಳಲ್ಲಿ ಯಾವುದಾದರೂ ಒಂದನ್ನು ಗುರುವಿಗೆ ಅರ್ಪಿಸಿ ಅನಂತರ ಗುರುವಿಗೆ ನಮಸ್ಕರಿಸಬೇಕು. (೩೨). ಶ್ರೀಮಂತನಾಗಲಿ, ತಪಸ್ವಿಯಾಗಲಿ, ಶಾಸ್ತ್ರಜ್ಞಾನಿಯಾಗಲಿ, ಕುಲ-ಶೀಲವಂತನಾಗಲಿ, ಅವನು ಗುರುವಿನ ಸನ್ನಿಧಿಯಲ್ಲಿ ಸಂಕೋಚವಿಲ್ಲದೆ ದಂಡವತ್ ನಮಸ್ಕಾರವನ್ನು ಮಾಡಬೇಕು. (೩೩). ಎಲ್ಲಾ ಉಪಚಾರಗಳಲ್ಲಿ ಎರಡು ಅತ್ಯಂತ ಶುಭಕರವಾದವು. ಅವು ಪ್ರಿಯವಾದ ವಾಣಿ ಮತ್ತು ಪ್ರಣಾಮದ ಅರ್ಪಣೆ. ಅವೆರಡಿಲ್ಲದೆ ಉಳಿದೆಲ್ಲವೂ ನಿಷ್ಫಲವೆಂದು ತಿಳಿಯಬೇಕು. (೩೪).

ಟಿಪ್ಪಣಿ : ದಂಡನಮಸ್ಕಾರ = ದಂಡದಂತೆ ನಮಸ್ಕಾರ; ಅಂಗೈಗಳನ್ನು ಜೋಡಿಸಿದ ಕೈಗಳನ್ನು ಪೂರ್ಣವಾಗಿ ಚಾಚಿದಂತೆ ಅಧೋ ಮುಖವಾಗಿ ದಂಡದಂತೆ ನೇರವಾಗಿ ಸರ್ವಾಂಗಗಳೂ (ಹಣೆ, ಎದೆ, ಹೊಟ್ಟೆ ಮುಂತಾದವು) ನೆಲಕ್ಕಂಟಿದಂತೆ ಒರಗಿ ಮಾಡುವ ನಮಸ್ಕಾರ.

ಗುರುಪ್ರದಕ್ಷಿಣಾವಿಧಿಃ

ಅಗ್ರೇ ದೃಷ್ಟ್ವಾ ನಮಸ್ಕೃತ್ಯ ಪ್ರದಕ್ಷಿಣಮನುಸ್ಮರನ್।
ಪ್ರದಕ್ಷಿಣಂ ಚ ಕುರ್ವೀತ ಯಥಾ ಶಕ್ತ್ಯನುಸಾರತಃ ॥ ೩೫ ॥

ಪ್ರದಕ್ಷಿಣಜ್ಞೋ ಯೋ ಧೀಮಾನ್ ನ ತು ದೀರ್ಘಪದಂ ನ್ಯಸೇತ್।
ನ ಗಚ್ಛೇತ್ ತ್ವರಿತೋ ಧೀಮಾನ್ ನ ವದೇದಿತರೈಃ ಸಹ ॥ ೩೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪದೇ ಪದಾಂತರಂ ನ್ಯಸ್ಯ ಕರೌ ಚಲನವರ್ಜಿತೌ।
ಸ್ತುತಿಂ ವಾಚಾ ಹೃದಾ ಧ್ಯಾನಮೇವಂ ಕುರ್ಯಾತ್ ಪ್ರದಕ್ಷಿಣಮ್ ॥ ೩೭ ॥

ಗುರು ಪ್ರದಕ್ಷಿಣೆಯ ವಿಧಿ

ಗುರುವನ್ನು ಎದುರಿಗೆ ಕಂಡು ನಮಸ್ಕರಿಸಿ ಪ್ರದಕ್ಷಿಣೆಯನ್ನು ಸ್ಮರಿಸುತ್ತಾ, ತನ್ನ ಶಕ್ತಿಗೆ ಅನುಗುಣವಾಗಿ ಪ್ರದಕ್ಷಿಣೆ ಮಾಡಬೇಕು. (೩೫). ಪ್ರದಕ್ಷಿಣೆಯ ವಿಧಾನವನ್ನು ತಿಳಿದ ಧೀಮಂತನು ದೀರ್ಘವಾದ ಹೆಜ್ಜೆಗಳನ್ನು ಹಾಕಬಾರದು; ತ್ವರಿತವಾಗಿ ಹೋಗಬಾರದು; ಬೇರೆಯವರೊಂದಿಗೆ ಮಾತನಾಡಬಾರದು; ಹೆಜ್ಜೆಯಾದ ಮೇಲೆ ಹೆಜ್ಜೆಯನ್ನಿಡುತ್ತಾ ಕೈಗಳನ್ನು ಅಲ್ಲಾಡಿಸದಂತೆ ಬಾಯಿಂದ ಸ್ತುತಿಯನ್ನು ಮತ್ತು ಹೃದಯದಲ್ಲಿ ಧ್ಯಾನವನ್ನು ಮಾಡುತ್ತಾ ಪ್ರದಕ್ಷಿಣೆಯನ್ನು ಮಾಡಬೇಕು. (೩೬-೩೭).

ಗುರೋಃ ಪುರತಃ ಶಿಷ್ಯಸ್ಯಾಚರಣಮ್

ಸ್ವಗುರೋಃ ಪುರತಃ ಶಿಷ್ಯೋ ನೇತರಾನ್ ಕೀರ್ತಯೇಜ್ಜನಾನ್ ।
ಅಸಹ್ಯಭಾಷಣಂ ಚೈವ ನ ವದೇದಿತರೇತರಮ್ ॥ ೩೮ ॥

ನಾಽನೃತಂ ನಾಽಪ್ರಿಯಂ ವಾಕ್ಯಂ ನ ಗುಹ್ಯಂ ಚಾಪಿ ಭಾಷಯೇತ್।
ನಾಽಪ್ರಚ್ಛನ್ನಮುಖೋ ಬ್ರೂಯಾದ್ ಗುರೋರಗ್ರೇ ಕದಾಚನ ॥ ೩೯ ॥

ಸ್ವಾಮಿ-ಭಟ್ಟಾರಕಾಚಾರ್ಯ-ದೇವ-ಶ್ರೀಗುರುನಾಮಭಿಃ।
ವಾಚ್ಯಃ ಸದಾ ಗುರು ಶಿಷ್ಯೈರ್ಜಾತುಚಿನ್ನಾನ್ಯನಾಮಭಿಃ ॥ ೪೦ ॥

ತ್ವಂಶಬ್ದಂ ನ ಪ್ರಯುಂಜೀತ ಗುರೌ ಶಿಷ್ಯಃ ಕದಾಚನ।
ಆಜ್ಞಾಂ ನ ಲಂಘಯೇತ್ತಸ್ಯ ಸಮಂ ನೋಪವಿಶೇತ್ತಥಾ ॥ ೪೧ ॥

ಆಸನಂ ವಾಹನಂ ವಸ್ತ್ರಂ ಭೂಷಣಂ ಶಯನಂ ತಥಾ।
ನ ಕುರ್ಯಾದ್ ಗುರುಸಾದೃಶ್ಯಂ ಗತಿಸಿದ್ಧಿಹಿತೇಪ್ಸುಭಿಃ ॥ ೪೨ ॥

ಪಾತ್ರಂ ಸ್ನಾನಜಲಂ ಛಾಯಾಂ ಮಾಲ್ಯೋಪಕರಣಾನಿ ಚ ।
ಭಕ್ತಿಹೀನೋಽಪಿ ಪಾದಾಭ್ಯಾಂ ಸ್ಪೃಶೇನ್ನೈವ ಲಂಘಯೇತ್ ॥ ೪೩ ॥

ಗುರುವಿನ ಸನ್ನಿಧಿಯಲ್ಲಿ ಶಿಷ್ಯನ ವರ್ತನೆ

ತನ್ನ ಗುರುವಿನ ಮುಂದೆ ಶಿಷ್ಯನು ಇತರರನ್ನು ಪ್ರಶಂಸಿಸಿ ಮಾತನಾಡಬಾರದು. ಪರಸ್ಪರವಾಗಿ ಇತರರೊಂದಿಗೆ ಅಸಹ್ಯ, ಉತ್ತೇಜಕ ಮಾತುಗಳನ್ನಾಡಬಾರದು. (೩೮). ಸುಳ್ಳನ್ನಾಗಲಿ, ಅಪ್ರಿಯವಾದುದನ್ನಾಗಲಿ, ಗೋಪ್ಯವನ್ನಾಗಲಿ ಮಾತನಾಡಬಾರದು. ಗುರುವಿನ ಎದುರಿಗೆ ಯಾವಾಗಲೂ ಬಾಯನ್ನು (ಕೈಯಿಂದ) ಮರೆ ಮಾಡಿಕೊಳ್ಳದೆ ಮಾತನಾಡಬಾರದು. (೩೯). ಶಿಷ್ಯರು ಗುರುವನ್ನು ಯಾವಾಗಲೂ ಸ್ವಾಮಿ, ಭಟ್ಟಾರಕ, ಆಚಾರ್ಯ, ದೇವ, ಶ್ರೀಗುರು ಎಂಬ ಹೆಸರುಗಳಿಂದ ಕರೆಯಬೇಕು, ಬೇರೆ ಯಾವುದೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೆಸರಿನಿಂದಲ್ಲ. (೪೦). ಶಿಷ್ಯನು ಗುರುವನ್ನು ಕುರಿತು ಎಂದಿಗೂ ನೀನು ಎಂಬ ಶಬ್ದವನ್ನು ಪ್ರಯೋಗಿಸಬಾರದು. ಅವನ ಆಜ್ಞೆಯನ್ನು ಉಲ್ಲಂಘಿಸಬಾರದು, ಅವನೊಂದಿಗೆ ಸಮಾನವಾಗಿ ಕುಳಿತುಕೊಳ್ಳಬಾರದು. (೪೧). ಸದ್ಗತಿ, ಸಿದ್ಧಿ, ಹಿತಗಳನ್ನು ಬಯಸುವವರು ಗುರುವಿನದಕ್ಕೆ ಸದೃಶವಾದ ಆಸನವನ್ನಾಗಲಿ, ವಾಹನವನ್ನಾಗಲಿ, ವಸ್ತ್ರವನ್ನಾಗಲಿ, ಭೂಷಣಗಳನ್ನಾಗಲಿ, ಶಯನವನ್ನಾಗಲಿ ಉಪಯೋಗಿಸಬಾರದು. (೪೨). ಗುರುವಿನ ಪಾತ್ರೆ, ಸ್ನಾನದ ನೀರು, ನೆರಳು, ಮಾಲ್ಯ, ಇತರ ಉಪಕರಣಗಳನ್ನು ಭಕ್ತಿಹೀನನೂ ಕೂಡ ತನ್ನ ಕಾಲುಗಳಿಂದ ಸ್ಪರ್ಶಿಸಬಾರದು ಮತ್ತು ದಾಟಬಾರದು. (೪೩).

ಗುರೋರುಪೇಕ್ಷಾ ಹಾನಿಕರೀ

ಯಃ ಪಶ್ಯತಿ ಗುರುಂ ಶಿಷ್ಯಃ ಸಾಧಾರಣ ಮನುಷ್ಯವತ್।
ತಸ್ಯ ಭಕ್ತಿರ್ವೃಥಾ ವಿದ್ವನ್ ಭವತ್ಯತ್ರ ನ ಸಂಶಯಃ ॥ ೪೪ ॥

ಸಮಸ್ತದೇವತಾವಾಸಂ ಸರ್ವಮಂತ್ರಾಸ್ಪದಂ ಗುರುಮ್।
ಉಪೇಕ್ಷತೇ ಯಃ ಪಾಪಾತ್ಮಾ ರೌರವಂ ನರಕಂ ವ್ರಜೇತ್ ॥ ೪೫ ॥

ಗುರುವಿನ ಉಪೇಕ್ಷೆ ಹಾನಿಕರ

ಯಾವ ಶಿಷ್ಯನು ಗುರುವನ್ನು ಸಾಧಾರಣ ಮನುಷ್ಯನಂತೆ ಕಾಣುತ್ತಾನೋ ಅವನ ಭಕ್ತಿಯು ನಿಷ್ಫಲವಾಗುತ್ತದೆ. ಈ ಬಗ್ಗೆ ಯಾವುದೇ ಸಂಶಯವಿಲ್ಲ. (೪೪). ಎಲ್ಲಾ ದೇವತೆಗಳ ಆವಾಸ ಸ್ಥಾನವಾದ ಮತ್ತು ಎಲ್ಲಾ ಮಂತ್ರಗಳ ಆಶ್ರಯವಾದ ಗುರುವನ್ನು ಉಪೇಕ್ಷೆ ಮಾಡುವ ಪಾಪಾತ್ಮನು ರೌರವ ನರಕಕ್ಕೆ ಹೋಗುತ್ತಾನೆ. (೪೫).

ಟಿಪ್ಪಣಿ : ಸಮಸ್ತ ದೇವತಾವಾಸ = "ಬ್ರಹ್ಮ ವಿಷ್ಣುಃ ಶಿವೋ ರುದ್ರ ಈಶಃ ಶಕ್ತಿಃ ಪಿತಾಮಹಃ। ಸೂರ್ಯಚಂದ್ರಾಗ್ನಿಮರುತೋ ಗುರುರೇವ ನ ಸಂಶಯಃ॥" (ಪಾರಮೇಶ್ವರಾಗಮ, ೧೪.೬೯). (ಬ್ರಹ್ಮ, ವಿಷ್ಣು, ಶಿವ, ರುದ್ರ, ಈಶ, ಶಕ್ತಿ, ಪಿತಾಮಹ, ಸೂರ್ಯ, ಚಂದ್ರ, ಅಗ್ನಿ, ಮರುತರು ಗುರುವೇ, ಸಂಶಯವಿಲ್ಲ). ಸರ್ವಮಂತ್ರಾಸ್ಪದ = "ಸರ್ವಮಂತ್ರಮಯಂ ದಿವ್ಯಂ ಸರ್ವಶಾಸ್ತ್ರಮಯಂ ಶುಭಮ್। ಸರ್ವವೇದಾತ್ಮಕಂ ಪುಣ್ಯಂ ಶ್ರೀಗುರೋರ್ನಾಮ ಮಂಗಲಮ್॥" (ಪಾರಮೇಶ್ವರಾಗಮ, ೧೪.೮೯). (ಶ್ರೀ ಗುರುವೆಂಬ ಹೆಸರೇ ಎಲ್ಲಾ ಮಂತ್ರಗಳ, ಎಲ್ಲಾ ಶಾಸ್ತ್ರಗಳ, ಎಲ್ಲಾ ವೇದಗಳ ದಿವ್ಯ ಸ್ವರೂಪಾತ್ಮಕ, ಪುಣ್ಯಕರ ಮತ್ತು ಮಂಗಲಕರ).

ಗುರುಭಕ್ತಿಮಹಿಮಾ

ಗುರಾವತ್ಯಂತಭಕ್ತಸ್ಯ ಶಿಷ್ಯಸ್ಯೇಹ ಪರತ್ರ ಚ।
ನ ಕಿಂಚಿದ್ದುರ್ಲಭಂ ವಿದ್ವನ್ ಸಮಸ್ತಂ ಸುಲಭಂ ಸದಾ ॥ ೪೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇತ್ಥಮಾಚಾರವಾನ್ ಭಕ್ತ್ಯಾ ನಿತ್ಯಮುದ್ಯುಕ್ತಮಾನಸಃ।
ಗುರುಪ್ರಿಯಕರಃ ಶಿಷ್ಯಃ ಸರ್ವಾನ್ ಧರ್ಮಾಂಸ್ತಥಾರ್ಹತಿ ॥ ೪೭ ॥

ಗುರುಭಕ್ತಿಯ ಮಹಿಮೆ

ಗುರುವಿನಲ್ಲಿ ಅತ್ಯಂತ ಭಕ್ತಿಯುಳ್ಳ ಶಿಷ್ಯನಿಗೆ ಇಹದಲ್ಲಿ ಮತ್ತು ಪರದಲ್ಲಿ ಯಾವುದೂ ದುರ್ಲಭವಲ್ಲ, ಸದಾ ಎಲ್ಲವೂ ಸುಲಭ. (೪೬). ಇಂತಹ ಆಚಾರಸಂಪನ್ನನಾದ, ಭಕ್ತಿಯಿಂದ ನಿತ್ಯವೂ (ಗುರುವಿನ ಕಾರ್ಯಕ್ಕಾಗಿ) ಸಿದ್ಧವಾದ ಮನಸ್ಸುಳ್ಳ, ಗುರುವಿಗೆ ಪ್ರಿಯವಾದುದನ್ನೇ ಮಾಡುವ ಶಿಷ್ಯನು ಎಲ್ಲಾ ಧರ್ಮಾಚರಣೆಗಳಿಗೂ ಅರ್ಹನಾಗುತ್ತಾನೆ. (೪೭).

ಗುರುಲಕ್ಷಣಮ್

ಗುರುಶ್ಚ ಗುಣವಾನ್ ಪ್ರಾಜ್ಞಃ ಪರಮಾನಂದಭಾಸಕಃ ।
ತತ್ತ್ವವಿಚ್ಛಿವಸಂಸಕ್ತೋ ಮುಕ್ತಿದೋ ನ ತು ಚಾಪರಃ ॥ ೪೮ ॥

ಶೈವಸಿದ್ಧಾಂತತತ್ತ್ವಜ್ಞಃ ಪ್ರತಿಷ್ಠಾಮಂತ್ರಪಾರಗಃ।
ಮೋಕ್ಷದಃ ಕರುಣೋಪೇತೋ ವೀತರಾಗೋ ವಿಮತ್ಸರಃ ॥ ೪೯ ॥

ಕ್ರಿಯಾದಿಜ್ಞಾನಪರ್ಯಂತ-ಶಿವತತ್ತ್ವವಿನಿಶ್ಚಯಃ।
ಸಂಪ್ರದಾಯಾಗತಜ್ಞಾನೋ ಗುರುವಂಶಸಮುದ್ಭವಃ ॥ ೫೦ ॥

ಲಿಂಗಾಂಗಸ್ಥಲಭೇದಜ್ಞಃ ಷಟ್‌ಸ್ಥಲಜ್ಞಾನತತ್ಪರಃ।
ದೀಕ್ಷಾಕರ್ಮಾದಿಕುಶಲಃ ಷಡಧ್ವಜ್ಞಾನವತ್ಸಲಃ ॥ ೫೧ ॥

ಶಿವಸ್ಯ ಚ ಗುರೋರ್ಭಕ್ತಃ ಶಿವೈಕಾಹಿತಮಾನಸಃ।
ಶಿವಾರ್ಚನಾಸಕ್ತಚಿತ್ತಃ ಶಿವಧ್ಯಾನೈಕತತ್ಪರಃ ॥ ೫೨ ॥

ಗುರುವಿನ ಲಕ್ಷಣ

ಗುರುವೆಂದರೆ ಗುಣವಂತನು, ಜ್ಞಾನಿಯು, ಪರಮಾನಂದದ ಅನುಭವವನ್ನು ತಂದು ಕೊಡುವವನು, ತತ್ತ್ವಗಳನ್ನು ತಿಳಿದವನು, ಶಿವನಲ್ಲಿ ಅನುರಕ್ತನು, ಮುಕ್ತಿಯನ್ನು ಕೊಡುವವನು, ಮಾತ್ತಾರೂ ಅಲ್ಲ; ಅವನು ಶೈವ ಸಿದ್ಧಾಂತದ ತತ್ತ್ವಗಳನ್ನು ಅರಿತವನು, (ಲಿಂಗಾದಿ) ಪ್ರತಿಷ್ಠೆಯ ವಿಧಿ ಮತ್ತು ಮಂತ್ರಗಳಲ್ಲಿ ಪಾರಂಗತನು, ಮೋಕ್ಷವನ್ನು ಅನುಗ್ರಹಿಸುವವನು, ಕರುಣಾಮಯನು, ರಾಗವರ್ಜಿತನು, ಮಾತ್ಸರ್ಯ ರಹಿತನು, ಕ್ರಿಯಾಪಾದದಿಂದ ಜ್ಞಾನಪಾದದವರೆಗಿನ ಶೈವಾಗಮತತ್ತ್ವಗಳ ನಿಶ್ಚಿತ ಜ್ಞಾನವುಳ್ಳವನು, ಸಂಪ್ರದಾಯದಿಂದ ಬಂದ ಜ್ಞಾನವುಳ್ಳವನು, ಗುರುವಂಶದಲ್ಲಿ ಹುಟ್ಟಿದವನು, ಲಿಂಗಸ್ಥಲ ಮತ್ತು ಅಂಗಸ್ಥಲಗಳ ಭೇದವನ್ನು ತಿಳಿದವನು, ಷಟ್‌ಸ್ಥಲಗಳ ಜ್ಞಾನದಲ್ಲಿ ಮಗ್ನನಾದವನು, ದೀಕ್ಷಾಸಂಬಂಧಿ ಕ್ರಿಯೆಗಳಲ್ಲಿ ನಿಷ್ಣಾತನು, ಷಡಧ್ವಜ್ಞಾನದಲ್ಲಿ ಪ್ರೀತಿಯುಳ್ಳವನು, ಶಿವ ಮತ್ತು ಗುರುವಿನ ಭಕ್ತನು, ಶಿವನಲ್ಲಿ ತನ್ಮಯವಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನಸ್ಸುಳ್ಳವನು, ಶಿವಾರ್ಚನೆಯಲ್ಲಿ ಆಸಕ್ತವಾದ ಚಿತ್ತವುಳ್ಳವನು ಮತ್ತು ಶಿವಧ್ಯಾನದಲ್ಲಿ ಮೈ ಮರೆತವನು. (೪೮-೫೨).

ಟಿಪ್ಪಣಿ : ತತ್ತ್ವವಿತ್, ಶೈವ ಸಿದ್ಧಾಂತ ತತ್ತ್ವಜ್ಞಃ ಕ್ರಿಯಾದಿಜ್ಞಾನಪರ್ಯಂತಶಿವತತ್ತ್ವವಿನಿಶ್ಚಯಃ = ಶೈವ (ವೀರಶೈವ) ಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಟ್ಟ ೩೬ ತತ್ತ್ವಗಳ ವಿಕಾಸವನ್ನು ತಿಳಿದವನು ಶ್ರೀ ಗುರುವು. ಶೈವ ಸಿದ್ಧಾಂತವೆಂದರೆ ಶೈವಾಗಮಗಳನ್ನು ಆಧರಿಸಿದ ಸಿದ್ಧಾಂತ. ಆದರಲ್ಲಿ ಮೂರು ಪದಾರ್ಥಗಳು (ಅಂದರೆ ಪತಿ, ಪಶು ಮತ್ತು ಪಾಶವೆಂಬ ತತ್ತ್ವತ್ರಯವು) ಪ್ರತಿಪಾದಿಸಲ್ಪಟ್ಟಿವೆ. ಶೈವಾಗಮಗಳಲ್ಲಿ ಬರುವ ವಿಷಯಗಳ ನಿರೂಪಣೆಯ ವ್ಯವಸ್ಥೆಯು ನಾಲ್ಕು ಪಾದಗಳಲ್ಲಿ ಸಂಪನ್ನವಾಗಿದೆ. ಕ್ರಿಯಾದಿಜ್ಞಾನ ಪರ್ಯಂತ ಎಂದು ಹೇಳಿರುವುದು ಶೈವಾಗಮಗಳ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ ಮತ್ತು ಜ್ಞಾನಪಾದಗಳೆಂಬ ನಾಲ್ಕು ಪಾದಗಳ ವಿಷಯವನ್ನು. ಲಿಂಗಾಂಗ ಸ್ಥಲಭೇದ = ಲಿಂಗಸ್ಥಲಗಳು ಆರು- "ಆದಾವಾಚಾರ-ಲಿಂಗಂ-ಸ್ಯಾತ್ತತಶ್ಚ ಗುರುಲಿಂಗಕಮ್। ಶಿವಲಿಂಗಂ ತತೋ ಜ್ಞೇಯಂ ಚರಲಿಂಗಮತಃ ಪರಮ್। ತತಃ ಪ್ರಸಾದಲಿಂಗಂ ಸ್ಯಾನ್ಮಹಾಲಿಂಗಮತಃ ಪರಮ್॥" (ಸೂಕ್ಷ್ಮಾಗ್ರಮ, ಕ್ರಿ.ಪಾ,೮.೪-೫). ಇಲ್ಲಿ ಹೇಳಿದಂತೆ ಆರು ಲಿಂಗಸ್ಥಲಗಳು- ಆಚಾರಲಿಂಗಸ್ಥಲ, ಗುರುಲಿಂಗಸ್ಥಲ, ಶಿವಲಿಂಗಸ್ಥಲ, ಚರಲಿಂಗಸ್ಥಲ, ಪ್ರಸಾದಲಿಂಗಸ್ಥಲ ಮತ್ತು ಮಹಾಲಿಂಗಸ್ಥಲ. ಹಾಗೆಯೇ ಅಂಗಸ್ಥಲಗಳು ಆರು- "ಭಕ್ತೋ ಮಾಹೇಶ್ವರಶ್ಚೈವ ಪ್ರಸಾದೀ ಪ್ರಾಣಲಿಂಗಕಃ। ಶರಣಃ ಶಿವಲಿಂಗೈಕ್ಯಃ ಷಟ್‌ಸ್ಥಲಾನಿ ಹಿ ಪಾರ್ವತಿ॥" (ಸೂಕ್ಷ್ಮಾಗ್ರಮ, ಕ್ರಿ.ಪಾ., ೮.೩೯). ಆರು ಲಿಂಗಸ್ಥಲಗಳೆಂದರೆ ಭಕ್ತಸ್ಥಲ, ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿ ಸ್ಥಲ, ಶರಣಸ್ಥಲ ಮತ್ತು ಐಕ್ಯಸ್ಥಲ (ಶಿವಲಿಂಗೈಕ್ಯ ಸ್ಥಲ). ಇವುಗಳ ವಿವರಗಳು ಮತ್ತು ಲಿಂಗಾಂಗಸ್ಥಲಗಳ ಸಂಬಂಧದ ಬಗ್ಗೆ ಸೂಕ್ಷ್ಮಾಗ್ರಮ ೮ನೆಯ ಪಟಲವನ್ನು ನೋಡಿರಿ. ದೀಕ್ಷಾಕರ್ಮದ ಬಗ್ಗೆ ಕಾರಣಾಗಮ, ೧೧ನೆಯ ಪಟಲವನ್ನು ನೋಡಿರಿ. ಷಡಧ್ವಗಳ ಬಗ್ಗೆ ಪ್ರಥಮ ಪಟಲದ ೪೭-೪೯ ಶ್ಲೋಕಗಳ ಕೆಳಗಿನ ಟಿಪ್ಪಣಿಯನ್ನು ನೋಡಿರಿ. ಸೂಕ್ಷ್ಮಾಗ್ರಮ, ಕ್ರಿ.ಪಾ, ೫.೪.೧೯ರಲ್ಲಿನ ಗುರುಲಕ್ಷಣವನ್ನು ನೋಡಿರಿ.

ಗೃಹಸ್ಥಸ್ಯೈವ ಗುರುತ್ವಸಮರ್ಥನಮ್

ಗುರುರ್ಗೃಹಸ್ಥ ಏವ ಸ್ಯಾನ್ನ ಕದಾಚಿದ್ಯತಿರ್ಗುರುಃ।
ವಾನಪ್ರಸ್ಥಯತೀನಾಂ ತು ಗುರುತ್ವ ನಿಷ್ಫಲಂ ಭವೇತ್ ॥ ೫೩ ॥

ಗೃಹಸ್ಥನಿಗೇ ಗುರುತ್ವವೆಂಬುದರ ಸಮರ್ಥನೆ

ಗುರುವು ಗೃಹಸ್ಥನಾಗಿಯೇ ಇರಬೇಕು. ಸಂನ್ಯಾಸಿಯು ಯಾವಾಗಲೂ ಗುರುವಲ್ಲ. ವಾನಪ್ರಸ್ಥಯತಿಗಳ ಗುರುತ್ವವು ನಿಷ್ಫಲವಾಗುತ್ತದೆ. (೫೩).

ಟಿಪ್ಪಣಿ : ಗೃಹಸ್ಥ ಎಂದರೆ ಸಾಮಾಜಿಕವಾದ ಜವಾಬ್ದಾರಿ ಇರುವ ವ್ಯಕ್ತಿ. ಅಂತಹ ಜವಾಬ್ದಾರಿಯಿರುವ, ಅಂದರೆ ವಿವಾಹಿತನಾಗಿ ಮನೆತನದ ಜವಾಬ್ದಾರಿಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರ್ವಹಿಸುವ, ವ್ಯಕ್ತಿಯು ಮಾತ್ರ ಗುರುವಾಗಲು ಯೋಗ್ಯ ಎಂಬುದು ಇಲ್ಲಿಯ ಮಾತಿನ ಅರ್ಥ. ಪ್ರಾಚೀನ ಕಾಲದಲ್ಲಿ ವೀರಶೈವ ಗುರುವು ಗೃಹಸ್ಥನಾಗಿದ್ದಿರಬೇಕು. ಆ ನಂತರದ ಕಾಲದಲ್ಲಿ ಯಾವಾಗಲೋ ಭಕ್ತರ ಹಿತಕ್ಕಾಗಿ ತನ್ನನ್ನು ತಾನು ತೊಡಗಿಸಿಕೊಂಡ ಗುರುವು ನೈಷ್ಠಿಕ ಬ್ರಹ್ಮಚಾರಿಯಾಗಿರುವುದು ಯೋಗ್ಯ ಎನ್ನಿಸಿರಬೇಕು; ಈಗಿರುವಂತೆ ಮಠದ ಅಧಿಕಾರಿಯಾದ ಗುರುವು ನೈಷ್ಠಿಕ ಬ್ರಹ್ಮಚಾರಿಯಾಗಿರುವುದು ರೂಢಿಯಲ್ಲಿ ಬಂದಿರಬೇಕು.

ಗುರುತತ್ತ್ವನಿರ್ಣಯಃ

ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ।
ದುರ್ಲಭೋಽಯಂ ಗುರುರ್ಲೋಕೇ ಶಿಷ್ಯಹೃತ್ತಾಪಹಾರಕಃ ॥ ೫೪ ॥

ಸಂವಿತ್ತಿಜನನಂ ಸತ್ಯಂ ಪರಾನಂದಸಮುದ್ಭವಮ್।
ತತ್ತತ್ತ್ವಂ ವಿದಿತಂ ಯೇನ ಸ ಏವಾನಂದದರ್ಶಕಃ ॥ ೫೫ ॥

ಸ ಪುನರ್ನಾಮಮಾತ್ರೇಣ ಸಂವಿತ್ತಿರಹಿತಸ್ತು ಯಃ।
ಅನ್ಯಂ ನ ತಾರಯೇದಜ್ಞಃ ಕಿಂ ಶಿಲಾ ತಾರಯೇಚ್ಛಿಲಾಮ್ ॥ ೫೬ ॥

ಏಷಾ ತನ್ನಮಮಾತ್ರೇಣ ಮುಕ್ತಿರ್ವೈ ನಾಮಮಾತ್ರಿಕಾ।
ಯೈಃ ಪುನರ್ವಿದಿತಂ ತತ್ತ್ವಂ ತೇ ಮುಕ್ತಾ ಮೋಚಯಂತ್ಯಪಿ ॥ ೫೭ ॥

ತತ್ತ್ವಹೀನೇ ಕುತೋ ಬೋಧಃ ಕುತೋ ಹ್ಯಾತ್ಮಪರಿಗ್ರಹಃ।
ಪರಿಗ್ರಹವಿನಿರ್ಮುಕ್ತಃ ಪಶುರಿತ್ಯಭಿಧೀಯತೇ ॥ ೫೮ ॥

ಪಶುಭಿಃ ಪ್ರೇರಿತಶ್ಚಾಪಿ ಪಶುತ್ವಂ ನಾತಿವರ್ತತೇ।
ತಸ್ಮಾತ್ತತ್ತ್ವಂ ವಿದಿತ್ವೇಹ ಮುಕ್ತೋ ಮೋಚಕ ಇಷ್ಯತೇ ॥ ೫೯ ॥

ಸರ್ವಲಕ್ಷಣಯುಕ್ತೋಽಪಿ ಸರ್ವಶಾಸ್ತ್ರಂ ವಿದನ್ನಪಿ।
ಸರ್ವೋಪಾಯವಿಧಿಜ್ಞೋಽಪಿ ತತ್ತ್ವಹೀನಸ್ತು ನಿಷ್ಫಲಃ ॥ ೬೦ ॥

ಗುರುತತ್ತ್ವದ ನಿರ್ಣಯ

ಶಿಷ್ಯರ ಸಂಪತ್ತನ್ನು ಅಪಹರಿಸುವ ಗುರುಗಳು ಬಹಳ ಇದ್ದಾರೆ. ಆದರೆ ಈ ಲೋಕದಲ್ಲಿ ಶಿಷ್ಯರ ಹೃದಯದ ತಾಪವನ್ನು ಪರಿಹರಿಸುವ ಗುರುವು ದೊರೆಯುವುದು ಕಷ್ಟ. (೫೪). ಸಂವಿತ್ತಿಯ (ಸತ್ಯಜ್ಞಾನದ) ನಿಷ್ಪತ್ತಿಯು ನಿಶ್ಚಿತವಾಗಿಯೂ ಪರಮಾನಂದದಿಂದ ಉತ್ಪನ್ನವಾಗುತ್ತದೆ. ಆ ತತ್ತ್ವವನ್ನು ಯಾರು ತಿಳಿದಿರುವನೋ ಅವನು ಮಾತ್ರ ಆನಂದದ ಅನುಭವವನ್ನು ತಂದು ಕೊಡಬಲ್ಲನು. (೫೫). ಯಾರು ಸಂವಿತ್ತಿ ರಹಿತನೋ ಅವನು ನಾಮಮಾತ್ರದಿಂದ ಗುರು. ಅಂತಹ ಅಜ್ಞಾನಿಯು ಅನ್ಯರನ್ನು ಉದ್ಧರಿಸಲಾರನು. ಶಿಲೆಯು ಶಿಲೆಯನ್ನು ಉದ್ಧರಿಸಬಲ್ಲುದೇ? (೫೬). ಈ ಸಂವಿತ್ತಿಯು ಹೆಸರಿಗೆ ಮಾತ್ರ; ಈ ಮುಕ್ತಿಯು ಹೆಸರಿಗೆ ಮಾತ್ರ. ಯಾರು ಈ ತತ್ತ್ವವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಳಿದಿದ್ದಾರೋ ಅವರು ಮುಕ್ತರು ಮತ್ತು ಅವರು ಬೇರೆಯವರಿಗೆ ಮುಕ್ತಿಯ ದಾರಿಯನ್ನೂ ತೋರುತ್ತಾರೆ. (೫೭). ತತ್ತ್ವಜ್ಞಾನವಿಲ್ಲದವನಿಗೆ ಬೋಧ (ಶಿವಜ್ಞಾನ) ಎಲ್ಲಿಯದು? ಅವನಿಗೆ ಆತ್ಮಸ್ವರೂಪಜ್ಞಾನ ಎಲ್ಲಿಯದು? ಆತ್ಮಸ್ವರೂಪಜ್ಞಾನ ವಿಲ್ಲದವನನ್ನು ಪಶುವೆಂದು ಕರೆಯಲಾಗುತ್ತದೆ. (೫೮). ಒಂದು ಪಶು ಇನ್ನೊಂದು ಪಶುವಿಗೆ ಪ್ರೇರಣೆ ನೀಡಿದರೆ ಪಶುತ್ವವಂತೂ ನಿವೃತ್ತವಾಗುವುದಿಲ್ಲ. ಆದ್ದರಿಂದ ತತ್ತ್ವವನ್ನು ತಿಳಿದು ಮುಕ್ತನಾದವನು ಮಾತ್ರ ಮುಕ್ತಿಯನ್ನು ತಂದುಕೊಡಬಲ್ಲನು. (೫೯). ಎಲ್ಲಾ ಲಕ್ಷಣಗಳಿಂದ ಕೂಡಿದವನಾದರೂ, ಎಲ್ಲಾ ಶಾಸ್ತ್ರಗಳನ್ನು ತಿಳಿದವನಾದರೂ ಎಲ್ಲಾ ಉಪಾಯಗಳ ವಿಧಾನಗಳನ್ನು ಅರಿತವನಾದರೂ ತತ್ತ್ವಹೀನನು ಫಲವಿಲ್ಲದವನಾಗುವನು. (೬೦).

ಟಿಪ್ಪಣಿ : ಆಗಮದಲ್ಲಿ ತತ್ತ್ವಜ್ಞಾನಸಂಪನ್ನನು ಮಾತ್ರ ಗುರು, ತತ್ತ್ವಜ್ಞಾನ ರಹಿತನು ಗುರುವಾಗಲು ಅರ್ಹನಲ್ಲ, ತತ್ತ್ವಜ್ಞಾನಿಯಾದ ಗುರುವು ಮುಕ್ತನು ಮತ್ತು ಅವನೇ ಸಾಧಕರಿಗೆ ಮುಕ್ತಿಯ ಮಾರ್ಗವನ್ನು ತೋರಬಲ್ಲ ಎಂದು ಮಾರ್ಮಿಕವಾಗಿ ಹೇಳಲಾಗಿದೆ. ಯೋಗ್ಯ ಗುರುವನ್ನೇ ಆಯ್ದುಕೊಳ್ಳಬೇಕೆಂಬ ಸೂಚನೆಯೂ ಇಲ್ಲಿದೆ. ಯೋಗ್ಯ ಗುರು ಯಾರು ಎಂಬುದನ್ನು ಹಿಂದಿನ ೪೮-೫೨ ಶ್ಲೋಕಗಳಲ್ಲಿ ಹೇಳಲಾಗಿದೆ. ನಾಮ ಮಾತ್ರ ಗುರುವಿನ ಸ್ವರೂಪವನ್ನು ಇಲ್ಲಿ ಹೇಳಿದೆ. ದುಷ್ಟ ಗುರುವಿನ ಲಕ್ಷಣವು ಮುಂದೆ ಬರುತ್ತದೆ.

ದುಷ್ಟಗುರುಲಕ್ಷಣಮ್

ವ್ಯಸನೀ ವಾಮನಃ ಕುಬ್ಜಃ ಕೋಪೀ ಚ ಕುಟಿಲಃ ಖಲಃ।
ಚಪಲೋಽಧಿಕಹೀನಾಂಗಃ ಪಾಪೀಯಾನ್ ಸೂಚಕೋಽಂತ್ಯಜಃ ॥ ೬೧ ॥

ವ್ಯಾಧಿಗಸ್ತಾರ್ಕಿಕಃ ಶೂರಃ ಕಾಕನಾದೋ ಬಕವ್ರತೀ।
ಗುರುದೇವದ್ವಿಜಾತೀನಾಂ ನಿಂದಕೋ ವೃಷಲೀಪತಿಃ ॥ ೬೨ ॥

ಲಂಬೋಷ್ಠೋ ವಕ್ರನಾಸಶ್ಚ ಗಲೀನಃ(ಲಿತಃ) ಕಲಹಪ್ರಿಯಃ।
ಪರಾಪವಾದಶೀಲಶ್ಚ ವರ್ಜನೀಯೋ ಗುರುಃ ಸ್ಮೃತಃ ॥ ೬೩ ॥

ಅಧೋದೃಷ್ಟಿರ್ನೈಷ್ಕೃತಿಕಃ ಸ್ವಾರ್ಥಸಾಧನತತ್ಪರಃ।
ಶಠೋ ಮಿಥ್ಯಾವಿನೀತಶ್ಚ ಬಕವ್ರತಚರೋ ದ್ವಿಜಃ ॥ ೬೪ ॥

ದುಷ್ಟಗುರುವಿನ ಲಕ್ಷಣ

ಕೆಟ್ಟ ಚಟಗಳಿಂದ ಕೂಡಿದವನು, ಕುಳ್ಳನು, ಗೂನು ಬೆನ್ನಿನವನು, ಕೋಪಿಷ್ಠನು, ವಕ್ರಬುದ್ಧಿಯವನು, ಖಳನು, ಚಂಚಲನು, ಅಧಿಕ ಅಥವಾ ಹೀನ ಅಂಗಗಳುಳ್ಳವನು, ಪಾಪಿಯು, ಜೂಜುಕೋರನು, ಅಂತ್ಯಜನು, ರೋಗಿಷ್ಠನು, ದುರ್ವಾದಿಯು, ಪಹಲ್ವಾನನು, ಕಾಕಧ್ವನಿಯವನು, ಬಕದಂತೆ ಧ್ಯಾನ ಮಾಡುವವನು, ಗುರು-ದೇವರು-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬ್ರಾಹ್ಮಣರ ನಿಂದಕನು, ಕುಲಟೆಯ ಪತಿಯು, ಇಳಿಬಿದ್ದ ತುಟಿಯವನು, ಸೊಟ್ಟ ಮೂಗಿನವನು, ಕುಷ್ಠರೋಗಿಯು, ಜಗಳಗಂಟನು, ಬೇರೆಯವರ ಮೇಲೆ ಅಪವಾದ ಹೊರಿಸುವುದರಲ್ಲಿ ತಲ್ಲೀನನು, ಅಧೋದೃಷ್ಟಿಯವನು, ದುರಾಚಾರಿಯು, ಸ್ವಾರ್ಥ ಸಾಧನೆಯಲ್ಲಿ ಮಗ್ನನಾಗಿರುವವನು, ಮೋಸಗಾರನು, ತೋರಿಕೆಯ ವಿನಯವುಳ್ಳವನು, ಬಕದಂತೆ ಧ್ಯಾನವನ್ನು ನಡೆಸುವ ಬ್ರಾಹ್ಮಣನು, ಇಂತಹವನು ಗುರುವಾಗಬಾರದು. (೬೧-೬೪).

ಯೋಗ್ಯಗುರುವರಣಮ್

ಯಸ್ಯಾನುಭವಪರ್ಯಂತಾ ಮತಿಸ್ತತ್ತ್ವೇ ಪ್ರತಿಷ್ಠಿತಾ।
ತಸ್ಯಾವಲೋಕನಾದ್ದೃಷ್ಟ್ಯ ಪರಾನಂದೋಽಭಿಜಾಯತೇ ॥ ೬೫ ॥

ತಸ್ಮಾದ್ಯಸ್ಯೈವ ಸಂಪರ್ಕಾತ್ ಪ್ರಬೋಧಾನಂದಸಂಭವಃ।
ಗುರುಂ ತಮೇವ ವೃಣುಯಾನ್ನಾಪರಂ ಮತಿಮಾನ್ನರಃ ॥ ೬೬ ॥

ಯೋಗ್ಯ ಗುರುವನ್ನು ಆಯ್ದುಕೊಳ್ಳುವುದು

ಯಾರ ಅನುಭವ ಪರ್ಯಂತವಾದ ಬುದ್ಧಿಯು ತತ್ತ್ವದಲ್ಲಿ ಪ್ರತಿಷ್ಠಿತವಾಗಿದೆಯೋ ಅಂತಹ ಗುರುವಿನ ಅನುಗ್ರಹ ದೃಷ್ಟಿ ಮುಂತಾದವುಗಳಿಂದ ಪರಮಾನಂದವು ಉಂಟಾಗುತ್ತದೆ. (೬೫). ಆದ್ದರಿಂದ ಯಾರ ಸಂಪರ್ಕದಿಂದ ಅರಿವಿನ ಆನಂದವು ಉಂಟಾಗುವುದೋ ಅಂತಹವನನ್ನೇ ಬುದ್ಧಿಮಾನ್ ಶಿಷ್ಯನು ಗುರುವಾಗಿ ಆಯ್ದುಕೊಳ್ಳಬೇಕು. (೬೬).

ಟಿಪ್ಪಣಿ : ಕುಟುಂಬಕ್ಕೆ ಒಬ್ಬನೇ ಗುರುವಿರಬೇಕು "ಪಿತೃಭ್ರಾತೃಕಲತ್ರಾಣಾಂ ಪುತ್ರಾದೀನಾಂ ತಥೈವ ಚ। ದೀಕ್ಷಾಶಿಕ್ಷಾವಿಧಾನಾರ್ಥಮೇಕ ಏವ ಗುರುರ್ಭವೇತ್॥" (ಸೂಕ್ಷ್ಮಾಗ್ರಮ, ಕ್ರಿ.ಪಾ, ೫.೨೯).

ಶಿಷ್ಯಲಕ್ಷಣಂ ತತ್ಕರ್ತವ್ಯಂ ಚ

ತತ್ರಾದಾವುಪಸಂಗಮ್ಯ ಬ್ರಾಹ್ಮಣಂ ವೇದಪಾರಗಮ್।
ಗುರುಮಾರಾಧಯೇತ್ ಪ್ರಾಜ್ಞಂ ಸುಭಗಂ ಪ್ರಿಯದರ್ಶನಮ್ ॥ ೬೭ ॥

ಸರ್ವಾಭೀಷ್ಟ್ಯೇಯಪ್ರದಾತಾರಂ ಕರುಣಾಕ್ರಾಂತಮಾನಸಮ್।
ತೋಷಯೇತ್ ತಂ ಪ್ರಯತ್ನೇನ ಮನಸಾ ಕರ್ಮಣಾ ಗಿರಾ ॥ ೬೮ ॥

ತಾವದಾರಾಧಯೇಚ್ಛಿಷ್ಯಃ ಪ್ರಸನ್ನೋಽಸೌ ಭವೇದ್ಯಥಾ।
ತಸ್ಮಿನ್ ಪ್ರಸನ್ನೇ ಶಿಷ್ಯಸ್ಯ ಸದ್ಯಃ ಪಾಶಕ್ಷಯೋ ಭವೇತ್ ॥ ೬೯ ॥

ತಸ್ಮಾದ್ಧನಾನಿ ರತ್ನಾನಿ ಕ್ಷೇತ್ರಾಣಿ ಚ ಗೃಹಾಣಿ ಚ ।
ಭೂಷಣಾನಿ ಚ ವಾಸಾಂಸಿ ಯಾನಶಯ್ಯಾಸನಾನಿ ಚ ॥ ೭೦ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏತಾನಿ ಗುರವೇ ದದ್ಯಾದ್ ಭಕ್ತ್ಯಾ ವಿತ್ತಾನುಸಾರತಃ।
ವಿತ್ತಶಾಠ್ಯಂ ನ ಕುರ್ವೀತ ಯದೀಚ್ಛೇತ್ ಪರಮಾಂ ಗತಿಮ್ ॥ ೭೧ ॥

ಸ ಏವ ಜನಕೋ ಮಾತಾ ಭ್ರಾತಾ ಬಂಧುಜನಃ ಸ್ವಯಮ್।
ಮಿತ್ರಂ ಧನಂ ಚ ಯತ್ರಸ್ಯಾತ್ ಸರ್ವಂ ತಸ್ಮೈ ನಿವೇದಯೇತ್ ॥ ೭೨ ॥

ನಿವೇದ್ಯ ಪಶ್ಚಾತ್ ಸ್ವಾತ್ಮಾನಂ ಸಾನ್ವಯಂ ಸಪರಿಗ್ರಹಮ್।
ಸಮರ್ಪ್ಯ ಸಾದರಂ ತಸ್ಮೈ ನಿತ್ಯಂ ತದ್ವಶಗೋ ಭವೇತ್ ॥ ೭೩ ॥

ಯದಾ ಶಿವಾಯ ಸ್ವಾತ್ಮಾನಂ ದತ್ತವಾನ್ ದೇಶಿಕಾತ್ಮನೇ।
ತದಾ ಶೈವೋ ಭವೇದ್ ದೇಹೀ ನ ತತೋಽಸ್ತಿ ಪುನರ್ಭವಃ ॥ ೭೪ ॥

ದೇಶಿಕಾಕೃತಿಮಾಸ್ಥಾಯ ಪಶೋಃ ಪಾಶಾನಶೇಷತಃ।
ಛಿತ್ವಾ ಪರಂ ಪದಂ ದೇವೋ ನಯತ್ಯೇನಮಸಂಶಯಮ್ ॥ ೭೫ ॥

ಶಿಷ್ಯಲಕ್ಷಣ ಮತ್ತು ಅವನ ಕರ್ತವ್ಯ

ಅದಕ್ಕಾಗಿ ಪ್ರಾರಂಭದಲ್ಲಿ ವೇದ ಪಾರಂಗತನಾದ, ಜ್ಞಾನಿಯಾದ, ಸೌಭಾಗ್ಯ ಶಾಲಿಯಾದ, ಪ್ರಿಯದರ್ಶನವುಳ್ಳ ಬ್ರಾಹ್ಮಣನ ಬಳಿಗೆ ಹೋಗಿ ಅವನನ್ನು ಗುರುವೆಂದು ಆರಾಧನೆ ಮಾಡಬೇಕು. (೬೭). ಎಲ್ಲಾ ಜ್ಞಾನಗಳನ್ನು ಕೊಡುವವನಾದ, ಕರುಣೆಯಿಂದ ತುಂಬಿದ ಮನಸ್ಸುಳ್ಳ ಅವನನ್ನು ಪ್ರಯತ್ನ ಪೂರ್ವಕವಾಗಿ ಮನಸ್ಸಿನಿಂದ, ಕ್ರಿಯೆಯಿಂದ ಮತ್ತು ಮಾತಿನಿಂದ ಸಂತೋಷಗೊಳಿಸಬೇಕು. (೬೮). ಅವನು ಯಾವ ರೀತಿಯಿಂದ ಪ್ರಸನ್ನವಾಗುವನೋ ಆ ರೀತಿಯಿಂದ ಶಿಷ್ಯನು ಅವನನ್ನು ಆರಾಧಿಸಬೇಕು. ಅವನು ಪ್ರಸನ್ನನಾದರೆ ಶಿಷ್ಯನಿಗೆ ತಕ್ಷಣವೇ ಪಾಶಗಳು ಕ್ಷೀಣವಾಗುತ್ತವೆ. (೬೯). ಆದ್ದರಿಂದ ಹಣ, ರತ್ನಗಳು, ಹೊಲಗಳು, ಮನೆಗಳು, ಆಭರಣಗಳು, ಉಡುಪುಗಳು, ವಾಹನ, ಶಯ್ಯೆ, ಆಸನ, ಇವುಗಳನ್ನು ತನ್ನ ಸಂಪತ್ತಿನ ಸ್ಥಿತಿಗೆ ಅನುಸಾರವಾಗಿ ಗುರುವಿಗೆ ಕೊಡಬೇಕು. ಪರಮ ಪದವನ್ನು ಇಚ್ಛಿಸುವವನು ತನ್ನ ಸಂಪತ್ತಿನ ಬಗ್ಗೆ ಮೋಸ ಮಾಡಬಾರದು. (೭೦-೭೧). ಅವನೇ (ಗುರುವೇ) ಸ್ವಯಂ ತಂದೆ, ತಾಯಿ, ಸಹೋದರ, ಬಂಧುಗಳು, ಗೆಳೆಯ, ಹಣ ಎಲ್ಲವೂ ಆದ್ದರಿಂದ ಎಲ್ಲವನ್ನೂ ಅವನಿಗೆ ಅರ್ಪಿಸಬೇಕು. (೭೨). ಅನಂತರ ತನ್ನ ಪೂರ್ಣವಂಶದೊಂದಿಗೆ, ಪರಿವಾರದೊಂದಿಗೆ ಅವನಿಗೆ ತನ್ನನ್ನು ತಾನು ಆದರಪೂರ್ವಕವಾಗಿ ಸಮರ್ಪಿಸಿಕೊಂಡು ಸದಾಕಾಲ ಅವನಿಗೆ ವಶವರ್ತಿಯಾಗಿರಬೇಕು. (೭೩). ಗುರು ಸ್ವರೂಪನಾದ ಶಿವನಿಗೆ ತನ್ನನ್ನು ತಾನು ಸಮರ್ಪಿಸಿಕೊಂಡರೆ ಆ ಜೀವನು ಶಿವಭಕ್ತನಾಗುವನು; ಅನಂತರ ಅವನಿಗೆ ಪುನರ್ಜನ್ಮವಿಲ್ಲ. (೭೪). ಗುರುವಿನ ಆಕಾರವನ್ನು ಧರಿಸಿದ ದೇವನು ಪಶುವಿನ (ಜೀವನ) ಪಾಶಗಳನ್ನು ಸಂಪೂರ್ಣವಾಗಿ ಕತ್ತರಿಸಿ ಅವನನ್ನು ನಿಃಸಂಶಯವಾಗಿ ಪರಮ ಪದಕ್ಕೆ ಕೊಂಡೊಯ್ಯುವನು. (೭೫).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ೭೩ನೇ ಶ್ಲೋಕದಲ್ಲಿ ಬರುವ ವಿಷಯ ಸಂವಾದಿಯಾಗಿ ಸೂಕ್ಷ್ಮಾಗ್ರಮ, ಕ್ರಿ.ಪಾ, ೫.೫೨ನೇ ಶ್ಲೋಕವು ಹೀಗಿದೆ "ನ ಲಂಘಯೇದ್ಗುರೋರಾಜ್ಞಾಂ ತತ್ಪಾದಾರ್ಪಿತ ಮಾನಸಃ ಶರೀರಮರ್ಥಂ ಪ್ರಾಣಂ ಚ ದೇವಿ ತಸ್ಮೈ ನಿವೇದಯೇತ್॥" (ಗುರುವಿನ ಆಜ್ಞೆಯನ್ನು ಉಲ್ಲಂಘಿಸಬಾರದು. ಗುರುಚರಣದಲ್ಲಿಯೇ ಚಿತ್ತವನ್ನಿಟ್ಟಿರಬೇಕು. ಗುರುವಿಗೆ ತನ್ನ ಶರೀರ, ಸಂಪತ್ತು, ಪ್ರಾಣಗಳನ್ನು ಸರ್ವಾತ್ಮಭಾವದಿಂದ ಸಮರ್ಪಿಸಬೇಕು). ಮುಂಡಕೋಪನಿಷತ್ (೩.೨.೩) ಮತ್ತು ಕಠೋಪನಿಷತ್ (೨.೨೩)ಗಳಲ್ಲಿ "ನಾಯಾಮಾತ್ಮಾ ಪ್ರವಚನೇನ ಲಭ್ಯಃ" ಇತ್ಯಾದಿ ಮಂತ್ರದಿಂದ ಹೇಳಿದಂತೆ ಪ್ರವಚನವನ್ನು ಕೇಳುವುದರಿಂದ, ವಿವಿಧ ಶುಭಕರ್ಮಗಳ ಆಚರಣೆಯಿಂದ, ಶಾಸ್ತ್ರಗಳ ನಿರಂತರ ಶ್ರವಣದಿಂದ ಶಿವಸ್ವರೂಪದ ಪ್ರತೀತಿಯು ಉಂಟಾಗುವುದಿಲ್ಲ. ಆ ಪ್ರತೀತಿಯು ಕೇವಲ ಯಾರ ಮುಂದೆ ಶಿವನು ಸ್ವಯಮಿಚ್ಛೆಯಿಂದ ಪ್ರಕಟವಾಗುತ್ತಾನೋ ಅವನಿಗೆ ಮಾತ್ರ ಪ್ರತೀತಿಗೆ ಬರುತ್ತಾನೆ. ಆದಕ್ಕಾಗಿ ಶರಣಾಗತಿಯು ಪ್ರಮುಖವಾದ ಉಪಾಯ. ಆದ್ದರಿಂದಲೇ ಇಲ್ಲಿ ಶಿವಸ್ವರೂಪ ಗುರುವಿಗೆ ಆತ್ಮಸಮರ್ಪಣೆಯ ಮಾತನ್ನು ಹೇಳಲಾಗಿದೆ.

ಶಿಷ್ಯಪರೀಕ್ಷಾ

ಗುರುಸ್ತು ಸ್ವಾಶ್ರಿತಂ ಶಿಷ್ಯಂ ಪರೀಕ್ಷೇದ್ ವರ್ಷಮೇಕಕಮ್।
ಬ್ರಾಹ್ಮಣಂ ಕ್ಷತ್ರಿಯಂ ವೈಶ್ಯಂ ದ್ವಿತ್ರಿವರ್ಷಕಮೇವ ವಾ ॥ ೭೬ ॥

ಪ್ರಾಣದ್ರವ್ಯಪ್ರದಾನಾದ್ಯೈರಾದೇಶೈಶ್ಚ ಸಮಾಸಮೈಃ।
ಉತ್ತಮಾಂಶ್ಚಾಧಮೇ ಕೃತ್ವಾ ನೀಚಾನುತ್ತಮಕರ್ಮಣಿ ॥ ೭೭ ॥

ಆಕ್ರುಷ್ಟಾಸ್ತಾಡಿತಾ ವಾ ಯೇ ವಿಷಾದಂ ನೈವ ಯಾಂತ್ಯಪಿ।
ತೇ ಯೋಗ್ಯಾ ಸತತಂ ಶುದ್ಧಾಃ ಶಿವಸಂಸ್ಕಾರಕರ್ಮಣಿ ॥ ೭೮ ॥

ಅಹಿಂಸಕಾ ದಯಾವಂತೋ ನಿತ್ಯಮುದ್ಯುಕ್ತಚೇತಸಃ।
ಅಮಾನಿನೋ ಬುದ್ಧಿಮಂತಸ್ತ್ಯಕ್ತಸ್ಪರ್ಧಾಃ ಪ್ರಿಯಂವದಾಃ ॥ ೭೯ ॥

ಋಜವೋ ಮೃದವಃ ಸ್ವಚ್ಛಾ ವಿನೀತಾಃ ಸ್ಥಿರಚೇತಸಃ।
ಶೌಚಾಚಾರ ಸಮೋಪೇತಾಃ ಶಿವಭಕ್ತಾ ದ್ವಿಜಾತಯಃ ॥ ೮೦ ॥

ಏವಂ ವೃತ್ತಸಮೋಪೇತಾ ವಾಙ್ಮನಃಕಾಯಕರ್ಮಭಿಃ।
ಶೋಧ್ಯಾ ಬೋಧ್ಯಾ ಯಥಾನ್ಯಾಯ್ಯಮಿತಿ ಶಾಸ್ತ್ರವಿನಿಶ್ಚಯಃ ॥ ೮೧ ॥

ಶಿಷ್ಯನ ಪರೀಕ್ಷೆ

ಗುರುವು ತನ್ನನ್ನು ಆಶ್ರಯಿಸಿದ ಶಿಷ್ಯನನ್ನು ಒಂದು ವರ್ಷಕಾಲ ಪರೀಕ್ಷಿಸಬೇಕು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರನ್ನು ಎರಡು-ಮೂರು ವರ್ಷಕಾಲ (ಪರೀಕ್ಷಿಸಬೇಕು). (೭೬). ಆ ಶಿಷ್ಯನಿಗೆ, ಪ್ರಾಣ, ದ್ರವ್ಯ ಮುಂತಾದುವನ್ನು ಕೊಡುವಂತೆ ತಿರುಗಾಮುರುಗಾ ಆಜ್ಞೆಗಳನ್ನು ಕೊಡುತ್ತಾ ಉತ್ತಮರನ್ನು ಅಧಮ ಕಾರ್ಯದಲ್ಲಿ ಅಧಮರನ್ನು ಉತ್ತಮ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರ್ಯದಲ್ಲಿ ತೊಡಗುವಂತೆ ಮಾಡಬೇಕು. (೭೭). ಎಳೆದಾಡುವುದು, ತಾಡನೆ ಮುಂತಾದವುಗಳಿಗೆ ಗುರಿಯಾದರೂ ಕೂಡ ಯಾರು ವಿಷಾದವನ್ನು ಹೊಂದುವುದಿಲ್ಲವೋ ಅಂಥವರು ಸತತವಾಗಿ ಶುದ್ಧರು ಮತ್ತು ಶಿವಸಂಸ್ಕಾರದ ಕರ್ಮಗಳಿಗೆ ಯೋಗ್ಯರು. (೭೮). ಹಿಂಸೆ ಮಾಡದವರು, ದಯಾವಂತರು, ನಿತ್ಯವೂ ಕಾರ್ಯಕ್ಕೆ ಸಿದ್ಧವಾದ ಮನಸ್ಸುಳ್ಳವರು, ದುರಭಿಮಾನವಿಲ್ಲದವರು, ಬುದ್ಧಿವಂತರು, ಸ್ಪರ್ಧೆಯನ್ನು ಬಿಟ್ಟವರು, ಪ್ರಿಯವಾಗಿ ಮಾತನಾಡುವವರು, ನೇರ ನಡೆಯುವವರು, ಮೃದು ಸ್ವಭಾವದವರು, ಸ್ವಚ್ಛರು, ವಿನಯಶಾಲಿಗಳು, ಸ್ಥಿರವಾದ ಮನಸ್ಸುಳ್ಳವರು, ಶೌಚ ಮತ್ತು ಆಚಾರಗಳನ್ನು ನಡೆಸುವವರು, ಶಿವಭಕ್ತರಾದ ದ್ವಿಜರು, ಇಂತಹ ನಡತೆಯಿಂದ ಭೂಷಿತರಾದವರು ಶಿಷ್ಯರು. ಅವರನ್ನು ವಾಚಿಕ, ಮಾನಸಿಕ, ಶಾರೀರಿಕ ಕರ್ಮಗಳಲ್ಲಿ ಯೋಜಿಸುವ ಮೂಲಕ ಶೋಧಿಸಬೇಕು ಮತ್ತು ನ್ಯಾಯ ಪೂರ್ವಕವಾಗಿ ಅವರಿಗೆ ಬೋಧಿಸಬೇಕು. ಇದು ಶಾಸ್ತ್ರದ ನಿರ್ಣಯ. (೭೯-೮೧).

ಟಿಪ್ಪಣಿ : ಶಿಷ್ಯಲಕ್ಷಣ ಎಂಬ ವಿಷಯಕ್ಕೆ ಸೂಕ್ಷ್ಮಾಗ್ರಮ, ಕ್ರಿ.ಪಾ., ೫.೩೧-೩೩ನ್ನು ನೋಡಿರಿ. "ಶಿಕ್ಷಯೇತ್ ತಸ್ಯ ವೈ ಚಿತ್ತಂ ಯಥಾಭವತಿ ನಿರ್ಮಲಮ್" (ಸೂಕ್ಷ್ಮಾಗ್ರಮ, ೫.೩೩) ಎಂಬ ಮಾತು ಶಿಷ್ಯ ಪರೀಕ್ಷೆಯನ್ನು ವಿಧಿಸುತ್ತದೆ. ಶಿಷ್ಯನ ಚಿತ್ತವು ನಿರ್ಮಲವಾಗುವವರೆಗೆ ಗುರುವು ಅವನಿಗೆ ಪರೀಕ್ಷೆಗಳನ್ನು ಒಡ್ಡಿ ಶೋಧಿಸಬೇಕು.

ಗುರುಮಹಿಮಾ

ಶಿವೇ ರುಷ್ಟೇ ಗುರುಸ್ತ್ರಾತಾ ನ ರುಷ್ಟೇ ನಿಜಸದ್ಗುರೌ।
ತ್ರಾತಾ ಶಿವಸ್ತದೇತಸ್ಮಾದ್ ಗುರುಪೂಜಾರತೋ ಭವೇತ್ ॥ ೮೨ ॥

ಯಃ ಸ್ವಸ್ಯ ಗುರುಪೂಜಾಂ ತು ತ್ಯಕ್ತ್ವಾ ಶಿವಪದಂ ಯಜೇತ್।
ಪರಾಙ್ಮುಖಃ ಶಿವಸ್ತಸ್ಯ ನರಕಂ ಸಂಪ್ರಯಚ್ಛತಿ ॥ ೮೩ ॥

ಗುರುವಿನ ಮಹಿಮೆ

ಶಿವನು ಕುಪಿತನಾದರೆ ಗುರುವು ರಕ್ಷಿಸುವನು. ಆದರೆ ತನ್ನ ಸದ್ಗುರುವು ಕೋಪಗೊಂಡರೆ ಶಿವನೂ ರಕ್ಷಿಸಲಾರ. ಆದ್ದರಿಂದ ಗುರುಪೂಜೆಯಲ್ಲಿ ನಿರತನಾಗಬೇಕು. (೮೨). ಯಾರು ತನ್ನ ಗುರುವಿನ ಪೂಜೆಯನ್ನು ಬಿಟ್ಟು ಶಿವಪದವನ್ನು ಪೂಜಿಸುತ್ತಾನೋ ಅವನಿಂದ ಶಿವನು ಮುಖ ತಿರುಗಿಸುತ್ತಾನೆ ಮತ್ತು ನರಕದ ಸ್ಥಾನವನ್ನು ಕೊಡುತ್ತಾನೆ. (೮೩).

ಗುರುಪೂಜಾಫಲಮ್

ಏತತ್ಸರ್ವಂ ಪರಿಜ್ಞಾಯ ಪೂಜಾಂ ಕುರ್ಯಾದ್ ಗುರೋಃ ಸ್ವಯಮ್।
ಗುರುಃ ಪೂಜಾಭಿಸಂತುಷ್ಟಃ ಸ್ವಸಾಯುಜ್ಯಂ ಪ್ರಯಚ್ಛತಿ ॥ ೮೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರ್ತೀಕೇ ಸೋಮವಾರೇ ಚ ಪುಷ್ಪೈಃ ಪತ್ರೈಃ ಫಲೈರ್ಯಜೇತ್।
ಶಕ್ತಶ್ಚೇತ್ತಸ್ಯ ಪೂಜಾಯಂ ಮಾಸಮೇಕಮತಂದ್ರಿತಃ ॥
ತ್ರಿಕಾಲಂ ವಾಽಥ ಷಟ್‌ಕಾಲಂ ಪ್ರದೋಷೇ ವಾ ಸಮರ್ಚಯೇತ್ ॥ ೮೫ ॥
ಭೂತಿರುದ್ರಾಕ್ಷಭೂಷಾಢ್ಯಃ ಪಂಚಾಕ್ಷರಮನುಂ ಜಪನ್।
ತ್ವರಯ ಗುರುಸಾಮೀಪ್ಯಂ ಗತಸ್ತತ್ಪಾದಪಂಕಜೌ ॥
ನಮಸ್ಕೃತ್ವಾಽಽ ನಯೇದ್‌ಭಕ್ತ್ಯಾ ಸ್ವಗೃಹಂ ಪ್ರತಿ ತಂ ಗುರುಮ್ ॥ ೮೬ ॥

ಗುರುಪೂಜೆಯ ಫಲ

ಇದೆಲ್ಲವನ್ನೂ ತಿಳಿದ ಶಿಷ್ಯನು ಸ್ವಯಂ ತಾನೇ ಗುರುಪೂಜೆಯನ್ನು ಮಾಡಬೇಕು. ಪೂಜೆಯಿಂದ ಸಂಪೂರ್ಣ ಸಂತುಷ್ಟನಾದ ಗುರುವು ತನ್ನ ಸಾಯುಜ್ಯವನ್ನು ಅನುಗ್ರಹಿಸುವನು. (೮೪). ಕಾರ್ತೀಕ ಸೋಮವಾರದ ದಿನ ಪುಷ್ಪಗಳಿಂದ ಪತ್ರಗಳಿಂದ ಹಣ್ಣುಗಳಿಂದ ಗುರುವನ್ನು ಪೂಜಿಸಬೇಕು. ಸಾಧ್ಯವಾದರೆ ಒಂದು ತಿಂಗಳ ಕಾಲ ಗುರುವಿನ ಪೂಜೆಯಲ್ಲಿ ತೊಡಗಿ ಮೂರು ವೇಳೆ ಅಥವಾ ಆರು ವೇಳೆ ಅಥವಾ ಸಾಯಂಕಾಲದಲ್ಲಿ ಪೂಜಿಸಬೇಕು. (೮೫). ವಿಭೂತಿ ಮತ್ತು ರುದ್ರಾಕ್ಷಗಳಿಂದ ಭೂಷಿತನಾಗಿ ಪಂಚಾಕ್ಷರ ಮಂತ್ರವನ್ನು ಜಪಿಸುತ್ತಾ ಶೀಘ್ರವಾಗಿ ಗುರುವಿನ ಬಳಿಗೆ ಹೋಗಿ ಆತನ ಪಾದಪದ್ಮಗಳಿಗೆ ನಮಸ್ಕರಿಸಿ ಆತನನ್ನು ತನ್ನ ಮನೆಗೆ ಕರೆದೊಯ್ಯಬೇಕು. (೮೬).

ಗೃಹಾಗತಸ್ಯ ಗುರೋಃ ಸತ್ಕಾರಃ

ಆಂದೋಲಿಕಾಯಾಮಾರೋಪ್ಯ ಗಜೇ ವಾಪಿ ತುರಂಗಮೇ।
ಅನುಗಚ್ಛೇತ್‌ಸ್ವಯಂ ಭಕ್ತ್ಯಾ ವಾದ್ಯಘೋಷಸಮನ್ವಿತಃ ॥ ೮೭ ॥
ಗೃಹಂ ನೀತ್ವಾ ಗುರುಂ ಪಶ್ಚಾತ್ ಕ್ಷಾಲಯಂಸ್ತತ್ಪದದ್ವಯಮ್।
ತೇನೋದಕೇನ ಶಿರಸಿ ಸಂಪ್ರೋಕ್ಷ್ಯ ಸ್ವಜನೈಃ ಸಹ ॥ ೮೮ ॥
ದತ್ವಾ ಹಸ್ತಾವಲಂಬಂ ಚ ತತೋ ನೀತ್ವಾ ಗೃಹಾಂತರಮ್।
ಪ್ರಕಲ್ಪ್ಯ ಚಾಸನಂ ಶ್ರೇಷ್ಠಂ ನಿವೇಶ್ಯ ಪ್ರೀತಿಪೂರ್ವಕಮ್॥
ಯಥಾವಿಧ್ಯವಧಾನೇನ ಪೂಜಯೇದ್ ಗುರುಮವ್ಯಯಮ್ ॥ ೮೯ ॥
ಗುರೋಃ ಸಮರ್ಚಾಸಮಯೇ ದೀಪಾನಷ್ಟೋತ್ತರಂ ಶತಮ್।
ಷಟ್‌ತ್ರಿಂಶದ್ವಾ ಯಥಾಶಕ್ತಿ ಜ್ವಾಲಯೇದನ್ವಹಂ ಬುಧಃ॥
ತ್ರಯೋದಶ್ಯಾದಿಷು ಗುರುಮರ್ಚಯೇದ್ ಭವ್ಯಮಂಟಪೇ ॥ ೯೦ ॥
ಉಕ್ತಂ ಯದ್ಗುರುಣಾ ಪೂರ್ವಂ ಶಕ್ಯಂ ವಾಶಕ್ಯಮೇವ ವಾ।
ಕರೋತ್ಯೇವ ಹಿ ಪೂತಾತ್ಮಾ ಪ್ರಾಣೈರಪಿ ಧನೈರಪಿ॥
ಶರೀರಾದ್ಯರ್ಥಕಂ ಸರ್ವಂ ಗುರುಂ ದದ್ಯಾತ್ ಸ ಶಿಷ್ಯಕಃ ॥ ೯೧ ॥
ಮಾಹೇಶ್ವರಾನ್ ಸಪತ್ನೀಕಾನ್ ಪತ್ನ್ಯಾ ಸಹ ದೃಢವ್ರತಃ।
ಪೂಜಯೇದ್ಭೋಜನಾದ್ಯೈಶ್ಚ ಪಂಚ ವಾ ದಶ ವಾ ಶತಮ್॥
ಅಗ್ರಪಾಕಂ ನಿವೇದ್ಯಾಗ್ರೇ ಭುಂಜೀಯಾದ್ ಗುರ್ವನುಜ್ಞಯಾ ॥ ೯೨ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಧನರೂಪ್ಯೈಃ ಪಾದುಕಾದ್ಯೈಃ ಪಾದಸಂಗ್ರಹಣಾದಿಭಿಃ।
ಸ್ನಾನಾಭ್ಯಂಜನನೈವೇದ್ಯಭೋಜನೈಶ್ಚಾಪಿ ಪೂಜಯೇತ್ ॥ ೯೩ ॥

ಮನೆಗೆ ಬಂದ ಗುರುವಿನ ಸತ್ಕಾರ

ಪಲ್ಲಕ್ಕಿಯಲ್ಲಿ, ಆನೆಯ ಮೇಲೆ ಅಥವಾ ಕುದುರೆಯ ಮೇಲೆ ಗುರುವನ್ನು ಕುಳ್ಳಿರಿಸಿ ಶಿಷ್ಯನು ಸ್ವತಃ ತಾನೇ ಭಕ್ತಿಯಿಂದ ವಾದ್ಯಘೋಷಗಳೊಂದಿಗೆ ಹಿಂಬಾಲಿಸಬೇಕು. (೮೭). ಗುರುವನ್ನು ಮನೆಗೆ ಕರೆತಂದು ಅನಂತರ ಆತನ ಎರಡು ಪಾದಗಳನ್ನು ತೊಳೆದು ತನ್ನ ಜನರೊಂದಿಗೆ ಆ ಪಾದೋದಕದಿಂದ ತಲೆಯ ಮೇಲೆ ಪ್ರೋಕ್ಷಣೆ ಮಾಡಿಕೊಂಡು, ಅನಂತರ ಹಸ್ತಾವಲಂಬನೆಯನ್ನು ನೀಡಿ ಮನೆಯೊಳಗೆ ಕರೆದೊಯ್ದು, ಆತನಿಗಾಗಿ ಶ್ರೇಷ್ಠವಾದ ಆಸನವನ್ನು ಸಜ್ಜುಗೊಳಿಸಿ, ಪ್ರೀತಿ ಪೂರ್ವಕವಾಗಿ ಕುಳ್ಳಿರಿಸಿ, ಶಾಶ್ವತನಾದ ಗುರುದೇವನನ್ನು ವಿಧಿಗೆ ಅನುಸಾರವಾಗಿ ಪೂಜಿಸಬೇಕು. (೮೮-೮೯). ಗುರುವಿನ ಪೂಜೆಯ ಸಮಯದಲ್ಲಿ ಜ್ಞಾನಿಯಾದ ಶಿಷ್ಯನು ದಿನವೂ ತನ್ನ ಶಕ್ತಿಗನು ಸಾರವಾಗಿ ನೂರಾ ಎಂಟು ಅಥವಾ ಮೂವತ್ತಾರು ದೀಪಗಳನ್ನು ಹಚ್ಚಬೇಕು. ತ್ರಯೋದಶಿ ಮುಂತಾದ ದಿನಗಳಲ್ಲಿ ಭವ್ಯವಾದ ಮಂಟಪದಲ್ಲಿ ಗುರುವನ್ನು ಪೂಜಿಸಬೇಕು. (೯೦). ಗುರುವಿನಿಂದ ಯಾವುದು ಪೂರ್ವದಲ್ಲಿ ಹೇಳಲ್ಪಟ್ಟಿದೆಯೋ ಸಾಧ್ಯವಾದುದೋ ಅಸಾಧ್ಯವಾದುದೋ ಯಾವುದಾದರೂ ಆಗಲಿ ಅದನ್ನು ಪವಿತ್ರಾತ್ಮನಾದ ಶಿಷ್ಯನು ಪ್ರಾಣಕೊಟ್ಟಾಗಲಿ ಹಣದಿಂದಾಗಲಿ ಮಾಡಿಯೇ ತೀರುತ್ತಾನೆ. ಆ ಶಿಷ್ಯನು ಶರೀರಾದಿಗಳ ಸೇವೆಯನ್ನೆಲ್ಲಾ ಗುರುವಿಗೆ ಅರ್ಪಿಸಬೇಕು. (೯೧). ದೃಢವ್ರತ ಶಾಲಿಯಾದ ಶಿಷ್ಯನು ತನ್ನ ಪತ್ನಿಯೊಂದಿಗೆ ಐದು, ಹತ್ತು ಅಥವಾ ನೂರು ಜನ ಮಾಹೇಶ್ವರರನ್ನು ಅವರ ಪತ್ನಿಯರೊಂದಿಗೆ ಭೋಜನ, ದಕ್ಷಿಣೆ ಮುಂತಾದವು ಗಳೊಂದಿಗೆ ಸತ್ಕರಿಸಬೇಕು. ಗುರುವಿಗೆ ಮೊದಲು ತಯಾರಿಸಿದ ಅಡಿಗೆಯನ್ನು ಮೊದಲು ನೈವೇದ್ಯಮಾಡಿ, ಅವನ ಅನುಮತಿಯನ್ನು ಪಡೆದು ಶಿಷ್ಯನು ಊಟ ಮಾಡಬೇಕು. (೯೨). ಹಣದ ರೂಪದ ಕಾಣಿಕೆಗಳಿಂದ, ಪಾದುಕೆಗಳು ಮುಂತಾದವುಗಳಿಂದ, ಪಾದ ಸಂವಹನ ಮುಂತಾದವುಗಳಿಂದ, ಸ್ನಾನ, ಅಭ್ಯಂಗ ಸ್ನಾನ, ನೈವೇದ್ಯ ಭೋಜನಗಳಿಂದ (ಶಿಷ್ಯನು ಗುರುವನ್ನು) ಪೂಜಿಸಬೇಕು. (೯೩).

ಗುರುಪ್ರಸಾದಗ್ರಹಣಮ್

ಗುರುಪೂಜೈವ ಪೂಜಾ ಸ್ಯಾಚ್ಛಿವಸ್ಯ ಪರಮಾತ್ಮನಃ।
ಗುರುಶೇಷಂ ತು ತತ್ಸರ್ವಮಾತ್ಮಶುದ್ಧಿಕರಂ ಭವೇತ್ ॥ ೯೪ ॥

ತಸ್ಮಾದ್ ಗುರುಮುಖಾತ್ ಕರ್ಮ ಜ್ಞಾನಂ ಚಾಪಿ ವಿಶೇಷತಃ।
ಜ್ಞಾತ್ವಾ ಕರ್ತವ್ಯಮಖಿಲಂ ಭೋಗಮೋಕ್ಷಫಲಬ್ಧಯೇ ॥ ೯೫ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಪ್ರಸಾದಪಾತ್ರಂ ಯಃ ಸ ಹಿ ಮೋಕ್ಷಾಯ ಕಲ್ಪತೇ।
ನ ಮುಕ್ತಿ ಮೂಲಮನ್ಯದ್ಧಿ ವಿಹಾಯ ಗುರುಸತ್ಕೃಪಾಮ್ ॥ ೯೬ ॥

ಗುರುರೂಪಂ ಸುರಾಚಾರ್ಯ ಲೋಕಾನುಗ್ರಹಕಾಂಕ್ಷಯಾ।
ಆದ್ಯಮಾವರಣಂ ಪ್ರೋಕ್ತಂ ಕಿಮತಃ ಶ್ರೋತುಮಿಚ್ಛಸಿ ॥ ೯೭ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರಬೃಹಸ್ಪತಿಸಂವಾದೇ ಶಿವಶಾಸನೇ ಕ್ರಿಯಾಪಾದೇ ಗುರುಸ್ವರೂಪನಿರೂಪಣಂ ನಾಮ ದ್ವಿತೀಯಃ ಪಟಲಃ ॥ ೨ ॥

ಗುರುಪ್ರಸಾದವನ್ನು ಸ್ವೀಕರಿಸುವುದು

ಗುರುಪೂಜೆಯೇ ಪರಮಾತ್ಮ ಪರಶಿವನ ಪೂಜೆ. ಗುರುಪ್ರಸಾದವು ಎಲ್ಲವೂ ಆತ್ಮಶುದ್ಧಿಯನ್ನುಂಟು ಮಾಡುವುದು. (೯೪). ಆದ್ದರಿಂದ ಗುರುಮುಖದಿಂದ ಕರ್ಮ, ಜ್ಞಾನಗಳ ವಿಷಯವನ್ನು ವಿಶೇಷವಾಗಿ ತಿಳಿದುಕೊಂಡು ಎಲ್ಲವನ್ನೂ ಭೋಗ ಮೋಕ್ಷಗಳ ಸಿದ್ಧಿಗೋಸ್ಕರ ನಿರ್ವಹಿಸಬೇಕು. (೯೫). ಯಾರು ಗುರು ಪ್ರಸಾದಕ್ಕೆ ಯೋಗ್ಯನೋ ಅವನು ಮಾತ್ರ ಮೋಕ್ಷವನ್ನು ಪಡೆಯುತ್ತಾನೆ. ಗುರುಕೃಪೆಯ ಹೊರತಾಗಿ ಬೇರಾವುದೂ ಮುಕ್ತಿಗೆ ಕಾರಣವಲ್ಲ. (೯೬). ದೇವತೆಗಳ ಗುರುವೇ, ಲೋಕಗಳನ್ನು (ಜನರನ್ನು) ಅನುಗ್ರಹಿಸುವ ಇಚ್ಛೆಯಿಂದ ಗುರುರೂಪದ ಆವರಣವನ್ನು ಕುರಿತು ಹೇಳಿದ್ದಾಯಿತು. ಮತ್ತೇನನ್ನು ಕೇಳಲಿಚ್ಛಿಸುವೆ? (೯೭).

ಇಲ್ಲಿಗೆ ಶ್ರೀ ಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ ಅನಂತರುದ್ರ-ಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಕ್ರಿಯಾಪಾದದಲ್ಲಿ ಗುರುಸ್ವರೂನಿರೂಪಣವೆಂಬ ದ್ವಿತೀಯ ಪಟಲವು ಮುಗಿಯಿತು. (೨).

ಟಿಪ್ಪಣಿ : ಸೂಕ್ಷ್ಮಾಗ್ರಮ, ಕ್ರಿ.ಪಾ., ೫.೨೬ರಲ್ಲಿ ಹೇಳಿದಂತೆ ಗುರುವಿನ ಅನುಗ್ರಹವಿಲ್ಲದೆ ಮುಕ್ತಿಯನ್ನು ಪಡೆಯುವುದು ಸಾಧ್ಯವಿಲ್ಲ. ಹಾಗೆ ಗುರುವಿಲ್ಲದೆ ಮುಕ್ತಿಯನ್ನು ಪಡೆಯಲಿಚ್ಛಿಸುವುದೆಂದರೆ ಕುರುಡನು ವಸ್ತುಗಳ ಜ್ಞಾನವನ್ನು ಪಡೆದಂತೆ. "ಅಂಧೋ ಯಥಾರ್ಥಜಾತಂ ಚ ದ್ರಷ್ಟುಂ ಸಮಭಿಕಾಂಕ್ಷತಿ। ಗುರುಂ ವಿನಾ ತಥಾ ಮುಕ್ತಿಂ ಪ್ರಾಪ್ತುಮಿಚ್ಛತಿ ಮೂಢಧೀಃ॥" ಪಾರಮೇಶ್ವರಾಗಮವು ಹೇಳುತ್ತದೆ- "ಮಂತ್ರಮೂಲಂ ಗುರೋರ್ವಾಕ್ಯಂ ಪೂಜಾಮೂಲಂ ಗುರೋಃ ಪದಮ್। ಧ್ಯಾನ ಮೂಲಂ ಗುರೋರ್ಮೂರ್ತಿರ್ಮೋಕ್ಷಮೂಲಂ ಗುರೋಃ ಕೃಪಾ॥" (೧೪.೮೭) "ಶ್ರೀ ಗುರುವಿನ ವಾಕ್ಯ ಎಲ್ಲಾ ಮಂತ್ರಗಳಿಗೆ ಮೂಲ, ಶ್ರೀ ಗುರುವಿನ ಪಾದವು ಎಲ್ಲಾ ಪೂಜೆಗೆ ಮೂಲ (ಆಶ್ರಯ), ಶ್ರೀಗುರುವಿನ ಮೂರ್ತಿಯು ಎಲ್ಲಾ ಧ್ಯಾನಕ್ಕೂ ಮೂಲ ಮತ್ತು ಶ್ರೀ ಗುರುವಿನ ಕೃಪೆಯು ಮೋಕ್ಷಕ್ಕೆ ಮೂಲ (ಆಧಾರ)."

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೃತೀಯಃ ಪಟಲಃ

॥ ಲಿಂಗಸ್ವರೂಪನಿರೂಪಣಮ್॥

ಬೃಹಸ್ಪತಿರುವಾಚ

ಅನಂತಜ್ಞಾನನಿಲಯ ಲೋಕಾನುಗ್ರಹತತ್ಪರ।
ಅನಂತರುದ್ರ ಭಗವನ್ ಧನ್ಯೋ ಭವದನುಗ್ರಹಾತ್ ॥ ೧ ॥

ಅಸೀಮಾನಂ ವರಗುರೋರ್ಭೂಮಾನಂ ಶ್ರೀಮದಾನನಾತ್।
ಶ್ರಾವಂ ಶ್ರಾವಂ ನಿಮಗ್ನೋಽಸ್ಮಿ ನಿರ್ಭರಾನಂದವಾರಿಧೌ ॥ ೨ ॥

ಅಥ ದ್ವಿತಿಯಂ ಶುಶ್ರೂಷುಃ ಶಿವಲಿಂಗಂ ಸುಪಾವನಮ್।
ತಸ್ಯ ರೂಪಂ ಮಹತ್ವಂ ಚ ವದ ಮೇ ಕರುಣಾಕರ ॥ ೩ ॥

ಬೃಹಸ್ಪತಿಯು ಹೇಳಿದನು

ಅನಂತಜ್ಞಾನದ ಆಶ್ರಯನೇ, ಲೋಕಗಳಿಗೆ (ಜನರಿಗೆ), ಅನುಗ್ರಹ ಮಾಡುವುದರಲ್ಲಿ ಮಗ್ನನಾದವನೇ, ಭಗವನ್ ಅನಂತರುದ್ರನೇ, ನಿನ್ನ ಅನುಗ್ರಹದಿಂದ ನಾನು ಧನ್ಯನು. (೧). ನಿನ್ನ ಶ್ರೀಮನ್ಮುಖದಿಂದ ಶ್ರೀಗುರುವಿನ ಎಣೆಯಿಲ್ಲದ ಮಹಿಮೆಯನ್ನು ಕೇಳುತ್ತಾ ಕೇಳುತ್ತಾ ನಾನು ತುಂಬಿದ ಆನಂದ ಸಾಗರದಲ್ಲಿ ಮುಳುಗಿದ್ದೇನೆ. (೨). ತದನಂತರ ಎರಡನೆಯದಾದ ಪರಮ ಪವಿತ್ರವಾದ ಶಿವಲಿಂಗದ ಬಗ್ಗೆ ಕೇಳಲು ಇಚ್ಛಿಸುತ್ತೇನೆ. ದಯಾಸಾಗರನೇ, ಅದರ ಸ್ವರೂಪ ಮತ್ತು ಮಹಿಮೆಯನ್ನು ನನಗೆ ಹೇಳು. (೩).

ಅನಂತರುದ್ರ ಉವಾಚ

ಅಹೋ ನಿಬೋಧಯಿಷ್ಯಾಮಿ ಮಹಾಲಿಂಗಸ್ಯ ವೈಭವಮ್।
ಯಜ್ಜ್ಞಾತ್ವಾ ಮುಚ್ಯತೇ ಜಂತುರಚಿರೇಣ ಬೃಹಸ್ಪತೇ ॥ ೪ ॥

ಅನಂತರುದ್ರನು ಹೇಳಿದನು

ಬೃಹಸ್ಪತಿಯೇ, ನಾನು ಮಹಾಲಿಂಗದ ವೈಭವವನ್ನು ತಿಳಿಯಪಡಿಸುವೆನು. ಯಾವುದನ್ನು ತಿಳಿದುಕೊಂಡರೆ ಜೀವನು ಕೂಡಲೇ ಮುಕ್ತನಾಗುವನೋ ಅದೇ ಆ ವಿಷಯ. (೪).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨. ಲಿಂಗಸ್ವರೂಪಂ ಮಹಿಮಾ ಚ

ಪೂರ್ವಮೇಕಾರ್ಣವೇ ಘೋರೇ ನಷ್ಟೇ ಸ್ಥಾವರಜಂಗಮೇ।
ಮಧ್ಯೇ ಸಮುತ್ಥಿತಂ ಲಿಂಗಮೈಶ್ವರಂ ತೈಜಸಂ ಪರಮ್ ॥ ೫ ॥

ಜ್ವಾಲಾಮಾಲಾವೃತಂ ದಿವ್ಯಮಪ್ರಮೇಯಮನಾಮಯಮ್।
ಕಲ್ಪಾಂತೇ ತತ್ರ ಲೀಯಂತೇ ವರ್ತಂತೇ ಸರ್ವದೇವತಾಃ ॥ ೬ ॥

ಹೃದಯೇ ಚೈವ ಗಾಯತ್ರೀ ಸರ್ವದೇವೋತ್ತಮೋತ್ತಮಾ।
ಲೀಯಂತೇ ಮೂರ್ಧ್ನಿ ವೈ ವೇದಾಃ ಸಷಡಂಗಪದಕ್ರಮಾಃ ॥ ೭ ॥

ಜಠರೇ ಲೀಯತೇ ಸರ್ವಂ ಜಗತ್ ಸ್ಥಾವರಜಂಗಮಮ್।
ಪುನರುತ್ಪದ್ಯತೇ ಯಸ್ಮಾತ್ ತದ್‌ಬ್ರಹ್ಮ ಲಿಂಗಸಂಜ್ಞಕಮ್ ॥ ೮ ॥

ಅವ್ಯಕ್ತಂ ಲಿಂಗಮಾಖ್ಯಾತಮನಂತಮಜರಂ ಧ್ರುವಮ್।
ಗುಣತ್ರಯಂ ತದೇವೇಶಃ ಸೃಜತ್ಯವತಿ ಹಂತಿ ಚ ॥ ೯ ॥

ಲಿಂಗದ ಸ್ವರೂಪ ಮತ್ತು ಮಹಿಮೆ

ಪೂರ್ವಕಾಲದಲ್ಲಿ ಏಕಮಾತ್ರ ಘೋರವಾದ ಸಮುದ್ರ ಜಲವಿದ್ದಾಗ, ಚರಾಚರಗಳೆಲ್ಲಾ ನಷ್ಟವಾದಾಗ, ಆ ಸಮುದ್ರ ಮಧ್ಯದಿಂದ ಪರಮೇಶ್ವರನ ಪರಮ ತೇಜೋಮಯ ಲಿಂಗವು ಪ್ರಕಟವಾಯಿತು. (೫). ಅದು ಜ್ವಾಲೆಗಳ ಮಾಲೆಗಳಿಂದ ಸುತ್ತುವರೆಯಲ್ಪಟ್ಟಿತ್ತು. ಅದು ದಿವ್ಯವೂ, ಅಪ್ರಮೇಯವೂ, ಅನಾಮಯವೂ ಆಗಿತ್ತು. ಕಲ್ಪದ ಸಮಾಪ್ತಿ ಕಾಲದಲ್ಲಿ ಎಲ್ಲಾ ದೇವತೆಗಳು ಅಲ್ಲಿ ಲೀನವಾಗುತ್ತವೆ, ಅದರಲ್ಲಿ ನೆಲೆಸಿರುತ್ತವೆ. (೬). ಆ ಲಿಂಗದ ಹೃದಯದಲ್ಲಿ ಎಲ್ಲಾ ದೇವತೆಗಳ ಮಧ್ಯೆ ಶ್ರೇಷ್ಠಳಾದ ಗಾಯತ್ರಿಯಿರುವಳು. ಅದರ ಶಿರಸ್ಸಿನಲ್ಲಿ ಆರು ಅಂಗಗಳು ಮತ್ತು ಪದ, ಕ್ರಮ ಮುಂತಾದ ಪಾಠಗಳೊಂದಿಗೆ ವೇದಗಳು ಲೀನವಾಗಿವೆ (೭) ಅದರ ಜಠರದಲ್ಲಿ (ಮಧ್ಯದಲ್ಲಿ) ಚರಾಚರಾತ್ಮಕವಾದ ಸರ್ವ ಜಗತ್ತು ಲೀನವಾಗಿದೆ ಮತ್ತು ಅದರಿಂದಲೇ ಮತ್ತೆ ಉತ್ಪನ್ನವಾಗುತ್ತದೆ. ಆದ್ದರಿಂದ ಅದೇ ಲಿಂಗಸಂಜ್ಞಕ ಬ್ರಹ್ಮವು. (೮). ಈ ಲಿಂಗವನ್ನೇ ಅವ್ಯಕ್ತವೆಂದು ಕರೆಯಲಾಗುತ್ತದೆ. ಅದೇ ಅನಂತ, ಅಜರ ಮತ್ತು ಅವಿಕಾರ. ಅದೇ ಲಿಂಗರೂಪಿ. ಈಶ್ವರನು ಮೂರು ಗುಣಗಳನ್ನು (ಗುಣತ್ರಯಾತ್ಮಕ ಜಗತ್ತನ್ನು) ಸೃಷ್ಟಿಸುತ್ತಾನೆ, ರಕ್ಷಿಸುತ್ತಾನೆ ಮತ್ತು ಸಂಹರಿಸುತ್ತಾನೆ. (೯).

ಟಿಪ್ಪಣಿ : ಅಪ್ರಮೇಯಮ್, ಅನಾಮಯಮ್ = ಅಪ್ರಮೇಯ ಎಂದರೆ ಪ್ರಮಾಣಕ್ಕೆ ನಿಲುಕದೆ ಇರುವುದು, ಅಳತೆಗೆ ನಿಲುಕದಿರುವುದು; ಅನಾಮಯ ಎಂದರೆ ಎಲ್ಲಾ ಪ್ರಕಾರದ ವ್ಯಾಧಿಗಳಿಂದ ನಿರ್ಮುಕ್ತ. ಕಲ್ಪಾಂತ ಎಂದರೆ ವಿಶ್ವದ ನಾಶ. ಕಲ್ಪ ಎಂದರೆ ಬ್ರಹ್ಮನ ಒಂದು ದಿನ, ಮನುಷ್ಯರ ೧೦೦೦ ಯುಗಗಳು ಅಂದರೆ ೪೩೨೦೦೦೦೦೦ ವರ್ಷಗಳು. ಅಂತಹ ಕಲ್ಪದ ಕೊನೆಯಲ್ಲಿ ಪ್ರಪಂಚದ ಸಂಹಾರವಾಗುತ್ತದೆ, ಅಂದರೆ ಲಿಂಗದಲ್ಲಿ (ಬ್ರಹ್ಮದಲ್ಲಿ) ಲೀನವಾಗುತ್ತದೆ. ಅದನ್ನೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲನೆಯ ಶ್ಲೋಕದಲ್ಲಿ ಹೇಳಿದೆ. ಇದು ಲಿಂಗ ಶಬ್ದದ ನಿಷ್ಪತ್ತಿಗೆ ಅನುಗುಣವಾಗಿದೆ: "ಲಿಕಾರೋ ಲಯಬುದ್ಧಿಸ್ಥೋ ಬಿಂದುನಾ ಸ್ಥಿತಿರುಚ್ಯತೇ। ಗಕಾರಾತ್ ಸೃಷ್ಟಿರಿತ್ಯುಕ್ತಾ ಲಿಂಗಂ ಸೃಷ್ಟ್ಯಾದಿಕಾರಣಮ್॥ ಲೀನಂ ಪ್ರಪಂಚರೂಪಂ ಹಿ ಸರ್ವಮೇತ-ಚ್ಚರಾಚರಮ್। ಸರ್ಗಾದೌ ಗಮ್ಯತೇ ಯಸ್ಮಾತ್ತಲ್ಲಿಂಗಮುದೀರಿತಮ್॥" (ಸೂಕ್ಷ್ಮಾಗಮ, ಕ್ರಿ.ಪಾ., ೬.೫-೬) ಲಿಂಗ ಪದದಲ್ಲಿ ಲಿ, ಸೊನ್ನೆ (ಬಿಂದು=೦) ಮತ್ತು ಗ ಕಾರಗಳು ಇವೆ. ಲಿ ಕಾರವು ಲಯವನ್ನು, ಸೊನ್ನೆಯು (ಬಿಂದುವು) ಸ್ಥಿತಿಯನ್ನು ಮತ್ತು ಗಕಾರವು ಸೃಷ್ಟಿಯನ್ನು ಹೇಳುತ್ತವೆ. ಈ ಎಲ್ಲಾ ಚರಾಚರಾತ್ಮಕವಾದ ಪ್ರಪಂಚದ ಸ್ವರೂಪವು ಯಾವುದರಲ್ಲಿ ಲೀನವಾಗುವುದೋ, ಯಾವುದರಿಂದ ಮತ್ತೆ ಸೃಷ್ಟಿಯ ಆದಿಯಲ್ಲಿ ಅದು (ಪ್ರಪಂಚ) ಹೊಮ್ಮುತ್ತದೆಯೋ ಅದು ಲಿಂಗ. 'ಲೀಯತೇ ಗಮ್ಯತೇ ಇತಿಲಿಂಗಮ್.' ವೇದಾಃ ಷಡಂಗಪದಕ್ರಮಾಃ = ವೇದಗಳು ನಾಲ್ಕು- ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ. ವೇದಾಂಗಗಳು ಆರು (ಷಡಂಗ)- ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಜ್ಯೋತಿಷ ಮತ್ತು ಛಂದಸ್; "ಜಟಾ ಮಾಲಾ ಶಿಖಾ ರೇಖಾ ಧ್ವಜೋ ದಂಡೋ ರಥೋ ಘನಃ। ಅಷ್ಟೌ ವಿಕೃತಯಃ ಪ್ರೋಕ್ತಾಃ ಕ್ರಮಪೂರ್ವಾ ಮಹರ್ಷಿಭಿಃ॥" ಹೀಗೆ ವೇದದ ಎಂಟು ವಿಕೃತಿಗಳನ್ನು ಹೇಳಿದ್ದಾರೆ. ವೇದಗಳ ಪ್ರತಿಯೊಂದು ಪದ ಮತ್ತು ಪದಗಳ ಕ್ರಮವನ್ನು ಸುರಕ್ಷಿತವಾಗಿ ಇಡಲು ವೇದ ಪಾಠದ ವಿಭಿನ್ನ ಪದ್ಧತಿಗಳಿವೆ. ಇವುಗಳನ್ನು ತಿಳಿದ ವೇದಪಾಠಿಗೆ ಘನಾಂತಪಾಠೀ ಎಂಬ ಶಬ್ದ ಈಗಲೂ ಪ್ರಚಲಿತವಾಗಿದೆ. ಈ ಪಾಠಗಳ ವಿಕೃತಿಗಳ ಉದಾಹರಣ ಸಹಿತ ಪರಿಚಯವನ್ನು ಹೊಂದಲು ಸಾತವಲೇಕರ ಅವರ ಋಗ್ವೇದ ಆವೃತ್ತಿ ಪು.೭೯೨-೮೦೮ ನೋಡಿರಿ. ಇದಕ್ಕೆ ಸಂವಾದಿಯಾದ ವಿಚಾರಕ್ಕೆ ಸೂಕ್ಷ್ಮಾಗಮ, ಕ್ರಿ.ಪಾ. ೬-೧೩-೧೫ನ್ನು ನೋಡಿರಿ.

ಶಿವಲಿಂಗಂ ಚತುರ್ವಿಧಮ್

ತದೇವ ಶಿವಲಿಂಗಂ ಹಿ ತಲ್ಲಿಂಗಂ ತು ಚತುರ್ವಿಧಮ್।
ಪರಬಿಂದುಃ ಪರೋ ನಾದಶ್ಚಾಪರೋ ಬಿಂದುನಾದಕೌ॥
ಉಪರ್ಯಧೋಭಾಗನಿಷ್ಠಾಶ್ಚತ್ವಾರೋಽಪಿ ಸುರಾರ್ಚಿತ ॥ ೧೦ ॥
ಅಧಃ ಸ್ಯಾದಪರೋ ಬಿಂದುಸ್ತದೂರ್ಧ್ವಮಪರೋ ಧ್ವನಿಃ।
ತದೂರ್ಧ್ವಂ ಪರಬಿಂದುಃ ಸ್ಯಾತ್ ಪರನಾದಸ್ತದೂರ್ಧ್ವಗಃ ॥ ೧೧ ॥
ಪ್ರಣವೋ ವೇದಿರಸ್ಯಾಯಂ ನಾದೋ ಲಿಂಗಾಕೃತಿರ್ಮುಖೇ।
ಬಿಂದುನಾದಮಯೇ ಲಿಂಗೇ ನಿತ್ಯಂ ಸನ್ನಿಹಿತಃ ಶಿವಃ ॥ ೧೨ ॥

ಶಿವಲಿಂಗವು ನಾಲ್ಕು ವಿಧ

ಅದೇ ಪರಬ್ರಹ್ಮಲಿಂಗವೇ ಶಿವಲಿಂಗ. ಅದರ ನಾಲ್ಕು ಭೇದಗಳಿವೆ. ಅವುಗಳ ಹೆಸರು ಪರಬಿಂದು, ಪರನಾದ, ಅಪರಬಿಂದು ಮತ್ತು ಅಪರನಾದ. ದೇವತೆಗಳಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜಿಸಲ್ಪಡುವ ಬೃಹಸ್ಪತಿಯೇ, ಆ ನಾಲ್ಕರ ಸ್ಥಿತಿಯು ಮೇಲೆ ಮತ್ತು ಕೆಳಗಿನ ಭಾಗಗಳಿಗೆ ಸಂಬಂಧಿಸಿದಂತೆ. (೧೦). ಎಲ್ಲದಕ್ಕಿಂತ ಕೆಳಗಿನ ಭಾಗ ಅಪರ ಬಿಂದು, ಅದರ ಮೇಲೆ ಅಪರನಾದ, ಅದಕ್ಕೂ ಮೇಲೆ ಪರಬಿಂದು ಮತ್ತು ಎಲ್ಲಕ್ಕೂ ಮೇಲೆ ಪರನಾದ. (೧೧). ಪ್ರಣವ ಅಥವಾ ಓಂಕಾರವು ವೇದಿಕೆ, ಅದರಲ್ಲಿ ನಾದಾತ್ಮಕ ಲಿಂಗದ ಮುಖವುಳ್ಳ ಆಕೃತಿ ಇದೆ. ಬಿಂದು-ನಾದಮಯವಾದ ಲಿಂಗದಲ್ಲಿ ನಿತ್ಯವೂ ಶಿವನು ನೆಲೆಸಿರುವನು. (೧೨).

ಟಿಪ್ಪಣಿ : ಜಗತ್ತಿನ ಸೃಷ್ಟಿಗೆ ಸಂಬಂಧಸಿದಂತೆ 'ಬಿಂದು'ವೆಂದರೆ ಜಗತ್ತಿನ ಸೃಷ್ಟಿಗೆ ಉಪಾದಾನಕಾರಣ. 'ಪರಬಿಂದು'ವೆಂದರೆ ಶುದ್ಧಸೃಷ್ಟಿಗೆ ಉಪಾದಾನ ಕಾರಣ. 'ಅಪರ ಬಿಂದು' ವೆಂದರೆ ಅಶುದ್ಧ ಸೃಷ್ಟಿಯೆಂದು ಕರೆಯಲಾಗುವ ಇತರ ಜಗತ್ತಿನ ಸೃಷ್ಟಿಗೆ ಉಪಾದಾನ ಕಾರಣ. ಎರಡೂ ಕೂಡ ಪರಮಾತ್ಮನ ಶಕ್ತಿಯ ರೂಪಗಳೇ. ಪರಮಾಯಾ ಶಕ್ತಿಯು 'ಪರಬಿಂದು'. ಅದರ ಪರಿಣಾಮಗಳೇ ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ ಎಂಬ ತತ್ತ್ವಗಳು. 'ಅಪರಬಿಂದು'ವೆಂದರೆ ತ್ರಿಗುಣಾತ್ಮಕವಾದ ಪ್ರಕೃತಿ ಶಕ್ತಿರೂಪದ ಉಪಾದಾನ ಕಾರಣ. 'ನಾದ'ವೆಂದರೆ ಜ್ಞಾನ ಶಕ್ತಿ. ಶುದ್ಧ ಸೃಷ್ಟಿಯಲ್ಲಿ ಅದು ಶುದ್ಧ ವಿದ್ಯಾರೂಪದಲ್ಲಿದೆ. ಅದಕ್ಕೆ 'ಪರನಾದ'ವೆಂದು ಹೆಸರು. ಪರಿಮಿತ ಜ್ಞಾನಶಕ್ತಿಯಾಗಿ ಜೀವಾತ್ಮನಲ್ಲಿರುವುದು 'ಅಪರನಾದ'. ಮೂಲತಃ ಅಪರಬಿಂದು, ಅಪರನಾದ, ಪರಬಿಂದು ಮತ್ತು ಪರನಾದಗಳು ಕ್ರಮವಾಗಿ ಕೆಳಗಿನಿಂದ ಮೇಲಕ್ಕೆ ಶಿವಲಿಂಗದ (ಪರಬ್ರಹ್ಮಲಿಂಗದ, ಮಹಾಲಿಂಗದ) ನಾಲ್ಕು ಭಾಗಗಳಾಗಿವೆ. 'ಬಿಂದು'ವನ್ನೆ ಮುಂದೆ ಪ್ರಣವ (ಓಂಕಾರ) ರೂಪದ ಲಿಂಗ ಪೀಠಿಕೆ (ವೇದಿ)ಯಾಗಿ ವರ್ಣಿಸಲಾಗಿದೆ. ಮೇಲಿನ ಲಿಂಗಾಕೃತಿಯೇ 'ನಾದ'. ಹೀಗೆ ಬಿಂದು-ನಾದಗಳ ಸಮಾವೇಶವೇ ಲಿಂಗ. ಅದರಲ್ಲಿ ಸದಾಶಿವನು ಸದಾ ಸನ್ನಿಹಿತನು. ಅಂದರೇ ಅದೇ ಪರಶಿವನು. ಶಿವನು ಅದರಲ್ಲಿ ಇರುತ್ತಾನೆ ಎಂಬುದು ಕೇವಲ ಔಪಚಾರಿಕ ಪ್ರಯೋಗ. ಇದನ್ನೇ ಸೂಕ್ಷ್ಮಾಗ್ರಮವು ಹೀಗೆ ಹೇಳುತ್ತದೆ : "ನಾದ ರೂಪಃ ಶಿವಃ ಸಾಕ್ಷಾತ್ ಲಿಂಗಮಿತ್ಯಭಿಧೀಯತೇ। ತತ್ಪೀಠಿಕಾ ಮಹಾಶಕ್ತಿಃ ಸಾ ಚ ವೈ ಬಿಂದುರೂಪಿಣೀ॥" (ಕ್ರಿ.ಪಾ. ೭.೩).

ಬಿಂದುನಾದಾತ್ಮಕಂ ಜಗತ್

ಬಿಂದುನಾದಾತ್ಮಕಂ ಸರ್ವಂ ಜಗತ್ ಸ್ಥಾವರಜಂಗಮಮ್।
ಬಿಂದುಃ ಶಕ್ತಿಃ ಶಿವೋ ನಾದಃ ಶಿವಶಕ್ತ್ಯಾತ್ಮಕಂ ಜಗತ್ ॥ ೧೩ ॥

ನಾದಾಧಾರಮಯಂ ಬಿಂದುರ್ಬಿಂದ್ವಾಧಾರಮಿದಂ ಜಗತ್।
ಜಗದಾಧಾರಭೂತೌ ಹಿ ಬಿಂದುನಾದೌ ವ್ಯವಸ್ಥಿತೌ ॥ ೧೪ ॥

ಬಿಂದುನಾದಯುತಂ ಸರ್ವಂ ಸಕಲೀಕರಣಂ ಭವೇತ್।
ಸಕಲೀಕರಣಾಚ್ಛಿನ್ನ ಜಗತ್ ಪ್ರಾಪ್ನೋತ್ಯಸಂಶಯಮ್ ॥ ೧೫ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಗತ್ತು ಬಿಂದುನಾದಾತ್ಮಕ

ಈ ಎಲ್ಲಾ ಸ್ಥಾವರ-ಜಂಗಮಾತ್ಮಕ ಜಗತ್ತು ಬಿಂದುನಾದಾತ್ಮಕವಾಗಿದೆ. ಇಲ್ಲಿ ಶಕ್ತಿಯೇ ಬಿಂದು ಮತ್ತು ಶಿವನೇ ನಾದವು. ಹೀಗೆ ಜಗತ್ತು ಶಿವ-ಶಕ್ತ್ಯಾತ್ಮಕವಾದುದು. (೧೩). ಬಿಂದುವು ನಾದವನ್ನು ಆಧರಿಸಿದೆ ಮತ್ತು ಜಗತ್ತು ಬಿಂದುವನ್ನು ಆಧರಿಸಿದೆ. ಹೀಗೆ ಬಿಂದು-ನಾದಗಳು ಜಗತ್ತಿನ ಆಧಾರಭೂತವಾಗಿ ವ್ಯವಸ್ಥಿತವಾಗಿವೆ. (೧೪). ಬಿಂದು-ನಾದಗಳ ಸಹಾಯದಿಂದ ಸಕಲೀಕರಣವಾಗುತ್ತದೆ. ಸಕಲೀಕರಣದ ಪ್ರಕ್ರಿಯೆಯಿಂದ ಜಗತ್ತಿನ ಉತ್ಪತ್ತಿಯಾಗುತ್ತದೆ. ಈ ವಿಷಯದಲ್ಲಿ ಸಂದೇಹವಿಲ್ಲ. (೧೫).

ಟಿಪ್ಪಣಿ : 'ಸಕಲೀಕರಣ'ವೆಂದರೆ ಬೇರೆ ಬೇರೆ ಮಂತ್ರಗಳ ಮೂಲಕ ಸಾಧಕನು ತನ್ನ ದೇಹವನ್ನು ವಿದ್ಯಾಮಯವಾಗಿ ಮಾಡಿಕೊಳ್ಳುವುದು. ಸಕಲೀಕರಣದ ಸ್ವರೂಪ ಹೀಗಿದೆ: "ಹೃದಯಾದಿಕರಾಂತೇಷು ಕನಿಷ್ಠಾದ್ಯಂಗುಲೀಷು ಚ। ಹೃದಾದಿ ಮಂತ್ರವಿನ್ಯಾಸಃ ಸಕಲೀಕರಣಂ ಮತಮ್॥" (ಸೋಮಶಂಭು ಪದ್ಧತಿ, ಶ್ಲೋಕ ೧೪೫). ಹೃದಯದಿಂದ ಕರದವರೆಗೆ ಮತ್ತು ಕನಿಷ್ಠ ಬೆರಳಿನಿಂದ ಎಲ್ಲಾ ಬೆರಳುಗಳಲ್ಲಿ ಹೃದಯಾದಿ ಮಂತ್ರಗಳ ವಿನ್ಯಾಸಕ್ಕೆ ಸಕಲೀಕರಣವೆಂದು ಹೆಸರು. ಅಂಗನ್ಯಾಸ, ದೇಹನ್ಯಾಸ, ಕರನ್ಯಾಸಗಳ ಮೂಲಕ ಈ ಸಕಲೀಕರಣ ಪ್ರಕ್ರಿಯೆ ನಡೆಯುತ್ತದೆ. ಇದೇ ಪ್ರಕ್ರಿಯೆಯು ಜಗತ್ತಿನ ಹುಟ್ಟಿಗೆ ಮೂಲವಾಗಿದೆ. ವಿಶ್ವ ಸೃಷ್ಟಿಯಲ್ಲಿ ನಾದ-ಬಿಂದುಗಳ ಸಮಾವೇಶದಿಂದ ಈ ಪ್ರಕ್ರಿಯೆ ನಡೆದು ಪ್ರಪಂಚದ ಉತ್ಪತ್ತಿಯಾಗಿದೆ.

ಬಿಂದುನಾದಾತ್ಮಕಂ ಲಿಂಗಂ ಜಗತ್ಕಾರಣಮ್

ಬಿಂದುನಾದಾತ್ಮಕಂ ಲಿಂಗಂ ಜಗತ್ಕಾರಣಮುಚ್ಯತೇ।
ತಸ್ಮಾಜ್ಜನ್ಮನಿವೃತ್ತ್ಯರ್ಥಂ ಶಿವಲಿಂಗಂ ಪ್ರಪೂಜಯೇತ್ ॥ ೧೬ ॥
ಮಾತಾ ದೇವೀ ಬಿಂದು ರೂಪಾ ನಾದರೂಪಃ ಶಿವಃ ಪಿತಾ।
ಪಿತೃಭ್ಯಾಂ ದತ್ತಮೈಶ್ವರ್ಯಂ ಯಥಾ ಭೋಗಾಯ ಕಲ್ಪತೇ॥
ತಯೋರೈಶ್ವರ್ಯಲಾಭಾರ್ಥಂ ಶಿವಲಿಂಗಂ ಪ್ರಪೂಜಯೇತ್ ॥ ೧೭ ॥

ಬಿಂದು-ನಾದಾತ್ಮಕವಾದ ಲಿಂಗವೇ ಜಗತ್ತಿಗೆ ಕಾರಣ

ಬಿಂದು-ನಾದಾತ್ಮಕವಾದ ಲಿಂಗವೇ ಜಗತ್ಕಾರಣವೆಂದು ಹೇಳಲ್ಪಡುತ್ತದೆ. ಆದ್ದರಿಂದ ಜನ್ಮದಿಂದ ಮುಕ್ತನಾಗುವುದಕ್ಕಾಗಿ ಶಿವಲಿಂಗವನ್ನು ಪೂಜಿಸಬೇಕು. (೧೬). ಬಿಂದು ರೂಪಳಾದ ದೇವಿ ಪಾರ್ವತಿಯು ಮಾತೃ ಮತ್ತು ನಾದಸ್ವರೂಪಿಯಾದ ಶಿವನು ಪಿತೃ. ಮಾತಾಪಿತೃಗಳಿಂದ ಕೊಡಲ್ಪಟ್ಟ ಸಂಪತ್ತು ಹೇಗೆ ಭೋಗಕ್ಕೆ ಯೋಗ್ಯವೋ ಹಾಗೆ ಅವರ ಐಶ್ವರ್ಯದ ಪ್ರಾಪ್ತಿಗಾಗಿ ಶಿವಲಿಂಗವನ್ನು ಪೂಜಿಸಬೇಕು. (೧೭).

ಟಿಪ್ಪಣಿ : ಇದೊಂದು ವಿಶಿಷ್ಟವಾದ ಪರಿಕಲ್ಪನೆ. ಜಗತ್ತಿನ ತಾಯಿ-ತಂದೆಯರಾದ ಶಕ್ತಿ-ಶಿವರ ಸ್ವರೂಪವೇ ಲಿಂಗ. ಅದೇ ಜಗದ್ರೂಪದಲ್ಲಿ ಅಭಿವ್ಯಕ್ತವಾಗಿದೆ. ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಿಕಲ್ಪನೆಯನ್ನು ಅನುಸರಿಸಿ ಶ್ರೀಸಿದ್ಧಾಂತಶಿಖಾಮಣಿಯು ಹೀಗೆ ಹೇಳುತ್ತದೆ: "ಪೀಠಿಕಾ ಪರಮಾ ಶಕ್ತಿರ್ಲಿಂಗಂ ಸಾಕ್ಷಾತ್ ಪರಃ ಶಿವಃ। ಶಿವಶಕ್ತಿಸಮಾಯೋಗಂ ವಿಶ್ವಂ ಲಿಂಗಂ ತದುಚ್ಯತೇ॥" (೧೧.೩೨). ಹಿಂದೆ ೧೦-೧೨ ಶ್ಲೋಕಗಳ ಕೆಳಗಿನ ಟಿಪ್ಪಣಿಯಲ್ಲಿ ಉಲ್ಲೇಖಿಸಿದ ಸೂಕ್ಷ್ಮಾಗಮ, ಕ್ರಿ.ಪಾ., ೬.೩ರೊಂದಿಗೆ ಇದು ಸಂವಾದಿಯಾಗಿದೆ.

ಮಾತಾಪಿತೃ ರೂಪಂ ಶಿವಲಿಂಗಮ್

ಸಾ ದೇವೀ ಜಗತಾಂ ಮಾತಾ ಸ ಶಿವೋ ಜಗತಃ ಪಿತಾ।
ಪಿತ್ರೋಃ ಶುಶ್ರೂಷಕೇ ನಿತ್ಯಂ ಕೃಪಾಧಿಕ್ಯಂ ಹಿ ವರ್ಧತೇ॥
ಕೃಪಯಾಽನ್ತರ್ಗತೈಶ್ವರ್ಯಂ ಪೂಜಕಸ್ಯ ದದಾತಿ ಹಿ ॥ ೧೮ ॥
ತಸ್ಮಾದಂತರ್ಗತಾನಂದಲಾಭಾರ್ಥಂ ಮುನಿಪುಂಗವ।
ಪಿತೃಮಾತೃಸ್ವರೂಪಂ ಹಿ ಶಿವಲಿಂಗಂ ಪ್ರಪೂಜಯೇತ್ ॥ ೧೯ ॥

ಮಾತಾಪಿತೃ ಸ್ವರೂಪವೇ ಶಿವಲಿಂಗ

ಆ ದೇವಿಯು (ಶಕ್ತಿಯು) ಜಗತ್ತುಗಳ ಮಾತೃ ಮತ್ತು ಆ ಶಿವನು ಜಗತ್ತಿನ ಪಿತೃ. ಮಾತಾಪಿತೃಗಳ ಸೇವೆ ಮಾಡುವವನ ವಿಷಯದಲ್ಲಿ ಸದಾಕಾಲ ಕೃಪಾಧಿಕ್ಯವು ಮತ್ತಷ್ಟು ಹೆಚ್ಚಾಗುತ್ತದೆ. ಆ ಕೃಪೆಯೊಂದಿಗೇ ಕೂಡಿಕೊಂಡ ಐಶ್ವರ್ಯವನ್ನು ಲಿಂಗವು ಪೂಜಕನಿಗೆ ಅನುಗ್ರಹಿಸುತ್ತದೆ. (೧೮). ಆದ್ದರಿಂದ ಮುನಿಪುಂಗವನೇ, ಆಂತರಿಕವಾದ ಆನಂದವನ್ನು ಪಡೆಯಲು ಮಾತಾಪಿತೃ ಸ್ವರೂಪದ ಶಿವಲಿಂಗವನ್ನು ಪೂಜಿಸಬೇಕು. (೧೯).

ಟಿಪ್ಪಣಿ : ಜಗತ್ತಿನ ತಂದೆ-ತಾಯಿಗಳಾದ ಶಿವ-ಶಕ್ತಿಯರ ಸ್ವರೂಪವಾದ ಶಿವಲಿಂಗವನ್ನು ಪೂಜಿಸಿದರೆ ಮುಕ್ತಿ ದೊರೆಯುತ್ತದೆ.

ಮಹಾಲಿಂಗಸ್ವರೂಪಮ್

ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಮ್।
ಪ್ರತ್ಯಸ್ತಮಿತಭೇದಂ ಯತ್ ಸತ್ತಾಮಾತ್ರಮಗೋಚರಮ್ ॥ ೨೦ ॥
ಋತಂ ಸತ್ಯಂ ಪರಂ ಬ್ರಹ್ಮ ಸಚ್ಚಿದಾನಂದಲಕ್ಷಣಮ್।
ಅನನ್ಯಪರಮಂ ಬ್ರಹ್ಮ ತದತೋ ಧ್ಯೇಯಮಾಸ್ತಿಕೈಃ ॥ ೨೧ ॥
ತತಃ ಸರ್ವಂ ಪರಿತ್ಯಜ್ಯ ಮಹಾಲಿಂಗೈಕತತ್ಪರಃ।
ನಿರ್ಮಮೋ ನಿರಹಂಕಾರಸ್ತದ್ಧ್ಯಾನನಿರತೋ ಭವೇತ್ ॥ ೨೨ ॥

ಯಾವುದು ನಿಷ್ಕಲ, ನಿಷ್ಕ್ರಿಯ, ಶಾಂತ, ಅನಿಂದ್ಯ, ನಿರಂಜನ ಸ್ವರೂಪವೋ, ಯಾವುದರಲ್ಲಿ ಎಲ್ಲಾ ಭೇದಗಳು ಸಮಾಪ್ತವಾಗುವುವೋ, ಯಾವುದು ಸತ್ತಾಮಾತ್ರ ಪ್ರತೀಯುಳ್ಳದ್ದೋ, ಯಾವುದು ಮಾತುಗಳಿಗೆ ಅತೀತವಾದುದೋ ಮತ್ತು ಯಾವುದು ಕೇವಲ ಆತ್ಮಸಂವೇದ್ಯವೋ (ಸ್ವಸಾಕ್ಷಾತ್ಕಾರದ ವಿಷಯವೋ) ಅದು ಮಹಾಲಿಂಗವೆಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರೆಯಲ್ಪಡುತ್ತದೆ. (೨೦). ಆ ಪರಬ್ರಹ್ಮವು ಋತವೂ ಸತ್ಯವೂ ಆಗಿದೆ, ಸತ್, ಚಿತ್, ಆನಂದಗಳ ಸ್ವರೂಪ. ಆ ಬ್ರಹ್ಮಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ. ಆದ್ದರಿಂದ ಆಸ್ತಿಕರು ಅದನ್ನು ಧ್ಯಾನಿಸಬೇಕು. (೨೧). ಆದ್ದರಿಂದ ಎಲ್ಲವನ್ನೂ ಬಿಟ್ಟು ಮಹಾಲಿಂಗದಲ್ಲೇ ಮಗ್ನನಾಗಿರುವವನು ಮಮಕಾರರಹಿತನೂ ಅಹಂಕಾರರಹಿತನೂ ಆಗಿ ಅದರ ಧ್ಯಾನದಲ್ಲಿ ನಿರತನಾಗಬೇಕು. (೨೨).

ಟಿಪ್ಪಣಿ : ನಿಷ್ಕಲ ಎಂದರೆ ಭಾಗರಹಿತ, ಅಖಂಡ; ನಿಷ್ಕ್ರಿಯ ಎಂದರೆ ಯಾವುದೇ ಕ್ರಿಯೆ ಇಲ್ಲದುದು; ಶಾಂತ ಎಂದರೆ ರಾಗ-ದ್ವೇಷಾದಿಗಳಿಲ್ಲದುದು; ನಿರವದ್ಯ ಎಂದರೆ ಯಾವುದೇ ನಿಂದನೀಯ ಅಂಶಗಳಿಲ್ಲದುದು; ಭೇದರಹಿತವಾದುದು. ನಿಷ್ಕಲತ್ವ, ನಿಷ್ಕ್ರಿಯತ್ವ, ಶಾಂತತ್ವ, ನಿರವದ್ಯತ್ವ, ನಿರಂಜನತ್ವಗಳು ಆ ಮಹಾಲಿಂಗದ ಮೂಲ ಸ್ವರೂಪವನ್ನು ಪ್ರತಿನಿಧಿಸುತ್ತವೆ. ಅದರಲ್ಲಿ ಮೂಲತಃ ಯಾವ ಭೇದವೂ ಇಲ್ಲ. ಋತವೂ ಸತ್ಯವೂ ಅದೇ ಮಹಾಲಿಂಗ. ಭೇದರಹಿತವಾದ ಆ ಮಹಾಲಿಂಗವೇ ಸಾಧಕರ ಉಪಾಸನೆಗಾಗಿ ತನ್ನ ಮಾಯೆಯಿಂದ ಭೇದವನ್ನು ತಾಳಿತು. ಅದನ್ನೇ ಮುಂದೆ ಹೇಳಲಾಗಿದೆ.

ಮಹಾಲಿಂಗಸ್ಯ ತ್ರೈವಿಧ್ಯಮ್

ಮಹಾಲಿಂಗಂ ತ್ರಿಧಾ ಜಾತಂ ಸುಜನಾನುಜಿಘೃಕ್ಷಯಾ।
ಪ್ರಥಮಂ ಭಾವಲಿಂಗಂ ತು ದ್ವಿತೀಯಂ ಪ್ರಾಣಲಿಂಗಕಮ್॥
ತೃತೀಯ ಮಿಷ್ಟಲಿಂಗಂ ಸ್ಯಾದಿತ್ಯೇವಂ ತ್ರಿವಿಧಂ ಮತಮ್ ॥ ೨೩ ॥

ನಿಷ್ಕಲಂ ಭಾವಲಿಂಗಂ ಸ್ಯಾದ್ಭಾವಗ್ರಾಹ್ಯಂ ಪರಾತ್ಪರಮ್।
ಪ್ರಾಣಲಿಂಗಂ ಮನೋಗ್ರಾಹ್ಯಂ ಭವೇತ್ ಸಕಲನಿಷ್ಕಲಮ್ ॥ ೨೪ ॥

ಸಕಲಂ ದೃಕ್ಕಲಾಗ್ರಾಹ್ಯಮಿಷ್ಟಲಿಂಗಂ ಪ್ರಕೀರ್ತಿತಮ್।
ಇಷ್ಟಸಿದ್ಧಿಕರಂ ಸಮ್ಯಗನಿಷ್ಟಪರಿಹಾರಕಮ್ ॥ ೨೫ ॥

ಮಹಾಲಿಂಗವು ಮೂರು ವಿಧವಾಗಿರುವುದು

ಮಹಾಲಿಂಗವು ಸುಜನರಿಗೆ ಅನುಗ್ರಹಿಸುವ ಇಚ್ಛೆಯಿಂದ ಮೂರು ವಿಧವಾಯಿತು. ಮೊದಲನೆಯದು ಭಾವಲಿಂಗ, ಎರಡನೆಯದು ಪ್ರಾಣಲಿಂಗ ಮತ್ತು ಮೂರನೆಯದು ಇಷ್ಟಲಿಂಗ ಹೀಗೆಂದು ಮೂರು ವಿಧವಾಗಿ ತಿಳಿಯಬೇಕು. (೨೩). ಭಾವಲಿಂಗವೆಂಬುದು ನಿಷ್ಕಲವಾದುದು; ಅದು ಭಾವನೆಯಿಂದ ತಿಳಿಯಲ್ಪಡುವ ಪರಾತ್ಪರಲಿಂಗ; ಪ್ರಾಣಲಿಂಗವೆಂಬುದು ಸಕಲನಿಷ್ಕಲವಾದುದು; ಅದು ಮನಸ್ಸಿನಿಂದ ತಿಳಿಯಲ್ಪಡುವುದು. ಇಷ್ಟಲಿಂಗವೆಂಬುದು ಸಕಲವಾದುದು; ಅದು ಕಣ್ಣಿನ ಕಲೆ (ದೃಷ್ಟಿ)ಯಿಂದ ತಿಳಿಯಲ್ಪಡುವುದು, ಎಂದು ಹೇಳಲ್ಪಟ್ಟಿದೆ; ಅದು ಇಷ್ಟವಾದುದನ್ನು ದೊರಕಿಸಿ ಕೊಡುತ್ತದೆ ಮತ್ತು ಅನಿಷ್ಟವಾದುದನ್ನು ಪರಿಹರಿಸುತ್ತದೆ. (೨೪-೨೫).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಭಾವಲಿಂಗವು ನಿಷ್ಕಲ, ಅಂದರೆ ಭಾಗಗಳಿಲ್ಲದುದು, ಗುರುತಿಸಲು ಯಾವುದೇ ಚಿಹ್ನೆಗಳಿಲ್ಲದಿರುವುದು. ಅದು ಭಾವನಾಮಯ ಮತ್ತು ಭಾವಗ್ರಾಹ್ಯ. ಅದೇ ಪರಾತ್ಪರಲಿಂಗ ಈ ಹೆಸರು ಇಲ್ಲಿ ಗಮನಾರ್ಹ. ಸಕಲವೆಂದರೆ ಭಾಗಗಳಿಂದ ಕೂಡಿರುವುದು, ಆಕಾರವುಳ್ಳದ್ದು. ಮೂರನೆಯದಾದ ಇಷ್ಟಲಿಂಗವು ಕೇವಲ ಸಕಲ; ಅದು ಕಣ್ಣಿನ ಕಲೆಗೆ ಗೋಚರವಾಗುತ್ತದೆ. ಇಷ್ಟವಾದುದನ್ನು ಸಿದ್ಧಿಸುವಂತೆ ಮಾಡುವುದರಿಂದ, ಅನಿಷ್ಟ ಪರಿಹಾರಕವಾದ್ದರಿಂದ ಅದು ಇಷ್ಟಲಿಂಗ. ಎರಡನೆಯದಾದ ಪ್ರಾಣಲಿಂಗವು ಸಕಲ-ನಿಷ್ಕಲ. ಅದಕ್ಕೆ ಯಾವುದೇ ಭಾಗಗಳಿಂದ ಕೂಡಿದ ಆಕಾರ-ವಿಲ್ಲದಿದ್ದರೂ ಅದು ಜ್ಯೋತಿಸ್ವರೂಪವೆಂದು ಜ್ಞಾನಿಗಳು ಗುರುತಿಸಿದ್ದಾರೆ. ಇವುಗಳಿಗೆ (ಭಾವ-ಪ್ರಾಣ-ಇಷ್ಟಲಿಂಗಗಳಿಗೆ) ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪರಾತ್ಪರ, ಸೂಕ್ಷ್ಮ, ಸ್ಥೂಲವೆಂದು ಕರೆದಿರುವುದನ್ನು ನೋಡಬಹುದು. ಅಲ್ಲಿ ಭಾವಲಿಂಗಕ್ಕೆ ತೃಪ್ತಿಲಿಂಗ ಎಂಬ ಹೆಸರೂ ಇದೆ. (ನೋಡಿರಿ- ಶ್ರೀಸಿದ್ಧಾಂತಶಿಖಾಮಣಿ, ೯.೪೯-೫೦). ಈ ಮೂರು ವಿಧವಾದ ಲಿಂಗವು ಹೇಗೆ ಆರಾಯಿತು ಎಂಬುದನ್ನು ಮುಂದೆ ಹೇಳಿದೆ.

ಷಡ್ವಿಧಲಿಂಗನಿರೂಪಣಮ್

ಭಾವಾದಿಲಿಂಗತ್ರಿತಯಂ ದ್ವಿವಿಧಂ ದ್ವಿವಿಧಂ ಭವೇತ್।
ಭಾವಲಿಂಗಂ ಮಹಾಲಿಂಗ ಪ್ರಸಾದಾಭಿಖ್ಯಕಂ ದ್ವಯಮ್ ॥ ೨೬ ॥

ಪ್ರಾಣಲಿಂಗಂ ತಥಾ ಚರಶಿವಲಿಂಗದ್ವಯಂ ಭವೇತ್।
ಇಷ್ಟಂತು ಗುರುಲಿಂಗಾಖ್ಯಮಾಚಾರಾಖ್ಯಂ ದ್ವಯಂ ಭವೇತ್ ॥ ೨೭ ॥

ಆಚಾರಲಿಂಗಮಾಖ್ಯಾತಂ ಸದ್ಯೋಜಾತಮುಖಾತ್ಮಕಮ್।
ಗುರುಲಿಂಗಂ ತಥಾ ವಾಮದೇವವಕ್ತ್ರಾತ್ಮಕಂ ಭವೇತ್ ॥ ೨೮ ॥

ಶಿವಲಿಂಗಂ ತಥಾಽಘೋರಮುಖರೂಪಂ ಭವೇತ್ ಪುನಃ।
ಚರಲಿಂಗಂ ಭವತ್ಯೇವ ತತ್ಪೂರುಷ ಮುಖಾತ್ಮಕಮ್ ॥ ೨೯ ॥

ಪ್ರಸಾದಲಿಂಗಂ ಕಥಿತಮೀಶಾನ ಮುಖ ಸಂಜ್ಞಕಮ್।
ಮಹಾಲಿಂಗಂ ತಥಾಽಖಂಡ ಶಿವರೂಪಂ ಪ್ರಕೀರ್ತಿತಮ್ ॥ ೩೦ ॥

ಆರು ವಿಧ ಲಿಂಗಗಳ ನಿರೂಪಣೆ

ಭಾವಲಿಂಗ ಮುಂತಾದ ಮೂರು ಲಿಂಗಗಳು ಒಂದೊಂದೂ ಎರಡೆರಡು ಬಗೆಯಾದವು. ಭಾವಲಿಂಗವು ಮಹಾಲಿಂಗ ಮತ್ತು ಪ್ರಸಾದಲಿಂಗ ಎಂಬ ಹೆಸರಿನ ಎರಡಾಯಿತು. (೨೬). ಪ್ರಾಣಲಿಂಗವು ಚರಲಿಂಗ ಮತ್ತು ಶಿವಲಿಂಗಗಳೆಂಬ ಹೆಸರಿನ ಎರಡಾಯಿತು. ಇಷ್ಟಲಿಂಗವು ಗುರುಲಿಂಗ ಮತ್ತು ಆಚಾರಲಿಂಗವೆಂಬ ಹೆಸರಿನ ಎರಡಾಯಿತು. (೨೭). ಆಚಾರಲಿಂಗವು ಸದ್ಯೋಜಾತಮುಖದ ಸ್ವರೂಪದ್ದೆಂದು ಹೇಳಲಾಗುತ್ತದೆ. ಗುರುಲಿಂಗವು ವಾಮದೇವಮುಖ ಸ್ವರೂಪದ್ದಾಗಿದೆ. (೨೮). ಶಿವಲಿಂಗವು ಹಾಗೆಯೇ ಅಘೋರಮುಖ ಸ್ವರೂಪದ್ದಾಗಿದ್ದರೆ ಮತ್ತೆ ಚರಲಿಂಗವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತತ್ಪುರುಷಮುಖ ಸ್ವರೂಪದ್ದಾಗಿದೆ. (೨೯). ಪ್ರಸಾದಲಿಂಗವು ಈಶಾನಮುಖ ಸ್ವರೂಪದ್ದೆಂದು ಹೇಳಲ್ಪಟ್ಟಿದೆ. ಮಹಾಲಿಂಗವು ಹಾಗೆಯೇ ಅಖಂಡ ಶಿವಸ್ವರೂಪದ್ದೆಂದು ಹೇಳಲ್ಪಟ್ಟಿದೆ. (೩೦).

ಟಿಪ್ಪಣಿ : ಸೂಕ್ಷ್ಮಾಗ್ರಮದ ಕ್ರಿ.ಪಾ., ಅ. ೪-೫ರಲ್ಲಿ ಆರು ಲಿಂಗಗಳನ್ನು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ ಎಂದು ಈ ಕ್ರಮದಲ್ಲಿ ಹೆಸರಿಸಲಾಗಿದೆ. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬೈದು ಪರಶಿವನ ಐದು ಮುಖಗಳು. ಇವುಗಳಿಗೆ ಪಂಚಬ್ರಹ್ಮರೆಂದೂ ಕರೆಯುತ್ತಾರೆ.

ಇಷ್ಟಲಿಂಗೇ ಶಿವಃ ಪೂಜನೀಯಃ

ಲಿಂಗೇ ಸಂಪೂಜನಾದ್ ಧ್ಯಾನಾಚ್ಛಂಭುಃ ಸಮ್ಯಕ್‌ಪ್ರಸೀದತಿ।
ಧ್ಯಾಯತೇ ಪೂಜ್ಯತೇ ಚೈವ ಲಿಂಗೇ ಸನ್ನಿಹಿತಃ ಶಿವಃ ॥ ೩೧ ॥

ಇಷ್ಟಲಿಂಗೇ ತತೋ ನಿತ್ಯಂ ಪೂಜನೀಯಃ ಪರಃ ಶಿವಃ।
ಧ್ಯೇಯಶ್ಚ ಸತತಂ ವಿದ್ವನ್ ಲಿಂಗರೂಪೋಽಂಬಿಕಾಪತಿಃ ॥ ೩೨ ॥

ಇಷ್ಟಲಿಂಗದಲ್ಲಿ ಶಿವನನ್ನು ಪೂಜಿಸಬೇಕು

ಲಿಂಗದಲ್ಲಿ ಪೂಜಿಸುವುದರಿಂದ ಧ್ಯಾನಿಸುವುದರಿಂದ ಶಿವನು ಉತ್ತಮವಾಗಿ ಪ್ರಸನ್ನನಾಗುವನು. ಲಿಂಗದಲ್ಲಿ ಸನ್ನಿಹಿತವಾದ (ನೆಲೆಸಿದ) ಶಿವನನ್ನು ಧ್ಯಾನಿಸಬೇಕು ಮತ್ತು ಪೂಜಿಸಬೇಕು. (೩೧). ಆದ್ದರಿಂದ ಪರಶಿವನು ನಿತ್ಯವೂ ಇಷ್ಟಲಿಂಗದಲ್ಲಿ ಪೂಜಿಸಲ್ಪಡಬೇಕು ಮತ್ತು ಆ ಲಿಂಗರೂಪಿಯಾದ ಉಮಾಪತಿಯು ನಿರಂತರವಾಗಿ ಧ್ಯಾನಿಸಲ್ಪಡಬೇಕು. (೩೨).

ಆಧಾರಾದಿಷು ಪ್ರಾಣಲಿಂಗಧ್ಯಾನಮ್

ಆಧಾರೇ ಕನಕಪುಖ್ಯಂ ಹೃದಯೇ ವಿದ್ರುಮಪ್ರಭಮ್।
ಭ್ರೂಮಧ್ಯೇ ದೀಪಸಂಕಾಶಂ ಪ್ರಾಣಲಿಂಗಂ ಪ್ರಕೀರ್ತಿತಮ್ ॥ ೩೩ ॥

ಜ್ಯೋತಿರ್ಲಿಂಗಮಿದಂ ವಿದ್ವನ್ ಧ್ಯಾನಸ್ಥಾನಂ ಮಹೇಶಿತುಃ।
ಜ್ಯೋತಿರ್ಲಿಂಗಂ ವಿಭಾವ್ಯೈವ ತತ್ರ ಧ್ಯೇಯಃ ಪರಃ ಶಿವಃ ॥ ೩೪ ॥

ಪ್ರಾಣೇಷ್ವಂತರ್ಮನಃ ಸ್ಥಾನಂ ಹೃದಯಾಬ್ಜಗತಂ ಶಿವಮ್।
ಲಿಂಗಂ ಯತ್ ತದಿಹ ಗ್ರಾಹ್ಯಂ ಪ್ರಾಣಲಿಂಗಸಮಾಹ್ವಯಮ್ ॥ ೩೫ ॥

ಜ್ಯೋತೀರೂಪಂ ತದೇವ ಸ್ಯಾತ್ ಸ್ಥಾನಂ ಮುಖ್ಯಂ ಮಹೇಶಿತುಃ।
ತತ್ರ ನಿಧ್ಯಾಯಮಾನಂ ತು ಶಂಭುರ್ಮೋಚಯತೇಽಚಿರಾತ್ ॥ ೩೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಧಾರಾದಿ ಸ್ಥಾನಗಳಲ್ಲಿ ಪ್ರಾಣಲಿಂಗ ಧ್ಯಾನ

ಆಧಾರ ಸ್ಥಾನದಲ್ಲಿ ಚಿನ್ನದ ಬಣ್ಣವುಳ್ಳ, ಹೃದಯದಲ್ಲಿ ಹವಳ ಪ್ರಭೆಯುಳ್ಳ ಮತ್ತು ಭ್ರೂಮಧ್ಯದಲ್ಲಿ ದೀಪ ಪ್ರಕಾಶವುಳ್ಳ ಪ್ರಾಣಲಿಂಗವನ್ನು (ಜ್ಞಾನಿಗಳು) ವರ್ಣಿಸುತ್ತಾರೆ. (೩೩). ಜ್ಞಾನಿಯೇ, ಈ ಜ್ಯೋತಿರ್ಲಿಂಗವು ಮಹೇಶ್ವರನನ್ನು ಧ್ಯಾನಿಸುವ ಸ್ಥಾನ. ಜ್ಯೋತಿರ್ಲಿಂಗ ರೂಪದಲ್ಲಿ ಪರಶಿವನನ್ನು ಭಾವಿಸಿ ಅವನ ಧ್ಯಾನವನ್ನು ಮಾಡಬೇಕು. (೩೪). ಹೃದಯದಲ್ಲಿರುವ ಕಮಲದೊಳಗೆ ಕಲ್ಯಾಣಕಾರಿ ಪ್ರಾಣಗಳಲ್ಲಿ ಒಳಗಿರುವ ಮನಸ್ಸಿನ ಸ್ಥಾನದಲ್ಲಿ ವಿರಾಜಿಸುವ ಪ್ರಾಣಲಿಂಗವೆಂಬ ಹೆಸರಿನ ಲಿಂಗವೇ ಜ್ಯೋತಿರೂಪದ ಲಿಂಗ; ಅದೇ ಮಹೇಶ್ವರನ ಮುಖ್ಯ ಸ್ಥಾನ; ಅದರಲ್ಲಿ ಗಾಢವಾಗಿ ಧ್ಯಾನಿಸಲ್ಪಡುವ ಶಂಭುವು ಕೂಡಲೇ ಮೋಕ್ಷವನ್ನು ಕೊಡುತ್ತಾನೆ. (೩೫-೩೬).

ಟಿಪ್ಪಣಿ : ಪ್ರಾಣಲಿಂಗದ ಸ್ವರೂಪವನ್ನು ೩೩ನೇ ಶ್ಲೋಕದಲ್ಲಿ ವರ್ಣಿಸಲಾಗಿದೆ. ಇದನ್ನೇ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಸ್ವಲ್ಪ ಪಾಠಾಂತರದೊಂದಿಗೆ ಹೇಳಲಾಗಿದೆ- "ಆಧಾರೇ ಕನಕಪ್ರಖ್ಯಂ ಹೃದಯೇ ವಿದ್ರುಮಪ್ರಭಮ್। ಭ್ರೂಮಧ್ಯೇ ಸ್ಫಟಿಕಚ್ಛಾಯಂ ಲಿಂಗಂ ಯೋಗೀ ವಿಭಾವಯೇತ್॥" (೬.೪೦). ಈ ಶ್ಲೋಕದಲ್ಲಿ ಭ್ರೂಮಧ್ಯ ಸ್ಥಾನದಲ್ಲಿನ ಪ್ರಾಣಲಿಂಗದ ಸ್ವರೂಪವನ್ನು ಸ್ಫಟಿಕದ ಕಾಂತಿಯುಳ್ಳದ್ದು ಹೇಳಿದೆ. ಆಗಮದಲ್ಲಿ ದೀಪದ ಪ್ರಕಾಶವುಳ್ಳದ್ದು ಎಂದು ಹೇಳಿದೆ. ಸೂಕ್ಷ್ಮಾಗ್ರಮ, ೬.೨೪-೨೫ರಲ್ಲಿ ಸರ್ವವ್ಯಾಪಕವೂ ಪವಿತ್ರವೂ ಪುಷ್ಟಿವರ್ಧಕವೂ ಆದ ಪ್ರಾಣ-ಲಿಂಗವನ್ನು ಆಂತರಿಕ ಮಾನಸ ಪುಷ್ಪಗಳಿಂದ, ಉಪಚಾರಗಳಿಂದ ಪೂಜಿಸಬೇಕು; ಅಹಿಂಸೆ, ಇಂದ್ರಿಯ ಜಯ, ಸರ್ವ ಪ್ರಾಣಿಗಳಲ್ಲಿ ದಯೆ, ಕ್ಷಮೆ, ಧ್ಯಾನ, ತಪಸ್ಸು, ಜ್ಞಾನ, ಸತ್ಯ ಎಂಬ ಮಾನಸ ಪುಷ್ಪಗಳಿಂದ ಅರ್ಚಿಸಬೇಕು, ಎಂದು ಹೇಳಿದೆ. ಶ್ರೀ ಸಿದ್ಧಾಂತ ಶಿಖಾಮಣಿಯು ೧೨.೧೬-೨೦ರಲ್ಲಿ ಪ್ರಾಣಲಿಂಗ ಪೂಜೆಯ ವಿಧಾನವನ್ನು "ಕ್ಷಮಾಽಭಿಷೇಕ ಸಲಿಲಂ"ಇತ್ಯಾದಿ ಶ್ಲೋಕಗಳಲ್ಲಿ ವಿಸ್ತಾರವಾಗಿ ವರ್ಣಿಸುತ್ತದೆ.

ಭಾವಲಿಂಗಲಕ್ಷಣಮ್

ಸಚ್ಚಿತ್‌ಸುಖಮಯಂ ಶಾಂತಮಾದಿಮಧ್ಯಾಂತವರ್ಜಿತಮ್।
ನಿಷ್ಕಲಂ ಶಾಂಭವಂ ಯತ್ತದರೂಪಂ ರೂಪಮುಚ್ಯತೇ॥
ತದ್ಭಾವನಾಸ್ಪದಂ ವಿದ್ವನ್ ಭಾವಲಿಂಗಂ ಪ್ರಕೀರ್ತಿತಮ್ ॥ ೩೭ ॥

ಭಾವಗ್ರಾಹ್ಯಂ ಮನೋಽತೀತಂ ಭಾವಾಭಾವಪರಂ ಶಿವಮ್।
ಕಲಾಸರ್ಗಕರಂ ಸತ್ಯಂ ಭಾವಲಿಂಗಂ ಪ್ರಕೀರ್ತಿತಮ್ ॥ ೩೮ ॥

ಪ್ರತ್ಯಾಹೃತೇಂದ್ರಿಯಗ್ರಾಮ್ಯೈರರಮನಸ್ಕಪದಾಸ್ಪದೈಃ।
ಪದೇ ತುರೀಯಾತೀತಾಖ್ಯೇ ಭಾವನೀಯಂ ತು ಯೋಗಿಭಿಃ ॥ ೩೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಸ್ಮೃತೇತರಭಾವಾನುಭಾವಿತಾಖಂಡತತ್ತ್ವಕೈಃ।
ಯೋಗಿಭಿರ್ಭಾವ್ಯತೇ ನಿತ್ಯಂ ಭಾವಲಿಂಗಂ ಮಹಾತ್ಮಭಿಃ ॥ ೪೦ ॥

ಭಾವಲಿಂಗಾನುಭಾವಾತ್ತಪರಾನಂದಾಮೃತಾಬ್ಧಯಃ।
ನಿಸ್ಪೃಹಾ ನಿರ್ಭಯಾಃ ಶಾಂತಾ ಜೀವನ್ಮುಕ್ತಾ ನ ಸಂಶಯಃ ॥ ೪೧ ॥

ಭಾವಲಿಂಗದ ಲಕ್ಷಣ

ಸತ್-ಚಿತ್-ಆನಂದಮಯವೂ, ಶಾಂತವೂ, ಆದಿ-ಮಧ್ಯ-ಅಂತಗಳಿಲ್ಲದುದೂ, ನಿಷ್ಕಲವೂ ಆದ ಶಿವನ ಆಕಾರವಿಲ್ಲದ ಆಕಾರವೆಂದು ಯಾವುದು ಕರೆಯಲ್ಪಡುವುದೋ ಅದೇ ಭಾವನಾಗೋಚರವಾದ ಭಾವಲಿಂಗವೆಂದು ವರ್ಣಿಸಲ್ಪಡುತ್ತದೆ. (೩೭). ಮನಸ್ಸಿಗೆ ಮೀರಿದ, ಭಾವ ಮತ್ತು ಅಭಾವಗಳಿಗೆ ಅತೀತವಾದ, ಭಾವನಾ ಮಾತ್ರದಿಂದ ಸಾಕ್ಷಾತ್ಕರಿಸಿಕೊಳ್ಳಲ್ಪಡುವ ಮಂಗಲಕರವಾದ ಕಲೆಗಳ ಸೃಷ್ಟಿಯನ್ನು ಮಾಡುವ ಆಂತರಿಕ ಲಿಂಗವನ್ನು ಭಾವಲಿಂಗವೆಂದು ವರ್ಣಿಸಲಾಗಿದೆ. (೩೮). ಇಂದ್ರಿಯಗಳ ಸಮೂಹವನ್ನು ಅಂತರ್ಮುಖವಾಗಿಸಿಕೊಂಡು, ಅಮನಸ್ಕ ಸ್ಥಿತಿಯಲ್ಲಿದ್ದು, ತುರೀಯಾತೀತವೆಂಬ ಅವಸ್ಥೆಯಲ್ಲಿ ನಿಂತು ಅದನ್ನು (ಭಾವಲಿಂಗವನ್ನು) ಯೋಗಿಗಳು ಭಾವಿಸಿಕೊಳ್ಳಬೇಕು. (೩೯). ಇತರ ಎಲ್ಲಾ ಸಾಂಸಾರಿಕ ಭಾವಗಳನ್ನು ಮರೆತು ಏಕಮಾತ್ರ ಅಖಂಡ ಶಿವತತ್ತ್ವದ ಭಾವನೆಯಲ್ಲಿ ಮಗ್ನರಾಗಿರುವ ಮಹಾತ್ಮರಾದ ಯೋಗಿಗಳು ಭಾವಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ. (೪೦). ಯಾರಿಗೆ ಭಾವಲಿಂಗದ ಭಾವನೆಯನ್ನು ಮಾಡುತ್ತಾ ಮಾಡುತ್ತಾ ಪರಮಾನಂದ ರೂಪದ ಅಮೃತ ಸಾಗರವು ಪ್ರಾಪ್ತವಾಗಿದೆಯೋ ಅವರು ನಿಸ್ಪೃಹರು, ನಿರ್ಭಯರು, ಶಾಂತರು ಮತ್ತು ಜೀವನ್ಮುಕ್ತರು. ಈ ಬಗ್ಗೆ ಸಂಶಯವಿಲ್ಲ. (೪೧).

ಟಿಪ್ಪಣಿ: 'ಅಮನಸ್ಕಯೋಗ'ವೆಂಬುದು ಒಂದು ವಿಶಿಷ್ಟವಾದ ಯೋಗ. ಶೈವ ಶಾಸ್ತ್ರದಲ್ಲಿ ಓಂಕಾರವನ್ನು ವೈದಿಕ ಪ್ರಣವ, 'ಹ್ರೀಂ' ಎಂಬುದನ್ನು ಶಾಕ್ತ ಪ್ರಣವ ಮತ್ತು 'ಹೂಂ' ಎಂಬುದನ್ನು ಶೈವ ಪ್ರಣವವೆನ್ನುತ್ತಾರೆ. 'ಅ ಉ ಮ' ಎಂಬ ಸ್ಥೂಲ ಅಕ್ಷರಗಳಲ್ಲದೆ ಬಿಂದು, ಅರ್ಧಚಂದ್ರ, ರೋಧಿನೀ, ನಾದ, ನಾದಾಂತ, ಶಕ್ತಿ, ಸಮನಾ ಮತ್ತು ಉನ್ಮನಾ ಎಂಬ ಸೂಕ್ಷ್ಮನಾದದ ಬೇರೆ ಬೇರೆ ಅವಸ್ಥೆಗಳಿವೆ. ಅಂತಿಮ ಸ್ಥಿತಿಯಾದ 'ಉನ್ಮನಾ' ಎಂಬುದೇ 'ಅಮನಸ್ಕಯೋಗ.' (ಅಮನಸ್ಕಯೋಗ, ಶ್ರೀಗೋಪೀನಾಥ ಕವಿರಾಜರ ಭೂಮಿಕೆಯನ್ನು ನೋಡಿರಿ). ಕಲಾಸರ್ಗಕರಂ=ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಶಾಂತ್ಯತೀತ ಎಂಬ ಐದು ಕಲೆಗಳ ವಿಷಯ ಶೈವಾಗಮಗಳಲ್ಲಿ ಬರುತ್ತದೆ. ಸದ್ಯೋಜಾತ ಮುಂತಾದ ಪಂಚ ಬ್ರಹ್ಮಮಂತ್ರಗಳಲ್ಲಿ ಗುರುತಿಸಲ್ಪಡುವ ೩೮ ಕಲೆಗಳು. (ನೇತ್ರತಂತ್ರ, ೨೨ ೨೬-೩೪; ಲಿಂಗಧಾರಣಚಂದ್ರಿಕಾ, ಜಂಗಮವಾಡಿ ಮಠ, ವಾರಾಣಸೀ, ಪು.೨೭೫; ವಾತುಲಶುದ್ಧಾಗಮ, ಬ್ರಹ್ಮಭೇದ ಪಟಲ). ಈ ಎಲ್ಲಾ ಕಲೆಗಳ ಅಭಿವ್ಯಕ್ತಿಗೆ ಭಾವಲಿಂಗವೇ ಮೂಲ ಕಾರಣವೆಂದು ಹೇಳಲಾಗಿದೆ. ನಿವೃತ್ತಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂತಾದ ಐದು ಕಲೆಗಳು ಸೃಷ್ಟಿಗಾಗಿ ಶಿವನು ತಾಳಿದ ಶಿವಸಾದಾಖ್ಯ, ಅಮೂರ್ತಸಾದಾಖ್ಯ, ಸಮೂರ್ತಸಾದಾಖ್ಯ, ಕರ್ತೃಸಾದಾಖ್ಯ, ಕರ್ಮಸಾದಾಖ್ಯ ಎಂಬ ಐದು ಸಾದಾಖ್ಯಗಳಿಗೆ ಸಂಬಂಧಿಸಿವೆ. ನಿವೃತ್ತಿ ಕಲೆಯು ಕರ್ಮಸಾದಾಖ್ಯಕ್ಕೂ, ಪ್ರತಿಷ್ಠಾ ಕಲೆಯು ಕರ್ತೃಸಾದಾಖ್ಯಕ್ಕೂ, ವಿದ್ಯಾಕಲೆಯು ಸಮೂರ್ತಸಾದಾಖ್ಯಕ್ಕೂ, ಶಾಂತಿಕಲೆಯು ಅಮೂರ್ತ ಸಾದಾಖ್ಯಕ್ಕೂ ಮತ್ತು ಶಾಂತ್ಯಾತೀತಕಲೆಯು ಶಿವಸಾದಾಖ್ಯಕ್ಕೂ ಸಂಬಂಧಿಸಿವೆ. ಈ ಐದು ಕಲೆಗಳ ಮೂಲ ಐದು ಶಕ್ತಿಗಳು. ಪರಾಶಕ್ತಿಯಿಂದ ಶಾಂತ್ಯತೀತಕಲಾ, ಆದಿಶಕ್ತಿಯಿಂದ ಶಾಂತಿಕಲಾ, ಇಚ್ಛಾಶಕ್ತಿಯಿಂದ ವಿದ್ಯಾಕಲಾ, ಜ್ಞಾನಶಕ್ತಿಯಿಂದ ಪ್ರತಿಷ್ಠಾಕಲಾ ಮತ್ತು ಕ್ರಿಯಾಶಕ್ತಿಯಿಂದ ನಿವೃತ್ತಿಕಲಾ, ಹೀಗೆ ಐದು ಶಕ್ತಿಗಳಿಂದ ಐದು ಕಲೆಗಳ ಉತ್ಪತ್ತಿ. ಈ ಶಕ್ತಿಗಳ ಮೂಲಕವೇ ಶಿವನು ಸೃಷ್ಟಿಯ ಲೀಲೆಗಾಗಿ ಕರ್ಮಾದಿ ಶಿವಾಂತ ಐದು ಸಾದಾಖ್ಯಗಳ ರೂಪವನ್ನು ತಾಳುತ್ತಾನೆ. (ನೋಡಿರಿ-ಸೂಕ್ಷ್ಮಾಗ್ರಮ, ಕ್ರಿ.ಪಾ., ೧.೩೩-೫೧). ಭಾವಲಿಂಗಾನಭಾವಾತ್ತ-ಪರಾನಂದಾಮೃತಾಬ್ಧಯಃ-ಇಷ್ಟಲಿಂಗದಲ್ಲಿ ದೃಷ್ಟಿಯೋಗ, ಪ್ರಾಣಲಿಂಗದಲ್ಲಿ ಮನೋಯೋಗ ಮತ್ತು ಭಾವಲಿಂಗದಲ್ಲಿ ಭಾವಯೋಗವನ್ನು ಏಕಕಾಲದಲ್ಲಿ ಸಾಧಿಸಿದ ಸಾಧಕರು ಮುಕ್ತರು. ಈ ಮೂರರ ಸಮನ್ವಯವೇ ಶಿವಯೋಗವೆಂಬುದು ಪ್ರಸ್ತುತ ಶೈವಾಗಮದ ಸಿದ್ಧಾಂತ. ಇದೇ ಶಿವಾರಾಧನೆಯ ಕ್ರಮ.

ಲಿಂಗತ್ರಯಾರಾಧನಮ್

ಜ್ಯೋತೀರೂಪಂ ಪ್ರಾಣಲಿಂಗಂ ಹೃದಯಾಬ್ಜೇ ಪ್ರತಿಷ್ಠಿತಮ್।
ಹೃದಯೇ ವಾ ಭ್ರುವೋರ್ಮಧ್ಯೇ ತುರಿಯೇ ಧ್ಯೇಯಮಾಸ್ತಿಕೈಃ ॥ ೪೨ ॥

ಧ್ಯಾನಸ್ಯ ಶಂಭೋಃ ಪೂಜಾಯಾಃ ಸ್ಥಾನಮಿಷ್ಟಂ ಭವೇದ್ಬಹಿಃ।
ಜಾಗ್ರದ್ದಶಾಯಾಂ ಸಂಸೇವ್ಯಂ ಭೋಗಮೋಕ್ಷಫಲಾರ್ಥಿಭಿಃ ॥ ೪೩ ॥

ತಥೈವಾಂತರಗಂ ಸ್ಥಾನಂ ಪ್ರಾಣಲಿಂಗಂ ಪ್ರಕೀರ್ತಿತಮ್।
ಸೇವ್ಯಮೇತತ್ತುರೀಯೇ ಸ್ಯಾದ್ ಭವಬಂಧಮುಮುಕ್ಷುಭಿಃ ॥ ೪೪ ॥

ಮೂರು ಲಿಂಗಗಳ ಆರಾಧನೆ

ಜ್ಯೋತಿ ಸ್ವರೂಪಿಯಾದ ಪ್ರಾಣಲಿಂಗವು ಹೃದಯದಲ್ಲಿ ಪ್ರತಿಷ್ಠಿತವಾಗಿದೆ. ಅದನ್ನು ಆಸ್ತಿಕರು ಹೃದಯದಲ್ಲಿ, ಹುಬ್ಬುಗಳ ಮಧ್ಯದಲ್ಲಿ ತುರೀಯಾವಸ್ಥೆಯನ್ನು ತಲುಪಿ ಸಾಕ್ಷಾತ್ಕಾರಿಸಿಕೊಳ್ಳಬೇಕು. (೪೨). ಶಂಭುವಿನ ಧ್ಯಾನಕ್ಕೆ ಮತ್ತು ಪೂಜೆಗೆ ಬಾಹ್ಯಸ್ಥಾನವೆಂದರೆ ಇಷ್ಟಲಿಂಗ. ಭೋಗ-ಮೋಕ್ಷರೂಪದ ಫಲವನ್ನು ಇಚ್ಛಿಸುವವರು ಜಾಗ್ರತ್ ಸ್ಥಿತಿಯಲ್ಲಿ ಅದನ್ನೇ ಪೂಜಿಸಬೇಕು. (೪೩). ಹಾಗೆಯೇ ಆಂತರಿಕ ಸ್ಥಾನವು ಪ್ರಾಣಲಿಂಗವೆಂದು ಕರೆಯಲ್ಪಡುತ್ತದೆ. ಭವಬಂಧನದಿಂದ ಮುಕ್ತಿಯನ್ನು ಇಚ್ಛಿಸುವವರು ಅದನ್ನೇ ತುರೀಯಾವಸ್ಥೆಯಲ್ಲಿ ಧ್ಯಾನಿಸಬೇಕು. (೪೪).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಜಾಗ್ರತ್ ಸ್ಥಿತಿಯಲ್ಲಿ ಇಷ್ಟಲಿಂಗದ ಆರಾಧನೆ ಮತ್ತು ತುರೀ-ಯಾವಸ್ಥೆಯಲ್ಲಿ (ಅಂದರೆ ಜಾಗ್ರತ್, ಸ್ವಪ್ನ, ಸುಷುಪ್ತಿಗಳ ಅನಂತರ ನಾಲ್ಕನೆಯ ಅವಸ್ಥೆಯಲ್ಲಿ) ಪ್ರಾಣಲಿಂಗದ ಆರಾಧನೆ, ಹೀಗೆ ಇಷ್ಟ-ಪ್ರಾಣಲಿಂಗಗಳ ಆರಾಧನೆಯನ್ನು ಮಾಡಬೇಕು. ಜೊತೆಗೆ ತುರೀಯಾತೀತ ಸ್ಥಿತಿಯಲ್ಲಿ ಭಾವಲಿಂಗವನ್ನೂ ಆರಾಧಿಸಬೇಕು ಎಂದು ಈಗಾಗಲೇ ಹೇಳಿದೆ. ಒಟ್ಟಿನಲ್ಲಿ ಲಿಂಗತ್ರಯದ ಆರಾಧನೆಯು ಇಲ್ಲಿ ಉಕ್ತವಾದಂತಾಯಿತು. ಇನ್ನು ಅದರ ಫಲಗಳನ್ನು ಮುಂದೆ ೪೮-೫೩ರಲ್ಲಿ ಹೇಳಲಾಗಿದೆ. ಅದಕ್ಕೂ ಪೂರ್ವದಲ್ಲಿ ಅರ್ಹತೆಗಾಗಿ ದೀಕ್ಷೆಯನ್ನು ಹೊಂದಬೇಕು ಎಂಬುದನ್ನು ಪ್ರಸ್ತುತ ಆಗಮವು ತಿಳಿಸುತ್ತದೆ.

ಮಲತ್ರಯಕ್ಷಪಣೇ ದೀಕ್ಷಾ

ಇಷ್ಟಂ ಸ್ಥೂಲತನೋಃ ಪ್ರೋಕ್ತಂ ಪ್ರಾಣಂ ಸೂಕ್ಷ್ಮತನೋಃ ಸ್ಮೃತಮ್।
ಭಾವಾಖ್ಯಂ ಕಾರಣಸ್ಯೈವಂ ತನುತ್ರಯಗತಂ ತ್ರಯಮ್ ॥ ೪೫ ॥

ಆಣವಂ ಮಾಯಿಕಂ ಚೈವ ಕಾರ್ಮಿಕಂ ಚ ಯಥಾಕ್ರಮಮ್।
ಮಲತ್ರಯಮನಾದೀದಂ ತನುತ್ರಯಗತಂ ಭವೇತ್ ॥ ೪೬ ॥

ತನುತ್ರಯಗತಾನಾದಿಮಲತ್ರಯಮಿದಂ ಗುರುಃ।
ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶೇತ್ ॥ ೪೭ ॥

ಮಲತ್ರಯಗಳನ್ನು ನಾಶ ಮಾಡುವ ದೀಕ್ಷೆ

ಇಷ್ಟಲಿಂಗವು ಸ್ಥೂಲಶರೀರಕ್ಕೆ, ಪ್ರಾಣಲಿಂಗವು ಸೂಕ್ಷ್ಮಶರೀರಕ್ಕೆ ಮತ್ತು ಭಾವ ಲಿಂಗವು ಕಾರಣಶರೀರಕ್ಕೆ, ಹೀಗೆ ಮೂರು ಲಿಂಗಗಳು ಮೂರು ಶರೀರಕ್ಕೆ ಸಂಬಂಧಿಸಿವೆ (೪೫). ಆಣವಮಲ, ಮಾಯೀಯಮಲ ಮತ್ತು ಕಾರ್ಮಿಕಮಲವೆಂಬ ಮಲಗಳು ಕ್ರಮವಾಗಿ (ಕಾರಣ, ಸೂಕ್ಷ್ಮ ಮತ್ತು ಸ್ಥೂಲ ಎಂಬ) ಮೂರು ಶರೀರಗಳಿಗೆ ಅಂಟಿಕೊಂಡಿವೆ. (೪೬). ಹೀಗೆ ಮೂರು ಶರೀರಗಳಿಗೆ ಅಂಟಿಕೊಂಡ ಮೂರು ಅನಾದಿ ಮಲಗಳನ್ನು (ವೇಧಾ, ಮಂತ್ರ ಮತ್ತು ಕ್ರಿಯಾ ಎಂಬ) ಮೂರು ದೀಕ್ಷೆಗಳಿಂದ ಸಂಪೂರ್ಣವಾಗಿ ಸುಟ್ಟು (ಭಾವ, ಪ್ರಾಣ, ಇಷ್ಟ ಎಂಬ) ಮೂರು ಲಿಂಗಗಳನ್ನು ನೆಲೆಗೊಳಿಸಬೇಕು. (೪೭).

ಟಿಪ್ಪಣಿ : ವೇಧಾ ದೀಕ್ಷೆ, ಮಂತ್ರ ದೀಕ್ಷೆ ಮತ್ತು ಕ್ರಿಯಾದೀಕ್ಷೆ ಎಂಬ ಮೂರು ದೀಕ್ಷೆಗಳ ಮೂಲಕ ಗುರುವು ಕಾರಣ, ಸೂಕ್ಷ್ಮ ಮತ್ತು ಸ್ಥೂಲ ಶರೀರಗಳಲ್ಲಿನ ಆಣವ, ಮಾಯೀಯ ಮತ್ತು ಕಾರ್ಮಿಕ ಮಲಗಳನ್ನು ನಾಶಗೊಳಿಸಿ ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳನ್ನು ನೆಲೆಗೊಳಿಸವನು. ಇದರಿಂದಲೇ ದೀಕ್ಷಾ ಎಂಬುದು ಮಹತ್ವದ್ದು. ದೀಕ್ಷಾ ಶಬ್ದದ ನಿಷ್ಪತ್ತಿಯೇ ಇದನ್ನು ಸೂಚಿಸುತ್ತದೆ: "ದೀಯತೇ ಲಿಂಗ ಸಂಬಂಧಃ ಕ್ಷೀಯತೇ ಚ ಮಲತ್ರಯಮ್। ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ।" (ಕಾರಣಾಗಮ, ಕ್ರಿ.ಪಾ., ೧.೧೨). ಹೀಗೆ ಮಲತ್ರಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಶದಿಂದ ಪಕ್ವವಾದ ಭಕ್ತಿಯಿಂದ ಕೂಡಿದ ಸಾಧಕನು ಇಷ್ಟ-ಪ್ರಾಣ-ಭಾವಲಿಂಗಾನು ಸಂಧಾನ ಪೂರ್ವಕ ಪೂಜೆ, ಧ್ಯಾನ, ಸಾಕ್ಷಾತ್ಕಾರಗಳಿಂದ, ಲಿಂಗಾಂಗ ಸಾಮರಸ್ಯರೂಪ ಮೋಕ್ಷವನ್ನು ಹೊಂದುತ್ತಾನೆ. ಇದನ್ನೇ ಪ್ರಸ್ತುತ ಆಗಮವು ಲಿಂಗತ್ರಯಾರಾಧನೆಯ ಮಹಿಮೆಯನ್ನು ಹೇಳುವ ನೆಪದಿಂದ ಸೂಚಿಸುತ್ತದೆ. ಮೂರು ಮಲಗಳಲ್ಲಿ ಆಣವ ಮಲವು ಇಚ್ಛಾಶಕ್ತಿಯ ಸಂಕೋಚ; ಇದರಿಂದ ಜೀವಾತ್ಮನು ತನ್ನ ವಿಭು ರೂಪವನ್ನು ಮರೆತು ತಾನು ಅಪೂರ್ಣ, ಅಣು ಎಂದು ಭಾವಿಸುವನು. "ಅಪೂರ್ಣಂ ಮನ್ಯತಾರೂಪಮ್ ಆಣವಂ ಮಲಮ್" (ಕ್ಷೇಮರಾಜ). ಮಾಯೀಯ ಮಲವು ಜ್ಞಾನಶಕ್ತಿಯ ಸಂಕೋಚ; ಇದರಿಂದ ಜೀವಾತ್ಮನು ತನ್ನನ್ನು ಪರಶಿವನಿಂದ ಬೇರೆ ಎಂದು ತಿಳಿಯುತ್ತಾನೆ, ದೇಹಾದಿಗಳೇ ತಾನು, ನಾನು ನನ್ನದು ಎಂಬ ಅಭಿಮಾನ ತಾಳುತ್ತಾನೆ. "ಭಿನ್ನವೇದ್ಯ-ಪ್ರಥಾರೂಪಂ ಮಾಯೀಯಮಲಮ್" (ಕ್ಷೇಮರಾಜ). ಕಾರ್ಮಿಕ ಮಲವು ಕ್ರಿಯಾಶಕ್ತಿಯ ಸಂಕೋಚ; ಇದರಿಂದ ಶುಭಾಶುಭ ಕರ್ಮ ಮಾಡುತ್ತಾ ಜೀವನು ಸಂಸಾರ ಚಕ್ರದಲ್ಲಿ ತಿರುಗುತ್ತಾನೆ. "ಶುಭಾಶುಭಾನುಷ್ಠಾನಮಯಂ ಕಾರ್ಮಮಲಮ್" (ಕ್ಷೇಮರಾಜ).

ಲಿಂಗತ್ರಯಾರಾಧನಫಲಮ್

ಪೂಜಯನ್ನಿಷ್ಟಲಿಂಗಂ ತು ನಿಧ್ಯಾಯನ್ ಪ್ರಾಣಲಿಂಗಕಮ್।
ಭಾವಯನ್ ಭಾವಲಿಂಗಂ ವೈ ಮೃತ್ಯುಪಾಶಾಂಶ್ಛಿನತ್ತಿ ಸಃ ॥ ೪೮ ॥

ಸರ್ವದೇವಮಯಂ ಲಿಂಗಂ ತಸ್ಮಿನ್ ಸಾಕ್ಷಾಚ್ಛಿವಃ ಸ್ವಯಮ್।
ಅನುಗ್ರಹಾಯ ವಸತಿ ತಸ್ಮಾಲ್ಲಿಂಗಂ ಪ್ರಪೂಜಯೇತ್ ॥ ೪೯ ॥

ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ।
ಲೀಯಂತೇ ಲಿಂಗಮೂಲೇ ತು ತಸ್ಮಾಲ್ಲಿಂಗಂ ಪ್ರಪೂಜಯೇತ್ ॥ ೫೦ ॥

ಆಕಾಶಂ ಲಿಂಗಮಿತ್ಯಾಹುಃ ಪೃಥಿವೀ ತಸ್ಯ ಪೀಠಿಕಾ।
ಆಲಯಃ ಸರ್ವಭೂತಾನಾಂ ಲಯನಾಲ್ಲಿಂಗಮುಚ್ಯತೇ ॥ ೫೧ ॥

ಯಸ್ತು ಪೂಜಯತೇ ನಿತ್ಯಂ ಲಿಂಗಂ ತ್ರಿಭುವನೇಶ್ವರಮ್।
ಸ ಸರ್ವಮೋಕ್ಷರಾಜ್ಯಸ್ಯ ಕ್ಷಿಪ್ರಂ ಭವತಿ ಭಾಜನಮ್ ॥ ೫೨ ॥

ಸರ್ವೇ ಲಿಂಗಮಯಾ ಲೋಕಾಃ ಸರ್ವಂ ಲಿಂಗೇ ಪ್ರತಿಷ್ಠಿತಮ್।
ತಸ್ಮಾತ್ ಸಂಪೂಜಯೇಲ್ಲಿಂಗಂ ಯದೀಚ್ಛೇತ್ ಸಿದ್ಧಿಮಾತ್ಮನಃ ॥ ೫೩ ॥

ಶಿವಲಿಂಗಸ್ವರೂಪಂ ಚ ಮಹಿಮಾನಂ ಚ ಶಾಶ್ವತಮ್।
ನ್ಯಬೋಧಯಂ ದೇವಗುರೋ ಕಿಮತಃ ಶ್ರೋತುಮಿಚ್ಛಸಿ ॥ ೫೪ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರ-
ಬೃಹಸ್ಪತಿಸಂವಾದೇ ಶಿವಶಾಸನೇ ಕ್ರಿಯಾಪಾದೇ ಲಿಂಗಸ್ವರೂಪನಿರೂಪಣಂ
ನಾಮ ತೃತೀಯಃ ಪಟಲಃ ॥ ೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಿಂಗತ್ರಯಾರಾಧನೆಯ ಫಲ

ಭಕ್ತನು ಇಷ್ಟಲಿಂಗವನ್ನು ಪೂಜಿಸುತ್ತಾ, ಪ್ರಾಣಲಿಂಗವನ್ನು ಧ್ಯಾನಿಸುತ್ತಾ ಮತ್ತು ಭಾವಲಿಂಗವನ್ನು ಭಾವಿಸುತ್ತ ತನ್ನ ಸಾವಿನ ಕಟ್ಟುಗಳನ್ನು ಕತ್ತರಿಸಿಕೊಳ್ಳುತ್ತಾನೆ. (೪೮). ಲಿಂಗವು ಸರ್ವದೇವಮಯ, ಶಿಷ್ಯರ ಅನುಗ್ರಹಕ್ಕಾಗಿ ಅದರಲ್ಲೇ ಶಿವನು ನೆಲೆಸಿದ್ದಾನೆ. ಆದ್ದರಿಂದ ಲಿಂಗವನ್ನು ಪೂಜಿಸಬೇಕು. (೪೯). ಭೂಮಿಯ ಮೇಲೆ ಇರುವ ಎಲ್ಲಾ ತೀರ್ಥಗಳು, ಪುಣ್ಯಕ್ಷೇತ್ರಗಳು ಲಿಂಗಮೂಲದಲ್ಲೇ ಲೀನವಾಗಿವೆ. ಆದ್ದರಿಂದ ಲಿಂಗವನ್ನು ಪೂಜಿಸಬೇಕು. (೫೦). ಆಕಾಶವೇ ಲಿಂಗ ಭೂಮಿಯೇ ಅದರ ಪೀಠಿಕೆ ಎನ್ನುತ್ತಾರೆ. ಅದು ಎಲ್ಲಾ ಪ್ರಾಣಿಗಳ ಆಶ್ರಯವಾಗಿವೆ. ಎಲ್ಲವನ್ನೂ ತನ್ನಲ್ಲಿ ಲಯಗೊಳಿಸಿ-ಕೊಳ್ಳುವುದೆಂದೇ ಅದು ಲಿಂಗವೆಂದು ಕರೆಯಲ್ಪಡುತ್ತದೆ. (೫೧). ಯಾರು ಮೂರು ಲೋಕಗಳ ಒಡೆಯನಾದ ಲಿಂಗವನ್ನು ನಿತ್ಯವೂ ಪೂಜಿಸುವನೋ ಅವನು ಶೀಘ್ರವೇ ಸಮಗ್ರ ಮೋಕ್ಷರಾಜ್ಯಕ್ಕೆ ಯೋಗ್ಯನಾಗುತ್ತಾನೆ. (೫೨). ಎಲ್ಲಾ ಲೋಕಗಳೂ ಲಿಂಗಮಯ. ಎಲ್ಲವೂ ಲಿಂಗದಲ್ಲಿಯೇ ನೆಲೆಯಾಗಿವೆ. ಆದ್ದರಿಂದ ಆತ್ಮಸಿದ್ಧಿಯನ್ನು ಬಯಸುವವನು ಲಿಂಗವನ್ನು ಪೂಜಿಸಬೇಕು. (೫೩). ದೇವಗುರುವೇ, ಶಿವಲಿಂಗದ ಸ್ವರೂಪವನ್ನು ಮತ್ತು ಅದರ ಶಾಶ್ವತ ಮಹಿಮೆಯನ್ನು ಬೋಧಿಸಿರುವೆನು. ಇನ್ನೇನು ಕೇಳಲು ಇಚ್ಛಿಸುವೆ? (೫೪).

ಇಲ್ಲಿಗೆ ಶ್ರೀ ಚಂದ್ರಜ್ಞಾನಾಗಮದ ಉತ್ತರ ಭಾಗದಲ್ಲಿ ಅನಂತರುದ್ರ-ಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಕ್ರಿಯಾಪಾದದಲ್ಲಿ ಲಿಂಗಸ್ವರೂಪ ನಿರೂಪಣವೆಂಬ ತೃತೀಯ ಪಟಲವು ಮುಗಿಯಿತು. (೩).

ಟಿಪ್ಪಣಿ : ಇಷ್ಟಲಿಂಗವನ್ನು ಪೂಜಿಸಿ, ಅದರಲ್ಲಿ ದೃಷ್ಟಿಯೋಗವನ್ನು ಸಾಧಿಸಿ, ಪ್ರಾಣಲಿಂಗದಲ್ಲಿ ಮನಸ್ಸನು ನೆಲೆಗೊಳಿಸಿ, ನಿರಾಕಾರ-ನಿಷ್ಕಲ ಭಾವಲಿಂಗದ ಭಾವನೆಯನ್ನು ಬಲಿಸಿಕೊಂಡು ಮಹಾಲಿಂಗದಲ್ಲಿ ಒಂದಾಗಬೇಕು. "ತಸ್ಮಾಲ್ಲಿಂಗಂ ಪ್ರಪೂಜಯೇತ್" ಎಂಬ ಅನುರಣನೆಯು ಇದನ್ನೇ ಒತ್ತಿ ಒತ್ತಿ ಹೇಳುತ್ತದೆ. ಲಿಂಗವು ವಿಶ್ವದ ಆಕಾರದಲ್ಲಿದೆ, ವಿಶ್ವವು ಲಿಂಗಮಯ ಎಂಬ ತತ್ತ್ವವನ್ನು ಈ ಆಗಮವು ನಿರೂಪಿಸಿದೆ. ಈ ವಿಶ್ವರೂಪದ ಲಿಂಗವನ್ನು ಪೂಜಿಸುವುದರಿಂದ ವಿಶ್ವಾತ್ಮನಾದ ಪರಶಿವನಲ್ಲಿ ಬೆರೆತು ಬೇರಾಗದಂತಹ ಕೌಶಲವು ಸಿದ್ಧಿಸುತ್ತದೆ.

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚತುರ್ಥಃ ಪಟಲಃ

॥ ಜಂಗಮಸ್ವರೂಪನಿರೂಪಣಮ್॥

ಬೃಹಸ್ಪತಿರುವಾಚ

ಕರುಣಾಕರ ಸರ್ವಜ್ಞ ಭಕ್ತಾನುಗ್ರಹತತ್ಪರ।
ಸರ್ವಾಗಮಾಮೃತನಿಧೇಽನಂತರುದ್ರ ನಮೋಽಸ್ತು ತೇ ॥ ೧ ॥

ಧನ್ಯೋಽಸ್ಮಿ ಶಿವಲಿಂಗಸ್ಯ ವೈಭವಾಕರ್ಣನಾದಹಮ್।
ಲಕ್ಷಣಂ ಜಂಗಮಸ್ಯಾಪಿ ಮಾಹಾತ್ಮ್ಯಂ ಬ್ರೂಹ್ಯನುಗ್ರಹಾತ್ ॥ ೨ ॥

ಬೃಹಸ್ಪತಿಯು ಹೇಳಿದನು

ಕರುಣಾಸಾಗರನೇ, ಸರ್ವಜ್ಞನೇ, ಭಕ್ತರಿಗೆ ಅನುಗ್ರಹಿಸುವುದರಲ್ಲಿ ಮಗ್ನನಾದವನೇ, ಸರ್ವಾಗಮಗಳ ಜ್ಞಾನಾಮೃತದ ನಿಧಿಯೇ, ಅನಂತರುದ್ರನೇ, ನಿನಗೆ ನಮಸ್ಕಾರ. (೧). ಶಿವಲಿಂಗದ ವೈಭವದ ಬಗ್ಗೆ ಕೇಳಿ ನಾನು ಧನ್ಯನಾದೆ. ಈಗ ಅನುಗ್ರಹಪೂರ್ವಕವಾಗಿ ಜಂಗಮನ ಲಕ್ಷಣವನ್ನು ಮತ್ತು ಮಾಹಾತ್ಮ್ಯವನ್ನು ಹೇಳು. (೨).

ಅನಂತರುದ್ರ ಉವಾಚ

ಅಹೋ ನಿಬೋಧಯಾಮ್ಯದ್ಯ ಶೃಣು ಜಂಗಮವೈಭವಮ್।
ನಿಗೂಢಮಾಗಮಾಂತೇಷು ಯಜ್‌ಜ್ಞಾತ್ವಾಽಮೃತಮಶ್ನುತೇ ॥ ೩ ॥

ಅನಂತರುದ್ರನು ಹೇಳಿದನು

ಆಗಲಿ ಈಗ ಆಗಮೋತ್ತರ ಭಾಗಗಳಲ್ಲಿ ಅಡಗಿರುವ ಜಂಗಮ ವೈಭವವನ್ನು ಬೋಧಿಸುತ್ತೇನೆ, ಕೇಳು. ಅದನ್ನು ತಿಳಿದರೆ ಅಮೃತತತ್ವದ ಪ್ರಾಪ್ತಿಯಾಗುತ್ತದೆ. (೩).

ಟಿಪ್ಪಣಿ : ವೇದಾಂತಪದದಿಂದ ವೇದದ ಅಂತಿಮ ಅಥವಾ ಉತ್ತರ ಭಾಗವಾದ ಉಪನಿಷತ್ತುಗಳನ್ನು ತಿಳಿದುಕೊಂಡಂತೆ, ಆಗಮಾಂತ ಶಬ್ದದಿಂದ ಆಗಮದ ಅಂತಿಮ ಅಥವಾ ಉತ್ತರ ಭಾಗವನ್ನು ತಿಳಿದುಕೊಳ್ಳಬೇಕು. ಶ್ರೀಸಿದ್ಧಾಂತಶಿಖಾಮಣಿಯಲ್ಲಿ (೫.೧೪) ಸ್ಪಷ್ಟ ಪಡಿಸಿದಂತೆ ಸಿದ್ಧಾಂತವೆಂದು ಕರೆಯಲಾಗುವ ಶಿವನಿಂದ ಬೋಧಿಸಲ್ಪಟ್ಟ ಕಾಮಿಕಾದಿ ವಾತುಲಾಂತ ಶೈವಾಗಮ ಮಹಾತಂತ್ರದ ಉತ್ತರ ಭಾಗದಲ್ಲಿ ಶ್ರೇಷ್ಠವಾದ ವೀರಶೈವ ಮತವು ನಿರ್ದಿಷ್ಟವಾಗಿದೆಃ "ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ। ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಂಗಮಲಕ್ಷಣಂ ಮಹಿಮಾ ಚ

ಜಂಗಮಂ ಸ್ಥಾವರಂ ಚೇತಿ ಶಂಭೋಃ ರೂಪದ್ವಯಂ ಸ್ಮೃತಮ್।
ಸ್ಥಾವರಂ ಚ ಸ್ವಯಂವ್ಯಕ್ತಂ ಪ್ರತಿಷ್ಠಿತಮಿತಿ ದ್ವಿಧಾ ॥ ೪ ॥
ಸ್ವಯಂವ್ಯಕ್ತಂ ತತ್ರ ಭವೇತ್ ಕಾಶೀವಿಶ್ವೇಶ್ವರಾದಿಕಮ್।
ಪ್ರತಿಷ್ಠಿತಂ ಕರ್ಷಣಾದ್ಯೈಃ ಸಂಸ್ಕೃತಂ ಮಾನುಷ್ಯೈರ್ಭವೇತ್ ॥ ೫ ॥

೩. ಜಂಗಮನ ಲಕ್ಷಣ ಮತ್ತು ಮಹಿಮೆ

ಜಂಗಮ ಮತ್ತು ಸ್ಥಾವರ ಎಂದು ಶಂಭುವಿನ ಎರಡು ರೂಪಗಳು ಹೇಳಲ್ಪಡುತ್ತವೆ. ಅವುಗಳಲ್ಲಿ ಸ್ಥಾವರವು ಸ್ವಯಂವ್ಯಕ್ತ ಮತ್ತು ಪ್ರತಿಷ್ಠಿತವೆಂದು ಎರಡು ವಿಧ. (೪). ಸ್ವಯಂವ್ಯಕ್ತವೆಂದರೆ ಕಾಶೀ ವಿಶ್ವೇಶ್ವರ ಮುಂತಾದವು. ಪ್ರತಿಷ್ಠಿತವೆಂದರೆ ಭೂಮಿಯನ್ನು ಕೃಷಿ ಮಾಡುವುದರಿಂದ ಹಿಡಿದು ಪ್ರತಿಷ್ಠೆ ಮಾಡುವ ಕ್ರಿಯಾಕಲಾಪದ ಮೂಲಕ ಮನುಷ್ಯರಿಂದ ಸಂಸ್ಕರಿಸಲ್ಪಟ್ಟದ್ದು. (೫).

ಟಿಪ್ಪಣಿ : ಕರ್ಷಣಾದ್ಯೈಃ ಸಂಸ್ಕೃತಮ್ = ದೇವಾಲಯ ನಿರ್ಮಾಣಕ್ಕೆ ತಕ್ಕ ಭೂಮಿಯನ್ನು ನಿರ್ಧರಿಸಿದ ಮೇಲೆ ಆ ಭೂಮಿಯನ್ನು ಉಳಬೇಕು. ಆದಕ್ಕೆ ಕರ್ಷಣ ವಿಧಿಯೆಂದು ಕರೆಯುತ್ತಾರೆ. ಅದರಿಂದ ಪ್ರತಿಷ್ಠೆಯವರೆಗೆ ಅನೇಕ ಕಾರ್ಯಗಳಿರುತ್ತವೆ. ಅವುಗಳಿಂದ ಸಂಸ್ಕಾರಕ್ಕೊಳಗಾದದ್ದು ಪ್ರತಿಷ್ಠಿತ. (ಇದೇ ಲೇಖಕನ "ಶೈವಾಗಮಗಳು: ಒಂದು ಅಧ್ಯಯನ" ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನ ಪ್ರಕಾಶನ, ಪುರ, ತಾಲೂಕು ಹೂವಿನ ಹಡಗಲಿ, ೧೯೯೪, ಪು.೩೨-೩೯ ನೋಡಿರಿ).

ದ್ವಿವಿಧೋ ಜಂಗಮಃ

ಜಂಗಮಂ ದ್ವಿವಿಧಂ ಪ್ರೋಕ್ತಂ ಮಾಂತ್ರಿಕಂ ಸಹಜಂ ತ್ವಿತಿ।
ಮಾಂತ್ರಿಕಂ ಮಂತ್ರಸಾಮರ್ಥ್ಯಾದಾವಾಹಿತಮುದೀರಿತಮ್॥
ಧ್ರಿಯಮಾಣಂ ಮಹಾಶೈವೈಶ್ಚರಲಿಂಗಾದಿಕಂ ಮುನೇ ॥ ೬ ॥
ಸಹಜಂ ಜಂಗಮಂ ಮಾಹೇಶ್ವರ ಇತ್ಯಾಭಿಧೀಯತೇ।
ಮಾಹೇಶ್ವರಶ್ಚರೋ ಭಕ್ತಃ ಶೈವೋ ಜಂಗಮ ಇತ್ಯಪಿ॥
ಸಹಜಸ್ಯಾಭಿಧಾನಾನಿ ಭವಂತೀಶ್ವರಶಾಸನಾತ್ ॥ ೭ ॥

ಜಂಗಮವು ಎರಡು ವಿಧ

ಜಂಗಮವು ಮಾಂತ್ರಿಕ ಮತ್ತು ಸಹಜ ಎಂದು ಎರಡು ವಿಧ. ಮಾಂತ್ರಿಕವೆಂದರೆ ಮಂತ್ರದ ಸಾಮರ್ಥ್ಯದಿಂದ ಶಿವಸ್ವರೂಪವು ಆವಾಹಿಸಲ್ಪಟ್ಟು ಮಹಾಶೈವರಿಂದ (ವೀರಶೈವರಿಂದ) ಧರಿಸಿಕೊಳ್ಳಲ್ಪಡುವ ಚರಲಿಂಗ (ಇಷ್ಟಲಿಂಗ) ಮುಂತಾದುವು. (೬). ಸಹಜ ಜಂಗಮವೆಂದರೆ ಮಾಹೇಶ್ವರನೆಂದು ಹೇಳಲ್ಪಡುತ್ತದೆ. ಮಾಹೇಶ್ವರ, ಚರ, ಭಕ್ತ, ಶೈವ, ಜಂಗಮ ಇತ್ಯಾದಿಗಳು ಶಿವನ ಶಾಸನದಿಂದ ರೂಢಿಗೆ ಬಂದ ಸಹಜ ಜಂಗಮನ ಹೆಸರುಗಳು. (೭).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತ್ರಿವಿಧಃ ಸಹಜಜಂಗಮಃ

ಬ್ರಹ್ಮಚಾರೀ ಗೃಹೀ ಚೈವ ನಿರಾಭಾರೀತಿ ತೇ ತ್ರಯಃ।
ಯಥೋತ್ತರಂ ವಿಶಿಷ್ಟಂತೇ ಪೂಜನೀಯಾ ಯಥಾವಿಧಿ ॥ ೮ ॥

ಸಹಜಜಂಗಮನು ಮೂರು ವಿಧ

ಬ್ರಹ್ಮಚಾರಿ, ಗೃಹಿ ಮತ್ತು ನಿರಾಭಾರಿ ಎಂದು ಅವರು (ಸಹಜ ಜಂಗಮರು) ಮೂರು ವಿಧ. ಅವರು ಮೊದಲನೆಯವರಿಗಿಂತ ಎರಡನೆಯವರು ಮತ್ತು ಎರಡನೆಯವರಿಗಿಂತ ಮೂರನೆಯವರು ಶ್ರೇಷ್ಠ. ಅವರು ವಿಧಿಗೆ ಅನುಸಾರವಾಗಿ ಪೂಜನೀಯರು. (೮).

ಭಕ್ತಿಚಿಹ್ನಾನಿ

ವಕ್ಷ್ಯಾಮಿ ಭಕ್ತಿಚಿಹ್ನಾನಿ ಪ್ರೀತೀ ರುದ್ರಾಕ್ಷಧಾರಣೇ।
ಭಸ್ಮತ್ರಿಪುಂಡ್ರೇ ವಿಶ್ವಾಸಃ ಶ್ರದ್ಧಾ ಪಂಚಾಕ್ಷರೇ ಶುಭೇ ॥ ೯ ॥
ಆಸಕ್ತಿಃ ಶಿವಶಬ್ದೇ ಚಾತ್ಯಾದರೋ ಲಿಂಗಧಾರಣೇ।
ಚರಾಚರೇ ಪರಾ ಪ್ರೀತಿಃ ಶಿವಕಾರ್ಯೇ ಮನೋಜಯಃ ॥ ೧೦ ॥
ಶೈವಶಾಸ್ತ್ರೇ ಪರಾ ಶ್ರದ್ಧಾ ತದಧ್ಯಾಪನಮನ್ವಹಮ್।
ಸ್ವಯಮಧ್ಯಯನಂ ಚಾಪಿ ಚರಲಕ್ಷ್ಮಾಣಿ ನಿಶ್ಚಿನು ॥ ೧೧ ॥

ಭಕ್ತ ಚಿಹ್ನೆಗಳು

ಭಕ್ತಿಯ ಲಕ್ಷಣಗಳನ್ನು ಹೇಳುತ್ತೇನೆ. ರುದ್ರಾಕ್ಷವನ್ನು ಧರಿಸುವುದರಲ್ಲಿ ಪ್ರೀತಿ, ಭಸ್ಮತ್ರಿಪುಂಡ್ರದಲ್ಲಿ ವಿಶ್ವಾಸ, ಮಂಗಲಕರ ಪಂಚಾಕ್ಷರ ಮಂತ್ರದಲ್ಲಿ ಶ್ರದ್ಧೆ, ಶಿವಶಬ್ದದಲ್ಲಿ ಆಸಕ್ತಿ, ಲಿಂಗಧಾರಣೆಯಲ್ಲಿ ಅತ್ಯಂತ ಗೌರವ, ಚರಾಚರಗಳಲ್ಲಿ ಪರಮ ಪ್ರೀತಿ, ಶಿವಕಾರ್ಯಕ್ಕಾಗಿ ಮನಸ್ಸಿನ ಮೇಲೆ ಜಯ, ಶೈವಶಾಸ್ತ್ರದಲ್ಲಿ ಪರಮಶ್ರದ್ಧೆ, ಅದನ್ನು ಬೋಧಿಸುವುದು ನಿತ್ಯಕಾರ್ಯ, ಸ್ವತಃ ಅಧ್ಯಯನ ಮಾಡುವುದು, ಇವು ಜಂಗಮನ ಲಕ್ಷಣಗಳೆಂದು ನಿಶ್ಚಿತ ಬುದ್ಧಿಯಿಂದ ತಿಳಿ. (೯-೧೧).

ಜಂಗಮಸ್ಯ ದಶ ಬಾಹ್ಯಚಿಹ್ನಾನಿ

ತೇಷಾಂ ಬಾಹ್ಯಾನಿ ಚಿಹ್ನಾನಿ ದಶ ಸಂತಿ ಬೃಹಸ್ಪತೇ।
ಪ್ರಥಮಂ ಭಸ್ಮರುದ್ರಾಕ್ಷಲಿಂಗಧಾರಣಮೀರಿತಮ್॥
ದ್ವಿತೀಯಂ ಗುರುಸೇವಾ ಚ ಶಿವಸ್ತೋತ್ರಂ ತೃತೀಯಕಮ್ ॥ ೧೨ ॥
ನಾಮೋಚ್ಚಾರಣಮೀಶಸ್ಯ ಚತುರ್ಥಂ ಪರಿಕೀರ್ತಿತಮ್।
ಪಂಚಮಂ ದೇವದೇವಸ್ಯ ಪೂಜನಂ ಸಮುದೀರಿತಮ್ ॥ ೧೩ ॥
ಷಷ್ಠಂ ಶಿವಾಗಮಾರ್ಥಾನುಸಂಧಾನಮಿತಿ ಚೋದಿತಮ್।
ತಥಾ ಶಿವಪುರಾಣಾನಾಂ ಶ್ರವಣಂ ಸಪ್ತಮಂ ವಿದುಃ ॥ ೧೪ ॥
ನಮಸ್ಕಾರಶ್ಚರಾಣಾಂ ಚ ಪರಿಕೀರ್ತಿತಮಷ್ಟಕಮ್।
ನವಮಂ ಶಿವಭಕ್ತಾನಾಂ ಗೃಹಭೋಜನಮೀರಿತಮ್ ॥ ೧೫ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾನಂ ಚ ದಶಮಂ ಜ್ಞೇಯಂ ಜಂಗಮೇ ಚ ಗುರಾವಪಿ।
ಏವಂ ಬಾಹ್ಯಾನಿ ಚಿಹ್ನಾನಿ ಕಥಿತಾನಿ ದಶೈವ ತು ॥ ೧೬ ॥

ಜಂಗಮನ ಹತ್ತು ಬಾಹ್ಯ ಲಕ್ಷಣಗಳು

ಬೃಹಸ್ಪತಿಯೇ, ಅವರ (ಜಂಗಮರ) ಹತ್ತು ಬಾಹ್ಯ ಲಕ್ಷಣಗಳಿವೆ. ಮೊದಲನೆಯದಾಗಿ ಭಸ್ಮ ರುದ್ರಾಕ್ಷ ಮತ್ತು ಲಿಂಗಧಾರಣಗಳು ಹೇಳಲ್ಪಟ್ಟಿವೆ. ಎರಡನೆಯದಾಗಿ ಗುರು ಸೇವೆ ಮತ್ತು ಮೂರನೆಯದಾಗಿ ಶಿವಸ್ತೋತ್ರ. (೧೨). ಈಶ್ವರನ ನಾಮ ಜಪವು ನಾಲ್ಕನೆಯದೆಂದು ಹೇಳಲ್ಪಟ್ಟಿದೆ. ಐದನೆಯದಾಗಿ ದೇವ ದೇವನಾದ ಶಿವನ ಪೂಜೆಯೆಂದು ಹೇಳಲಾಗಿದೆ. (೧೩). ಆರನೆಯದಾಗಿ ಶಿವಾಗಮಗಳ ಅರ್ಥವನ್ನು ಮತ್ತೆ ಮತ್ತೆ ಚಿಂತನ ಮಾಡುವುದು ಎಂದು ಸೂಚಿತವಾಗಿದೆ. ಶಿವಪುರಾಣಗಳ ಶ್ರವಣವನ್ನು ಏಳನೆಯದೆಂದು ತಿಳಿಯುತ್ತಾರೆ. (೧೪). ಇತರ ಜಂಗಮರಿಗೆ ನಮಸ್ಕರಿಸುವುದು ಎಂಟನೆಯದೆಂದು ಹೇಳಲ್ಪಟ್ಟಿದೆ. ಶಿವಭಕ್ತರಿಗೆ ಮನೆಯಲ್ಲಿ ಭೋಜನ ಮಾಡಿಸುವುದು ಒಂಬತ್ತನೆಯದೆಂದು ಹೇಳಲಾಗಿದೆ. (೧೫). ಗುರುವಿಗೆ ಅಥವಾ ಜಂಗಮನಿಗೆ ದಾನ ಮಾಡುವುದು ಹತ್ತನೆಯದೆಂದು ತಿಳಿಯಬೇಕು. ಇವು ಹತ್ತು ಜಂಗಮನ ಬಾಹ್ಯ ಲಕ್ಷಣಗಳೆಂದು ಹೇಳಲ್ಪಟ್ಟಿವೆ. (೧೬).

ಟಿಪ್ಪಣಿ : ಪಾರಮೇಶ್ವರಾಗಮ, ೯.೫೮-೬೩ರೊಂದಿಗೆ ಹೋಲಿಸಿರಿ: "ತ್ರಿಕಾಲಂ ಭಸ್ಮನಾಸ್ನಾನಂ ಶಕ್ತಿತೋ ಲಿಂಗಪೂಜನಂ। ಭೈಕ್ಷ್ಯಂ ಚ ಶಿವಭಕ್ತೇಷು ವೀರಶೈವಸ್ಯ ಲಕ್ಷಣಮ್॥ ಸ್ಮರಣಂ ಪೂಜನಂ ಧ್ಯಾನಂ ತತ್ಕಥಾ ಸ್ತೋತ್ರಮನ್ವಹಮ್। ಶಂಕರಸ್ಯ ಮಮೇಶಸ್ಯ ವೀರಶೈವಸ್ಯ ಲಕ್ಷಣಮ್॥ ಇತ್ಯಾದಿ"

ಆಂತರಾಣಿ ತ್ರೀಣಿ ಚಿಹ್ನಾನಿ

ತ್ರೀಣ್ಯಾಂತರಾಣಿ ಚಿಹ್ನಾನಿ ಕಥಿತಾನಿ ಮಹಾತ್ಮನಾಮ್।
ಶೃಣು ತಾನಿ ಯಥಾ ವಿದ್ವನ್ ಮಾನಸಃ ಪ್ರಥಮೋ ಜಪಃ ॥ ೧೭ ॥
ಪೂಜಾ ಚ ಮಾನಸೀ ಜ್ಞೇಯಾ ದ್ವಿತೀಯಾ ಪರಮೇಶಿತುಃ।
ಸಾಕ್ಷಾತ್ಕಾರಸ್ತೃತೀಯಸ್ತು ಸ್ವಾಂತರೇ ಪರಮೇಶಿತುಃ ॥ ೧೮ ॥
ಆಂತರಾಣ್ಯಪಿ ಬಾಹ್ಯಾನಿ ಯೇಷಾಂ ಸಂತಿ ಯದಾ ಪುನಃ।
ತದಾಽಪರಾಣಿ ಚಿಹ್ನಾನಿ ದಶ ತೇಷಾಂ ಭವಂತಿ ಹಿ ॥ ೧೯ ॥

ಮೂರು ಆಂತರ ಲಕ್ಷಣಗಳು

ಮಹಾತ್ಮರಾದ ಜಂಗಮರ ಮೂರು ಆಂತರ ಲಕ್ಷಣಗಳು ಹೇಳಲ್ಪಟ್ಟಿವೆ. ಜ್ಞಾನಿಯೇ, ಅವು ಹೇಗಿವೆ ಎಂಬುದನ್ನು ಕೇಳು. ಮೊದಲನೆಯದು ಮಾನಸೀ ಜಪ. (೧೭). ಪರಮೇಶ್ವರನ ಮಾನಸೀ ಪೂಜೆಯು ಎರಡನೆಯದು ಎಂದು ತಿಳಿಯಬೇಕು. ಒಳಗೆ ಪರಮೇಶ್ವರನ ಸಾಕ್ಷಾತ್ಕಾರವು ಮೂರನೆಯದು. (೧೮). ಯಾರಿಗೆ ಮೇಲೆ ಹೇಳಿದ ಆಂತರ ಮತ್ತು ಬಾಹ್ಯ ಲಕ್ಷಣಗಳು ಇರುವವೋ ಯಾವಾಗ ಇರುವವೋ ಅವರಿಗೆ ಆಗ ಬೇರೆಯ ಹತ್ತು ಲಕ್ಷಣಗಳೂ ಇರುತ್ತವೆ. (೧೯).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಪರಾಣಿ ದಶ ಭಕ್ತಿಚಿಹ್ನಾನಿ

ಕಂಠೇ ವಿಕಾರಃ ಪ್ರಥಮಂ ಗದ್ಗದಾಖ್ಯಂ ದ್ವಿತೀಯಕಮ್।
ಜಿಹ್ವಾಸ್ಪಂದಸ್ತೃತೀಯಂ ತು ಸ್ಫುರಣಂ ತ್ವೋಷ್ಠಯೋರಪಿ ॥ ೨೦ ॥
ಕಂಪನಂ ಚ ಶರೀರಸ್ಯ ಚತುರ್ಥಂ ಭಕ್ತಿಲಕ್ಷಣಮ್।
ರೋಮಾಂಚಃ ಪಂಚಮಂ ಷಷ್ಠಃ ಸ್ವೇದಶ್ಚ ಕೀರ್ತಿತಮ್ ॥ ೨೧ ॥
ಸ್ಖಲನಂ ಸಪ್ತಮಂ ಜ್ಞೇಯಮಷ್ಟಮಂ ಬಾಷ್ಪನಿರ್ಗಮಃ।
ರೋದನಂ ನವಮಂ ಚಿಹ್ನಂ ದಶಮಂ ಪಾರವಶ್ಯಕಮ್ ॥
ಇಮಾನಿ ದಶಚಿಹ್ನಾನಿ ಭಕ್ತೇರುಕ್ತಾನಿ ಶೂಲಿನಾ ॥ ೨೨ ॥
ಉಕ್ತಾನ್ಯೇತಾನಿ ಚಿಹ್ನಾನಿ ಯೇಷಾಂ ಸಂತಿ ಮಹಾತ್ಮನಾಮ್।
ತೇ ಭಕ್ತಾ ಶಾಂಕರಾ ಜ್ಞೇಯಾಃ ಸರ್ವಲೋಕೈಕಪಾವನಾಃ ॥ ೨೩ ॥

ಭಕ್ತಿಯ ಬೇರೆ ಹತ್ತು ಚಿಹ್ನೆಗಳು

ಮೊದಲನೆಯದಾಗಿ ಕಂಠದಲ್ಲಿ ವಿಕಾರ, ಎರಡನೆಯದು ಗದ್ಗದವಾದ ಮಾತು, ಮೂರನೆಯದು ನಾಲಿಗೆಯ ಸ್ಪಂದ ಮತ್ತು ತುಟಿಗಳು ಅದುರುವಿಕೆ. (೨೦). ನಾಲ್ಕನೆಯದು ಶರೀರದ ಕಂಪನವೆಂಬ ಭಕ್ತಿ ಲಕ್ಷಣ. ಐದನೆಯದು ರೋಮಾಂಚ ಮತ್ತು ಆರನೆಯದು ಬೆವರುವುದು ಎಂದು ಹೇಳಲಾಗಿದೆ. (೨೧). ಏಳನೆಯದನ್ನು ಜಾರುವುದು ಎಂದು ತಿಳಿಯಲಾಗಿದೆ. ಒಂಬತ್ತನೆಯದು ರೋದನ ಮತ್ತು ಹತ್ತನೆಯದು ಪರವಶತೆ. ಇವುಗಳನ್ನು ಹತ್ತು ಭಕ್ತಿ ಲಕ್ಷಣಗಳೆಂದು ಶಿವನು ಹೇಳಿದ್ದಾನೆ. (೨೨). ಇಲ್ಲಿ ಹೇಳಿದ ಲಕ್ಷಣಗಳು ಯಾವ ಮಹಾತ್ಮರಲ್ಲಿ ಇರುವವೋ ಅವರೇ ಶಿವಭಕ್ತರೆಂದೂ ಎಲ್ಲಾ ಲೋಕಗಳನ್ನು ಪಾವನ ಮಾಡುವವರೆಂದೂ ತಿಳಿಯಬೇಕು. (೨೩).

ಭಕ್ತಮಹಿಮಾ

ಅಪಾರೋ ಭಕ್ತಮಹಿಮಾ ತದ್ವಕ್ತುಂ ಕೇನ ಶಕ್ಯತೇ।
ಸ್ವಭಕ್ತಾನ್ ದೇವದೇವೋಽಪಿಯತ್ಸ್ವಸ್ಮಾನ್ ಮನುತೇಽಧಿಕಾನ್ ॥ ೨೪ ॥
ಅಗಸ್ತ್ಯಃ ಕುಂಭಜನ್ಮಾ ತು ಶಿವಭಕ್ತ್ಯೈವ ಕೇವಲಮ್।
ಪಪೌ ಸಮುದ್ರಮತುಲಂ ಶಿವಭಕ್ತ್ಯುಪಬೃಂಹಿತಃ ॥ ೨೫ ॥
ಅಣುರ್ಮಹತ್ತ್ವಂ ಸಂಯಾತಿ ಮಹಚ್ಚಾಣುತ್ವಮಾವ್ರಜೇತ್।
ಸ್ಥಲಂ ಜಲಧಿತಾಂ ಯಾತಿ ಜಲಧಿಃ ಸ್ಥಲತಾಂ ವ್ರಜೇತ್ ॥ ೨೬ ॥
ಸಂಕಲ್ಪಮಾತ್ರತೋ ಯೇಷಾಂ ಶಿವಾನುಭವಶಾಲಿನಾಮ್।
ಮಹಿಮಾ ವಾಙ್ಮನೋದೂರಸ್ತೇಷಾಂ ಕೈರ್ವರ್ಣ್ಯತೇ ಕಥಮ್ ॥ ೨೭ ॥
ತಸ್ಮಾತ್ ಸರ್ವೋತ್ತಮಾ ಭಕ್ತಾಃ ಶಿವೇನೈವೋದಿತಂ ಪುರಾ।
ಯದ್ಯದಿಚ್ಛಂತಿ ಮೇ ಭಕ್ತಾಸ್ತ್ರೈಲೋಕ್ಯೇಽಪಿ ಚ ದುರ್ಲಭಮ್॥
ತತ್ಸದ್ಯಃ ಸಾಧಯಿಷ್ಯಾಮಿ ವ್ರತಮೇತತ್ ಸದಾ ಮಮ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತನ ಮಹಿಮೆ

ಭಕ್ತನ ಮಹಿಮೆಯು ಅಪಾರ. ಅದನ್ನು ವರ್ಣಿಸುವುದು ಯಾರಿಗೆ ಸಾಧ್ಯ? ಏಕೆಂದರೆ ದೇವದೇವನೂ ಕೂಡ ತನ್ನ ಭಕ್ತರನ್ನು ತನಗಿಂತಲೂ ಶ್ರೇಷ್ಠನೆಂದು ತಿಳಿಯುತ್ತಾನೆ. (೨೪). ಕುಂಭದಿಂದ ಜನಿಸಿದ ಅಗಸ್ತ್ಯನು ಶಿವಭಕ್ತಿ ಮಾತ್ರದಿಂದಲೇ ಎಣೆಯಿಲ್ಲದ ಸಮುದ್ರವನ್ನು ಕುಡಿದನು. ಶಿವಭಕ್ತಿಯಿಂದ ತುಂಬಿಕೊಂಡ ಅಣುವು (ಅಲ್ಪನೂ ಕೂಡ) ಮಹತ್ತ್ವವನ್ನೂ ಹೊಂದುತ್ತದೆ ಮತ್ತು ಮಹತ್ತಾದುದು ಅಣುತ್ವವನ್ನು ಹೊಂದೀತು, ಬಯಲು ಸಮುದ್ರವಾದೀತು ಹಾಗೆಯೇ ಸಮುದ್ರವು ಬಯಲಾದೀತು. ಯಾವ ಆ ಶಿವಾನುಭಾವ ಶೀಲರಾದ ಸಂಕಲ್ಪ ಮಾತ್ರದಿಂದ ಮಹಾತ್ಮರ ಮಹಿಮೆಯು ಮಾತಿಗೆ ಮತ್ತು ಮನಸ್ಸಿಗೆ ನಿಲುಕದಂತಿದೆ. ಅದು ಹೇಗೆಂಬುದನ್ನು ಯಾರು ಹೇಳಲು ಸಾಧ್ಯ? (೨೫-೨೭). ಆದ್ದರಿಂದ ಸರ್ವೋತ್ತಮರಾದ ಭಕ್ತರನ್ನು ಕುರಿತು ಶಿವನೇ ಹೇಳಿದ್ದ. ನನ್ನ ಭಕ್ತರೆಲ್ಲಾ ಇಚ್ಛಿಸಿದ ಯಾವುದೇ ವಸ್ತುವಾಗಲಿ, ಅದು ಮೂರು ಲೋಕಗಳಲ್ಲಿಯೂ ದುರ್ಲಭವಾಗಿರಲಿ, ಅದನ್ನು ಕ್ಷಣಮಾತ್ರದಲ್ಲಿ ಪೂರೈಸಿಕೊಡುವ-ವನಾಗಿದ್ದೇನೆ. ಇದು ನನ್ನ ವ್ರತವಾಗಿದೆ. (೨೮).

ಜಂಗಮಮಹಿಮಾ

ಐಹಿಕಾಮುಷ್ಮಿಕಾ ಭೋಗಾ ಮೋಕ್ಷಸ್ತತ್ಸಂಗತೋ ಭವೇತ್।
ಚರಸಂಗಸ್ತು ಸರ್ವೇಷಾಂ ಸರ್ವಕಾಮಫಲಪ್ರದಃ ॥ ೨೯ ॥

ತತ್ಪಾದಪಾಂಶುಭಿಃ ಪೂತಂ ಭವನಂ ಚೇತರದ್ವನಮ್।
ತದ್ಯಥಾಶಕ್ತಿ ಸಂಪೂಜ್ಯಾ ಜಂಗಮಾ ಹಿ ಹಿತೇಪ್ಸುನಾ॥
ಯದಮೀ ಮಾನುಷಾಕಾರಾಃ ಪ್ರತ್ಯಕ್ಷಪರಮೇಶ್ವರಾಃ ॥ ೩೦ ॥

ಜಂಗಮ ಮಹಿಮೆ

ಜಂಗಮನ ಸಂದರ್ಶನವು ಎಲ್ಲರಿಗೂ ಎಲ್ಲಾ ಬಯಸಿದ ಫಲಗಳನ್ನು ಕೊಡುವಂತಹದು. ಈ ಲೋಕದ ಮತ್ತು ಪರಲೋಕದ ಭೋಗಗಳು ಜೊತೆಗೆ ಮೋಕ್ಷ ಪ್ರಾಪ್ತಿಯೂ ಆಗುವುದು. (೨೯). ಅವನ ಪಾದ ಧೂಳಿಯಿಂದ ಪವಿತ್ರವಾದದ್ದು ಮನೆ ಮಿಕ್ಕದ್ದು ಅರಣ್ಯ. ಆದ್ದರಿಂದ ತನ್ನ ಹಿತವನ್ನು ಬಯಸುವವನು ಶಕ್ತಿಗನುಗುಣವಾಗಿ ಜಂಗಮರನ್ನು ಪೂಜಿಸಬೇಕು. ಏಕೆಂದರೆ ಅವರು ಮನುಷ್ಯ ರೂಪದ ಪ್ರತ್ಯಕ್ಷ ಪರಮೇಶ್ವರರು. (೩೦).

ಟಿಪ್ಪಣಿ : ಇದರಲ್ಲಿನ ಕೆಲವು ಅಂಶಗಳ ಛಾಯೆಯನ್ನು ಶ್ರೀಸಿದ್ಧಾಂತ ಶಿಖಾಮಣಿಯಲ್ಲಿ ಕಾಣಬಹುದು: ನೋಡಿರಿ "ಪಾದಾಗ್ರರೇಣವೋ ಯತ್ರ ಪತಂತಿ ಶಿವಯೋಗಿನಾಮ್। ತದೇವ ಸದನಂ ಪುಣ್ಯಂ ಪಾವನಂ ಗೃಹಮೇಧಿನಾಮ್॥ ಸರ್ವಸಿದ್ಧಿಕರಂ ಪುಂಸಾಂ ದರ್ಶನಂ ಶಿವಯೋಗಿನಾಮ್। ಸ್ಪರ್ಶನಂ ಪಾಪಶಮನಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜನಂ ಮುಕ್ತಿಸಾಧನಮ್॥ ಮಹತಾಂ ಶಿವತಾತ್ಪರ್ಯವೇದಿನಾಮನು ಮೋದಿನಾಮ್। ಕಿಂ ವಾ ಫಲಂ ನ ಸಿದ್ಧ್ಯೇತ ಸಂಪರ್ಕಾಚ್ಛಿವಯೋಗಿನಾಮ್॥" (೧೧.೪೨-೪೪) "ಶಿವಯೋಗಿಗಳ ಪಾದಧೂಳಿಯು ಎಲ್ಲಿ ಬೀಳುವುದೋ ಅದೇ ಗೃಹಸ್ಥರಿಗೆ ಪುಣ್ಯಮಯ, ಪಾವನ ಗೃಹ. ಶಿವಯೋಗಿಗಳ ದರ್ಶನವು ಜನರಿಗೆ ಎಲ್ಲಾ ಸಿದ್ಧಿಗಳನ್ನು ನೀಡುತ್ತದೆ. ಅವರ (ಪಾದ) ಸ್ಪರ್ಶನ ಪಾಪವನ್ನು ಶಮನಗೊಳಿಸುವುದು, ಪೂಜನವು ಮುಕ್ತಿಗೆ ಸಾಧನ. ಶಿವನ ನಿಜ ಸ್ವರೂಪವನ್ನು ತಿಳಿದು ಆನಂದವನ್ನು ಅನುಭವಿಸುವವರಾದ ಶಿವಯೋಗಿಗಳ ಸಂಪರ್ಕದಿಂದ ಯಾವ ಫಲವು ತಾನೆ ಸಿದ್ಧಿಸದಿರುವುದು?"

ಚರೇಧಿಕಾ ಭಕ್ತಿರುತ್ತಮಾ ಭಕ್ತಿ

ಚರೇಧಿಕಾರ ಸ್ವೇಷ್ಟಲಿಂಗಾದುತ್ತಮಾ ಭಕ್ತಿರುಚ್ಯತೇ।
ಚರೇಷ್ಟಲಿಂಗಯೋಸ್ತುಲ್ಯಾ ಮಧ್ಯಮೇತಿ ನಿಗದ್ಯತೇ ॥ ೩೧ ॥

ಚರೇ ನ್ಯೂನಾ ಸ್ವೇಷ್ಟಲಿಂಗಾತ್ ಕನಿಷ್ಠಾ ಭಕ್ತಿರುಚ್ಯತೇ।
ತಸ್ಮಾದ್ಧಿ ಕುಶಲೋ ನಿತ್ಯಯುತ್ತಮಾಂ ಭಕ್ತಿಮಾಶ್ರಯೇತ್ ॥ ೩೨ ॥

ಜಂಗಮನಲ್ಲಿ ಅಧಿಕವಾದ ಭಕ್ತಿ ಉತ್ತಮ ಭಕ್ತಿ

ತನ್ನ ಇಷ್ಟಲಿಂಗಕ್ಕಿಂತ ಜಂಗಮನಲ್ಲಿ ಅಧಿಕವಾದ ಭಕ್ತಿ ಉತ್ತಮ. ಜಂಗಮ ಮತ್ತು ಇಷ್ಟಲಿಂಗಗಳೆರಡರಲ್ಲೂ ಸಮಾನವಾದ ಭಕ್ತಿಯು ಮಧ್ಯಮವೆಂದು ಹೇಳಲ್ಪಡುತ್ತದೆ (೩೧). ತನ್ನ ಇಷ್ಟಲಿಂಗಕ್ಕಿಂತ ಜಂಗಮನಲ್ಲಿ ಕಡಿಮೆಯಾದ ಭಕ್ತಿಯು ಕನಿಷ್ಠ. ಆದ್ದರಿಂದ ಜಾಣನಾದ ಭಕ್ತನು ಯಾವಾಗಲೂ ಉತ್ತಮ ಭಕ್ತಿಯನ್ನು ಆಶ್ರಯಿಸಬೇಕು (೩೨).

ಟಿಪ್ಪಣಿ: ಗುರು, ಲಿಂಗ ಮತ್ತು ಜಂಗಮದಲ್ಲಿ ಸಮಾನವಾದ ಭಕ್ತಿಯಿರಬೇಕಾಗಿದ್ದರೂ ಪ್ರಸ್ತುತ ಸಂದರ್ಭದಲ್ಲಿ ಜಂಗಮನ ಮಹತ್ವಕ್ಕೆ ಒತ್ತು ನೀಡಲು ಹೀಗೆ ಹೇಳಿದೆ. ಇದೇ ಆಗಮವು ಮುಂದೆ "ಏಕಮೂರ್ತೇಸ್ತ್ರಯೋ ಭಾಗಾ ಗುರುರ್ಲಿಂಗಂ ಚ ಜಂಗಮಃ" (೫.೧೫) ಒಂದೇ ಮೂರ್ತಿಯ (ಪರಮಾತ್ಮನ) ಮೂರು ಭಾಗಗಳು ಗುರು, ಲಿಂಗ ಮತ್ತು ಜಂಗಮ ಎಂದು ಹೇಳುವಾಗ ಭಕ್ತಿಯಲ್ಲಿ ತಾರತಮ್ಯವಿರುವುದು ಹೇಗೆ? ಗುರು-ಜಂಗಮರು ಮನೆಗೆ ಬಂದಾಗ ಅವರನ್ನು ಸತ್ಕರಿಸುವುದು ಇಷ್ಟಲಿಂಗಪೂಜೆಗಿಂತ ಮುಖ್ಯ ಎನ್ನುವುದನ್ನು ನೆನಪಿಡಬೇಕು. ಇದನ್ನು ಬಿಂಬಿಸಲು ಹೀಗೆ ಹೇಳಿದೆಯೆಂದು ತಿಳಿದುಕೊಳ್ಳಬೇಕು.

ಚರಪೂಜಾ ಗರೀಯಸೀ

ಸರ್ವತೀರ್ಥಾಭಿಷೇಕಾಚ್ಚ ಸರ್ವಯಜ್ಞವಿಧಾನತಃ।
ಸರ್ವದೇವಾರಾಧನಾಚ್ಚ ಚರಪೂಜಾ ಗರೀಯಸೀ ॥ ೩೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೂರೇ ವಿಲೋಕ್ಯ ಮಾಹೇಶಾನಭಿಗಮ್ಯಾಭಿವಾದ್ಯ ಚ।
ಗೃಹಮಾನೀಯ ಯಷ್ಟವ್ಯಮಿತ್ಯೇತಚ್ಛಿವಶಾಸನಮ್ ॥ ೩೪ ॥

ಚರೋ ಲೋಕಹಿತಾರ್ಥೀ ಸ್ಯಾದಹಃ ಚರಹಿತೇ ರತಃ।
ಇತಿ ಚರಾನ್ ಸುಯಷ್ಟವ್ಯಮಿತ್ಯೇತಚ್ಛಿವಶಾಸನಮ್ ॥ ೩೫ ॥

ಜಂಗಮಾನಸಮಚ್ಯೈರ್ವ ಮತ್ಪೂಜಾ ಕ್ರಿಯತೇ ಯದಿ।
ಸಾ ಪೂಜಾ ವಿಫಲೈವ ಸ್ಯಾದಿತ್ಯೇತಚ್ಛಿವಶಾಸನಮ್ ॥ ೩೬ ॥

ತದಾತ್ಮಹಿತಮಾಕಾಂಕ್ಷಮಾಣಃ ಸಂಪೂಜಯೇಚ್ಚರಾನ್।
ತೇಷಾಂ ಯಥಾ ಮನಸ್ತೃಪ್ತಿಃ ಸೈವ ಪೂಜಾ ನಿಗದ್ಯತೇ ॥ ೩೭ ॥

ಇದಂ ತೇ ಚರಮಾಮಾಹತ್ಮ್ಯಂ ಭೋಗಮೋಕ್ಷಾರ್ಥಸಿದ್ಧಿದಮ್।
ಕಥಿತಂ ಸಂಗ್ರಹೇಣಾದ್ಯ ಕಿಮನ್ಯಚ್ಛ್ರೋತುಮಿಚ್ಛಸಿ ॥ ೩೮ ॥

ಇತಿ ಶ್ರೀ ಚಂದ್ರಜ್ಞಾನಾಗಮೇ ಉತ್ತರಭಾಗೇऽನಂತರುದ್ರಬೃಹಸ್ಪತಿಸಂವಾದೇ ಶಿವಶಾಸನೇ ಕ್ರಿಯಾಪಾದೇ ಜಂಗಮಸ್ವರೂಪನಿರೂಪಣಂ ನಾಮ ಚತುರ್ಥಃ ಪಟಲಃ ॥ ೪ ॥

ಜಂಗಮ ಪೂಜೆಯು ಶ್ರೇಷ್ಠ

ಎಲ್ಲಾ ತೀರ್ಥಗಳ ಸ್ನಾನಕ್ಕಿಂತ, ಎಲ್ಲಾ ಯಜ್ಞಗಳ ಆಚರಣೆಗಿಂತ, ಎಲ್ಲಾ ದೇವತೆಗಳ ಆರಾಧನೆಗಿಂತ ಜಂಗಮಪೂಜೆಯು ಶ್ರೇಷ್ಠ. (೩೩). ದೂರದಲ್ಲಿಯೇ ಬರುವ ಮಾಹೇಶ್ವರರನ್ನು (ಜಂಗಮರನ್ನು) ಕಂಡು ಅವರನ್ನು ಎದುರುಗೊಂಡು, ನಮಸ್ಕರಿಸಿ, ಮನೆಗೆ ಕರೆತಂದು ಪೂಜಿಸಬೇಕು ಎಂದು ಶಿವನ ಶಾಸನ. (೩೪). ಜಂಗಮನು ಲೋಕದ ಹಿತವನ್ನು ಬಯಸುವವನಾಗಿರಬೇಕು. ನಾನು ಜಂಗಮನ ಹಿತದಲ್ಲೇ ಮಗ್ನನು. ಹೀಗೆಂದು ಜಂಗಮರನ್ನು ಚೆನ್ನಾಗಿ ಪೂಜಿಸಬೇಕು. ಹೀಗೆಂದು ಶಿವನ ಶಾಸನ. (೩೫). ಜಂಗಮರನ್ನು ಪೂಜಿಸದೆ ನನ್ನ ಪೂಜೆಯನ್ನು ಮಾಡಿದ್ದಾದರೆ ಆ ಪೂಜೆಯ ನಿಷ್ಫಲವಾಗುವುದು ಎಂದು ಶಿವನ ಶಾಸನ. (೩೬). ಆದ್ದರಿಂದ ತನ್ನ ಹಿತವನ್ನು ಬಯಸುವವನು ಜಂಗಮರನ್ನು ಪೂಜಿಸಬೇಕು. ಅವರಿಗೆ ಹೇಗೆ ತೃಪ್ತಿಯಾಗುವುದೋ ಹಾಗೆ ಮಾಡುವುದೇ ಪೂಜೆಯೆಂದು ಕರೆಯಲಾಗುತ್ತದೆ. (೩೭). ಇದಿಷ್ಟು ಭೋಗ-ಮೋಕ್ಷಗಳ ಸಿದ್ಧಿಯನ್ನು ಕೊಡುವ ಜಂಗಮನ ಮಹಿಮೆಯನ್ನು ಸಂಕ್ಷೇಪವಾಗಿ ಹೇಳಿದ್ದಾಯಿತು. ಮತ್ತೆ ಇನ್ನೇನನ್ನು ಕೇಳಲು ಇಚ್ಛಿಸುವೆ? (೩೮).

ಇಲ್ಲಿಗೆ ಶ್ರೀ ಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ ಅನಂತರುದ್ರ-ಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಜಂಗಮಸ್ವರೂಪನಿರೂಪಣ ಎಂಬ ಚತುರ್ಥ ಪಟಲವು ಮುಗಿಯಿತು. (೪).

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಚಮಃ ಪಟಲಃ

॥ ಪಾದೋದಕಪ್ರಸಾದಸ್ವರೂಪನಿರೂಪಣಮ್॥

ಬೃಹಸ್ಪತಿರುವಾಚ

ಅಶೇಷಜ್ಞಾನನಿಲಯ ಲೋಕಾನುಗ್ರಹತತ್ಪರ।
ಅನಂತಮಹಿಮಾಂಬೋಧೇಽನಂತರುದ್ರ ನಮೋಽಸ್ತು ತೇ ॥ ೧ ॥
ಮಹಿಮಾನಮಿಹಾನಂತಂ ಚರಾಣಾಂ ಶಿವಯೋಗಿನಾಮ್।
ಕೃತಕೃತ್ಯೋಽಸ್ಮಿ ವಿಶ್ವಾತ್ಮನ್ನಾಕರ್ಣ್ಯ ಶ್ರೀಮದಾನನಾತ್ ॥ ೨ ॥
ಶುಶ್ರೂಷುರದ್ಯ ಭೂಮಾನಂ ಪಾದತೀರ್ಥಪ್ರಸಾದಯೋಃ।
ತಮಪ್ಯಾವೇದ್ಯ ವಿಶ್ವೇಶ ಕೃಪಯಾನುಗೃಹಾಣ ಮಾಮ್ ॥ ೩ ॥

ಬೃಹಸ್ಪತಿಯು ಹೇಳಿದನು

ಸಮಸ್ತಜ್ಞಾನದ ಆಶ್ರಯನೇ, ಲೋಕಕ್ಕೆ ಅನುಗ್ರಹಿಸುವುದರಲ್ಲಿ ಮಗ್ನನೇ ಎಣೆಯಿಲ್ಲದ ಮಹಿಮೆಯ ಸಾಗರನೇ, ಅನಂತರುದ್ರನೇ, ನಿನಗೆ ನಮಸ್ಕಾರ. (೧). ವಿಶ್ವಾತ್ಮನೇ ಶಿವಯೋಗ ಸಂಪನ್ನರಾದ ಜಂಗಮರ ಮಹಿಮೆಯನ್ನು ನಿನ್ನ ಶ್ರೀಮುಖದಿಂದ ಕೇಳಿ ಧನ್ಯನಾಗಿದ್ದೇನೆ. (೨). ಈಗ ಪಾದೋದಕ (ತೀರ್ಥ) ಮತ್ತು ಪ್ರಸಾದಗಳ ಮಹಿಮೆಯನ್ನು ಕೇಳಲು ಇಚ್ಛೆಯುಳ್ಳವನಾಗಿದ್ದೇನೆ. ವಿಶ್ವೇಶ್ವರ, ಅದನ್ನು ಕೃಪೆಯಿಂದ ತಿಳಿಸಿ ನನ್ನನ್ನು ಅನುಗ್ರಹಿಸು. (೩).

ಅನಂತರುದ್ರ ಉವಾಚ

ಶೃಣು ತೇ ಕಥಯಿಷ್ಯಾಮಿ ಪಾದತೀರ್ಥಪ್ರಸಾದಯೋಃ।
ಸ್ವರೂಪಮಪಿ ಮಹಾತ್ಮ್ಯಮೀಶ್ವರೇಣ ಪ್ರಕಾಶಿತಮ್ ॥ ೪ ॥

ಅನಂತರುದ್ರನು ಹೇಳಿದನು

ಕೇಳು, ಪಾದೋದಕ ಮತ್ತು ಪ್ರಸಾದಗಳ ಸ್ವರೂಪವನ್ನು ಮತ್ತು ಮಾಹಾತ್ಮ್ಯವನ್ನು ಈಶ್ವರನು ಪ್ರಕಾಶ ಪಡಿಸಿದಂತೆ ನಿನಗೆ ಹೇಳುವೆನು. (೪).

೪. ಪಾದತೀರ್ಥಸ್ಯ ತ್ರೈವಿಧ್ಯಮ್

ಪಾದತೀರ್ಥಂ ತ್ರಿಧಾ ಶಂಭೋರ್ಗುರು ಜಂಗಮಯೋರಪಿ।
ದೀಕ್ಷಾ ಶಿಕ್ಷಾ ಜ್ಞಾನಮಿತಿ ತ್ರಿಸಂಜ್ಞಂ ತದ್ಭವತ್ಯಹೋ ॥ ೫ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾದತೀರ್ಥವು ಮೂರು ವಿಧ

ಪಾದೋದಕವು ಗುರು, ಲಿಂಗ ಮತ್ತು ಜಂಗಮರದೆಂದು ಮೂರು ವಿಧ. ಅದು ದೀಕ್ಷಾ, ಶಿಕ್ಷಾ ಮತ್ತು ಜ್ಞಾನವೆಂದು ಮೂರು ಹೆಸರುಗಳನ್ನು ಹೊಂದಿದೆ (೫).

ಟಿಪ್ಪಣಿ : ಗುರುಪಾದೋದಕವು ದೀಕ್ಷಾಪಾದೋದಕ, ಲಿಂಗಪಾದೋದಕವು ಶಿಕ್ಷಾಪಾದೋದಕ ಮತ್ತು ಜಂಗಮಪಾದೋದಕವು ಜ್ಞಾನಪಾದೋದಕ, ಚನ್ನ ಬಸವಣ್ಣನವರ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ವಚನ ಸಂಖ್ಯೆ ೧೬೫ನ್ನೂ ನೋಡಿರಿ.

ಗುರುಲಿಂಗಜಂಗಮಪಾದೋದಕಸ್ವೀಕಾರೇ ನಿಯಮಃ

ಪಾದತೀರ್ಥಂ ಸದಾ ಪೇಯಂ ಭವಬಂಧಮುಮುಕ್ಷುಭಿಃ।
ಗುರೋರಪೀಷ್ಟಲಿಂಗಸ್ಯ ಚರಸ್ಯಾಪಿ ವಿಶೇಷತಃ ॥ ೬ ॥

ಗುರೋಶ್ಚರಸ್ಯ ಚಾಲಾಭೇ ಇಷ್ಟಲಿಂಗಪದೋದಕಮ್।
ಲಬ್ಧ್ವಾ ಗುರ್ವಾದಿಪಾದೋದಂ ಭಾವಯೇನ್ಮನಸ್ಯೆವ ತತ್ ॥ ೭ ॥

ಚರವರ್ಜಂ ಗುರೋರ್ಲಾಭೇ ಲಬ್ಧ್ವಾಗುರುಪದೋದಕಮ್।
ಗುರುಜಂಗಮಪಾದೋದಂ ಲಬ್ಧವಾನಿತಿ ಭಾವಯೇತ್ ॥ ೮ ॥

ಗುರುವರ್ಜಂ ಚರಪ್ರಾಪ್ತೌ ಲಬ್ಧ್ವಾ ಚರಪದೋದಕಮ್।
ತದೇವ ಗುರುಪಾದೋದಂ ಮತ್ವಾ ಪಿಬೇತ್ ತದಾ ॥ ೯ ॥

ಗುರು-ಲಿಂಗ-ಜಂಗಮ ಪಾದೋದಕ ಸ್ವೀಕರಿಸುವಲ್ಲಿ ನಿಯಮ

ಭವಬಂಧನದಿಂದ ಮುಕ್ತಿಯನ್ನು ಪಡೆಯಲು ಇಚ್ಛಿಸುವವರು ಗುರುವಿನ, ಇಷ್ಟಲಿಂಗದ ಮತ್ತು ಜಂಗಮನ ಪಾದೋದಕವನ್ನು ನಿತ್ಯವೂ ಸ್ವೀಕರಿಸಬೇಕು. (೬). ಗುರುವಾಗಲಿ ಜಂಗಮನಾಗಲಿ ದೊರೆಯದಿದ್ದಾಗ ಇಷ್ಟಲಿಂಗ ಪಾದೋದಕ (ತೀರ್ಥ)ವನ್ನು ಪಡೆದು ಮನಸ್ಸಿನಲ್ಲಿ ಅದನ್ನೇ ಗುರು-ಜಂಗಮ ಪಾದೋದಕವೆಂದು ಭಾವಿಸಬೇಕು. (೭). ಜಂಗಮನಿಲ್ಲದೆ ಗುರುವು ದೊರೆತರೆ ಗುರುಪಾದೋದಕವನ್ನೇ ಪಡೆದು ಗುರು-ಜಂಗಮರಿಬ್ಬರ ಪಾದೋದಕವನ್ನು ಪಡೆದೆನೆಂದು ಭಾವಿಸಬೇಕು. (೮). ಹಾಗೆಯೇ ಗುರುವಿಲ್ಲದೆ ಜಂಗಮನು ದೊರೆತರೆ ಜಂಗಮ ಪಾದೋದಕವನ್ನೇ ಪಡೆದು ಅದೇ ಗುರುಪಾದೋದಕವೆಂದು ತಿಳಿದು ಸ್ವೀಕರಿಸಬೇಕು. (೯).

ಟಿಪ್ಪಣಿ : ಇಲ್ಲಿ ಹೇಳಿದ ವಿಷಯವನ್ನು ಚನ್ನಬಸವಣ್ಣನವರು ಯಥಾವತ್ತಾಗಿ ಸ್ವೀಕರಿಸಿ ತಮ್ಮ ಒಂದು ವಚನದಲ್ಲಿ ಅದನ್ನೇ ಹೇಳಿದ್ದಾರೆ. ನೋಡಿರಿ ಚನ್ನ ಬಸವಣ್ಣನವರ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ವಚನ ಸಂಖ್ಯೆ ೧೬೭. ಅದು "ಸಹಜ ಸಂಬಂಧಾಚಾರದ ನಿರ್ಣಯವನಿಲ್ಲಿ ಹೇಳಿಹೆ ಕೇಳಿರಯ್ಯಾ" ಎಂದು ಆರಂಭವಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾದೋದಕಸ್ವೀಕಾರಪದ್ಧತಿಃ ತತ್ಫಲಂಚ

ಪಾದ್ಯಂ ದತ್ವಾ ವಿಭೋಸ್ತಸ್ಯ ಗೃಹ್ಣೀಯಾತ್ ಪಾದತೋ ಜಲಮ್।
ಶತಧಾರೇಣ ಮಂತ್ರೇಣ ಪಂಚಾಕ್ಷರಯುತೇನ ಚ ॥ ೧೦॥

ಧೃತ್ವಾ ಶಿರಸಿ ಪಾದಾಂಬು ಮಹತ್ಫಲಮವಾಪ್ನುಯಾತ್।
ಋತಂ ಸತ್ಯಮಿತಿ ಪ್ರಾಶ್ಯ ಚಾನಂತಫಲಮಶ್ನುತೇ ॥ ೧೧ ॥

ಅಕಾಲಮೃತ್ಯುಮಥನಂ ಸರ್ವವ್ಯಾಧಿವಿನಾಶನಮ್।
ಸರ್ವಪಾಪೋಪಶಮನಂ ಶಂಭೋಃ ಪಾದೋದಕಂ ಶುಭಮ್ ॥ ೧೨ ॥

ಮಂಗಲಂ ಮಂಗಲಾನಾಂ ಚ ಸರ್ವಪಾವನಪಾವನಮ್।
ದುಷ್ಟಗ್ರಹೋಪಶಮನಮ್ ಇಷ್ಟಸಿದ್ಧಿಪ್ರದಾಯಕಮ್ ॥ ೧೩ ॥

ಸರ್ವದುಃಖಪ್ರಶಮನಂ ಸರ್ವೋಪದ್ರವನಾಶನಮ್।
ಸರ್ವಸಿದ್ಧಿಪ್ರದಂ ಸದ್ಯಃ ಸರ್ವೇಷಾಂ ಮುಕ್ತಿದಾಯಕಮ್ ॥ ೧೪ ॥

ಏಕಮೂರ್ತೇಸ್ತ್ರಯೋ ಭಾಗಾ ಗುರುರ್ಲಿಂಗಂ ಚ ಜಂಗಮಃ।
ತದೇವಂಗುಣಕಂ ಗ್ರಾಹ್ಯಂ ಗುರುಜಂಗಮಯೋರಪಿ ॥ ೧೫ ॥

ಪಾದೋದಕವನ್ನು ಸ್ವೀಕರಿಸುವ ಪದ್ಧತಿ ಮತ್ತು ಅದರ ಫಲ

ಗುರುವಿಗೆ ಪಾದತೊಳೆಯಲು ನೀರು (ಪಾದ್ಯ) ಕೊಟ್ಟು ಪಾದೋದಕವನ್ನು ಪಂಚಾಕ್ಷರ ಮಂತ್ರ ಸಹಿತವಾಗಿ 'ಶತಧಾರ' ಮಂತ್ರದೊಂದಿಗೆ (ಪರಿಸುತ್ತಾ) ತೆಗೆದುಕೊಳ್ಳಬೇಕು. (೧೦). ಪಾದೋದಕವನ್ನು ತಲೆಯ ಮೇಲೆ ಧರಿಸುವುದರಿಂದ (ಸಿಂಪಡಿಸಿಕೊಳ್ಳುವುದರಿಂದು ದೊಡ್ಡ ಫಲವನ್ನು ಪಡೆಯಬಹುದು. 'ಋತಂ ಸತ್ಯಂ' ಎಂಬ ಮಂತ್ರದೊಂದಿಗೆ ಅದನ್ನು ಸ್ವೀಕರಿಸಿದರೆ ಅನಂತ ಫಲವು ದೊರೆಯುತ್ತದೆ. (೧೧). ಮಂಗಲಕರವಾದ ಶಂಭುವಿನ ಪಾದೋದಕವು ಅಕಾಲ ಮೃತ್ಯುವನ್ನು ನಾಶ ಮಾಡುತ್ತದೆ, ಎಲ್ಲಾ ರೋಗಗಳನ್ನು ತೊಡೆದು ಹಾಕುತ್ತದೆ ಮತ್ತು ಎಲ್ಲಾ ಪಾಪಗಳನ್ನು ಉಪಶಮನಗೊಳಿಸುತ್ತದೆ. (೧೨). ಅದು ಮಂಗಲಮಯವಾದವುಗಳಿಗೂ ಮಂಗಲಕರ, ಎಲ್ಲಾ ಪಾವನ ವಸ್ತುಗಳನ್ನು ಪಾವನಗೊಳಿಸುವುದು, ದುಷ್ಟಗ್ರಹಗಳನ್ನೂ ಉಪಶಮನ- ಗೊಳಿಸುವುದು, ಇಷ್ಟವಾದುದರ ಸಿದ್ಧಿಯನ್ನು ನೀಡುವಂತಹದು, ಎಲ್ಲಾ ದುಃಖಗಳನ್ನು ಶಮನಗೊಳಿಸುವುದು, ಎಲ್ಲಾ ಉಪದ್ರವಗಳನ್ನು ನಾಶ ಮಾಡುವುದು, ಎಲ್ಲಾ ಸಿದ್ಧಿಗಳನ್ನು ಕೊಡುವುದು ಮತ್ತು ಕೂಡಲೆ ಎಲ್ಲರಿಗೂ ಮುಕ್ತಿಯನ್ನೂ ಕೊಡುವುದು. (೧೩-೧೪). ಒಂದೇ ಮೂರ್ತಿಯ (ಪರಮಾತ್ಮನ) ಮೂರು ಭಾಗಗಳು ಗುರು, ಲಿಂಗ ಮತ್ತು ಜಂಗಮ. ಆದ್ದರಿಂದ ಲಿಂಗ ಪಾದೋದಕದ ಗುಣವುಳ್ಳದ್ದು ಗುರು-ಜಂಗಮರ ಪಾದೋದಕವೆಂದು ಗ್ರಹಿಸಬೇಕು. (೧೫).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಶತಧಾರ ಮಂತ್ರ- "ವಸೋಃ ಪವಿತ್ರಮಸಿ ಶತಧಾರಂ ವಸೋಃ ಪವಿತ್ರಮಸಿ ಸಹಸ್ರಧಾರಮ್। ದೇವಸ್ತ್ವಾ ಸವಿತಾ ಪುನಾತು ವಸೋಃ ಪವಿತ್ರೇಣ ಶತಧಾರೇಣ ಸುಪ್ವಾ ಕಾಮಧುಕ್ಷಃ॥" (ಶುಕ್ಲಯಜುರ್ವೇದ, ಮಾಧ್ಯಂದಿನ ಸಂಹಿತಾ, ೧.೨) ಋತಂ ಸತ್ಯಂ ಮಂತ್ರ- "ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣ-ಪಿಂಗಲಮ್। ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮಃ॥" (ತೈತ್ತಿರೀಯಾರಣ್ಯಕ, ೧೦.೧೨.೧).

ಪಾದೋದಕಮಹಿಮಾ

ಶೋಷಣಂ ಪಾಪಪಂಕಸ್ಯ ದೀಪನಂ ಜ್ಞಾನತೇಜಸಃ।
ಗುರೋಃ ಪಾದೋದಕಂ ಚಿತ್ರಂ ಸಂಸಾರದ್ರುಮನಾಶನಮ್ ॥ ೧೬ ॥
ಸರ್ವತೀರ್ಥಾಭಿಷೇಕೇ ಯಾ ಶುದ್ಧಿರ್ಮನಸಿ ಜಾಯತೇ।
ಗುರೋರಂಘ್ರಿಸ್ಪರ್ಶಜಲೇ ಶಿರಸಾ ಧಾರಿತೇ ಹಿ ಸಾ ॥ ೧೭ ॥
ಸಪ್ತಸಾಗರಪರ್ಯಂತಂ ತೀರ್ಥಸ್ನಾನಫಲಂ ಸದಾ।
ಗುರೋರಂಘ್ರಿಪಯೋಬಿಂದುಸಹಸ್ರಾಂಶಂ ನ ಪೂರಯೇತ್ ॥ ೧೮ ॥
ಚರಪಾದೋದಮಹಿಮಾ ವರ್ಣಿತುಂ ಕೇನ ಶಕ್ಯತೇ।
ತದ್ಧಿ ಮೋಚಯಿತುಂ ಸದ್ಯಃ ಶಕ್ನುತೇ ಯಚ್ಚರಾಚರಮ್ ॥ ೧೯ ॥

ಪಾದೋದಕದ ಮಹಿಮೆ

ಗುರುವಿನ ಪಾದೋದಕವು ಆಶ್ಚರ್ಯಕರ. ಅದು ಪಾಪದ ಕೆಸರನ್ನು ಒಣಗಿಸುತ್ತದೆ, ಜ್ಞಾನವೆಂಬ ತೇಜಸ್ಸನ್ನು ಬೆಳಗಿಸುತ್ತದೆ ಮತ್ತು ಸಂಸಾರವೆಂಬ ವೃಕ್ಷವನ್ನು ನಾಶಮಾಡುತ್ತದೆ. (೧೬). ಎಲ್ಲಾ ತೀರ್ಥಗಳಲ್ಲಿ ಸ್ನಾನ ಮಾಡಿದರೆ ಯಾವ ಮಾನಸಿಕ ಶುದ್ಧಿಯು ಉಂಟಾಗುತ್ತದೆಯೋ ಅದೇ ಗುರುವಿನ ಪಾದಗಳನ್ನು ಸ್ಪರ್ಶಿಸಿದ ಜಲವನ್ನು (ಗುರುಪಾದೋದಕವನ್ನು) ತಲೆಯ ಮೇಲೆ ಧರಿಸಿದಾಗ (ಸಿಂಪಡಿಸಿಕೊಂಡಾಗ) ಉಂಟಾಗುತ್ತದೆ. (೧೭). ಏಳು ಸಾಗರಗಳವರೆಗಿನ (ಎಲ್ಲಾ) ತೀರ್ಥಗಳಲ್ಲಿ ಸ್ನಾನ ಮಾಡಿದ ಫಲವು ಗುರುವಿನ ಪಾದೋದಕದ ಸಹಸ್ರ ಬಿಂದುಗಳಲ್ಲಿ ಒಂದು ಅಂಶದ ಫಲವನ್ನು ತುಂಬಿಕೊಡಲಾರದು (ಅಂದರೆ ಅದಕ್ಕೆ ಸಮನಾಗಲಾರದು). (೧೮). ಜಂಗಮನ ಪಾದೋದಕದ ಮಹಿಮೆಯನ್ನು ಯಾರು ವರ್ಣಿಸಲು ಶಕ್ತರು. ಅದು ಕೂಡಲೆ ಚರಾಚರಗಳನ್ನು ಮುಕ್ತಗೊಳಿಸಲು ಶಕ್ತವಾಗಿದೆ. (೧೯).

೫. ಪ್ರಸಾದಸ್ವರೂಪಮ್ ತತ್ತ್ರೈವಿಧ್ಯಂ ಚ

ಅಥ ವಕ್ಷ್ಯೇ ಪ್ರಸಾದಸ್ಯ ರೂಪಂ ತದ್ವೈಭವಂ ಶೃಣು।
ಗುರುಲಿಂಗಜಂಗಮಾನಾಂ ಭುಕ್ತಶೇಷಃ ಪ್ರಸಾದಕಃ ॥ ೨೦ ॥
ಶುದ್ಧಸಿದ್ಧಪ್ರಸಿದ್ಧಾಖ್ಯಃ ಸ ಹಿ ಮುಕ್ತ್ಯೇಕಸಾಧನಃ।
ದ್ವಯೋಸ್ತ್ರಯಾಣಾಂ ವಾ ಲಾಭೇ ಗ್ರಾಹ್ಯೋಽಯಂ ಪಾದತೀರ್ಥವತ್
॥ ೨೧ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವೇನ ಭುಕ್ತಂ ಭುಂಜೀಯಾತ್ತತ್ಪೀತಂ ಹಿ ಜಲಂ ಪಿಬೇತ್।
ಶಿವಾಘ್ರಾತಂ ಸದಾ ಜಿಘ್ರೇದೇಷ ಧರ್ಮಃ ಸನಾತನಃ ॥ ೨೨ ॥

ಪ್ರಸಾದದ ಸ್ವರೂಪ ಮತ್ತು ಅದರ ತ್ರಿವಿಧತ್ವ

ಇನ್ನು ಪ್ರಸಾದದ ಸ್ವರೂಪ ಮತ್ತು ಅದರ ವೈಭವವನ್ನು ಹೇಳುವೆನು, ಕೇಳು. ಗುರು, ಲಿಂಗ ಮತ್ತು ಜಂಗಮರು ಸ್ವೀಕರಿಸಿ ಬಿಟ್ಟ (ಕ್ರಮವಾಗಿ) ಶುದ್ಧ, ಸಿದ್ಧ ಮತ್ತು ಪ್ರಸಿದ್ಧ ಎಂದು ಕರೆಯಲಾಗುವುದೇ ಪ್ರಸಾದ. ಅದು ಮುಕ್ತಿಗೆ ಏಕಮಾತ್ರ ಸಾಧನ. ಅವುಗಳಲ್ಲಿ ಎರಡೋ ಮೂರೋ ದೊರೆತಾಗ ಪಾದತೀರ್ಥದ ವಿಷಯದಲ್ಲಿ ಹೇಳಿದ ನಿಯಮದಂತೆ ತೆಗೆದುಕೊಳ್ಳಬೇಕು. (೨೦-೨೧). ಶಿವನು ಉಂಡಿದ್ದನ್ನು ಉಣ್ಣಬೇಕು, ಶಿವನು ಕುಡಿದದ್ದನ್ನು ಕುಡಿಯಬೇಕು ಮತ್ತು ಶಿವನು ಮೂಸಿ ನೋಡಿದ್ದನ್ನು ಮೂಸಿನೋಡಬೇಕು, ಇದು ಸನಾತನವಾದ ಧರ್ಮ. (೨೨).

ಟಿಪ್ಪಣಿ : ಗುರು-ಲಿಂಗ-ಜಂಗಮ ಪ್ರಸಾದಕ್ಕೆ ಕ್ರಮವಾಗಿ ಶುದ್ಧಪ್ರಸಾದ, ಸಿದ್ಧ ಪ್ರಸಾದ ಮತ್ತು ಪ್ರಸಿದ್ಧಪ್ರಸಾದವೆಂದು ಹೆಸರು. ಸೂಕ್ಷ್ಮಾಗ್ರಮದಲ್ಲಿ ಕ್ರಿ.ಪಾ. ೮.೨೩-೨೫) ಈ ಮೂರು ವಿಧ ಪ್ರಸಾದಗಳ ವಿವರಣೆ ಬಂದಿದೆ. ನೋಡಿರಿ "ಪೂರ್ವಸರ್ವಗುಣತ್ಯಾಗಃ ಕಾಮಕ್ರೋಧಾದಿವರ್ಜನಮ್। ಗುರುಭಕ್ತ ಪ್ರಸಾದೋಯಃ ಸ ಶುದ್ಧಃ ಪ್ರಕೀರ್ತಿತಃ॥ ಜ್ಞಾತ್ವಾ ಲಿಂಗತ್ರಯಂ ಸಮ್ಯಕ್ ತದೈಕ್ಯಂ ಚ ವರಾನನೇ। ಲಿಂಗಾರ್ಪಿತಪ್ರಸಾದೋಽಯಂ ಸಿದ್ಧ ಇತ್ಯಭಿಧೀಯತೇ॥ ಶಿವೋಽಹಂ ಭಾವನಾ-ಯುಕ್ತೋ ನಿಶ್ಚಲೀಕೃತಮಾನಸಃ। ಚರಾರ್ಪಿತಪ್ರಸಾದೋಽಯಂ ಪ್ರಸಿದ್ಧಃ ಪರಿಕೀರ್ತಿತಃ॥" (ಪ್ರಾಕೃತ ಗುಣರಹಿತನಾಗಿ, ಕಾಮಕ್ರೋಧಾದಿಗಳಿಂದ ದೂರನಾಗಿ, ಗುರು ಭಕ್ತನಾದವನಿಗೆ ತನ್ನ ಗುರುವಿಗೆ ಅರ್ಪಿಸಿದ ಪ್ರಸಾದವೇ ಶುದ್ಧವೆಂದು ಕರೆಯಲಾಗಿದೆ. ಇಷ್ಟ, ಪ್ರಾಣ, ಭಾವ ಲಿಂಗಗಳ ಸಾಮರಸ್ಯವನ್ನು ತಿಳಿದು ಲಿಂಗಕ್ಕೆ ಅರ್ಪಿಸಿ ಪಡೆದ ಪ್ರಸಾದವೇ ಸಿದ್ಧವೆಂದು ಕರೆಯಲ್ಪಡುತ್ತದೆ. 'ಶಿವೋಹಂ' ಭಾವನೆಯಿಂದ ನಿಶ್ಚಲವಾದ ಮನಸ್ಸಿನಿಂದ ಜಂಗಮನಿಗೆ ಅರ್ಪಿಸಿದ ಪ್ರಸಾದವೇ ಪ್ರಸಿದ್ಧವೆಂದು ಕರೆಯಲ್ಪಡುತ್ತದೆ). ವಚನ ಸಾಹಿತ್ಯದಲ್ಲಿ ಇದರ ಪೂರ್ಣ ಛಾಯೆಯನ್ನು ಕಾಣುತ್ತೇವೆ. ಉದಾಹರಣೆಗೆ ಬಸವಣ್ಣನವರ ಷಟ್‌ಸ್ಥಲದ ವಚನಗಳು (ಕರ್ನಾಟಕ ವಿಶ್ವವಿದ್ಯಾಲಯ), ವಚನ ಸಂಖ್ಯೆ ೭೮೩ನ್ನು ನೋಡಿರಿ. ಪಾದತೀರ್ಥವತ್=ಇದೇ ಪಟಲದ ೭-೯ರಲ್ಲಿ ಬಂದಿರುವ ವಿಷಯವನ್ನು ನೋಡಿರಿ. ಶಿವೇನ ಭುಕ್ತಂ ಭುಂಜೀಯಾತ್, ಇತ್ಯಾದಿ=ಇದು ಶ್ರೀಸಿದ್ಧಾಂತಶಿಖಾಮಣಿ, ೯.೭೦ರ ಮೇಲಿನ ಮರಿತೋಂಟದಾರ್ಯರ ವ್ಯಾಖ್ಯಾನದಲ್ಲಿ ಉಲ್ಲೇಖಿಸಿದ ಜಾಬಾಲೋಪನಿಷತ್ತಿನ ಉಕ್ತಿಗೆ ಸಂವಾದಿಯಾಗಿದೆ. "ರುದ್ರೇಣಾತ್ತಮಶ್ನಂತಿ ರುದ್ರೇಣ ಪೀತಂ ಪಿಬಂತಿ ರುದ್ರೇಣಾಘ್ರಾತಂ ಜಿಘ್ರಂತಿ।" ಶ್ರೀಸಿದ್ಧಾಂತಶಿಖಾಮಣಿಯು ಇದನ್ನು ಉಲ್ಲೇಖಿಸುತ್ತದೆ "ಭುಂಜೀಯಾದ್ ರುದ್ರಭುಕ್ತಾನ್ನಂ ರುದ್ರಪೀತಂ ಜಲಂ ಪಿಬೇತ್। ರುದ್ರಾಘ್ರಾತಂ ಸದಾ ಜಿಘ್ರೇದಿತಿ ಜಾಬಾಲಿಕೀ ಶ್ರುತಿಃ॥" (೯.೭೦).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಾರ್ಪಿತಸ್ಯೈವ ಪ್ರಸಾದಸ್ಯ ಪರಿಗ್ರಾಹ್ಯತ್ವಮ್

ಭುಂಜತೇ ಯೇ ತು ಸಂಮೂಢಾಸ್ತ್ರ್ಯಂಬಕಾಯಾಸಮರ್ಪಿತಮ್।
ತೇ ಭುಂಜತೇ ಕ್ರಿಮೀನೇನಾಂಸ್ಯಧೋ ಗಚ್ಛತಿ ಶಾಶ್ವತಮ್ ॥ ೨೩ ॥

ಪತ್ರಂ ಪುಷ್ಪಂ ಫಲಂ ತೋಯಮನ್ನಪಾನಾದ್ಯಮೌಷಧಮ್।
ಅಸಮರ್ಪ್ಯ ನ ಭುಂಜೀತ ಭಗವಂತಂ ಸದಾಶಿವಮ್ ॥ ೨೪ ॥

ಶಬ್ದಸ್ಪರ್ಶರೂಪರಸಗಂಧತನ್ಮಾತ್ರಪಂಚಕಮ್।
ಅಸಮರ್ಪ್ಯ ನ ಭುಂಜೀತ ಭಗವಂತಮುಮಾಪತಿಮ್ ॥ ೨೫ ॥

ಯದಿಂದ್ರಿಯಾಗತಂ ಕಿಂಚಿದ್ ಯತ್ಸುಖಂ ತಚ್ಛಿವಾರ್ಪಿತಮ್।
ತತ್ಪ್ರಸಾದಂ ಚ ಭೋಕ್ತವ್ಯಂ ತದಿಂದ್ರಿಯಮುಖೇನ ಚ ॥ ೨೬ ॥

ಸಂಯೋಗೇಷು ವಿಯೋಗೇಷು ಚಾಣುಮಾತ್ರಸುಖಾನಿ ಚ ।
ಇಷ್ಟಲಿಂಗೇ ಸಮರ್ಪ್ಯೈವ ಭುಂಜೀಯಾತ್ತಾನಿ ಸಂತತಮ್ ॥ ೨೭ ॥

ಶಿವನಿಗೆ ಅರ್ಪಿಸಲ್ಪಟ್ಟ ಪ್ರಸಾದವೇ ಸ್ವೀಕಾರಾರ್ಹ

ತ್ರಿಯಂಬಕನಾದ ಶಿವನಿಗೆ (ಲಿಂಗಕ್ಕೆ) ಅರ್ಪಿಸದೆ ಯಾವ ಮೂರ್ಖರು ಊಟ ಮಾಡುತ್ತಾರೋ ಅವರು ಕ್ರಿಮಿ, ಕೀಟ, ಪಾಪ ಪುಂಜಗಳನ್ನೇ ತಿಂದಂತೆ; ಅವರು ಅನಂತಕಾಲ ಅಧೋಗತಿಯನ್ನು ಹೊಂದುತ್ತಾರೆ. (೨೩). ಪತ್ರೆ, ಪುಷ್ಪ, ಹಣ್ಣು, ಜಲ, ಅನ್ನ, ಪಾನ, ಔಷಧಿ ಇವೆಲ್ಲವನ್ನೂ ಭಗವಂತ ಸದಾಶಿವನಿಗೆ (ಲಿಂಗಕ್ಕೆ) ಅರ್ಪಿಸದೆ ಸ್ವೀಕರಿಸಬಾರದು. (೨೪). ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದು ತನ್ಮಾತ್ರಗಳನ್ನು ಭಗವಂತ ಉಮಾಪತಿಗೆ (ಲಿಂಗಕ್ಕೆ) ಅರ್ಪಿಸದೆ ಸವಿಯಬಾರದು. (೨೫). ಯಾವ ಯಾವ ಇಂದ್ರಿಯದಿಂದ ಯಾವ ಯಾವ ಸುಖ ದೊರೆಯುತ್ತದೆಯೋ ಅದನ್ನು ಶಿವನಿಗೆ (ಲಿಂಗಕ್ಕೆ) ಅರ್ಪಿಸಿ ಆಯಾಯ ಇಂದ್ರಿಯಗಳ ಮೂಲಕ ಪ್ರಸಾದ ರೂಪದಲ್ಲಿ ಸ್ವೀಕರಿಸಬೇಕು. (೨೬). ಇಷ್ಟವಾದುದರ ಸಂಯೋಗ ಮತ್ತು ಅನಿಷ್ಟ ವಾದುದರ ವಿಯೋಗಗಳಿಂದ ಕ್ಷಣಮಾತ್ರ ಯಾವ ಸುಖವು ದೊರೆಯುತ್ತದೆಯೋ ಅದನ್ನು ಯಾವಾಗಲೂ ಇಷ್ಟಲಿಂಗಕ್ಕೆ ಅರ್ಪಿಸಿಯೇ ಅನುಭವಿಸಬೇಕು. (೨೭).

ದ್ವಿಧಾ ಸಮರ್ಪಣಮ್

ಸಮರ್ಪಣಂ ದ್ವಿಧಾ ಪ್ರೋಕ್ತಂ ಸ್ಥೂಲಸೂಕ್ಷ್ಮವಿಭೇದತಃ।
ಯಚ್ಛಬ್ದಾದ್ಯವಿಭಾಗೇನೈವೇಷ್ಟಲಿಂಗೇ ಸಮರ್ಪ್ಯತೇ॥
ದ್ರವ್ಯಂ ತತ್ಸ್ಥೂಲಮಿತ್ಯುಕ್ತಮರ್ಪಾಂಗಂ ತತ್ಪ್ರಕೀರ್ತಿತಮ್ ॥ ೨೮ ॥

ಶಬ್ದಾದಿವಿಷಯಾ ಯತ್ರ ಭಾವೇನೈವ ನ ಚಾನ್ಯಥಾ।
ಸಮರ್ಪ್ಯಂತೇ ರೂಪಮೇವ ತದ್ಧಿ ಸೂಕ್ಷ್ಮಂ ಪ್ರಕೀರ್ತಿತಮ್ ॥ ೨೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಚಾಂಗಂ ಸ್ಥೂಲಮಿತ್ಯುಕ್ತಂ ಸೂಕ್ಷ್ಮಂ ಸ್ಯಾದೌಪಭೋಗಿಕಮ್।
ಪದಾರ್ಥಭೋಗಾವಸರೇ ಶಬ್ದಾದೀನಾಂ ವಿಭಾಗತಃ ॥
ಸಮರ್ಪಣಂ ಹಿ ತತ್ಸೂಕ್ಷ್ಮಮಿದಂ ಸ್ಯಾತ್ ಸಾರ್ವಕಾಲಿಕಮ್ ॥ ೩೦ ॥

ಯದಾ ಯೇನೇಂದ್ರಿಯೇಣೈವ ವಿಷಯೋ ಹ್ಯುಪಭುಜ್ಯತೇ।
ತದಿಂದ್ರಿಯಗತೇ ಲಿಂಗೇ ಹ್ಯರ್ಪಣಂ ಸೂಕ್ಷ್ಮಮೀರಿತಮ್ ॥ ೩೧ ॥

ಸಮರ್ಪಣವಿಶೇಷಂ ಯೇ ಭಕ್ತಾಃ ಸಮ್ಯಗ್ವಿಜಾನತೇ।
ಶಂಭೋಃ ಪ್ರಸಾದಮತುಲಮಶ್ರಮಂ ವಿಂದತೇ ಹಿ ತೇ ॥ ೩೨ ॥

ಸಮರ್ಪಣವು ಎರಡು ವಿಧ

ಸಮರ್ಪಣೆಯು ಸ್ಥೂಲ ಮತ್ತು ಸೂಕ್ಷ್ಮ ಎಂಬ ಭೇದದಿಂದ ಎರಡು ವಿಧವಾಗಿದೆ. ಶಬ್ದ, ಸ್ಪರ್ಶ ಮುಂತಾಗಿ ವಿಭಾಗಮಾಡದೆ ಇಷ್ಟಲಿಂಗಕ್ಕೆ ಯಾವ ದ್ರವ್ಯವು ಅರ್ಪಿಸಲ್ಪಡುತ್ತದೆಯೋ ಅದು ಸ್ಥೂಲವೆಂದು ಕರೆಯಲ್ಪಡುತ್ತದೆ. ಅದಕ್ಕೆ ಅರ್ಚಾಂಗವೆಂದು ಹೇಳಲಾಗುತ್ತದೆ. (೨೮). ಶಬ್ದ, ಸ್ಪರ್ಶ ಮುಂತಾದ ವಿಷಯಗಳು ಎಲ್ಲಿ ಭಾವರೂಪದಲ್ಲಿಯೇ ಸಮರ್ಪಿಸಲ್ಪಡುತ್ತವೆಯೋ, ಬೇರೆ ರೂಪದಲ್ಲಿ ಅಲ್ಲವೋ, ಅದು ಸೂಕ್ಷ್ಮವೆಂದು ಕರೆಯಲ್ಪಡುತ್ತದೆ. (೨೯). ಸ್ಥೂಲವನ್ನು ಅರ್ಚಾಂಗವೆಂದೂ, ಈ ಸೂಕ್ಷ್ಮವು ಔಪಭೋಗಿಕವೆಂದೂ ತಿಳಿಯಬೇಕು. ಪದಾರ್ಥಗಳ ಭೋಗದ ಸಂದರ್ಭದಲ್ಲಿ ವಿಭಾಗಶಃ ನೋಡುತ್ತಾ ಸದಾಕಾಲ ಮಾಡುವ ಶಬ್ದಾದಿಗಳ ಸಮರ್ಪಣೆಗೆ ಸೂಕ್ಷ್ಮವೆಂದು ಹೆಸರು. (೩೦). ಯಾವಾಗ ಯಾವ ಇಂದ್ರಿಯದ ಮೂಲಕ ಯಾವ ವಿಷಯವು ಸೇವಿಸಲ್ಪಡುತ್ತದೆಯೋ ಅದನ್ನು ಆಯಾಯ ಇಂದ್ರಿಯದಲ್ಲಿರುವ ಲಿಂಗಕ್ಕೆ ಅರ್ಪಿಸುವುದು ಸೂಕ್ಷ್ಮ ಸಮರ್ಪಣವೆಂದು ಹೆಸರು. (೩೧). ಯಾವ ಭಕ್ತರು ಈ ಸಮರ್ಪಣ ವಿಶೇಷವನ್ನು ಸರಿಯಾಗಿ ತಿಳಿದುಕೊಳ್ಳುವರೋ ಅವರು ಶಂಭುವಿನ ಎಣೆಯಿಲ್ಲದ ಪ್ರಸಾದವನ್ನು ಶ್ರಮವಿಲ್ಲದೆ ಹೊಂದುತ್ತಾರೆ. (೩೨).

ಟಿಪ್ಪಣಿ : ಈ ಸಮರ್ಪಣೆಗೆ ಸಂಬಂಧ ಪಟ್ಟಂತೆ ಭಕ್ತ ಮುಂತಾದ ಯಾವ ಸ್ಥಲದಲ್ಲಿ, ಕ್ರಿಯಾ ಮುಂತಾದ ಯಾವ ಶಕ್ತಿಯುಕ್ತವಾದ, ನಾಸಿಕ ಮುಂತಾದ ಯಾವ ಅಂಗದಲ್ಲಿರುವ, ಸದ್ಯೋಜಾತ ಮುಂತಾದ ಯಾವ ಮುಖದ ಸ್ವರೂಪವಾದ, ಆಚಾರಲಿಂಗ ಮುಂತಾದ ಯಾವ ಲಿಂಗಕ್ಕೆ, ಗಂಧ ಮುಂತಾದ ಯಾವ ಪ್ರಸಾದವನ್ನು, ಸದ್ಭಕ್ತಿ (ಶ್ರದ್ಧಾಭಕ್ತಿ) ಮುಂತಾದ ಯಾವ ಭಕ್ತಿಯ ಮೂಲಕ, ಚಿತ್ತ ಮುಂತಾದ ಯಾವ ಹಸ್ತದಿಂದ ಅರ್ಪಿಸಬೇಕು ಎಂಬುದನ್ನು ಕಾರಣಾಗಮವು (ಕ್ರಿ.ಪಾ. ೭.೬೦-೬೫) ವಿವರಿಸುತ್ತದೆ. ಇದೇ ವಿವರಗಳನ್ನು ಚನ್ನಬಸವಣ್ಣನವರು ತಮ್ಮ ಆರು ವಚನಗಳಲ್ಲಿ ನೀಡಿದ್ದಾರೆ. (ಚನ್ನಬಸವಣ್ಣನವರ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ವಚನಗಳ ಸಂಖ್ಯೆಗಳು-೨೪೭, ೪೯೮, ೭೮೧, ೯೪೪, ೧೨೪೩, ೧೪೧೭).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸಾದಲಕ್ಷಣಂ ಮಹಿಮಾ ಚ

ಸಮರ್ಪಿತಃ ಪ್ರಸಾದ್ಯೈಕಕಾರಣತ್ವಾನ್ಮಹೇಶಿತುಃ।
ಪ್ರಸಾದತ್ವೇನ ವಿಖ್ಯಾತಃ ಪರಮಾನಂದದಾಯಕಃ ॥ ೩೩ ॥

ಋತಂ ಸತ್ಯಂ ಪರಂ ಬ್ರಹ್ಮಾಮೃತಮಿತ್ಯಪಿ ಗೀಯತೇ।
ಪ್ರಸಾದಸ್ತಸ್ಯ ಮಹಿಮಾ ಕೇನ ವಾ ವರ್ಣ್ಯತೇ ಕಥಮ್ ॥ ೩೪ ॥

ಗುರೂಚ್ಛಿಷ್ಟಂ ಪುರೋಡಾಶಂ ಚರಸ್ಯಾಪಿ ವಿಶೇಷತಃ।
ಚರಗುರ್ವೋಃ ಪ್ರಸಾದಸ್ತು ಧ್ರುವಂ ಪಾವಿತ್ರ್ಯದಾಯಕಃ ॥ ೩೫ ॥

ಪ್ರಸಾದಮಹಿಮಾಽಚಿಂತ್ಯಃ ಪ್ರೋಕ್ತೋ ದೇವಗುರೋ ತವ।
ಗೋಪನೀಯಃ ಪ್ರಯತ್ನೇನ ಕಿಮನ್ಯಚ್ಛ್ರೋತುಮಿಚ್ಛಸಿ ॥ ೩೬ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರಬೃಹಸ್ಪತಿ-ಸಂವಾದೇ ಶಿವಶಾಸನೇ ಕ್ರಿಯಾಪಾದೇ ಪಾದೋದಕಪ್ರಸಾದಸ್ವರೂಪ-ನಿರೂಪಣಂ ನಾಮ ಪಂಚಮಃ ಪಟಲಃ ॥ ೫ ॥

ಪ್ರಸಾದ ಲಕ್ಷಣ ಮತ್ತು ಮಹಿಮೆ

ಸಮರ್ಪಣೆ ಮಾಡಿದ ಮೇಲೆ ಮಹೇಶ್ವರನ ಪ್ರಸನ್ನತೆಗೆ ಏಕಮಾತ್ರಕಾರಣವಾದ, ಪರಮಾನಂದವನ್ನು ಕೊಡುವ ಪದಾರ್ಥವೇ ಪ್ರಸಾದ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. (೩೩). ಪರಬ್ರಹ್ಮವು ಋತ, ಸತ್ಯ, ಅಮೃತ ಇತ್ಯಾದಿ ಶಬ್ದಗಳಿಂದ ಸ್ತುತಿಸಲ್ಪಡುತ್ತದೆ. ಅದರ ಮಹಿಮೆಯೇ ಪ್ರಸಾದ. ಅದನ್ನು ಯಾರು ತಾನೆ ಹೇಗೆ ತಾನೆ ವರ್ಣಿಸಬಲ್ಲರು?(೩೪). ಗುರುವು ಸೇವಿಸಿ ಉಳಿಸಿದ್ದು ಪುರೋಡಾಶ (ಯಜ್ಞದಲ್ಲಿ ಅಕ್ಕಿಹಿಟ್ಟಿನಿಂದ ಮಾಡಿದ ರೊಟ್ಟಿಯಂತಹ ಹವಿಸ್ಸಿನ ದ್ರವ್ಯ) ಮತ್ತು ವಿಶೇಷ ರೂಪದಲ್ಲಿ ಜಂಗಮನ ಪುರೋಡಾಶ ಅಥವಾ ಜಂಗಮ ಮತ್ತು ಗುರು ಇಬ್ಬರ ಪ್ರಸಾದವು ನಿಶ್ಚಿತವಾಗಿಯೂ ಪವಿತ್ರತೆಯನ್ನು ನೀಡುವಂತಹದು. (೩೫). ದೇವಗುರುವೇ, ನಿನಗೆ ಅಚಿಂತ್ಯವಾದ ಪ್ರಸಾದದ ಮಹಿಮೆಯನ್ನು ಹೇಳಿದ್ದಾಯಿತು. ಇದನ್ನು ಪ್ರಯತ್ನದಿಂದ ರಹಸ್ಯವಾಗಿಡಬೇಕು. ಮತ್ತೇನು ಬೇರೆಯದನ್ನು ಕೇಳಲಿಚ್ಛಿಸುವೆ? (೩೬).

ಇಲ್ಲಿಗೆ ಶ್ರೀಚಂದ್ರಜ್ಞಾನಾಗಮದ ಉತ್ತರ ಭಾಗದಲ್ಲಿ ಅನಂತರುದ್ರ ಬೃಹಸ್ಪತಿಗಳ ಸಂವಾದದಲ್ಲಿ, ಶಿವಶಾಸನದಲ್ಲಿ ಪಾದೋದಕಪ್ರಸಾದಸ್ವರೂಪ ನಿರೂಪಣವೆಂಬ ಪಂಚಮ ಪಟಲ ಮುಗಿಯಿತು. (೫).

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಷಷ್ಠಃ ಪಟಲಃ

॥ ಭಸ್ಮಸ್ವರೂಪನಿರೂಪಣಮ್॥

ಬೃಹಸ್ಪತಿರುವಾಚ

ಅಪ್ರಮೇಯಪ್ರಭಾವಾಢ್ಯ ಜಗದೀಶ ನಮೋಽಸ್ತು ತೇ।
ಶ್ರುತ್ವಾ ಪ್ರಸಾದಭೂಮಾನಂ ಕೃತಕೃತ್ಯೋಽಸ್ಮಿ ಸಾಂಪ್ರತಮ್ ॥ ೧ ॥

ಷಷ್ಠಸ್ಯ ಭಸ್ಮನಶ್ಚಾಪಿ ಯನ್ಮಾಹಾತ್ಮ್ಯಮನುತ್ತಮಮ್।
ತದಪ್ಯಾವೇದ್ಯ ಕೃಪಯಾ ಧನ್ಯಂ ಸಂಪಾದಯಾದ್ಯ ಮಾಮ್ ॥ ೨ ॥

ಬೃಹಸ್ಪತಿಯು ಹೇಳಿದನು

ಅಪರಿಮಿತವಾದ ಪ್ರಭಾವಸಂಪನ್ನನೇ, ಜಗದೀಶನೇ, ನಿನಗೆ ನಮಸ್ಕಾರ. ಈಗ ಪ್ರಸಾದದ ಮಹಿಮೆಯನ್ನು ಕೇಳಿ ಧನ್ಯನಾದೆನು. (೧) ಆರನೆಯದಾದ ಭಸ್ಮದ ಎಣೆಯಿಲ್ಲದ ಮಹತ್ತ್ವವನ್ನು ಕೂಡ ಕೃಪೆಯಿಂದ ಬೋಧಿಸಿ ನನ್ನನ್ನು ಧನ್ಯನನ್ನಾಗಿ ಮಾಡು. (೨).

ಅನಂತರುದ್ರ ಉವಾಚ

ಬೃಹನ್ನಾವೇದಯಿಷ್ಯಾಮಿ ಭಸ್ಮಸಂಪಾದನಂ ತಥಾ।
ಧಾರಣಂ ವೈಭವಂ ಚಾಪಿ ಸಾವಧಾನಮನಾಃ ಶೃಣು ॥ ೩ ॥

ಬೃಹಸ್ಪತಿಯೇ, ಭಸ್ಮದ ತಯಾರಿಕೆ, ಭಸ್ಮಧಾರಣೆ ಮತ್ತು ಅದರ ಮಹಿಮೆಯನ್ನು ತಿಳಿಯಪಡಿಸುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. (೩).

೬. ಭಸ್ಮಾಖ್ಯಂ ಷಷ್ಠಮಾವರಣಮ್

ವಿದ್ಯಾಶಕ್ತಿಃ ಸಮಸ್ತಾನಾಂ ಶಕ್ತಿರಿತ್ಯಭಿಧೀಯತೇ।
ಗುಣತ್ರಯಾಶ್ರಯಾ ವಿದ್ಯಾ ಸಾ ವಿದ್ಯಾ ಚ ತದಾಶ್ರಯಾ ॥ ೪ ॥

ಭಸ್ಮವೆಂಬ ಆರನೆಯ ಆವರಣ

ವಿದ್ಯಾಶಕ್ತಿಯನ್ನು ಸಮಸ್ತ ಪದಾರ್ಥಗಳ ಶಕ್ತಿಯೆಂದು ಕರೆಯುತ್ತಾರೆ. ಆ ವಿದ್ಯೆಯು ಮೂರು ಗುಣಗಳ ಆಧಾರ ಮತ್ತು ಆ ವಿದ್ಯೆಯು ಅವುಗಳನ್ನು ಆಶ್ರಯಿಸಿದೆ (೪).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ನೋಡಿರಿ ಬೃಹಜ್ಜಾಬಾಲೋಪನಿಷತ್, ೩.೩. (ಯಥಾವತ್ ಇದೇ ಶ್ಲೋಕ).

ಗೋ-ಗೋಮಯ-ಗೋಮೂತ್ರಸ್ವರೂಪನಿರೂಪಣಮ್

ಗುಣತ್ರಯಮಿದಂ ದೇನುರ್ವಿದ್ಯಾಽಭೂದ್ಗೋಮಯಂ ಶುಭಮ್
ಮೂತ್ರಂ ಚೋಪನಿಷತ್ ಪ್ರೋಕ್ತಂ ಕುರ್ಯಾದ್ಭಸ್ಮ ತತಃ ಪರಮ್ ॥ ೫ ॥

ಗೋವು-ಗೋಮಯ-ಗೋಮೂತ್ರಗಳ ಸ್ವರೂಪ ನಿರೂಪಣೆ

ಈ ಮೂರು ಗುಣಗಳೇ ಗೋವು, ವಿದ್ಯೆಯೇ ಕಲ್ಯಾಣ ಪ್ರದವಾದ ಗೋಮಯ ಮತ್ತು ಉಪನಿಷತ್ತೇ ಗೋಮೂತ್ರ. ಈ ಮೂರರಿಂದ ಶ್ರೇಷ್ಠ ಭಸ್ಮವನ್ನು ತಯಾರಿಸಬೇಕು. (೫).

ಟಿಪ್ಪಣಿ : ನೋಡಿರಿ ಬೃಹಜ್ಜಾಬಾಲೋಪನಿಷತ್, ೩.೪. (ಯಥಾವತ್ ಇದೇ ಶ್ಲೋಕ)

ಭಸ್ಮಸಂಪಾದನವಿಧಿಃ

ಪಂಚಾಕ್ಷರೇಣ ಮಂತ್ರೇಣ ಧೇನುಂ ತತ್ರಾಭಿಮಂತ್ರಯೇತ್।
ಅಷ್ಟೋತ್ತರಶತೇನಾಥ ಪ್ರಾಶಯೇತ್ತು ಜಲಂ ತೃಣಮ್ ॥ ೬ ॥

ಉಪೋಷ್ಯ ಚ ಚತುರ್ದಶ್ಯಾಂ ಶುಕ್ಲೇ ಕೃಷ್ಣೇಽಥವಾ ವ್ರತೀ।
ಪರೇದ್ಯುಃ ಪ್ರಾತರುತ್ಥಾಯ ಶುಚಿರ್ಭೂತ್ವಾ ಸಮಾಹಿತಃ ॥ ೭ ॥

ಕೃತಸ್ನಾನೋ ಧೌತವಸ್ತ್ರಃ ಪಯೋಽರ್ಥಂ ವಿಸೃಜೇಚ್ಚ ಗಾಮ್।
ಉತ್ಥಾಪ್ಯ ಗಾಂ ಪ್ರಯತ್ನೇನ ಗಾಯತ್ರ್ಯಾ ಮೂತ್ರಮಾಹರೇತ್ ॥ ೮ ॥

ಸೌವರ್ಣೇ ರಾಜತೇ ತಾಮ್ರೇ ಧಾರಯೇನ್ಮೃಣ್ಮಯೇ ಘಟೇ।
ಪೌಷ್ಕರೇಽಥ ಪಲಾಶೇ ವಾ ಪಾತ್ರೇ ಗೋಶೃಂಗ ಏವ ವಾ ॥ ೯ ॥

ಆದದೀತ ಹಿ ಗೋಮೂತ್ರಂ ಮೂಲಮಂತ್ರೇಣ ಗೋಮಯಮ್।
ಅಭೂಮಿಪಾತಂ ಗೃಹ್ಣೀಯಾತ್ ಪಾತ್ರೇ ಪೂರ್ವೋದಿತೇ ಗೃಹೇ ॥ ೧೦ ॥

ಗೋಮಯಂ ಶೋಧಯೇದ್ ವಿದ್ವಾನ್ ಮೂಲಮಂತ್ರಾಷ್ಟಕೇನ ಚ।
ದಶಜಪ್ತೇನ ಮಂತ್ರೇಣ ಗೋಮೂತ್ರಂ ಶೋಧಯೇತ್ತಥಾ ॥ ೧೧ ॥

ಭವಾಯ ನಮಮಂತ್ರೇಣ ಗೋಮೂತ್ರಂ ಗೋಮಯೇ ಕ್ಷಿಪೇತ್।
ಶರ್ವಾಯ ನಮ ಇತ್ಯೇವಂ ಪಿಂಡಾನಾಂ ಚ ಚತುರ್ದಶ ॥ ೧೨ ॥

ಕುರ್ಯಾತ್ ಸಂಶೋಷ್ಯ ಕಿರಣೈಃ ಸಪ್ತಮೂಲೇನ ಚಾಹರೇತ್।
ವಿದ್ಯಧ್ಯಾದಥ ಪೂರ್ವೋಕ್ತಪಾತ್ರೇ ಗೋಮಯಪಿಂಡಕಾನ್ ॥ ೧೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಸ್ಮ ತಯಾರಿಸುವ ವಿಧಾನ

ಪಂಚಾಕ್ಷರ ಮಂತ್ರದಿಂದ ಧೇನುವನ್ನು ಅಭಿಮಂತ್ರಿಸಬೇಕು. ನೂರಾ ಎಂಟು ಸಾರಿ ಪಂಚಾಕ್ಷರ ಮಂತ್ರದಿಂದ ಅಭಿಮಂತ್ರಿಸಲ್ಪಟ್ಟ ನೀರನ್ನು ಕುಡಿಸಿ, ಹುಲ್ಲನ್ನು ತಿನ್ನಿಸಬೇಕು. (೬). ಶುಕ್ಲಪಕ್ಷ ಅಥವಾ ಕೃಷ್ಣಪಕ್ಷ ಚತುರ್ದಶಿಯಂದು ಉಪವಾಸ ಮಾಡಿ, ಮಾರನೆಯ ದಿನ ಬೆಳಿಗ್ಗೆ ಎದ್ದು ಶುಚಿಯಾಗಿ ಸ್ಥಿರಮತಿಯವನಾಗಿ (ಏಕಾಗ್ರಚಿತ್ತನಾಗಿ), ಸ್ನಾನ ಮಾಡಿ, ಶುಭ್ರ ವಸ್ತ್ರ ಧರಿಸಿ, ಹಾಲನ್ನು ಕರೆಯುವುದಕ್ಕಾಗಿ ಗೋವನ್ನು ಸಜ್ಜುಗೊಳಿಸಬೇಕು. ಪ್ರಯತ್ನ ಪೂರ್ವಕವಾಗಿ ಗೋವನ್ನು ಎಬ್ಬಿಸಿ ಗಾಯತ್ರೀ ಮಂತ್ರವನ್ನು ಜಪಿಸುತ್ತಾ ಗೋಮೂತ್ರವನ್ನು ಚಿನ್ನದ, ಬೆಳ್ಳಿಯ ಅಥವಾ ತಾಮ್ರದ ಪಾತ್ರೆಯಲ್ಲಿ ಅಥವಾ ಮಣ್ಣಿನ ಕೊಡದಲ್ಲಿ ಅಥವಾ ಕಮಲ ಅಥವಾ ಪಲಾಶ ದೊನ್ನೆಯಲ್ಲಿ ಅಥವಾ ಗೋವಿನ ಕೋಡಿನಲ್ಲಿ ಹಿಡಿದು ಸಂಗ್ರಹಿಸಬೇಕು. (೭-೯). ಹಾಗೆ ಗೋಮೂತ್ರವನ್ನು ಸಂಗ್ರಹಿಸಿದ ಮೇಲೆ ಮೂಲಮಂತ್ರದಿಂದ ಗೋಮಯವನ್ನು ಭೂಮಿಗೆ ಬೀಳುವುದಕ್ಕೆ ಮೊದಲೇ ಹಿಡಿದು ಮೊದಲು ಹೇಳಿದ ಯಾವುದಾದರೂ ಪಾತ್ರೆಯಲ್ಲಿ ಸಂಗ್ರಹಿಸಬೇಕು. ಗೃಹದಲ್ಲಿ ಮೂಲ ಮಂತ್ರವನ್ನು ಎಂಟು ಸಾರಿ ಜಪಿಸುತ್ತಾ ಗೋಮಯವನ್ನು ಶೋಧಿಸಬೇಕು. (೧೦-೧೧). ಮಂತ್ರವನ್ನು ಹತ್ತು ಸಾರಿ ಜಪಿಸುತ್ತಾ ಗೋಮೂತ್ರವನ್ನು ಶೋಧಿಸಬೇಕು. 'ಭವಾಯ ನಮಃ' ಮಂತ್ರದಿಂದ ಗೋಮೂತ್ರವನ್ನು ಗೋಮಯದಲ್ಲಿ ಹಾಕಿ ಕಲಸಬೇಕು. 'ಶರ್ವಾಯ ನಮಃ' ಎಂದು (ಆ ಗೋಮೂತ್ರ ಬೆರೆಸಿದ ಗೋಮಯದಿಂದ) ಹದಿನಾಲ್ಕು ಉಂಡೆಗಳನ್ನು ಮಾಡಬೇಕು. (೧೨). ಆ ಉಂಡೆಗಳನ್ನು ಸೂರ್ಯನ ಕಿರಣಗಳಿಂದ ಒಣಗಿಸಿ ಏಳು ಸಾರಿ ಮೂಲಮಂತ್ರವನ್ನು ಜಪಿಸುತ್ತಾ ಅವುಗಳನ್ನು ತೆಗೆದುಕೊಂಡು ಮೇಲೆ ಹೇಳಿ ಪಾತ್ರೆಗಳಲ್ಲಿ ಒಂದರಲ್ಲಿ ಇಡಬೇಕು. (೧೩).

ಟಿಪ್ಪಣಿ : 'ಭವಾಯ ನಮಃ' (ಮಹಾನಾರಾಯಣೋಪನಿಷತ್, ೧೪.೬) 'ಶರ್ವಾಯ ನಮಃ' (ಮಹಾನಾರಾಯಣೋಪನಿಷತ್, ೧೪.೭)

ಆಹುತಿವಿಧಾನಮ್

ಶೈವಾಗಮೋಕ್ತವಿಧಿನಾ ಪ್ರತಿಷ್ಠಾಪ್ಯಾಗ್ನಿಮರ್ಚಯೇತ್।
ಪಿಂಡಾಂಶ್ಚ ನಿಕ್ಷಿಪೇತ್ ತತ್ರ ಚಾದ್ಯಂತಪ್ರಣವೇನ ತು ॥ ೧೪ ॥

ಷಡಕ್ಷರಸ್ಯ ಮಂತ್ರಸ್ಯ ವ್ಯಾವೃತ್ತಸ್ಯ ತಥಾಕ್ಷರೈಃ।
ಸ್ವಾಹಾಂತೈರ್ಜುಹುಯಾತ್ ತತ್ರ ವರ್ಣೈರ್ಗೋಮಯಪಿಂಡಿಕಾನ್ ॥ ೧೫ ॥

ಮೂಲೇನೈವಾಜ್ಯಭಾಗೌ ಚ ಪ್ರಕ್ಷಿಪೇದೇವ ಸಂಯತಃ।
ತತೋ ನಿಧನಪತಯೇ ತ್ರಯೋವಿಂಶಂ ಜುಹೋತಿ ಚ ॥
ಹೋತವ್ಯಾ ಪಂಚಬ್ರಹ್ಮಾಖ್ಯಾ ನಮೋ ದೇವಾಯ ಶಂಭವೇ ॥ ೧೬ ॥

ಇತಿ ಸರ್ವಾಹುತೀರ್ಹುತ್ವಾ ಚತುರ್ಥ್ಯಂತೈಶ್ಚ ಮಂತ್ರಕೈಃ।
ಭವಃ ಶರ್ವೋ ಮೃಡೋ ರುದ್ರೋ ಹರಃ ಶಂಭುರ್ಮಹೇಶ್ವರಃ ॥ ೧೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏತೈಶ್ಚ ಜುಹುಯಾದ್ವಿದ್ವಾನ್ ಮೂಲಮಂತ್ರಾಷ್ಟಕಂ ತಥಾ।
ಶಿವಾಯ ತ್ರಯಹೋಮಶ್ಚ ಸ್ವಿಷ್ಟಕೃನ್ಮೂಲಮಂತ್ರತಃ ॥ ೧೮ ॥

ಇತ್ಥಂ ಶೇಷಂ ತು ನಿರ್ವರ್ತ್ಯ ಪೂರ್ಣಪಾತ್ರೋದಕಂ ತಥಾ।
ಅಷ್ಟೋತ್ತರಶತೇನಾಥ ತರ್ಪಯೇಚ್ಛುದ್ಧಮಾನಸಃ ॥ ೧೯ ॥

ಆಹುತಿಯ ವಿಧಾನ

ಶೈವಾಗಮದಲ್ಲಿ ಹೇಳಿದ ಪದ್ಧತಿಯಂತೆ ಅಗ್ನಿಯನ್ನು ಪ್ರತಿಷ್ಠಾಪಿಸಿ ಪೂಜಿಸಬೇಕು. ಅದರಲ್ಲಿ ಆದಿ ಮತ್ತು ಅಂತ್ಯಗಳಲ್ಲಿ ಓಂಕಾರದಿಂದ ಕೂಡಿದ ಪಂಚಾಕ್ಷರ ಮಂತ್ರದಿಂದ (ಗೋಮಯದ) ಉಂಡೆಗಳನ್ನು ಹಾಕಬೇಕು. (೧೪). ಷಡಕ್ಷರ ಮಂತ್ರದ ವರ್ಣಗಳನ್ನು ಕ್ರಮ ಮತ್ತು ವಿಪರೀತ ಕ್ರಮಗಳಲ್ಲಿ ಉಚ್ಚರಿಸುತಾ ಸ್ವಾಹಾ ಪದವನ್ನು ಜೋಡಿಸಿ ಗೋಮಯ ಪಿಂಡಗಳನ್ನು ಅಗ್ನಿಯಲ್ಲಿ ಹಾಕಬೇಕು. (೧೫). ಅನಂತರ ಇಂದ್ರಿಯ ನಿಯಂತ್ರಣವನ್ನು ಸಾಧಿಸಿದ ಸಾಧಕನು ಮೂಲ ಮಂತ್ರದಿಂದ ಆಜ್ಯಭಾಗಗಳ ಆಹುತಿಯನ್ನು ನೀಡಬೇಕು. ಆಗ 'ನಿಧನಪತಯೇ' ಎಂಬ ಮಂತ್ರದಿಂದ ಇಪ್ಪತ್ತೂರು ಬಾರಿ ಆಹುತಿ ನೀಡಿ, 'ಪಂಚಬ್ರಹ್ಮ' ಮಂತ್ರಗಳು ಮತ್ತು 'ನಮೋ ದೇವಾಯ ಶಂಭವೇ' ಎಂಬ ಮಂತ್ರ ಇವುಗಳಿಂದ ತುಪ್ಪ (ಆಜ್ಯ)ದ ಆಹುತಿಯನ್ನು ನೀಡಬೇಕು. (೧೬). ಮೇಲೆ ಹೇಳಿದ ಎಲ್ಲಾ ಆಹುತಿಗಳನ್ನೂ ನೀಡಿದ ಅನಂತರ ಭವ, ಶರ್ವ, ಮೃಡ, ರುದ್ರ, ಹರ, ಶಂಭು, ಮಹೇಶ್ವರ ಮತ್ತು ಶಿವ ಎಂಬ ಎಂಟು ಹೆಸರುಗಳನ್ನು ಚತುರ್ಥೀ ವಿಭಕ್ತ್ಯಂತವಾಗಿ ಮಾಡಿದ ಮಂತ್ರಗಳನ್ನು ಒಂದೊಂದಾಗಿ ಪಠಿಸುತ್ತಾ ಎಂಟು ಬಾರಿ ಮೂಲಮಂತ್ರ ಪಠಿಸುತ್ತಾ ಆಹುತಿಗಳನ್ನು ನೀಡಬೇಕು. ಅನಂತರ ಪಂಚಾಕ್ಷರ ಮಂತ್ರದಿಂದ ಶಿವನಿಗೋಸ್ಕರ 'ಸ್ವಿಷ್ಟಕೃದ್' ಹೋಮದ ಮೂರು ಆಹುತಿಗಳನ್ನು ನೀಡಬೇಕು. (೧೭-೧೮). ಇದೇ ರೀತಿಯಲ್ಲಿ ಮಿಕ್ಕೆಲ್ಲಾ ಕ್ರಿಯೆಗಳನ್ನು ಪೂರ್ತಿ ಮಾಡಿ ಶುದ್ಧವಾದ ಮನಸ್ಸುಳ್ಳ ಸಾಧಕನು ನೂರಾ ಎಂಟು ಸಾರಿ ಮೂಲಮಂತ್ರವನ್ನು ಪಠಿಸುತ್ತಾ ಪೂರ್ಣಕುಂಭದ ನೀರಿನಿಂದ ತರ್ಪಣವನ್ನು ಕೊಡಬೇಕು. (೧೯).

ಟಿಪ್ಪಣಿ : ಶೈವಾಗಮೋಕ್ತ ವಿಧಿನಾ = ಅಗ್ನಿಸ್ಥಾಪನೆಯ ವಿಧಿಯು ಅಜಿತಾಗಮ ಕ್ರಿಯಾಪಾದ ೨೧ನೇ ಪಟಲದಲ್ಲಿ ವಿಸ್ತಾರವಾಗಿ ಬಂದಿದೆ. ವೀರಶೈವ ದೀಕ್ಷಾವಿಧಿ, ವೀರಶೈವ ಲಿಂಗೀಬ್ರಾಹ್ಮಣ ದಶಕರ್ಮ ಪದ್ಧತಿ, ಪುಟ ೯೬-೧೦೨ ನೋಡಿರಿ). ಷಡಕ್ಷರ ಮಂತ್ರಸ್ಯ ವ್ಯಾವೃತ್ತಸ್ಯ ತಥಾ = 'ಓಂ ನಮಃ ಶಿವಾಯ'-ಇದು ಷಡಕ್ಷರ ಮಂತ್ರದ ಕ್ರಮ; ವಿಪರೀತ (ವಿಲೋಮ) ಕ್ರಮ ಹೀಗಿದೆ 'ಯ ವಾ ಶಿ ಮಃ ನ ಓಂ' 'ನಿಧನಪತಯೇ' = 'ನಿಧನಪತಯೇ ನಮಃ। ನಿಧನಪತಾಂತಿಕಾಯನಮಃ। (ಮಹಾ ನಾರಾಯಣೋಪನಿಷತ್, ೧೪.೧). 'ಪಂಚ ಬ್ರಹ್ಮ' ಮಂತ್ರಗಳು = 'ಸದ್ಯೋಜಾತಂ ಪ್ರಪದ್ಯಾಮಿ', 'ವಾಮದೇವಾಯ ನಮಃ' 'ಅಘೋರೇಭ್ಯೋಽಥ ಘೋರೇಭ್ಯಃ', 'ತತ್ಪುರುಷಾಯ ವಿದ್ಮಹೇ', 'ಈಶಾನಃ ಸರ್ವ ವಿದ್ಯಾನಾಂ' ಈ ಐದು (ತೈತ್ತಿರೀಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆರಣ್ಯಕ, ೧೦.೪೩೦೪೭; ಮಹಾನಾರಾಯಣೋಪನಿಷತ್ ೧೫-೧೯). ಭವಃ ಶರ್ವೋ ಇತ್ಯಾದಿ = ಮಂತ್ರಕ್ರಮ ಹೀಗಿದೆ 'ಭವಾಯ ಶಿವಾಯ ನಮಃ' 'ಶರ್ವಾಯ ಶಿವಾಯ ನಮಃ', 'ಮೃಡಾಯ ಶಿವಾಯ ನಮಃ', 'ರುದ್ರಾಯ ಶಿವಾಯ ನಮಃ', 'ಹರಾಯ ಶಿವಾಯ ನಮಃ', 'ಶಂಭವೇ ಶಿವಾಯ ನಮಃ','ಮಹೇಶ್ವರರಾಯ ಶಿವಾಯ ನಮಃ' ಮತ್ತು 'ಶಿವಾಯ ಶಿವಾಯ ನಮಃ।' 'ಸ್ವಿಷ್ಟಕೃದ್ ಹೋಮ' 'ವೀರಶೈವಲಿಂಗೀ ಬ್ರಾಹ್ಮಣ ದಶಕರ್ಮ ಪದ್ಧತಿ'ಯಲ್ಲಿ 'ವೀರಶೈವ ದೀಕ್ಷಾ ವಿಧಿ ಪ್ರಕರಣ' ಪು. ೧೧೯ ನೋಡಿರಿ.

ಪುಲಕೈಶ್ಛಾದನಮ್

ಪಂಚಬ್ರಹ್ಮೇಣ ಮಂತ್ರೇಣ ತಜ್ಜಲಂ ಶಿರಸಿ ಕ್ಷಿಪೇತ್।
ದಶವಾರಂ ತು ಜಪ್ತೇನ ದಿಕ್ಷು ತೋಯಂ ವಿನಿಕ್ಷಿಪೇತ್॥
ಶೈವಾನಾಂ ದಕ್ಷಿಣಾಂ ದತ್ತ್ವಾ ಶಾಂತ್ಯೈ ಪುಲಕಮಾಹರೇತ್ ॥ ೨೦ ॥

ಶೈವಾನಾಮಾಹರಿಷ್ಯಾಮಿ ಸರ್ವೇಷಾಂ ಕರ್ಮಗುಪ್ತಯೇ।
ಜಾತವೇದಸಮೇತಂ ತ್ವಾಂ ಪುಲಕೈಶ್ಛಾದಯಾಮ್ಯಹಮ್ ॥ ೨೧ ॥

ಮಂತ್ರೇಣಾನೇನ ತಂ ವಹ್ನಿಂ ಪುಲಕೈಶ್ಛಾದಯೇತ್ತತಃ।
ತ್ರಿದಿನಂ ಜ್ವಲನ ಸ್ಥಿತ್ಯೈ ಛಾದನಂ ಪುಲಕಂ ಸ್ಮೃತಮ್॥
ಬ್ರಾಹ್ಮಣಾನ್ ಭೋಜಯೇದ್ಭಕ್ತ್ಯಾ ಸ್ವಯಂ ಭುಂಜೀತ ವಾಗ್ಯತಃ ॥ ೨೨ ॥

ದಿನತ್ರಯೇಣ ಯದಿ ವಾ ಪ್ರಥಮೇ ದಿವಸೇಽಥವಾ।
ದ್ವಿತೀಯೇ ವಾ ತೃತೀಯೇ ವಾ ಪ್ರಾತಃ ಸ್ನಾತ್ವಾ ಸಿತಾಂಬರಃ ॥ ೨೩ ॥

ಶುಕ್ಲಭಾಸ್ವದ್ಧ್ಯಜ್ಞಸೂತ್ರಃ ಶುದ್ಧಭಸ್ಮಾನುಲೇಪನಃ।
ಮೂಲಮಂತ್ರಂ ಸಮುಚ್ಚಾರ್ಯ ಪುಲಕಂ ಭಸ್ಮ ಸಂತ್ಯಜೇತ್ ॥ ೨೪ ॥

ತತಶ್ಚಾವಾಹನಮುಖಾನುಪಚಾರಾಂಸ್ತು ಷೋಡಶ।
ಕೃತ್ವಾಽಽಹೃತ್ಯ ತಥಾ ಶೈವಂ ತತೋಽಗ್ನಿಮುಪಸಂಹರೇತ್ ॥ ೨೫ ॥

ಹೊಟ್ಟನಿಂದ ಮುಚ್ಚುವುದು

ಪಂಚ ಬ್ರಹ್ಮ ಮಂತ್ರದಿಂದ ಆ ಜಲವನ್ನು ತಲೆಯ ಮೇಲೆ ಸಿಂಪಡಿಸಿಕೊಳ್ಳಬೇಕು. ಹತ್ತು ಸಾರಿ ಅಭಿಮಂತ್ರಿಸಲ್ಪಟ್ಟ ಜಲವನ್ನು ಕ್ರಮವಾಗಿ ಹತ್ತು ದಿಕ್ಕುಗಳಲ್ಲಿ ಸಿಂಪಡಿಸಬೇಕು. ಶಿವಭಕ್ತರಿಗೆ ದಕ್ಷಿಣೆಯನ್ನು ಕೊಟ್ಟು ಶಾಂತಿಗೋಸ್ಕರ ಧಾನ್ಯದ ಹೊಟ್ಟನ್ನು ತರಬೇಕು. (೨೦). ಎಲ್ಲಾ ಶಿವಭಕ್ತರ ಕರ್ಮ ರಕ್ಷಣೆಗಾಗಿ ಹೊಟ್ಟನ್ನು ತರುತ್ತಿದ್ದೇನೆ. ಓ ಅಗ್ನಿದೇವ ಈಗ ನಾನು ನಿನ್ನನ್ನು ಹೊಟ್ಟನಿಂದ ಆಚ್ಛಾದಿಸುತ್ತಿದ್ದೇನೆ. (೨೧). ಈ ಅರ್ಥದ ಮಂತ್ರದಿಂದ ಆ ಅಗ್ನಿಯನ್ನು ಹೊಟ್ಟನಿಂದ ಮುಚ್ಚಬೇಕು. ಮೂರುದಿನ ಸುಡುವ ಸ್ಥಿತಿಗಾಗಿ ಹೊಟ್ಟನ್ನು ಹೊದಿಕೆಯೆಂದು ತಿಳಿಯಲಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬ್ರಾಹ್ಮಣರನ್ನು ಭಕ್ತಿಯಿಂದ ಊಟ ಮಾಡಿಸಿ ಸ್ವತಃ ಮೌನದಿಂದ ಊಟ ಮಾಡಬೇಕು. (೨೨). ಮೂರು ದಿನಗಳ ಅನಂತರ ಅಥವಾ ಮೊದಲ ದಿನ ಅಥವಾ ಎರಡನೆಯ ದಿನ ಅಥವಾ ಮೂರನೆಯ ದಿನ ಬೆಳಿಗ್ಗೆ ಸ್ನಾನ ಮಾಡಿ ಬಿಳಿಯ ಉಡುಪನ್ನು ಧರಿಸಿ, ಬಿಳಿಯ ಹೊಳೆಯುವ ಯಜ್ಞೋಪವೀತವನ್ನು ಧರಿಸಿದವನಾಗಿ ಶುದ್ಧ ಭಸ್ಮವನ್ನು ಲೇಪಿಸಿಕೊಂಡು, ಮೂಲ ಮಂತ್ರವನ್ನು ಉಚ್ಚರಿಸುತ್ತಾ ಹೊಟ್ಟಿನ ಬೂದಿಯನ್ನು ತೆಗೆದು ಹಾಕಬೇಕು. (೨೩-೨೪). ಅನಂತರ ಅವಾಹನ ಪೂರ್ವಕವಾಗಿ ಷೋಡಶೋಪಚಾರ ಪೂಜೆಯನ್ನು ಮಾಡಿ ಆ ಶೈವಾಗ್ನಿಯನ್ನು ಉಪಶಮನಗೊಳಿಸಬೇಕು. (೨೫).

ಸದ್ಯಾದಿಮಂತ್ರೇಣ ಭಸ್ಮಶುದ್ಧೀಕರಣಮ್

ಸದ್ಯಾದಿಕೇನ ಮಂತ್ರೇಣ ಗೃಹ್ಣೀಯಾದ್ ಭಸ್ಮ ಚೋತ್ತಮಮ್।
ತದನಂತರ ಮಂತ್ರೇಣ ಪ್ರಮೃಜ್ಯ ಚ ತತಃ ಪರಮ್॥
ಸಂಯೋಜ್ಯ ಗಂಧಸಲಿಲೈಃ ಕಪಿಲಾಮೂತ್ರಕೇಣ ವಾ ॥ ೨೬ ॥

ಚಂದ್ರಕುಂಕುಮಕಸ್ತೂರೀಮುಶೀರಂ ಚಂದನಂ ತದಾ।
ಅಗರುದ್ವಿತಯಂ ಚೈವ ಚೂರ್ಣಯಿತ್ವಾ ತು ಸೂಕ್ಷ್ಮತಃ ॥ ೨೭ ॥

ಪ್ರಣವೇನಾಹರೇದ್ ವಿದ್ವಾನ್ ಬೃಹತೋ ವಟಕಾನಥ।
ಅಘೋರಮಂತ್ರತಶ್ಚಾಥ ದಶಜಪ್ತೇನ ಮೂಲತಃ ॥ ೨೮ ॥

'ಸದ್ಯೋಜಾತಂ' ಮುಂತಾದ ಮಂತ್ರಗಳಿಂದ ಭಸ್ಮದ ಶುದ್ಧೀಕರಣ

'ಸದ್ಯೋಜಾತಂ ಪ್ರಪದ್ಯಾಮಿ' ಮಂತ್ರದಿಂದ ಉತ್ತಮ ಭಸ್ಮವನ್ನು ತೆಗೆದು ಕೊಳ್ಳಬೇಕು. ಅನಂತರದ ಮಂತ್ರ 'ವಾಮದೇವಾಯ ನಮೋ' ಎಂಬುದರಿಂದ ಆಮೇಲೆ ಅದನ್ನು ಪುಡಿ ಮಾಡಬೇಕು. ಅನಂತರ ಅದಕ್ಕೆ ಸುಗಂಧಿತ ಜಲ ಅಥವಾ ಕಪಿಲಾ ಗೋವಿನ ಮೂತ್ರವನ್ನು ಬೆರೆಸಬೇಕು. (೨೬). ಕರ್ಪೂರ, ಕುಂಕುಮ, ಕಸ್ತೂರಿ, ಉಶೀರ, ಚಂದನ ಮತ್ತು ಎರಡೂ ತರಹದ ಅಗರು ಇವುಗಳನ್ನು ಸೂಕ್ಷ್ಮ ಚೂರ್ಣವನ್ನಾಗಿ ಮಾಡಿ ಪ್ರಣವವನ್ನು ಉಚ್ಚರಿಸುತ್ತಾ ವಿದ್ವಾಂಸನಾದ ಭಕ್ತನು ಅಘೋರ ಮಂತ್ರದಿಂದ ಮತ್ತು ಮೂಲಮಂತ್ರದ ಹತ್ತು ಸಾರಿ ಜಪದಿಂದ ದೊಡ್ಡ ಉಂಡೆಗಳನ್ನು (ಗಟ್ಟಿಗಳನ್ನು) ಮಾಡಬೇಕು. (೨೭-೨೮).

ಟಿಪ್ಪಣಿ : ಇಲ್ಲಿ ೬-೨೮ರ ವರೆಗಿನ ಶ್ಲೋಕಗಳಲ್ಲಿ ಭಸ್ಮವನ್ನು ತಯಾರಿಸುವ ವಿಧಾನವನ್ನು ಕೊಡಲಾಗಿದೆ. ಇಲ್ಲಿ ಕೊಟ್ಟಿರುವ ವಿಧಾನವು ಸಂಪೂರ್ಣವಾಗಿ ಬೃಹಜ್ಜಾ-ಬಾಲೋಪನಿಷತ್ತಿನ ೩.೫-೩೧ರವರೆಗಿನ ಭಾಗದಲ್ಲಿ ಕೊಟ್ಟ ವಿಧಾನಕ್ಕೆ ಸಂವಾದಿಯಾಗಿದೆ. ಕೇವಲ ವಿಧಿಸಿದ ಕೆಲವು ಮಂತ್ರಗಳು ಮಾತ್ರ ಅಲ್ಲಲ್ಲಿ ಬೇರೆಯಾಗಿವೆ. (ನೋಡಿ ಶೈವ ಉಪನಿಷದಃ, ಅಡ್ಯಾರ್, ಮದ್ರಾಸ್, ೧೯೮೮, ಪು.೯೮-೧೦೧).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಸ್ಮಸಂಪಾದನಸ್ಯ ವಿಧಾನಾಂತರಮ್

ವಿಧಾಂತರಂ ಪ್ರವಕ್ಷ್ಯಾಮಿ ಭಸ್ಮಸಂಪಾದನಂ ಲಘು।
ಸದ್ಯೇನ ಗೋಶಕೃದ್‌ಗ್ರಾಹ್ಯಂ ವಾಮೇನ ತ್ವಭಿಮಂತ್ರಯೇತ್ ॥ ೨೯ ॥
ಅಘೋರೇಣ ದಹೇತ್ ಪಿಂಡಂ ಗ್ರಾಹ್ಯಂ ತತ್ಪುರುಷೇಣ ತು।
ನಿತ್ಯಮೀಶಾನಮಂತ್ರೇಣ ಸ್ವಾಂಗೇ ಧಾರ್ಯಂ ಪ್ರಯತ್ನತಃ ॥ ೩೦ ॥

ಭಸ್ಮ ತಯಾರಿಕೆಯ ಮತ್ತೊಂದು ವಿಧಾನ

ಭಸ್ಮವನ್ನು ತಯಾರಿಸುವ ಮತ್ತೊಂದು ಲಘು ವಿಧಾನವನ್ನು ಹೇಳುತ್ತೇನೆ. 'ಸದ್ಯೋಜಾತಂ ಪ್ರಪದ್ಯಾಮಿ' ಎಂಬ ಮಂತ್ರದಿಂದ ಗೋಮಯವನ್ನು ತೆಗೆದು ಕೊಳ್ಳಬೇಕು. 'ವಾಮದೇವಾಯ ನಮಃ' ಎಂಬ ಮಂತ್ರದಿಂದ ಅಭಿಮಂತ್ರಿಸಬೇಕು. (೨೯). 'ಅಘೋರೇಭ್ಯೋಽಥ ಘೋರೇಭ್ಯಃ' ಎಂಬ ಮಂತ್ರದಿಂದ ದಹಿಸಿ, 'ತತ್ಪುರುಷೇಣ ವಿದ್ಮಹೇ' ಎಂಬ ಮಂತ್ರದಿಂದ ಪಿಂಡ (ಗಟ್ಟಿ)ಗಳನ್ನು ಮಾಡಿ ತೆಗೆದು ಕೊಳ್ಳಬೇಕು. ನಿತ್ಯವೂ "ಈಶಾನಃ ಸರ್ವವಿದ್ಯಾನಾಂ" ಎಂಬ ಮಂತ್ರದಿಂದ ತನ್ನ ದೇಹದ ಮೇಲೆ ಧರಿಸಿಕೊಳ್ಳಬೇಕು (೩೦).

ಟಿಪ್ಪಣಿ : ಭಸ್ಮ ತಯಾರಿಕೆಯ ಈ ಸಂಕ್ಷಿಪ್ತ ವಿಧಾನದ ರೀತಿಯಲ್ಲೇ ಶ್ರೀಸಿದ್ಧಾಂತಶಿಖಾಮಣಿಯಲ್ಲಿ (೭.೧೪-೧೮) ಭಸ್ಮ ತಯಾರಿಕೆಯ ವಿಧಾನವು ವರ್ಣಿಸಲ್ಪಟ್ಟಿದೆ.

ಭಸ್ಮತ್ರೈವಿಧ್ಯಮ್

ಶಾಂತಿಕಂ ಪೌಷ್ಟಿಕಂ ಭಸ್ಮ ಕಾಮದಂ ಚ ತ್ರಿಧಾ ಭವೇತ್।
ಗೋಮಯಂ ಯೋನಿಸಂಬದ್ಧಂ ಯದ್ಹಸ್ತೇನೈವ ಗೃಹ್ಯತೇ॥
ಬ್ರಹ್ಮಮಂತ್ರೈಶ್ಚ ಸಂದಗ್ಧಂ ತಚ್ಛಾಂತಿಕಮಿಹೋಚ್ಯತೇ ॥ ೩೧ ॥
ಸಾವಧಾನೇನ ಗೋಯೋನಿನಿಸ್ಸೃತಂ ಗೋಮಯಂ ತು ಯತ್।
ಅಂತರಿಕ್ಷೇ ಗೃಹೀತ್ವಾ ತಂ ಷಡಂಗೇನ ದಹೇತ್ತತಃ॥
ಪೌಷ್ಟಿಕಂ ತು ಸಮಾಖ್ಯಾತಂ ಕಾಮದಂ ತು ತತಃ ಶೃಣು ॥ ೩೨ ॥
ಸುಶುದ್ಧೇ ಭೂತಲೇ ದೈವಾತ್ ಪತಿತಂ ಗೋಮಯಂ ತು ಯತ್
ಪ್ರಸಾದೇನ ದಹೇದೇವಮೇತತ್ ಕಾಮದಮುಚ್ಯತೇ ॥ ೩೩ ॥

ಭಸ್ಮವು ಮೂರು ವಿಧ

ಭಸ್ಮವು ಶಾಂತಿಕ, ಪೌಷ್ಟಿಕ ಮತ್ತು ಕಾಮದ ಎಂದು ಮೂರು ವಿಧ. ಗೋವಿನ ಹಿಂಭಾಗದಿಂದ ಹೊರಬರುತ್ತಿದ್ದಂತೆಯೇ ಗೋಮಯವನ್ನು ಕೈಯಲ್ಲಿ ಹಿಡಿದು ಪಂಚ ಬ್ರಹ್ಮಮಂತ್ರಗಳಿಂದ ಸುಟ್ಟು ಯಾವುದನ್ನು ತಯಾರಿಸಲಾಗುತ್ತದೆಯೋ ಅದು ಶಾಂತಿಕ ಭಸ್ಮ (೩೧). ಎಚ್ಚರಿಕೆಯಿಂದ ಗೋಮಯವನ್ನು ಗೋವಿನ ಹಿಂಬದಿಯಿಂದ ಹೊರ ಬಂಗು ನೆಲಕ್ಕೆ ಬೀಳುವ ಮೊದಲೇ (ಅಂತರಿಕ್ಷದಲ್ಲಿ) ಹಿಡಿದು ಷಡಂಗ ಮಂತ್ರಗಳಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುಟ್ಟು ಯಾವುದು ಮಾಡಲ್ಪಡುತ್ತದೆಯೋ ಅದನ್ನು ಕಾಮದ ಭಸ್ಮ ಎಂದು ಕರೆಯಲಾಗುತ್ತದೆ. ಮತ್ತೆ ಕೇಳು. (೩೨). ದೈವವಶಾತ್ ಶುದ್ಧವಾದ ನೆಲದ ಮೇಲೆ ಬಿದ್ದ ಗೋಮಯವನ್ನು ತೆಗೆದುಕೊಂಡು ಪ್ರಸಾದ ಮಂತ್ರದಿಂದ ಸುಟ್ಟು ಯಾವುದು ಮಾಡಲ್ಪಡುತ್ತದೆಯೋ ಅದನ್ನು ಕಾಮದ ಭಸ್ಮವೆನ್ನುವರು. (೩೩).

ಟಿಪ್ಪಣಿ : ತಯಾರಿಕೆಯ ಆಧಾರದ ಮೇಲೆ ಬೃಹಜ್ಜಾಬಾಲೋಪನಿಷತ್ತು ೩.೩೬-೩೭ರಲ್ಲಿ ಅನುಕಲ್ಪ, ಉಪಕಲ್ಪ, ಉಪೋಪಕಲ್ಪ ಮತ್ತು ಅಕಲ್ಪ ಎಂಬ ನಾಲ್ಕು ವಿಧ ಭಸ್ಮವನ್ನು ಗುರುತಿಸಿದೆ. ಇವುಗಳನ್ನು ಶ್ರೀಸಿದ್ಧಾಂತಶಿಖಾಮಣಿ, ೭. ೧೩-೧೮ರಲ್ಲಿ ಕಲ್ಪ, ಅನುಕಲ್ಪ, ಉಪಕಲ್ಪ ಮತ್ತು ಅಕಲ್ಪಗಳೆಂದು ಗುರುತಿಸಿದೆ, ಹೋಲಿಸಿರಿ. ಶಾಂತಿಕಾದಿ ಭಸ್ಮ ತ್ರೈವಿಧ್ಯವು ಇಲ್ಲಿ ಮಾತ್ರ ಹೇಳಲ್ಪಟ್ಟಿದೆ.

ಕಿಂ ಭಸ್ಮ ಕೇಷಾಂ ಪ್ರಶಸ್ತಮ್?

ಶಿವಾಗ್ನಿಜನಿತಂ ಭಸ್ಮ ಶಸ್ತಂ ಸ್ಯಾಚ್ಛಿವಯೋಗಿನಾಮ್।
ವಿರಜಾನಲಜಂ ಚೈವ ಧಾರ್ಯಂ ಭಸ್ಮ ಮಹಾಮುನೇಃ ॥ ೩೪ ॥
ಔಪಾಸನಸಮುತ್ಪನ್ನಂ ಗೃಹಸ್ಥಾನಾಂ ವಿಶಿಷ್ಯತೇ।
ಸಮಿದಗ್ನಿಸಮುತ್ಪನ್ನಂ ಶಸ್ತಂ ವೈ ಬ್ರಹ್ಮಚಾರಿಣಾಮ್ ॥ ೩೫ ॥
ತ್ರೈವರ್ಣಿಕಾನಾಂ ಸರ್ವೇಷಾಮಗ್ನಿಹೋತ್ರಸಮುದ್ಭವಮ್।
ಶೂದ್ರಾಣಾಂ ಶ್ರೋತ್ರಿಯಾಗಾರಪಚನಾಗ್ನಿಸಮುದ್ಭವಮ್॥
ಅನ್ಯೇಷಾಮಪಿ ಸರ್ವೇಷಾಂ ಧಾರ್ಯಂ ದಾವಾನಲೋದ್ಭವಮ್ ॥ ೩೬ ॥

ಯಾವ ಭಸ್ಮ ಯಾರಿಗೆ ಪ್ರಶಸ್ತ?

ಶಿವಾಗ್ನಿಯಿಂದ ಉತ್ಪನ್ನವಾದ ಭಸ್ಮವು ಶಿವಯೋಗಿಗಳಿಗೆ ಪ್ರಶಸ್ತವಾದುದು. ವಿರಜಾಗ್ನಿಯಿಂದ ತಯಾರಾದ ಭಸ್ಮವನ್ನು ಮಹಾಮುನಿಯು ಧರಿಸಬಹುದು. (೩೪). ಔಪಾಸನಾಗ್ನಿ (ಗೃಹಾಗ್ನಿ)ಯಿಂದ ಉತ್ಪನ್ನವಾದ ಭಸ್ಮವು ಗೃಹಸ್ಥರಿಗೆ ವಿಶಿಷ್ಟವಾದುದು. ಸಮಿತ್ತುಗಳಿಂದ ಉತ್ಪನ್ನವಾದ ಭಸ್ಮವು ಬ್ರಹ್ಮಚಾರಿಗಳಿಗೆ ಪ್ರಶಸ್ತವಾದುದು. (೩೫). ಮೂರು ವರ್ಣದವರಿಗೆ ಎಲ್ಲರಿಗೂ ಅಗ್ನಿಹೋತ್ರದಿಂದ ಉತ್ಪನ್ನವಾದ ಭಸ್ಮವು ಯೋಗ್ಯ. ಶೂದ್ರರಿಗೆ ಶ್ರೋತ್ರಿಯರ (ವೇದಾಧ್ಯಯನ ಮಾಡಿದವರ) ಮನೆಯಲ್ಲಿ ಅಡಿಗೆ ಮಾಡಿದ ಭಸ್ಮವು ಯೋಗ್ಯ. ಬೇರೆಯವರಿಗೆ ಎಲ್ಲರಿಗೆ ದಾವಾನಲದಿಂದ (ಅರಣ್ಯದ ಬೆಂಕಿಯಿಂದ) ಉತ್ಪನ್ನವಾದ ಭಸ್ಮವು ಯೋಗ್ಯ. (೩೬).

ಟಿಪ್ಪಣಿ : ಬೃಹಜ್ಜಾಬಾಲೋಪನಿಷತ್, ೫.೩-೪ರಲ್ಲಿ ಇದೇ ವಿಷಯ ಬಂದಿದೆ. ಹೋಲಿಸಿರಿ.

ಭಸ್ಮಸ್ನಾನೋದ್ಧೂಲನವಿಧಿಃ

ಭಸ್ಮಸ್ನಾನವಿಧಿಂ ವಕ್ಷ್ಯಾಮ್ಯಶೇಷಾಘೌಘನಾಶನಮ್।
ಭಸ್ಮಮುಷ್ಟಿಂ ಸಮಾದಾಯ ಸಂಹಿತಾಮಂತ್ರಮಂತ್ರಿತಮ್॥
ಮಸ್ತಕಾತ್ ಪಾದಪರ್ಯಂತಂ ಭಸ್ಮಸ್ನಾನಂ ಸಮಾಚರೇತ್ ॥ ೩೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈಶೇನ ಪಂಚಧಾ ಭಸ್ಮ ವಿಕಿರೇನ್ಮೂರ್ಧ್ನಿ ಯತ್ನತಃ।
ಮುಖೇ ಚತುಸ್ತತ್ಪುರುಷೇಣಾಘೋರೇಣಾಷ್ಟಧಾ ಹೃದಿ ॥ ೩೮ ॥
ವಾಮೇನ ಗುಹ್ಯದೇಶೇ ತು ತ್ರಿದಶಧಾ ತತಃ ಪುನಃ।
ಅಷ್ಟಧಾ ಸದ್ಯಮಂತ್ರೇಣ ಪಾದಮುದ್ಧೂಲ್ಯ ಯತ್ನತಃ॥
ಸರ್ವಾಂಗೋದ್ಧೂಲನಂ ಕುರ್ಯಾತ್ ಪಂಚಭಿರ್ಬ್ರಹ್ಮಭಿಃ ಪುನಃ ॥ ೩೯ ॥

ಭಸ್ಮಸ್ನಾನ ಮತ್ತು ಉದ್ಧೂಲನ ವಿಧಿ

ಈಗ ನಾನು ಸಮಸ್ತ ಪಾಪ ಸಮೂಹವನ್ನು ನಾಶಗೊಳಿಸುವ ಭಸ್ಮಸ್ನಾನದ ವಿಧಿಯನ್ನು ಹೇಳುತ್ತೇನೆ. ಸಂಹಿತೆಯ ಮಂತ್ರಗಳಿಂದ ಅಭಿಮಂತ್ರಿಸಲ್ಪಟ್ಟ ಭಸ್ಮವನ್ನು ಹಿಡಿಯಷ್ಟು ತೆಗೆದುಕೊಂಡು ಶಿರಸ್ಸಿನಿಂದ ಪಾದದವರೆಗೆ ಭಸ್ಮಸ್ನಾನ ಮಾಡಬೇಕು. (೩೭). 'ಈಶಾನಃ ಸರ್ವವಿದ್ಯಾನಾಂ" ಇತ್ಯಾದಿ ಮಂತ್ರದಿಂದ ಶಿರಸ್ಸಿನ ಮೇಲೆ ಐದು ಸಾರಿ, ಪ್ರಯತ್ನ ಪೂರ್ವಕ, 'ತತ್ಪುರುಷಾಯ ವಿದ್ಮಹೇ' ಇತ್ಯಾದಿ ಮಂತ್ರದಿಂದ ಮುಖದ ಮೇಲೆ ನಾಲ್ಕು ಸಾರಿ, 'ಅಘೋರೇಭ್ಯೋಽಥ ಘೋರೇಭ್ಯೋ' ಇತ್ಯಾದಿ ಮಂತ್ರದಿಂದ ಎದೆಯ ಮೇಲೆ ಎಂಟು ಸಾರಿ, "ವಾಮದೇವಾಯ ನಮೋ" ಇತ್ಯಾದಿ ಮಂತ್ರದಿಂದ ಜನನಾಂಗ ಪ್ರದೇಶದಲ್ಲಿ ಹದಿಮೂರು ಸಾರಿ ಮತ್ತು 'ಸದ್ಯೋಜಾತಂ ಪ್ರಪದ್ಯಾಮಿ' ಇತ್ಯಾದಿ ಮಂತ್ರದಿಂದ ಪಾದಗಳಲ್ಲಿ ಎಂಟು ಸಾರಿ ಭಸ್ಮದ ಧೂಳನ್ನು ಉದುರಿಸಿ ಯತ್ನ ಪೂರ್ವಕ ಉದ್ಧೂಲನ ಮಾಡಿ ಮತ್ತೆ ಪಂಚ ಬ್ರಹ್ಮ ಮಂತ್ರಗಳಿಂದ ಎಲ್ಲಾ ಅಂಗಗಳಿಗೆ ತೊಡೆದುಕೊಳ್ಳಬೇಕು. (೩೮-೩೯).

ಟಿಪ್ಪಣಿ : ಇಲ್ಲಿ ಭಸ್ಮಸ್ನಾನ ಮತ್ತು ಉದ್ಧೂಲನ ಎರಡನ್ನೂ ಒಂದೇ ಕ್ರಿಯೆಯ ರೂಪದಲ್ಲಿ ವರ್ಣಿಸಿರುವುದನ್ನು ಕಾಣುತ್ತೇವೆ. ಭಸ್ಮಸ್ನಾನದಲ್ಲಿ ಎಡಗೈಯಲ್ಲಿ ಭಸ್ಮದ ಧೂಳನ್ನು ಹಿಡಿದು, ತಲೆಯಿಂದ ಪಾದಗಳವರೆಗೆ ಮಂತ್ರೋಚ್ಚಾರ ಮಾಡುತ್ತಾ ಬಲಗೈ ಚಿಟಿಕೆ ಮೂಲಕ ಉದುರಿಸಿಕೊಳ್ಳುವ ಕ್ರಿಯೆ ನಡೆಯುತ್ತದೆ. ಉದ್ಧೂಲನದಲ್ಲಿ ಮೈಮೇಲೆ ವಿವಿಧ ಅಂಗಗಳ ಮೇಲೆ ಬಿದ್ದ ಭಸ್ಮದ ಧೂಳನ್ನು ಅಲ್ಲಲ್ಲಿಯೇ ಸವರಿ ಹಚ್ಚಿಕೊಳ್ಳುವ ಕ್ರಿಯೆಯು ನಡೆಯುತ್ತದೆ. ಹೀಗೆ ಇವೆರಡೂ ಒಂದು ಕ್ರಿಯೆಯ ಎರಡು ಭಾಗಗಳು. ಬೃಹಜ್ಜಾಬಾಲೋಪನಿಷತ್ತಿನ ೩. ೩೨-೩೪ರಲ್ಲಿ ಭಸ್ಮೋದ್ಧೂಲನ ವಿಧಿಯನ್ನೂ, ಮುಂದೆ ೪.೩-೭ರಲ್ಲಿ ಭಸ್ಮಸ್ನಾನ ವಿಧಿಯನ್ನೂ ವರ್ಣಿಸಲಾಗಿದೆ. ಸ್ವಲ್ಪ ವ್ಯತ್ಯಾಸದೊಂದಿಗೆ ಭಸ್ಮೋದ್ಧೂಲನಕ್ಕೆ ಹೇಳಿದ ಮಂತ್ರಗಳು ಮತ್ತು ಅಂಗಗಳು ಭಸ್ಮ ಸ್ನಾನದಲ್ಲೂ ಹೇಳಲ್ಪಟ್ಟಿವೆ. ಎರಡರಲ್ಲೂ ಉದ್ಧೂಲನವೆಂಬುದು ಬರುತ್ತದೆ. ಪ್ರಸ್ತುತ ಆಗಮದಲ್ಲಿ ಬಂದಿರುವ ಭಸ್ಮಸ್ನಾನೋದ್ಧೂಲನ ವಿಧಿಯಲ್ಲಿ ಬಂದಿರುವ ವಿವರಗಳನ್ನು ಬೃಹಜ್ಜಾಬಾಲೋಪನಿಷತ್ತಿನಲ್ಲಿ ಬಂದಿರುವ ವಿವರಗಳೊಂದಿಗೆ ಹೋಲಿಸಿರಿ. ಶ್ರೀಸಿದ್ಧಾಂತಶಿಖಾಮಣಿಯು ಬೃಹಜ್ಜಾಬಾಲೋಪನಿಷತ್ತನ್ನು ಅನುಸರಿಸಿ ಭಸ್ಮಸ್ನಾನ ಮತ್ತು ಭಸ್ಮೋದ್ಧೂಲನಗಳನ್ನು ವರ್ಣಿಸಿದೆ. (ನೋಡಿರಿ-೯.೨೦-೨೨, ೨೯).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತ್ರಿವಿಧಂ ಭಸ್ಮಧಾರಣಮ್

ಉದ್ಧೂಲನಂ ತತಶ್ಚೈವಮವಗುಂಠನಮೇವ ಚ।
ತ್ರಿಪುಂಡ್ರಂ ಚೇತಿ ವಿಖ್ಯಾತಂ ತ್ರಿವಿಧಂ ಭಸ್ಮಧಾರಣಮ್ ॥ ೪೦ ॥

ಪಂಚಭಿರ್ಬ್ರಹ್ಮಭಿರ್ವಾಽಪಿ ಮೂಲಮಂತ್ರೇಣ ವಾ ಪುನಃ।
ಸಂಮಂತ್ರ್ಯ ನಿರ್ಜಲಂ ಭಸ್ಮ ತೇನ ಲಿಂಪೇತ್ ಸುಸಂಯತಃ॥
ಸರ್ವಾಂಗಮಾಪಾದಶಿಖಮುದ್ಧೂಲನಮಿದಂ ಸ್ಮೃತಮ್ ॥ ೪೧ ॥

ಭಸ್ಮನಾ ಮಂತ್ರಿತೇನೈವ ಸಜಲೇನಾನುಲೇಪನಮ್।
ಅವಗುಂಠನಮಾಖ್ಯಾತಂ ತ್ರಿಪುಂಡ್ರಮಥ ಕಥ್ಯತೇ ॥ ೪೨ ॥

ಭಸ್ಮಧಾರಣವು ಮೂರು ವಿಧ

ಉದ್ಧೂಲನ, ಅವಗುಂಠನ ಮತ್ತು ತ್ರಿಪುಂಡ್ರವೆಂದು ಭಸ್ಮಧಾರಣವು ಮೂರು ವಿಧವೆಂದು ಪ್ರಸಿದ್ಧವಾಗಿದೆ. (೪೦). ಪಂಚ ಬ್ರಹ್ಮಮಂತ್ರಗಳಿಂದ ಅಥವಾ ಮೂಲ ಪಂಚಾಕ್ಷರ ಮಂತ್ರದಿಂದ ಅಭಿಮಂತ್ರಿಸಿ ನೀರನ್ನು ಬೆರೆಸದ ಭಸ್ಮವನ್ನು ಪಾದಗಳಿಂದ ಹಿಡಿದು ಶಿರಸ್ಸಿನವರೆಗೆ ಸರ್ವಾಂಗಗಳಿಗೆ ಏಕಾಗ್ರತೆಯಿಂದ ಲೇಪಿಸಿಕೊಳ್ಳುವುದು ಉದ್ಧೂಲನವೆಂದು ತಿಳಿಯಲ್ಪಡುತ್ತದೆ. (೪೧). ಅಭಿಮಂತ್ರಿತವಾದ ನೀರನ್ನು ಬೆರೆಸಿದ ಭಸ್ಮದಿಂದ ಅನುಲೇಪನ ಮಾಡಿಕೊಳ್ಳುವುದು ಅವಗುಂಠನವೆಂದು ಕರೆಯಲ್ಪಡುತ್ತದೆ. ಮುಂದೆ ತ್ರಿಪುಂಡ್ರದ ಬಗ್ಗೆ ಹೇಳಲಾಗುತ್ತದೆ. (೪೨).

ಟಿಪ್ಪಣಿ : ಒಣ ಭಸ್ಮವನ್ನು ದೇಹಕ್ಕೆ ಲೇಪಿಸಿಕೊಳ್ಳುವುದು ಭಸ್ಮೋದ್ಧೂಲನ, ನೀರಿನಿಂದ ಕೂಡಿದ ಭಸ್ಮವನ್ನು ದೇಹಕ್ಕೆ ಲೇಪಿಸಿಕೊಳ್ಳುವುದು ಭಸ್ಮಾವಗುಂಠನ. ಬೇರೆ ಆಗಮಗಳಲ್ಲಾಗಲಿ, ಶ್ರೀಸಿದ್ಧಾಂತಶಿಖಾಮಣಿಯಲ್ಲಾಗಲಿ ಅವಗುಂಠನವೆಂಬುದರ ಉಲ್ಲೇಖವಿಲ್ಲ. ಇದು ಭಸ್ಮಸ್ನಾನದಲ್ಲಿ ಇನ್ನೊಂದು ಪ್ರಕಾರವಾಗಿ ಸೇರಿಹೋಗಿದೆ. ಭಸ್ಮಸ್ನಾನ, ಭಸ್ಮೋದ್ಧೂಲನ ಮತ್ತು ಭಸ್ಮತ್ರಿಪುಂಡ್ರವೆಂದು ಭಸ್ಮಧಾರಣೆಯ ಮೂರು ಪ್ರಕಾರಗಳು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಉಳಿದುಕೊಂಡಿವೆ. ನಿರ್ಜಲ ಭಸ್ಮದಿಂದ ಲೇಪನವು ಉದ್ಧೂಲನ, ಸಜಲಭಸ್ಮದಿಂದ ತೊಡೆದುಕೊಳ್ಳುವುದು ಭಸ್ಮಸ್ನಾನ, ಮಧ್ಯದ ಮೂರು ಬೆರಳುಗಳಿಂದ ಹಚ್ಚಿಕೊಳ್ಳುವುದು ಭಸ್ಮತ್ರಿಪುಂಡ್ರವೆಂಬ ಪದ್ಧತಿಗಳು ರೂಢಿಯಲ್ಲಿ ಬಂದಿವೆ.

ತ್ರಿಪುಂಡ್ರಧಾರಣಸ್ಯ ದ್ವಾತ್ರಿಂಶತ್ ಸ್ಥಾನಾನಿ

ತ್ರಿಪುಂಡ್ರಂ ಕಾರಯೇದ್ಧೀಮಾನ್ ಬ್ರಹ್ಮವಿಷ್ಣುಶಿವಾತ್ಮಕಮ್।
ಮಧ್ಯಾಂಗುಲೀಭಿರಾದಾಯ ತಿಸೃಭಿರ್ಮೂಲಮಂತ್ರಿತಮ್ ॥ ೪೩ ॥

ದ್ವಾತ್ರಿಂಶತ್‌ಸ್ಥಾನಕೇ ವಾಥ ಷೋಡಶಸ್ಥಾನಕೇಽಥವಾ।
ಅಷ್ಟಸ್ಥಾನೇ ತಥಾ ಚೈವಂ ಪಂಚಸ್ಥಾನೇ ಚ ಯೋಜಯೇತ್ ॥ ೪೪ ॥

ಉತ್ತಮಾಂಗೇ ಲಲಾಟೇ ಚ ಕರ್ಣಯೋರ್ನೇತ್ರಯೋರ್ದ್ವಯೋಃ।
ನಾಸಾವಕ್ತ್ರಗಲೇಷ್ವೇವಮಂಸದ್ವಯಮ್ ಅನಂತರಮ್ ॥ ೪೫ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೂರ್ಪರೇ ಮಣಿಬಂಧೇ ಚ ಹೃದಯೇ ಪಾರ್ಶ್ವಯೋರ್ದ್ವಯೋಃ।
ನಾಭೌ ಗುಹ್ಯದ್ವಯೇ ಚೈವ ಊರ್ವೋಃ ಸ್ಫಿಗ್ಬಿಂಬಜಾನುಷು॥
ಜಂಘಾದ್ವಯೇ ಪಾದಯೋಶ್ಚ ದ್ವಾತ್ರಿಂಶತ್ಸ್ಥಾನಮುತ್ತಮಮ್ ॥ ೪೬ ॥
ಅಷ್ಟಮೂರ್ತ್ಯಷ್ಟವಿದ್ಯೇಶದಿಕ್ಪಾಲವಸವೋಧಿಪಾಃ।
ಏತೇಷಾಂ ನಾಮಮಾತ್ರೇಣ ತ್ರಿಪುಂಡ್ರಂ ಧಾರಯೇದ್ಬುಧಃ ॥ ೪೭ ॥

ತ್ರಿಪುಂಡ್ರಧಾರಣೆಯ ಮೂವತ್ತೆರಡು ಸ್ಥಾನಗಳು

ಜ್ಞಾನಿಯು, ಬ್ರಹ್ಮ, ವಿಷ್ಣು ಮತ್ತು ಶಿವ ಸ್ವರೂಪದ ತ್ರಿಪುಂಡ್ರವನ್ನು ಧರಿಸಿಕೊಳ್ಳಬೇಕು. ಮಧ್ಯದ ಮೂರು ಬೆರಳುಗಳಿಂದ ಮೂಲಮಂತ್ರವನ್ನು ಜಪಿಸುತ್ತಾ ಮೂವತ್ತೆರಡು ಸ್ಥಾನಗಳಲ್ಲಿ, ಹದಿನಾರು ಸ್ಥಾನಗಳಲ್ಲಿ, ಎಂಟು ಸ್ಥಾನಗಳಲ್ಲಿ ಅಥವಾ ಐದು ಸ್ಥಾನಗಳಲ್ಲಿ ಧರಿಸಿಕೊಳ್ಳಬೇಕು. (೪೩-೪೪). ಉತ್ತಮಾಂಗದಲ್ಲಿ (ಶಿರಸ್ಸಿನಲ್ಲಿ), ಹಣೆಯಲ್ಲಿ, ಎರಡು ಕಿವಿಗಳಲ್ಲಿ, ಎರಡು ಕಣ್ಣುಗಳಲ್ಲಿ, ಮೂಗಿನ ಹೊಳ್ಳೆಗಳು, ಬಾಯಿ, ಕತ್ತು, ಎರಡು ಭುಜಗಳು, ಮೊಣಕೈಗಳಲ್ಲಿ, ಮುಂಗೈಗಳಲ್ಲಿ, ಎದೆಯಲ್ಲಿ, ಎರಡು ಪಕ್ಕೆಗಳಲ್ಲಿ, ಹೊಕ್ಕಳಲ್ಲಿ, ಎರಡು ಗುಹ್ಯಗಳಲ್ಲಿ (ಜನನೇಂದ್ರಿಯ ಮತ್ತು ಗುದಸ್ಥಾನ), ತೊಡೆಗಳಲ್ಲಿ, ಪಿರ್‍ರೆಗಳಲ್ಲಿ, ಮೊಣಕಾಲುಗಳಲ್ಲಿ, ಎರಡು ಮೀನಖಂಡಗಳಲ್ಲಿ, ಎರಡು ಪಾದಗಳಲ್ಲಿ, ಹೀಗೆ ಮೂವತ್ತೆರಡು ಸ್ಥಾನಗಳು ಉತ್ತಮ. ಶಿವನ ಎಂಟು ಮೂರ್ತಿಗಳು, ಎಂಟು ವಿದ್ಯೇಶ್ವರರು, ಎಂಟು ದಿಕ್ಕುಗಳು ಮತ್ತು ಎಂಟು ವಸುಗಳು ಈ ಮೂವತ್ತೆರಡು ದೇವತೆಗಳ ಹೆಸರುಗಳನ್ನು ಉಚ್ಚರಿಸುತ್ತಾ ಜ್ಞಾನಿಯು ತ್ರಿಪುಂಡ್ರವನ್ನು (೩೨ ಸ್ಥಾನಗಳಲ್ಲಿ) ಧರಿಸಿಕೊಳ್ಳಬೇಕು. (೪೫-೪೭).

ಟಿಪ್ಪಣಿ : ಅಷ್ಟಮೂರ್ತಿ-ಪಂಚಭೂತ, ಚಂದ್ರ, ಸೂರ್ಯ ಮತ್ತು ಯಜಮಾನ; ಮಹಿಮ್ನಸ್ತೋತ್ರದ ಪ್ರಕಾರ "ಭವ ಃ ಶರ್ವೋ ರುದ್ರಃ ಪಶುಪತಿ ರಥೋಗ್ರಃ ಸಹ ಮಹಾಂಸ್ತಥಾ ಭೀಮೇಶಾನಾವಿತಿ ಯದಭಿಧಾನಾಷ್ಟಕಮಿದಮ್।" (ಶ್ಲೋ.೨೮). ಎಂಟು ವಿದ್ಯೇಶ್ವರರು ಪ್ರಥಮ ಪಟಲ ೧-೩ರ ಟಿಪ್ಪಣಿ ನೋಡಿರಿ. ಎಂಟು ದಿಕ್ಪಾಲರು ಇಂದ್ರ, ಅಗ್ನಿ, ಯಮ, ನಿರ್ಋತ, ವರುಣ, ಮರುತ್, ಕುಬೇರ, ಈಶಾನ. ಎಂಟು ವಸುಗಳು-ಪ್ರಥಮ ಪಟಲ ೩೮-೪೩ ಟಿಪ್ಪಣಿ ನೋಡಿರಿ.

ಷೋಡಶಸ್ಥಾನಾನಿ

ವಿದಧ್ಯಾತ್ ಷೋಡಶಸ್ಥಾನೇ ತ್ರಿಪುಂಡ್ರಂ ಚ ಸಮಾಹಿತಃ।
ಶೀರ್ಷಕೇ ಚ ಲಲಾಟೇ ಚ ಕರ್ಣೇ ಚಾಂಸದ್ವಯೇಽಪಿ ಚ ॥ ೪೮ ॥
ಕೂರ್ಪರೇ ಮಣಿಬಂದೇ ಚ ಹೃದಯೇ ನಾಭಿಪಾರ್ಶ್ವಯೋಃ।
ಪೃಷ್ಠೇ ಚೈವಂ ಪ್ರತಿಷ್ಠಾಯಾಂ ಜಪೇತ್ ತತ್ರಾಧಿದೈವತಮ್ ॥ ೪೯ ॥
ಶಿವಂ ಶಕ್ತಿಂ ಚ ಸಾದಾಖ್ಯಮೀಶಂ ರುದ್ರಾಖ್ಯಮೇವ ಚ।
ನಾಸತ್ಯೋ ದಸ್ರಕಶ್ಚೈವಮಶ್ವಿನೌ ದ್ವೌ ಸಮೀರಿತೌ॥
ವಾಮಾದಿನವಶಕ್ತೀಶ್ಚ ಏತಾಃ ಷೋಡಶ ದೇವತಾಃ ॥ ೫೦ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಥವಾ ಮೂರ್ಧ್ನಿ ವಕ್ತ್ರೇ ಚ ಕರ್ಣಯೋರ್ಘ್ರಾಣಕೇ ತಥಾ।
ಬಾಹುದ್ವಯೇ ಚ ಹೃದಯೇ ನಾಭ್ಯಾಮೂರ್ವೋರ್ಯುಗೇ ತಥಾ।
ಜಾನುದ್ವಯೇ ಚ ಪಾದಯೋಃ ಪೃಷ್ಠಭಾಗೇ ಚ ಷೋಡಶ ॥ ೫೧ ॥
ಶಿವಃ ಸ್ಕಂದಶ್ಚ ಚಂದ್ರಾರ್ಕೌ ವಿಘ್ನೇಶೋ ವಿಷ್ಣುರೇವ ಚ।
ಶ್ರೀಶ್ಚೈವ ಹೃದಯೇ ತದ್ವತ್ ತಥಾ ನಾಭೌ ಪ್ರಜಾಪತಿಃ ॥ ೫೨ ॥
ನಾಗಾಶ್ಚ ನಾಗಕನ್ಯಾಶ್ಚ ಋಷಯೋ ಋಷಿಕನ್ಯಕಾಃ।
ಪಾದಯೋಸ್ತು ಸಮುದ್ರಾಶ್ಚ ತೀರ್ಥಂ ಪೃಷ್ಠೇಽಪಿ ಚ ಸ್ಮೃತಾಃ ॥ ೫೩ ॥

ಹದಿನಾರು ಸ್ಥಾನಗಳು

ಏಕಾಗ್ರಚಿತ್ತನಾಗಿ ಹದಿನಾರು ಸ್ಥಾನಗಳಲ್ಲಿ ತ್ರಿಪುಂಡ್ರವನ್ನು ಧರಿಸಿಕೊಳ್ಳಬಹುದು. ಶಿರಸ್ಸಿನಲ್ಲಿ, ಹಣೆಯಲ್ಲಿ, ಕಿವಿಗಳಲ್ಲಿ, ಭುಜಗಳಲ್ಲಿ, ಮೊಣಕೈಗಳಲ್ಲಿ, ಮುಂಗೈಗಳಲ್ಲಿ, ಎದೆಯಲ್ಲಿ, ಹೊಕ್ಕಳ, ಪಕ್ಕೆಗಳು, ಬೆನ್ನಿನಲ್ಲಿ, ನಿತಂಬದಲ್ಲಿ, ಹೀಗೆ ಹದಿನಾರರಲ್ಲಿ. ಅಧಿದೇವತೆಗಳ ಹೆಸರುಗಳನ್ನು ಜಪಿಸಬೇಕು. (೪೮-೪೯). ಶಿವ, ಶಕ್ತಿ, ಸದಾಶಿವ, ಈಶ್ವರ, ರುದ್ರ, ನಾಸತ್ಯ ಮತ್ತು ದಸ್ರ ಎಂಬ ಹೆಸರಿನ ಅಶ್ವಿನೀ ದೇವತೆಗಳು ಮತ್ತು ವಾಮಾ ಮುಂತಾದ ಒಂಬತ್ತು ಶಕ್ತಿಯರು, ಇವರು ಹದಿನಾರು ದೇವತೆಗಳು. (೫೦). ಅಥವಾ ಶಿರಸ್ಸಿನಲ್ಲಿ, ಮುಖದಲ್ಲಿ (ಹಣೆಯಲ್ಲಿ), ಎರಡು ಕಿವಿಗಳಲ್ಲಿ, ಮೂಗಿನಲ್ಲಿ, ಎರಡು ತೋಳುಗಳಲ್ಲಿ, ಎದೆಯಲ್ಲಿ, ಹೊಕ್ಕಳಲ್ಲಿ, ಎರಡು ತೊಡೆಗಳಲ್ಲಿ, ಮೊಣಕಾಲುಗಳಲ್ಲಿ, ಪಾದಗಳಲ್ಲಿ, ಬೆನ್ನಿನಲ್ಲಿ, ಹೀಗೆಂದು ಹದಿನಾರು ಸ್ಥಾನಗಳು. (೫೧). ಶಿವ, ಸ್ಕಂದ, ಚಂದ್ರ, ಸೂರ್ಯ, ವಿಘ್ನೇಶ ಮತ್ತು ವಿಷ್ಣು ಇವರಲ್ಲದೆ ಶ್ರೀ ಹೃದಯ ಸ್ಥಾನದಲ್ಲಿ; ಹೊಕ್ಕಳದ ದೇವತೆ ಪ್ರಜಾಪತಿ; ನಾಗಗಣ, ನಾಗಕನ್ಯೆಯರು, ಋಷಿ ಸಮೂಹ, ಋಷಿ ಕನ್ಯೆಯರು, ಎರಡು ತೊಡೆಗಳು ಮತ್ತು ಎರಡು ಮೊಣಕಾಲುಗಳ ದೇವತೆಗಳು; ಸಮುದ್ರವು ಚರಣಗಳ ಮತ್ತು ತೀರ್ಥ ಬೆನ್ನಿನ ದೇವತೆ ಎಂದು ಪರಿಗಣಿಸಲಾಗಿದೆ. (೫೨-೫೩).

ಟಿಪ್ಪಣಿ : ವಾಮಾದಿ ನವ ಶಕ್ತಿಯರು-ವಾಮಾ, ಜ್ಯೇಷ್ಠಾ, ರೌದ್ರೀ, ಕಾಲೀ, ಕಲವಿಕರಣೀ, ಬಲವಿಕರಣೀ, ಬಲಪ್ರಮಥನೀ, ಸರ್ವಭೂತದಮನೀ ಮತ್ತು ಮನೋನ್ಮನೀ.

ಅಷ್ಟಸ್ಥಾನಾನಿ ಪಂಚಸ್ಥಾನಾನಿ ಚ

ಏವಂ ವಾ ಷೋಡಶಸ್ಥಾನಮಷ್ಟಸ್ಥಾನಮಥೋಚ್ಯತೇ।
ಶಿರಃಸ್ಥಾನಂ ಲಲಾಟಂ ಚ ಕರ್ಣದ್ವಯಮನಂತರಮ್ ॥ ೫೪ ॥
ಅಂಸಯುಗ್ಮಂ ಚ ಹೃದಯಂ ನಾಭಿರಿತ್ಯಷ್ಟಮಂ ಭವೇತ್।
ಬ್ರಹ್ಮಾ ಚ ಋಷಯಃ ಸಪ್ತ ದೇವತಾಶ್ಚ ಪ್ರಕೀರ್ತಿತಾಃ ॥ ೫೫ ॥
ಅಥವಾ ನಿಟಿಲಂ ಬಾಹೂ ಹೃದಯಂ ನಾಭಿರೇವ ಚ।
ಭಸ್ಮಸ್ಥಾನಾನಿ ಕಥ್ಯಂತೇ ಪಂಚಬ್ರಹ್ಮಾಣಿ ದೇವತಾಃ ॥ ೫೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಥಾಸಂಭವಮಾಕುರ್ಯಾದ್ ದೇಶಕಾಲಾದ್ಯಪೇಕ್ಷಯಾ।
ಉದ್ಧೂಳನೇಽಪ್ಯಶಕ್ತಶ್ಚೇತ್ ತ್ರಿಪುಂಡ್ರಾದೀನಿ ಕಾರಯೇತ್ ॥ ೫೭ ॥

ಎಂಟು ಸ್ಥಾನಗಳು ಮತ್ತು ಐದು ಸ್ಥಾನಗಳು

ಹೀಗೆ ಹದಿನಾರು ಸ್ಥಾನಗಳು. ಎಂಟು ಸ್ಥಾನಗಳು ಹೇಳಲ್ಪಡುತ್ತವೆ. ಶಿರಸ್ಸು, ಹಣೆ, ಎರಡು ಕಿವಿಗಳು, ಅನಂತರ ಎರಡು ಭುಜಗಳು, ಎದೆ, ಹೊಕ್ಕಳು, ಇವು ಎಂಟು ಸ್ಥಾನಗಳು. ಬ್ರಹ್ಮ ಮತ್ತು ಏಳು ಋಷಿಗಳು, ಹೀಗೆ ಎಂಟು ದೇವತೆಗಳು. (೫೪-೫೫). ಅಥವಾ ಹಣೆ, ಎರಡು ಬಾಹುಗಳು, ಹೃದಯ ಮತ್ತು ಹೊಕ್ಕಳು, ಹೀಗೆ ಐದು ಭಸ್ಮಸ್ಥಾನಗಳು ಹೇಳಲ್ಪಟ್ಟಿವೆ, ಪಂಚ ಬ್ರಹ್ಮರು ದೇವತೆಗಳು. (೫೬). ದೇಶ, ಕಾಲಗಳ ಅಪೇಕ್ಷೆಗೆ ಅನುಗುಣವಾಗಿ ಯಥಾಶಕ್ತಿ ಸ್ಥಾನಗಳಲ್ಲಿ ಧರಿಸಿಕೊಳ್ಳಬೇಕು. ಉದ್ಧೂಳನ ಮಾಡಿಕೊಳ್ಳಲು ಅಶಕ್ತನಾಗಿದ್ದರೆ ತ್ರಿಪುಂಡ್ರವನ್ನೇ ಧರಿಸಬೇಕು. (೫೭).

ಟಿಪ್ಪಣಿ : ಹೀಗೆ ಮೂವತ್ತೆರಡು ಸ್ಥಾನಗಳು, ಹದಿನಾರು ಸ್ಥಾನಗಳು, ಎಂಟು ಸ್ಥಾನಗಳು ಅಥವಾ ಐದು ಸ್ಥಾನಗಳಲ್ಲಿ ಯಥಾಶಕ್ತಿ ಭಸ್ಮತ್ರಿಪುಂಡ್ರವನ್ನು ಧರಿಸಬೇಕೆಂದು ಪ್ರಸ್ತುತ ಆಗಮವು ವಿಧಿಸುತ್ತದೆ. ಬೃಹಜ್ಜಾಬಾಲೋಪನಿಷತ್ತಿನ ೪.೧೪-೩೧ರಲ್ಲಿ ಹೇಳಿದ್ದರ ತದ್ವತ್ ವಿವರಗಳು ಬಹುಶಃ ಶಬ್ದಶಃ ವಿವರಗಳು ಇಲ್ಲಿ ಬಂದಿವೆ. ಉದಾಹರಣೆಗೆ "ತ್ರಿಪುಂಡ್ರಂ ಕಾರಯೇತ್ ಪಶ್ಚಾದ್ ಬ್ರಹ್ಮವಿಷ್ಣು ಶಿವಾತ್ಮಕಮ್। ಮಧ್ಯಾಂಗುಲೀಭಿರಾದಾಯ ತಿಸೃಭಿರ್ಮೂಲಮಂತ್ರತಃ॥... ದ್ವಾತ್ರಿಂಶತ್‌ಸ್ಥಾನಕೇ ಚಾರ್ಧಂ ಷೋಡಶ ಸ್ಥಾನಕೇಽಪಿ ವಾ। ಅಷ್ಟಸ್ಥಾನೇ ತಥಾ ಚೈವ ಪಂಚಸ್ಥಾನೇಽಪಿ ಯೋಜಯೇತ್॥" (೪.೧೪,೧೬). ಮೂವತ್ತೆರಡು, ಹದಿನಾರು, ಎಂಟು ಮತ್ತು ಐದು ಸ್ಥಾನಗಳ ಹೆಸರುಗಳು ಮತ್ತು ದೇವತೆಗಳು ಸಮಾನ ಸಪ್ತರ್ಷಿಗಳು. ವಸಿಷ್ಠ, ಕಶ್ಯಪ, ಅತ್ರಿ, ಜಮದಗ್ನಿ, ಗೌತಮ, ವಿಶ್ವಾಮಿತ್ರ ಮತ್ತು ಭರದ್ವಾಜ. "ಉದ್ಧೂಳನೇಽಪ್ಯಶಕ್ತಶ್ಚೇತ್ ತ್ರಿಪುಂಡ್ರಾದೀನಿ ಕಾರಯೇತ್।" ಬೃಹಜ್ಜಾಬಾಲೋಪನಿಷತ್, ೪.೩೨ಕ್ಕೆ ಸಂವಾದಿ. ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಹದಿನೈದು ಸ್ಥಾನಗಳಲ್ಲಿ ತ್ರಿಪುಂಡ್ರಧಾರಣೆ ಮಾಡಿಕೊಳ್ಳಬೇಕೆಂದು ಹೇಳಿದೆ "ತ್ರಿಪುಂಡ್ರಂ ಧಾರಯೇನ್ನಿತ್ಯಂ ಭಸ್ಮನಾ ಸಲಿಲೇನ ಚ। ಸ್ಥಾನೇಷು ಪಂಚದಶಸು ಶರೀರೇ ಸಾಧಕೋತ್ತಮಃ॥" (೭.೩೧). ಅಲ್ಲಿ ಹೇಳಿರುವ ಸ್ಥಾನಗಳು-ಶಿರಸ್ಸು, ಹಣೆ, ಎರಡು ಕಿವಿಗಳು, ಕತ್ತು, ಎರಡು ಭುಜಗಳು, ಹೃದಯ, ಹೊಕ್ಕಳು, ಬೆನ್ನು, ಎರಡು ತೋಳುಗಳು, ಹೆಗಲು, ಎರಡು ಮುಂಗೈಗಳು. ಚನ್ನಬಸವಣ್ಣನವರು ಒಂದು ವಚನದಲ್ಲಿ ೮, ೧೬, ೩೨, ೩೬, ೪೪, ೪೮ ಸ್ಥಾನಗಳಲ್ಲಿ ತ್ರಿಪುಂಡ್ರ ಧಾರಣೆಯನ್ನು ಬೇರೆ ಬೇರೆ ಭಕ್ತರಿಗೆ ಹೇಳಿದ್ದಾರೆ. (ಚನ್ನಬಸವಣ್ಣನವರ ವಚನಗಳು, ಕರ್ನಾಟಕ, ವಿಶ್ವವಿದ್ಯಾಲಯ, ವ.ಸಂ. ೧೫೪).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತ್ರಿಪುಂಡ್ರಧಾರಣವಿಧಿಃ

ಊರ್ಧ್ವಪುಂಡ್ರಂ ಭವೇತ್ ಸಾಮ ಮಧ್ಯಪುಂಡ್ರಂಯಜೂಂಷಿ ಚ।
ಅಧಃಪುಂಡ್ರಮೃಚಃ ಸಾಕ್ಷಾತ್ತಸ್ಮಾತ್ ಪುಂಡ್ರಂ ತ್ರಿಯಾಯುಷಮ್ ॥ ೫೮ ॥
ಅಗ್ನಿರಿತ್ಯಾದಿಭಿರ್ಮಂತ್ರೈರ್ಜಾಬಾಲೋಪನಿಷದ್ಗತೈಃ।
ಸರ್ವೈರುದ್ಧೂಲನಂ ಕಾರ್ಯಂ ಭಸ್ಮನಾ ಸಜಲೇನ ಚ ॥ ೫೯ ॥
ತ್ರಿಯಾಯುಷೇಣ ಮಂತ್ರೇಣ ಬುಧೈಸ್ತಿರ್ಯಕ್ ತ್ರಿಪುಂಡ್ರಕಮ್।
ಧಾರ್ಯಂ ಸದಾ ದ್ವಿಜಶ್ರೇಷ್ಠೈರ್ಧಾರ್ಮಿಕೈರ್ವೇದಪಾರಗೈಃ ॥ ೬೦ ॥
ಮೇಧಾವೀತ್ಯಾದಿನಾ ವಾಽಪಿ ಬ್ರಹ್ಮಚಾರೀ ದಿನೇ ದಿನೇ।
ಭಸ್ಮನಾ ಸಜಲೇನೈವ ಧಾರಯೇಚ್ಚ ತ್ರಿಪುಂಡ್ರಕಮ್ ॥ ೬೧ ॥
ತ್ರಿಯಂಬಕೇನ ಮಂತ್ರೇಣ ಪ್ರಣವೇನ ಶಿವೇನ ಚ।
ಗೃಹಸ್ಥಶ್ಚ ವನಸ್ಥಶ್ಚ ಧಾರಯೇಚ್ಚ ತ್ರಿಪುಂಡಕಮ್ ॥ ೬೨ ॥
ಓಂಕಾರೇಣ ತ್ರಿರುಕ್ತೇನ ಸಹಂಸೇನ ತ್ರಿಪುಂಡ್ರಕಮ್।
ಧಾರಯೇದ್ ಭಿಕ್ಷುಕೋ ನಿತ್ಯಮಿತ್ಯೇಚ್ಛಿವಶಾಸನಮ್ ॥ ೬೩ ॥

ತ್ರಿಪುಂಡ್ರವನ್ನು ಧರಿಸುವ ವಿಧಾನ

ಮೇಲಿನ ಪುಂಡ್ರವು (ಗೆರೆಯು) ಸಾಕ್ಷಾತ್ ಸಾಮವೇದ, ಮಧ್ಯಪುಂಡ್ರವು ಯಜುರ್ವೇದ, ಕೆಳಗಿನ ಪುಂಡ್ರವು ಋಗ್ವೇದ. ಆದ್ದರಿಂದ 'ತ್ರಿಯಾಯುಷಂ' ಮಂತ್ರದಿಂದ 'ಅಗ್ನಿರಿತಿ ಭಸ್ಮ' ಇತ್ಯಾದಿ ಭಸ್ಮಜಾಬಾಲೋಪನಿದ್ ಮಂತ್ರಗಳಿಂದ ಸಜಲ ಭಸ್ಮದ ಉದ್ಧೂಲನವನ್ನು ಮಾಡಿಕೊಳ್ಳಬೇಕು. (೫೮-೫೯). 'ತಿಯಾಯುಷಂ' ಮಂತ್ರದಿಂದ ಜ್ಞಾನಿಗಳು ದ್ವಿಜಶ್ರೇಷ್ಠರು, ಧಾರ್ಮಿಕರು, ವೇದ ಪಾರಾಂಗತರು ಧರಿಸಬೇಕು. (೬೦). 'ಮೇಧಾವೀ' ಇತ್ಯಾದಿ ಮಂತ್ರದಿಂದ ಬ್ರಹ್ಮಚಾರಿಯು ದಿನ ದಿನವೂ ಸಜಲ ಭಸ್ಮದಿಂದ ತ್ರಿಪುಂಡ್ರವನ್ನು ಧರಿಸಬೇಕು. (೬೧). 'ತ್ರಿಯಂಬಕ' ಮಂತ್ರದಿಂದ 'ಪ್ರಣವ' ಮಂತ್ರದಿಂದ ಅಥವಾ ಮೂಲಮಂತ್ರದಿಂದ ಗೃಹಸ್ಥನು ಮತ್ತು ವಾನಪ್ರಸ್ಥನು ತ್ರಿಪುಂಡ್ರವನ್ನು ಧರಿಸಬೇಕು. (೬೨). 'ಹಂಸ' ಮಂತ್ರದೊಂದಿಗೆ ಮೂರು ಸಾರಿ ಓಂಕಾರವನ್ನು (ಓಂ ಹಂ ಸಃ) ಉಚ್ಚರಿಸುತ್ತಾ ಭಿಕ್ಷುಕನು ಸದಾಕಾಲ ತ್ರಿಪುಂಡ್ರವನ್ನು ಧರಿಸಬೇಕು. ಇದು ಶಿವನ ಶಾಸನ. (೬೩).

ಟಿಪ್ಪಣಿ : ಮೇಲಿನ, ಮಧ್ಯದ ಮತ್ತು ಕೆಳಗಿನ ಪುಂಡ್ರಗಳು (ಗೆರೆಗಳು) ಸಾಮ, ಯಜಸ್ಸು ಮತ್ತು ಋಕ್ಕುಗಳನ್ನು ಪ್ರತಿನಿಧಿಸುತ್ತವೆ. ಜಾಬಾಲ್ಯುಪನಿಷತ್, ೨೧ರಲ್ಲಿ ಮೇಲಿನ, ಮಧ್ಯದ ಮತ್ತು ತೆಳಗಿನ ರೇಖೆಗಳಿಗೆ ಕ್ರಮವಾಗಿ ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳ ಪ್ರತಿನಿಧಿತ್ವವನ್ನು ಹೇಳಿದೆ. ತ್ರ್ಯಾಯುಷ (ತ್ರಿಯಾಯುಷ) ಮಂತ್ರ "ತ್ರ್ಯಾಯುಷಂ ಜಮದಗ್ನೇಃ ಕಶ್ಯಪಸ್ಯ ತ್ರ್ಯಾಯುಷಮ್ ಯದ್ ದೇವೇಷು ತ್ರ್ಯಾಯುಷಂ ತನ್ನೋ ಅಸ್ತು ತ್ರ್ಯಾಯುಷಮ್॥" (ಮಾಧ್ಯಂದಿನ ಸಂಹಿತಾ, ೩.೬೨).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಗ್ನಿರಿತಿ ಭಸ್ಮ "ಅಗ್ನಿರಿತಿ ಭಸ್ಮ। ವಾಯುರಿತಿ ಭಸ್ಮ। ಜಲಮಿತಿ ಭಸ್ಮ। ಸ್ಥಲಮಿತಿ ಭಸ್ಮ। ವ್ಯೋಮೇತಿ ಭಸ್ಮ। ಸರ್ವಂ ಹ ವಾ ಇದಂ ಭಸ್ಮ।" (ಭಸ್ಮಜಾಬಾಲೋಪನಿಷತ್, ೧.೩). ಮೇಧಾವೀ ಮಂತ್ರ "ಮಹ್ಯಂ ಮೇಧಾಂ ವದ ಮಹ್ಯಂ ಶ್ರಿಯಂ ವದ। ಮೇಧಾವೀ ಭೂಯಾಸಮಜರಾಜರಿಷ್ಣು॥" (ಋಗ್ವೇದ ಖಿಲ ೧೦.೧೫೧. ೬). ತ್ರಿಯಂಬಕ ಮಂತ್ರ "ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಮ್। ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ ಮಾಽಮೃತಾತ್॥" (ತೈತ್ತಿರೀಯ ಸಂಹಿತಾ, ೧.೮.೬.೨.).

ಭಸ್ಮಮಹಿಮಾ

ಭಸ್ಮಜ್ಯೋತಿಃ ಸಮಾಮ್ನಾತಮವಶ್ಯಂ ತಸ್ಯ ಧಾರಣಾತ್।
ಸಂಸಾರಸಾಗರಂ ತೀರ್ತ್ವಾ ಕೈವಲ್ಯಫಲಮಶ್ನುತೇ ॥ ೭೪ ॥

ಭಸ್ಮಸಂಧಾರಣಾದೇವ ಸರ್ವತೀರ್ಥಫಲಂ ಭವೇತ್।
ಭಸ್ಮಸಂಧಾರಣಾತ್ಸರ್ವಂ ಭಸ್ಮೀಭವತಿ ಕಿಲ್ಬಿಷಮ್ ॥ ೭೫ ॥

ಭಸ್ಮೇದಂ ಶಾಂಭವಂ ಜ್ಯೋತಿಸ್ತದ್ಧ್ಯಾನಾದ್ ಧ್ಯಾತ ಈಶ್ವರಃ।
ಭಸ್ಮಸಂದರ್ಶನಾದೇವ ಶಿವದರ್ಶನಮಶ್ನುತೇ ॥ ೭೬ ॥

ಭೂತಪ್ರೇತಪಿಶಾಚಾಶ್ಚ ಮಹಾರೋಗಾಶ್ಚ ದುಸ್ಸಹಾಃ।
ಭಸ್ಮದರ್ಶನಮಾತ್ರೇಣ ಪಲಾಯಂತೇ ನ ಸಂಶಯಃ ॥ ೭೭ ॥

ಭೂವಿದ್ರಾವಣೀ ಪಾಪಸಂಹೃತೌ ಮುಕ್ತಿಸಾಧನೇ।
ನ ಭಸ್ಮನೋಽನ್ಯತ್ ಸದೃಶಮಿತ್ಯೇತಚ್ಛಿವಶಾಸನಮ್ ॥ ೭೮ ॥

ಭಸ್ಮನೋ ಮಹಿಮಾಽಗಣ್ಯಸ್ತಂ ವಕ್ತುಂ ಕೇನ ಶಕ್ಯತೇ।
ತಥಾಪಿ ಕಶ್ಚಿದ್ ಗದಿತಃ ಕಿಮನ್ಯಚ್ಛ್ರೋತುಮಿಚ್ಛಸಿ ॥ ೭೯ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರಬೃಹಸ್ಪತಿಸಂವಾದೇ ಶಿವಶಾಸನೇ ಕ್ರಿಯಾಪಾದೇ ಭಸ್ಮಸ್ವರೂಪನಿರೂಪಣಂ ನಾಮ ಷಷ್ಠಃ ಪಟಲಃ ॥ ೬ ॥

ಭಸ್ಮದ ಮಹಿಮೆ

ಶಾಸ್ತ್ರಗಳಲ್ಲಿ ಭಸ್ಮವನ್ನು ಜ್ಯೋತಿರೂಪದಲ್ಲಿ ವರ್ಣಿಸಲಾಗಿದೆ. ಅದನ್ನು ಧರಿಸುವುದರಿಂದ ನಿಶ್ಚಿತವಾಗಿ ಸಂಸಾರ ಸಾಗರವನ್ನು ದಾಟಿ ಕೈವಲ್ಯ ಫಲವನ್ನು ಹೊಂದುವನು. (೭೪). ಭಸ್ಮವನ್ನು ಧರಿಸುವ ಮಾತ್ರದಿಂದ ಎಲ್ಲಾ ತೀರ್ಥಗಳಲ್ಲಿ ಮಿಂದ ಫಲವು ದೊರೆಯುತ್ತದೆ. ಭಸ್ಮವನ್ನು ಧರಿಸುವ ಮಾತ್ರದಿಂದ ಎಲ್ಲಾ ಪಾಪವೂ ಭಸ್ಮವಾಗುತ್ತದೆ. (೭೫). ಭಸ್ಮವೆಂಬುದು ಶಂಭುವಿನ ಜ್ಯೋತಿ. ಅದನ್ನು ಧ್ಯಾನ ಮಾಡುವುದರಿಂದ ಈಶ್ವರನನ್ನು ಧ್ಯಾನಿಸಿದಂತಾಗುತ್ತದೆ. ಭಸ್ಮದ ದರ್ಶನ ಮಾತ್ರದಿಂದ ಶಿವನ ದರ್ಶನವಾಗುತ್ತದೆ. (೭೬). ಭಸ್ಮದ ದರ್ಶನ ಮಾತ್ರದಿಂದ ಭೂತ, ಪ್ರೇತ, ಪಿಶಾಚಿಗಳು, ದುಸ್ಸಹವಾದ ಮಹಾರೋಗಗಳು ಪಲಾಯನ ಮಾಡುತ್ತವೆ. ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಯದಲ್ಲಿ ಸಂಶಯವಿಲ್ಲ. (೬೭). ಭೂತಗಳನ್ನು ಹೆದರಿಸಿ ಓಡಿಸುವುದರಲ್ಲಿ, ಪಾಪವನ್ನು ಸಂಹರಿಸುವಲ್ಲಿ, ಮುಕ್ತಿಯನ್ನು ಸಾಧಿಸಿಕೊಡುವಲ್ಲಿ ಭಸ್ಮಕ್ಕೆ ಸದೃಶವಾದುದು ಯಾವುದೂ ಇಲ್ಲ. ಇದು ಶಿವನ ಶಾಸನ. (೬೮). ಭಸ್ಮದ ಮಹಿಮೆಯು ಗಣನೆಗೆ ನಿಲುಕಲಾರದು. ಅದನ್ನು ಯಾರು ತಾನೇ ಹೇಳಲು ಶಕ್ತರು? ಏನೋ ಸ್ವಲ್ಪ ಮಾತ್ರ ಹೇಳಲ್ಪಟ್ಟಿದೆ (ನನ್ನಿಂದ). ಮತ್ತೆ ಇನ್ನೇನನ್ನು ಕೇಳಲು ಇಚ್ಛಿಸುವೆ? (೬೯).

ಇಲ್ಲಿಗೆ ಶ್ರೀಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ ಅನಂತರುದ್ರ-ಬೃಹಸ್ಪತಿ ಸಂವಾದದಲ್ಲಿ ಶಿವಶಾಸನದಲ್ಲಿ ಕ್ರಿಯಾಪಾದಲ್ಲಿ ಭಸ್ಮ ಸ್ವರೂಪನಿರೂಪಣವೆಂಬ ಷಷ್ಠ ಪಟಲ ಮುಗಿಯಿತು. (೬).

ಟಿಪ್ಪಣಿ : ಬೃಹಜ್ಜಾಬಾಲೋಪನಿಷತ್ತಿನಲ್ಲಿ 'ಸ ಏಷ ಭಸ್ಮಜ್ಯೋತಿಃ' ಎಂಬ ಉಕ್ತಿಯೊಂದಿಗೆ ಇಲ್ಲಿ ಹೇಳಿದ ಎಲ್ಲಾ ವಿಷಯಗಳಿಗೂ ಮೂಲ ಸ್ಫೂರ್ತಿಯಿದೆ; ನೋಡಿರಿ "ತ್ರಿಪುಂಡ್ರಸ್ಯ ವಿಧಿರ್ಮಯಾ ವಕ್ತುಂ ನ ಶಕ್ಯಮಿತಿ, ಸತ್ಯಮಿತಿ ಹೋವಾಚ। ಅಥ ಭಸ್ಮಚ್ಛನ್ನಃ ಸಂಸಾರಾನ್ಮುಚ್ಯತೇ। ಭಸ್ಮಶಯ್ಯಾಶಯಾನಸ್ತಚ್ಛಬ್ದಗೋಚರಃ ಶಿವಸಾಯುಜ್ಯಮವಾಪ್ನೋತಿ, ನ ಸ ಪುನರಾವರ್ತತೇ ನ ಸ ಪುನರಾವರ್ತತೇ। ರುದ್ರಾಧ್ಯಾಯೀ ಸನ್ನಮೃತತ್ವಂ ಚ ಗಚ್ಛತಿ। ಸ ಏಷ ಭಸ್ಮಜ್ಯೋತಿಃ। ವಿಭೂತಿಧಾರಣಾದ್ ಬ್ರಹ್ಮೈಕತ್ವಂ ಚ ಗಚ್ಛತಿ, ವಿಭೂತಿಧಾರಣಾದೇವ ಸರ್ವೇಷು ತೀರ್ಥೇಷು ಸ್ನಾತೋ ಭವತಿ, ವಿಭೂತಿಧಾರಣಾದ್ವಾರಾಣಸ್ಯಾಂ ಸ್ನಾನೇನ ಯತ್ ಫಲಮವಾಪ್ನೋತಿ ತತ್ ಫಲಮಶ್ನುತೇ। ಸ ಏಷ ಭಸ್ಮಜ್ಯೋತಿಃ। ಯಸ್ಯ ಕಸ್ಯಚಿಚ್ಛರೀರೇ ತ್ರಿಪುಂಡ್ರಸ್ಯ ಲಕ್ಷ್ಮ ವರ್ತತೇ ಪ್ರಥಮಾ ಪ್ರಜಾಪತಿರ್ದ್ವಿತೀಯಾ ವಿಷ್ಣುಸ್ತೃತೀಯಾ ಸದಾಶಿವ ಇತಿ ಸ ಏಷ ಭಸ್ಮಜ್ಯೋತಿಃ ಸ ಏಷ ಭಸ್ಮಜ್ಯೋತಿಃ॥" (೭.೧೪). (ಪೈಪ್ಪಲಾದನು ಹೇಳಿದ-ತ್ರಿಪುಂಡ್ರದ ವಿಧಿಯನ್ನು ನಾನು ಹೇಳಲು ಶಕ್ತನಲ್ಲ. ಸತ್ಯವೆಂದು ಹೇಳಿದ ಕಾಲಾಗ್ನಿ ರುದ್ರನು. ಇನ್ನು ಭಸ್ಮವನ್ನು ಧರಿಸಿದವನು ಸಂಸಾರದಿಂದ ಮುಕ್ತನಾಗುವನು. ಭಸ್ಮ ಶಯ್ಯೆಯಲ್ಲಿ ಮಲಗಿದವನು ಆ ಶಬ್ದದ ವ್ಯಾಪ್ತಿಯಲ್ಲಿ ಬಂದು, ಭಸ್ಮನೆನ್ನಿಸಿಕೊಂಡು, ಶಿವಸಾಯುಜ್ಯವನ್ನು ಹೊಂದುತ್ತಾನೆ; ಅವನು ಮತ್ತೆ ಹಿಂದಕ್ಕೆ ಬರುವುದಿಲ್ಲ, ಅವನು ಮತ್ತೆ ಹಿಂದಕ್ಕೆ ಬರುವುದಿಲ್ಲ. ರುದ್ರಾಧ್ಯಾಯವನ್ನು ಪಠಿಸುವವನು ಅಮರನಾಗುತ್ತಾನೆ. ಅವನೇ ಭಸ್ಮಜ್ಯೋತಿ. ಭಸ್ಮವನ್ನು ಧರಿಸುವ ಮಾತ್ರದಿಂದ ಬ್ರಹ್ಮೈಕತ್ವವನ್ನು ಹೊಂದುತ್ತಾನೆ, ವಿಭೂತಿಯನ್ನು ಧರಿಸುವ ಮಾತ್ರದಿಂದ ಎಲ್ಲಾ ತೀರ್ಥಗಳಲ್ಲಿ ಮಿಂದವನಾಗುವನು, ವಿಭೂತಿ ಧರಿಸುವುದರಿಂದ ಕಾಶಿಯಲ್ಲಿ ಸ್ನಾನ ಮಾಡಿದ ಫಲ ಯಾವುದಿದೆಯೋ ಆ ಫಲವನ್ನು ಹೊಂದುತ್ತಾನೆ. ಅವನೇ ಭಸ್ಮಜ್ಯೋತಿ. ಯಾರ ಶರೀರದಲ್ಲಿ ಭಸ್ಮತ್ರಿಪುಂಡ್ರದ ಗುರುತಿದೆಯೋ, ಅದರಲ್ಲಿ ಮೊದಲ ರೇಖೆ ಪ್ರಜಾಪತಿ, ಎರಡನೆಯದು ವಿಷ್ಣು ಮತ್ತು ಮೂರನೆಯದು ಸದಾಶಿವ, ಹೀಗೆಂದು ಅವನೇ ಭಸ್ಮ ಜ್ಯೋತಿಯು, ಅವನೇ ಭಸ್ಮ ಜ್ಯೋತಿಯು). ಜಾಬಾಲ್ಯುಪನಿಷತ್, ೨೨ ನ್ನೂ ನೋಡಿರಿ.

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಪ್ತಮಃ ಪಟಲಃ

॥ ರುದ್ರಾಕ್ಷಸ್ವರೂಪನಿರೂಪಣಮ್॥

ಬೃಹಸ್ಪತಿರುವಾಚ

ಅಪಾರಮಹಿಮಾಧಾರ ಕರುಣಾಭರಣೋಜ್ಜ್ವಲ।
ಧನ್ಯೋಽಸ್ಮಿ ಭಸ್ಮನೋಽಚಿಂತ್ಯಮಹಿಮ್ನಃ ಪರಿವೇದನಾತ್ ॥ ೧ ॥
ರುದ್ರಾಕ್ಷಮಹಿಮಾನಂ ಚ ವಿಬೋಧ್ಯ ಕೃಪಯಾ ವಿಭೋ।
ಶಿಷ್ಯಂ ಮಾಮನುಗೃಹ್ಣೀಷ್ವ ಸುರಾಸುರನಮಸ್ಕೃತ ॥ ೨ ॥

ಬೃಹಸ್ಪತಿಯು ಹೇಳಿದನು

ಅಪಾರ ಮಹಿಮೆಯ ಆಶ್ರಯನೇ, ಕರುಣೆಯೆಂಬ ಆಭರಣದಿಂದ ಶೋಭಿತನೇ, ಚಿಂತನೆಗೂ ಮೀರಿದ ಭಸ್ಮದ ಮಹಿಮೆಯ ಅರಿವಿನಿಂದ ಧನ್ಯನಾಗಿದ್ದೇನೆ. (೧). ಪ್ರಭುವೇ, ರುದ್ರಾಕ್ಷದ ಮಹಿಮೆಯನ್ನು ಕೃಪೆಯಿಟ್ಟು ಬೋಧಿಸಿ, ಸುರಾಸುರವಂದಿತನೇ, ಶಿಷ್ಯನಾದ ನನ್ನನ್ನು ಅನುಗ್ರಹಿಸು. (೨).

ಅನಂತರುದ್ರ ಉವಾಚ

೭. ರುದ್ರಾಕ್ಷಸ್ವರೂಪಂ ಮಹಿಮಾ ಚ

ಗೀಷ್ಪತೇ ತೇ ಪ್ರವಕ್ಷ್ಯಾಮಿ ರುದ್ರಾಕ್ಷಾಣಾಂ ಯಥೋದಯಮ್।
ಧಾರಣಂ ಮಹಿಮಾನಂ ಚ ಶೃಣುಷ್ವೈಕಾಗ್ರಮಾನಸಃ ॥ ೩ ॥

ರುದ್ರಾಕ್ಷದ ಸ್ವರೂಪ ಮತ್ತು ಮಹಿಮೆ

ಬೃಹಸ್ಪತಿ, ರುದ್ರಾಕ್ಷದ ಉತ್ಪತ್ತಿ ಹೇಗಾಯಿತು ಅದನ್ನು ಧರಿಸುವುದು ಹೇಗೆ ಮತ್ತು ಅದರ ಮಹಿಮೆಯೇನು ಎಂಬುದನ್ನು ಹೇಳುವೆನು. ಏಕಾಗ್ರಚಿತ್ತನಾಗಿ ಕೇಳು. (೩).

ರುದ್ರಾಕ್ಷೋತ್ಪತ್ತಿ

ತ್ರಿಪುರಾಣಾಂ ವಧಾರ್ಥಾಯ ವಿಭುನಾ ಶಂಭುನಾ ಪುರಾ।
ಉನ್ಮೀಲಿತಾನಿ ಚಕ್ಷೂಂಷಿ ದಿವ್ಯಂ ವರ್ಷಸಹಸ್ರಕಮ್ ॥ ೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಭಾಭ್ಯಾಂ ಚಾರುಪಕ್ಷ್ಮಭ್ಯಾಂ ಪತಿತಾ ಜಲಬಿಂದವಃ।
ತ ಏವ ಬಿಂದವೋ ಜಾತಾ ಮಹಾರುದ್ರಾಕ್ಷವೃಕ್ಷಕಾಃ ॥
ಸ್ಥಾವರತ್ವಮ್ ಅನುಪ್ರಾಪುರ್ಭಕ್ತಾನುಗ್ರಹಕಾರಣಾತ್ ॥ ೫ ॥

ರುದ್ರಾಕ್ಷದ ಉತ್ಪತ್ತಿ

ಪ್ರಾಚೀನ ಕಾಲದಲ್ಲಿ ಮೂರು ಪುರಗಳ ಸಂಹಾರಕ್ಕಾಗಿ ಪ್ರಭುವಾದ ಶಂಭುವು ಕಣ್ಣುಗಳನ್ನು ದೇವತೆಗಳ ಸಹಸ್ರ ವರ್ಷಗಳ ಕಾಲ ತೆರೆದು (ಎವೆಯಿಕ್ಕದೆ) ನೋಡಿದನು. (೪). ಎರಡೂ ಸುಂದರ ರೆಪ್ಪೆಗಳಿಂದ ಕಣ್ಣೀರಿನ ಹನಿಗಳು ಉದುರಿದವು. ಆ ಹನಿಗಳೇ ಮಹಾರುದ್ರಾಕ್ಷ ವೃಕ್ಷಗಳಾಗಿ ಹುಟ್ಟಿದವು. ಅವು ಭಕ್ತರ ಅನುಗ್ರಹಕ್ಕೋಸ್ಕರ ಸ್ಥಿರ ರೂಪವನ್ನು ಧರಿಸಿದವು. (೫).

ಟಿಪ್ಪಣಿ : ರುದ್ರಾಕ್ಷಜಾಬಾಲೋಪನಿಷತ್ತಿನ ೨-೫ರಲ್ಲಿ ಬರುವ ರುದ್ರಾಕ್ಷೋತ್ಪತ್ತಿಯ ಐತಿಹ್ಯಕ್ಕೆ ಇದು ಸಂವಾದಿಯಾಗಿದೆ. ರುದ್ರಾಕ್ಷವೆಂದು ಹೆಸರು ಬಂದುದೇ ಆ ಕಾರಣದಿಂದ "ರುದ್ರಸ್ಯ ನಯನಾದುತ್ಪನ್ನಾ ರುದ್ರಾಕ್ಷಾ ಇತಿಲೋಕೇ ಖ್ಯಾಯಂತೇ।" (ಬೃಹಜ್ಜಾಬಾಲೋಪನಿಷತ್, ೭.೧೬). ರುದ್ರನ ಅಕ್ಷಗಳಿಂದ (ಕಣ್ಣುಗಳಿಂದ) ಉತ್ಪನ್ನವಾದುದರಿಂದ ಅವುಗಳಿಗೆ ರುದ್ರಾಕ್ಷಗಳೆಂದು ಹೆಸರಾಯಿತು. ಶ್ರೀಸಿದ್ಧಾಂತಶಿಖಾಮಣಿ, ೭.೪೭-೪೯ ನೋಡಿರಿ.

ರುದ್ರಕ್ಷಮಹಿಮಾ

ಶ್ರೋತ್ರಿಯಾಯ ಸವತ್ಸಾಯಾ ಧೇನೋರ್ದಾನೇನ ಯತ್ಫಲಮ್।
ತತ್ಫಲಂ ಲಕ್ಷಗುಣಿತಂ ದರ್ಶನಾಲ್ಲಭತೇ ನರಃ ॥ ೬ ॥

ಪುನಸ್ತು ಕೋಟಿಗುಣಿತಂ ಫಲಂ ತತ್ಸ್ಪರ್ಶನಾದ್ಭವೇತ್।
ತಸ್ಯಕೋಟಿಶತಂ ಪುಣ್ಯಂ ಲಭತೇ ಧಾರಣಾನ್ನರಃ ॥ ೭ ॥

ಲಕ್ಷಕೋಟಿಸಹಸ್ರಾಣಿ ಲಕ್ಷಕೋಟಿಶತಾನಿ ಚ।
ತಜ್ಜಪಾಲ್ಲಭತೇ ಪುಣ್ಯಂ ರುದ್ರಾಕ್ಷೈರ್ಭಕ್ತಿಮಾನ್ನರಃ ॥ ೮ ॥

ರುದ್ರಾಕ್ಷದ ಮಹಿಮೆ

ಶ್ರೋತ್ರಿಯನಾದ (ವೇದಜ್ಞನಾದ) ಬ್ರಾಹ್ಮಣನಿಗೆ ಕರುಸಹಿತ ಗೋವನ್ನು ದಾನ ಮಾಡಿದರೆ ಯಾವ ಫಲವು ದೊರೆಯುವುದೋ ಅದರ ಲಕ್ಷಗುಣಿತ ಫಲವನ್ನು ರುದ್ರಾಕ್ಷದ ದರ್ಶನಮಾತ್ರದಿಂದ ನರನು ಪಡೆಯುತ್ತಾನೆ. (೬). ಅದಕ್ಕೂ ಹೆಚ್ಚಾಗಿ ಕೋಟಿಗುಣಿತ ಫಲವು ಅದನ್ನು ಮುಟ್ಟುವುದರಿಂದ ಉಂಟಾಗುತ್ತದೆ; ಅದರ ಶತಕೋಟಿ ಗುಣಿತ ಫಲವನ್ನು ನರನು ಅದನ್ನು ಧರಿಸುವುದರಿಂದ ಪಡೆಯುತ್ತಾನೆ. (೭) ಭಕ್ತಿವಂತನಾದ ಮನುಷ್ಯನು ಅದರ ಮಾಲೆಯ ಮೂಲಕ ಜಪ ಮಾಡುವುದರಿಂದ ಲಕ್ಷಕೋಟಿ ಸಹಸ್ರಗಳಷ್ಟು ಮತ್ತು ಲಕ್ಷ ಕೋಟಿಗಳಷ್ಟು ಪುಣ್ಯವನ್ನು ಹೊಂದುತ್ತಾನೆ. (೮).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ರುದ್ರಾಕ್ಷಜಾಬಾಲೋಪನಿಷತ್, ೬-೭ಕ್ಕೆ ಈ ಶ್ಲೋಕಗಳು ಸಂವಾದಿಯಾಗಿವೆ.

ರುದ್ರಾಕ್ಷಭೇದಾಃ

ರುದ್ರಾಕ್ಷಾಣಾಂ ತು ಸದ್ಭಕ್ತ್ಯಾ ಧಾರಣೇ ಸ್ಯಾನ್ಮಹಾಫಲಮ್।
ಧಾತ್ರೀಫಲಪ್ರಮಾಣಂ ತು ಶ್ರೇಷ್ಠಮೇತದುದಾಹೃತಮ್ ॥ ೯ ॥

ಬದರೀಫಲಮಾತ್ರಂ ತು ಮಧ್ಯಮಂ ಪ್ರೋಚ್ಯತೇ ಬುಧೈಃ।
ಅಧಮಂ ಚಣಮಾತ್ರಂ ಸ್ಯಾದಿತಿ ವಿದ್ಧಿ ಬೃಹಸ್ಪತೇ ॥ ೧೦ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚೇತಿ ಶಿವಾಜ್ಞಯಾ।
ವೃಕ್ಷಾ ಜಾತಾ ಪೃಥಿವ್ಯಾಂ ತು ತಜ್ಜಾತೀಯಾಃ ಶುಭಾಕ್ಷಕಾಃ ॥ ೧೧ ॥

ಶ್ವೇತಾಸ್ತು ಬ್ರಾಹ್ಮಣಾ ಜ್ಞೇಯಾಃ ಕ್ಷತ್ರಿಯಾ ರಕ್ತವರ್ಣಕಾಃ।
ಪೀತಾ ವೈಶ್ಯಾಸ್ತು ವಿಜ್ಞೇಯಾಃ ಕೃಷ್ಣಾಃ ಶೂದ್ರಾ ಉದಾಹೃತಾಃ ॥ ೧೨ ॥

ಬ್ರಾಹ್ಮಣೋ ಬಿಭೃಯಾಚ್ಛ್ವೇತಾನ್ ರಕ್ತಾನ್ ರಾಜಾ ತು ಧಾರಯೇತ್।
ಪೀತಾನ್ ವೈಶ್ಯಸ್ತು ಬಿಭೃಯಾತ್ ಕೃಷ್ಣಾನ್ ಶೂದ್ರಸ್ತು ಧಾರಯೇತ್ ॥ ೧೩ ॥

ರುದ್ರಾಕ್ಷದ ಭೇದಗಳು

ಸದ್ಭಕ್ತಿಯಿಂದ ರುದ್ರಾಕ್ಷಗಳನ್ನು ಧರಿಸುವುದರಿಂದ ಹಿರಿದಾದ ಫಲವುಂಟು. ಆಮಲಕ (ನೆಲ್ಲಿಕಾಯಿ) ಗಾತ್ರದ ರುದ್ರಾಕ್ಷವು ಶ್ರೇಷ್ಠವೆಂದು ಹೇಳುತ್ತಾರೆ. ಬಾರೀ ಹಣ್ಣಿನ ಗಾತ್ರದ್ದು ಮಧ್ಯಮವೆಂದು ಜ್ಞಾನಿಗಳು ಹೇಳುತ್ತಾರೆ. ಬೃಹಸ್ಪತಿಯೇ, ಕಡಲೆಕಾಳು ಗಾತ್ರದ್ದು ಅಧಮವೆಂದು ತಿಳಿ. (೯-೧೦). ಶಿವನ ಆಜ್ಞೆಯಂತೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಜಾತಿಯ ರುದ್ರಾಕ್ಷ ವೃಕ್ಷಗಳು ಭೂಮಿಯ ಮೇಲೆ ಉತ್ಪನ್ನವಾಗಿವೆ. ಅವುಗಳಲ್ಲಿ ಅವೇ ಜಾತಿಗಳ ಶುಭ ರುದ್ರಾಕ್ಷಗಳು ಹುಟ್ಟುತ್ತವೆ. ಬಿಳಿಯ ರುದ್ರಾಕ್ಷಗಳು ಬ್ರಾಹ್ಮಣ, ಕೆಂಪು ಬಣ್ಣದವು ಕ್ಷತ್ರಿಯ, ಹಳದಿ ಬಣ್ಣದವು ವೈಶ್ಯ ಮತ್ತು ಕಪ್ಪು ಬಣ್ಣದವು ಶೂದ್ರ ಎಂದು ಕರೆಯಲ್ಪಟ್ಟಿದೆ. ಬ್ರಾಹ್ಮಣನು ಬಿಳಿಯವನ್ನು ಧರಿಸಬೇಕು. ಕ್ಷತ್ರಿಯನು ಕೆಂಪು ಬಣ್ಣದವುಗಳನ್ನು ಧರಿಸಬೇಕು. ವೈಶ್ಯನು ಹಳದಿ ಬಣ್ಣದವುಗಳನ್ನು ಧರಿಸಬೇಕು ಮತ್ತು ಶೂದ್ರನು ಕಪ್ಪು ಬಣ್ಣದವುಗಳನ್ನು ಧರಿಸಬೇಕು. (೧೧-೧೩).

ಟಿಪ್ಪಣಿ : ಈ ಶ್ಲೋಕಗಳು ರುದ್ರಾಕ್ಷ ಜಾಬಾಲೋಪನಿಷತ್, ೮-೧೨, ಈ ಶ್ಲೋಕಗಳಿಗೆ ಸಂವಾದಿಯಾಗಿವೆ.

ಅವರ್ಜ್ಯಾಃ ವರ್ಜ್ಯಾಶ್ಚ ರುದ್ರಾಕ್ಷಾಃ

ತಾಮ್ರಾಃ ಸ್ನಿಗ್ಧಾ ದೃಢಾಃ ಸ್ಥೂಲಾಃ ಕಂಟಕೈಃ ಸಂಯುತಾಃ ಶುಭಾಃ।
ಕ್ರಿಮಿದಷ್ಟಂ ಛಿನ್ನಭಿನ್ನಂ ಕಂಟಕೈರ್ಹೀನಮೇವ ಚ॥
ವ್ರಣಯುಕ್ತಮವೃತ್ತಂ ಚ ಷಡ್ ರುದ್ರಾಕ್ಷಾನ್ ವಿವರ್ಜಯೇತ್ ॥ ೧೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತ್ಯಜಿಸಬಾರದ ಮತ್ತು ತ್ಯಜಿಸಬೇಕಾದ ರುದ್ರಾಕ್ಷಗಳು

ತಾಮ್ರದ ಬಣ್ಣವುಳ್ಳ, ಹೊಳಪುಳ್ಳ, ಗಟ್ಟಿಯಾದ ಆಕಾರದಲ್ಲಿ ದೊಡ್ಡವಾದ, ಮುಳ್ಳುಗಳಿಂದ ಕೂಡಿದ ರುದ್ರಾಕ್ಷಗಳು ಮಂಗಲಕರವಾದವುಗಳು. ಆದರೆ ಹುಳು ತಿಂದುದು, ಛಿದ್ರವಾದದ್ದು, ಭಿನ್ನವಾದದ್ದು, ಮುಳ್ಳುಗಳಿಲ್ಲದುದು ವ್ರಣದಿಂದ ಕೂಡಿದುದು, ದುಂಡಾಗಿಲ್ಲದುದು-ಇಂತಹ ಆರು ತರಹದ ರುದ್ರಾಕ್ಷಗಳನ್ನು ತ್ಯಜಿಸಬೇಕು. (೧೪).

ಟಿಪ್ಪಣಿ : ರುದ್ರಾಕ್ಷಜಾಬಾಲೋಪನಿಷತ್ ೧೩-೧೪, ಇವುಗಳಿಗೆ ಸಂವಾದಿಯಾಗಿವೆ.

ಉತ್ತಮಾದಿಭೇದಾ ರುದ್ರಾಕ್ಷಾಣಾಮ್

ಸ್ವಯಮೇವ ಕೃತದ್ವಾರಂ ರುದ್ರಾಕ್ಷಂ ಸ್ಯಾದಿಹೋತ್ತಮಮ್।
ಯತ್ತು ಪೌರುಷಯತ್ನೇನ ಕೃತಂ ತನ್ಮಧ್ಯಮಂ ಭವೇತ್ ॥ ೧೫ ॥

ಸಮಾನ್ ಸ್ನಿಗ್ಧಾನ್ ದೃಢಾನ್ ವೃತ್ತಾನ್ ಕ್ಷೌಮಸೂತ್ರೇಣ ಧಾರಯೇತ್।
ಸರ್ವಗಾತ್ರೇಣ ಸಾಮ್ಯೇನ ಸಾಮಾನ್ಯಾನಿ ವಿಚಕ್ಷಣಃ ॥ ೧೬ ॥

ನಿಕಷೇ ಹೇಮರೇಖೇವ ಯಸ್ಯ ರೇಖಾ ಪ್ರದೃಶ್ಯತೇ।
ತದಕ್ಷಮುತ್ತಮಂ ವಿದ್ಯಾತ್ ತದ್ಧಾರ್ಯಂ ಶಿವಪೂಜಕೈಃ ॥ ೧೭ ॥

ಉತ್ತಮ ಮುಂತಾದ ರುದ್ರಾಕ್ಷಭೇದಗಳು

ಸಹಜವಾದ ರಂಧ್ರವುಳ್ಳ ರುದ್ರಾಕ್ಷವು ಉತ್ತಮ, ಯಾವುದರಲ್ಲಿ ಪುರುಷ ಯತ್ನದಿಂದ ಮಾಡಿದ ರಂಧ್ರವಿದೆಯೋ ಮಧ್ಯಮ ಅದು. (೧೫). ಸಮವಾದ, ಹೊಳಪುಳ್ಳ, ಗಟ್ಟಿಯಾದ, ದುಂಡಾಗಿರುವ ರುದ್ರಾಕ್ಷಗಳನ್ನು ರೇಷ್ಮೆಯ ದಾರದಿಂದ ಕಟ್ಟಿಕೊಳ್ಳಬೇಕು. ಎಲ್ಲಾ ಅಳತೆಯಲ್ಲಿ ಸಮವಾದ ಒಂದೇ ರೂಪವುಳ್ಳವುಗಳನ್ನು ಜ್ಞಾನಿಯು ಹಾಗೆಯೇ ಧರಿಸುತ್ತಾನೆ. (೧೬). ಒರೆಗಲ್ಲಿನ ಮೇಲೆ ಚಿನ್ನದ ರೇಖೆಯ ಹಾಗೆ ಯಾವುದರ ರೇಖೆಯು ಸ್ಪಷ್ಟವಾಗಿ ಗೋಚರಿಸುತ್ತದೆಯೋ ಅದನ್ನು ಅನನ್ಯವೆಂದೂ ಉತ್ತಮವೆಂದೂ ತಿಳಿಯಬೇಕು. ಅದನ್ನು ಶಿವಪೂಜಕರು ಧರಿಸಬೇಕು. (೧೭).

ಟಿಪ್ಪಣಿ: ರುದ್ರಾಕ್ಷಜಾಬಾಲೋಪನಿಷತ್, ೧೪-೧೭ರೊಂದಿಗೆ ಸಂವಾದಿಯಾಗಿವೆ.

ರುದ್ರಾಕ್ಷಧಾರಣಸ್ಥಾನಾನಿ ಸಂಖ್ಯಾ ಚ

ಶಿಖಾಯಾಮೇಕರುದ್ರಾಕ್ಷಂ ತ್ರಿಂಶತ್ತು ಶಿರಸಾ ವಹೇತ್।
ದ್ವಾತ್ರಿಂಶತ್ತು ಗಲೇ ದದ್ಯಾದ್ ಬಾಹ್ವೋಃ ಷೋಡಶ ಷೋಡಶ ॥ ೧೮ ॥

ದ್ವಾದಶಂ ಮಣಿಬಂಧೇ ಚ ಸ್ಕಂದೇ ಪಂಚಶತಂ ವಹೇತ್।
ಅಷ್ಟೋತ್ತರಶತೈರ್ಮಾಲಾಂ ಜಪಯಜ್ಞೇ ಪ್ರಕಲ್ಪಯೇತ್ ॥ ೧೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವಿಸರಂ ತ್ರಿಸರಂ ವಾಽಪಿ ಸರಾಣಾಂ ಪಂಚಕಂ ತು ವಾ।
ಸರಾಣಾಂ ಸಪ್ತಕಂ ವಾಽಪಿ ಬಿಭೃಯಾತ್ ಕಂಠದೇಶತಃ ॥ ೨೦ ॥

ಮಕುಟೇ ಕುಂಡಲೇ ಚೈವ ಕರ್ಣಿಕಾಹಾರಕೇಷು ಚ।
ಕೇಯೂರೇ ಕಟಕೇ ಚೈವ ಕುಕ್ಷಿಬಂಧೇ ವಿಶೇಷತಃ ॥
ಸುಪ್ತೇ ಪೀತೇ ಸದಾ ಕಾಲಂ ರುದ್ರಾಕ್ಷಾನ್ ಧಾರಯೇನ್ನರಃ ॥ ೨೧ ॥

ತ್ರಿಶತಂ ತ್ವಧಮಂ ಪಂಚಶತಂ ಮಧ್ಯಮಮುಚ್ಯತೇ।
ಸಹಸ್ರಮುತ್ತಮಂ ಪ್ರೋಕ್ತಮೇವಂ ಭೇದೇನ ಧಾರಯೇತ್ ॥ ೨೨ ॥

ರುದ್ರಾಕ್ಷಗಳನ್ನು ಧರಿಸುವ ಸ್ಥಾನಗಳು ಮತ್ತು ಸಂಖ್ಯೆ

ಶಿಖೆಯಲ್ಲಿ ಒಂದು ರುದ್ರಾಕ್ಷ. ಶಿರಸ್ಸಿನಲ್ಲಿ ಮೂವತ್ತನ್ನು ಧರಿಸಬೇಕು. ಮೂವತ್ತೆರಡನ್ನು ಕತ್ತಿನಲ್ಲಿ ಕಟ್ಟಿಕೊಳ್ಳಬೇಕು. ಬಾಹುಗಳಲ್ಲಿ ಹದಿನಾರು ಹದಿನಾರು, ಮುಂಗೈಗಳಲ್ಲಿ ಹನ್ನೆರಡು, ಹನ್ನೆರಡು, ಹೆಗಲ ಮೇಲೆ ಐದು ನೂರು ರುದ್ರಾಕ್ಷಗಳನ್ನು ಧರಿಸಬೇಕು. ಒಂದು ನೂರಾ ಎಂಟು ರುದ್ರಾಕ್ಷಗಳಿಂದ ಮಾಲೆಯನ್ನು ಜಪಯಜ್ಞಕ್ಕಾಗಿ ರಚಿಸಿಕೊಳ್ಳಬೇಕು. ಕಂಠದಿಂದ ಎರಡೋ ಮೂರೋ, ಐದೋ ಅಥವಾ ಏಳೋ ಸರಗಳನ್ನು ಧರಿಸಬೇಕು. ಮನುಷ್ಯನು ಕಿರೀಟ, ಕುಂಡಲ, ಕರ್ಣಾಭರಣ, ಹಾರ, ತೋಳಬಂದಿ, ಬಳೆ ಮುಂತಾದ ರೂಪದಲ್ಲಿ ವಿಶೇಷವಾಗಿ ಟೊಂಕಪಟ್ಟಿ ರೂಪದಲ್ಲಿ ಮಲಗಿದಾಗ, ಊಟ, ಜಲಪಾನದ ಸಮಯದಲ್ಲಿ ಸದಾಕಾಲವೂ ರುದ್ರಾಕ್ಷಗಳನ್ನು ಧರಿಸಿಕೊಳ್ಳಬೇಕು. ಮುನ್ನೂರು ಅಧಮ, ಐದು ನೂರು ಮಧ್ಯಮ ಮತ್ತು ಸಹಸ್ರವು ಉತ್ತಮ, ಹೀಗೆ ಭೇದದಿಂದ ರುದ್ರಾಕ್ಷಗಳನ್ನು ಧರಿಸಬೇಕು. (೧೮-೨೨)

ಟಿಪ್ಪಣಿ : ರುದ್ರಾಕ್ಷಜಾಬಾಲೋಪನಿಷತ್, ೧೭-೨೨ ಶ್ಲೋಕಗಳಿಗೆ ಈ ಶ್ಲೋಕಗಳು ಸಂವಾದಿಯಾಗಿವೆ. ಶ್ರೀಸಿದ್ಧಾಂತಶಿಖಾಮಣಿ, ೭.೫೪-೫೮ನ್ನು ನೋಡಿರಿ.

ಮಂತ್ರಪುರಸ್ಸರಂ ರುದ್ರಾಕ್ಷಧಾರಣಮ್

ಶಿರಸೀಶಾನ ಮಂತ್ರೇಣ ಕಂಠೇ ತತ್ಪುರುಷೇಣ ಚ।
ಅಘೋರಾಖ್ಯೇನ ಮಂತ್ರೇಣ ಕರಯೋರ್ಧಾರಯೇತ್ ಸುಧೀಃ॥
ಪಂಚಾಶದಕ್ಷಸಹಿತಾಂ ವ್ಯೋಮವ್ಯಾಪೀತಿ ಚೋದರೇ ॥ ೨೩ ॥

ಪಂಚ ಬ್ರಹ್ಮಭಿರಂಗೈಶ್ಚ ತ್ರಿಮಾಲಾ ಪಂಚ ಸಪ್ತ ಚ।
ಅಥವಾ ಮೂಲಮಂತ್ರೇಣ ಸರ್ವಾಣ್ಯಕ್ಷಾಣಿ ಧಾರಯೇತ್ ॥ ೨೪ ॥

ಮಂತ್ರ ಪೂರ್ವಕವಾಗಿ ರುದ್ರಾಕ್ಷಧಾರಣ

ಜ್ಞಾನಿಯು 'ಈಶಾನಃ ಸರ್ವವಿದ್ಯಾನಾಂ' ಇತ್ಯಾದಿ ಮಂತ್ರದಿಂದ ಶಿರಸ್ಸಿನಲ್ಲಿ, 'ತತ್ಪುರುಷಾಯ ವಿದ್ಮಹೇ' ಇತ್ಯಾದಿ ಮಂತ್ರದಿಂದ ಕಂಠದಲ್ಲಿ, 'ಅಘೋರೇಭ್ಯೋಽಥ ಘೋರೇಭ್ಯೋ' ಇತ್ಯಾದಿ ಮಂತ್ರದಿಂದ ಕರಗಳಲ್ಲಿ ರುದ್ರಾಕ್ಷಗಳನ್ನು ಧರಿಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ವ್ಯೋಮವ್ಯಾಪೀ' ಇತ್ಯಾದಿ ಮಂತ್ರದಿಂದ ಐವತ್ತು ರುದ್ರಾಕ್ಷಗಳ ಮಾಲೆಯನ್ನು ಹೊಟ್ಟೆಯ ಭಾಗದಲ್ಲಿ ಧರಿಸಬೇಕು. ಪಂಚಬ್ರಹ್ಮಮಂತ್ರಗಳಿಂದ, ಷಡಂಗ ಮಂತ್ರಗಳಿಂದ ಮೂರು, ಐದು ಅಥವಾ ಏಳು ಮಾಲೆಗಳನ್ನು ಧರಿಸಬೇಕು ಅಥವಾ ಮೂಲ ಪಂಚಾಕ್ಷರೀ ಮಂತ್ರದಿಂದ ಎಲ್ಲಾ ರುದ್ರಾಕ್ಷಗಳನ್ನು ಧರಿಸಿಕೊಳ್ಳಬೇಕು. (೨೩-೨೪).

ಟಿಪ್ಪಣಿ : ರುದ್ರಾಕ್ಷಜಾಬಾಲೋಪನಿಷತ್ತಿನ ೨೩-೨೫ ಶ್ಲೋಕಗಳಿಗೆ ಸಂವಾದಿಯಾಗಿವೆ. ಷಡಂಗ ಮಂತ್ರ - ಓಂ ಹೃದಯಾಯ ನಮಃ, ಓಂ ಶಿರಸೇ ಸ್ವಾಹಾ, ಓಂ ಶಿಖಾಯೈ ವಷಟ್, ಓಂ ಕವಚಾಯ ಹುಮ್, ಓಂ ನೇತ್ರತ್ರಯಾಯ ಔಷಟ್, ಓಂ ಅಸ್ತ್ರಾಯ ಫಟ್.

ಮುಖಭೇದೇನ ರುದ್ರಾಕ್ಷಮಹಿಮಾ

ಏಕವಕ್ತ್ರಂತು ರುದ್ರಾಕ್ಷಂ ಪರತತ್ತ್ವಸ್ವರೂಪಕಮ್।
ತದ್ಧಾರಣಾತ್ ಪರೇ ತತ್ತ್ವೇ ಲೀಯತೇ ವಿಜಿತೇಂದ್ರಿಯಃ ॥ ೨೫ ॥

ದ್ವಿವಕ್ತ್ರಂ ಚೈವ ರುದ್ರಾಕ್ಷಮರ್ಧನಾರೀಶ್ವರಾತ್ಮಕಮ್।
ಧಾರಣಾದರ್ಧನಾರೀಶಃ ಪ್ರೀಯತೇ ತಸ್ಯ ನಿತ್ಯಶಃ ॥ ೨೬ ॥

ತ್ರಿವಕ್ತ್ರಮನಲಃ ಸಾಕ್ಷಾತ್ ಸ್ತ್ರೀಹತ್ಯಾಂ ದಹತಿ ಕ್ಷಣಾತ್।
ತ್ರಿಮುಖಂ ಚೈವ ರುದ್ರಾಕ್ಷಮಗ್ನಿತ್ರಯಮುದಾಹೃತಮ್॥
ತದ್ಧಾರಣೇನ ಹುತಭುಕ್ ತುಷ್ಯತಿ ಸ್ಫುಟಕಾಮದಃ ॥ ೨೭ ॥

ಚತುರ್ಮುಖಂ ತು ರುದ್ರಾಕ್ಷಂ ಬ್ರಹ್ಮರೂಪಮುದಾಹೃತಮ್।
ಪಂಚವಕ್ತ್ರಂ ತು ರುದ್ರಾಕ್ಷಂ ಪಂಚಬ್ರಹ್ಮಸ್ವರೂಪಕಮ್ ॥ ೨೮ ॥

ಪಂಚವಕ್ತ್ರಂ ಸ್ವಯಂ ಬ್ರಹ್ಮ ಬ್ರಹ್ಮಹತ್ಯಾಂ ವ್ಯಪೋಹತಿ।
ತಸ್ಯ ಧಾರಣಮಾತ್ರೇಣ ಸಂತುಷ್ಯತಿ ಸದಾಶಿವಃ ॥ ೨೯ ॥

ಷಡ್ವಕ್ತ್ರಂ ತು ರುದ್ರಾಕ್ಷಂ ಕಾರ್ತಿಕೇಯಾಧಿದೈವತಮ್।
ವಿನಾಯಕಾಧಿದೈವಂ ಚ ದತ್ತೇಽವಿಘ್ನಂ ಶ್ರಿಯಂ ವರಾನ್ ॥ ೩೦ ॥

ಸಪ್ತವಕ್ತ್ರಂತು ರುದ್ರಾಕ್ಷಂ ಸಪ್ತಮಾತ್ರಧಿದೈವತಮ್।
ತದ್ಧಾರಣೇನ ಸುಪ್ರೀತಾ ಜಯಂ ದದತಿ ಮಾತರಃ ॥ ೩೧ ॥

ಅಷ್ಟವಕ್ತ್ರಂ ತು ರುದ್ರಾಕ್ಷಂ ದಿಗಧೀಶಾಧಿದೈವತಮ್।
ವಸ್ವಷ್ಟಕಪ್ರಿಯಂ ಚೈವ ಗಂಗಾಪ್ರೀತಿಕರಂ ಶುಭಮ್॥
ತದ್ಧಾರಣಾದಿಮೇ ಪ್ರೀತಾ ದದತೇ ತಸ್ಯ ವಾಂಛಿತಮ್ ॥ ೩೨ ॥

ನವವಕ್ತ್ರಂ ತು ರುದ್ರಾಕ್ಷಂ ನವಶಕ್ತ್ಯಧಿದೈವತಮ್।
ತಸ್ಯ ಧಾರಣಮಾತ್ರೇಣ ಪ್ರೀಯಂತೇ ನವಶಕ್ತಯಃ ॥ ೩೩ ॥

ದಶವಕ್ತ್ರಂತು ರುದ್ರಾಕ್ಷಂ ಯಮದೈವತಮುದಾಹೃತಮ್।
ತಥಾಸ್ಯ ಪ್ರೀತಿಜನಕಂ ಧಾರಣೇ ನಾತ್ರ ಸಂಶಯಃ ॥ ೩೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಕಾದಶಮುಖಂ ಚಾಕ್ಷಂ ರುದ್ರೈಕಾದಶದೈವತಮ್।
ತದಿಂದ್ರದೈವತಂ ಪ್ರೋಕ್ತಂ ಸದಾ ಸೌಭಾಗ್ಯವರ್ಧಮ್ ॥ ೩೫ ॥

ರುದ್ರಾಕ್ಷಂ ದ್ವಾದಶಮುಖಂ ಮಹಾವಿಷ್ಣುಸ್ವರೂಪಕಮ್।
ದ್ವಾದಶಾದಿತ್ಯದೈವಂ ಚ ದೇವತಾಪ್ರೀತಿವರ್ಧನಮ್ ॥ ೩೬ ॥

ತ್ರಯೋದಶಮುಖಂ ಚಾಕ್ಷಂ ಕಾಮದಂ ಶುದ್ಧಿದಂ ಶುಭಮ್।
ತಸ್ಯ ಧಾರಣಮಾತ್ರೇಣ ಕಾಮದೇವಃ ಪ್ರಸೀದತಿ ॥ ೩೭ ॥

ಚತುರ್ದಶಮುಖಂ ಚಾಕ್ಷಂ ರುದ್ರನೇತ್ರಸಮುದ್ಭವಮ್।
ಸರ್ವವ್ಯಾಧಿಹರಂ ಚೈವ ಸದಾಽಽರೋಗ್ಯಮವಾಪ್ನುಯಾತ್ ॥ ೩೮ ॥

ತನ್ಮುಖಂ ರುದ್ರಮಿತ್ಯಾಹುಸ್ತದಿಂದುಃ ಸರ್ವದೇವತಾಃ।
ರುದ್ರಾಕ್ಷದಾರಣಾತ್ ಸದ್ಯಃ ಸರ್ವಪಾಪೈಃ ಪ್ರಮುಚ್ಯತೇ ॥ ೩೯ ॥

ಮುಖ ಭೇದದಂತೆ ರುದ್ರಾಕ್ಷಗಳ ಮಹಿಮೆ

ಒಂದು ಮುಖದ ರುದ್ರಾಕ್ಷವು ಪರತತ್ತ್ವದ ಸ್ವರೂಪವುಳ್ಳದ್ದು. ಅದನ್ನು ಧರಿಸುವುದರಿಂದ ಇಂದ್ರಿಯ ನಿಗ್ರಹ ಶಾಲಿಯಾಗಿ ಪರತತ್ತ್ವದಲ್ಲಿ ಲೀನವಾಗುತ್ತಾನೆ. (೨೫). ಎರಡು ಮುಖಗಳ ರುದ್ರಾಕ್ಷವು ಅರ್ದನಾರೀಶ್ವರ ಸ್ವರೂಪವುಳ್ಳದ್ದು. ಅದನ್ನು ಧರಿಸುವುದರಿಂದ ಅರ್ಧನಾರೀಶ್ವರನು ಅವನಿಗೆ ನಿತ್ಯವೂ ಒಲಿಯುತ್ತಾನೆ. (೨೬). ಮೂರು ಮುಖಗಳ ರುದ್ರಾಕ್ಷವು ಸಾಕ್ಷಾತ್ತಾಗಿ ಅಗ್ನಿಯ ಸ್ವರೂಪ. ಸ್ತ್ರೀ ಹತ್ಯಾ ದೋಷವನ್ನು ಕ್ಷಣದಲ್ಲಿ ದಹಿಸುತ್ತದೆ. (೨೭). ಮೂರು ಮುಖಗಳ ರುದ್ರಾಕ್ಷವು ಮೂರು ಅಗ್ನಿಗಳೆಂದು ಹೇಳಲ್ಪಟ್ಟಿದೆ. ಅದನ್ನು ಧರಿಸುವುದರಿಂದ ಅಗ್ನಿಯು ತೃಪ್ತನಾಗುತ್ತಾನೆ ಮತ್ತು ಸ್ವಷ್ಟವಾಗಿ ಬಯಸಿದ್ದನ್ನು ಕೊಡುತ್ತಾನೆ. (೨೮). ನಾಲ್ಕು ಮುಖಗಳ ರುದ್ರಾಕ್ಷವು ಬ್ರಹ್ಮಸ್ವರೂಪವೆಂದು ಹೇಳಲಾಗುತ್ತದೆ. ಐದು ಮುಖಗಳ ರುದ್ರಾಕ್ಷವು ಪಂಚ ಬ್ರಹ್ಮ ಸ್ವರೂಪವುಳ್ಳದ್ದು. (೨೯). ಪಂಚವಕ್ತ್ರ ರುದ್ರಾಕ್ಷವು ಸ್ವತಃ ಬ್ರಹ್ಮನೇ, ಅದು ಬ್ರಹ್ಮಹತ್ಯಾ ದೋಷವನ್ನು ಕಳೆಯುತ್ತದೆ. ಆದನ್ನು ಧರಿಸುವ ಮಾತ್ರದಿಂದ ಸದಾಶಿವನು ಸಂತುಷ್ಟನಾಗುತ್ತಾನೆ. (೨೯). ಆರು ಮುಖಗಳ ರುದ್ರಾಕ್ಷವು ಕಾರ್ತಿಕೇಯನನ್ನು ಅದಿದೈವತನಾಗಿ ಹೊಂದಿದೆ. ಅದು ವಿನಾಯಕನನ್ನು ಅಧಿದೈವವಾಗಿ ಪಡೆದಿದೆ. ಅವಿಘ್ನವನ್ನು ಮತ್ತು ಸಂಪತ್ತನ್ನು ವರವಾಗಿ ಕೊಡುತ್ತದೆ. (೩೦). ಏಳುಮುಖಗಳ ರುದ್ರಾಕ್ಷವು ಸಪ್ತಮಾತೃಕೆಯರನ್ನು ಅಧಿದೇವತೆಗಳಾಗಿ ಪಡೆದಿದೆ. ಅದನ್ನು ಧರಿಸುವುದರಿಂದ ಮಾತೆಯರು ಸುಪ್ರೀತರಾಗಿ ಜಯವನ್ನು ದಯಪಾಲಿಸುತ್ತಾರೆ. (೩೧). ಎಂಟು ಮುಖಗಳ ರುದ್ರಾಕ್ಷವು ದಿಕ್ಕುಗಳ ಅಧಿಪತಿಗಳನ್ನು ಅಧಿದೈವಗಳಾಗಿ ಹೊಂದಿದೆ. ಅದು ಎಂಟು ವಸುಗಳನ್ನು ಸಂಪ್ರೀತಗೊಳಿಸುತ್ತದೆ. ಗಂಗೆಯನ್ನು ಸಂತುಷ್ಟಗೊಳಿಸುವುದು, ಮಂಗಲವಾದುದು. ಅದನ್ನು ಧರಿಸುವುದರಿಂದ ಅವರು ಪ್ರೀತರಾಗಿ ಬಯಸಿದ್ದನ್ನು ಕೊಡುತ್ತಾರೆ. (೩೨). ಒಂಬತ್ತು ಮುಖಗಳ ರುದ್ರಾಕ್ಷವು ನವಶಕ್ತಿಯರನ್ನು ಅಧಿದೇವತೆಗಳಾಗಿ ಪಡೆದಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದನ್ನು ಧರಿಸುವ ಮಾತ್ರದಿಂದ ಒಂಬತ್ತು ಶಕ್ತಿಯರು ಸುಪ್ರೀತರಾಗುತ್ತಾರೆ. (೩೩). ಹತ್ತು ಮುಖಗಳ ರುದ್ರಾಕ್ಷವು ಯಮನನ್ನು ದೈವವಾಗಿ ಉಳ್ಳದ್ದು. ಧರಿಸಿದರೆ ಅದು ಅವನಲ್ಲಿ ಪ್ರೀತಿಯನ್ನು ಹುಟ್ಟಿಸುತ್ತದೆ. ಈ ವಿಷಯದಲ್ಲಿ ಸಂಶಯವಿಲ್ಲ. (೩೪). ಹನ್ನೊಂದು ಮುಖಗಳ ರುದ್ರಾಕ್ಷವು ಏಕಾದಶ ರುದ್ರರನ್ನು ಅಧಿದೇವತೆಗಳಾಗಿ ಹೊಂದಿದೆ. ಅದು ಇಂದ್ರನನ್ನೂ ದೇವತೆಯಾಗಿ ಪಡೆದಿದೆ. ಅದು ಸದಾ ಸೌಭಾಗ್ಯವನ್ನು ಹೆಚ್ಚಿಸುತ್ತದೆ. (೩೫). ಹನ್ನೆರಡು ಮುಖಗಳ ರುದ್ರಾಕ್ಷವು ಮಹಾವಿಷ್ಣುವಿನ ಸ್ವರೂಪವುಳ್ಳದ್ದು. ಅದಕ್ಕೆ ಹನ್ನೆರಡು ಆದಿತ್ಯರು ದೇವತೆಗಳು. ಅದು ದೇವತೆಗಳ ಪ್ರೀತಿಯನ್ನು ಹೆಚ್ಚಿಸುತ್ತದೆ. (೩೬). ಹದಿಮೂರು ಮುಖಗಳ ರುದ್ರಾಕ್ಷವು ಕಾಮದ, ಶುದ್ಧಿಕರ ಮತ್ತು ಮಂಗಲಕರ. ಅದನ್ನು ಧರಿಸುವ ಮಾತ್ರದಿಂದ ಕಾಮದೇವನು ಪ್ರಸನ್ನನಾಗುತ್ತಾನೆ. (೩೭). ಹದಿನಾಲ್ಕು ಮುಖಗಳ ರುದ್ರಾಕ್ಷವು ರುದ್ರನ ಕಣ್ಣುಗಳಿಂದ ಹುಟ್ಟಿದ್ದು. ಅದು ಎಲ್ಲಾ ರೋಗಗಳ ನಿವಾರಕ ಮತ್ತು ಅದನ್ನು ಧರಿಸಿದವನು ಸದಾ ಆರೋಗ್ಯವನ್ನು ಪಡೆಯುವನು. (೩೮). ರುದ್ರಾಕ್ಷದ ಮುಖವು ರುದ್ರನೆಂದು ಹೇಳುತ್ತಾರೆ. ಅದರ ಮೇಲೆ ಕಾಣುವ ಬಿಂದುಗಳಲ್ಲಿ ಎಲ್ಲಾ ದೇವತೆಗಳು ವಾಸಿಸುವರು. ರುದ್ರಾಕ್ಷವನ್ನು ಧರಿಸುವುದರಿಂದ ನರನು ಕೂಡಲೆ ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ. (೩೯).

ಟಿಪ್ಪಣಿ : ರುದ್ರಾಕ್ಷಜಾಬಾಲೋಪನಿಷತ್ ೨೭-೪೨ರವರೆಗಿನ ಶ್ಲೋಕಗಳಿಗೆ ಈ ಶ್ಲೋಕಗಳು ಸಂವಾದಿಯಾಗಿವೆ. ಅಗ್ನಿತ್ರಯ=ಆಹವನೀಯ, ಗಾರ್ಹಪತ್ಯ ಮತ್ತು ಆಗ್ನೀಧ್ರೀಯ. ಸಪ್ತಮಾತೃಕೆಯರು-ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣೀ ಮತ್ತು ಚಾಮುಂಡಾ. ದಿಕ್ಪಾಲರು ೮-ಇಂದ್ರ, ಅಗ್ನಿ, ಯಮ, ನೈರ್ಋತ, ವರುಣ, ಮರುತ್, ಕುಬೇರ, ಈಶಾನ. ವಾಮಾ ಮುಂತಾದ ಒಂಬತ್ತು ಶಕ್ತಿಯರು-ಷಷ್ಠಪಟಲ ೪೮-೫೩ರ ಟಿಪ್ಪಣಿ ನೋಡಿರಿ. ಏಕಾದಶ ರುದ್ರರು-ಪ್ರಥಮ ಪಟಲ, ೩೮-೪೩ರ ಟಿಪ್ಪಣಿ ನೋಡಿರಿ. ಆದಿತ್ಯರು ೧೨- ಪ್ರಥಮ ಪಟಲ, ೩೮-೪೩ರ ಟಿಪ್ಪಣಿ ನೋಡಿರಿ.

ಸಂಖ್ಯಾನಿರೂಪಣಮ್

ರುದ್ರಾಕ್ಷಧಾರಣಂ ಪುಣ್ಯಂ ಕೇನ ವಾ ಸದೃಶಂ ಭವೇತ್।
ಸಹಸ್ರಂ ಧಾರಯೇದ್ಯಸ್ತು ರುದ್ರಾಕ್ಷಾಣಾಂ ಧೃತವ್ರತಃ॥
ಸುರಾಸುರಾ ನಮಂತ್ಯೇನಂ ಯಥಾ ರುದ್ರಸ್ತಥೈವ ಸಃ ॥ ೪೦ ॥

ಅಭಾವೇ ತು ಸಹಸ್ರಸ್ಯ ಬಾಹ್ವೋಃ ಷೋಡಶ ಷೋಡಶ।
ಏಕಂ ಶಿಖಾಯಾಂ ಕರಯೋರ್ದ್ವಾದಶ ದ್ವಾದಶ ದ್ವಯೋಃ ॥ ೪೧ ॥

ದ್ವಾತ್ರಿಂಶತ್ ಕಂಠದೇಶೇ ತು ಪ್ರತ್ಯೇಕಂ ಕರ್ಣಯೋಶ್ಚ ಷಟ್।
ಉರಸ್ಯಷ್ಟೋತ್ತರಶತಂ ಚತ್ವಾರಿಂಶಚ್ಚ ಮಸ್ತಕೇ॥
ಧಾರಯೇದ್ಯಸ್ತು ರುದ್ರಾಕ್ಷಂ ರುದ್ರವತ್ ಪೂಜ್ಯತೇ ಸದಾ ॥ ೪೨ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಖ್ಯಾ ನಿರೂಪಣ

ರುದ್ರಾಕ್ಷಗಳನ್ನು ಧರಿಸುವುದು ಪುಣ್ಯ. ಅದು ಯಾವುದಕ್ಕೆ ಸದೃಶವಾದೀತು? ಯಾರು ವ್ರತನಿಷ್ಠನಾಗಿ ಸಹಸ್ರ ರುದ್ರಾಕ್ಷಗಳನ್ನು ಧರಿಸುತ್ತಾನೋ ಅವನಿಗೆ ಸುರಾಸುರರು ನಮಿಸುತ್ತಾರೆ. ರುದ್ರನು ಹೇಗೋ ಅವನೂ ಹಾಗೆಯೇ. (೪೦). ಸಹಸ್ರ ರುದ್ರಾಕ್ಷಗಳು ಇಲ್ಲದಿದ್ದಾಗ ತೋಳುಗಳಲ್ಲಿ ಹದಿನಾರು ಹದಿನಾರು, ಶಿಖೆಯಲ್ಲಿ ಒಂದು, ಎರಡೂ ಮುಂಗೈಗಳಲ್ಲಿ ಹನ್ನೆರಡು ಹನ್ನೆರಡು, ಕಂಠದಲ್ಲಿ ಮೂವತ್ತೆರಡು, ಪ್ರತ್ಯೇಕವಾಗಿ ಕಿವಿಗಳಲ್ಲಿ ಆರು ಆರು, ಎದೆಯಲ್ಲಿ ನೂರಾ ಎಂಟು, ಮಸ್ತಕದಲ್ಲಿ ನಲವತ್ತು ರುದ್ರಾಕ್ಷಗಳನ್ನು ಯಾರು ಧರಿಸುವನೋ ಅವನು ರುದ್ರನಂತೆ ಪೂಜೆಗೊಳ್ಳುತ್ತಾನೆ. (೪೧-೪೨).

ಟಿಪ್ಪಣಿ : ಬೃಹಜ್ಜಾಬಾಲೋಪನಿಷತ್ ೭.೧೭ನ್ನು ನೋಡಿರಿ.

ಮುಕ್ತಾದಿನಾ ಸಹ ರುದ್ರಾಕ್ಷಧಾರಣಮ್

ಮುಕ್ತಾಪ್ರವಾಲಸ್ಫಟಿಕರೌಪ್ಯವೈಡೂರ್ಯಕಾಂಚನೈಃ।
ಧಾರಯೇದ್ಯಸ್ತು ರುದ್ರಾಕ್ಷಾನ್ ಸ ರುದ್ರೋ ನಾತ್ರ ಸಂಶಯಃ ॥ ೪೩ ॥

ಕೇವಲಂ ವಾಽಪಿ ರುದ್ರಾಕ್ಷಾನ್ ರುದ್ರಾಮುದ್ರಾನ್ ಬಿಭರ್ತಿ ಯಃ।
ತಂ ನ ಸ್ಪೃಶಂತಿ ಪಾಪಾನಿ ತಮಾಂಸೀವ ವಿಭಾವಸುಮ್ ॥ ೪೪ ॥

ಮುತ್ತು ಮುಂತಾದವುಗಳೊಂದಿಗೆ ರುದ್ರಾಕ್ಷಧಾರಣೆ

ಮುತ್ತು, ಹವಳ, ಸ್ಫಟಿಕ, ಬೆಳ್ಳಿ, ವೈಡೂರ್ಯ ಮತ್ತು ಚಿನ್ನದೊಂದಿಗೆ ಯಾರು ರುದ್ರಾಕ್ಷಗಳನ್ನು ಧರಿಸುತ್ತಾನೋ ಅವನು ರುದ್ರನೇ, ಇಲ್ಲಿ ಸಂಶಯವಿಲ್ಲ. (೪೩). ಕೇವಲ ರುದ್ರ ಚಿಹ್ನೆಗಳಾದ ರುದ್ರಾಕ್ಷಗಳನ್ನು ಮಾತ್ರ ಯಾರು ಧರಿಸುತ್ತಾನೋ ಅವನನ್ನು ಪಾಪಗಳು ಸೂರ್ಯನನ್ನು ಕತ್ತಲೆಗಳು ಹೇಗೋ ಹಾಗೆ ಮುಟ್ಟುವುದಿಲ್ಲ. (೪೪).

ರುದ್ರಾಕ್ಷಮಹಿಮಾ

ರುದ್ರಾಕ್ಷಮಾಲಯಾ ಜಪ್ತೋ ಮಂತ್ರೋಽನಂತಫಲಪ್ರದಃ।
ಅರುದ್ರಾಕ್ಷಜಪಃ ಪುಂಸಾಂ ತಾವನ್ಮಾತ್ರಫಲಪ್ರದಃ ॥ ೪೫ ॥

ಯಸ್ಯಾಂಗೇ ನಾಸ್ತಿ ರುದ್ರಾಕ್ಷ ಏಕೋಽಪಿ ಬಹುಪುಣ್ಯದಃ।
ತಸ್ಯ ಜನ್ಮ ನಿರರ್ಥಂ ಸ್ಯಾತ್ ತ್ರಿಪುಂಡ್ರರಹಿತಂ ಯಥಾ ॥ ೪೬ ॥

ಮೂರ್ಧ್ನಿ ವಿನ್ಯಸ್ಯ ರುದ್ರಾಕ್ಷಂ ಯಃ ಸ್ನಾತಿ ಮತಿಮಾನ್ನರಃ।
ಗಂಗಾಸ್ನಾನಫಲಂ ತಸ್ಯ ಜಾಯತೇ ನಾತ್ರ ಸಂಶಯಃ ॥ ೪೭ ॥

ಪೂಜಯೇದ್ಯಸ್ತು ರುದ್ರಾಕ್ಷಂ ಕೃತ್ವಾ ತೋಯಾಭಿಷೇಚನಮ್।
ಯತ್ಫಲಂ ಲಿಂಗ ಪೂಜಾಯಾಂ ತದೇವಾಪ್ನೋತಿ ನಿಶ್ಚಿತಮ್ ॥ ೪೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರುದ್ರಾಕ್ಷಮಹಿಮಾಽಪಾರಃ ಕಶ್ಚಿದುಕ್ತೋ ಮಯಾಽನಘ।
ಗೋಪನೀಯಃ ಪ್ರಯತ್ನೇನ ಕಿಮತಃ ಶ್ರೋತುಮಿಚ್ಛಸಿ ॥ ೪೯ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರ-
ಬೃಹಸ್ಪತಿಸಂವಾದೇ ಶಿವಶಾಸನೇ ಕ್ರಿಯಾಪಾದೇ ರುದ್ರಾಕ್ಷಸ್ವರೂಪ-
ನಿರೂಪಣಂ ನಾಮ ಸಪ್ತಮಃ ಪಟಲಃ ॥ ೭ ॥

ರುದ್ರಾಕ್ಷದ ಮಹಿಮೆ

ರುದ್ರಾಕ್ಷಮಾಲೆಯೊಂದಿಗೆ ಜಪಿಸಿದ ಮಂತ್ರವು ಅನಂತ ಫಲವನ್ನು ಕೊಡುತ್ತದೆ. ರುದ್ರಾಕ್ಷವಿಲ್ಲದೆ ಮಾಡಿದ ಜಪವು ಜನರಿಗೆ ಅಷ್ಟು ಮಾತ್ರ ಫಲವನ್ನು ಕೊಡುತ್ತದೆ. (೪೫). ಯಾರ ಶರೀರದ ಮೇಲೆ ಬಹುಪುಣ್ಯವನ್ನು ಕೊಡುವ ಒಂದಾದರೂ ರುದ್ರಾಕ್ಷವಿಲ್ಲವೋ ಅವನ ಜನ್ಮವು ತ್ರಿಪುಂಡ್ರವಿಲ್ಲದವನ ಹಾಗೆ ನಿರರ್ಥಕವಾಗುತ್ತದೆ. (೪೬). ರುದ್ರಾಕ್ಷವನ್ನು ತಲೆಯ ಮೇಲೆ ಇಟ್ಟುಕೊಂಡು ಯಾವ ಜ್ಞಾನಿಯು ಸ್ನಾನ ಮಾಡುತ್ತಾನೋ ಅವನಿಗೆ ಗಂಗಾಸ್ನಾನದ ಫಲವು ಉಂಟಾಗುತ್ತದೆ. ಈ ಬಗ್ಗೆ ಸಂಶಯವಿಲ್ಲ. (೪೭). ಯಾರು ರುದ್ರಾಕ್ಷವನ್ನು ನೀರಿನಿಂದ ಅಭಿಷೇಕ ಮಾಡಿ ಪೂಜಿಸುತ್ತಾನೋ ಅವನಿಗೆ ಯಾವ ಫಲವು ಲಿಂಗಪೂಜೆಯಿಂದ ದೊರೆಯುವುದೋ ಅದೇ ನಿಶ್ಚಿತವಾಗಿ ಪ್ರಾಪ್ತವಾಗುತ್ತದೆ. (೪೮). ಶ್ರೇಷ್ಠನೇ, ರುದ್ರಾಕ್ಷದ ಮಹಿಮೆ ಅಪಾರ. ಅದರಲ್ಲಿ ಕೆಲ ವಿಷಯವನ್ನು ನಾನು ಹೇಳಿದ್ದೇನೆ. ಇದನ್ನು ಪ್ರಯತ್ನ ಪೂರ್ವಕವಾಗಿ ರಹಸ್ಯವಾಗಿಡು. ಇನ್ನೇನು ಕೇಳಲು ಇಚ್ಛಿಸುವೆ? (೪೯).

ಇಲ್ಲಿಗೆ ಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ
ಅನಂತರುದ್ರಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಕ್ರಿಯಾಪಾದದಲ್ಲಿ
ರುದ್ರಾಕ್ಷಸ್ವರೂಪನಿರೂಪಣವೆಂಬ ಸಪ್ತಮ ಪಟಲ ಮುಗಿಯಿತು. (೭).

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಷ್ಟಮಃ ಪಟಲಃ

॥ ಪಂಚಾಕ್ಷರಸ್ವರೂಪನಿರೂಪಣಮ್॥

ಬೃಹಸ್ಪತಿರುವಾಚ

ಅನುತ್ತರಜ್ಞಾನನಿಧೇ ಪರಾನಂದಸುಧಾಂಬುಧೇ।
ಶ್ರೀಮದೀಯಮುಖಾಂಭೋಜಾನ್ಮಕರಂದಮಿವ ಸ್ರುತಮ್ ॥ ೧ ॥

ಮಹಿಮಾನಮಿಹಾಕರ್ಣ್ಯ ರುದ್ರಾಕ್ಷಾಣಾಮನುತ್ತಮಮ್।
ಸಂತೃಪ್ತೋ ವಿವಶಶ್ಚಾಸ್ಮಿ ಧನ್ಯೋಽಸ್ಮಿ ಸುರಸನ್ನುತ ॥ ೨ ॥

ಶ್ರೀಮತ್‌ಪಂಚಾಕ್ಷರಸ್ಯಾಪಿ ವಿಧಾನಂ ಮಹಿಮೋನ್ನತಿಮ್।
ಉಪದಿಶ್ಯ ಕೃಪಾದೃಷ್ಟ್ಯಾ ವಿಲೋಕ್ಯಾನುಗೃಹಾಣ ಮಾಮ್ ॥ ೩ ॥

ಬೃಹಸ್ಪತಿಯು ಹೇಳಿದನು

ಅಪ್ರತಿಮ ಜ್ಞಾನನಿಧಿಯೇ, ಪರಮಾನಂದಾಮೃತ ಸಾಗರವೇ, ದೇವತೆಗಳಿಂದ ಪೂಜಿತನೇ, ನಿಮ್ಮ ಶ್ರೀಮುಖಕಮಲದಿಂದ ಮಕರಂದದ ಹಾಗೆ ಬಂದ ರುದ್ರಾಕ್ಷಗಳ ಅನುಪಮ ಮಹಿಮೆಯನ್ನು ಕೇಳಿ ಸಂತೃಪ್ತನಾದೆ, ವಿವಶನಾದೆ, ಧನ್ಯನಾದೆ. (೧-೨). ಕೃಪಾದೃಷ್ಟಿಯಿಂದ ನೋಡಿ ಶ್ರೀಮತ್‌ಪಂಚಾಕ್ಷರ ಮಂತ್ರದ ವಿಧಾನವನ್ನು, ಮಹಿಮೆಯನ್ನು ಮತ್ತು ಉನ್ನತಿಯನ್ನು ಉಪದೇಶಿಸಿ ನನ್ನನ್ನು ಅನುಗ್ರಹಿಸು. (೩).

ಅನಂತರುದ್ರ ಉವಾಚ

ಅಧುನಾ ತೇ ಪ್ರವಕ್ಷ್ಯಾಮಿ ಪಂಚಾಕ್ಷರಮಹಾಮನೋಃ।
ಸ್ವರೂಪಂ ಮಹಿಮಾನಂ ಚ ಪುರಶ್ಚರ್ಯಾವಿಧಿಂ ಕ್ರಮಾತ್ ॥ ೪ ॥

ಅನಂತರುದ್ರನು ಹೇಳಿದನು

ಈಗ ನಿನಗೆ ಪಂಚಾಕ್ಷರ ಮಹಾಮಂತ್ರದ ಸ್ವರೂಪ, ಮಹಿಮೆ ಮತ್ತು ಪುರಶ್ಚರಣ ವಿಧಿಗಳನ್ನು ಕ್ರಮವಾಗಿ ಹೇಳುತ್ತೇನೆ. (೪).

೮. ಪಂಚಾಕ್ಷರಮಂತ್ರಸ್ವರೂಪಂ ಮಹಿಮಾ ಚ

ಆದೌ ನಮಃ ಪ್ರಯೋಕ್ತವ್ಯಂ ಶಿವಾಯೇತಿ ತತಃ ಪರಮ್।
ಸೈಷಾ ಪಂಚಾಕ್ಷರೀ ವಿದ್ಯಾ ಸರ್ವಶ್ರುತಿಶಿರೋಗತಾ ॥ ೫ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಬ್ದಜಾತಸ್ಯ ಸರ್ವಸ್ಯ ಬೀಜಭೂತಾ ಸಮಾಸತಃ।
ಆದೌ ಶಿವಮುಖೋದ್ಗೀರ್ಣಾ ಸಾ ತಸ್ಯೈವಾತ್ಮವಾಚಿಕಾ ॥ ೬ ॥

ಸಪ್ತಚಾಮೀಕರಪ್ರಖ್ಯಾ ಪೀನೋನ್ನತಪಯೋಧರಾ।
ಚತುರ್ಭುಜಾ ತ್ರಿನಯನಾ ಬಾಲೇಂದುಕೃತಶೇಖರಾ ॥ ೭ ॥

ಪದ್ಮೋತ್ಪಲಧರಾ ಸೌಮ್ಯಾ ವರದಾಽಭಯಪಾಣಿಕಾ।
ಸರ್ವಲಕ್ಷಣಸಂಪನ್ನಾ ಸರ್ವಾಭರಣಭೂಷಿತಾ ॥ ೮ ॥

ಸಿದ್ಧಪದ್ಮಾಸನಾಸೀನಾ ನೀಲಕುಂಚಿತಮೂರ್ಧಜಾ।
ಇಯಂ ಪ್ರಣವಪೂರ್ವಾ ತು ಷಡಕ್ಷರೀತಿ ಕಥ್ಯತೇ ॥ ೯ ॥

ಪಂಚಾಕ್ಷರಮಂತ್ರದ ಸ್ವರೂಪ ಮತ್ತು ಮಹಿಮೆ

ಆರಂಭದಲ್ಲಿ 'ನಮಃ' ಶಬ್ದವನ್ನು ಪ್ರಯೋಗಿಸಬೇಕು, ಅನಂತರ 'ಶಿವಾಯ' ಎಂದು ಪ್ರಯೋಗಿಸಬೇಕು. ಇದೇ ಪಂಚಾಕ್ಷರೀ ವಿದ್ಯೆ (ಮಂತ್ರ). ಅದು ಎಲ್ಲಾ ಶ್ರುತಿಗಳ ಶಿರೋಭಾಗದಲ್ಲಿದೆ. (೫). ಎಲ್ಲಾ ಶಬ್ದ ಸಮೂಹದ ಸಂಕ್ಷಿಪ್ತವಾದ ಬೀಜ ಸ್ವರೂಪವನ್ನು ಹೊಂದಿದೆ. ಅದು ಮೊಟ್ಟ ಮೊದಲಿಗೆ ಶಿವನ ಮುಖದಿಂದ ಹೊಮ್ಮಿತು, ಅದು ಶಿವನ ಆತ್ಮವಾಚಕ. (೬). ಈ ಪಂಚಾಕ್ಷರೀ ವಿದ್ಯೆಯು ಕಾದ ಚಿನ್ನದಂತೆ ಹೊಳೆಯುವಳು; ಉಬ್ಬಿದ ಉನ್ನತ ಸ್ತನಗಳುಳ್ಳವಳು, ನಾಲ್ಕು ಭುಜಗಳುಳ್ಳವಳು, ಮೂರು ಕಣ್ಣುಳ್ಳವಳು, ಬಾಲಚಂದ್ರನನ್ನು ಶಿರದಲ್ಲಿ ಭೂಷಣದಂತೆ ಧರಿಸಿರುವಳು, ಪದ್ಮ ಮತ್ತು ಉತ್ಪಲಗಳನ್ನು ಧರಿಸಿದವಳು, ಸೌಮ್ಯಸ್ವರೂಪಳು, ವರಪ್ರದಳು, ಅಭಯ ಹಸ್ತವನ್ನು ತೋರುವವಳು, ಸರ್ವಲಕ್ಷಣಗಳಿಂದ ಕೂಡಿದವಳು, ಎಲ್ಲಾ ಆಭರಣಗಳಿಂದ ಭೂಷಿತಳಾದವಳು, ಸಿದ್ಧ ಪದ್ಮಾಸನ ಸ್ಥಿತಿಯಲ್ಲಿ ಕುಳಿತಿರುವವಳು, ನೀಲವರ್ಣದ ಗುಂಗುರು ಕೂದಲುಳ್ಳವಳು; ಇವಳೇ ಪ್ರಣವ ಪೂರ್ವಕಳಾಗಿದ್ದರೆ ಷಡಕ್ಷರೀ ಎಂದು ಕರೆಯಲ್ಪಡುವಳು. (೭-೯).

ಟಿಪ್ಪಣಿ : "ಮನನತ್ರಾಣಧರ್ಮಿತ್ವಾನ್ಮಂತ್ರ ಇತ್ಯಭಿಧೀಯತೇ" ಪರಮಾತ್ಮನನ್ನು ಮನನ ಮಾಡಿಕೊಳ್ಳುವುದು, ನೆನೆಯುವುದು ಮತ್ತು ನೆನೆವನನ್ನು ರಕ್ಷಿಸುವುದು ಮಂತ್ರ (ವಾತುಲಶುದ್ಧಾಗಮ ೫.೮). 'ಮನನಾತ್ ತ್ರಾಯತೇ ಇತಿ ಮಂತ್ರಃ' ಎಂಬ ನಿಷ್ಪತ್ತಿಗೆ ಅನುಗುಣವಾಗಿ ಮೇಲಿನ ಮಂತ್ರದ ಲಕ್ಷಣ. ಸೂಕ್ಷ್ಮಾಗ್ರಮದಲ್ಲಿಯೂ ಹೀಗೆ ಹೇಳಿದೆ "ನಮಃ ಶಬ್ದಂ ವದೇತ್ ಪೂರ್ವಂ ಯಾಂತಂ ಶಿವಪದಂ ತತಃ। ಪ್ರಣವೇನ ಸಮಾಯುಕ್ತಂ ಷಡಕ್ಷರಮಿತಿ ಸ್ಮೃತಮ್॥" (ಕ್ರಿ.ಪಾ.೩.೧೩). ಇದು ಮಂತ್ರದ ಸ್ವರೂಪ. ಈ ಆಗಮದಲ್ಲಿ ಈ ಪಂಚಾಕ್ಷರ ಮಹಾವಿದ್ಯೆಯು 'ಸರ್ವಶ್ರುತಿಶಿರೋಗತಾ' ಎಂದು ವರ್ಣಿಸಲ್ಪಟ್ಟಿದೆ. ಅದನ್ನು ಸೂಕ್ಷ್ಮಾಗ್ರಮದಲ್ಲಿ "ವೇದಾಗಮೇಷು ಸರ್ವೇಷು ಸಂಸ್ಥಿತೋಽಯಂ ಮಹಾಮನುಃ" (ಕ್ರಿ.ಪಾ. ೩.೧೪) ಎಂದು ಹೇಳಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಷಡಕ್ಷರೀ ವಿದ್ಯಾ

ದ್ವಿಜೈರಿಯಂ ತು ಜಪ್ತವ್ಯಾ ನಿತ್ಯಂ ಪ್ರಣವಪೂರ್ವಿಕಾ।
ಸ್ತ್ರೀಭಿಃ ಶೂದ್ರೈಶ್ಚ ಜಪ್ತವ್ಯಾ ನಮೋಽಂತಾ ಪ್ರಣವಂ ವಿನಾ ॥ ೧೦ ॥

ಷಡಕ್ಷರೀ ವಿದ್ಯೆ

ಇದನ್ನು ದ್ವಿಜರು (ತ್ರೈವರ್ಣಿಕರು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ) ಯಾವಾಗಲೂ ಓಂಕಾರ ಪೂರ್ವಕವಾಗಿ ಜಪಿಸಬೇಕು. ಸ್ತ್ರೀಯರು ಮತ್ತು ಶೂದ್ರರು ಆ ಮಂತ್ರವನ್ನು 'ನಮಃ' ಪದವು ಕೊನೆಗೆ ಬರುವಂತೆ ಪ್ರಣವವಿಲ್ಲದೆ ಜಪಿಸಬೇಕು (೧೦).

ಟಿಪ್ಪಣಿ : ಸೂಕ್ಷ್ಮಾಗ್ರಮವು ಕೂಡ "ಪ್ರಣವೇನ ವಿನಾ ದದ್ಯಾತ್ ಸ್ತ್ರೀ ಶೂದ್ರಾಣಾಮಿಮಂ ಮನುಮ್। ಯದಿ ದದ್ಯಾತ್ಸಪ್ರಣವಮುಭಯೋಃ ಪತನಂ ಭವೇತ್॥" (ಕ್ರಿ.ಪಾ. ೩.೨೨) "ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಈ ಮಂತ್ರವನ್ನು ಪ್ರಣವರಹಿತವಾಗಿ ಕೊಡಬೇಕು. ಒಂದು ಪಕ್ಷ ಅವರಿಗೆ ಪ್ರಣವ ಸಹಿತವಾಗಿ ಕೊಟ್ಟರೆ ಉಪದೇಶ ಮಾಡಿದವನು ಮತ್ತು ಉಪದೇಶ ಪಡೆದವರಿಬ್ಬರಿಗೂ ಪತನವುಂಟಾಗುತ್ತದೆ." ಆದರೆ 'ಶಿವಾಯ ನಮಃ' ಎಂದು ಅದನ್ನು ನಮೋಽಂತವಾಗಿ ಸ್ತ್ರೀ ಶೂದ್ರರಿಗೆ ಬೋಧಿಸಬೇಕು ಎಂಬ ಚಂದ್ರಜ್ಞಾನಾಗಮದ ನಿಯಮವು ಸೂಕ್ಷ್ಮಾಗ್ರಮದಲ್ಲಿ ಇಲ್ಲ. ಹಾಗಾದರೆ "ಶಿವಾಯನಮಃ" ಎಂಬುದು ಮಂತ್ರದ ಕ್ರಮವಲ್ಲ. "ನಮಃ ಶಿವಾಯ" ಎಂಬುದು ಮಂತ್ರದ ಕ್ರಮ. ಕ್ರಮ ವ್ಯತ್ಯಾಸವಾದ ಅದು ಹೇಗೆ ಮಂತ್ರವಾದೀತು ಎಂಬ ಸಂಶಯವಂತೂ ಉಂಟಾಗುತ್ತದೆ. ಅಲ್ಲದೆ ಸ್ತ್ರೀ ಶೂದ್ರರಿಗೆ ಓಂಕಾರವಿಲ್ಲದೆ ಉಪದೇಶಿಸಬೇಕು ಎಂಬುದು ಇಲ್ಲಿ ಮತ್ತು ಸೂಕ್ಷ್ಮಾಗ್ರಮದಲ್ಲಿ ಬಂದಿದ್ದರೂ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಈ ಭೇದವು ಎಲ್ಲಿಯೂ ಕಂಡು ಬರುವುದಿಲ್ಲ. ಪಾರಮೇಶ್ವರಾಗಮವೂ ಇದನ್ನು ಹೇಳದೆ "ಅಂತ್ಯಜೋ ವಾಽಧಮೋ ವಾಪಿ ಮೂರ್ಖೋ ವಾ ಪಂಡಿತೋಽಪಿ ವಾ। ಪಂಚಾಕ್ಷರಜಪೇ ನಿಷ್ಠೋ ಮುಚ್ಯತೇ ಪಾಶಬಂಧನಾತ್॥" (೧೧.೨೭) "ಅಂತ್ಯಜನಾಗಿರಲಿ ಅಥವಾ ಅಧಮನಾಗಿರಲಿ, ಮೂರ್ಖನಾಗಲಿ ಅಥವಾ ಪಂಡಿತನಾಗಿರಲಿ ಪಂಚಾಕ್ಷರ ಜಪ ಮಾಡುವುದರಲ್ಲಿ ನಿಷ್ಠನಾದವನು ಪಾಶ ಬಂಧನಗಳಿಂದ ಮುಕ್ತನಾಗುವನು" ಹೀಗೆ ಹೇಳುವ ಮೂಲಕ ಎಲ್ಲರಿಗೂ ತಾರತಮ್ಯವಿಲ್ಲದೆ ಮಂತ್ರೋಪದೇಶವೆಂಬ ಸೂಚನೆಯನ್ನು ಕೊಡುತ್ತದೆ.

ಋಷ್ಯಾದಿನ್ಯಾಸಃ

ವಾಮದೇವ ಋಷಿಶ್ಚಾಸ್ಯ ಪಂಕ್ತಿಶ್ಛಂದ ಉದಾಹೃತಃ।
ದೇವತಾ ಸ ಶಿವಃ ಸಾಕ್ಷಾತ್ ಪ್ರಣವೋ ಬೀಜ ಉಚ್ಯತೇ॥
ಉಮಾ ಶಕ್ತಿರಿತಿ ಪ್ರೋಕ್ತಾ ನ್ಯಾಸಶ್ಚೈವಂ ಷಡಕ್ಷರೈಃ ॥ ೧೧ ॥

ಋಷಿ ಮುಂತಾದ ನ್ಯಾಸ

ಇದರ (ಈ ಮಂತ್ರದ) ಋಷಿಯು ವಾಮದೇವ, ಛಂದಸ್ಸು, ಪಂಕ್ತಿಯೆಂದು ಹೇಳಲ್ಪಟ್ಟಿದೆ, ದೇವತೆ ಸಾಕ್ಷಾತ್ ಶಿವ, ಬೀಜವು ಪ್ರಣವವೆಂದು ಹೇಳಲ್ಪಟ್ಟಿದೆ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಕ್ತಿಯು ಉಮೆಯೆಂದು ಹೇಳಲ್ಪಟ್ಟಿರುವಳು, (ಕೀಲಕವು ಶಿವನು), ಈ ಆರು ಅಕ್ಷರಗಳಿಂದ ನ್ಯಾಸ ಮಾಡಿಕೊಳ್ಳಬೇಕು. (೧೧).

ಟಿಪ್ಪಣಿ : ನೋಡಿರಿ "ಅಸ್ಯಮಂತ್ರಸ್ಯ ವಕ್ಷ್ಯಾಮಿ ಶೃಣು ಋಷ್ಯಾದಿಕಂ ಪ್ರಿಯೇ। ವಾಮದೇವ ಋಷಿಃ ಪಂಕ್ತಿಶ್ಛಂದೋ ದೇವಃ ಶಿವಃ ಪ್ರಭುಃ।। ಬೀಜಂ ಪ್ರಣವ ಏವ ಸ್ಯಾನ್ನಮಃ ಶಕ್ತಿರುದಾಹೃತಾ। ಶಿವಾಯ ಕೀಲಕಂ ಮೋಕ್ಷೇ ವಿನಿಯೋಗಃ ಪ್ರಕೀರ್ತಿತಃ।। (ಸೂಕ್ಷ್ಮಾಗ್ರಮ ೩.೨೩-೨೪). ಇಲ್ಲಿ ನಮಃ ಎಂಬುದು ಶಕ್ತಿಯೆಂದು ಹೇಳಿದೆ. ಇದರ ನ್ಯಾಸವು ಹೀಗಿದೆ-"ಋಷಿಂ ಮೂರ್ಧ್ನಿ ಮುಖೇ ಛಂದಃ ದೇವತಾಂ ಹೃದಿ ವಿನ್ಯಸೇತ್। ಆಧಾರೇ ಬೀಜ ಶಕ್ತಿಂ ಚ ಪಾದಯೋಃ ಕೀಲಕಂ ನ್ಯಸೇತ್।।" (ಲಿಂಗಧಾರಣ ಚಂದ್ರಿಕೆ, ಪು. ೨೩೪). ಮಸ್ತಕದಲ್ಲಿ ಋಷಿಯನ್ನು, ಮುಖದಲ್ಲಿ ಛಂದಸ್ಸನ್ನು, ಹೃದಯದಲ್ಲಿ ದೇವತೆಯನ್ನು, ನಾಭಿಯಲ್ಲಿ ಬೀಜವನ್ನು, ಗುಹ್ಯದಲ್ಲಿ ಶಕ್ತಿಯನ್ನು, ಪಾದಗಳಲ್ಲಿ ಕೀಲಕವನ್ನು ನ್ಯಾಸಮಾಡಿ ಕೊಳ್ಳಬೇಕು ಎಂಬ ನ್ಯಾಸವೂ ಇದೆ. ಆ ನ್ಯಾಸದ ಪದ್ಧತಿ ಹೀಗಿದೆ: ಬಲಗೈ ಮುಷ್ಟಿಯನ್ನು ಕಟ್ಟಿ ಅದರ ಅಂಗುಷ್ಠದಿಂದ ಮಸ್ತಕವನ್ನು ಮುಟ್ಟಿ ಅಲ್ಲಿ ಋಷಿಯನ್ನೂ, ಮುಷ್ಟಿ ಬಿಚ್ಚಿ ಅಂಗುಷ್ಠ ಮತ್ತು ತರ್ಜನಿ ಬೆರಳುಗಳಿಂದ ಮುಖ (ಬಾಯನ್ನು) ಮುಟ್ಟಿ ಛಂದಸ್ಸನ್ನೂ, ಅಂಗುಷ್ಠ ಮತ್ತು ಮಧ್ಯಮಾ ಬೆರಳುಗಳಿಂದ ಹೃದಯವನ್ನು ಸ್ಪರ್ಶಿಸಿ ಅಲ್ಲಿ ದೇವತೆಯನ್ನೂ, ಅಂಗುಷ್ಠ ಮತ್ತು ಅನಾಮಿಕೆಗಳಿಂದ ನಾಭಿಯನ್ನು ಸ್ಪರ್ಶಿಸಿ ಅಲ್ಲಿ ಬೀಜವನ್ನೂ, ಅಂಗುಷ್ಠ ಮತ್ತು ಕನಿಷ್ಠೆಗಳಿಂದ ಗುಹ್ಯವನ್ನು ಸ್ಪರ್ಶಿಸಿ ಅಲ್ಲಿ ಶಕ್ತಿಯನ್ನೂ ಮತ್ತು ಎರಡೂ ಕೈಗಳ ತರ್ಜನಿ ಬೆರಳುಗಳನ್ನು ಹೊರತುಪಡಿಸಿ ಕಟ್ಟಿದ ಮುಷ್ಟಿಗಳಿಂದ ಕ್ರಮವಾಗಿ ಬಲಮುಷ್ಟಿಯನ್ನು ಎಡದಿಂದ ಬಲಕ್ಕೆ ಎಡಮುಷ್ಟಿಯನ್ನು ಬಲದಿಂದ ಎಡಕ್ಕೆ ಮಸ್ತಕದ ಪರಿಕ್ರಮವನ್ನು ಮಾಡಿ ಬಲ ತರ್ಜನಿಯಿಂದ ಬಲಪಾದದ ಅಂಗುಷ್ಠವನ್ನು ಎಡ ತರ್ಜನಿಯಿಂದ ಎಡಪಾದದ ಅಂಗುಷ್ಠವನ್ನು ಸ್ಪರ್ಶಿಸುತ್ತಾ ಎರಡೂ ಪಾದಗಳಲ್ಲಿ ಕೀಲಕದ ನ್ಯಾಸವನ್ನೂ ಮಾಡಬೇಕು.

ಜಪವಿಧಾನಮ್

ಧ್ಯಾತ್ವಾ ಸಂಪೂಜ್ಯ ಮನಸಿ ಬಾಹ್ಯೇ ವಾ ಪರಮೇಶ್ವರಮ್।
ಜಪಂ ಕುರ್ಯಾತ್ ಪ್ರಯತ್ನೇನ ಧ್ಯಾಯನ್ ಸಾಂಬಂ ತ್ರಿಯಂಬಕಮ್ ।। ೧೨ ।।

ಸಹಸ್ರಂ ವಾ ತದರ್ಧಂ ವಾ ಶತಂ ವಾऽಥ ಜಪೇನ್ಮನುಮ್।
ಏವಂ ಯಃ ಕುರುತೇ ನಿತ್ಯಂ ಸ ಶಿವೋ ಹಿ ನ ಸಂಶಯಃ ।। ೧೩ ।।

ಜಪದ ವಿಧಾನ

ಧ್ಯಾನ ಮಾಡಿ ಮನಸ್ಸಿನಲ್ಲಾಗಲಿ ಬಾಹ್ಯದಲ್ಲಾಗಲಿ ಪರಮೇಶ್ವರನ ಪೂಜೆ ಮಾಡಿ, ಅಂಬಾ ಸಹಿತ ತ್ರ್ಯಂಬಕನನ್ನು ಧ್ಯಾನಿಸುತ್ತಾ ಏಕಾಗ್ರತೆಯಿಂದ ಜಪವನ್ನು ಮಾಡಬೇಕು. (೧೨). ಸಹಸ್ರ ಬಾರಿಯಾಗಲಿ ಅಥವಾ ಅದರಲ್ಲಿ ಅರ್ಧದಷ್ಟು ಸಾರಿಯಾಗಲಿ ಅಥವಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೂರು ಸಾರಿಯಾಗಲಿ ಮಂತ್ರವನ್ನು ಜಪಿಸಬೇಕು. ಹೀಗೆ ಯಾರು ಮಾಡುತ್ತಾನೋ ಅವನು ನಿತ್ಯವೂ ಶಿವನೇ, ಸಂಶಯವಿಲ್ಲ. (೧೩).

ಟಿಪ್ಪಣಿ : ಹೋಲಿಸಿರಿ : "ಆವಾಹನಾದಿ ಷಣ್ಮುದ್ರಾ ದರ್ಶಯಿತ್ವಾಥ ಸಾಧಕಃ। ಗಂಗಾಧಿಪಂ ಚ ಮುದ್ರಾಭಿರ್ಮಾನಸೈರುಪಚಾರಕೈಃ। ಪಂಚಭಿಃ ಪೂಜಯಿತ್ವಾ ತು ಜಪೇನ್ಮಂತ್ರಂ ನಿರಾಕುಲಮ್॥" (ಸೂಕ್ಷ್ಮಾಗ್ರಮ ಕ್ರಿ.ಪಾ.೩.೩೮) 'ಸಾಧಕನು ಆವಾಹನವೇ ಮುಂತಾದ (ಆರು ಪ್ರಕಾರದ) ಮುದ್ರೆಗಳನ್ನು ತೋರಿಸಿ ಶಿವನನ್ನು ಐದು ಮಾನಸ ಉಪಚಾರಗಳಿಂದ ಪೂಜಿಸಿ ಮಂತ್ರವನ್ನು ಅಡೆತಡೆಯಿಲ್ಲದೆ ಜಪಿಸಬೇಕು.'

ವರ್ಣಾದಿನಿರೂಪಣಮ್

ಅಸ್ಯಾಃ ಪಂಚವಿಧಾ ವರ್ಣಾಃ ಪ್ರಸ್ಫುರದ್ರಶ್ಮಿಮಂಡಲಾಃ।
ಪೀತಃ ಶ್ವೇತಸ್ತಥಾ ರಕ್ತೋ ಹರಿತೋ ನೀಲ ಏವ ಚ ॥ ೧೪ ॥

ಪೃಥಕ್ ಪ್ರೋಚ್ಯ ಯದ್ಯೇತೇ ಬಿಂದುನಾದವಿಭೂಷಿತಾಃ।
ಅರ್ಧಚಂದ್ರಾಕೃತಿರ್ಬಿಂದುರ್ನಾದೋ ದೀಪಶಿಖಾಕೃತಿಃ ॥ ೧೫ ॥

ಪಂಚಬ್ರಹ್ಮಮುಖಾನ್ಯಾಹುಃ ಸ್ಥಾನಂ ತೇಷಾಂ ಸುರೋತ್ತಮ।
ಪೂರ್ವಾದಿ ಚೋರ್ಧ್ವಪರ್ಯಂತಂ ನಕಾರಾದಿ ಯಥಾಕ್ರಮಮ್॥ ೧೬ ॥

ಬಣ್ಣ ಮುಂತಾದವುಗಳ ನಿರೂಪಣೆ

ಇದರ (ಈ ಪಂಚಾಕ್ಷರ ವಿದ್ಯೆಯ) ಐದು ವಿಧ ಬಣ್ಣಗಳು ರಶ್ಮಿಮಂಡಲದ ಪ್ರಭೆಯನ್ನು ಹರಡುತ್ತಾ ಹಳದಿ, ಬಿಳುಪು, ಕೆಂಪು, ಹಸಿರು ಮತ್ತು ನೀಲಿಗಳಾಗಿವೆ. (೧೪). ಒಂದು ಪಕ್ಷ ಇವುಗಳನ್ನು ಬೇರೆ ಬೇರೆಯಾಗಿ ಉಚ್ಚರಿಸುವುದಾದರೆ ಬಿಂದು ಮತ್ತು ನಾದಗಳ ಸಹಿತ ಉಚ್ಚರಿಸ ಬೇಕಾಗುತ್ತದೆ. ಆಗ ಬಿಂದುವಿನ ಸ್ವರೂಪ ಅರ್ಧ ಚಂದ್ರನ ಹಾಗೆ ಮತ್ತು ನಾದದ ಸ್ವರೂಪ ದೀಪಶಿಖೆಯಂತೆ. (೧೫). ಓ ಸುರಶ್ರೇಷ್ಠನೆ, ಅವುಗಳ ಸ್ಥಾನವು ಪಂಚಬ್ರಹ್ಮರ ಪಂಚ ಮುಖಗಳೆಂದು ಹೇಳುತ್ತಾರೆ. ಪೂರ್ವ ಮುಖದಿಂದ ಹಿಡಿದು ಊರ್ಧ್ವ ಮುಖದವರೆಗೆ ನಕಾರಾದಿಗಳ ಸ್ಥಾನಗಳಾಗಿವೆ. (೧೬).

ಟಿಪ್ಪಣಿ : ಪಾರಮೇಶ್ವರಾಗಮ, ೧೧.೩೫-೩೬, ಇದರೊಂದಿಗೆ ಹೋಲಿಸಿರಿ. ನಕಾರಾದಿಗಳ ಸ್ಥಾನದ ಬಗ್ಗೆಯೂ ಪಾರಮೇಶ್ವರಾಗಮ, ೧೧-೪೨ರಲ್ಲಿ ಅದೇ ವಿಚಾರ ಬಂದಿದೆ.

ಮಂತ್ರಸ್ಯ ನಾಮಾಂತರಾಣಿ

ಮೂಲಂ ವಿದ್ಯಾ ಶಿವಂ ಚೈವ ಸೂತ್ರಂ ಪಂಚಾಕ್ಷರಸ್ತಥಾ।
ನಾಮಾನ್ಯಸ್ಯ ವಿಜಾನೀಯಾದೋಂಕಾರೋ ಹೃದಯಂ ಮತಮ್ ॥ ೧೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂತ್ರದ ಬೇರೆ ಹೆಸರುಗಳು

ಮೂಲ, ವಿದ್ಯಾ, ಶಿವ (ಶೈವ) ಸೂತ್ರ, ಪಂಚಾಕ್ಷರ ಈ ಐದು ಮಂತ್ರದ ಹೆಸರುಗಳೆಂದು ತಿಳಿಯಬೇಕು. ಓಂಕಾರವು ಅದರ ಹೃದಯವೆಂದು ಅಭಿಮತ. (೧೭).

ಟಿಪ್ಪಣಿ : ಪಾರಮೇಶ್ವರಾಗಮದಲ್ಲಿ ಶೈವಸೂತ್ರವೆಂದು, ಸ್ಪಷ್ಟವಾಗಿ ಹೇಳಿದೆ ಮತ್ತು ಷಡಕ್ಷರವೆಂದು ಇನ್ನೊಂದು ಹೆಸರು ಬಂದಿದೆ "ಮೂಲಂ ವಿದ್ಯಾ ಶಿವಃ ಶೈವಂ ಸೂತ್ರಂ ಪಂಚಾಕ್ಷರಂ ತಥಾ। ಷಡಕ್ಷರಂ ಚ ತಸ್ಯಾಹುರ್ನಾಮಾನಿ ಮುನಯೋ ಮನೋಃ॥" (೧೧.೪೪). ಶ್ರೀಸಿದ್ಧಾಂತಶಿಖಾಮಣಿ, ೮.೨೩ನ್ನೂ ನೋಡಿರಿ.

ಮಂತ್ರಾಂಗಾನಿ

ನಕಾರಃ ಶಿವ ಉಚ್ಯೇತ ಮಕಾರಸ್ತು ಶಿಖೋಚ್ಯತೇ।
ಶಿಕಾರಃ ಕವಚಂ ತದ್ವದ್ವಾಕಾರೋ ನೇತ್ರಮುಚ್ಯತೇ ॥ ೧೮ ॥

ಯಕಾರೋಽಸ್ತ್ರಂ ನಮಃ ಸ್ವಾಹಾ ವಷಟ್ ಹುಂ ವೌಷಡಿತ್ಯಪಿ।
ಫಡಿತ್ಯಪಿ ಚ ವರ್ಣಾನಾಂ ಮಂತ್ರಾಂಗತ್ವಂ ಯಥಾ ತಥಾ ॥ ೧೯ ॥

ವರ್ಣಂ ದೈವಂ ತಥಾ ಶಕ್ತಿರಾಧಾರಂ ಛಂದ ಏವ ಚ।
ಋಷಿಃ ಸ್ಥಾನಂ ಬ್ರಹ್ಮ ಚಾಥ ಆಯುಧಂ ತು ತಥೈವ ಚ ॥ ೨೦ ॥

ಕಲಾ ಗುಣಶ್ಚ ಚಕ್ರಂ ಚ ಪ್ರಕಾಶಃ ಕರಣಂ ತಥಾ।
ವಾಯುರ್ಜ್ಞಾನೇಂದ್ರಿಯಂ ಚೈವ ಷೋಡಶೈತೇ ಕ್ರಮೋದಿತಾಃ ॥ ೨೧ ॥

ಮಂತ್ರದ ಅಂಗಗಳು

ನಕಾರವು ಶಿರಸ್ಸು, ಮಕಾರವು ಶಿಖೆ, ಶಿಕಾರವು ಕವಚ, ಅದೇ ರೀತಿ ವಾಕಾರವು ನೇತ್ರ ಮತ್ತು ಯಕಾರವು ಅಸ್ತ್ರ ಎಂದು ಹೇಳಲ್ಪಟ್ಟಿವೆ. ನಮಃ, ಸ್ವಾಹಾ, ವಷಟ್, ಹುಂ, ವೌಷಟ್, ಫಟ್ ಎಂಬ ಆರು ಶಬ್ದಗಳು ಮಂತ್ರದ ಅಂಗವಾಗುತ್ತವೆ. (೧೮-೧೯). ವರ್ಣ (ಬಣ್ಣ), ದೈವ, ಶಕ್ತಿ, ಆಧಾರ, ಛಂದಸ್, ಋಷಿ, ಸ್ಥಾನ, ಬ್ರಹ್ಮ ಆಯುಧ, ಕಲೆ, ಗುಣ, ಚಕ್ರ, ಪ್ರಕಾಶ, ಕರಣ, ವಾಯು, ಜ್ಞಾನೇಂದ್ರಿಯ, ಹೀಗೆ ಷೋಡಶ (ಹದಿನಾರು) ವಿಷಯಗಳನ್ನು ಹೇಳಲಾಗಿದೆ. (೨೦-೨೧).

ಟಿಪ್ಪಣಿ : ಪಾರಮೇಶ್ವರಾಗಮವು ಇನ್ನೂ ಹೆಚ್ಚಿನ ವಿವರಗಳನ್ನು ಕೊಡುತ್ತದೆ: "ಹೃದಯಂ ಮೂಲವಿದ್ಯೇಯಂ ನಕಾರಃ ಶಂಕರಃ ಶಿರಃ। ಶಿಖಾ ಮಕಾರಃ ಕವಚಂ ಶಿಕಾರೋ ವಾಪಿ ದೃಕ್‌ತ್ರಯಮ್॥ ಯಕಾರೋಽಸ್ತ್ರಂ ನಮಃ ಸ್ವಾಹಾ ವಷಡ್ ಹುಂ ಚ ಯಥಾಕ್ರಮಮ್। ವೌಷಟ್ ಫಡಿತಿ ದೇವೇಶಿ ಪಲ್ಲವಾಃ ಷಟ್ ಪ್ರಕೀರ್ತಿತಾಃ॥" (೧೧.೪೫-೪೭). ಇಲ್ಲಿ ಮೂಲ ವಿದ್ಯೆಯು (ಮಂತ್ರವು) ಹೃದಯ; ಶಂಕರ ಸ್ವರೂಪ ನಕಾರವು ಶಿರಸ್ಸು, ಮಕಾರವು ಶಿಖೆ, ಶಿಕಾರವು ಕವಚ, ವಾಕಾರವು ಮೂರು ಕಣ್ಣುಗಳು, ಯಕಾರವು ಅಸ್ತ್ರ, ನಮಃ, ಸ್ವಾಹಾ, ವಷಡ್, ಹುಂ, ವೌಷಟ್, ಫಟ್ ಎಂಬ ಆರು ಪಲ್ಲವಗಳು. ಇವುಗಳು ಮಂತ್ರದ ಅಂಗಗಳು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಕಾರಸ್ಯ ಷೋಡಶರೂಪತಾ

ನಕಾರಂ ಪೀತವರ್ಣಂ ಸ್ಯಾದ್ ಬ್ರಹ್ಮಾತ್ರಾಧಿದೈವತಮ್।
ಸಾವಿತ್ರೀ ಶಕ್ತಿರಿತ್ಯುಕ್ತಾ ಚಾಧಾರಂ ಪೃಥಿವೀ ತಥಾ ॥ ೨೨ ॥

ಅನುಷ್ಟುಪ್‌ಛಂದಸಾ ಯುಕ್ತಂ ವಾಸಿಷ್ಠಾರ್ಷಂ ತಥೈವ ಹಿ।
ಸ್ಥಾನಂ ಪಶ್ಚಿಮತೋ ವಕ್ತ್ರಂ ಸದ್ಯೋಜಾತಂ ತು ಬ್ರಹ್ಮಕಮ್ ॥ ೨೩ ॥

ಆಯುಧಂ ವಜ್ರಮೇವೋಕ್ತಂ ಕಲಾ ನಿವೃತ್ತಿರೇವ ಚ ।
ಗುಣಃ ಕಠಿನ ಏವೋಕ್ತಶ್ಚಕ್ರಂ ತು ಚತುರಶ್ರಕಮ್ ॥ ೨೪ ॥

ಜ್ವಲದಗ್ನೇಃ ಪ್ರಕಾಶಸ್ತು ಕರಣಂ ಮನ ಏವ ಚ।
ಪ್ರಾಣವಾಯುಸಮಾಯುಕ್ತಂ ಘ್ರಾಣಂ ಜ್ಞಾನೇಂದ್ರಿಯೋ ಭವೇತ್॥
ಇತ್ಯೇವಂ ಷೋಡಶಾನಾಂ ತು ನಕಾರಾಕ್ಷರ ಮುಚ್ಯತೇ ॥ ೨೫ ॥

ನಕಾರದ ಹದಿನಾರು ರೂಪಗಳು

ನಕಾರವು ಹಳದಿ ಬಣ್ಣವುಳ್ಳದ್ದು, ಬ್ರಹ್ಮನು ಅದರ ಅಧಿದೈವತೆ, ಸಾವಿತ್ರಿ ಶಕ್ತಿ, ಆಧಾರ ಪೃಥಿವಿ, ಛಂದಸ್ ಅನುಷ್ಟುಪ್, ಋಷಿಯು ವಸಿಷ್ಠ, ಸ್ಥಾನ ಪಶ್ಚಿಮಮುಖ ಬ್ರಹ್ಮಸದ್ಯೋಜಾತ, ಆಯುಧ ವಜ್ರ, ಕಲೆ ನಿವೃತ್ತಿ, ಗುಣ ಕಠಿಣ, ಚಕ್ರವು ಚತುರಶ್ರ (ಚಚ್ಚೌಕಾಕಾರದ್ದು), ಉರಿಯುವ ಅಗ್ನಿಯ ಪ್ರಕಾಶ, ಕರಣ ಮನಸ್ಸು, ವಾಯು ಪ್ರಾಣ, ಮೂಗು ಜ್ಞಾನೇಂದ್ರಿಯ. ಹೀಗೆ ಹದಿನಾರನ್ನು ನಕಾರದ ರೂಪಗಳೆನ್ನುತ್ತಾರೆ. (೨೨-೨೫).

ಟಿಪ್ಪಣಿ : ಸೂಕ್ಷ್ಮಾಗ್ರಮ ಕ್ರಿ.ಪಾ. ೩.೨೬-೩೦ರಲ್ಲಿ ನಕಾರಾದಿಗಳ ಋಷಿ ಛಂದಸ್, ದೇವತೆ, ಬಣ್ಣ, ಸ್ವರ ಮತ್ತು ಮುಖ ಎಂಬ ಆರು ವಿಷಯಗಳನ್ನು ಮಾತ್ರ ಹೇಳಲಾಗಿದೆ. ಇಲ್ಲಿ ನಕಾರಾದಿಗಳ ಸ್ವರವು ಕ್ರಮವಾಗಿ ಉದಾತ್ತ, ಅನುದಾತ್ತ, ಉದಾತ್ತ ಪ್ರಚಯ, ಸ್ವರಿತ. ಹೋಲಿಸಿದರೆ ಈ ಆರು ವಿಷಯಗಳಲ್ಲಿ ಸೂಕ್ಷ್ಮಾಗ್ರಮದ ವಿವರಗಳಿಗೂ ಮತ್ತು ಚಂದ್ರಜ್ಞಾನಾಗಮದ ವಿವರಗಳಿಗೂ ಅನೇಕ ವ್ಯತ್ಯಾಸ-ಗಳಿರುವುದನ್ನು ಗುರುತಿಸಬಹುದು. ನಕಾರದ ಋಷಿ ಗೌತಮ, ಛಂದಸ್ಸು ಗಾಯತ್ರಿ, ದೇವತೆ ನಂದಿ ಬಣ್ಣ ಮತ್ತು ಮುಖದಲ್ಲಿ ವ್ಯತ್ಯಾಸವಿಲ್ಲ.

ಮಕಾರಸ್ಯ ಷೋಡಶರೂಪತಾ

ಮಕಾರಂ ಜಲರೂಪಂ ಚ ದೈವಂ ವಿಷ್ಣುಸ್ತಥೈವ ಚ।
ಲಕ್ಷ್ಮೀಃ ಶಕ್ತಿರಿತಿ ಪ್ರೋಕ್ತಾ ಚಾಧಾರಂ ಜಲಮೇವ ಚ ॥ ೨೬ ॥

ತ್ರಿಷ್ಟುಪ್‌ಛಂದಃಸಮಾಯುಕ್ತಂ ವಿಶ್ವಾಮಿತ್ರ ಋಷಿಸ್ತಥಾ।
ಸ್ಥಾನಮುತ್ತರತೋ ವಕ್ತ್ರಂ ಬ್ರಹ್ಮ ವೈ ವಾಮದೇವಕಮ್ ॥ ೨೭ ॥

ಆಯುಧಂ ಪದ್ಮಮೇವೋಕ್ತಂ ಪ್ರತಿಷ್ಠಾಖ್ಯಕಲಾಯುತಮ್।
ಗುಣಸ್ತು ದ್ರವಸಂಯುಕ್ತಶ್ಚಕ್ರಮರ್ಧಸುಧಾಕರಃ ॥ ೨೮ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೋಮಸ್ಯೈವ ಪ್ರಕಾಶಶ್ಚ ಕರಣಂ ಬುದ್ಧಿರೇವ ಚ।
ಅಪಾನವಾಯುಸಂಯುಕ್ತಂ ಜಿಹ್ವಾ ಜ್ಞಾನೇಂದ್ರಿಯಂ ಭವೇತ್।
ಇತ್ಯೇವಂ ಷೋಡಶಾನಾಂ ತು ಮಕಾರಾಕ್ಷರಮುಚ್ಯತೇ ॥ ೨೯ ॥

ಮಕಾರದ ಹದಿನಾರು ರೂಪಗಳು

ಮಕಾರವು ಜಲವರ್ಣವುಳ್ಳದ್ದು (ಶ್ವೇತ), ಅದರ ದೈವ ವಿಷ್ಣು, ಲಕ್ಷ್ಮಿ ಶಕ್ತಿ, ಆಧಾರ ಜಲ, ಛಂದಸ್ಸು ತ್ರಿಷ್ಟುಪ್, ಋಷಿ ವಿಶ್ವಾಮಿತ್ರ, ಸ್ಥಾನ ಉತ್ತರ ಮುಖ, ಬ್ರಹ್ಮ ವಾಮದೇವ, ಆಯುಧ ಪದ್ಮ, ಕಲೆ ಪ್ರತಿಷ್ಠಾ, ಗುಣ ಧ್ರುವ, ಚಕ್ರ ಚಂದ್ರಾರ್ಧ ಆಕಾರದ್ದು, ಪ್ರಕಾಶ ಚಂದ್ರನದು, ಕರಣ ಬುದ್ಧಿ, ವಾಯು ಅಪಾನ ಮತ್ತು ಜ್ಞಾನೇಂದ್ರಿಯ ಜಿಹ್ವೆ (ನಾಲಿಗೆ), ಹೀಗೆ ಮಕಾರಾಕ್ಷರವು ಹದಿನಾರರ ಸ್ವರೂಪವುಳ್ಳದ್ದು. (೨೬-೨೯).

ಟಿಪ್ಪಣಿ : ಸೂಕ್ಷ್ಮಾಗ್ರಮದಲ್ಲಿ ಮಕಾರದ ಋಷಿ ಅತ್ರಿ, ಛಂದಸ್ ಉಷ್ಣಿಕ್, ದೇವತೆ ರುದ್ರ, ವರ್ಣ ಕಪ್ಪು, ದಕ್ಷಿಣ ಮುಖ (ಕ್ರಿ.ಪಾ. ೩.೨೭).

ಶಿಕಾರಸ್ಯ ಷೋಡಶರೂಪತಾ

ಶಿಕಾರಂ ವಹ್ನಿರೂಪಂ ತು ರುದ್ರಸ್ತತ್ರಾಧಿದೈವತಮ್।
ಗೌರೀಶಕ್ತಿಸಮಾಯುಕ್ತಮಾಧಾರಂ ಚಾಗ್ನಿರೇವ ಚ ॥ ೩೦ ॥

ಉಷ್ಣಿಕ್ ಛಂದಸ್ಸಮಾಯುಕ್ತಂ ಜಮದಗ್ನಿರ್ಋಷಿಸ್ತಥಾ।
ಸ್ಥಾನಂ ದಕ್ಷಿಣತೋ ವಕ್ತ್ರಮಘೋರಂ ಬ್ರಹ್ಮಚೈವ ಹಿ ॥ ೩೧ ॥

ಸ್ವಸ್ತಿಕಾಯುಧಮೇವೋಕ್ತಂ ವಿದ್ಯಾನಾಮ ಕಲಾऽಪಿ ಚ।
ಗುಣೋ ದೀಪ್ತ್ಯನುಸಂಯುಕ್ತಶ್ಚಕ್ರಂ ತ್ರ್ಯಶ್ರಕಮೇವ ಚ ॥ ೩೨ ॥

ತಟಿತಾಂ ತು ಪ್ರಕಾಶಶ್ಚ ಕರಣಂ ತ್ವಹಮಾಕೃತಿಃ।
ವ್ಯಾನವಾಯುಸಮಾಯುಕ್ತಂ ನೇತ್ರಂ ಜ್ಞಾನೇಂದ್ರಿಯಂ ಭವೇತ್।
ಇತ್ಯೇವಂ ಷೋಡಶಾನಾಂ ತು ಶಿಕಾರಾಕ್ಷರಮುಚ್ಯತೇ ॥ ೩೩ ॥

ಶಿಕಾರದ ಹದಿನಾರು ರೂಪಗಳು

ಶಿಕಾರವು ಬೆಂಕಿಯ ಬಣ್ಣವುಳ್ಳದ್ದು (ರಕ್ತ), ಅದರ ದೈವ ರುದ್ರ, ಶಕ್ತಿಯು ಗೌರಿ, ಆಧಾರ ಅಗ್ನಿ. ಛಂದಸ್ ಉಷ್ಣಿಕ್, ಋಷಿಯು ಜಮದಗ್ನಿ, ಸ್ಥಾನ ದಕ್ಷಿಣ ಮುಖ ಬ್ರಹ್ಮ ಅಘೋರ, ಆಯುಧ ಸ್ವಸ್ತಿಕ, ಕಲೆ ವಿದ್ಯೆ, ಗುಣ ದೀಪ್ತಿಯುಕ್ತ, ಚಕ್ರ ತ್ರಿಕೋಣಕಾರ, ಪ್ರಕಾಶ ಮಿಂಚಿನದು, ಕರಣ ಅಹಂಕಾರ, ವಾಯು ವ್ಯಾನ ಮತ್ತು ಜ್ಞಾನೇಂದ್ರಿಯ ನೇತ್ರ. ಹೀಗೆ ಶಿಕಾರವು ಹದಿನಾರರ ಸ್ವರೂಪವುಳ್ಳದ್ದು. (೩೦-೩೩)

ಟಿಪ್ಪಣಿ : ಸೂಕ್ಷ್ಮಾಗ್ರಮದಲ್ಲಿ ಶಿಕಾರದ ಋಷಿ ವಿಶ್ವಾಮಿತ್ರ, ಛಂದಸ್ಸು ಅನುಷ್ಟುಪ್, ದೇವತೆ ವಿಷ್ಣು, ವರ್ಣ ಧೂಮ್ರ, ಮುಖ ಪಶ್ಚಿಮ (ಕ್ರಿ.ಪಾ. ೩.೨೮).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾಕಾರಸ್ಯ ಷೋಡಶರೂಪತಾ

ವಾಕಾರಂ ವಾಯುರೂಪಂ ಸ್ಯಾದಧಿದೈವತಮೀಶ್ವರಮ್।
ಅಂಬಿಕಾ ಸ್ಯಾನ್ಮಹಾಶಕ್ತಿರ್ವಾಯುಶ್ಚಾಧಾರಮೇವ ಚ ॥ ೩೪ ॥

ಬೃಹತೀಛಂದಸಾಯುಕ್ತಂ ಋಷಿಃ ಕಾಶ್ಯಪ ಏವ ಚ।
ಸ್ಥಾನಂ ಪೂರ್ವಾನನಂ ಪ್ರೋಕ್ತಂ ಬ್ರಹ್ಮ ತತ್ಪುರುಷಂ ಭವೇತ್ ॥ ೩೫ ॥

ಆಯುಧಂ ಬಿಂದುರೂಪಂ ತು ಕಲಾ ಶಾಂತಿಸ್ತಥೈವ ಚ।
ಗುಣಃ ಸ್ಪರ್ಶ ಇತಿ ಪ್ರೋಕ್ತಂ ಷಡಶ್ರಂ ಚಕ್ರಮೇವ ಚ ॥ ೩೬ ॥

ಪ್ರಕಾಶ ಇಂದ್ರನೀಲಸ್ಯ ಚಿತ್ತಂ ತು ಕರಣಂ ಭವೇತ್।
ಉದಾನವಾಯುಸಂಯುಕ್ತಂ ಚರ್ಮ ಜ್ಞಾನೇಂದ್ರಿಯಂ ಭವೇತ್।
ಇತ್ಯೇವಂ ಷೋಡಶಾನಾಂ ತು ವಾಕಾರಾಕ್ಷರಮುಚ್ಯತೇ ॥ ೩೭ ॥

ವಾಕಾರದ ಹದಿನಾರು ರೂಪಗಳು

ವಾಕಾರವು ವಾಯುರೂಪದ್ದು (ಹಸಿರು), ದೇವತಾ ಈಶ್ವರ, ಶಕ್ತಿ ಅಂಬಿಕೆ, ಆಧಾರ ವಾಯು, ಛಂದಸ್ ಬೃಹತೀ, ಋಷಿ ಕಾಶ್ಯಪ, ಸ್ಥಾನ ಪೂರ್ವಮುಖ, ಬ್ರಹ್ಮ ತತ್ಪುರುಷ, ಆಯುಧ ಬಿಂದು ಸ್ವರೂಪದ್ದು, ಕಲೆ ಶಾಂತಿ, ಗುಣ ಸ್ಪರ್ಶ, ಚಕ್ರ ಷಡಶ್ರರೂಪ, ಪ್ರಕಾಶ ಇಂದ್ರನೀಲದ್ದು, ಕರಣ ಚಿತ್ತ, ವಾಯು ಉದಾನ ಮತ್ತು ಜ್ಞಾನೇಂದ್ರಿಯ ಚರ್ಮ. ಹೀಗೆ ವಾಕಾರದ ಹದಿನಾರು ಸ್ವರೂಪಗಳು. (೩೪-೩೭).

ಟಿಪ್ಪಣಿ : ಸೂಕ್ಷ್ಮಾಗಮದಲ್ಲಿ ವಾಕಾರದ ಋಷಿ ಅಂಗಿರಸ್, ಛಂದಸ್ಸು ಬೃಹತೀ (ವ್ಯತ್ಯಾಸವಿಲ್ಲ), ದೇವತಾ ಬ್ರಹ್ಮ ವರ್ಣ ಸ್ವರ್ಣ, ಉತ್ತರ ಮುಖ (ಕ್ರಿ.ಪಾ.೩.೨೯).

ಯಕಾರಸ್ಯ ಷೋಡಶರೂಪತಾ

ಯಕಾರಂ ವ್ಯೋಮರೂಪಂ ತು ದೈವಂ ಚೈವ ಸದಾಶಿವಃ।
ಉನ್ಮನೀಶಕ್ತಿರೇವೋಕ್ತಾ ಆಧಾರಂ ವ್ಯೋಮ ಚೋಚ್ಯತೇ ॥ ೩೮ ॥

ಜಗತೀಚ್ಛಂದಸಾ ಯುಕ್ತಂ ಭಾರದ್ವಾಜ ಋಷಿಸ್ತಥಾ।
ಸ್ಥಾನಮೂರ್ಧ್ವಮುಖಂ ವಿದ್ಯಾದ್ ಬ್ರಹ್ಮ ಚೇಶಾನಮೇವ ಚ ॥ ೩೯ ॥

ಆಯುಧಂ ಚೈವ ಶೂಲಂ ಸ್ಯಾಚ್ಛಾಂತ್ಯತೀತಾ ಕಲಾಪಿ ಚ।
ಗುಣಸ್ತು ಶೂನ್ಯ ಏವ ಸ್ಯಾತ್ ಪ್ರಕಾಶಶ್ಚಂದ್ರಕಾಮಣೇಃ ॥ ೪೦ ॥

ಕರಣಂ ಪ್ರಕೃತಿಃ ಪ್ರೋಕ್ತಂ ಸಮಾನೋ ವಾಯುರೇವ ಚ।
ಶ್ರೋತ್ರಂ ಜ್ಞಾನೇಂದ್ರಿಯಂ ಪ್ರೋಕ್ತಮಿತ್ಯೇತೇ ಷೋಡಶಕ್ರಮಾತ್
ಯಕಾರಾಕ್ಷರಮಿತ್ಯುಕ್ತಂ ನ ಭೂತೋ ನ ಭವಿಷ್ಯತಿ ॥ ೪೧ ॥

ಯಕಾರದ ಹದಿನಾರು ರೂಪಗಳು

ಯಕಾರವು ವ್ಯೋಮರೂಪವುಳ್ಳದ್ದು (ನೀಲ), ದೇವತಾ ಸದಾಶಿವ, ಶಕ್ತಿ ಉನ್ಮನೀ, ಆಧಾರ ವ್ಯೋಮ, ಛಂದಸ್ಸು ಜಗತೀ, ಋಷಿ ಭರದ್ವಾಜ, ಸ್ಥಾನ ಊರ್ಧ್ವಮುಖ, ಬ್ರಹ್ಮ ಈಶಾನ, ಆಯುಧ ಶೂಲ, ಕಲೆ ಶಾಂತ್ಯತೀತಾ, ಗುಣ ಶೂನ್ಯ, ಪ್ರಕಾಶ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಂದ್ರಮಣಿಯದು, ಕರಣ ಪ್ರಕೃತಿ, ವಾಯು ಸಮಾನ ಮತ್ತು ಜ್ಞಾನೇಂದ್ರಿಯವು ಶ್ರೋತ್ರ ಹೀಗೆ ಯಕಾರದ ಹದಿನಾರು ರೂಪಗಳು. (೩೮-೪೧).

ಟಿಪ್ಪಣಿ : ಸೂಕ್ಷ್ಮಾಗ್ರಮದಲ್ಲಿ ಯಕಾರದ ಋಷಿ ಭಾರದ್ವಾಜ (ವ್ಯತ್ಯಾಸವಿಲ್ಲ). ಛಂದಸ್ಸು ವಿರಾಟ್, ದೇವತಾ ಸ್ಕಂದ, ಬಣ್ಣ ಕೆಂಪು ಮತ್ತು ಊರ್ಧ್ವಮುಖ (ವ್ಯತ್ಯಾಸವಿಲ್ಲ), (ನೋಡಿರಿ ಕ್ರಿ.ಪಾ. ೩.೩೦).

ಪಂಚಾಕ್ಷರೋತ್ಪತ್ತಿ :

ಏಕಮೇವ ಪ್ರಧಾನಂ ತು ಪಂಚಾಕ್ಷರಮಿತಿ ಸ್ಮೃತಮ್।
ಕಾಮ್ಯಸಿದ್ಧಿಪ್ರಯೋಗೇಣ ಪ್ರತ್ಯಕ್ಷಂ ಪಂಚಧಾ ಭವೇತ್ ॥ ೪೨ ॥

ತತಃ ಪ್ರಸ್ತಾರಕಂ ಪ್ರೋಕ್ತಂ ವಿಂಶತ್ಯೇಕಶತಂ ಭವೇತ್।
ಏವಂ ಪಂಚಾಕ್ಷರೋತ್ಪತ್ತಿರ್ಗುರೋರ್ವಕ್ತ್ರೇಣ ಲಭ್ಯತೇ ॥ ೪೩ ॥

ಮಂತ್ರಂ ಪಂಚವಿಧಂ ಪ್ರೋಕ್ತಂ ಕರ್ಮ ಚಾಷ್ಟವಿಧಮ್।
ಪರೇ ಪಂಚಾಕ್ಷರೋತ್ಪತ್ತಿಃ ಪುನಸ್ತತ್ರೈವ ಲೀಯತೇ ॥ ೪೪ ॥

ಪಂಚಾಕ್ಷರ ಮಂತ್ರದ ಉತ್ಪತ್ತಿ

ಪಂಚಾಕ್ಷರವೆಂಬುದೊಂದೇ ಮಂತ್ರ ಪ್ರಧಾನವೆಂದು ಪರಿಗಣಿಸಲ್ಪಟ್ಟಿದೆ. ಕಾಮ್ಯದ ಸಿದ್ಧಿಗಾಗಿ ಪ್ರಯೋಗದಿಂದ ಅದು ಪ್ರತ್ಯಕ್ಷವಾಗಿ ಐದು ವಿಧವಾಯಿತು. (೪೨). ಆದರಿಂದ ನೂರಾ ಇಪ್ಪತ್ತು ಪ್ರಕಾರದ ಪ್ರಸ್ತಾರಗಳು ಆಗುತ್ತವೆ. ಈ ರೀತಿಯ ಪಂಚಾಕ್ಷರ ಮಂತ್ರದ ಉತ್ಪತ್ತಿಯು ಗುರುವಿನ ಮುಖದಿಂದ ದೊರೆಯುತ್ತದೆ. (೪೩). ಮಂತ್ರವು ಐದು ವಿಧವಾಗಿದೆ ಮತ್ತು ಕರ್ಮವು ಎಂಟು ವಿಧವಾಗಿದೆ. ಪರತತ್ತ್ವದಲ್ಲಿ ಪಂಚಾಕ್ಷರದ ಉತ್ಪತ್ತಿ ಮತ್ತು ಕೊನೆಗೆ ಅದರಲ್ಲಿಯೇ ಅದರ ಲಯ. (೪೪).

ಟಿಪ್ಪಣಿ : ಪಂಚಾಕ್ಷರ ಮಂತ್ರ ಐದು ವಿಧ, ಕರ್ಮ ಎಂಟು ವಿಧ; ೧೨೦ ಪ್ರಕಾರಗಳ ವಿಷಯ; ಇಲ್ಲಿ ಬಂದಿರುವ ವಿಷಯ ಸ್ಪಷ್ಟವಾಗಿಲ್ಲ. ಸುಪ್ರಭೇದಾಗಮ ಪಂಚಮ ಪ್ರಕರಣದಲ್ಲಿ ಪ್ರಸಾದಪಂಚಾಕ್ಷರೀ, ಮಾಯಾಪಂಚಾಕ್ಷರೀ, ಸ್ಥೂಲ ಪಂಚಾಕ್ಷರೀ ಮತ್ತು ಮೂಲಪಂಚಾಕ್ಷರೀ ಎಂಬ ಐದು ಪಂಚಾಕ್ಷರೀ ಮಂತ್ರದ ವಿಧಗಳು ಉಲ್ಲೇಖಿಸಲ್ಪಟ್ಟಿದೆ. ಅವು ಕ್ರಮವಾಗಿ ಹೀಗಿವೆ: ೧. ಓಂ ಹ್ರಾಂ ಹ್ರೀಂ ಹ್ರೂಂ ಹ್ರೈಂ ಹ್ರೌಂ ನಮಃ ಶಿವಾಯ (ಪ್ರಸಾದ); ೨. ಓಂ ಹ್ರಾಂ ಹ್ರೀಂ ಹ್ರೂಂ ಹ್ರೈಂ ನಮಃ ಶಿವಾಯ (ಮಾಯಾ); ೩. ಓಂ ಹ್ರಾಂ ಹ್ರೀಂ ಹ್ರೂಂ ನಮಃ ಶಿವಾಯ (ಸೂಕ್ಷ್ಮ); ೪. ಓಂ ಹ್ರಾಂ ಹ್ರೀಂ ನಮಃ ಶಿವಾಯ (ಸ್ಥೂಲ) ಮತ್ತು ೫. ಓಂ ನಮಃ ಶಿವಾಯ (ಮೂಲ). ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ ಮತ್ತು ವಿಶ್ವರಾಧ್ಯ ಪರಂಪರೆ ಗುರುಗಳಿಗೆ ಕ್ರಮವಾಗಿ ಈ ಮಂತ್ರಗಳನ್ನು ಉಪದೇಶ ಮಾಡುವ ಅಧಿಕಾರವಿದೆ. ಎಂಟು ವಿಧ ಕರ್ಮಗಳು ಯಾವುವು? ೧೨೦ ಪ್ರಕಾರಗಳು ಯಾವುವು? ಅವುಗಳ ಪ್ರಸ್ತಾರವೇನು? ಇವುಗಳ ಬಗ್ಗೆ ಸದ್ಯಕ್ಕೆ ಮಾಹಿತಿ ದೊರೆತಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಪ್ತಕೋಟಿಮಂತ್ರಾಣಾಂ ಮೂಲಂ ಪಂಚಾಕ್ಷರಮಂತ್ರಃ

ಸಪ್ತಕೋಟಿಮಹಾಮಂತ್ರಾ ರೂಪವಕ್ತ್ರೈರನೇಕಧಾ।
ಪಂಚಾಕ್ಷರೇ ಪ್ರಲೀಯಂತೇ ಪುನಸ್ತಸ್ಮಾದ್ವಿನಿರ್ಗತಾಃ ॥ ೪೫ ॥

ಸಪ್ತಕೋಟಿ ಮಂತ್ರಗಳ ಮೂಲ ಪಂಚಾಕ್ಷರ ಮಂತ್ರ

ಏಳು ಕೋಟಿ ಮಹಾಮಂತ್ರಗಳು ಸ್ವರೂಪ ಮತ್ತು ಆಕಾರಗಳಿಂದ ಅನೇಕವಾಗಿವೆ. ಅವುಗಳೆಲ್ಲವೂ ಪಂಚಾಕ್ಷರ ಮಂತ್ರದಲ್ಲಿಯೇ ಲಯವಾಗುತ್ತವೆ. ಅಲ್ಲಿಂದಲೇ ಉಗಮವನ್ನು ಹೊಂದುತ್ತವೆ. (೪೫).

ಮಂತ್ರಸ್ಯ ನಿಷ್ಫಲತ್ವ-ಸಫಲತ್ವವಿಚಾರಃ

ಆಜ್ಞಾಹೀನಂ ಕ್ರಿಯಾಹೀನಂ ಶ್ರದ್ಧಾಹೀನಂ ಬೃಹಸ್ಪತೇ।
ಅಜಪ್ತಂ ದಕ್ಷಿಣಾಹೀನಂ ಸದಾ ಜಪ್ತಂ ಚ ನಿಷ್ಫಲಮ್ ॥ ೪೬ ॥

ಆಜ್ಞಾಸಿದ್ಧಂ ಕ್ರಿಯಾಸಿದ್ಧಂ ಶ್ರದ್ಧಾಸಿದ್ಧಮಿದಂ ತಥಾ।
ದಕ್ಷಿಣಾಸಿದ್ಧಮಪಿ ಚ ಮಂತ್ರಮೇತನ್ಮಹಾಫಲಮ್ ॥ ೪೭ ॥

ಬೃಹಸ್ಪತಿಯೇ, ಆಜ್ಞೆಯಿಲ್ಲದೆ, ಕ್ರಿಯೆಯಿಲ್ಲದೆ, ಶ್ರದ್ಧೆಯಿಲ್ಲದೆ ಮತ್ತು ದಕ್ಷಿಣೆಯಿಲ್ಲದೆ ಮಾಡಿದ ಜಪ, ಜಪವನ್ನೇ ಮಾಡದಿರುವುದು, ವಿಧಿಯನ್ನು ಅನುಸರಿಸದೆ ಸದಾ ಮಾಡಿದ ಜಪ, ಇವು ನಿಷ್ಫಲವಾಗುತ್ತವೆ. (೪೬). ಆಜ್ಞೆಯಿಂದ ಸಿದ್ಧವಾದ, ಕ್ರಿಯೆಯಿಂದ ಸಿದ್ಧವಾದ, ಶ್ರದ್ಧೆಯಿಂದ ಸಿದ್ಧವಾದ ಮತ್ತು ದಕ್ಷಿಣೆಯಿಂದ ಸಿದ್ಧವಾದ ಮಂತ್ರದ ಜಪವು ಮಹಾಫಲವುಳ್ಳದ್ದು. (೪೭).

ಟಿಪ್ಪಣಿ: ಇದೇ ವಿಚಾರವು ಪಾರಮೇಶ್ವರಾಗಮ, ೧೧.೬೪-೬೭ರಲ್ಲಿ ಬಂದಿದೆ.

ಪುರಶ್ಚರಣಕ್ರಮಃ

ದೀಕ್ಷಾಪೂರ್ವಂ ಗುರೋರ್ಲಬ್ಧ್ವಾ ಮಂತ್ರಮಾಜ್ಞಾಂ ಸಮಾಹಿತಃ।
ಸಂಕಲ್ಪ್ಯ ಚ ಜಪೇನ್ನಿತ್ಯಂ ಪುರಶ್ಚರಣಪೂರ್ವಕಮ್ ॥ ೪೮ ॥

ಯಾವಜ್ಜೀವಂ ಜಪೇನ್ನಿತ್ಯಮಷ್ಟೋತ್ತರಸಹಸ್ರಕಮ್।
ಅನಶ್ನಂಸ್ತತ್ಪರೋ ಭೂತ್ವಾ ಸ ಯಾತಿ ಪರಮಾಂ ಗತಿಮ್ ॥ ೪೯ ॥

ಜಪೇದಕ್ಷರಲಕ್ಷಂ ವೈ ಚತುರ್ಗುಣಿತಮಾದರಾತ್।
ಯುಕ್ತಾಶೀ ಸಂಯಮೀ ಯಃ ಸ ಪೌರಶ್ಚರಣಿಕಃ ಸ್ಮೃತಃ ॥ ೫೦ ॥

ಯಃ ಪುರಶ್ಚರಣಂ ಕೃತ್ವಾ ನಿತ್ಯಜಾಪೀ ಭವೇತ್ ಪುನಃ।
ತಸ್ಯ ನಾಸ್ತಿ ಸಮೋ ಲೋಕೇ ಸ ಸಿದ್ಧಃ ಸಿದ್ಧಿದೋ ಭವೇತ್ ॥ ೫೧ ॥

ಏಕಾಗ್ರಚಿತ್ತನಾದ ವ್ಯಕ್ತಿಯು ಗುರುವಿನಿಂದ ದೀಕ್ಷಾಪೂರ್ವಕವಾಗಿ ಮಂತ್ರವನ್ನೂ ಅದನ್ನು ಉಪಯೋಗಿಸುವ ಅನುಜ್ಞೆಯನ್ನೂ ಪಡೆದು ಸಂಕಲ್ಪ ಮಾಡಿ ಪುರಶ್ಚರಣ ಪೂರ್ವಕವಾಗಿ ಊಟ ಮಾಡದೆ ನಿತ್ಯವೂ ಸಾವಿರದಾ ಎಂಟು ಬಾರಿ ತನ್ನ ಜೀವನ ಪರ್ಯಂತವಾಗಿ ಧ್ಯಾನಪರನಾಗಿ ಜಪಿಸಬೇಕು. ಅಂತಹ ವ್ಯಕ್ತಿ ಪರಮಗತಿಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊಂದುತ್ತಾನೆ. (೪೮-೪೯). ಯಾರು ಆಹಾರದಲ್ಲಿ ಹಿಡಿತವಿಟ್ಟುಕೊಂಡು ಇಂದ್ರಿಯನಿಗ್ರಹಿಯಾಗಿ ಮಂತ್ರದ ಪ್ರತಿಯೊಂದು ಅಕ್ಷರವನ್ನು ನಾಲ್ಕು ಪಟ್ಟು ಮಾಡಿ ಅಷ್ಟೂ ಅಕ್ಷರಗಳಿಗೆ ಒಂದೊಂದು ಲಕ್ಷ ಸಾರಿಯಂತೆ ಮಂತ್ರವನ್ನು ಜಪ ಮಾಡುತ್ತಾನೋ ಅವನು ಪೌರಶ್ಚರಣಿಕನೆನ್ನಿಸಿಕೊಳ್ಳುತ್ತಾನೆ. (೫೦). ಯಾರು ಪುರಶ್ಚರಣ ಮಾಡಿ ನಿತ್ಯವೂ ಜಪ ಮಾಡುತ್ತಾನೋ ಅವನಿಗೆ ಲೋಕದಲ್ಲಿ ಸಮನಾದವನು ಯಾರೂ ಇಲ್ಲ. ಅವನು ಸಿದ್ಧನು ಮತ್ತು ಇತರರಿಗೆ ಸಿದ್ಧಿಯನ್ನು ಅನುಗ್ರಹಿಸುವನು. (೫೧).

ಟಿಪ್ಪಣಿ: ಪಂಚಾಕ್ಷರ ಮಂತ್ರದಲ್ಲಿ ಐದು ಅಕ್ಷರಗಳಿವೆ. ಅವುಗಳ ನಾಲ್ಕು ಪಟ್ಟು ಎಂದರೆ ೨೦ ಅಕ್ಷರಗಳು ಎಂದಾಗುತ್ತವೆ. ಮಂತ್ರವನ್ನು ಪ್ರತ್ಯಕ್ಷರಕ್ಕೆ ಒಂದು ಲಕ್ಷ ಸಾರಿ ಅಂದರೆ ೨೦ ಲಕ್ಷ ಸಾರಿ ಜಪ ಮಾಡಿದರೆ ಅದಕ್ಕೆ ಪುರಶ್ಚರಣವೆನ್ನುತ್ತಾರೆ. ಅದನ್ನು ಮಾಡಿದವನು ಪೌರಾಶ್ಚರಣಿಕನೆನ್ನಿಸಿಕೊಳ್ಳುತ್ತಾನೆ. ಪುರಶ್ಚರಣಪದ್ಧತಿಯ ಸಂಕ್ಷಿಪ್ತವಾದ ನಿರೂಪಣೆಯನ್ನು ಸೂಕ್ಷ್ಮಾಗ್ರಮ ಕ್ರಿ.ಪಾ. ೩.೪೫-೪೯ರಲ್ಲಿ ನೋಡಬಹುದು. ಅಲ್ಲಿ ಹೇಳಿದ ಪ್ರಕಾರ ಮಂತ್ರವನ್ನು ಐದು ಲಕ್ಷ ಸಾರಿ ಜಪಿಸಬೇಕು. ಅದನ್ನು ಮಾಡುವಾಗ ಐದು ಲಕ್ಷದಲ್ಲಿ ಹತ್ತನೇ ಒಂದು ಭಾಗದಷ್ಟು ಅಂದರೆ ೫೦,೦೦೦ ಸಾರಿ ಹಾಲು ಬೆರೆಸಿದ ನೀರಿನಿಂದ ತರ್ಪಣವನ್ನು ಮತ್ತು ಅದರಲ್ಲಿ ಹತ್ತನೇ ಒಂದು ಭಾಗದಷ್ಟು ಅಂದರೆ ೫೦೦೦ ಸಾರಿ ತುಪ್ಪತ ಆಹುತಿಯನ್ನೂ ನೀಡಬೇಕೆಂದು ವಿಧಿಸಲಾಗಿದೆ. ಮತ್ತೆ ಅದರಲ್ಲಿ ಹತ್ತನೇ ಒಂದು ಭಾಗದಷ್ಟು ಅಂದರೆ ೫೦೦ ಜನ ಶಿವವ್ರತಧಾರಿಗಳನ್ನು ಪಾಯಸ ಮತ್ತು ಸಕ್ಕರೆಗಳ ಊಟದಿಂದ ತೃಪ್ತಿಗೊಳಿಸಬೇಕೆಂದೂ, ಅದರಿಂದ ಪುರಶ್ಚರಣ ವಿಧಿಯೂ ಪೂರ್ಣವಾಗುವುದೆಂದೂ ಹೇಳಿದೆ. ಈ ಲೆಕ್ಕಾಚಾರದಂತೆ ಪ್ರಸ್ತುತ ಆಗಮದಲ್ಲಿ ಹೇಳಿದ ಪ್ರಕಾರ ಪುರಶ್ಚರಣವನ್ನು ೨೦ ಲಕ್ಷ ಸಾರಿ ಮಂತ್ರ ಜಪದ ಕ್ರಮದಂತೆ ಮಾಡುವುದಾದರೆ ೨ ಲಕ್ಷ ಸಾರಿ ತರ್ಪಣವನ್ನೂ ೨೦ ಸಾವಿರ ಸಾರಿ ಆಹುತಿಯನ್ನೂ ನೀಡಬೇಕು ಮತ್ತು ೨ ಸಾವಿರ ಶಿವವ್ರತಧಾರಿಗಳಿಗೆ ಭೋಜನವನ್ನು ಮಾಡಿಸಬೇಕು. ಪಾರಮೇಶ್ವರಾಗಮದಲ್ಲಿ ಕೂಡ ೨೦ ಲಕ್ಷ ಸಾರಿ ಜಪದ ವಿಷಯವನ್ನೇ ಪುರಶ್ಚರಣ ವಿಧಿಯಲ್ಲಿ ಹೇಳಿದೆ. (ನೋಡಿರಿ, ೧೧.೭೫-೭೯). ಪುರಶ್ಚರಣದಿಂದ ಸಿದ್ಧಿ ಮಾಡಿಕೊಂಡು ಪಂಚಾಕ್ಷರ ಮಂತ್ರವನ್ನು ನಿತ್ಯವೂ ೧೦೦೮ ಸಾರಿ ಜಪಿಸಬೇಕೆಂಬುದನ್ನು ಸೂಕ್ಷ್ಮಾಗ್ರಮ, ಚಂದ್ರಜ್ಞಾನಾಗಮ ಮತ್ತು ಪಾರಮೇಶ್ವರಾಗಮಗಳು ಏಕಾಭಿಪ್ರಾಯದಿಂದ ಹೇಳುತ್ತವೆ. (ಪುರಶ್ಚರಣದ ಇತರ ವಿವರಗಳಿಗೆ ಶ್ರೀಚಂದ್ರಜ್ಞಾನಾಗಮ, ವಾರಾಣಸೀ ಆವೃತ್ತಿಯಲ್ಲಿನ ಪಂಡಿತ ವ್ರಜವಲ್ಲಭ ದ್ವಿವೇದಿಯವರ ಪ್ರಸ್ತಾವನೆ ಪು. XVI ಮತ್ತು XVII ನೋಡಿರಿ).

ಮಂತ್ರಜಪ ವಿಧಿಃ

ಸ್ನಾನಂ ಕೃತ್ವಾ ಶುಚೌ ದೇಶೇ ಬದ್ಧ್ವಾ ರುಚಿರಮಾಸನಮ್।
ಶಂಕರಂ ಹೃದಿ ಸಂಚಿಂತ್ಯ ಸ್ವಗುರುಂ ತದ್ಗುರೂಂಸ್ತಥಾ ॥ ೫೨ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಾಙ್ಮುಖೋದಙ್ಮುಖೋ ವಾಪಿ ಮೌನೀ ಚೈಕಾಗ್ರಮಾನಸಃ।
ವಿಶೋಧ್ಯ ಪಂಚತತ್ತ್ವಾನಿ ದಹನಪ್ಲಾವನಾದಿಭಿಃ ॥ ೫೩ ॥
ಮಂತ್ರನ್ಯಾಸಾದಿಕಂ ಕೃತ್ವಾ ಸಕಲೀಕೃತವಿಗ್ರಹಃ।
ದೇವಂ ದೇವೀಯುತಂ ಧ್ಯಾಯೇತ್ ಪ್ರಾಣಾಪಾನೌ ನಿಯಮ್ಯ ಚ॥ ೫೪ ॥
ವಿದ್ಯಾ ಸ್ಥಾನಂ ಸ್ವರಂ ರೂಪಂ ಋಷಿಂ ಛಂದೋಽಧಿದೈವತಮ್।
ಬೀಜಂ ಶಕ್ತಿಂ ತಥಾ ವಾಚ್ಯಂ ಸ್ಮೃತ್ವಾ ಪಂಚಾಕ್ಷರಂ ಜಪೇತ್ ॥ ೫೫ ॥

ಮಂತ್ರವನ್ನು ಜಪಿಸುವ ವಿಧಾನ

ಸ್ನಾನ ಮಾಡಿ, ಶುದ್ಧವಾದ ಸ್ಥಳದಲ್ಲಿ ಸುಕರವಾದ ಆಸನವನ್ನು ಹಾಕಿಕೊಂಡು, ಶಂಕರನನ್ನು, ಸ್ವಂತ ಗುರುವನ್ನು, ಅವನ ಗುರುಗಳನ್ನು ಸ್ಮರಿಸಿಕೊಳ್ಳುತ್ತಾ ಪೂರ್ವಾಭಿಮುಖನಾಗಿ ಅಥವಾ ಉತ್ತರಾಭಿಮುಖನಾಗಿ ಕುಳಿತು, ಮೌನಿಯಾಗಿ, ಏಕಾಗ್ರಚಿತ್ತನಾಗಿ, ದಹನ, ಪ್ಲಾವನ ಮುಂತಾದ ಪ್ರಕ್ರಿಯೆಗಳಿಂದ (ಪೃಥಿವ್ಯಾದಿ) ಪಂಚತತ್ತ್ವಗಳನ್ನು ಪರಿಶೋಧಿಸಿ, ಮಂತ್ರನ್ಯಾಸ ಮುಂತಾದವನ್ನು ಮಾಡುವ ಮೂಲಕ ಸ್ವ-ಶರೀರವನ್ನು ಶಿವಕಲೆಗಳಿಂದ ಸಂಪನ್ನವಾಗುವಂತೆ ಮಾಡಿಕೊಂಡು, ಪ್ರಾಣ ಮತ್ತು ಅಪಾನ (ಶ್ವಾಸ ಮತ್ತು ಪ್ರಶ್ವಾಸ)ಗಳನ್ನು ನಿಯಂತ್ರಿಸಿ, ಶಕ್ತಿ (ದೇವಿ) ವಿಶಿಷ್ಟನಾದ (ಶಿವ) ದೇವನನ್ನು ಧ್ಯಾನಿಸುತ್ತಾ, ವಿದ್ಯಾ, ಸ್ಥಾನ, ಸ್ವರ, ರೂಪ, ಋಷಿ, ಛಂದಸ್, ದೇವತೆ, ಬೀಜ, ಶಕ್ತಿ ಮತ್ತು ವಾಚ್ಯ ಈಶ್ವರರನ್ನು ಸ್ಮರಿಸಿ ಪಂಚಾಕ್ಷರ ಮಂತ್ರವನ್ನು ಜಪಿಸಬೇಕು. (೫೨-೫೫).

ಟಿಪ್ಪಣಿ: ಪಾರಮೇಶ್ವರಾಗಮದಲ್ಲಿಯೂ ಇದೇ ಪದ್ಧತಿಯನ್ನು ಹೇಳಿದೆ. (ನೋಡಿರಿ, ೧೧.೭೯-೮೩). ಸೂಕ್ಷ್ಮಾಗ್ರಮ, ಕ್ರಿ.ಪಾ., ३.४೦ನ್ನೂ ನೋಡಿರಿ. ಪಂಚತತ್ತ್ವಗಳ ಶೋಧ-"ರುದ್ರನಾಗಿ ರುದ್ರನನ್ನು ಪೂಜಿಸು" ಎಂಬ ಮಾತಿನಲ್ಲಿ ರುದ್ರಭಾವ (ಶಿವಭಾವ)ವನ್ನು ಹೊಂದಲು ಭೂತಶುದ್ಧಿಯ ಪ್ರಕ್ರಿಯೆಯನ್ನು ಹೇಳಿದ್ದಾರೆ. ಪ್ರಾಣಾಯಾಮದ ಮೂಲಕ ಶೋಷಣ, ದಾಹ ಮತ್ತು ಆಪ್ಯಾಯನ ಪದ್ಧತಿಯಿಂದ ಈ ಪ್ರಕ್ರಿಯೆಯು ಸಿದ್ಧವಾಗುತ್ತದೆ. ಇದರಿಂದ ಪಾಂಚಭೌತಿಕ ಶರೀರದಲ್ಲಿನ ಪಾಪಪುರುಷನು ಭಸ್ಮೀಭೂತನಾಗುತ್ತಾನೆ. ಅನಂತರ ನೂತನ ವಿದ್ಯಾಶರೀರವು ಪ್ರಾಪ್ತವಾಗುತ್ತದೆ. ಮಂತ್ರ ನ್ಯಾಸಾದಿಗಳನ್ನು ಮಾಡಬೇಕು. ಮಂತ್ರನ್ಯಾಸಾಂತರ್ಗತವಾಗಿ ಕರನ್ಯಾಸ, ಅಂಗನ್ಯಾಸ ಮತ್ತು ಷಡಂಗನ್ಯಾಸಗಳನ್ನು ಸೂಕ್ಷ್ಮಾಗ್ರಮ (ಕ್ರಿ.ಪಾ., ३.३೧-३३) ಮತ್ತು ಪಾರಮೇಶ್ವರಾಗಮ (೧೧.೪೭-೪೯) ಸಂಕ್ಷಿಪ್ತವಾಗಿ ಹೇಳಿದ್ದಾರೆ. ಅದರಂತೆ ನ್ಯಾಸಗಳು ಹೀಗಿವೆ:

ಕರನ್ಯಾಸ : ನಂ ಸದ್ಯೋಜಾತಾಯ ಕನಿಷ್ಠಿಕಾಭ್ಯಾಂ ನಮಃ।
ಮಂ ವಾಮದೇವಾಯ ಅನಾಮಿಕಾಭ್ಯಾಂ ನಮಃ।
ಶಿಂ ಅಘೋರಾಯ ಮಧ್ಯಮಾಭ್ಯಾಂ ನಮಃ।
ವಾಂ ತತ್ಪುರುಷಾಯ ತರ್ಜನೀಭ್ಯಾಂ ನಮಃ।
ಯಂ ಈಶಾನಾಯ ಅಂಗುಷ್ಠಾಭ್ಯಾಂ ನಮಃ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಗನ್ಯಾಸ : ನಂ ಸದ್ಯೋಜಾತಾಯ ನಮಃ ಮುಖೇ।
ಮಂ ವಾಮದೇವಾಯ ನಮಃ ಹೃದಯೇ।
ಶಿಂ ಅಘೋರಾಯ ನಮಃ ಪಾದದ್ವಯೇ।
ಶಿಂ ಅಘೋರಾಯ ನಮಃ ಪಾದದ್ವಯೇ।
ವಾಂ ತತ್ಪುರುಷಾಯ ನಮಃ ಗುಹ್ಯೇ।
ಯಂ ಈಶಾನಾಯ ನಮಃ ಶಿರಸಿ।

ಷಡಂಗನ್ಯಾಸ : ಓಂ ಅನಂತಶಕ್ತಿಧಾಮ್ನೇ ಹೃದಯಾಯ ನಮಃ।
ನಂ ಸರ್ವಜ್ಞಶಕ್ತಿಧಾಮನ್ನೇ ಶಿರಸೇ ಸ್ವಾಹಾ।
ಮಂ ನಿತ್ಯತೃಪ್ತಿಧಾಮ್ನೇ ಶಿಖಾಯೈ ವಷಟ್।
ಶಿಂ ಅನಾದಿಭೇದಶಕ್ತಿಧಾಮ್ನೇ ಕವಚಾಯ ಹುಂ।
ವಾಂ ಸ್ವತಂತಶಕ್ತಿಧಾಮ್ನೇ ನೇತ್ರತ್ರಯಾಯ ವೌಷಟ್।
ಯಂ ಅಲುಪ್ತಶಕ್ತಿಧಾಮ್ನೇ ಅಸ್ತ್ರಾಯ ಫಟ್।

ತ್ರಿವಿಧೋ ಜಪಃ

ಉತ್ತಮೋ ಮಾನಸಃ ಪ್ರೋಕ್ತ ಉಪಾಂಶುರ್ಮಧ್ಯಮಸ್ತಥಾ।
ಅಧಮೋ ವಾಚಿಕಃ ಪ್ರೋಕ್ತ ಇತ್ಯೇತಚ್ಛಿವಶಾಸನಮ್ ॥ ೫೬ ॥

ಯಮುಚ್ಚನೀಚಸ್ವರಿತೈಃ ಶಬ್ದೈಃ ಸ್ಪಷ್ಟಪದಾಕ್ಷರೈಃ।
ಮಂತ್ರಮುಚ್ಚಾರಯೇದ್ವಾಚಾ ವಾಚಿಕೋಽಯಂ ಜಪಃ ಸ್ಮೃತಃ ॥ ೫೭ ॥

ಜಿಹ್ವಾಮಾತ್ರಪರಿಸ್ಪಂದಾದೀಷದುಚ್ಚಾರಿತೋಽಪಿ ವಾ।
ಅಪರೈರಶ್ರುತಃ ಸ್ವೇನ ಶ್ರುತಶ್ಚೋಪಾಂಶುರುಚ್ಯತೇ ॥ ೫೮ ॥

ಧಿಯಾ ಯದಕ್ಷರಶ್ರೇಣ್ಯಾ ವರ್ಣಾದ್ವರ್ಣಂ ಪದಾತ್ಪದಮ್।
ಶಬ್ದಾರ್ಥಚಿಂತನಂ ಭೂಯಃ ಕಥ್ಯತೇ ಮಾನಸೋ ಜಪಃ ॥ ೫೯ ॥

ವಾಚಿಕಸ್ತ್ವೇಕ ಏವ ಸ್ಯಾದುಪಾಂಶುಃ ಶತಮುಚ್ಯತೇ।
ಸಹಸ್ರಂ ಮಾನಸಂ ಪ್ರೋಕ್ತಂ ಸಗರ್ಭಸ್ತಚ್ಛತಾಧಿಕಃ ॥ ೬೦ ॥

ಜಪವು ಮೂರು ವಿಧ

ಮಾನಸ ಜಪವು ಉತ್ತಮ, ಉಪಾಂಶು ಜಪವು ಮಧ್ಯಮ ಹಾಗೂ ವಾಚಿಕವು ಅಧಮವೆಂದು ಹೇಳಲಾಗಿದೆ. ಇದು ಶಿವಶಾಸನ. (೫೬). ಉದಾತ್ತ, ಅನುದಾತ್ತ ಮತ್ತು ಸ್ವರಿತ ಸ್ವರಗಳಿಂದ ಯುಕ್ತವಾದ ಶಬ್ದಗಳುಳ್ಳ ಮಂತ್ರವನ್ನು ಸ್ಪಷ್ಟ ಪದಾಕ್ಷರಗಳು ಸಹಿತವಾಗಿ ಯಾವುದು ಮಾತಿನ ಮೂಲಕ ಉಚ್ಚರಿಸಲ್ಪಡುತ್ತದೆಯೋ ಅದು ವಾಚಿಕ ಜಪ. (೫೭). ನಾಲಿಗೆಯ ಚಲನೆ ಮಾತ್ರವಿದ್ದು ಸ್ವಲ್ಪ ಉಚ್ಚರಿಸಲ್ಪಟ್ಟರೂ ಬೇರೆಯವರಿಗೆ ಕೇಳಿಸದೆ ತನಗೆ ಮಾತ್ರ ಕೇಳಿಸುವಂತೆ ಯಾವುದು ಇರುತ್ತದೋ ಅದು ಉಪಾಂಶು ಜಪ. (೫೮). ಅಕ್ಷರದ ಕ್ರಮದಂತೆ ವರ್ಣದಿಂದ ವರ್ಣ ಪದದಿಂದ ಪದವು ಇರುವ ಹಾಗೆ ಯಾವುದರಲ್ಲಿ ಶಬ್ದಾರ್ಥಗಳ ಚಿಂತನೆಯು ಇರುತ್ತದೆಯೋ ಅದು ಮಾನಸ ಜಪವೆಂದು ಮತ್ತೆ ಹೇಳಲ್ಪಡುತ್ತದೆ. (೫೯). ವಾಚಿಕಜಪಕ್ಕಿಂತ ಉಪಾಂಶುಜಪವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೂರರಷ್ಟು ಅಧಿಕ, ಮಾನಸಜಪವು ಸಹಸ್ರದಷ್ಟು ಅಧಿಕ ಮತ್ತು ಸಗರ್ಭಜಪವು ಅದಕ್ಕಿಂತ ನೂರರಷ್ಟು ಅಧಿಕ. (೬೦).

ಟಿಪ್ಪಣಿ: ಮನುಸ್ಮೃತಿಯಲ್ಲಿ ತ್ರಿವಿಧ ಜಪದ ವಿಷಯ ಬಂದಿದೆ (ನೋಡಿರಿ-೨.೮೫). ಸೂಕ್ಷ್ಮಾಗ್ರಮ (ಕ್ರಿ.ಪಾ., ೩.೪೧-೪೩) ಮತ್ತು ಪಾರಮೇಶ್ವರಾಗಮ (೧೧.೮೩-೮೯)ರಲ್ಲಿ ಇದೇ ವಿಷಯ ಬಂದಿದೆ. ಪಾರಮೇಶ್ವರಾಗಮದಲ್ಲಿ ಉತ್ತಮವಾದ ಮಾನಸ ಜಪವು ರುದ್ರದೇವತೆಯ ಸ್ವರೂಪ, ಮಧ್ಯಮವಾದ ಉಪಾಂಶುಜಪವು ವಿಷ್ಣುದೇವತೆಯ ಸ್ವರೂಪ ಮತ್ತು ಅಧಮವಾದ ವಾಚಿಕ ಜಪವು ಬ್ರಹ್ಮದೇವತೆಯ ಸ್ವರೂಪ ಎಂದು ಹೇಳಲಾಗಿದೆ. ಇಲ್ಲಿ ಉಳಿದ ವಿಷಯದಲ್ಲಿ ಪಾರಮೇಶ್ವರಾಗಮ ಮತ್ತು ಶ್ರೀಚಂದ್ರಜ್ಞಾನಾಗಮಗಳಲ್ಲಿ ಶಬ್ದಶಃ ಸಾಮ್ಯವಿದೆ. ಸಗರ್ಭ ಜಪವು ಸರ್ವಶ್ರೇಷ್ಠವೆಂದು ಹೇಳಿದೆ. ಅದರ ಸ್ವರೂಪವನ್ನು ಮುಂದಿನ ಶ್ಲೋಕಗಳಲ್ಲಿ ನೋಡಬಹುದು.

ಸಗರ್ಭೋಽಗರ್ಭಃ ಸಧ್ಯಾನಶ್ಚ ಜಪಃ

ಪ್ರಾಣಾಯಾಮ ಸಮಾಯುಕ್ತಃ ಸಗರ್ಭೋ ಜಪ ಉಚ್ಯತೇ।
ಪ್ರಾಣಾಯಾಮೇನ ರಹಿತೋ ಹ್ಯಗರ್ಭೋ ಜಪ ಉಚ್ಯತೇ ॥ ೬೧ ॥

ಚತ್ವಾರಿಂಶತ್ಸಮಾವೃತ್ತಿಂ ಪ್ರಾಣಾಯಾಮಂ ತು ಸಂಸ್ಮರೇತ್।
ಮಂತ್ರಂ ಮಂತ್ರಾರ್ಥವಿಧಿಮಾನಶಕ್ತಃ ಶಕ್ತಿತೋ ಜಪೇತ್ ॥ ೬೨ ॥

ಪಂಚಕಂ ತ್ರಿಕಮೇಕಂ ವಾ ಪ್ರಾಣಾಯಾಮಂ ಸಮಾಚರೇತ್।
ಅಗರ್ಭಂ ವಾ ಸಗರ್ಭಂ ವಾ ಸಗರ್ಭಸ್ತು ಪ್ರಶಸ್ಯತೇ ॥ ೬೩ ॥

ಸಗರ್ಭಾದಪಿ ಸಾಹಸ್ರಂ ಸಧ್ಯಾನೋ ಜಪ ಉಚ್ಯತೇ।
ಏಷು ಪಂಚವಿಧೇಷ್ವೇವ ಕರ್ತವ್ಯಃ ಶಕ್ತಿತೋ ಜಪಃ ॥ ೬೪ ॥

ಸಗರ್ಭ, ಅಗರ್ಭ ಮತ್ತು ಸಧ್ಯಾನ ಜಪಗಳು

ಪ್ರಾಣಾಯಾಮದಿಂದ ಕೂಡಿದುದನ್ನು ಸಗರ್ಭ ಜಪವೆಂದು ಕರೆಯಲಾಗುತ್ತದೆ. ಪ್ರಾಣಾಯಾಮವಿಲ್ಲದುದನ್ನು ಅಗರ್ಭ ಜಪವೆಂದು ಕರೆಯಲಾಗುತ್ತದೆ. (೬೧). ಮಂತ್ರಾರ್ಥವಿಧಿಯನ್ನು ಬಲ್ಲ ವ್ಯಕ್ತಿಯು ಮಂತ್ರವನ್ನು ಒಂದು ಪ್ರಾಣಾಯಾಮದ ಸಮಯದಲ್ಲಿ ೪೦ ಸಾರಿ ಸಂಸ್ಮರಣೆ ಮಾಡಬೇಕು. ಅಶಕ್ತನಾದವನು ಶಕ್ತಿಗೆ ಅನುಗುಣವಾಗಿ ಜಪ ಮಾಡಬೇಕು. (೬೨). ಜಪ ಮಾಡುವವನು ಐದು, ಮೂರು ಅಥವಾ ಒಂದು ಸಗರ್ಭ ಅಥವಾ ಅಗರ್ಭ ಪ್ರಾಣಾಯಾಮವನ್ನು ಅವಶ್ಯವಾಗಿ ಮಾಡಬೇಕು. ಸಗರ್ಭವಂತೂ ಪ್ರಶಂಸಿಸಲ್ಪಡುತ್ತದೆ. (೬೩). ಸಗರ್ಭಕ್ಕಿಂತಲೂ ಸಧ್ಯಾನ ಜಪವು ಸಾವಿರದಷ್ಟು ಅಧಿಕವೆಂದು ಹೇಳಲ್ಪಡುತ್ತದೆ. ಈ ಐದು ವಿಧವಾದ ಜಪಗಳಲ್ಲಿ ಶಕ್ತಿಗನುಗುಣವಾಗಿ ಒಂದು ಜಪವನ್ನು ಮಾಡಬೇಕು. (೬೪).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ: ಪಾರಮೇಶ್ವರಾಮದಲ್ಲಿ (೧೧.೪೯-೬೨)-ಶಬ್ದಶಃ ಸಾಮ್ಯವಿದೆ. ಕುಂಭಕ ಪ್ರಾಣಾಯಾಮಯುಕ್ತವಾದದ್ದು ಸಗರ್ಭವೆಂದೂ, ಪೂರಕ ಮತ್ತು ರೇಚಕ ಪ್ರಾಣಾಯಾಮಗಳಿಂದ ಯುಕ್ತವಾದದ್ದು ಅಗರ್ಭವೆಂದೂ ಅಲ್ಲಿ ಹೇಳಿದೆ.

ಅಂಗುಲ್ಯಾದಿಭಿಃ ಜಪಫಲಭೇದಃ

ಅಂಗುಲ್ಯಾ ಜಪಸಂಖ್ಯಾನಾದೇಕಮೇಕಮುದಾಹೃತಮ್।
ರೇಖಯಾಽಷ್ಟಗುಣಂ ವಿದ್ಯಾತ್ ಪುತ್ರಜೀವೈರ್ದಶಾಧಿಕಮ್ ॥ ೬೫ ॥

ಶತಂ ಸ್ಯಾಚ್ಛಂಕಮಣಿಭಿಃ ಪ್ರವಾಲೈಸ್ತು ಸಹಸ್ರಕಮ್।
ಸ್ಫಟಿಕೈರ್ದಶಸಾಹಸ್ರಂ ಮೌಕ್ತಿಕೈರ್ಲಕ್ಷಮುಚ್ಯತೇ ॥ ೬೬ ॥

ಪದ್ಮಾಕ್ಷೈರ್ದಶಲಕ್ಷಂ ತು ಸೌವರ್ಣೈಃ ಕೋಟಿರುಚ್ಯತೇ।
ಕುಶಗ್ರಂಥ್ಯಾ ಚ ರುದ್ರಾಕ್ಷೈರನಂತಫಲಮುಚ್ಯತೇ ॥ ೬೭ ॥

ಕೈ ಬೆರಳು ಮುಂತಾದವುಗಳಿಂದ ಮಾಡಿದ ಜಪದ ಫಲದಲ್ಲಿ ಭೇದ

ಕೈ ಬೆರಳುಗಳಿಂದ ಜಪ ಮಾಡಿದರೆ ಜಪಗಳ ಸಂಖ್ಯೆ ಅನುಗುಣವಾದ (ಒಂದಕ್ಕೆ ಒಂದರಂತೆ) ಫಲವು ದೊರೆಯುವುದು. (ಕೈ ಬೆರಳುಗಳ) ಗೆರೆಗಳಿಂದ ಮಾಡಿದ ಜಪದ ಫಲ ಅದಕ್ಕಿಂತ ಎಂಟು ಪಟ್ಟು ಜಾಸ್ತಿ, ಪುತ್ರಜೀವದ ಮಾಲೆಯಿಂದಾದರೆ ಹತ್ತು ಪಟ್ಟು ಅಧಿಕ ಫಲ; ಶಂಖಮಣಿಗಳಿಂದಾದರೆ ನೂರು ಪಟ್ಟು, ಹವಳಗಳಿಂದಾದರೆ ಸಾವಿರ ಪಟ್ಟು, ಸ್ಫಟಿಕಗಳಿಂದಾದರೆ ಹತ್ತು ಸಾವಿರ ಪಟ್ಟು, ಮುತ್ತುಗಳಿಂದಾದರೆ ಲಕ್ಷ ಪಟ್ಟು, ಕಮಲದ ಗಡ್ಡೆಗಳಿಂದಾದರೆ ದಶಲಕ್ಷ ಪಟ್ಟು ಮತ್ತು ಚಿನ್ನದ ಮಣಿಗಳಿಂದಾದರೆ ಕೋಟಿಯಷ್ಟು ಅಧಿಕ ಫಲ. ದರ್ಭೆಯ ಹುಲ್ಲಿನ ಗಂಟುಗಳಿಂದ ಮತ್ತು ರುದ್ರಾಕ್ಷಗಳಿಂದ ಜಪವಾದರೆ ಅನಂತಫಲವೆಂದು ಹೇಳಲಾಗುತ್ತದೆ. (೬೫-೬೭).

ಟಿಪ್ಪಣಿ: ಪಾರಮೇಶ್ವರಾಗಮ ೧೧.೯೩-೯೫ರಲ್ಲಿ ಇದೇ ವಿಷಯ ಬಂದಿದೆ. ಕೆಲವೇ ಪಾಠಾಂತರಗಳೊಂದಿಗೆ ಶಬ್ದಶಃ ಸಾಮ್ಯವಿದೆ.

ಜಪಮಾಲಾಯಾಂ ಅಕ್ಷಸಂಖ್ಯಾಭೇದೇನ ಫಲಭೇದಃ

ತ್ರಿಂಶದಕ್ಷೈಃ ಕೃತಾ ಮಾಲಾ ಧನದಾ ಜಪಕರ್ಮಣಿ।
ಸಪ್ತವಿಂಶತಿ ಸಂಖ್ಯಾಕೈರಕ್ಷೈಃ ಪುಷ್ಟಿಪ್ರದಾ ಭವೇತ್ ॥ ೬೮ ॥

ಪಂಚವಿಂಶತಿಶಂಖ್ಯಾಕೈಃ ಕೃತಾ ಮುಕ್ತಿಂ ಪ್ರಯಚ್ಛತಿ।
ಅಕ್ಷೈಸ್ತು ಪಂಚದಶಭಿರಭಿಚಾರ ಫಲಪ್ರದಾ ॥ ೬೯ ॥

ಜಪಮಾಲೆಯಲ್ಲಿ ರುದ್ರಾಕ್ಷಸಂಖ್ಯೆಯ ಬೇದದಿಂದ ಫಲಭೇದ

ಜಪಕರ್ಮದಲ್ಲಿ ಮೂವತ್ತು ರುದ್ರಾಕ್ಷಗಳಿಂದ ಮಾಡಿದ ಮಾಲೆಯು ಧನವನ್ನು ಕೊಡುವುದು. ಇಪ್ಪತ್ತೇಳು ಸಂಖ್ಯೆಯ ರುದ್ರಾಕ್ಷಗಳಿಂದಾದುದು ಪುಷ್ಟಿಯನ್ನು ಕೊಡುವುದಾಗಿದೆ. (೬೮). ಇಪ್ಪತ್ತೈದು ಸಂಖ್ಯೆಯ ರುದ್ರಾಕ್ಷಗಳಿಂದ ಮಾಡಿದ್ದು ಮುಕ್ತಿಯನ್ನು ಕೊಡುತ್ತದೆ. ಹದಿನೈದು ರುದ್ರಾಕ್ಷಗಳಿಂದ ಮಾಡಿದ್ದು ಅಭಿಚಾರ ಕರ್ಮದ ಫಲವನ್ನು ನೀಡುತ್ತದೆ. (೬೯).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಪಾರಮೇಶ್ವರಾಗಮ, ೧೧. ೯೬-೯೭ನ್ನು ನೋಡಿರಿ.

ಜಪೇಽಂಗುಲಿಭೇದೇನ ಫಲಭೇದಃ

ಅಂಗುಷ್ಠಂ ಮೋಕ್ಷದಂ ವಿದ್ಯಾತ್ತರ್ಜನೀ ಶತ್ರುನಾಶಿನೀ।
ಮಧ್ಯಮಾ ಧನದಾ ಶಾಂತಿಂ ಕರೋತ್ಯೇವ ಹ್ಯಾನಾಮಿಕಾ॥
ಕನಿಷ್ಠಾಕರ್ಷಣೀ ಪ್ರೋಕ್ತಾ ಜಪಕರ್ಮಣಿ ಗೀಷ್ಪತೇ ॥ ೭೦ ॥
ಅಂಗುಷ್ಠೇನ ಜಪೇಜ್ಜಪ್ಯಮನ್ಯೈರಂಗುಲಿಭಿಃ ಸಹ।
ಅಂಗುಷ್ಠೇನ ವಿನಾ ಜಪ್ಯಂ ಕೃತಂ ತದಫಲಂ ಯತಃ ॥ ೭೧ ॥

ಜಪದಲ್ಲಿ ಬೆರಳುಗಳ ಭೇದದಿಂದ ಫಲಭೇದ

ಬೃಹಸ್ಪತಿಯೇ ಜಪ ಕರ್ಮದಲ್ಲಿ ಅಂಗುಷ್ಠದ ಪ್ರಯೋಗವು ಮೋಕ್ಷ ಪ್ರದವೆಂದು ತಿಳಿಯಬೇಕು; ತರ್ಜನೀ ಬೆರಳಿನ ಪ್ರಯೋಗ ಶತ್ರುಗಳ ನಾಶಕ; ಮಧ್ಯ ಬೆರಳಿನ ಪ್ರಯೋಗ ಧನಪ್ರದ; ಅನಾಮಿಕ ಬೆರಳಿನ ಪ್ರಯೋಗ ಶಾಂತಿಯನ್ನು ನೀಡುತ್ತದೆ; ಕನಿಷ್ಠ ಬೆರಳಿನ ಪ್ರಯೋಗ ಆಕರ್ಷಣೆಯನ್ನು ಮಾಡುತ್ತದೆಯೆಂದು ಹೇಳಲ್ಪಟ್ಟಿದೆ. (೭೦). ಬೇರೆ ಬೆರಳುಗಳ ಮೂಲಕ ಜಪ ಮಾಡುವಾಗ ಅವುಗಳೊಂದಿಗೆ ಅಂಗುಷ್ಠವನ್ನು (ಹೆಬ್ಬೆರಳನ್ನು) ಉಪಯೋಗಿಸಿ ಜಪಿಸಬೇಕು. ಅಂಗುಷ್ಠವನ್ನು ಉಪಯೋಗಿಸದೆ ಜಪಿಸಿದುದು ಫಲರಹಿತವಾದುದು ಎಂಬುದು ಅದಕ್ಕೆ ಕಾರಣ. (೭೧).

ಟಿಪ್ಪಣಿ: ಪಾರಮೇಶ್ವರಾಗಮ ೧೧.೯೮-೧೦೦ ನೋಡಿರಿ; ಶಬ್ದಶಃ ಸಾಮ್ಯವಿದೆ.

ಸ್ಥಾನಾದಿಭೇದೇನ ಫಲಭೇದಃ

ಗೃಹೇ ಜಪಂ ಸಮಂ ವಿದ್ಯಾದ್ ಗೋಷ್ಠೇ ಶತಗುಣಂ ಭವೇತ್।
ಪುಣ್ಯಾರಣ್ಯೇ ತಥಾಽಽರಾಮೇ ಸಹಸ್ರಗುಣಮುಚ್ಯತೇ ॥ ೭೨ ॥
ಅಯುತಂ ಪರ್ವತೇ ರಮ್ಯೇ ನದ್ಯಾಂ ಲಕ್ಷಮುದಾಹೃತಮ್।
ಕೋಟಿಂ ದೇವಾಲಯೇ ವಿದ್ಯಾದನಂತಂ ಶಿವಸನ್ನಿಧೌ ॥ ೭೩ ॥
ಯದಿಷ್ಟಲಿಂಗಂ ಸಂಪಶ್ಯನ್ ವಾಮಹಸ್ತಸ್ಥಿತಂ ಪರಮ್।
ಜಪತೇ ತತ್ಫಲಂ ವಕ್ತುಂ ನ ಮಯಾ ಶಕ್ಯತೇ ಗುರೋ ॥ ೭೪ ॥
ಸೂರ್ಯಸ್ಯಾಗ್ನೇರ್ಗುರೋರಿಂದೋರ್ದೀಪಸ್ಯ ಚ ಜಲಸ್ಯಚ।
ವಿಪ್ರಾಣಾಂ ಚ ಗವಾಂ ಚೈವ ಸನ್ನಿಧೌ ಶಸ್ಯತೇ ಜಪಃ ॥ ೭೫ ॥
ತತ್ಪೂರ್ವಾಭಿಮುಖಂ ವಶ್ಯಂ ದಕ್ಷಿಣಂ ಚಾಭಿಚಾರಿಕಮ್।
ಪಶ್ಚಿಮಂ ಧನದಂ ವಿದ್ಯಾದುತ್ತರಂ ಶಾಂತಿದಂ ಭವೇತ್ ॥ ೭೬ ॥

ಸ್ಥಾನ ಮುಂತಾದ ಭೇದದಿಂದ ಫಲಭೇದ

ಮನೆಯಲ್ಲಿ ಜಪವು ಸಮಫಲವುಳ್ಳದ್ದು (ಒಂದಕ್ಕೆ ಒಂದರಂತೆ). ಗೋವುಗಳ ಶಾಲೆಯಲ್ಲಿ ಜಪವು ನೂರುಪಟ್ಟು, ಪವಿತ್ರ ವನದಲ್ಲಿ ಮತ್ತು ಉದ್ಯಾನದಲ್ಲಿ ಜಪವು ಸಾವಿರ ಪಟ್ಟು, ಪರ್ವತದಲ್ಲಿ ಜಪವು ಹತ್ತು ಸಾವಿರಪಟ್ಟು, ನದಿಯಲ್ಲಿ ಜಪವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಕ್ಷಪಟ್ಟು, ದೇವಾಲಯದಲ್ಲಿ ಜಪವು ಕೋಟಿಯಷ್ಟು ಶಿವಸಂನಿಧಿಯಲ್ಲಿ ಜಪವು ಅನಂತವಾದ ಫಲವನ್ನು ಕೊಡುತ್ತದೆ. (೭೨-೭೩). ದೇವಗುರುವೇ, ಎಡ ಅಂಗೈಯಲ್ಲಿ ಇರುವ ಶ್ರೇಷ್ಠ ಇಷ್ಟಲಿಂಗವನ್ನು ನೋಡುತ್ತಾ ಮಾಡುವ ಯಾವ ಜಪವಿದೆಯೋ ಅದರ ಫಲವನ್ನು ಹೇಳುವುದು ನನ್ನಿಂದ ಸಾಧ್ಯವಿಲ್ಲ. (೭೪). ಸೂರ್ಯ, ಅಗ್ನಿ, ಗುರು, ಚಂದ್ರ, ದೀಪ, ಜಲ, ವಿಪ್ರರು ಮತ್ತು ಗೋವುಗಳ ಸನ್ನಿಧಿಯಲ್ಲಿ ಜಪವು ಪ್ರಶಸ್ತವಾದುದು. (೭೫). ಪೂರ್ವಾಭಿಮುಖವಾದ ಜಪವು ವಶೀಕರಣವುಳ್ಳದ್ದು, ದಕ್ಷಿಣಾಭಿಮುಖವಾದರೆ ಅಭಿಚಾರ ಫಲ, ಪಶ್ಚಿಮಾಭಿಮುಖವಾದರೆ ಧನಪ್ರದ ಮತ್ತು ಉತ್ತರಾಭಿಮುಖವಾದರೆ ಶಾಂತಿಯನ್ನು ನೀಡುವುದು. (೭೬).

ಟಿಪ್ಪಣಿ : ಪಾರಮೇಶ್ವರಾಗಮ ೧೧.೧೦೦-೧೦೩ರನ್ನು ನೋಡಿರಿ.

ಜಪಕಾಲೇ ವರ್ಜ್ಯಮ್

ಉಷ್ಣೀಷೀ ಕಂಚುಕೀ ನಗ್ನೋ ಮುಕ್ತಕೇಶೋ ಗಲಾವೃತಃ।
ಅಪವಿತ್ರಕರೋಽಶುದ್ಧೋ ವಿಲಪನ್ನ ಜಪೇತ್ ಕ್ವಚಿತ್ ॥ ೭೭ ॥

ಕ್ರೋಧಂ ಮದಂ ಕ್ಷುಧಾಂ ತಂದ್ರಾಂ ನಿಷ್ಠೀವನವಿಜೃಂಭಣೇ।
ದರ್ಶನಂ ಚ ಶ್ವನೀಚಾನಾಂ ವರ್ಜಯೇಜ್ಜಪಕರ್ಮಣಿ ॥ ೭೮ ॥

ಆಚಾಮೇತ್ ಸಂಭವೇ ತೇಷಾಂ ಸ್ಮರೇತ್ಸಾಂಬಂ ತ್ರಿಯಂಬಕಮ್।
ಜ್ಯೋತೀಂಷಿ ಚ ಪ್ರಪಶ್ಯೇದ್ವಾ ಕುರ್ಯಾದ್ವಾ ಪ್ರಾಣಸಂಯಮಮ್ ॥ ೭೯ ॥

ಅಶಾನಶ್ಚ ಶಯಾನಶ್ಚ ಗಚ್ಛನ್ನುತ್ಥಿತ ಏವ ವಾ।
ರಥ್ಯಾಯಾಮಶಿವೇ ಸ್ಥಾನೇ ನ ಜಪೇತ್ತಿಮಿರಾಂತರೇ ॥ ೮೦ ॥

ಪ್ರಸಾರ್ಯ ನ ಜಪೇತ್ ಪಾದೌ ಕುಕ್ಕುಟಾಸನ ಏವ ವಾ।
ಯಾನಶಯ್ಯಾಧಿರೂಢೋ ವಾ ಚಿಂತಾವ್ಯಾಕುಲಿತೋಽಪಿ ವಾ॥
ಸದಾಚಾರೋ ಜಪನ್ ಜುಹ್ವನ್ ಧ್ಯಾಯನ್ ಭದ್ರಂ ಸಮಶ್ನುತೇ ॥ ೮೧ ॥

ರಹಸ್ಯಮನ್ಯದ್ ವಕ್ಷ್ಯಾಮಿ ಗೋಪನೀಯಮಿದಂ ಶೃಣು।
ನ ವಾಚ್ಯಂ ಯಸ್ಯ ಕಸ್ಯಾಪಿ ನಾಸ್ತಿಕಸ್ಯಾಥವಾ ಪಶೋಃ ॥ ೮೨ ॥

ಜಪಕಾಲದಲ್ಲಿ ನಿಷಿದ್ಧವಾದವುಗಳು

ಪೇಟವನ್ನು ಕಟ್ಟಿಕೊಂಡವನು, ಅಂಗಿಯನ್ನು ಧರಿಸಿದವನು, ನಗ್ನನು, ಬಿಚ್ಚಿದ ಕೂದಲಿನವನು, ಕೊರಳಿಗೆ ಬಟ್ಟೆಸುತ್ತಿಕೊಂಡವನು, ಅಪವಿತ್ರ ಹಸ್ತವುಳ್ಳವನು, ಅಶುದ್ಧನು, ವಿಲಾಪ ಮಾಡುವವನು, ಯಾವಾಗಲೂ ಜಪ ಮಾಡಬಾರದು. (೭೭). ಸಿಟ್ಟು, ಮದ, ಹಸಿವು, ಬಳಲಿಕೆ, ವಾಂತಿ, ಆಕಳಿಕೆ, ನಾಯಿ ಮತ್ತು ನೀಚರ ದರ್ಶನ, ಇವುಗಳನ್ನು ಜಪದಕರ್ಮದಲ್ಲಿ ಬಿಡಬೇಕು. (೭೮). ಅಂಥದ್ದೇನಾದರೂ, ಸಂಭವಿಸಿದರೆ ಆಚಮನ ಮಾಡಬೇಕು, ಅಂಬಾಸಹಿತ ತ್ರ್ಯಂಬಕವನ್ನು ಸ್ಮರಿಸಬೇಕು, ಸೂರ್ಯಾದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಯೋತಿಪುಂಜಗಳನ್ನು ನೋಡಬೇಕು ಅಥವಾ ಪ್ರಾಣಾಯಾಮವನ್ನು ಮಾಡಬೇಕು (೭೯). ಭೋಜನ ಮಾಡುತ್ತಾ, ಮಲಗಿರುತ್ತಾ, ನಡೆಯುತ್ತಾ, ನಿಂತುಕೊಂಡು, ರಸ್ತೆಯಲ್ಲಿ, ಅಶುಭ ಸ್ಥಾನದಲ್ಲಿ, ಕತ್ತಲೆಯಲ್ಲಿ ಜಪವನ್ನು ಮಾಡಬಾರದು. (೮೦). ಕಾಲುಗಳನ್ನು ಚಾಚಿ, ಕುಕ್ಕುರು ಗಾಲಿನಲ್ಲಿ ಕುಳಿತು, ಯಾನ ಅಥವಾ ಶಯ್ಯೆಯಲ್ಲಿ ಕುಳಿತು, ಚಿಂತೆಯಿಂದ ವ್ಯಾಕುಲಿತನಾಗಿ ಜಪ ಮಾಡಬಾರದು. ಸದಾಚಾರ ಸಂಪನ್ನನಾದ ವ್ಯಕ್ತಿಯು ಜಪ ಮಾಡುತ್ತಾ ಹವಿಸ್ಸನ್ನು ಅರ್ಪಿಸುತ್ತಾ ಧ್ಯಾನ ಮಾಡುತ್ತಾ ಮಂಗಲವನ್ನು ಹೊಂದುತ್ತಾನೆ. (೮೧). ನಾನು ಈಗ ನಿನಗೆ ಇನ್ನೊಂದು ರಹಸ್ಯದ ವಿಷಯವನ್ನು ಹೇಳುತ್ತೇನೆ. ಅದನ್ನು ಗುಪ್ತವಾಗಿ ಇಟ್ಟುಕೊಳ್ಳಬೇಕು. ಅದನ್ನು ಯಾರಿಗೆಂದರೆ ಅವರಿಗೆ, ನಾಸ್ತಿಕನಿಗೆ ಅಥವಾ ಪಶುವಿಗೆ (ಅಜ್ಞಾನಿಗೆ) ಹೇಳಬಾರದು. (೮೨).

ಟಿಪ್ಪಣಿ : ಸೂಕ್ಷ್ಮಾಗ್ರಮ, ಕ್ರಿ.ಪಾ. ೩.೯೦ರಲ್ಲಿ ಯಾರಿಗೆ ಪಂಚಾಕ್ಷರ ಮಂತ್ರವನ್ನು ಬೋಧಿಸಬೇಕು ಎಂಬುದನ್ನು ಹೇಳಿದೆ. ನೋಡಿರಿ: "ಶಿವಭಕ್ತಾಯ ಶಾಂತಾಯ ವಿಶೇಷಾದಾಸ್ತಿಕಾಯ ಚ । ವಕ್ತವ್ಯಂ ಹಿ ಪ್ರಯತ್ನೇನ ಗುರುವಾಕ್ಯರತಾಯ ಚ॥" (ಶಿವಭಕ್ತನಿಗೆ ಶಾಂತನಾದವನಿಗೆ, ವಿಶೇಷವಾಗಿ ಆಸ್ತಿಕನಿಗೆ, ಗುರುವಿನ ಆಜ್ಞೆಯನ್ನು ನಡೆಸುವವನಿಗೆ ಈ ಮಂತ್ರವನ್ನು ಉಪದೇಶಿಸಬೇಕು).

ಪಂಚಾಕ್ಷರ ಮಹಿಮಾ

ಸದಾಚಾರವಿಹೀನಸ್ಯ ಪತಿತಸ್ಯಾಂತ್ಯಜಸ್ಯ ಚ।
ಪಂಚಾಕ್ಷರಾತ್ ಪರಂ ನಾಸ್ತಿ ಪರಿತ್ರಾಣಂ ಕಲೌ ಯುಗೇ ॥ ೮೩ ॥

ಗಚ್ಛತಸ್ತಿಷ್ಠತೋ ವಾಪಿ ಸ್ವೇಚ್ಛಯಾ ಕರ್ಮ ಕುರ್ವತಃ।
ಅಶುಚೇರ್ವಾ ಶುಚೇರ್ವಾಪಿ ಮಂತ್ರೋಽಯಂ ನ ಚ ನಿಷ್ಫಲಃ ॥ ೮೪ ॥

ಅನಾಚಾರವತಾಂ ಪುಂಸಾಮವಿಶುದ್ಧಷಡಧ್ವನಾಮ್।
ಅನಾದಿಷ್ಟೋಽಪಿ ಗುರುಣಾ ಮಂತ್ರೋಽಯಂ ನ ಚ ನಿಷ್ಫಲಃ ॥ ೮೫ ॥

ಅಂತ್ಯಜಸ್ಯಾಪಿ ಮೂಢಸ್ಯ ಮೂರ್ಖಸ್ಯ ಪತಿತಸ್ಯ ಚ ।
ನಿರ್ಮರ್ಯಾದಸ್ಯ ನೀಚಸ್ಯ ಮಂತ್ರೋಽಯಂ ನ ಚ ನಿಷ್ಫಲಃ ॥ ೮೬ ॥

ಸರ್ವಾವಸ್ಥಾಂ ಗತಸ್ಯಾಪಿ ಮಯಿ ಭಕ್ತಿಮತಃ ಸದಾ।
ಸಿದ್ಧ್ಯತ್ಯೇಷ ನ ಸಂದೇಹೋ ನಾಪರಸ್ಯ ತು ಕಸ್ಯಚಿತ್ ॥ ೮೭ ॥

ನ ಕದಾಚನ ಕಸ್ಯಾಪಿ ರಿಪುರೇಷ ಮಹಾಮನುಃ।
ಸಿದ್ಧೋ ವಾಽಥ ಸುಸಿದ್ಧೋ ವಾ ಸಾಧ್ಯೋ ವಾಽಥ ಭವಿಷ್ಯತಿ ॥ ೮೮ ॥

ಸಿದ್ಧೇನ ಗುರುಣಾಽಽದಿಷ್ಟಃ ಸುಸಿದ್ಧ ಇತ ಕಥ್ಯತೇ।
ಅಸಿದ್ಧೇನಾಽಪಿ ವಾ ದತ್ತಃ ಸಿದ್ಧಃ ಸಾಧ್ಯಸ್ತು ಕೇವಲಮ್ ॥ ೮೯ ॥

ಅಸಾಧಿತಃ ಸಾಧಿತೋ ವಾ ಸಿದ್ಧ್ಯತ್ಯೇಷ ನ ಸಂಶಯಃ।
ಶ್ರದ್ಧಾತಿಶಯಯುಕ್ತಸ್ಯ ಶಿವೇ ಮಂತ್ರೇ ತಥಾ ಗುರೌ ॥ ೯೦ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಚಾಕ್ಷರದ ಮಹಿಮೆ

ಸದಾಚಾರವಿಲ್ಲದವನಿಗೆ, ಧರ್ಮಮಾರ್ಗವನ್ನು ಬಿಟ್ಟವನಿಗೆ, ಅಂತ್ಯಜನಿಗೆ ಪಂಚಾಕ್ಷರ ಮಂತ್ರಕ್ಕಿಂತ ಬೇರೆ ಯಾವುದೇ ರಕ್ಷೆ ಕಲಿಯುಗದಲ್ಲಿ ಇಲ್ಲ. (೮೩). ನಡೆಯುತ್ತಿರುವವನಿಗೆ, ನಿಂತಿರುವವನಿಗೆ, ಸ್ವೇಚ್ಛೆಯಿಂದ ಕೆಲಸ ಮಾಡುವವನಿಗೆ ಈ ಮಂತ್ರವು ನಿಷ್ಫಲವಾಗದು. (೮೪). ಅನಾಚಾರಿಗಳಾದ, ಷಡಧ್ವಶುದ್ಧಿಯಿಲ್ಲದ ವ್ಯಕ್ತಿಗಳಿಗೆ ಗುರುವಿನಿಂದ ಉಪದೇಶಿಸಲ್ಪಡದಿದ್ದರೂ ಈ ಮಂತ್ರವು ನಿಷ್ಫಲವಾಗದು. (೮೫). ಅಂತ್ಯಜನಿಗೆ, ಮೂಢನಿಗೆ, ಮೂರ್ಖನಿಗೆ, ಭ್ರಷ್ಟನಿಗೆ, ಮರ್ಯಾದೆಯನ್ನು ಮೀರಿದವನಿಗೆ, ನೀಚನಿಗೆ ಕೂಡ ಈ ಮಂತ್ರವು ನಿಷ್ಫಲವಾಗದು. (೮೬). ಎಲ್ಲಾ ಅವಸ್ಥೆಗಳನ್ನು ತಲುಪಿದವನಾದರೂ ನನ್ನಲ್ಲಿ ಭಕ್ತಿಯುಳ್ಳವನಿಗೆ ಇದು (ಈ ಮಂತ್ರವು) ಸಿದ್ಧಿಸುತ್ತದೆ, ಬೇರೆಯಾರಿಗೂ ಅಲ್ಲ ಎಂಬುದರಲ್ಲಿ ಸಂದೇಹವಿಲ್ಲ. (೮೭). ಯಾವಾಗಲೂ ಯಾರಿಗೂ ಕೂಡ ಈ ಮಹಾಮಂತ್ರವು ಶತ್ರುವಲ್ಲ. ಅದು ಸಿದ್ಧವೋ ಸುಸಿದ್ಧವೋ ಅಥವಾ ಸಾಧ್ಯವೋ ಆಗುತ್ತದೆ. (೮೮). ಸಿದ್ಧನಾದ ಗುರುವಿನಿಂದ ಉಪದೇಶಿಸಲ್ಪಟ್ಟಿದ್ದರೆ ಅದು ಸುಸಿದ್ಧವೆಂದು ಕರೆಯಲ್ಪಡುತ್ತದೆ. ಸಿದ್ಧನಲ್ಲದವನಿಂದ ಉಪದೇಶಿಸಲ್ಪಟ್ಟಿದ್ದರೆ ಸಿದ್ಧವೆಂದೂ, ಕೇವಲ ತನ್ನಿಂದ ಅಂಗೀಕೃತವಾದುದು ಸಾಧ್ಯವೆಂದೂ ಕರೆಯಲ್ಪಡುತ್ತದೆ. (೮೯). ಸಾಧಿಸಲ್ಪಡದಿರಲಿ ಸಾಧಿಸಲ್ಪಟ್ಟಿರಲಿ ಇದು ಶಿವ, ಮಂತ್ರ ಮತ್ತು ಗುರುಗಳಲ್ಲಿ ಅತಿಶಯವಾದ ಶ್ರದ್ಧೆಯುಳ್ಳವನಿಗೆ ಸಿದ್ಧಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ. (೯೦).

ಟಿಪ್ಪಣಿ : ಮೇಲೆ ಹೇಳಿದ ನಕಾರಾತ್ಮಕ ಸಂದರ್ಭಗಳಲ್ಲೂ ಪಂಚಾಕ್ಷರ ಮಂತ್ರವು ನಿಷ್ಫಲವಾಗುವುದಿಲ್ಲ ಎಂದರೆ ನಕಾರಾತ್ಮಕ ಸಂದರ್ಭಗಳಲ್ಲಿ ಪಂಚಾಕ್ಷರ ಮಂತ್ರವು ತಪ್ಪದೆ ಸಿದ್ಧಿಸುತ್ತದೆ ಎಂದರ್ಥ. ಇದಕ್ಕೆ ಸಂವಾದಿಗಳಾದ ಕೆಲವು ಉಕ್ತಿಗಳು ಪಾರಮೇಶ್ವರಾಗಮದಲ್ಲಿಯೂ ಬಂದಿವೆ. ನೋಡಿರಿ "ಶಾಂತೋ ವಾ ಕುಪಿತೋ ವಾऽಪಿ ಶುದ್ಧೋ ವಾऽಶುದ್ಧ ಏವ ವಾ। ವಿಧಿನಾऽಪಿ ವಿನಾ ವಾऽಪಿ ಶೈವಂ ಪಂಚಾಕ್ಷರಂ ಜಪೇತ್॥" (೧೦.೮೭) (ಶಾಂತನಾಗಿರಲಿ, ಸಿಟ್ಟಿನವನಾಗಿರಲಿ, ಶುದ್ಧನಾಗಿರಲಿ ಅಶುದ್ಧನಾಗಿರಲಿ ವಿಧಿಗೆ ಅನುಸಾರವಾಗಿಯಾಗಲಿ, ವಿಧಿಗೆ ಅನುಸಾರವಾಗಿ ಇಲ್ಲದಿರಲಿ ಪಂಚಾಕ್ಷರ ಮಂತ್ರವನ್ನು ಜಪಿಸಬೇಕು). "ಅಂತ್ಯಜೋ ವಾऽಧಮೋ ವಾಪಿ ಮೂರ್ಖೋ ವಾ ಪಂಡಿತೋऽಪಿ ವಾ। ಪಂಚಾಕ್ಷರಜಪೇ ನಿಷ್ಠಃ ಮುಚ್ಯತೇ ಪಾಶಬಂಧನಾತ್॥" (೧೧.೨೭) (ಅಂತ್ಯಜನಾಗಲಿ, ಅಧಮನಾಗಲಿ, ಮೂರ್ಖನಾಗಲಿ, ಪಂಡಿತನಾಗಲಿ, ಪಂಚಾಕ್ಷರ ಜಪವನ್ನು ಮಾಡುವುದರಲ್ಲಿ ನಿಷ್ಠನಾದವನು ಸಂಸಾರ ಬಂಧನಗಳಿಂದ ಮುಕ್ತನಾಗುವನು).

ಪಂಚಾಕ್ಷರೀವಿದ್ಯಾಮಾಶ್ರಯೇತ್

ತಸ್ಮಾನ್ಮಂತ್ರಾಂತರಾಂಸ್ತ್ಯಕ್ತ್ವಾ ಸಾಪಾಯಾನಧಿಕಾರತಃ।
ಆಶ್ರಯೇತ್ ಪರಮಾಂ ವಿದ್ಯಾಂ ಹೃದ್ಯಾಂ ಪಂಚಾಕ್ಷರೀಂ ಬುಧಃ ॥ ೯೧ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಂತ್ರಾಂತರೇಷು ಸಿದ್ಧೇಷು ಮಂತ್ರ ಏಷ ನ ಸಿದ್ಧ್ಯತಿ।
ಅಸ್ಮಿನ್ ಸಿದ್ಧೇ ಮಹಾಮಂತ್ರೇ ತೇಽಪಿ ಸಿದ್ಧಾ ಭವಂತಿ ಹಿ ॥ ೯೨ ॥
ಅಪಾರೋ ಮಹಿಮಾ ಶೈವಪಂಚಾಕ್ಷರಮಹಾಮನೋಃ।
ನ ವಕ್ತುಂ ವಿಧಿನಾ ಶಕ್ಯಃ ಸಂಕ್ಷಿಪ್ಯೋಕ್ತೋ ಮಯಾನಘ ॥ ೯೩ ॥

ಪಂಚಾಕ್ಷರ ಮಂತ್ರವನ್ನು ಆಶ್ರಯಿಸಬೇಕು

ಆದ್ದರಿಂದ ಅಧಿಕಾರ ಭೇದದಿಂದ ಅಪಾಯಕಾರಿಗಳಾದ ಬೇರೆ ಎಲ್ಲಾ ಮಂತ್ರಗಳನ್ನು ಬಿಟ್ಟು ಶ್ರೇಷ್ಠವಾದ, ಮನೋಹರವಾದ ಪಂಚಾಕ್ಷರ ಮಂತ್ರವನ್ನು ಜ್ಞಾನಿಯು ಆಶ್ರಯಿಸಬೇಕು. (೯೧). ಬೇರೆ ಮಂತ್ರಗಳು ಸಿದ್ಧಿಸಿದರೂ ಪಂಚಾಕ್ಷರ ಮಂತ್ರವು ಸಿದ್ಧಿಸದು. ಆದರೆ ಈ ಮಹಾ ಮಂತ್ರ ಸಿದ್ಧಿಸಿದರೆ ಅವೂ ಕೂಡ ಸಿದ್ಧಿಸುತ್ತವೆ. (೯೨). ಶೈವ ಪಂಚಾಕ್ಷರ ಮಹಾಮಂತ್ರದ ಮಹಿಮೆ ಅಪಾರವಾದುದು. ಬ್ರಹ್ಮನಿಗೂ ಅದನ್ನು ಹೇಳಲು ಸಾಧ್ಯವಿಲ್ಲ. ಶ್ರೇಷ್ಠನೇ ನಾನು ಸಂಕ್ಷಿಪ್ತವಾಗಿ ಹೇಳಿದ್ದೇನೆ. (೯೩).

ಟಿಪ್ಪಣಿ : ಸೂಕ್ಷ್ಮಾಗ್ರಮ, ಕ್ರಿ.ಪಾ., ೩.೭೪ ಇದನ್ನೇ ಹೇಳುತ್ತದೆ "ತಸ್ಮಾತ್ಸರ್ವಂ ಪರಿತ್ಯಜ್ಯ ಜಪೇತ್ ಪಂಚಾಕ್ಷರಂ ಶುಭಮ್।"

ಅಷ್ಟಾವರಣಪ್ರಕರಣೋಪಸಂಹಾರಃ

ಇದಂ ಹಿ ಶೈವದೀಕ್ಷಾಯಾ ಮಹದಾವರಣಾಷ್ಟಕಮ್।
ಪ್ರಥಿತಂ ಸರ್ವವಿದ್ಯಾಸು ಪ್ರತ್ಯೇಕಮಪಿ ಮುಕ್ತಿದಮ್ ॥ ೯೪ ॥
ಗದಿತಂ ತ್ವಯಿ ಸಂಪ್ರೀತ್ಯಾ ಭುವನಾನುಜಿಘೃಕ್ಷಯಾ।
ವೃಂದಾರಕಕುಲಾಚಾರ್ಯ ಕಿಮನ್ಯಚ್ಛ್ರೋತುಮಿಚ್ಛಸಿ ॥ ೯೫ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರಬೃಹಸ್ಪತಿಸಂವಾದೇ ಶಿವಶಾಸನೇ ಕ್ರಿಯಾಪಾದೇ ಪಂಚಾಕ್ಷರಸ್ವರೂಪನಿರೂಪಣಂ ನಾಮಾಷ್ಟಮಃ ಪಟಲಃ ॥ ೮ ॥

ಅಷ್ಟಾವರಣ ಪ್ರಕರಣದ ಮುಕ್ತಾಯ

ಇದು ಶೈವ ದೀಕ್ಷೆಗೆ ಸಂಬಂಧಿಸಿದ ಮಹತ್ವದ ಅಷ್ಟಾವರಣ. ಎಲ್ಲಾ ಶಾಸ್ತ್ರಗಳಲ್ಲಿ ಇದು ಪ್ರಸಿದ್ಧ, ಇವುಗಳಲ್ಲಿ ಒಂದೊಂದೂ ಕೂಡ ಮುಕ್ತಿಯನ್ನು ಕೊಡುವುದು. (೯೪). ಜಗತ್ತಿಗೆ ಅನುಗ್ರಹಿಸುವ ಇಚ್ಛೆಯಿಂದ ಪ್ರೀತಿಪೂರ್ವಕವಾಗಿ ನಿನಗೆ ಅದನ್ನು ಹೇಳಿದ್ದೇನೆ. ದೇವತೆಗಳ ಕುಲಗುರುವೇ, ಮತ್ತೇನನ್ನು ಕೇಳಲಿಚ್ಛಿಸುವೆ? (೯೫).

ಇಲ್ಲಿಗೆ ಶ್ರೀಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ ಅನಂತರುದ್ರ ಬೃಹಸ್ಪತಿ ಸಂವಾದದಲ್ಲಿ ಶಿವಶಾಸನದಲ್ಲಿ ಕ್ರಿಯಾಪಾದದಲ್ಲಿ ಪಂಚಾಕ್ಷರಸ್ವರೂಪ ನಿರೂಪಣವೆಂಬ ಅಷ್ಟಮ ಪಟಲವು ಮುಗಿಯಿತು. (೮).

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನವಮಃ ಪಟಲಃ

॥ ಪಂಚಾಚಾರನಿರೂಪಣಮ್॥

ಬೃಹಸ್ಪತಿರುವಾಚ

ಸರ್ವಾಗಮಾರ್ಥಸಾರಜ್ಞ ಸರ್ವಭೂತದಯಾಪರ।
ಜಗದುದ್ಧರಣೋನ್ನಿದ್ರಾನಂತರುದ್ರ ನಮೋಽಸ್ತುತೇ ॥ ೧ ॥

ಅಷ್ಟಾವರಣಮಾಹಾತ್ಮ್ಯಮನಂತಶ್ರುತಿಚೋದಿತಮ್।
ಶ್ರೀಮನ್ಮುಖಾದಿಹಾಕರ್ಣ್ಯ ಪರಾಂ ತೃಪ್ತಿಮವಾಪ್ನುವಮ್ ॥ ೨ ॥

ಆಚಾರಾಣಾಂ ಚ ಪಂಚಾನಾಂ ಸ್ವರೂಪಂ ವಿನಿಬೋಧ್ಯ ಮಾಮ್।
ಅನುಗೃಹ್ಣೀಷ್ವ ಕೃಪಯಾ ಸುರಾಸುರನಮಸ್ಕೃತ ॥ ೩ ॥

ಬೃಹಸ್ಪತಿಯು ಹೇಳಿದನು

ಸರ್ವ ಆಗಮಗಳ ಸಾರವನ್ನು ತಿಳಿದ, ಎಲ್ಲಾ ಪ್ರಾಣಿಗಳ ಬಗ್ಗೆ ದಯೆಯುಳ್ಳವನಾದ, ಜಗತ್ತಿನ ಉದ್ಧಾರಕ್ಕಾಗಿ ನಿದ್ರೆಯನ್ನು ಬಿಟ್ಟ, ಅನಂತರುದ್ರನೇ, ನಿನಗೆ ನಮಸ್ಕಾರ. (೧). ಅನಂತಶ್ರುತಿಗಳಿಂದ ವರ್ಣಿತವಾದ ಅಷ್ಟಾವರಣದ ಮಹತ್ತ್ವವನ್ನು ನಿನ್ನ ಶ್ರೀ ಮುಖದಿಂದ ಕೇಳಿ ಅತ್ಯಂತವಾದ ತೃಪ್ತಿಯನ್ನು ಹೊಂದಿದ್ದೇನೆ. (೨). ಸುರರು ಮತ್ತು ಅಸುರರಿಂದ ನಮಸ್ಕೃತನೇ, ಪಂಚ ಆಚಾರಗಳ ಸ್ವರೂಪವನ್ನು ಬೋಧಿಸಿ ನನಗೆ ಕೃಪೆಯಿಂದ ಅನುಗ್ರಹಿಸು. (೩).

ಅನಂತರುದ್ರ ಉವಾಚ

ಲಿಂಗಾಚಾರಃ ಸದಾಚಾರಃ ಶಿವಾಚಾರಸ್ತಥೈವ ಚ ।
ಭೃತ್ಯಾಚಾರೋ ಗಣಾಚಾರಃ ಪಂಚಾಚಾರಾಃ ಪ್ರಕೀರ್ತಿತಾಃ ॥ ೪ ॥

ಗುರುಣಾ ದತ್ತಲಿಂಗಾದ್ವೈ ನಾಸ್ತಿ ದೈವಂ ಮಹೀತಲೇ।
ಇತಿ ಭಾವಾನುಸಂಧಾನಂ ಲಿಂಗಾಚಾರಃ ಸ ಉಚ್ಯತೇ ॥ ೫ ॥

ಧರ್ಮಾರ್ಜಿತೇನ ದ್ರವ್ಯೇಣ ಯತ್ಸಂತರ್ಪಣಮನ್ವಹಮ್।
ಗುರುಲಿಂಗಜಂಗಮಾನಾಂ ಸದಾಚಾರ ಇತಿ ಸ್ಮೃತಃ ॥ ೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವ ಏವ ಪರಂ ಬ್ರಹ್ಮ ಪಂಚಕೃತ್ಯಪರಾಯಣಮ್।
ನ ತತೋಽನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ ॥ ೭ ॥

ಶಿವಸ್ಯ ಶಿವಭಕ್ತಸ್ಯ ಶಿವಧರ್ಮಾದಿಕಸ್ಯ ಚ।
ನ ಶೃಣೋತಿ ಚ ಯನ್ನಿಂದಾಂ ಚ ಗಣಾಚಾರ ಉಚ್ಯತೇ ॥ ೮ ॥

ಶಿವಭಕ್ತಜನಾಃ ಸರ್ವೇ ವರಿಷ್ಠಾಃ ಪೃಥಿವೀತಲೇ।
ತೇಷಾಂ ಭೃತ್ಯೋಽಹಮಿತಿ ಯದ್ ಭೃತ್ಯಾಚಾರ ಇತಿ ಸ್ಮೃತಃ ॥ ೯ ॥

ಇಹೋಕ್ತಾನಾಂ ಚ ಪಂಚಾನಾಮಾಚಾರಾಣಾಂ ಸುರೋತ್ತಮ।
ಪ್ರಕಾರಾಂತರಮಸ್ತ್ಯತ್ರ ವಕ್ಷ್ಯೇ ತದಪಿ ಚ ಶೃಣು ॥ ೧೦ ॥

ಅನಂತರುದ್ರನು ಹೇಳಿದನು

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ ಇವು ಪಂಚಾಚಾರಗಳೆಂದು ಕರೆಯಲ್ಪಡುತ್ತವೆ. (೪). ಗುರುವು ಕೊಟ್ಟ ಇಷ್ಟಲಿಂಗಕ್ಕಿಂತ ಮಿಗಿಲಾದ ದೈವವು ಭೂಮಿಯ ಮೇಲೆ ಇನ್ನೊಂದಿಲ್ಲ, ಎಂಬ ಭಾವನಾತ್ಮಕ ಸಂಬಂಧವು ಲಿಂಗಾಚಾರ. (೫). ಧರ್ಮದಿಂದ ಗಳಿಸಿದ ಸಂಪತ್ತಿನಿಂದ ಪ್ರತಿದಿನವೂ ಗುರು, ಲಿಂಗ ಮತ್ತು ಜಂಗಮರ ಸಂತರ್ಪಣೆ ಮಾಡುವುದು ಸದಾಚಾರವೆಂದು ತಿಳಿಯಲ್ಪಟ್ಟಿದೆ. (೬). ಶಿವನೇ ಪರಬ್ರಹ್ಮ ಅವನೇ ಪಂಚಕೃತ್ಯಗಳಲ್ಲಿ ನಿರತನು, ಅವನನ್ನು ಬಿಟ್ಟರೆ ಬೇರೆ ಗತಿಯಿಲ್ಲ ಎಂಬುದೇ ಶಿವಾಚಾರವೆಂದು ಹೇಳಲ್ಪಡುತ್ತದೆ. (೭). ಶಿವನ, ಶಿವಭಕ್ತನ, ಶಿವಧರ್ಮ ಮುಂತಾದವುಗಳ ನಿಂದೆಯನ್ನು ಕೇಳದಿರುವುದು ಗಣಾಚಾರ. (೮). ಈ ಭೂಮಿಯ ಮೇಲೆ ಎಲ್ಲಾ ಶಿವಭಕ್ತ ಜನರು ಶ್ರೇಷ್ಠರು ನಾನು ಅವರ ಭೃತ್ಯ (ಸೇವಕ) ಎಂಬುದೇ ಭೃತ್ಯಾಚಾರ. (೯). ಸುರಶ್ರೇಷ್ಠನೇ, ಇಲ್ಲಿ ಹೇಳಿದ ಪಂಚಾಚಾರಗಳ ಬೇರೆ ಪ್ರಕಾರದ ವಿವರಣೆಯೂ ಇದೆ. ಅದನ್ನು ಹೇಳುತ್ತೇನೆ ಕೇಳು. (೧೦).

ಟಿಪ್ಪಣಿ : ಕಾರಣಾಗಮ; ಕ್ರಿ.ಪಾ. ೧.೧೨೪ರಲ್ಲಿ ಗುರುವು ಶಿಷ್ಯನಿಗೆ ಉಪದೇಶ ಮಾಡುವ ಸಂದರ್ಭದಲ್ಲಿ 'ಬುದ್ಧಿವಂತನಾದ ಶಿಷ್ಯನೇ, ನೀನು ಅಷ್ಟಾವರಣಗಳಲ್ಲಿ ಶ್ರದ್ಧೆಯನ್ನಿಡು ಮತ್ತು ಪಂಚಾಚಾರಗಳಿಗೆ ಬದ್ಧನಾಗಿರು' ಎಂದು ಅಷ್ಟಾವರಣಗಳೊಂದಿಗೆ ಪಂಚಾಚಾರಗಳ ಉಲ್ಲೇಖವೂ ಬಂದಿದೆ. ಇವೆರಡರ ವಿವರಣೆಯು ಪ್ರಸ್ತುತ ಆಗಮದಲ್ಲಿ ವಿವರವಾಗಿ ಬರುತ್ತದೆ. ಮೊದಲು ಎರಡನೆಯ ಪಟಲದಿಂದ ಎಂಟನೆಯ ಪಟಲದವರೆಗಿನ ಭಾಗದಲ್ಲಿ ಅಷ್ಟಾವರಣಗಳ ನಿರೂಪಣೆಯು ಬಂದಿದೆ. ಈ ಪಟಲದಲ್ಲಿ ಪಂಚಾಚಾರಗಳ ವಿಸ್ತೃತವಾದ ವಿವರಣೆ ಬಂದಿದೆ. ಪಂಚ ಕೃತ್ಯಗಳು, ಹಿಂದೆ ಪ್ರಥಮ ಪಟಲ, ೪೫-೪೭ರ ಟಿಪ್ಪಣಿ ನೋಡಿರಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧. ಲಿಂಗಾಚಾರಃ

ಲಿಂಗಾಚಾರಂ ಪ್ರವಕ್ಷ್ಯಾಮಿ ಪ್ರಥಮಂ ಮಂಗಲಾಲಯಮ್।
ಕ್ರಿಯಾವೇಧಾಮನ್ವಭಿಖ್ಯದೀಕ್ಷಾಂತರ್ಗತಮೂರ್ತಯಃ॥
ಏಕವಿಂಶತಿದೀಕ್ಷಾಶ್ಚ ಲಿಂಗಾಚಾರ ಇತಿ ಸ್ಮೃತಃ ॥ ೧೧ ॥

ಲಿಂಗಾಚಾರ

ಮೊಟ್ಟ ಮೊದಲಿಗೆ ನಾನು ಮಂಗಳದಾಯಕವಾದ ಲಿಂಗಾಚಾರವನ್ನು ಹೇಳುತ್ತೇನೆ. ಕ್ರಿಯಾ, ವೇಧಾ ಮತ್ತು ಮನು (ಮಂತ್ರ) ದೀಕ್ಷಾಂತರ್ಗತವಾದ ಇಪ್ಪತ್ತೊಂದು ಉಪದೀಕ್ಷೆಗಳನ್ನು ಲಿಂಗಾಚಾರವೆಂದು ಹೇಳುತ್ತಾರೆ. (೧೧).

ಟಿಪ್ಪಣಿ : ದೀಕ್ಷೆಯ ಲಕ್ಷಣ ಮತ್ತು ಪ್ರಭೇದಗಳ ಬಗ್ಗೆ ಪ್ರಥಮ ಪಟಲ ೪೭-೪೯ರ ಟಿಪ್ಪಣಿಯನ್ನು ನೋಡಿರಿ. ಮೂರು ದೀಕ್ಷೆಗಳ ಅಂತರ್ಗತವಾಗಿ ಬರುವ ಇಪ್ಪತ್ತೊಂದು ದೀಕ್ಷೆಗಳಿಗೆ ಲಿಂಗಾಚಾರವೆಂದು ಹೆಸರು.

ಏಕವಿಂಶತಿ ದೀಕ್ಷಾಃ

ಆಜ್ಞೋಪಮಾ ಚ ಕಲಶೈರಭಿಷೇಕಸ್ತತಃ ಪರಮ್।
ಸ್ವಸ್ತಿಕಾರೋಹಣಂ ಭೂತಿಪಟ್ಟಮಾಯತ್ತಮೇವ ಚ॥
ಸ್ವಾಯತ್ತಮಿತಿ ಸಪ್ತೈತಾಃ ಕ್ರಿಯಾದೀಕ್ಷಾಂತರಾ ಮತಾಃ ॥ ೧೨ ॥

ಸಮಯಶ್ಚಾಪ್ಯಸಂಸಾರಸ್ತತ್ತ್ವಂ ಜ್ಞಾನಮನುಗ್ರಹಃ।
ಅಧ್ಯಾತ್ಮಶುದ್ಧವಿದ್ಯೇ ಚ ಸಪ್ತ ವೇಧಾಂತರಾಃ ಸ್ಮೃತಾಃ ॥ ೧೩ ॥

ದೃಢವ್ರತಮಹಿಂಸಾ ಚ ತಸ್ಮೈ ಪಂಚೇಂದ್ರಿಯಾರ್ಪಣಮ್।
ಏಕಾಗ್ರಚಿತ್ತಸಂಪತ್ತಿಃ ಪರತತ್ತ್ವೇ ಸದಾ ರತಿಃ ॥ ೧೪ ॥

ಲಿಂಗೇ ನಿಜಮನೋಲೀನಂ ಸದ್ಯೋಮುಕ್ತಿಶ್ಚ ಶಾಶ್ವತೀ।
ಏವಂ ಸಪ್ತವಿಧಾ ದೀಕ್ಷಾ ಮನುದೀಕ್ಷಾಂತರಾಃ ಸ್ಮೃತಾಃ ॥ ೧೫ ॥

ಇಪ್ಪತ್ತೊಂದು ದೀಕ್ಷೆಗಳು

ಆಜ್ಞಾದೀಕ್ಷೆ, ಉಪಮಾದೀಕ್ಷೆ, ಕಲಶಾಭಿಷೇಕ ದೀಕ್ಷೆ, ಸ್ವಸ್ತಿಕಾರೋಹಣ ದೀಕ್ಷೆ, ಭೂತಿಪಟ್ಟ ದೀಕ್ಷೆ, ಆಯತ್ತ ದೀಕ್ಷೆ ಮತ್ತು ಸ್ವಾಯತ್ತ ದೀಕ್ಷೆ, ಇವು ಏಳು ಕ್ರಿಯಾ ದೀಕ್ಷೆಯಲ್ಲಿ ಬರುವ ದೀಕ್ಷೆಗಳು. (೧೨). ಸಮಯ ದೀಕ್ಷೆ, ಅಸಂಸಾರ ದೀಕ್ಷೆ, ತತ್ತ್ವ ದೀಕ್ಷೆ, ಜ್ಞಾನ ದೀಕ್ಷೆ, ಅನುಗ್ರಹ ದೀಕ್ಷೆ, ಅಧ್ಯಾತ್ಮ ದೀಕ್ಷೆ ಮತ್ತು ಶುದ್ಧವಿದ್ಯಾದೀಕ್ಷೆ, ಇವು ಏಳು ವೇಧಾದೀಕ್ಷಾಂತರ್ಗತವಾದ ದೀಕ್ಷೆಗಳು. (೧೩). ದೃಢವ್ರತ ದೀಕ್ಷೆ, ಅಹಿಂಸಾ ದೀಕ್ಷೆ, ಅವನಿಗೆ (ಭಗವಂತನಿಗೆ) ಪಂಚೇಂದ್ರಿಯಾರ್ಪಣವೆಂಬ ದೀಕ್ಷೆ, ಚಿತ್ತೈಕಾಗ್ರ್ಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೀಕ್ಷೆ, ಪರತತ್ವಾನುರಾಗ ದೀಕ್ಷೆ, ಲಿಂಗ ನಿಜಮನೋದೀಕ್ಷೆ ಮತ್ತು ಶಾಶ್ವತ ಸದ್ಯೋಮುಕ್ತಿ ದೀಕ್ಷೆ, ಇವು ಏಳು ಮನು (ಮಂತ್ರ) ದೀಕ್ಷೆಯಲ್ಲಿ ಬರುವ ದೀಕ್ಷೆಗಳು. (೧೪-೧೫).

ಟಿಪ್ಪಣಿ : ಕ್ರಿಯಾದೀಕ್ಷಾಂತರ್ಗತವಾಗಿ ಏಳು, ವೇಧಾ ದೀಕ್ಷಾಂತರ್ಗತವಾಗಿ ಏಳು ಮತ್ತು ಮನುದೀಕ್ಷಾಂತರ್ಗತವಾಗಿ ಏಳು, ಹೀಗೆ ಒಟ್ಟು ಇಪ್ಪತ್ತೊಂದು ದೀಕ್ಷೆಗಳು. ಇವುಗಳ ಹೆಸರುಗಳು ಮಾತ್ರ ಇಲ್ಲಿ ಬಂದಿವೆ. ಇವುಗಳ ವಿವರಣೆ ಕಾರಣಾಗಮದಲ್ಲಿ ಬರುತ್ತದೆ. ಸದಾಚಾರವನ್ನು ಬಿಟ್ಟು ನಡೆದುಕೊಳ್ಳಬೇಡ ಎಂಬುದು ಆಜ್ಞಾದೀಕ್ಷೆ; ಆಚಾರ ಶೀಲರಾದ ಹಿಂದಿನವರಂತೆ ಆಚಾರಶೀಲನಾಗು ಎಂದು ಉಪದೇಶಿಸುವುದು ಉಪಮಾದೀಕ್ಷೆ; ಪಂಚಕಲಶಗಳ ನೀರನ್ನು ಶಿಷ್ಯನ ಮಸ್ತಕದ ಮೇಲೆ ಸಿಂಪಡಿಸುವುದು ಕಲಶಾಭಿಷೇಕ ದೀಕ್ಷೆ; ಶಿಷ್ಯನ ಪಾದಾದಿ ಮಸ್ತಕಪರ್ಯಂತ ಅಂಗಗಳಲ್ಲಿ ವರ್ಣ-ಪದ-ಮಂತ್ರ-ಕಲಾ-ತತ್ವ-ಭುವನಗಳೆಂಬ ಷಡಧ್ವಗಳನ್ನು ಶೋಧಿಸಿ ಮಾಂಸಪಿಂಡತ್ವವನ್ನು ಕಳೆಯುವುದು ಸ್ವಸ್ತಿಕಾರೋಹಣ ದೀಕ್ಷೆ; ಮಲಪರಿಹಾರಕವಾದ ಭಸ್ಮವನ್ನು ಹಣೆ ಮುಂತಾದ ಸ್ಥಾನಗಳಲ್ಲಿ ಧರಿಸುವುದು ಭೂತಿಪಟ್ಟ ದೀಕ್ಷೆ; ಗುರುವು ಶಿಷ್ಯನಿಗೆ ತ್ರಿವಿಧ ಲಿಂಗ ಸಂಪನ್ನನಾಗಿರು ಎಂದು ಬೋಧಿಸಿ ಇಂದಿನಿಂದ ನೀನು 'ಲಿಂಗಾಯತ್ತ'ನಾಗು ಎಂದು ಇಷ್ಟಲಿಂಗವನ್ನು ತೋರಿಸುವುದು ಆಯತ್ತ ದೀಕ್ಷೆ; ಮತ್ತು ಗುರುವು ಶಿಷ್ಯನ ಹಸ್ತದಲ್ಲಿ ಇಷ್ಟಲಿಂಗವನ್ನು ಸ್ಥಾಪಿಸುವುದು ಸ್ವಾಯತ್ತ ದೀಕ್ಷೆ. ಇವು ಕ್ರಿಯಾದೀಕ್ಷಾಂತರ್ಗತ ಏಳು ದೀಕ್ಷೆಗಳು (ಕಾರಣಾಗಮ, ೧. ೪೪-೮೫). ವೇಧಾ ದೀಕ್ಷಾಂತರ್ಗತವಾದ ಏಳು ದೀಕ್ಷೆಗಳು; ಬಂಧುಜನರಲ್ಲಿ ತೋರುವ ಪ್ರೀತಿಯನ್ನು ಭಕ್ತ ಜನರಲ್ಲಿ ಸ್ಥಿರಗೊಳಿಸು ಎಂಬ ಸಮಯೋಪದೇಶವು (ನಿಯಮದ ವಿಧಾನವು) ಸಮಯ ದೀಕ್ಷೆ; ಇಂದ್ರಿಯ ಸಂಬದ್ಧವಾದ ಸಂಸಾರವನ್ನು ಬಿಟ್ಟು ಪರಮಾತ್ಮನ ಪೂಜೋಪಚಾರದಲ್ಲಿ ನಿರತನಾಗಿರು ಎಂದು ವಿಧಿಸುವುದು ಅಸಂಸಾರ (ನಿಸ್ಸಂಸಾರ) ದೀಕ್ಷೆ; ಚಂಚಲವಾದ ಮನಸ್ಸನ್ನು ಪರಮಾತ್ಮನಲ್ಲಿ ಕೇಂದ್ರೀಕರಿಸಿ ಅದನ್ನು ನಿಗ್ರಹಿಸು ಎಂದು ತಿಳಿಸುವ ಸಂಸ್ಕಾರವು ಅನುಗ್ರಹ (ನಿರ್ವಾಣ) ದೀಕ್ಷೆ; ಲಿಂಗ ಮತ್ತು ಅಂಗ (ಶಿವ ಮತ್ತು ಜೀವ) ತತ್ವಗಳ ಸಾಮರಸ್ಯವನ್ನು ಬೋಧಿಸುವುದು ತತ್ವದೀಕ್ಷೆ; ಲಿಂಗದಲ್ಲಿ ತನ್ನ ಪ್ರಾಣವನ್ನು, ತನ್ನ ಪ್ರಾಣದಲ್ಲಿ ಲಿಂಗವನ್ನು ಸಮರಸ ಮಾಡಿಕೊಂಡು ಲಿಂಗಪ್ರಾಣಿಯಾಗೆಂದು ಬಿಂಬಿಸುವುದೇ ಅಧ್ಯಾತ್ಮದೀಕ್ಷೆ; ಘ್ರಾಣ-ಜಿಹ್ವಾ-ಚಕ್ಷುಷ್-ಚರ್ಮ-ಶ್ರೋತ್ರ-ಮನಸ್ಸೆಂಬ ಆರು ಇಂದ್ರಿಯಗಳಲ್ಲಿ ಕ್ರಮವಾಗಿ ಆಚಾರಲಿಂಗ-ಗುರುಲಿಂಗ-ಶಿವಲಿಂಗ-ಜಂಗಮಲಿಂಗ-ಪ್ರಸಾದಲಿಂಗ-ಮಹಾಲಿಂಗಗಳೆಂಬ ಆರು ಲಿಂಗಗಳನ್ನು ಪರಿಭಾವಿಸಿ, ಆಯಾಯ ವಿಷಯಗಳನ್ನು ಆಯಾಯ ಇಂದ್ರಿಯಗತ ಲಿಂಗಕ್ಕೆ ನಿವೇದಿಸಿ ಪ್ರಸಾದವಾಗಿಸುವುದು ಜ್ಞಾನ (ತತ್ವಸಂಶೋಧನ) ದೀಕ್ಷೆ; ಮತ್ತು ಲಿಂಗಾಂಗ ಸಾಮರಸ್ಯವನ್ನು ಬೋಧಿಸುವುದೇ ಶುದ್ಧವಿದ್ಯಾ (ತತ್ವೋಪದೇಶಿನೀ) ದೀಕ್ಷೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(ಕಾರಣಾಗಮ, ಕ್ರಿ.ಪಾ. ೧.೯೮-೧೦೮). ಇನ್ನು ಮಂತ್ರದೀಕ್ಷಾಂತರ್ಗತವಾದ ಏಳು ದೀಕ್ಷೆಗಳು ಹೀಗಿವೆ- ದೇಹವಿರುವವರೆಗೆ ವ್ರತಕ್ಕೆ ಲೋಪಬರದಂತೆ ಪರಿಪಾಲಿಸೆಂದು ಹೇಳುವುದು ದೃಢವ್ರತ ದೀಕ್ಷೆ; ಸರ್ವ ಪ್ರಾಣಿಗಳಲ್ಲಿ ಆತ್ಮದೃಷ್ಟಿಯನ್ನು ಇಟ್ಟುಕೊಂಡು ಯಾವ ಪ್ರಾಣಿಗೂ ಹಿಂಸೆ ಮಾಡುವುದಿಲ್ಲ ಎಂಬ ದೃಢ ನಿರ್ಧಾರವನ್ನು ಮಾಡಿಸುವುದು ಅಹಿಂಸಾದೀಕ್ಷೆ; ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚ ಕರ್ಮೇಂದ್ರಿಯಗಳ ವಿಷಯ ಪ್ರವೃತ್ತಿಯನ್ನು ತಡೆದು ಭಗವಂತನಿಗೆ ಅರ್ಪಿಸುವುದೇ ಪಂಚೇಂದ್ರಿಯಾರ್ಪಣದೀಕ್ಷೆ; ಇಷ್ಟಲಿಂಗಕ್ಕಿಂತ ಭಿನ್ನವಾದ ವಸ್ತುವನ್ನು ನೀನು ನೋಡಬೇಡ ಎಂದು ಉಪದೇಶಿಸುವುದು ಚಿತ್ತೈಕಾಗ್ರದೀಕ್ಷೆ; ಲಿಂಗನಿಷ್ಠೆಯ ಬೋಧನೆ ಲಿಂಗನಿಷ್ಠಾ (ಪರತತ್ತ್ವಾನುರಾಗ) ದೀಕ್ಷೆ; ಸ್ವಾಭಾವಿಕವಾಗಿ ಚಂಚಲವಾದ ಮನಸ್ಸನ್ನು ಮಹಾಲಿಂಗದಲ್ಲಿ ಲಯಗೊಳಿಸುವಂತೆ ಮಾಡುವುದು ಲಿಂಗಮನೋಮಯ (ಲಿಂಗ ನಿಜಮನೋ) ದೀಕ್ಷೆ; ಮತ್ತು ಜೀವನ್ಮುಕ್ತಾವಸ್ಥೆಯ ಮರ್ಮವನ್ನು ಬೋಧಿಸುವುದು ಸದ್ಯೋಮುಕ್ತಿ ದೀಕ್ಷೆ. (ಕಾರಣಾಗಮ, ಕ್ರಿ.ಪಾ., ೧. ೧೧೨-೧೧೭).

೨. ಸದಾಚಾರಃ

ಸದಾಚಾರಂ ಪ್ರವಕ್ಷ್ಯಾಮಿ ಸಾವಧಾನಮನಾಃ ಶೃಣು।
ಆಚಾರ ಏವ ಸರ್ವೇಷಾಮಲಂಕಾರಾಯ ಕಲ್ಪತೇ॥
ಆಚಾರಹೀನಃ ಪುರುಷೋ ಲೋಕೇ ಭವತಿ ನಿಂದಿತಃ ॥ ೧೬ ॥

ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಾತ್ ॥ ೧೭ ॥

ಶಿವಸ್ಯ ಭಕ್ತಿರಾಧಾರ ಆಚಾರಃ ಸರ್ವದೇಹಿನಾಮ್।
ಆಚಾರಃ ಪರಮೋ ಧರ್ಮ ಆಚಾರಃ ಪರಮಂ ಧನಮ್ ॥ ೧೮ ॥

ಜ್ಞಾನಮಾಚಾರಹೀನಂ ಚೇನ್ನ ತದ್ಭವತಿ ಸಿದ್ಧಯೇ।
ಶೃಣು ತಸ್ಮಿನ್ ಸದಾಚಾರೇ ಶೀಲಮಷ್ಟವಿಧಂ ಭವೇತ್ ॥ ೧೯ ॥

ಸದಾಚಾರ

ಈಗ ಸದಾಚಾರದ ಬಗ್ಗೆ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ಆಚಾರವೇ ಎಲ್ಲರಿಗೂ ಭೂಷಣವೆಂದು ತಿಳಿಯಲಾಗಿದೆ. ಆಚಾರ ಹೀನನಾದ ವ್ಯಕ್ತಿಯು ಲೋಕದಲ್ಲಿ ನಿಂದೆಗೆ ಒಳಗಾಗುತ್ತಾನೆ. (೧೬). ಆಚಾರ ಸಹಿತವಾದ ಜ್ಞಾನದಿಂದ ಮಹೇಶ್ವರನ ಅನುಗ್ರಹ ಪ್ರಾಪ್ತವಾಗುತ್ತದೆ. ಆದ್ದರಿಂದ ದೇಹ ಬಿದ್ದು ಹೋಗುವವರೆಗೆ ಆಚಾರ ಯುಕ್ತನಾದ ಜ್ಞಾನಿಯಾಗಬೇಕು. (೧೭). ಶಿವನ ಪ್ರಾಪ್ತಿಗೆ ಭಕ್ತಿಯು ಆಧಾರ. ಎಲ್ಲ ದೇಹಧಾರಿಗಳಿಗೆ ಆಚಾರವೇ ಆಧಾರ. ಆಚಾರವೇ ಶ್ರೇಷ್ಠವಾದ ಧರ್ಮ ಮತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಚಾರವೇ ಶ್ರೇಷ್ಠ ಸಂಪತ್ತು. (೧೮). ಜ್ಞಾನವು ಆಚಾರರಹಿತವಾಗಿದ್ದರೆ ಅದು ಸಿದ್ಧಿಗೆ ಒದಗುವುದಿಲ್ಲ. ಆ ಸದಾಚಾರದಲ್ಲಿ ಎಂಟು ವಿಧವಾದ ಶೀಲವಿದೆ. ಅದನ್ನು ಕೇಳು. (೧೯).

ಟಿಪ್ಪಣಿ : ಆಚಾರ ಏವ... ನಿಂದಿತಃ ॥ ಜ್ಞಾನೇನಾಚಾರಯುಕ್ತೇನ... ಭವೇನಾದೇಹಪಾತನಾತ್॥ ಇವೆರಡು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಬಂದಿವೆ; ನೋಡಿರಿ ೧೬.೧೩-೧೪.

ಸದಾಚಾರೇಽಷ್ಟವಿಧಂ ಶೀಲಮ್

ಅಂಕುರಂ ಪ್ರಥಮಂ ಜ್ಞೇಯಮುತ್ಪನ್ನಂ ಚ ದ್ವಿತೀಯಕಮ್।
ದ್ವಿದಲಂ ಚ ತೃತೀಯಂ ಸ್ಯಾತ್ ಪ್ರವೃದ್ಧಂ ಚ ಚತುರ್ಥಕಮ್ ॥ ೨೦ ॥

ಸಪ್ರಕಾಂಡಂ ಪಂಚಮಂ ಸ್ಯಾತ್ ಸಶಾಖಂ ಷಷ್ಠಮುಚ್ಯತೇ।
ಸಪುಷ್ಪಂ ಸಪ್ತಮಂ ಜ್ಞೇಯಂ ಸಫಲಂ ಚಾಷ್ಟಮಂ ಭವೇತ್ ॥ ೨೧ ॥

ಸದಾಚಾರೋಽಷ್ಟಶೀಲಾಢ್ಯಃ ಸೇವಿತಃ ಕಲ್ಪಪಾದಪಃ।
ಸದ್ಭಕ್ತಾನಾಂ ಸುಮನಸಾಂ ದದಾತೀಷ್ಟಫಲಂ ಮಹತ್ ॥ ೨೨ ॥

ಸದಾಚಾರದಲ್ಲಿ ಅಷ್ಟವಿಧ ಶೀಲ

ಅಂಕುರಶೀಲ ಮೊದಲಿನದೆಂದು ತಿಳಿಯಬೇಕು, ಉತ್ಪನ್ನಶೀಲವು ಎರಡನೆಯದು, ದ್ವಿದಲಶೀಲ ಮೂರನೆಯದು, ಪ್ರವೃದ್ಧಶೀಲ ನಾಲ್ಕನೆಯದು, ಸಪ್ರಕಾಂಡಶೀಲವು ಐದನೆಯದು, ಸಶಾಖಶೀಲವು ಆರನೆಯದೆಂದು ಹೇಳಲ್ಪಡುತ್ತದೆ, ಸಪುಷ್ಪಶೀಲವು ಏಳನೆಯದೆಂದು ತಿಳಿಯಬೇಕು ಮತ್ತು ಸಫಲಶೀಲವು ಎಂಟನೆಯದು. (೨೦-೨೧). ಹೀಗೆ ಎಂಟು ಶೀಲಗಳಿಂದ ಸಂಪನ್ನವಾದ ಸದಾಚಾರವು ಅನುಸರಿಸಿದರೆ ಕಲ್ಪವೃಕ್ಷ; ಪ್ರಸನ್ನ ಮನಸ್ಸಿನ ಸದ್ಭಕ್ತರಿಗೆ ಇಷ್ಟವಾದ ಮಹತ್ಫಲವನ್ನು ಕೊಡುತ್ತದೆ. (೨೨).

ಟಿಪ್ಪಣಿ : ಈ ಎಂಟು ಶೀಲಗಳ ಸ್ವರೂಪವನ್ನು ಪರಿಶೀಲಿಸಿದಾಗ ಅಂಕುರದಿಂದ ಹಿಡಿದು ಸಫಲತ್ವದವರೆಗೆ ವೃಕ್ಷದಂತೆ ವ್ಯಕ್ತಿಯ ಬೆಳವಣಿಗೆ ಹೇಗಾಗುತ್ತದೆಯೆಂಬುದು ತಿಳಿದು ಬರುತ್ತದೆ.

ಅಂಕುರಾದಿಶೀಲಲಕ್ಷಣಮ್

ಅಂಕುರಾಖ್ಯಂ ಪ್ರವಕ್ಷ್ಯಾಮಿ ಬೀಜಭೂತಂ ಸಮಾಸತಃ।
ಗುರುಕಾರುಣ್ಯಕಲಿತಷಡಧ್ವನ್ಯಾಸಶೋಭಿತಾ॥
ತನುಃ ಸ್ವೀಯಾ ಪ್ರಾಕೃತೇತಿ ಭಾವೋಽಂಕುರ ಇತೀರ್ಯತೇ ॥ ೨೩ ॥

ದೀಕ್ಷಿತೈರೇವ ದಾರಾದ್ಯೈಃ ಸಹವಾಸೋ ಯ ಆತ್ಮನಃ।
ಶೀಲಮುತ್ಪನ್ನಮಿತ್ಯುಕ್ತಂ ಗ್ರಾಹ್ಯಮೇತದ್ವಿಚಕ್ಷಣೈಃ ॥ ೨೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಾಂಛನಾನಾಂ ಹಿ ಶೈವಾನಾಂ ಭಸ್ಮಾದೀನಾಮನಾರತಮ್।
ಧಾರಣಂ ತ್ವಪ್ರಮಾದೇನ ದ್ವಿದಲಂ ಶೀಲಮುಚ್ಯತೇ ॥ ೨೫ ॥

ಯನ್ನಿತ್ಯಂ ಶಿವಧರ್ಮಾಣಾಂ ಮಾಹಾತ್ಮ್ಯಸ್ಯ ವಿಭಾವನಮ್।
ಪ್ರವೃದ್ಧಂ ಶೀಲಮಿತ್ಯುಕ್ತಂ ಭಕ್ತೇರ್ವೃದ್ಧಿಕರಂ ಶ್ರುತಮ್ ॥ ೨೬ ॥

ಇಷ್ಟಲಿಂಗಮನಭ್ಯರ್ಚ್ಯ ಸ್ಥೀಯತೇ ಯದಭೋಜನಮ್।
ಸಪ್ರಕಾಂಡಮಿದಂ ಶೀಲಂ ವಿಜ್ಞೇಯಂ ಭಕ್ತಿಸಾಧನಮ್ ॥ ೨೭ ॥

ಇಷ್ಟಲಿಂಗಾನರ್ಪಿತಸ್ಯ ದ್ರವ್ಯಸ್ಯಾಗ್ರಹಣಂ ಹಿ ಯತ್।
ಶೀಲಂ ಸಶಾಖಮಿತ್ಯುಕ್ತಮವರ್ಜ್ಯಂ ಭಕ್ತಿತತ್ಪರೈಃ ॥ ೨೮ ॥

ಶಿವಾರ್ಪಿತಪ್ರಸಾದಸ್ಯ ಯತ್ ಪರಿತ್ಯಾಗವರ್ಜನಮ್।
ಸಪುಷ್ಪಂ ಶೀಲಮಿತ್ಯುಕ್ತಂ ವಿಜ್ಞೇಯಂ ಚೈತದುತ್ತಮಮ್ ॥ ೨೯ ॥

ಗುರುಲಿಂಗಜಂಗಮಾನಾಂ ಯದೇಕತ್ವೇನ ಭಾವನಮ್।
ಸಫಲಂ ಶೀಲಮಿತ್ಯುಕ್ತಂ ಸದ್ಯಃ ಸಿದ್ಧಿಕರಂ ಪರಮ್ ॥ ೩೦ ॥

ಯಃ ಸದಾಚಾರಮಷ್ಟಾಂಗಂ ಭಕ್ತಿನಿಷ್ಠೋ ನಿಷೇವತೇ।
ಸ ಸದ್ಯಃ ಸಿದ್ಧಿಮಾಪ್ನೋತಿ ಪರಾಂ ಶಂಭೋರನುಗ್ರಹಾತ್ ॥ ೩೧ ॥

ಅಂಕುರ ಮುಂತಾದ ಶೀಲಗಳ ಲಕ್ಷಣ

ಅಂಕುರವೆಂದು ಕರೆಯಲ್ಪಡುವ ಮೂಲಕಾರಣವಾದ ಶೀಲವನ್ನು ಸಂಕ್ಷಿಪ್ತವಾಗಿ ಹೇಳುವೆನು. ಗುರುವಿನ ಕರುಣೆಯಿಂದ ಉಂಟಾದ ಷಡಧ್ವನ್ಯಾಸದಿಂದ ಶೋಭಿಸುವ ಈ ನನ್ನ ಶರೀರವು ಎಲ್ಲದಕ್ಕೂ ಮೂಲ ಪ್ರಕೃತಿ (ಕಾರಣ)ಯೆಂಬ ಭಾವ ಮೂಡುವುದು ಅಂಕುರವೆಂದು ಕರೆಯಲ್ಪಡುತ್ತದೆ. (೨೩). ದೀಕ್ಷೆಯನ್ನು ಹೊಂದಿದ ಹೆಂಡತಿ ಮಕ್ಕಳೊಂದಿಗೆ ತನ್ನ ಸಹವಾಸಕ್ಕೆ ಉತ್ಪನ್ನ ಶೀಲವೆಂದು ಹೇಳಲಾಗುತ್ತದೆ. ಅದನ್ನು ಜ್ಞಾನಿಗಳು ಅನುಸರಿಸಬೇಕು. (೨೪). ಭಸ್ಮ ಮುಂತಾದ ಶೈವರ ಚಿಹ್ನೆಗಳನ್ನು ನಿರಂತರವಾಗಿ ಮರೆಯದೆ ಧರಿಸುವುದು ದ್ವಿದಲಶೀಲವೆಂದು ಹೆಸರು. (೨೫). ಶಿವಧರ್ಮದ ಆಚರಣೆಗಳು ಮಹಿಮೆಯ ನಿರಂತರ ಭಾವನೆಯು (ಚಿಂತನೆಯು) ಪ್ರವೃದ್ಧ ಶೀಲವೆಂದು ಕರೆಯಲ್ಪಟ್ಟಿದೆ. ಅದು ಭಕ್ತಿಯನ್ನು ವರ್ಧಿಸುವಂತಹದು ಎಂದು ಕೇಳಿಬಂದಿದೆ. (೨೬). ಇಷ್ಟಲಿಂಗವನ್ನು ಪೂಜಿಸದೆ ಊಟಮಾಡದಿರುವ ಸಂಕಲ್ಪವು ಸಪ್ರಕಾಂಡ ಶೀಲವೆಂದು ತಿಳಿಯಬೇಕು. ಅದು ಭಕ್ತಿಗೆ ಸಾಧನವಾಗಿದೆ. (೨೭). ಇಷ್ಟಲಿಂಗಕ್ಕೆ ಅರ್ಪಿಸದಿರುವ ದ್ರವ್ಯವನ್ನು ಸ್ವೀಕರಿಸುವುದು ಸಶಾಖವೆಂಬ ಶೀಲವೆಂದು ಕರೆಯಲ್ಪಟ್ಟಿದೆ. ಭಕ್ತಿಗೆ ಬದ್ಧರಾದವರು ಅದನ್ನು ಬಿಡಬಾರದು. (೨೮). ಶಿವನಿಗೆ ಅರ್ಪಿಸಿದ ಪ್ರಸಾದವನ್ನು ಬಿಡದಿರುವುದು ಸಪುಷ್ಪ ಶೀಲವೆಂದು ಕರೆಯಲ್ಪಟ್ಟಿದೆ. ಅದನ್ನು ಉತ್ತಮವೆಂದು ತಿಳಿಯಬೇಕು. (೨೯). ಗುರು, ಲಿಂಗ ಮತ್ತು ಜಂಗಮರನ್ನು ಒಂದೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಭಾವಿಸುವುದು ಸಫಲ ಶೀಲವೆಂದು ಕರೆಯಲ್ಪಟ್ಟಿದೆ. ಅದು ಕೂಡಲೇ ಸಿದ್ಧಿಯನ್ನು ನೀಡುತ್ತದೆ. (೩೦). ಭಕ್ತಿನಿಷ್ಠನಾದ ಯಾರು ಈ ಎಂಟು ಅಂಶಗಳ ಸದಾಚಾರವನ್ನು ಅನುಸರಿಸುತ್ತಾನೋ ಅವನು ಶಂಭುವಿನ ಅನುಗ್ರಹದಿಂದ ಕೂಡಲೆ ಉನ್ನತವಾದ ಸಿದ್ಧಿಯನ್ನು ಪಡೆಯುತ್ತಾನೆ. (೩೧).

ಟಿಪ್ಪಣಿ : ಷಡಧ್ವನ್ಯಾಸದಿಂದ ಸುಶೋಭಿತವಾದ ಶರೀರವೆಂದರೆ ದಿವ್ಯಭಾವವನ್ನು ಪಡೆದ ಶರೀರವೆಂದರ್ಥ. ಅಂತಹ ಶರೀರ ಎಲ್ಲಾ ಆರಾಧನೆಯ ಮೂಲಕಾರಣ, ಆಧಾರ. "ಶರೀರಮಾದ್ಯಂ ಖಲು ಧರ್ಮಸಾಧನಮ್" ಎಂಬುದು ಕಾಳಿದಾಸನ ಮಾತು (ಕುಮಾರ ಸಂಭವ, ೫.೩೩). ಅದನ್ನು ಅರಿತುಕೊಳ್ಳುವುದು ಮೂಲಭೂತ ವಾದುದೆಂದು ಈ ಶೀಲಕ್ಕೆ ಅಂಕುರಶೀಲವೆಂದು ಹೆಸರು. ಅಂಕುರವು ಮರಕ್ಕೆ ಮೂಲವಾದಂತೆ ಈ ಶೀಲವು ಭಕ್ತನ ವ್ಯಕ್ತಿತ್ವಕ್ಕೆ ಮೂಲ; ಆದ್ದರಿಂದ ಇದು ಅಂಕುರಶೀಲ. ಅಂಕುರದ ಮುಂದಿನ ಸ್ಥಿತಿ ಉತ್ಪನ್ನ ಸ್ಥಿತಿ, ಮೊಳಕೆಯು ಬೀಜದಿಂದ ಹೊಮ್ಮಿದ ಸ್ಥಿತಿ. ಭಕ್ತನ ಭಕ್ತಿಯು ಅಂತಹ ಸ್ಥಿತಿಯನ್ನು ಮುಟ್ಟಲು ಸಮಾನ ಧರ್ಮರಾದ ದೀಕ್ಷಿತ ಸತಿ-ಸುತರೊಂದಿಗೆ ಇರುವುದು. ಇದಕ್ಕೆ ಉತ್ಪನ್ನಶೀಲವೆನ್ನುವುದು ಸಾರ್ಥಕನಾಮ. ಮೊಳಕೆ ಹೊರ ಹೊಮ್ಮಿದ್ದ ಮೇಲೆ ಬೀಜದ ದಳಗಳು ಬೇರೆ ಬೇರೆಯಾಗಿ ಕುಸಿದು ಅನಂತರ ಬಿದ್ದು ಹೋಗುತ್ತವೆ. ಮೊಳಕೆ ಗಿಡವಾಗಿ ಬೆಳೆಯಲು ಅಡಚಣೆಯಾಗಿದ್ದ ದಳಗಳು ಅಗಲವಾಗುವುದು ಇಲ್ಲಿ ಸಾಂಕೇತಿಕವಾಗಿ ಬಂದಿದೆ. ಶೈವರ ಗುರುತುಗಳಾದ ಭಸ್ಮ-ರುದ್ರಾಕ್ಷಗಳು ನಿರಂತರವಾಗಿ ದೇಹದ ಮೇಲೆ ಇರುವುದರಿಂದ ಭಕ್ತಿಯ ಅಡಚಣೆಗಳು ಶಿಥಿಲವಾಗಿ ದ್ವಿದಲಸ್ಥಿತಿಯನ್ನು ಭಕ್ತನ ವ್ಯಕ್ತಿತ್ವ ಮುಟ್ಟುತ್ತದೆ. ಆದ್ದರಿಂದ ಇದು ದ್ವಿದಲಶೀಲ. ನಿರಂತರವಾಗಿ ಶಿವಧರ್ಮದ ಮಹಿಮೆಯ ಬಗ್ಗೆ ಚಿಂತನೆಯು ಭಕ್ತಿಯನ್ನು ಪ್ರವೃದ್ಧ ಸ್ಥಿತಿಗೆ ಕೊಂಡೊಯ್ಯುತ್ತದೆ. ಆದ್ದರಿಂದ ಇದಕ್ಕೆ ಪ್ರವೃದ್ಧಶೀಲವೆಂದು ಹೆಸರು. ಇಷ್ಟಲಿಂಗದ ಪೂಜೆ ಮಾಡದೆ ಊಟ ಮಾಡದಿರುವ ಸಂಕಲ್ಪವು ಭಕ್ತಿಯು ಮತ್ತಷ್ಟು ಟಿಸಿಲು ಹೊಡೆಯಲು ಪೋಷಕ. ಆದ್ದರಿಂದ ಇದು ಸಪ್ರಕಾಂಡಶೀಲ. ಕಾಂಡದ ಸ್ಥಿತಿಯಿಂದ ಮುಂದಿನದು ಕೊಂಬೆಗಳ ಬೆಳವಣಿಗೆ. ಇಷ್ಟಲಿಂಗಕ್ಕೆ ಅರ್ಪಿಸಿದ್ದನ್ನೇ ಸ್ವೀಕರಿಸುವ ಸಂಕಲ್ಪವು ಭಕ್ತಿಯ ಕೊಂಬೆಗಳ ಬೆಳವಣಿಗೆಗೆ ಸಾಧಕ. ಆದ್ದರಿಂದ ಇದು ಸಶಾಖಶೀಲ. ಶಾಖೆಗಳ ಬೆಳವಣಿಗೆಯಿಂದ ಮುಂದಿನ ಹಂತ ಹೂ ಬಿಡುವುದು. ಶಿವನಿಗೆ ಅರ್ಪಿಸಿದ ಪ್ರಸಾದವನ್ನು ಬಿಡದೇ ಸ್ವೀಕರಿಸುವುದು ಭಕ್ತಿಯು ಪುಷ್ಪಿತವಾಗಲು ಸಾಧಕ. ಆದ್ದರಿಂದ ಇದು ಸಪುಷ್ಪಶೀಲ. ಪುಷ್ಪದ ಸ್ಥಿತಿಯಿಂದ ಮುಂದಿನದು ಫಲಬಿಡುವ ಸ್ಥಿತಿ. ಗುರು-ಲಿಂಗ-ಜಂಗಮರನ್ನು ಏಕೋಭಾವದಿಂದ ಕಂಡು ಪೂಜಿಸಿ, ತನು-ಮನ-ಧನವನ್ನು ಅರ್ಪಿಸುವುದು ಭಕ್ತಿಯು ಫಲಕೊಡಲು ದಾರಿಯಾಗುತ್ತದೆ. ಆದ್ದರಿಂದ ಇದು ಸಫಲಶೀಲ. ಹೀಗೆ ಭಕ್ತನ ಸದಾಚಾರವು ಭಕ್ತಿಯ ಅಂಕುರದಿಂದ ಅದರ ಫಲವು ದೊರೆಯುವವರೆಗಿನ ಎಲ್ಲಾ ಹಂತಗಳ ಆಚರಣೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩. ಶಿವಾಚಾರ

ಶಿವಾಚಾರಮತೋ ವಕ್ಷ್ಯೇ ಶೃಣುಷ್ವಾವಹಿತೋ ಮುನೇ।
ದ್ರವ್ಯಕ್ಷೇತ್ರಗೃಹಾದೀನಾಂ ಷೋಡಶಾನಾಂ ವಿಶೋಧನಮ್॥
ಶಿವಶಾಸ್ತ್ರೋಕ್ತಮಾರ್ಗೇಣ ಶಿವಾಚಾರ ಇತಿ ಸ್ಮೃತಃ ॥ ೩೨ ॥

ಶಿವಾಚಾರ

ಈಗ ಶಿವಾಚಾರವನ್ನು ಕುರಿತು ಹೇಳುತ್ತೇನೆ. ಮುನಿಯೇ, ಏಕಾಗ್ರತೆಯಿಂದ ಕೇಳು. ದ್ರವ್ಯ, ಕ್ಷೇತ್ರ ಮುಂತಾದ ಹದಿನಾರು ಪದಾರ್ಥಗಳನ್ನು ಶೈವಶಾಸ್ತ್ರದಲ್ಲಿ ಹೇಳಿದ ರೀತಿಯಲ್ಲಿ ಶುದ್ಧಿಗೊಳಿಸುವುದು ಶಿವಾಚಾರವೆಂದು ಪರಿಗಣಿಸಲ್ಪಡುತ್ತದೆ. (೩೨).

ಷೋಡಶಶುದ್ಧಯಃ

ಭಕ್ತಹಸ್ತಗತಂ ವಾಪಿ ಭಸ್ಮನಾ ವಾ ವಿಶೋಧಿತಮ್।
ಫಲಮೂಲಾದಿಕಂ ಗ್ರಾಹ್ಯಂ ದ್ರವ್ಯಶುದ್ಧಿರಿಯಂ ಮತಾ ॥ ೩೩ ॥

ನಂದಿಮುದ್ರಾಂಕಿತಶಿಲಾದಾರ್ವಾದಿಪರಿಶೋಭಿತಮ್।
ಕ್ಷೇತ್ರಂ ಭಕ್ತಿಪರೈರ್ಗ್ರಾಹ್ಯಂ ಕ್ಷೇತ್ರಶುದ್ಧಿಃ ಪ್ರಕೀರ್ತಿತಾ ॥ ೩೪ ॥

ಭಕ್ತೈಸ್ತು ನಿರ್ಮಿತಂ ವಾಪಿ ಶಿವಲಿಂಗಾಂಕಿತಂ ತು ವಾ।
ವೇಶ್ಮ ಭಕ್ತೈಃ ಪರಿಗ್ರಾಹ್ಯಂ ಗೃಹಶುದ್ಧಿಃ ಸಮೀರಿತಾ ॥ ೩೫ ॥

ಭಕ್ತೇನ ನಿರ್ಮಿತಂ ವಾಪಿ ಶಿವಲಿಂಗಾಂಕಿತಂ ತು ವಾ।
ಭಾಂಡಜಾತಂ ಪರಿಗ್ರಾಹ್ಯಂ ಭಾಂಡಶುದ್ಧಿಃ ಪ್ರಕೀರ್ತಿತಾ ॥ ೩೬ ॥

ಭಕ್ತಲೋಕಸಮಾನೀತಂ ಭಸ್ಮನಾ ಸಂಸ್ಕೃತಂ ತು ವಾ।
ತೃಣಾದಿಕಂ ಪರಿಗ್ರಾಹ್ಯಂ ತೃಣಶುದ್ಧಿಂರೀರಿತಾ ॥ ೩೭ ॥

ಭಕ್ತಿಯುಕ್ತಸಮಾನೀತಂ ವಿಭೂತ್ಯಾ ಸಂಸ್ಕೃತಂ ತು ವಾ।
ಕಾಷ್ಠಂ ವ್ರತಸ್ಥೈಃ ಸಂಗ್ರಾಹ್ಯಂ ಕಾಷ್ಠಶುದ್ಧಿಃ ಸಮೀರಿತಾ ॥ ೩೮ ॥

ಭಕ್ತಾರಾಮೇ ಸಮುತ್ಪನ್ನೈರ್ಭಸ್ಮನಾ ಸಂಸ್ಕೃತೈಸ್ತು ವಾ।
ಭಕ್ತೈಸ್ತು ಸಾಧಿತೇನಾಪಿ ವಿಭೂತ್ಯಾ ಸಂಸ್ಕೃತೇನ ವಾ ॥ ೩೯ ॥

ನಾಗವಲ್ಲೀದಲೈಃ ಪೂಗೈಶ್ಚೂರ್ಣೇನ ಚ ಸಮನ್ವಿತಮ್।
ಗ್ರಾಹ್ಯಂ ಭಕ್ತೈರ್ಹಿ ತಾಂಬೂಲಂ ವೀಟಿಕಾಶುದ್ಧಿರೀರಿತಾ ॥ ೪೦ ॥

ಶಿವದೀಕ್ಷಾನ್ವಿತೈಃ ಪಕ್ವಮಭಕ್ತಾನವಲೋಕಿತಮ್।
ಭೋಜ್ಯಂ ಭಕ್ತೈಃ ಪರಿಗ್ರಾಹ್ಯಂ ಪಾಕಶುದ್ಧಿರಿಯಂ ಮತಾ ॥ ೪೧ ॥

ಘೃತಂ ದಧಿ ಪಯಸ್ತಕ್ರಂ ಮಾಹಿಷಂ ಚಾವಿಕಂ ತ್ಯಜೇತ್ ।
ಗವ್ಯಂ ತು ಸರ್ವದಾ ಗ್ರಾಹ್ಯಂ ರಸಶುದ್ಧಿರಿಯಂ ಮತಾ ॥ ೪೨ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುನರ್ಭವನಿದಾನೋಕ್ತಕಾಮ್ಯಕರ್ಮವಿಸರ್ಜನಾತ್।
ಜನ್ಮರಾಹಿತ್ಯಸಂಪತ್ತಿರ್ಭವಶುದ್ಧಿರ್ನಿಗದ್ಯತೇ ॥ ೪೩ ॥

ಸರ್ವಭೂತದಯಾಲುತ್ವಂ ಪಾಂಚಭೌತಿಕಸಂಸ್ಕೃತಿಃ।
ಭೂತದೂಷಣರಾಹಿತ್ಯಂ ಭೂತಶುದ್ಧಿಃ ಸಮೀರಿತಾ ॥ ೪೪ ॥

ಸರ್ವಕಾಮಾನ್ ಸಮುಜ್ಝಿತ್ಯ ಶಿವಭಾವಾನುಭಾವನಮ್।
ಚೇತಸಾ ಯತ್ಸರ್ವಕಾಲಂ ಭಾವಶುದ್ಧಿಃ ಸಮೀರಿತಾ ॥ ೪೫ ॥

ಪದ್ಭ್ಯಾಂ ಪಿಪೀಲಿಕಾದೀನಾಂ ನ ಯಥಾ ಹಿಂಸನಂ ಭವೇತ್।
ಗಮನಂ ಹಿ ಪರಿಗ್ರಾಹ್ಯಂ ಮಾರ್ಗಶುದ್ಧಿರಿಯಂ ಮತಾ ॥ ೪೬ ॥

ಶಾಸ್ತ್ರಸಂಚೋದಿತೇ ಕಾಲೇ ನಿಃಶಬ್ದೇ ಚ ಮನೋರಮೇ।
ಶಿವಲಿಂಗಾರಾಧನಂ ಯತ್ ಕಾಲಶುದ್ಧಿರಿಹೋದಿತಾ ॥ ೪೭ ॥

ಅನೃತಂ ಪರುಷಂ ಕುತ್ಸಂ ಬೀಭತ್ಸಂ ದಾಂಭಿಕಂ ಚ ಯತ್।
ವಿಸರ್ಜನಂ ತದ್ವಚಸೋ ವಾಕ್‌ಶುದ್ಧಿರಿತಿ ಕಥ್ಯತೇ ॥ ೪೮ ॥

ಆಸನೇ ಶಯನೇ ಯಾನೇ ಗೋಷ್ಠ್ಯಾಂ ಸರ್ವತ್ರ ಸರ್ವದಾ।
ಸದ್ಭಕ್ತಜನಸಾಂಗತ್ಯಂ ಜನಶುದ್ಧಿಃ ಸಮೀರಿತಾ ॥ ೪೯ ॥

ವಿದ್ವನ್ನಯಂ ಶಿವಾಚಾರಃ ಸರ್ವಶಾಸ್ತ್ರೇಷು ಗೋಪಿತಃ।
ಏತದಾಚರಣಾನ್ಮರ್ತ್ಯಃ ಶಿವಸಾಯುಜ್ಯಮಶ್ನುತೇ ॥ ೫೦ ॥

ಹದಿನಾರು ಶುದ್ಧಿಗಳು

ಭಕ್ತನ ಹಸ್ತದಲ್ಲಿರುವ ಅಥವಾ ಭಸ್ಮದಿಂದ ಶುದ್ಧಗೊಳಿಸಲ್ಪಟ್ಟ ಫಲ, ಮೂಲ ಮುಂತಾದವುಗಳನ್ನು ಮಾತ್ರ ತೆಗೆದುಕೊಳ್ಳಬೇಕು ಎಂಬುದು ದ್ರವ್ಯಶುದ್ಧಿಯೆಂದು ಅಭಿಪ್ರಾಯ.(೩೩). ನಂದಿಮುದ್ರೆಯಿಂದ ಗುರುತಿಸಲ್ಪಟ್ಟ ಬಂಡೆ, ಮರ ಇತ್ಯಾದಿಗಳಿಂದ ಶೋಭಿಸುವ ಕ್ಷೇತ್ರ (ಹೊಲ)ವನ್ನು ಭಕ್ತರು ಸ್ವೀಕರಿಸಬೇಕು. ಇದು ಕ್ಷೇತ್ರಶುದ್ಧಿಯೆಂದು ಕರೆಯಲ್ಪಡುತ್ತದೆ. (೩೪). ಭಕ್ತರಿಂದ ನಿರ್ಮಿಸಲ್ಪಟ್ಟ ಅಥವಾ ಲಿಂಗ ಮುದ್ರೆಯಿಂದ ಅಂಕಿತವಾಗಿರುವ ಮನೆಯನ್ನು ಭಕ್ತರು ವಾಸಕ್ಕೆ ಸ್ವೀಕರಿಸಬೇಕೆಂಬುದು ಗೃಹಶುದ್ಧಿಯೆಂದು ಹೇಳಲ್ಪಟ್ಟಿದೆ. (೩೫). ಭಕ್ತನಿಂದ ಮಾಡಲ್ಪಟ್ಟ ಅಥವಾ ಲಿಂಗ ಮುದ್ರೆಯಿಂದ ಗುರುತಿಸಲ್ಪಟ್ಟ ಪಾತ್ರೆ ಪಡಗಗಳನ್ನು ಮಾತ್ರ ಬಳಸಬೇಕು. ಇದು ಭಾಂಡಶುದ್ಧಿಯೆಂದು ಕರೆಯಲ್ಪಡುತ್ತದೆ. (೩೬). ಭಕ್ತಜನರಿಂದ ತರಲ್ಪಟ್ಟ ಅಥವಾ ಭಸ್ಮದಿಂದ ಸಂಸ್ಕರಿಸಲ್ಪಟ್ಟ ಹುಲ್ಲು ಮುಂತಾದವುಗಳನ್ನು ಉಪಯೋಗಿಸಬೇಕು ಎಂಬುದನ್ನು ತೃಣಶುದ್ಧಿಯೆಂದು ಕರೆಯಲಾಗಿದೆ. (೩೭). ಭಕ್ತನಿಂದ ತರಲ್ಪಟ್ಟ ಅಥವಾ ವಿಭೂತಿಯಿಂದ ಸಂಸ್ಕರಿಸಲ್ಪಟ್ಟ ಕಟ್ಟಿಗೆಯನ್ನು ವ್ರತಧಾರಿಗಳು ತೆಗೆದುಕೊಳ್ಳಬೇಕು. ಇದು ಕಾಷ್ಠಶುದ್ಧಿಯೆಂದು ಕರೆಯಲ್ಪಡುತ್ತದೆ. (೩೮). ಭಕ್ತನ ಉದ್ಯಾನದಲ್ಲಿ ಬೆಳೆದವುಗಳಾದ ಅಥವಾ ಭಸ್ಮದಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶುದ್ಧೀಕರಿಸಲ್ಪಟ್ಟ ಅಥವಾ ಭಕ್ತರಿಂದ ಸಂಪಾದಿಸಲ್ಪಟ್ಟ ಅಥವಾ ವಿಭೂತಿಯಿಂದ ಪವಿತ್ರಿತವಾದ ವೀಳೆಯ ಎಲೆ, ಅಡಿಕೆ ಮತ್ತು ಸುಣ್ಣದಿಂದ ಕೂಡಿದ ತಾಂಬೂಲವನ್ನು ಭಕ್ತರು ತಿನ್ನಬೇಕು. ಇದಕ್ಕೆ ವೀಟಿಕಾಶುದ್ಧಿಯೆಂದು ಹೇಳಲಾಗಿದೆ. (೩೯-೪೦). ಶಿವದೀಕ್ಷೆಯನ್ನು ಹೊಂದಿದವನಿಂದ ಬೇಯಿಸಲ್ಪಟ್ಟ ಭಕ್ತರಲ್ಲದವರು ನೋಡದ ಆಹಾರವು ಮಾತ್ರ ಸ್ವೀಕರಿಸಲ್ಪಡಬೇಕು. ಇದಕ್ಕೆ ಪಾಕಶುದ್ಧಿಯೆನ್ನುವರು. (೪೧). ತುಪ್ಪವಾಗಲಿ, ಮೊಸರಾಗಲಿ, ಹಾಲಾಗಲಿ ಅಥವಾ ಮಜ್ಜಿಗೆಯಾಗಲಿ ಎಮ್ಮೆಯದನ್ನು ಮತ್ತು ಕುರಿಯದನ್ನು ಬಿಡಬೇಕು ಮತ್ತು ಯಾವಾಗಲೂ ಗೋವಿನದನ್ನು ಸ್ವೀಕರಿಸಬೇಕು. ಇದು ರಸಶುದ್ಧಿಯೆಂದು ಅಭಿಪ್ರಾಯ. (೪೨). ಪುನರ್ಜನ್ಮಕ್ಕೆ ಕಾರಣವೆಂದು ಹೇಳಲಾದ ಕಾಮ್ಯ ಕರ್ಮಗಳನ್ನು ಬಿಡುವುದರ ಮೂಲಕ ಜನ್ಮವೆತ್ತದಿರುವುದೆಂಬ ಸೌಭಾಗ್ಯವನ್ನು ಹೊಂದುವುದಕ್ಕೆ ಭವಶುದ್ಧಿಯೆಂದು ಕರೆಯಲಾಗಿದೆ. (೪೩). ಎಲ್ಲಾ ಪ್ರಾಣಿಗಳಲ್ಲಿ ದಯೆಯನ್ನಿಡುವುದು, ಪಂಚ ಭೂತಗಳಿಂದಾದ ಪದಾರ್ಥಗಳಿಗೆ ಸಂಸ್ಕಾರವನ್ನು ಕೊಡುವುದು, ಪಂಚಭೂತಗಳನ್ನು ಕಲುಷಿತಗೊಳಿಸದಿರುವುದು, ಇವುಗಳಿಗೆ ಭೂತ-ಶುದ್ಧಿಯೆನ್ನುತ್ತಾರೆ. (೪೪). ಎಲ್ಲಾ ಬಯಕೆಗಳನ್ನು ಪರಿತ್ಯಜಿಸಿ, ಸದಾಕಾಲವೂ ಮನಸ್ಸಿನಲ್ಲಿ ಶಿವಭಾವನೆಯನ್ನು ಮಾತ್ರ ಬೆಳೆಸಿಕೊಳ್ಳುವುದು ಭಾವಶುದ್ಧಿಯೆಂದು ಕರೆಯಲ್ಪಡುತ್ತದೆ. (೪೫). ಕಾಲುಗಳಿಂದ ಇರುವೆ ಮುಂತಾದವುಗಳಿಗೆ ಹಿಂಸೆಯಾಗದಂತೆ ನಡೆಯುವುದನ್ನು ರೂಡಿಸಿಕೊಳ್ಳಬೇಕು. ಇದು ಮಾರ್ಗಶುದ್ಧಿಯೆಂದು ಅಭಿಪ್ರೇತವಾಗಿದೆ. (೪೬). ಶಾಸ್ತ್ರದಲ್ಲಿ ಹೇಳಿದ, ಶಬ್ದರಹಿತವಾದ ಮತ್ತು ಮನೋಹರವಾದ ಕಾಲದಲ್ಲಿ ಶಿವಲಿಂಗವನ್ನು ಪೂಜಿಸುವುದಕ್ಕೆ ಕಾಲಶುದ್ಧಿಯೆಂದು ಕರೆಯಲಾಗಿದೆ. (೪೭). ಸುಳ್ಳಾದ, ಕಠಿಣವಾದ, ಕೀಳಾದ, ಅಸಹ್ಯವಾದ, ಆಡಂಬರಯುಕ್ತವಾದ ಮಾತನ್ನು ಆಡದಿರುವುದು ವಾಕ್‌ಶುದ್ಧಿಯೆಂದು ಹೇಳಲಾಗಿದೆ. (೪೮). ಆಸನದಲ್ಲಿ, ಶಯನದಲ್ಲಿ, ಯಾನದಲ್ಲಿ, ಗೋಷ್ಠಿಯಲ್ಲಿ, ಎಲ್ಲಾ ಕಡೆ ಎಲ್ಲಾ ಕಾಲದಲ್ಲಿಯೂ ಸದ್ಭಕ್ತ ಜನರ ಸಾಹಚರ್ಯವನ್ನು ಜನಶುದ್ಧಿಯೆಂದು ಕರೆಯುವರು. (೪೯). ವಿದ್ವಾಂಸನೇ, ಇದೆಲ್ಲಾ ಶಿವಾಚಾರ; ಎಲ್ಲಾ ಶಾಸ್ತ್ರಗಳಲ್ಲಿ ಇದು ಗೋಪ್ಯವಾಗಿದೆ. ಇಷ್ಟೆಲ್ಲಾ ಆಚರಿಸುವ ಮನುಷ್ಯನು ಶಿವ-ಸಾಯುಜ್ಯವನ್ನು ಹೊಂದುತ್ತಾನೆ. (೫೦).

೪. ಗಣಾಚಾರಃ

ಗಣಾಚಾರಮತೋ ವಕ್ಷ್ಯೇ ಭೋಗಮೋಕ್ಷೈಕಸಾಧನಮ್।
ಅನುಷ್ಠಿತೋ ಭಕ್ತಜನೈರ್ಗಣಾಚಾರ ಇತೀರಿತಃ ॥ ೫೧ ॥

ಗಣಾಚಾರ

ಈಗ ಗಣಾಚಾರವನ್ನು ಹೇಳುತ್ತೇನೆ. ಅದು ಭೋಗ ಮತ್ತು ಮೋಕ್ಷಗಳಿಗೆ ಸಾಧನ. ಭಕ್ತಜನರಿಂದ ಆಚರಿಸಲ್ಪಡುವ ಇದಕ್ಕೆ ಗಣಾಚಾರವೆನ್ನುವರು. (೫೧).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚತುಃಷಷ್ಟಿಶೀಲಾನಿ

ಸರ್ವೋತ್ತಮೇ ಗಣಾಚಾರೇ ಸದ್ಯಃ ಸಿದ್ಧಿಕರೇ ಪರೇ।
ಶೀಲಾನಿ ತು ಚತುಃಷಷ್ಟಿರ್ವರ್ತಂತೇ ತಾನಿ ಸಂಶೃಣು ॥ ೫೨ ॥

ಅರವತ್ನಾಲ್ಕು ಶೀಲಗಳು

ಸದ್ಯವೇ ಸಿದ್ಧಿಯನ್ನು ನೀಡುವ ಸರ್ವೋತ್ಕೃಷ್ಟವಾದ ಗಣಾಚಾರದಲ್ಲಿ ಅರವತ್ನಾಲ್ಕು ಶೀಲಗಳಿವೆ. ಅವುಗಳ ಬಗ್ಗೆ ಕೇಳು. (೫೨).

ತತ್ರ ಸಪ್ತ ವಾಚಿಕಶೀಲಾನಿ

ಭಕ್ತಿನಿಷ್ಠೇನ ಯದ್ವಾಚಾ ಯಥಾರ್ಥಸ್ಯೈವ ಭಾಷಣಮ್।
ತತ್ಸತ್ಯಂ ಸರ್ವಶಾಸ್ತ್ರೇಷು ಪ್ರಥಮಂ ಶೀಲಮುಚ್ಯತೇ ॥ ೫೩ ॥

ನ ವಾಚ್ಯಮಪ್ರಿಯಂ ಸತ್ಯಂ ನಾಸತ್ಯಂ ಚ ಪ್ರಿಯಂ ವದೇತ್।
ಬ್ರೂಯಾತ್ ಪ್ರಿಯಂ ಚ ಯತ್ಸತ್ಯಂ ದ್ವಿತೀಯಂ ಶೀಲಮುಚ್ಯತೇ ॥ ೫೪ ॥

ವೇದಾಗಮಪುರಾಣಾನಾಂ ಧರ್ಮಜ್ಞಾನೈಕಬೋಧಿನಾಮ್।
ಪಠನಂ ಪ್ರತ್ಯಹಂ ಯತ್ತತ್ ತೃತೀಯಂ ಶೀಲಮೀರಿತಮ್ ॥ ೫೫ ॥

ಶಿವಸ್ಯ ಶಿವಭಕ್ತಾನಾಂ ಗುರೋರಪಿ ವಿಶೇಷತಃ।
ಪ್ರಶಂಸನಂ ಯದಶ್ರಾಂತಂ ಚತುರ್ಥಂ ಶೀಲಮುಚ್ಯತೇ ॥ ೫೬ ॥

ಅನ್ಯೇಷಾಂ ಚೈವ ದೈವಾನಾಂ ಮಾನುಷಾಣಾಂ ಚ ಜಾತುಚಿತ್।
ಪ್ರಶಂಸಾವರ್ಜನಂ ಯತ್ತತ್ ಪಂಚಮಂ ಶೀಲಮುಚ್ಯತೇ ॥ ೫೭ ॥

ಕದಾಚಿತ್ ಕುತ್ರಚಿದ್ ವಾ ಯದಾತ್ಮಸ್ತುತಿವಿಸರ್ಜನಮ್।
ತತ್‌ಷಷ್ಠಂ ಶೀಲಮಿತ್ಯುಕ್ತಂ ಸರ್ವಶಾಸ್ತ್ರೈಕಸಮ್ಮತಮ್ ॥ ೫೮ ॥

ದೇವತಾನಾಂ ಮನುಷ್ಯಾಣಾಂ ನಿರ್ಗುಣಾನಾಂ ಚ ಜಾತುಚಿತ್।
ಗರ್ಹಾವಿಸರ್ಜನಂ ಯತ್ತತ್ ಸಪ್ತಮಂ ಶೀಲಮುಚ್ಯತೇ ॥ ೫೯ ॥

ತದೇತದ್ವಾಚಿಕಂ ಶೀಲಮುಕ್ತಂ ಸಪ್ತವಿಧಂ ಮಯಾ।
ಅಥ ಪಾಣಿಗತಂ ಯತ್ತು ಶೀಲಂ ವಕ್ಷ್ಯಾಮಿ ತಚ್ಛೃಣು ॥ ೬೦ ॥

ಅವುಗಳಲ್ಲಿ ಏಳು ವಾಚಿಕ ಶೀಲಗಳು

ಭಕ್ತಿನಿಷ್ಠನಾದ ವ್ಯಕ್ತಿಯು ಮಾತಿನ ಮೂಲಕ ಯಾವ ಯಥಾವತ್ತಾದ ವಿಷಯವನ್ನು ಹೇಳುತ್ತಾನೋ ಅದೇ ಸತ್ಯ; ಅದನ್ನು ಎಲ್ಲಾ ಶಾಸ್ತ್ರಗಳಲ್ಲಿ ಮೊದಲನೆಯ ಶೀಲವೆಂದು ಹೇಳಲಾಗುತ್ತದೆ. (೫೩). ಅಪ್ರಿಯವಾದ ಸತ್ಯವನ್ನು ಹೇಳಬಾರದು, ಅಸತ್ಯವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಿಯವೆಂದು ಹೇಳಬಾರದು, ಯಾವುದು ಪ್ರಿಯವೂ ಸತ್ಯವೂ ಆಗಿದೆಯೋ ಅದನ್ನು ಹೇಳಬೇಕು. ಇದನ್ನು ಎರಡನೆಯ ಶೀಲವೆಂದು ಹೇಳಲಾಗಿದೆ. (೫೪). ಧರ್ಮ ಮತ್ತು ಜ್ಞಾನಗಳನ್ನೇ ಬೋಧಿಸುವ ವೇದ-ಆಗಮ-ಪುರಾಣಗಳನ್ನು ಪ್ರತಿನಿತ್ಯವೂ ಪಠಿಸುವುದು ಮೂರನೆಯ ಶೀಲವೆಂದು ಹೇಳಲ್ಪಟ್ಟಿದೆ. (೫೫). ಶಿವನ, ಶಿವಭಕ್ತರ, ವಿಶೇಷವಾಗಿ ಗುರುವಿನ ಪ್ರಶಂಸೆಯನ್ನು ಬಳಲಿಕೆಯಿಲ್ಲದೆ ಮಾಡುವುದು ನಾಲ್ಕನೆಯ ಶೀಲವೆನ್ನಲಾಗಿದೆ. (೫೬). ಬೇರೆ ದೇವತೆಗಳ ಮನುಷ್ಯರ ಪ್ರಶಂಸೆಯನ್ನು ಯಾವಾಗಲೂ ಮಾಡದಿರುವುದು ಐದನೆಯ ಶೀಲ. (೫೭). ಯಾವಾಗಲಾಗಲಿ, ಎಲ್ಲಿಯಾದರಾಗಲಿ ಆತ್ಮಸ್ತುತಿಯನ್ನು ಮಾಡದಿರುವುದು ಸರ್ವಶಾಸ್ತ್ರಗಳಿಗೆ ಸಮ್ಮತವಾದ ಆರನೆಯ ಶೀಲವೆಂದು ಹೇಳಲ್ಪಟ್ಟಿದೆ. (೫೮). ಯಾವಾಗಲೂ ದೇವತೆಗಳ, ಮನುಷ್ಯರ ಮತ್ತು ಗುಣಹೀನರ ನಿಂದೆಯನ್ನು ಮಾಡದಿರುವುದು ಏಳನೆಯ ಶೀಲವೆಂದು ಹೇಳಲಾಗಿದೆ. (೫೯). ಹೀಗೆ ಏಳು ವಿಧವಾದ ವಾಚಿಕ ಶೀಲವನ್ನು ನಾನು ಹೇಳಿದ್ದಾಯಿತು. ಈಗ ಪಾಣಿಗತನಾದ ಶೀಲವನ್ನು ಹೇಳುತ್ತೇನೆ. ಅದನ್ನು ಕೇಳು. (೬೦).

ಪಂಚವಿಧಂ ಪಾಣಿಗತಂ ಶೀಲಮ್

ಗುರುಜಂಗಮಲಿಂಗಾನಾಂ ಕ್ರಿಯತೇ ಯಾ ನಮಸ್ಕೃತಿಃ।
ಶೀಲಮಷ್ಟಮಮಿತ್ಯುಕ್ತಮಖಿಲಾಗಮಬೋಧಿತಮ್ ॥ ೬೧ ॥

ಪೂಜಾಪರಿಕರಾಣಾಂ ಯತ್ ಸಂಪಾದನಮಹರ್ನಿಶಮ್।
ಶೀಲಂ ನವಮಮಿತ್ಯುಕ್ತಂ ಶಿವಪ್ರೀತ್ಯೇಕಕಾರಣಮ್ ॥ ೬೨ ॥

ರುದ್ರಾಕ್ಷಮಾಲಯಾ ನಿತ್ಯಂ ಮೂಲಮಂತ್ರಜಪೋಽನ್ವಹಮ್।
ದಶಮಂ ಶೀಲಮಿತ್ಯುಕ್ತಮಖಿಲಾಘವಿಶೋಧನಮ್ ॥ ೬೩ ॥

ಗುರೋರ್ಮಾಹೇಶ್ವರಾಣಾಂ ಚ ಭವಾನೀವಲ್ಲಭಸ್ಯ ಚ।
ಆರಾಧನಂ ಪ್ರತ್ಯಹಂ ತಚ್ಛೀಲಮೇಕಾದಶಂ ಸ್ಮೃತಮ್ ॥ ೬೪ ॥

ಗುರವೇ ಜಂಗಮೇಭ್ಯಶ್ಚ ಶಿವಧರ್ಮಾಯ ಭಕ್ತಿತಃ।
ಯಥಾಶಕ್ತಿ ಕೃತಂ ದಾನಂ ದ್ವಾದಶಂ ಶೀಲಮುಚ್ಯತೇ ॥ ೬೫ ॥

ಏವಂ ಪಂಚವಿಧಂ ಶೀಲಂ ಪಾಣಿಸಂಬದ್ಧಮೀರಿತಮ್।
ಅಥ ಪಾದಗತಂ ವಕ್ಷ್ಯೇ ಶೀಲಂ ಪಾಪೌಘನಾಶನಮ್ ॥ ೬೬ ॥

ಪಾಣಿಗತ ಶೀಲ ಐದು ವಿಧ

ಗುರು-ಲಿಂಗ-ಜಂಗಮರಿಗೆ ನಮಸ್ಕಾರ ಮಾಡುವುದು ಎಲ್ಲಾ ಆಗಮಗಳಲ್ಲಿ ಬೋಧಿಸಲ್ಪಟ್ಟ ಎಂಟನೆಯ ಶೀಲವೆಂದು ಹೇಳಲಾಗಿದೆ. (೬೧). ಹಗಲೂ ರಾತ್ರಿ ಪೂಜಾ ಸಾಮಗ್ರಿಗಳನ್ನು ಒದಗಿಸಿಕೊಳ್ಳುವುದು ಶಿವನ ಪ್ರೀತಿಗೆ ಏಕೈಕ ಕಾರಣವಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂಬತ್ತನೆಯ ಶೀಲವೆಂದು ಹೇಳಲ್ಪಟ್ಟಿದೆ. (೬೨). ರುದ್ರಾಕ್ಷ ಮಾಲೆಯಿಂದ ಪ್ರತಿದಿನವೂ ಮೂಲಮಂತ್ರವನ್ನು ಜಪಿಸುವುದು ಎಲ್ಲಾ ಪಾಪಗಳನ್ನು ಪರಿಹರಿಸುವ ಹತ್ತನೆಯ ಶೀಲವೆಂದು ಹೇಳುವರು. (೬೩). ಗುರು ಮತ್ತು ಮಾಹೇಶ್ವರರ ಹಾಗೂ ಪಾರ್ವತೀ ಪತಿಯ ಸೇವೆಯನ್ನು ಪ್ರತಿದಿನವೂ ಮಾಡುವುದು ಹನ್ನೊಂದನೆಯ ಶೀಲವೆಂದು ಪರಿಗಣಿಸಲ್ಪಟ್ಟಿದೆ. (೬೪). ಗುರುವಿಗೆ, ಜಂಗಮರಿಗೆ ಮತ್ತು ಶಿವಧರ್ಮಕ್ಕೆ ಭಕ್ತಿಯಿಂದ ಶಕ್ತಿಗೆ ಅನುಗುಣವಾಗಿ ಮಾಡುವ ದಾನವು ಹನ್ನೆರಡನೆಯ ಶೀಲವೆಂದು ಹೇಳಲ್ಪಟ್ಟಿದೆ. (೬೫). ಹೀಗೆ ಐದು ವಿಧವಾದ ಪಾಣಿಗತ ಶೀಲದ ಬಗ್ಗೆ ಹೇಳಿದ್ದಾಯಿತು. ಇನ್ನು ಪಾಪ ಸಮೂಹವನ್ನು ನಾಶಪಡಿಸುವ ಪಾದಗತಶೀಲವನ್ನು ಕುರಿತು ಹೇಳುವೆನು. (೬೬).

ಚತುರ್ವಿಧಂ ಪಾದಗತಂ ಶೀಲಮ್

ಗುರೋರ್ಮಾಹೇಶ್ವರಸ್ಯಾಭಿಗಮನಂ ಕ್ರಿಯತೇ ಹಿ ಯತ್।
ತತ್ತ್ರಯೋದಶಮಿತ್ಯುಕ್ತಂ ಶಂಭುನಾ ಸರ್ವವೇದಿನಾ ॥ ೬೭ ॥

ಗುರೋರ್ಮಾಹೇಶ್ವರಸ್ಯಾಪಿ ಕ್ರಿಯತೇ ಯತ್ಪ್ರದಕ್ಷಿಣಮ್।
ಭಕ್ತಿಭಾವಯುತೇನೈವ ಗದಿತಂ ತಚ್ಚತುರ್ದಶಮ್ ॥ ೬೮ ॥

ಪೂಜಾಪರಿಕರಾಣಾಂ ಚ ಸಂಪಾದನಚಿಕೀರ್ಷಯಾ।
ಭಕ್ತೇನ ಗಮ್ಯತೇ ನಿತ್ಯಂ ತತ್ ಪಂಚದಶಕಂ ಮತಮ್ ॥ ೬೯ ॥

ಗುರೋರಪೀಷ್ಟಲಿಂಗಸ್ಯ ಪೂಜಾರ್ಥಂ ಸ್ಥಿರಮಾನಸಮ್।
ತತ್ ಷೋಡಶಕಮಿತ್ಯುಕ್ತಂ ದೇವದೇವನ ಶೂಲಿನಾ ॥ ೭೦॥

ಏವಂ ಪಾದಗತಂ ಶೀಲಂ ಚತುರ್ವಿಧಮಿತೀರಿತಮ್।
ತ್ವಕ್‌ಸಂಬದ್ಧಮತೋ ವಕ್ಷ್ಯೇ ತಚ್ಛೃಣುಷ್ವಾವಧಾನತಃ ॥ ೭೧ ॥

ನಾಲ್ಕು ವಿಧ ಪಾದಗತ ಶೀಲಗಳು

ಗುರು ಮತ್ತು ಮಾಹೇಶ್ವರರಲ್ಲಿಗೆ ಭಕ್ತಿಯಿಂದ ಹೋಗುವುದು ಯಾವುದಿದೆಯೋ ಅದು ಸರ್ವಜ್ಞನಾದ ಶಿವನಿಂದ ಹೇಳಲ್ಪಟ್ಟ ಹದಿಮೂರನೆಯ ಶೀಲ. (೬೭). ಭಕ್ತಿಭಾವ ಪೂರ್ವಕವಾಗಿ ಗುರು ಮತ್ತು ಮಾಹೇಶ್ವರರ ಪ್ರದಕ್ಷಿಣೆ ಮಾಡುವುದು ಹದಿನಾಲ್ಕನೆಯ-ದೆಂದು ಹೇಳಲ್ಪಟ್ಟಿದೆ. (೬೮). ಪೂಜಾ ಸಾಮಗ್ರಿಗಳನ್ನು ಒದಗಿಸಿಕೊಳ್ಳುವ ಇಚ್ಛೆಯಿಂದ ನಿತ್ಯವೂ ಭಕ್ತಿಪೂರ್ವಕವಾಗಿ ಹೋಗುವುದು ಹದಿನೈದನೆಯ ಶೀಲವೆಂದು ಅಭಿಪ್ರಾಯ. (೬೯). ಗುರುವಿನ ಮತ್ತು ಇಷ್ಟಲಿಂಗದ ಪೂಜೆಗಾಗಿ ಯಾವ ಸ್ಥಿರ ಮನಸ್ಕತೆಯಿದೆಯೋ ಅದನ್ನು ದೇವದೇವನಾದ ಶೂಲಿಯು ಹದಿನಾರನೆಯದೆಂದು ಹೇಳಿದ್ದಾನೆ. (೭೦). ಹೀಗೆ ನಾಲ್ಕು ವಿಧವಾದ ಪಾದಗತ ಶೀಲದ ಬಗ್ಗೆ ಹೇಳಿದ್ದಾಯಿತು. ಅನಂತರ ಚರ್ಮಕ್ಕೆ ಸಂಬಂಧಿಸಿದ ಶೀಲಗಳನ್ನು ಹೇಳುವೆನು. ಮನಸ್ಸಿಟ್ಟು ಕೇಳು. (೭೧).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವಿವಿಧಂ ತ್ವಕ್‌ಸಂಬದ್ಧಂ ಶೀಲಮ್

ನಿತ್ಯಂ ಯದಿಷ್ಟಲಿಂಗಸ್ಯ ಸ್ಪರ್ಶನಂ ತ್ವವಿಯೋಗತಃ।
ತತ್‌ಸಪ್ತದಶಕಂ ಪ್ರೋಕ್ತಂ ವಪುಸಾರ್ಥಕತಾಸ್ಪದಮ್ ॥ ೭೨ ॥

ಇಷ್ಟಲಿಂಗಸ್ಪರ್ಶಜನ್ಯರೋಮಾಂಚಸಮಲಂಕೃತಿಃ।
ಅಷ್ಟಾದಶಂ ಶೀಲಮಿತಿ ಕಥಿತಂ ಭವನಾಶಕಮ್ ॥ ೭೩ ॥

ತ್ವಕ್‌ಸಂಬದ್ಧಮಿದಂ ಶೀಲಂ ದ್ವಿವಿಧಂ ಪರಿಕೀರ್ತಿತಮ್।
ಚಕ್ಷುರ್ಗತಂ ಪ್ರವಕ್ಷ್ಯಾಮಿ ಶೃಣು ತತ್ಸಾವಧಾನತಃ ॥ ೭೪ ॥

ಎರಡು ವಿಧ ಚರ್ಮಕ್ಕೆ ಸಂಬಂಧಿಸಿದ ಶೀಲ

ನಿತ್ಯವೂ ಅಗಲಿಕೆಯಿಲ್ಲದ ಇಷ್ಟಲಿಂಗದ ಸ್ಪರ್ಶವು ಯಾವುದಿದೆಯೋ ಅದನ್ನು ಶರೀರದ ಸಾರ್ಥಕತೆಗೆ ಆಧಾರವಾದ ಹದಿನೇಳನೆಯ ಶೀಲವೆಂದು ಹೇಳಲಾಗಿದೆ. (೭೨). ಇಷ್ಟಲಿಂಗದ ಸ್ಪರ್ಶನದಿಂದ ಉಂಟಾಗುವ ರೋಮಾಂಚನವು ಭವವನ್ನು ಪರಿಹರಿಸುವ ಹದಿನೆಂಟನೆಯ ಶೀಲವೆಂದು ಹೇಳಲ್ಪಟ್ಟಿದೆ. (೭೩). ಹೀಗೆ ಎರಡು ವಿಧವಾದ ಚರ್ಮಕ್ಕೆ ಸಂಬಂಧಿಸಿದ ಶೀಲವನ್ನು ಹೇಳಿದ್ದಾಯಿತು. ಕಣ್ಣುಗಳಿಗೆ ಸಂಬಂಧಿಸಿದ ಶೀಲವನ್ನು ಹೇಳುವೆನು, ಏಕಾಗ್ರತೆಯಿಂದ ಕೇಳು. (೭೪).

ದ್ವಿವಿಧಂ ಚಕ್ಷುರ್ಗತಂ ಶೀಲಮ್

ಅಶ್ರಾಂತಂ ಸಾನುರಾಗಂ ಯದಿಷ್ಟಲಿಂಗನಿರೀಕ್ಷಣಮ್।
ಏಕೋನವಿಂಶಕಂ ಶೀಲಮುಕ್ತಂ ಭವಭಯಾಪಹಮ್ ॥ ೭೫ ॥

ಇಷ್ಟಲಿಂಗೇಕ್ಷಣೋದ್ಭೂತಾನಂದಬಾಷ್ಪಸಮುದ್ಗಮಃ।
ವಿಂಶಂ ಶೀಲಂ ವಿನಿರ್ದಿಷ್ಟಂ ಸ್ಪಷ್ಟಂ ಚಂದ್ರಾರ್ಧಮೌಲಿನಾ ॥ ೭೬ ॥

ಏವಂ ತೇ ದ್ವಿವಿಧಂ ಶೀಲಂ ಚಕ್ಷುಃಸಂಬದ್ಧಮೀರಿತಮ್।
ಅಥ ಜಿಹ್ವಾಗತಂ ವಕ್ಷ್ಯೇ ಶೃಣು ಶ್ರದ್ಧಾಸಮನ್ವಿತಃ ॥ ೭೭ ॥

ಎರಡು ವಿಧ ಚಕ್ಷುಃಸಂಬಂಧಿ ಶೀಲ

ನಿರಂತರವಾಗಿ ಅನುರಾಗ ಪೂರ್ವಕವಾಗಿ ಇಷ್ಟಲಿಂಗವನ್ನು ನೆಟ್ಟ ದೃಷ್ಟಿಯಿಂದ ನೋಡುವುದು ಪುನರ್ಜನ್ಮದ ಭಯವನ್ನು ಪರಿಹರಿಸುವ ಹತ್ತೊಂಬತ್ತನೆಯ ಶೀಲವೆಂದು ಹೇಳಲಾಗಿದೆ. (೭೫). ಇಷ್ಟಲಿಂಗವನ್ನು ನಿರೀಕ್ಷಿಸುವುದರಿಂದ ಉಂಟಾಗುವ ಆನಂದಾಶ್ರುಗಳು ಉದುರುವುದನ್ನು ಚಂದ್ರಶೇಖರ ಶಿವನು ಸ್ಪಷ್ಟವಾಗಿ ಇಪ್ಪತ್ತನೆಯ ಶೀಲವೆಂದು ನಿರ್ದೇಶಿಸಿದ್ದಾನೆ. (೭೬). ಹೀಗೆ ನಿನಗೆ ಎರಡು ವಿಧವಾದ ಕಣ್ಣುಗಳಿಗೆ ಸಂಬಂಧಿಸಿದ ಶೀಲವನ್ನು ಹೇಳಿದ್ದಾಯಿತು. ಅನಂತರ ನಾಲಿಗೆಗೆ ಸಂಬಂಧಿಸಿದ ಶೀಲವನ್ನು ಹೇಳುತ್ತೇನೆ, ಶ್ರದ್ಧಾಯುಕ್ತನಾಗಿ ಕೇಳು. (೭೭).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಿಹ್ವಾಗತಂ ಶೀಲಮ್

ನಿವೇದಿತಪ್ರಸಾದೀಯರಸಾಸ್ವಾದೋ ಯದನ್ವಹಮ್।
ಏಕವಿಂಶಕಮಿತ್ಯುಕ್ತಮಥ ಘ್ರಾಣಗತಂ ಶೃಣು ॥ ೭೮ ॥

ನಾಲಿಗೆಗೆ ಸಂಬಂಧಿಸಿದ ಶೀಲ

ಅರ್ಪಿತ ಪ್ರಸಾದವನ್ನು ಪ್ರತಿದಿನವೂ ರುಚಿ ನೋಡುವುದು ಇಪ್ಪತ್ತೊಂದನೆಯ ಶೀಲವೆನ್ನುವರು. ಇನ್ನು ಮೂಗಿಗೆ ಸಂಬಂಧಿಸಿದ ಶೀಲದ ಬಗ್ಗೆ ಕೇಳು. (೭೮).

ಘ್ರಾಣಗತಂ ಶೀಲಂ

ನಿರ್ಮಾಲ್ಯಗಂಧಪುಷ್ಪಾದಿಸೌರಭಾಘ್ರಾಣನಂ ಪರಮ್।
ದ್ವಾವಿಂಶಕಂ ಸಮಾಖ್ಯಾತಮತಃ ಶ್ರೋತ್ರಗತಂ ಶೃಣು ॥

ಮೂಗಿಗೆ ಸಂಬಂಧಿಸಿದ ಶೀಲ

ದೇವರಿಗೆ ಅರ್ಪಿಸಿ ತೆಗೆದ (ನಿರ್ಮಾಲ್ಯ) ಗಂಧ, ಪುಷ್ಪ, ಮುಂತಾದವುಗಳ ವಾಸನೆಯನ್ನು ಮೂಸಿ ನೋಡುವುದು ಇಪ್ಪತ್ತೆರಡನೆಯದೆಂದು ಹೇಳಲ್ಪಟ್ಟಿದೆ. ಕಿವಿಗೆ ಸಂಬಂಧಿಸಿದ ಶೀಲವನ್ನು ಕೇಳು. (೭೯).

ದ್ವಿವಿಧಂ ಶ್ರೋತ್ರಗತಂ ಶೀಲಮ್।

ಗುರೋಃ ಶಿವಸ್ಯ ಭಕ್ತಾನಾಂ ಸ್ತೋತ್ರಾಕರ್ಣನಮನ್ವಹಮ್।
ತತ್ ತ್ರಯೋವಿಂಶಕಂ ಪ್ರೋಕ್ತಂ ಮೋಕ್ಷಸಂಪ್ರಾಪ್ತಿಕಾರಣಮ್ ॥ ೮೦॥

ಗುರೋಃ ಶಿವಸ್ಯ ಭಕ್ತಾನಾಂ ನಿಂದಾನಾಕರ್ಣನಂ ಹಿ ತತ್।
ತಚ್ಚತುರ್ವಿಂಶಕಂ ಪ್ರೋಕ್ತಂ ಕಾಯಿಕಂ ತು ತತಃ ಶೃಣು ॥ ೮೧ ॥

ಎರಡು ವಿಧ ಶ್ರೋತ್ರಗತ ಶೀಲ

ಗುರುವಿನ, ಶಿವನ, ಭಕ್ತರ ಸ್ತೋತ್ರವನ್ನು ಪ್ರತಿದಿನವೂ ಕೇಳುವುದು, ಮೋಕ್ಷವನ್ನು ಪಡೆಯಲು ಕಾರಣವಾದ ಇಪ್ಪತ್ತಮೂರನೆಯ ಶೀಲವೆಂದು ಹೇಳಲ್ಪಟ್ಟಿದೆ. (೮೦). ಗುರುವಿನ, ಶಿವನ, ಭಕ್ತರ ನಿಂದೆಯನ್ನು ಕೇಳದಿರುವುದು ಇಪ್ಪತ್ನಾಲ್ಕನೆಯ ಶೀಲವೆಂದು ಹೇಳಲಾಗಿದೆ. ಕಾಯಿಕ ಶೀಲವನ್ನು ಈಗ ಕೇಳು. (೮೧).

ಪಂಚವಿಧಂ ಕಾಯಿಕಂ ಶೀಲಮ್

ಗುರೋರಪೀಷ್ಟಲಿಂಗಸ್ಯ ಚರಸ್ಯೈವ ಪ್ರಸಾದತಃ।
ಕಾಯಶೋಧನಮೇತದ್ಧಿ ಶೀಲಂ ಸ್ಯಾತ್ ಪಂಚವಿಂಶಕಮ್ ॥ ೮೨ ॥

ನಿಷಿದ್ಧವಿಷಯೇಭ್ಯಶ್ಚ ಯದಿಂದ್ರಿಯವಿನಿಗ್ರಹಃ।
ಷಡ್ವಿಂಶಂ ಶೀಲಮಿತ್ಯುಕ್ತಂ ಭವದೋಷನಿವಾರಣಮ್ ॥ ೮೩ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಸ್ಪೃಶ್ಯವಸ್ತುಸಂಸ್ಪರ್ಶೇ ಸ್ನಾನಂ ನೀರೇಣ ಭಸ್ಮನಾ।
ಶೌಚಂ ಹಿ ಸಪ್ತವಿಂಶಂ ಸ್ಯಾಚ್ಛೀಲಂ ದೋಷನಿವಾರಣಮ್ ॥ ೮೪ ॥

ಆಸನೇ ಶಯನೇ ಗೋಷ್ಠ್ಯಾಂ ಭವಿಸಂಬಂಧವರ್ಜನಮ್।
ಅಷ್ಟಾವಿಂಶಮಿದಂ ಶೀಲಂ ನಿರ್ದಿಷ್ಟಂ ಶೌಚಸಾಧನಮ್ ॥ ೮೫ ॥

ಭೂತಿರುದ್ರಾಕ್ಷಲಿಂಗಾನಾಂ ಶರೀರೇ ಧಾರಣಂ ಸದಾ।
ಏಕೋನತ್ರಿಂಶಕಂ ಶೀಲಂ ಮೋಕ್ಷಮಾರ್ಗೈಕಸಾಧನಮ್ ॥ ೮೬ ॥

ಕಾಯಿಕಂ ಪಂಚಧಾ ಪ್ರೋಕ್ತಂ ಮುಕ್ತಿಪ್ರಾಪ್ತ್ಯೇಕಸಾಧನಮ್।
ಅಥ ಮಾನಸಿಕಂ ವಕ್ಷ್ಯೇ ಶೀಲಮೇಕಮನಾಃ ಶೃಣು ॥ ೮೭ ॥

ಐದು ವಿಧ ಕಾಯಿಕ ಶೀಲ

ಗುರುವಿನ, ಇಷ್ಟಲಿಂಗದ, ಜಂಗಮನ ಪ್ರಸಾದದಿಂದ ಶರೀರದ ಶುದ್ಧೀಕರಣವು ಇಪ್ಪತ್ತೈದನೆಯ ಶೀಲವಾಗಿದೆ. (೮೨). ನಿಷಿದ್ಧವಾದ ವಿಷಯಗಳಿಂದ ಇಂದ್ರಿಯಗಳನ್ನು ನಿಯಂತ್ರಿಸುವುದು ಪುನರ್ಜನ್ಮ ರೂಪದೋಷವನ್ನು ನಿವಾರಿಸುವ ಇಪ್ಪತ್ತಾರನೆಯ ಶೀಲವೆಂದು ಹೇಳಲ್ಪಟ್ಟಿದೆ. (೮೩). ಮುಟ್ಟಬಾರದ ವಸ್ತುವಿನ ಸ್ಪರ್ಶವಾದಾಗ ಸಜಲ ಭಸ್ಮದಿಂದ ಸ್ನಾನ ಮಾಡಿ ಶುಚಿಯಾಗುವುದು ದೋಷನಿವಾರಕವಾದ ಇಪ್ಪತ್ತೇಳನೆಯ ಶೀಲವಾಗಿದೆ. (೮೪). ಆಸನದಲ್ಲಾಗಲಿ, ಶಯನದಲ್ಲಾಗಲಿ, ಗೋಷ್ಠಿಯಲ್ಲಾಗಲಿ ಭವಿಯ ಸಂಬಂಧವನ್ನು ಬಿಡುವುದು ಶುದ್ಧಿಯ ಸಾಧನವಾದ ಇಪ್ಪತ್ತೆಂಟನೆಯ ಶೀಲವೆಂದು ಹೇಳಲ್ಪಟ್ಟಿದೆ. (೮೫). ಭಸ್ಮ ರುದ್ರಾಕ್ಷ, ಲಿಂಗಗಳನ್ನು ಶರೀರದ ಮೇಲೆ ಸದಾ ಧರಿಸಿಕೊಳ್ಳುವುದು ಮೋಕ್ಷಮಾರ್ಗಕ್ಕೆ ಏಕಮಾತ್ರ ಸಾಧನವಾದ ಇಪ್ಪತ್ತೊಂಬತ್ತನೆಯ ಶೀಲ. (೮೬). ಮುಕ್ತಿಗೆ ಏಕಮಾತ್ರ ಸಾಧನವಾದ ಪಂಚವಿಧ ಕಾಯಿಕ ಶೀಲವನ್ನು ಹೇಳಿದ್ದಾಯಿತು. ಇನ್ನು ಮಾನಸಿಕವಾದ ಶೀಲವನ್ನು ಕುರಿತು ಹೇಳುವೆನು, ಏಕಾಗ್ರಚಿತ್ತನಾಗಿ ಕೇಳು. (೮೭).

ಪಂಚತ್ರಿಂಶವಿಧಂ ಮಾನಸಿಕಂ ಶೀಲಮ್

ನಿಷಿದ್ಧಭೋಗವಿಷಯೇ ಯತ್ ಸಂಕಲ್ಪವಿವರ್ಜನಮ್।
ಬ್ರಹ್ಮಚರ್ಯಂ ಹಿ ತಚ್ಛೀಲಂ ತ್ರಿಂಶಮೀಶ್ವರಚೋದಿತಮ್ ॥ ೮೮ ॥

ಕಾಮಂ ಭಕ್ತಿರಸೌಕುರ್ಯಾದವಿಷಯೇಷು ನ ಜಾತುಚಿತ್।
ಏಕತ್ರಿಂಶಮಿದಂ ಶೀಲಂ ನಿಷ್ಕಾಮತ್ವಂ ಪ್ರಕೀರ್ತಿತಮ್ ॥ ೮೯ ॥

ವಹೇತ್ ಕ್ರೋಧಮಧರ್ಮೇ ತು ನ ವೈರಿಷು ಕದಾಚನ।
ದ್ವಾತ್ರಿಂಶಕಮಿದಂ ಶೀಲಮಕ್ರೋಧಂ ಮುಕ್ತಿಸಾಧನಮ್ ॥ ೯೦ ॥

ನ ಧನಾದೌ ವಹೇಲ್ಲೋಭಂ ಶಿವಸ್ಯಾರಾಧನೇ ವಹೇತ್।
ಅಲೋಭಾಖ್ಯಮಿದಂ ಶೀಲಂ ತ್ರಯತ್ರಿಂಶಂ ಸಮೀರಿತಮ್ ॥ ೯೧ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೋಹಂ ಭಕ್ತಜನೇ ಕುರ್ಯಾನ್ನ ಕಾಂತಾಯಾಂ ಸುತೇಷು ಚ।
ಅಮೋಹಾಖ್ಯಮಿದಂ ಶೀಲಂ ಚತುಸ್ತ್ರಿಂಶಂ ಪ್ರಕೀರ್ತಿತಮ್ ॥ ೯೨ ॥

ಮಾತ್ಸರ್ಯಂ ಕರಣೇಷ್ವೇವ ನ ಜನೇಷು ವಹೇತ್ ಕ್ವಚಿತ್।
ಅಮಾತ್ಸರ್ಯಮಿದಂ ಶೀಲಂ ಪಂಚತ್ರಿಂಶಂ ಸಮೀರಿತಮ್ ॥ ೯೩ ॥

ಮದಂ ಮಾಯಾಜಯೇ ಕುರ್ಯಾನ್ನ ಧರ್ಮೇ ನಾಽಪಿ ಸಂಪದಿ।
ಅಮದಾಖ್ಯಮಿದಂ ಶೀಲಂ ಷಟ್‌ತ್ರಿಂಶಮಿತಿ ಕೀರ್ತಿತಮ್ ॥ ೯೪ ॥

ಗುಣಾಗುಣವಿಮರ್ಶಸ್ಯ ತ್ಯಾಗೋ ಯಸ್ತು ಗುರೌ ಚರೇ।
ಸಪ್ತತ್ರಿಂಶಂ ಸಮಾಖ್ಯಾತಂ ಶೀಲಂ ಪುಣ್ಯಫಲಪ್ರದಮ್ ॥ ೯೫ ॥

ಪ್ರಾಣಿನೋ ಯಸ್ಯ ಕಸ್ಯಾಪಿ ನ ಬಾಧಾಕರಣಂ ಹಿ ತತ್।
ಅಹಿಂಸಾಖ್ಯಮಿದಂ ಶೀಲಮಷ್ಟತ್ರಿಂಶಂ ಸಮೀರಿತಮ್ ॥ ೯೬ ॥

ಪ್ರಾಣಿದುಃಖಸ್ಯ ವೀಕ್ಷಾಯಾಮಕ್ಷಮತ್ವಂ ದಯಾಭಿಧಮ್।
ಶೀಲಂ ಪ್ರಸಿದ್ಧಮೇಕೋನಚತ್ವಾರಿಂಶಂ ಪ್ರಕೀರ್ತಿತಮ್ ॥ ೯೭ ॥

ಕ್ರಿಯಾಯಾಂ ವಚನೇ ವಾಽಪಿ ಯತ್ಪರಸ್ಮಾತ್ ಸ್ವತೋಽಪಿ ವಾ।
ಹ್ರೀರ್ಯಾ ಶೀಲಮಿದಂ ಪ್ರೋಕ್ತಂ ಚತ್ವಾರಿಂಶಂ ತ್ರಿಶೂಲಿನಾ ॥ ೯೮ ॥

ರಿಪೌ ನಿಜಸುತೇ ವಾಽಪಿ ಯದ್ವೈಷಮ್ಯವಿವರ್ಜನಮ್।
ಆರ್ಜವಾಖ್ಯಂ ಶೀಲಮೇಕಚತ್ವಾರಿಂಶಮುದಾಹೃತಮ್ ॥ ೯೯ ॥

ಆಗಮೇ ನಿಗಮೇ ಚೈವ ವಿಶ್ವಾಸೋ ಯದ್ಗುರೂದಿತೇ।
ಶ್ರದ್ಧಾಖ್ಯಂ ಶೀಲಮೇತದ್ ದ್ವಿಚತ್ವಾರಿಂಶಂ ಸಮೀರಿತಮ್ ॥ ೧೦೦ ॥

ಆಪದ್ಯಪಿ ದುರಂತಾಯಾಂ ಧರ್ಮಸ್ಯ ಯದವರ್ಜನಮ್।
ಧೃತ್ಯಾಖ್ಯಂ ಶೀಲಮೇತತ್ ತ್ರಿಚತ್ವಾರಿಂಶಂ ಪ್ರಕೀರ್ತಿತಮ್ ॥ ೧೦೧ ॥

ಅದೂಷಣಂ ವೈರಿಜನೇಷ್ವಪಕಾರಪರೇಷ್ವಪಿ।
ಶೀಲಂ ಕ್ಷಮಾಭಿದಂ ಚತುಶ್ಚತ್ವಾರಿಂಶಂ ಸಮೀರಿತಮ್ ॥ ೧೦೨ ॥

ಭೋಗಪ್ರಯುಕ್ತವಾಂಛಾಯಾ ರಾಹಿತ್ಯಂ ಯದ್ಧಿ ಮಾನಸೇ।
ಭೋಗಾಸಕ್ತಿಚ್ಯುತಿಃ ಪಂಚಚತ್ವಾರಿಂಶಂ ಸಮೀರಿತಮ್ ॥ ೧೦೩ ॥

ಕ್ರಿಯಾಯಾಂ ವಚನೇ ವಾಽಪಿ ಪ್ರಮಾದರಹಿತ ಸ್ಥಿತಿಃ।
ಧೀರ್ಯಾ ಶೀಲಂ ತದಿಹ ಷಟ್‌ಚತ್ವಾರಿಂಶಂ ವಿನಿಶ್ಚಿತಮ್ ॥ ೧೦೪ ॥

ಶಿವಾನ್ಯವಸ್ತುವಿಷಯಸಂಕಲ್ಪಪರಿವರ್ಜನಮ್।
ಶೀಲಂ ದಮಾಭಿಧಂ ಸಪ್ತಚತ್ವಾರಿಂಶಂ ಪ್ರಕೀರ್ತಿತಮ್ ॥ ೧೦೫ ॥

ಅನ್ಯೂನಧರ್ಮಾನುಷ್ಠಾನಂ ಪರದ್ರವ್ಯಾಪರಿಗ್ರಹಃ।
ಅಸ್ತೇಯಾಖ್ಯಂ ಶೀಲಮಷ್ಟಾಚತ್ವಾರಿಂಶಮುದಾಹೃತಮ್ ॥ ೧೦೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲಬ್ಧವಸ್ತುವಿಷಯವ್ಯಸನಾಭಾವಸುಸ್ಥಿತಿಃ।
ಸಂತುಷ್ಟಿಶೀಲಮೇಕೋನಪಂಚಾಶತ್ಕಂ ವಿನಿಶ್ಚಿನು ॥ ೧೦೭ ॥

ಪಾರಮೇಶ್ವರಯೋರ್ನಿತ್ಯಂ ಸ್ಮರಣಂ ನಾಮ ರೂಪಯೋಃ।
ಜೀವನ್ಮುಕ್ತಿಪ್ರದಂ ಶೀಲಂ ಪಂಚಾಶತ್ಕಂ ಸಮೀರಿತಮ್ ॥ ೧೦೮ ॥

ಶಂಭುನಾಮಗುಣಾದೀನಾಂ ಚಿಂತನಂ ಯದಾನಾರತಮ್।
ಶೀಲಂ ಪಾಶಹರಂ ತ್ವೇಕಪಂಚಾಶತ್ಕಂ ಪ್ರಕೀರ್ತಿತಮ್ ॥ ೧೦೯ ॥

ಭಾವ್ಯಮಾನಂ ಸದಾ ಶಂಭೋಃ ಪಾದಸಂವಾಹನಾದಿಕಮ್।
ಪಾದಸೇವನಮೇತದ್ ದ್ವಿಪಂಚಾಶತ್ಕಮುದಾಹೃತಮ್ ॥ ೧೧೦ ॥

ಅರ್ಚನಂ ಮಾನಸಂ ಯತ್ ಸ್ಯಾಚ್ಛಂಭೋರಾವಾಹನಾದಿನಾ।
ಶೀಲ ತ್ವಿದಂ ಗೀಯತೇ ತ್ರಿಪಂಚಾಶತ್ಕಮುದಾಹೃತಮ್ ॥ ೧೧೧ ॥

ಶಂಭುಪಾದಾಬ್ಜಯೋರ್ನಿತ್ಯಂ ಪ್ರಣಾಮೋ ಮಾನಸೋ ಹಿ ಯತ್।
ಶೀಲಮೇತತ್ ಕಿಲ ಚತುಃಪಂಚಾಶಂ ಸಂಪ್ರಕೀರ್ತಿತಮ್ ॥ ೧೧೨ ॥

ಕೈಂಕರ್ಯಕರಣಂ ಶಂಭೋರ್ಮನಸಾ ಸರ್ವದಾ ಹಿ ಯತ್।
ದಾಸ್ಯಂ ಶೀಲಮಿದಂ ಪಂಚಪಂಚಾಶಮಿತಿ ಭಾಷಿತಮ್ ॥ ೧೧೩ ॥

ಶಂಭೋಃ ಕಲ್ಯಾಣರೂಪಸ್ಯ ಸಖಿತಾಭಾವನಂ ಹಿ ಯತ್।
ಸಖ್ಯಾಖ್ಯಂ ಶೀಲಮೇತತ್ ಷಟ್‌ಪಂಚಾಶಮಿತಿ ನಿಶ್ಚಿತಮ್ ॥ ೧೧೪ ॥

ಬಂಧಮೋಚನಭಾರಸ್ಯ ಕೃತ್ಸ್ನಸ್ಯೇಶೇ ಸಮರ್ಪಣಮ್।
ಆತ್ಮಾರ್ಪಣಮಿದಂ ಸಪ್ತಪಂಚಾಶಂ ಸಂಪ್ರಚೋದಿತಮ್ ॥ ೧೧೫ ॥

ಯಜ್ಜಪೋ ಮೂಲಮಂತ್ರಸ್ಯ ಮನಸಾ ಕ್ರಿಯತೇ ಸದಾ ।
ಶೀಲಮೇತತ್ ಸೇವ್ಯಮಷ್ಟಪಂಚಾಶಮವಧಾರಿತಮ್ ॥ ೧೧೬ ॥

ಶಂಭೋರ್ಯದ್ ದಿವ್ಯರೂಪಾನುಸಂಧಾನಂ ಕ್ರಿಯತೇ ಹೃದಿ।
ಧ್ಯಾನಾಖ್ಯಂ ಶೀಲಮೇಕೋನಷಷ್ಟಿಕಂ ಪರಿಕೀರ್ತಿತಮ್ ॥ ೧೧೭ ॥

ಧ್ರಿಯತೇ ತೈಲಧಾರಾವದವಿಚ್ಛಿನ್ನಂ ತದೇವ ಯತ್।
ಧಾರಣಾಖ್ಯಂ ಶೀಲಮಿದಂ ಷಷ್ಟಿಕಂ ಸಮುದಾಹೃತಮ್ ॥ ೧೧೮ ॥

ನಿವಾತದೀಪವದ್ ಧ್ಯಾನೇ ಚೇತಸೋ ಯದವಸ್ಥಿತಿಃ।
ಸಮಾಧ್ಯಾಖ್ಯಂ ಶೀಲಮೇಕಷಷ್ಟಿಕಂ ಸಂಪ್ರಚೋದಿತಮ್ ॥ ೧೧೯ ॥

ಸೋಽಹಂ ಭಾವೇನ ವಿಶ್ವೇಶಂ ಧ್ಯಾಯನ್ ಕೃತ್ಯಾನಿ ಸರ್ವತಃ।
ತದಿಂದ್ರಿಯಮುಖೇನೈವ ಕ್ರಿಯಮಾಣಾನಿ ಭಾವಯನ್ ॥
ಯದಾಚರತಿ ತಚ್ಛೀಲಂ ದ್ವಿಷಷ್ಟಿಕಮುದಾಹೃತಮ್ ॥ ೧೨೦ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಪರಿಚ್ಛಿನ್ನರೂಪಾನುಸಂಧಾನಂ ಯನ್ಮಹೇಶಿತುಃ।
ಶೀಲಮುಕ್ತಂ ಸುರಾಚಾರ್ಯ ತ್ರಿಷಷ್ಟಿಕಮುದಾಹೃತಮ್ ॥ ೧೨೧ ॥

ಅನಂತರೂಪಂ ದೇವಸ್ಯ ಭಾವಯನ್ನಿಜರೂಪತಃ।
ಶಿವಾನಂದವಶಾದ್ವಿಶ್ವಮಾತ್ಮಾನಂ ವಿಸ್ಮರನ್ನಪಿ॥
ಯಸ್ತಿಷ್ಠತ್ಯಚಲಃ ಶೀಲಂ ಚತುಃಷಷ್ಟಿಕಮೀರಿತಮ್ ॥ ೧೨೨ ॥

ಯಶ್ಚತುಃಷಷ್ಟಿಶೀಲಾಢ್ಯಃ ಶಿವ ಏವ ನ ಚಾಪರಃ।
ಏತದಭ್ಯಾಸಯೋಗೇನ ಶಿವಸಾಯುಜ್ಯಮಶ್ನುತೇ॥
ಗಣಾಚಾರ ಇತಿ ಪ್ರೋಕ್ತೋ ಭೃತ್ಯಾಚಾರಮತಃ ಶೃಣು ॥ ೧೨೩ ॥

ಮೂವತ್ತೈದು ವಿಧವಾದ ಮಾನಸಿಕ ಶೀಲ

ನಿಷಿದ್ಧವಾದ ಭೋಗಗಳ ವಿಷಯದಲ್ಲಿ ತನ್ನ ಸಂಕಲ್ಪವನ್ನು ಬಿಡುವುದು ಈಶ್ವರನು ಹೇಳಿದ ಬ್ರಹ್ಮಚರ್ಯವೆಂಬ ಮೂವತ್ತನೆಯ ಶೀಲ. (೮೮). ಶಿವಭಕ್ತಿಯನ್ನೇ ಕಾಮನೆ ಮಾಡಬೇಕು, ವಿಷಯಗಳಲ್ಲಿ ಯಾವಾಗಲೂ ಅಲ್ಲ, ಎಂಬುದು ನಿಷ್ಕಾಮತ್ವವೆಂಬ ಮೂವತ್ತೊಂದನೆಯ ಶೀಲವೆಂದು ವರ್ಣಿಸಲಾಗಿದೆ. (೮೯). ಅಧರ್ಮದ ವಿಷಯದಲ್ಲಿ ಕೋಪ, ವೈರಿಗಳ ವಿಷಯದಲ್ಲಿ ಅಲ್ಲ ಎಂಬುದು ಮುಕ್ತಿಗೆ ಸಾಧನವಾದ ಅಕ್ರೋಧವೆಂಬ ಮೂವತ್ತೆರಡನೆಯ ಶೀಲ. (೯೦). ಶಿವನ ಆರಾಧನೆಯ ವಿಷಯದಲ್ಲಿ ಲೋಭ, ಧನಾದಿಗಳ ವಿಷಯದಲ್ಲಿ ಅಲ್ಲವೆಂಬುದು ಅಲೋಭವೆಂಬ ಹೆಸರಿನಿಂದ ಕರೆಯಲ್ಪಡುವ ಮೂವತ್ತೂರನೆಯ ಶೀಲವೆಂದು ಹೇಳಲ್ಪಟ್ಟಿದೆ. (೯೧). ಭಕ್ತ ಜನರ ವಿಷಯದಲ್ಲಿ ಮೋಹ, ಸತಿ-ಸುತರ ವಿಷಯದಲ್ಲಿ ಅಲ್ಲ ಎಂಬುದು ಅಮೋಹವೆಂದು ಕರೆಯಲ್ಪಡುವ ಮೂವತ್ನಾಲ್ಕನೆಯ ಶೀಲವೆಂದು ವರ್ಣಿತವಾಗಿದೆ. (೯೨). ತನ್ನ ಇಂದ್ರಿಯಗಳ ವಿಷಯದಲ್ಲಿ ಮತ್ಸರ ಭಾವ, ಜನರ ವಿಷಯದಲ್ಲಿ ಎಲ್ಲಿಯೂ ಇಟ್ಟುಕೊಳ್ಳಬಾರದು ಎಂಬುದು ಅಮಾತ್ಸರ್ಯವೆಂಬ ಮೂವತ್ತೈದನೆಯ ಶೀಲವೆಂದು ಹೇಳಲಾಗಿದೆ. (೯೩). ಮಾಯೆಯನ್ನು ಗೆದ್ದ ವಿಷಯದಲ್ಲಿ ಮದವನ್ನು ಹೊಂದಬೇಕೇ ಹೊರತು ಧರ್ಮದಲ್ಲಲ್ಲ ಅಥವಾ ಸಂಪತ್ತಿನಲ್ಲಲ್ಲ ಎಂಬುದು ಅಮದವೆಂದು ಕರೆಯಲ್ಪಡುವ ಮೂವತ್ತಾರನೆಯ ಶೀಲವೆಂದು ಹೇಳಲ್ಪಟ್ಟಿದೆ. (೯೪). ಗುರುವಿನ ಮತ್ತು ಜಂಗಮನ ವಿಷಯದಲ್ಲಿ ಗುಣದೋಷಗಳ ವಿಮರ್ಶೆಯನ್ನು ಬಿಡುವುದು ಪುಣ್ಯಪ್ರದವಾದ ಮೂವತ್ತೇಳನೆಯ ಶೀಲವೆಂದು ಹೇಳಲ್ಪಟ್ಟಿದೆ. (೯೫). ಯಾವುದೇ ಪ್ರಾಣಿಗಳಿಗೆ ಯಾವುದೇ ರೀತಿಯಲ್ಲಿ ನೋವನ್ನುಂಟು ಮಾಡದೆ ಇರುವುದು ಅಹಿಂಸೆಯೆಂದು ಕರೆಯಲ್ಪಡುವ ಮೂವತ್ತೆಂಟನೆಯ ಶೀಲವೆಂದು ಹೇಳಲಾಗಿದೆ. (೯೬). ಪ್ರಾಣಿಗಳ ದುಃಖವನ್ನು ಕಂಡು ಸಹಿಸದೇ ಇರುವುದು ದಯಾ ಎಂದು ಕರೆಯಲಾಗುವ ಪ್ರಸಿದ್ಧವಾದ ಮೂವತ್ತೊಂಬತ್ತನೆಯ ಶೀಲವೆಂದು ಪ್ರಶಂಸಿಸಲ್ಪಟ್ಟಿದೆ. (೯೭). ಕ್ರಿಯೆಯಲ್ಲಾಗಲಿ ಮಾತಿನಲ್ಲಾಗಲಿ ಬೇರೆಯವರಿಗೆ ಅಥವಾ ತನಗೇ ಸಂಕೋಚವಾಗುವಂತಿದ್ದರೆ ಅದನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಿಡುವುದು ತ್ರಿಶೂಲಧಾರಿ ಶಿವನಿಂದ ಹೇಳಲ್ಪಟ್ಟ ನಲವತ್ತನೆಯ ಶೀಲವೆಂದು ಹೇಳಲಾಗಿದೆ. (೯೮). ವೈರಿಯ ಅಥವಾ ಸ್ವಂತ ಮಗನ ವಿಷಯದಲ್ಲಿ ದ್ವೇಷವನ್ನು ಇಟ್ಟುಕೊಳ್ಳದಿರುವುದು ಆರ್ಜವವೆಂದು ಕರೆಯಲಾಗುವ ನಲವತ್ತೊಂದನೆಯ ಶೀಲವೆಂದು ಉಲ್ಲೇಖಿಸಲ್ಪಟ್ಟಿದೆ. (೯೯). ಆಗಮದ ವಿಷಯದಲ್ಲಾಗಲಿ, ವೇದದ ವಿಷಯದಲ್ಲಾಗಲಿ, ಗುರುವು ಹೇಳಿದ್ದರಲ್ಲಾಗಲಿ ವಿಶ್ವಾಸವಿಡುವುದು ಶ್ರದ್ಧಾ ಎಂದು ಕರೆಯಲ್ಪಡುವ ನಲವತ್ತೆರಡನೆಯ ಶೀಲವೆಂದು ಹೇಳಲ್ಪಟ್ಟಿದೆ. (೧೦೦). ಆಪತ್ತಿನಲ್ಲಾಗಲಿ, ದುರಂತದಲ್ಲಿಯಾಗಲಿ ಧರ್ಮವನ್ನು ಬಿಡದಿರುವುದು ಧೃತಿಯೆಂದು ಕರೆಯಲ್ಪಡುವ ನಲವತ್ತೂರನೆಯ ಶೀಲವೆಂದು ಕರೆಯಲ್ಪಟ್ಟಿದೆ. (೧೦೧). ವೈರಿ ಜನರ ವಿಷಯದಲ್ಲಿ ಅಥವಾ ಅಪಕಾರ ಮಾಡಿದವರ ವಿಷಯದಲ್ಲಿ ದೂಷಣೆಯನ್ನು ಮಾಡದಿರುವುದು ಕ್ಷಮಾ ಎಂದು ಕರೆಯಲ್ಪಡುವ ನಲವತ್ನಾಲ್ಕನೆಯ ಶೀಲವೆಂದು ಹೇಳಲ್ಪಟ್ಟಿದೆ. (೧೦೨). ಭೋಗಕ್ಕೆ ಸಂಬಂಧಿಸಿದಂತೆ ಮನಸ್ಸಿನಲ್ಲಿ ಬಯಕೆಯಿಲ್ಲದಿರುವುದು ಭೋಗಾಸಕ್ತಿಚ್ಯುತಿಯೆಂಬ ನಲವತ್ತೈದನೆಯ ಶೀಲವೆಂದು ಹೇಳಲ್ಪಟ್ಟಿದೆ. (೧೦೩). ಕ್ರಿಯೆಯಲ್ಲಾಗಲಿ, ಮಾತಿನಲ್ಲಾಗಲಿ ತಪ್ಪು ಮಾಡದಿರುವ ಸ್ಥಿತಿಯ ನಿಶ್ಚಯ ಬುದ್ಧಿಯು ನಲವತ್ತಾರನೆಯ ಶೀಲವೆಂದು ನಿಶ್ಚಿತವಾಗಿದೆ. (೧೦೪). ಶಿವನನ್ನು ಬಿಟ್ಟು ಬೇರೆ ವಿಷಯದ ಸಂಕಲ್ಪವನ್ನು ಬಿಡುವುದು ದಮವೆಂದು ಕರೆಯಲ್ಪಡುವ ನಲವತ್ತೇಳನೆಯ ಶೀಲವೆಂದು ಹೇಳಲ್ಪಟ್ಟಿದೆ. (೧೦೫). ಧರ್ಮವನ್ನು ಅರೆಕೊರೆಯಾಗಿ ಮಾಡದಿರುವುದು ಮತ್ತು ಪರದ್ರವ್ಯವನ್ನು ತೆಗೆದುಕೊಳ್ಳದಿರುವುದು ಅಸ್ತೇಯವೆಂದು ಕರೆಯಲಾಗುವ ನಲವತ್ತೆಂಟನೆಯ ಶೀಲವೆಂದು ಹೇಳಲಾಗಿದೆ. (೧೦೬). ಯಾವುದೇ ದೊರೆಯದ ವಸ್ತುವಿನ ಬಗ್ಗೆ ವ್ಯಸನವನ್ನು ಇಟ್ಟುಕೊಳ್ಳದಿರುವ ಉತ್ತಮ ಸ್ಥಿತಿಯು ಸಂತುಷ್ಟಿಯೆಂಬ ನಲವತ್ತೊಂಬತ್ತನೆಯ ಶೀಲವೆಂದು ನಿಶ್ಚಯಿಸು. (೧೦೭). ಪರಮೇಶ್ವರನ ನಾಮ ಮತ್ತು ರೂಪಗಳನ್ನು ನಿತ್ಯವೂ ಸ್ಮರಿಸುವುದು ಜೀವನ್ಮುಕ್ತಿಯನ್ನು ಕೊಡುವ ಐವತ್ತನೆಯ ಶೀಲವೆಂದು ಹೇಳಲ್ಪಟ್ಟಿದೆ. (೧೦೮). ಶಂಭುವಿನ ಹೆಸರು, ಗುಣ ಮುಂತಾದವುಗಳನ್ನು ಎಡೆಬಿಡದೆ ಚಿಂತನೆ ಮಾಡುವುದು ಸಂಸಾರ ಬಂಧನಗಳನ್ನು ಪರಿಹರಿಸುವ ಐವತ್ತೊಂದನೆಯ ಶೀಲವೆಂದು ವರ್ಣಿಸಲ್ಪಟ್ಟಿದೆ. (೧೦೯). ಯಾವಾಗಲೂ ಶಂಭುವಿನ ಪಾದಗಳನ್ನು ಒತ್ತುವುದು (ಸಂವಾಹನ) ಮುಂತಾದವುಗಳನ್ನು ಭಾವಿಸಿಕೊಳ್ಳುವುದು ಪಾದಸೇವನವೆಂಬ ಐವತ್ತೆರಡನೆಯ ಶೀಲವೆಂದು ಉಲ್ಲೇಖಿಸಲ್ಪಟ್ಟಿದೆ. (೧೧೦). ದೇವಗುರುವೆ, ಆವಾಹನ ಮುಂತಾದವುಗಳಿಂದ ಶಂಭುವಿನ ಮಾನಸ ಪೂಜೆಯು ಐವತ್ತೂರನೆಯ ಶೀಲವೆಂದು ಹೇಳಲಾಗಿದೆ. (೧೧೧). ಶಂಭುವಿನ ಪಾದಪದ್ಮಗಳಿಗೆ ನಿತ್ಯವೂ ಮಾಡುವ ಮಾನಸಿಕ ನಮಸ್ಕಾರವು ಐವತ್ನಾಲ್ಕನೆಯ ಶೀಲವೆಂದು ಪರಿಗಣಿಸಲ್ಪಟ್ಟಿದೆ. (೧೧೨). ಯಾವಾಗಲೂ ಶಂಭುವಿನ ಕೈಂಕರ್ಯವನ್ನು (ದಾಸತ್ವವನ್ನು) ಮನಸಾ ಮಾಡುವುದು ದಾಸ್ಯವೆಂಬ ಐವತ್ತೈದನೆಯ ಶೀಲವೆಂದು ಹೇಳಲ್ಪಟ್ಟಿದೆ. (೧೧೩). ಮಂಗಲ ಸ್ವರೂಪನಾದ ಶಂಭುವಿನ ವಿಷಯದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೆಳೆತನದ ಭಾವನೆಯು ಸಖ್ಯವೆಂದು ಕರೆಯಲಾಗುವ ಐವತ್ತಾರನೆಯ ಶೀಲವೆಂದು ನಿಶ್ಚಿತವಾಗಿದೆ. (೧೧೪). ಬಂಧ-ಮೋಕ್ಷಗಳ ಸರ್ವ ಭಾರವನ್ನು ಸಂಪೂರ್ಣವಾಗಿ ಈಶ್ವರನಿಗೆ ಸಮರ್ಪಿಸುವುದು ಆತ್ಮಾರ್ಪಣವೆಂಬ ಐವತ್ತೇಳನೆಯ ಶೀಲವೆಂದು ಸೂಚಿಸಲಾಗಿದೆ. (೧೧೫). ಸದಾ ಮೂಲಮಂತ್ರದ ಯಾವ ಮಾನಸಿಕ ಜಪವಿದೆಯೋ ಅದು ಐವತ್ತೆಂಟನೆಯ ಶೀಲವೆಂದು ಅಂಗೀಕೃತವಾಗಿದೆ. (೧೧೬). ಶಂಭುವಿನ ದಿವ್ಯ ರೂಪದ ಅನುಸಂಧಾನವನ್ನು ಮಾಡುವುದು ಧ್ಯಾನವೆಂದು ಕರೆಯಲಾಗುವ ಐವತ್ತೊಂಬತ್ತನೆಯ ಶೀಲವೆಂದು ವರ್ಣಿತವಾಗಿದೆ. (೧೧೭). ಆದನ್ನೇ (ಶಂಭುವಿನ ದಿವ್ಯರೂಪಾನು ಸಂಧಾನವನ್ನೇ) ಎಣ್ಣೆಯ ಧಾರೆಯಂತೆ ಅವಿಚ್ಛಿನ್ನವಾಗಿ ಹೃದಯದಲ್ಲಿ ಇರಿಸಿಕೊಳ್ಳುವುದು ಧಾರಣವೆಂದು ಕರೆಯಲಾಗುವ ಅರವತ್ತನೆಯ ಶೀಲವೆಂದು ಉಲ್ಲೇಖಿಸಲ್ಪಟ್ಟಿದೆ. (೧೧೮). ಗಾಳಿಯಿಲ್ಲದ ದೀಪದಂತೆ ಧ್ಯಾನದಲ್ಲಿ ಚಿತ್ತದ ಯಾವ ನಿಶ್ಚಲ ಸ್ಥಿತಿಯಿದೆಯೋ ಅದೇ ಸಮಾಧಿಯೆಂಬ ಹೆಸರುಳ್ಳ ಅರವತ್ತೊಂದನೆಯ ಶೀಲವೆಂದು ಸೂಚಿಸಲಾಗಿದೆ. (೧೧೯). ಶಿವೋಽಹಂ ಭಾವದಿಂದ ವಿಶ್ವೇಶ್ವರನನ್ನು ಧ್ಯಾನಿಸುತ್ತಾ ತನ್ನೆಲ್ಲಾ ಕ್ರಿಯೆಗಳು ಭಗವಂತನ ಇಂದ್ರಿಯಗಳ ಮೂಲಕ ನಡೆಯುತ್ತಿರುವಂತೆ ಭಾವಿಸುತ್ತಾ ಆಚರಿಸುವುದು ಅರವತ್ತೆರಡನೆಯ ಶೀಲವೆಂದು ಹೇಳಲಾಗಿದೆ. (೧೨೦). ದೇವಗುರುವೇ, ಮಹೇಶ್ವರನ ನಿರಂತರವಾದ ರೂಪಾನುಸಂಧಾನವು ಅರವತ್ಮೂರನೆಯ ಶೀಲವೆಂದು ಹೇಳಲ್ಪಟ್ಟಿದೆ. (೧೨೧). ಪರಮಾತ್ಮನ ಅನಂತ ರೂಪಗಳನ್ನು ತನ್ನ ರೂಪಗಳಂತೆ ಭಾವಿಸಿ ಶಿವಾನಂದದ ಕಾರಣದಿಂದ ತನ್ನನ್ನು ತಾನು ಮರೆತರೂ ಕೂಡ ಅಚಲವಾಗಿ ನಿಲ್ಲುವುದು ಅರವತ್ನಾಲ್ಕನೆಯ ಶೀಲವೆಂದು ಹೇಳಲಾಗಿದೆ. (೧೨೨). ಅರವತ್ನಾಲ್ಕು ಶೀಲಗಳಿಂದ ಸಂಪನ್ನನಾದವನು ಶಿವನಲ್ಲದೆ ಬೇರೆ ಯಾರೂ ಅಲ್ಲ. ಅವನು ಅವುಗಳ ಅಭ್ಯಾಸ ಯೋಗದಿಂದ ಶಿವಸಾಯುಜ್ಯವನ್ನು ಹೊಂದುವನು. ಹೀಗೆ ಗಣಾಚಾರವನ್ನು ಹೇಳಿದ್ದಾಯಿತು. ಇನ್ನು ಭೃತ್ಯಾಚಾರವನ್ನು ಕುರಿತು ಕೇಳು. (೧೨೩).

೫. ಭೃತ್ಯಾಚಾರಃ

ಭೃತ್ಯತ್ವಂ ವೀರಭೃತ್ಯತ್ವಂ ಭೃತ್ಯಾಚಾರೋ ದ್ವಿಧಾ ಮತಃ।
ಗುರುಲಿಂಗಜಂಗಮಾನಾಂ ಕೈಂಕರ್ಯಾಚರಣಂ ಹಿ ಯತ್॥
ಭೃತ್ಯತ್ವಮಿತಿ ನಿರ್ದಿಷ್ಟಂ ದೇವದೇವೇನ ಶಂಭುನಾ ॥ ೧೨೪ ॥

ದೇಶಿಕಾಯ ತನುಂ ಚಿತ್ತಂ ಶಂಭವೇ ಚ ಧನಂ ತಥಾ।
ಜಂಗಮಾಯ ಸಮರ್ಪ್ಯೈವಂ ಮಹೋತ್ಸಾಹಸಮನ್ವಿತಃ ॥ ೧೨೫ ॥

ಮುಕ್ತಿಮೇವ ಪರಾಂ ಕಾಂಕ್ಷಮಾಣೋ ಯದವತಿಷ್ಠತೇ।
ತನ್ಮತಂ ವೀರಭೃತ್ಯತ್ವಂ ಶಿವಾನುಗ್ರಹಸಾಧನಮ್ ॥ ೧೨೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇತ್ಯೇವಂ ಕಥಿತಂ ತುಭ್ಯಂ ಪಂಚಾಚಾರವಿನಿರ್ಣಯಃ।
ನಿಗಮಾಗಮಸಾರೋಽಯಂ ಮುಕ್ತಿಪ್ರಾಪ್ತ್ಯೇಕಸಾಧನಃ ॥ ೧೨೭ ॥

ನಾಶಿಷ್ಯಾಯೋಪದೇಷ್ಟವ್ಯೋ ನಾಭಕ್ತಾಯ ಕದಾಚನ।
ನಾಪುತ್ರಾಯ ಚ ವಕ್ತವ್ಯೋ ನ ಶ್ರದ್ಧಾರಹಿತಾಯ ಚ ।
ಗೋಪನೀಯಃ ಪ್ರಯತ್ನೇನ ಕಿಮತಃ ಶ್ರೋತುಮಿಚ್ಛಸಿ ॥ ೧೨೮ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರಬೃಹಸ್ಪತಿ-ಸಂವಾದೇ ಶಿವಶಾಸನೇ ಕ್ರಿಯಾಪಾದೇ ಪಂಚಾಚಾರಸ್ವರೂಪ-ನಿರೂಪಣಂ ನಾಮ ನವಮಃ ಪಟಲಃ ॥ ೯ ॥

೫. ಭೃತ್ಯಾಚಾರ

ಭೃತ್ಯತ್ವ ಮತ್ತು ವೀರಭೃತ್ಯತ್ವವೆಂದು ಭೃತ್ಯಾಚಾರವು ಎರಡು ವಿಧ. ಗುರು, ಲಿಂಗ ಮತ್ತು ಜಂಗಮರ ಕೈಂಕರ್ಯವನ್ನು ಆಚರಿಸುವುದು ಭೃತ್ಯತ್ವವೆಂದು ದೇವ ದೇವನಾದ ಶಂಭುವಿನಿಂದ ನಿರ್ದೇಶಿಸಲ್ಪಟ್ಟಿದೆ. (೧೨೪). ಗುರುವಿಗೆ ಶರೀರವನ್ನು, ಲಿಂಗಕ್ಕೆ ಚಿತ್ತವನ್ನು ಮತ್ತು ಜಂಗಮನಿಗೆ ಧನವನ್ನು ಸಮರ್ಪಿಸಿ ಅತ್ಯಂತ ಉತ್ಸಾಹ ಶಾಲಿಯಾಗಿರುವವನು ಮತ್ತು ಪರಮ ಮುಕ್ತಿಯನ್ನು ಪಡೆಯುವ ಇಚ್ಛೆಯಿಂದ ಶರೀರ ಧಾರಣೆಯನ್ನು ಮಾಡಿಕೊಂಡಿರುವವನು ವೀರಭೃತ್ಯತ್ವವನ್ನು ಹೊಂದಿದವನು. ಇದು ಶಿವನ ಅನುಗ್ರಹಕ್ಕೆ ಸಾಧನವಾಗುತ್ತದೆ. (೧೨೫-೧೨೬). ಹೀಗೆ ನಿನಗೆ ವೇದ ಮತ್ತು ಆಗಮಗಳ ಸಾರವಾದ, ಮುಕ್ತಿ ಪ್ರಾಪ್ತಿಗೆ ಏಕಮಾತ್ರ ಸಾಧನವಾದ ಪಂಚಾಚಾರದ ನಿರ್ಣೀತವಾದ ಸ್ವರೂಪವನ್ನು ಹೇಳಿದ್ದೇನೆ. (೧೨೭). ಇದನ್ನು ಶಿಷ್ಯನಲ್ಲದವನಿಗೆ, ಭಕ್ತನಲ್ಲದವನಿಗೆ, ಪುತ್ರನಲ್ಲದವನಿಗೆ, ಶ್ರದ್ಧಾರಹಿತನಿಗೆ ಉಪದೇಶಿಸಬಾರದು. ಇದನ್ನು ಪ್ರಯತ್ನ ಪೂರ್ವಕವಾಗಿ ಗುಪ್ತವಾಗಿಟ್ಟಿರಬೇಕು. ಮತ್ತೇನನ್ನು ಕೇಳಲಿಚ್ಛಿಸುವೆ? (೧೨೮).

ಇಲ್ಲಿಗೆ ಶ್ರೀ ಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ ಅನಂತರುದ್ರ-ಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಕ್ರಿಯಾಪಾದದಲ್ಲಿ ಪಂಚಾಚಾರ ಸ್ವರೂಪನಿರೂಪಣವೆಂಬ ನವಮ ಪಟಲವು ಮುಗಿಯಿತು. (೯).

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಶಮಃ ಪಟಲಃ

॥ ಶೈವಭೇದಃ ॥

ಬೃಹಸ್ಪತಿರುವಾಚ

ಸರ್ವಭದ್ರಗುಣೋಪೇತ ಕಾದ್ರವೇಯಪುರಸ್ಕೃತ।
ಜಗದುದ್ಧರಣೋನ್ನಿದ್ರಾನಂತರುದ್ರ ನಮೋಽಸ್ತು ತೇ ॥ ೧ ॥

ಆಗಮೇಷು ನಿಗದ್ಯಂತೇ ಶೈವಭೇದಾಸ್ತ್ವನೇಕಧಾ।
ಚತ್ವಾರಃ ಕ್ವಚಿದುಚ್ಯಂತೇ ತಥಾ ಸಪ್ತೇತಿ ಹಿ ಕ್ವಚಿತ್ ॥ ೨ ॥

ದಶೇತಿ ಚ ಕ್ವಚಿತ್ ಪ್ರೋಕ್ತಾಃ ಕಥ್ಯಂತೇ ಕ್ವಚಿದನ್ಯಥಾ।
ಸಂಗೃಹ್ಯ ತಾನಿಹ ಬ್ರೂಹಿ ಪರಿಷ್ಕಾರಮಸಂಶಯಮ್ ॥ ೩ ॥

ಬೃಹಸ್ಪತಿಯು ಹೇಳಿದನು

ಎಲ್ಲಾ ಕಲ್ಯಾಣ ಕರವಾದ ಗುಣಗಳುಳ್ಳ, ಸರ್ಪದಿಂದ ಭೂಷಿತನಾದ, ಜಗತ್ತಿನ ಉದ್ಧಾರಕ್ಕಾಗಿ ಸದಾ ಜಾಗ್ರತನಾದ ಅನಂತರುದ್ರನೇ, ನಿನಗೆ ನಮಸ್ಕಾರ. (೧). ಆಗಮಗಳಲ್ಲಿ ಶೈವ ಭೇದಗಳನ್ನು ನಾನಾ ಪ್ರಕಾರವಾಗಿ ಹೇಳುತ್ತಾರೆ. ಕೆಲವು ಕಡೆ ನಾಲ್ಕೆಂದೂ ಹೇಳುತ್ತಾರೆ, ಮತ್ತೆ ಏಳೆಂದೂ, ಕೆಲವೆಡೆ ಹತ್ತೆಂದು ಹೇಳುತ್ತಾರೆ. ಮತ್ತೆ ಕೆಲವೆಡೆ ಬೇರೆ ರೀತಿಯಲ್ಲಿ ಹೇಳುತ್ತಾರೆ. ಅವುಗಳನ್ನು ಸಂಗ್ರಹಿಸಿ ನಿರ್ಣಯಾತ್ಮಕ ವಿಚಾರವನ್ನು ಸಂಶಯವಿರದಂತೆ ನಿರೂಪಿಸು. (೨-೩).

ಟಿಪ್ಪಣಿ : ಸುಪ್ರಭೇದಾಗಮ ಮತ್ತು ವಾತುಲ ಶುದ್ಧಾಗಮಗಳಲ್ಲಿ ಶೈವಭೇದಗಳನ್ನು ನಾಲ್ಕೆಂದು ಹೇಳಿದ್ದಾರೆ (ಸುಪ್ರಭೇದಾಗಮ, ೭ನೇ ಪ್ರಕರಣ, ವಾತುಲ ಶುದ್ಧಾಗಮ, ೧೦ನೆಯ ಪಟಲ). ಸೂಕ್ಷ್ಮಾಗ್ರಮದಲ್ಲಿ ಮೊದಲು ಸಪ್ತಶೈವಗಳನ್ನು ಹೇಳಿದೆ (೭.೪-೧೪). ಅನಂತರ ಆಚಾರ ಭೇದದಿಂದ ನಾಲ್ಕೆಂದು ಹೇಳಲಾಗಿದೆ. (೭.೧೫-೧೬). ಇಲ್ಲಿ ವೀರಶೈವವು ಮೊದಲಿನ ಗುಂಪಿನಲ್ಲಿ ಇಲ್ಲ, ಎರಡನೆಯ ಗುಂಪಿನಲ್ಲಿದೆ. ಪಾರಮೇಶ್ವರಾಗಮದಲ್ಲಿ ಏಳು ಶೈವ ಪ್ರಭೇದಗಳನ್ನು ಹೇಳಿದೆ. (೧.೧೬-೧೭). ಇಲ್ಲಿ ವೀರಶೈವವು ಸಪ್ತ ಶೈವಗಳಲ್ಲಿ ಮೊದಲಿನದಾಗಿ ಬಂದಿದೆ. ವೀರಾಗಮದಲ್ಲಿ (ಶೈವ ಪಟಲ) ಇಪ್ಪತ್ತೆಂಟು ಶೈವಭೇದಗಳನ್ನು ಹೇಳಿದೆ. ಹತ್ತೆಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಳಿದ ವಿಚಾರ ಗಮನಕ್ಕಿನ್ನೂ ಬಂದಿಲ್ಲ. ಪ್ರಸ್ತುತ ಆಗಮದಲ್ಲಿ ವೀರಶೈವವನ್ನು ಸೇರಿಸಿ ಎಂಟು ಶೈವ ಭೇದಗಳು ಬಂದಿವೆ.

ಅನಂತರುದ್ರ ಉವಾಚ

ಅಷ್ಟವಿಧಾಃ ಶೈವಾಃ

ಅಧುನಾ ತೇ ಪ್ರವಕ್ಷ್ಯಾಮಿ ಶೈವಭೇದಮನುತ್ತಮಮ್।
ಅನಾದಿಶೈವಂ ಪ್ರಥಮಮಾದಿಶೈವಂ ದ್ವಿತೀಯಕಮ್॥
ಪೂರ್ವಶೈವಂ ತೃತೀಯಂ ಸ್ಯಾನ್ಮಿಶ್ರಶೈವಂ ಚತುರ್ಥಕಮ್ ॥ ೪ ॥

ಶುದ್ಧಶೈವಂ ಪಂಚಮಂ ಸ್ಯಾತ್ ಷಷ್ಠಂ ವೈ ಮಾರ್ಗಶೈವಕಮ್।
ಸಾಮಾನ್ಯಂ ಸಪ್ತಮಂ ಜ್ಞೇಯಂ ವೀರಶೈವಮಥಾಷ್ಟಮಮ್ ॥ ೫ ॥

ಅನಂತರುದ್ರನು ಹೇಳಿದನು

ಶೈವರು ಎಂಟು ವಿಧ

ಈಗ ನಿನಗೆ ಶ್ರೇಷ್ಠವಾದ ಶೈವ ಭೇದಗಳನ್ನು ಹೇಳುತ್ತೇನೆ. ಮೊದಲಿನದು ಅನಾದಿ ಶೈವ, ಎರಡನೆಯದು ಆದಿಶೈವ, ಮೂರನೆಯದು ಪೂರ್ವಶೈವ, ನಾಲ್ಕನೆಯದು ಮಿಶ್ರಶೈವ, ಐದನೆಯದು ಶುದ್ಧ ಶೈವ, ಆರನೆಯದು ಮಾರ್ಗಶೈವ, ಏಳನೆಯದು ಸಾಮಾನ್ಯ ಶೈವ ಮತ್ತು ಎಂಟನೆಯದು ವೀರಶೈವ. (೪-೫).

ಟಿಪ್ಪಣಿ : ಸೂಕ್ಷ್ಮಾಗ್ರಮದಲ್ಲಿ ವೀರಶೈವವನ್ನು ಬಿಟ್ಟು ಏಳು ಶೈವಗಳ ಹೆಸರುಗಳು ಹೀಗಿವೆ : ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಅವಾಂತರಶೈವ, ಪ್ರವರಶೈವ ಮತ್ತು ಅಂತ್ಯಶೈವ. (೭.೫-೬). ಇದೇ ಆಗಮದಲ್ಲಿ ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ ಮತ್ತು ವೀರಶೈವ ಎಂಬ ಶೈವ ಭೇದಗಳು ಆಚಾರ ಭೇದವನ್ನು ಅವಲಂಬಿಸಿದ ಭೇದಗಳು. (೭.೧೫-೧೬). ಮೊದಲು ಹೇಳಿದ ಏಳು ಜಾತಿಭೇದವನ್ನು ಅವಲಂಬಿಸದ ಭೇದಗಳು. ಪಾರಮೇಶ್ವರಾಗಮದ ಏಳು ಭೇದಗಳಲ್ಲಿ ವೀರಶೈವ, ಅನಾದಿಶೈವ, ಆದಿಶೈವ, ಅನುಶೈವ, ಮಹಾಶೈವ, ಯೋಗಶೈವ ಮತ್ತು ಜ್ಞಾನಶೈವ. (೧.೧೬-೧೭). ಒಟ್ಟಿನಲ್ಲಿ ಅನಾದಿಶೈವ, ಆದಿಶೈವ ಮತ್ತು ವೀರಶೈವ ಇವು ಮೂರು ಸೂಕ್ಷ್ಮಾಗ್ರಮ, ಪಾರಮೇಶ್ವರಾಗಮ ಮತ್ತು ಸೂಕ್ಷ್ಮಾಗ್ರಮಗಳಲ್ಲಿ ಸಮಾನವಾಗಿವೆ. ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ ಮತ್ತು ವೀರಶೈವ ಇವು ಐದು ಸೂಕ್ಷ್ಮಾಗ್ರಮ ಮತ್ತು ಪಾರಮೇಶ್ವರಾಗಮಗಳಲ್ಲಿ ಸಮಾನವಾಗಿವೆ. ಸೂಕ್ಷ್ಮಾಗ್ರಮದ ಅವಾಂತರಶೈವದ ಹೆಸರು ಪಾರಮೇಶ್ವರಾಗಮದಲ್ಲಿ ಅನಂತರ ಕೊಟ್ಟ ಇನ್ನೊಂದು ಪಟ್ಟಿಯಲ್ಲಿ (೧.೨೬ರಲ್ಲಿ) ಬಂದಿದೆ. ಪ್ರವರಶೈವ ಮತ್ತು ಅಂತ್ಯಶೈವ ಎಂಬೆರಡು ಸೂಕ್ಷ್ಮಾಗ್ರಮದಲ್ಲಿ ವಿಶೇಷವಾಗಿ ಬಂದಿವೆ. ಪಾರಮೇಶ್ವರಾಗಮದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯೋಗಶೈವ ಮತ್ತು ಜ್ಞಾನಶೈವಗಳೆಂಬ ಭೇದಗಳು ವಿಶೇಷವಾಗಿ ಬಂದಿವೆ. ಚಂದ್ರಜ್ಞಾನಾಗಮದಲ್ಲಿ ಪೂರ್ವಶೈವ ಮತ್ತು ಮಾರ್ಗಶೈವಗಳು ವಿಶೇಷವಾಗಿ ಬಂದಿವೆ.

೧. ಅನಾದಿಶೈವಲಕ್ಷಣಮ್

ಅಥ ತಲ್ಲಕ್ಷಣಂ ವಕ್ಷ್ಯೇ ಯಥಾವದನುಪೂರ್ವತಃ।
ಅನಾದಿಶೈವಃ ಶಂಭುಃ ಸ್ಯಾದಥ ತಸ್ಯ ಗಣಾ ಅಪಿ ॥

ಅನಾದಿ ಶೈವದ ಲಕ್ಷಣ

ಈಗ ಅವುಗಳ ಲಕ್ಷಣವನ್ನು ಯಥಾವತ್ ಕ್ರಮದಲ್ಲಿ ಹೇಳುತ್ತೇನೆ. ಅನಾದಿ ಶೈವರೆಂದರೆ ಶಿವನು ಮತ್ತು ಅವನ ಗಣಗಳು.

ಟಿಪ್ಪಣಿ : ಸೂಕ್ಷ್ಮಾಗ್ರಮದಲ್ಲಿ ಶಿವನೊಬ್ಬನೇ ಅನಾದಿ ಶೈವ "ಅನಾದಿಶೈವೋ-ಮತ್ತೋऽನ್ಯೋ ನಾಸ್ತಿ ಲೋಕೇಷು ಕಶ್ಚನ।" (೭.೭).

೨. ಆದಿಶೈವಲಕ್ಷಣಮ್

ಆದಿಶೈವಾಸ್ತು ವಿಜ್ಞೇಯಾಃ ಕೌಶಿಕಾದ್ಯಾ ಮಹರ್ಷಯಃ ॥ ೬ ॥
ಕೌಶಿಕಃ ಕಶ್ಯಪಶ್ಚೈವ ಭರದ್ವಾಜಾತ್ರಿಗೌತಮಾಃ।
ಆದಾವೇತೇ ಮಹೇಶಸ್ಯ ಪಂಚವಕ್ತ್ರೇಷು ದೀಕ್ಷಿತಾಃ ॥ ೭ ॥
ಗುರೋರ್ಮುಖಾದ್ದೀಕ್ಷಿತಾ ಹಿ ತದ್ಗೋತ್ರಾಶ್ಚಾನ್ಯಗೋತ್ರಿಣಃ।
ಆಗಮಾಂತೋಕ್ತವಿಧಿನಾ ಶಾಂಭವವ್ರತಸೇವಿನಃ ॥ ೮ ॥
ವೇಧಾಮನುಕ್ರಿಯಾಭಿಖ್ಯದೀಕ್ಷಾತ್ರಯವಿಧಾನತಃ।
ಲಿಂಗತ್ರಯಪರಿಸ್ಫೂರ್ಜದಂಗತ್ರಿತಯಶೋಭಿನಃ॥
ಆದಿಶೈವಾ ಇತಿ ಭುವಿ ನಿಗದ್ಯಂತೇ ಬೃಹಸ್ಪತೇ ॥ ೯ ॥
ಮಹೇಶಸ್ಯ ಪ್ರತಿಷ್ಠಾಯಾಮುತ್ಸವೇ ಸ್ನಪನಾದಿಷು।
ಆಚಾರ್ಯತ್ವೇ ಹ್ಯಧಿಕೃತಾ ಆದಿಶೈವಾ ಜಗನ್ಮತಾಃ ॥ ೧೦ ॥

ಆದಿಶೈವದ ಲಕ್ಷಣ

ಕೌಶಿಕ ಮುಂತಾದ ಮಹರ್ಷಿಗಳನ್ನು ಆದಿಶೈವರೆಂದು ತಿಳಿಯಬೇಕು. (೬). ಕೌಶಿಕ, ಕಶ್ಯಪ, ಭರದ್ವಾಜ, ಅತ್ರಿ ಮತ್ತು ಗೌತಮ ಇವರು ಆದಿಯಲ್ಲಿ ಮಹೇಶ್ವರನ (ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ)ಪಂಚ ಮುಖಗಳಲ್ಲಿಯೇ ದೀಕ್ಷೆಯನ್ನು ಹೊಂದಿದವರು. (೭). ಈ ಐವರ ಗೋತ್ರೋತ್ಪನ್ನರು ಮತ್ತು ಇತರ ಗೋತ್ರದ ವ್ಯಕ್ತಿಗಳು ಆಗಮಗಳ ಉತ್ತರ ಭಾಗದಲ್ಲಿ ಪ್ರತಿಪಾದಿಸಲ್ಪಟ್ಟ ವಿಧಿಯಂತೆ ಗುರುಮುಖದಿಂದ ದೀಕ್ಷಿತರಾಗಿ ಶಾಂಭವ ವ್ರತವನ್ನು ಪಾಲಿಸುವವ-ರಾಗಿದ್ದಾರೆ; ಬೃಹಸ್ಪತಿಯೇ, ವೇಧಾ, ಮನು (ಮಂತ್ರ) ಮತ್ತು ಕ್ರಿಯಾ ಎಂಬ ಮೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಧ ದೀಕ್ಷಾ ವಿಧಾನದಂತೆ (ಇಷ್ಟ, ಪ್ರಾಣ ಮತ್ತು ಭಾವ ಲಿಂಗಗಳೆಂಬ) ಮೂರು ಲಿಂಗಗಳ ಪರಿಸ್ಫೂರ್ತಿಯಿಂದ ಕೂಡಿದ (ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳೆಂಬ) ಮೂರು ಶರೀರಗಳಿಂದ ಶೋಭಿಸುವ ಇವರು ಭೂಮಿಯಲ್ಲಿ ಆದಿಶೈವರೆಂದು ಕರೆಯಲ್ಪಡುತ್ತಾರೆ. (೮-೯). ಜಗತ್ತಿನ ಸ್ತುತಿಗೆ ಪಾತ್ರರಾದ ಈ ಆದಿಶೈವರು ಮಹೇಶ್ವರನ (ಲಿಂಗದ) ಪ್ರತಿಷ್ಠೆ, ಉತ್ಸವ ಮತ್ತು ಸ್ನಾನ ಮಾಡಿಸುವುದು (ಅಭಿಷೇಕ) ಮುಂತಾದ-ವುಗಳಲ್ಲಿ ಆಚಾರ್ಯತ್ವದ ಅಧಿಕಾರವುಳ್ಳವರು. (೧೦).

ಟಿಪ್ಪಣಿ : ಇದಕ್ಕೆ ಸಂವಾದಿಯಾದ ವಿಚಾರಕ್ಕೆ ಸೂಕ್ಷ್ಮಾಗ್ರಮ ೭.೭-೧೧ ನೋಡಿರಿ. ಅಲ್ಲಿ ಇವರನ್ನು ಶಿವದ್ವಿಜರೆಂದು ಕರೆಯಲಾಗಿದೆ. ಈ ಆಗಮದ ಪ್ರಕಾರ ಪೂರ್ವಶೈವರು ಶಿವದ್ವಿಜರು. ಮುಂದಿನ ಶ್ಲೋಕಗಳಲ್ಲಿ ನೋಡಿರಿ.

೩. ಪೂರ್ವಶೈವಲಕ್ಷಣಮ್

ಪೂರ್ವಶೈವಾ ಹಿ ವಿಜ್ಞೇಯಾ ಕಾನೀನಾಸ್ತು ಶಿವದ್ವಿಜಾಃ।
ಅನೂಢಾಸು ಹಿ ಕನ್ಯಾಸು ಪ್ರಭೂತಾಃ ಪಂಚಗೋತ್ರಿಣಃ ॥ ೧೧ ॥

ದೀಕ್ಷಾಣಾಮಿಹ ಶೈವೀನಾಂ ಪೂರ್ವಭಾಗೋದಿತಾತ್ಮನಾಮ್।
ಗ್ರಹಣಾಗ್ರಹಣಾಭ್ಯಾಂ ಚ ದ್ವಿವಿಧಾಸ್ತೇ ಶಿವದ್ವಿಜಾಃ ॥ ೧೨ ॥

ಪೂರ್ವಕಾಂಡೋಕ್ತದೀಕ್ಷಾಭಿಃ ಸಂಸ್ಕೃತಾಸ್ತೇ ಹ್ಯಲಿಂಗಿನಃ।
ಸ್ವಾರ್ಥೇ ಪರಾರ್ಥೇ ಯಜನೇಽಧಿಕೃತಾಸ್ತೇ ಭವಂತಿ ಹಿ ॥ ೧೩ ॥

ಅರ್ಚಕತ್ವೇ ಹಿ ದೇವಸ್ಯ ಕೈಂಕರ್ಯಕರಣೇಽಪಿ ಚ।
ಶಿವಾಗಾರಪರಿಷ್ಕಾರೇಽಧಿಕೃತಾಸ್ತೇ ಸುರಾರ್ಚಿತ ॥ ೧೪ ॥

ನಾಚಾರ್ಯತ್ವೇ ಹ್ಯಧಿಕೃತಿಃ ಪ್ರತಿಷ್ಠಾದಿಷು ಕರ್ಮಸು।
ದೀಕ್ಷಿತಾನಾಮಪಿ ಹ್ಯೇಷಾಂ ಕಾನೀನತ್ವಾದಸಂಶಯಮ್ ॥ ೧೫ ॥

ಅಥ ಯೇಽದೀಕ್ಷಿತಾ ಏವ ಪರಾರ್ಥಯಜನೇ ರತಾಃ।
ತೇ ಹಿ ದೇವಲಕಾಃ ಪ್ರೋಕ್ತಾಃ ಸರ್ವಕರ್ಮವಿಗರ್ಹಿತಾಃ ॥ ೧೬ ॥

ಶಿವಾಗಾರಾದನ್ಯದೇಶೇ ತೇಷಾಂ ಸ್ಪರ್ಶೋಽಪಿ ದೋಷದಃ।
ಶಿವಾರ್ಚಕತ್ವಾದೇತೇಷಾಂ ಶೈವತ್ವಂ ತು ಪರಿಸ್ಫುಟಮ್ ॥ ೧೭ ॥

ಶಿವದೀಕ್ಷಾವಿದೂರತ್ವಾತ್ ಶಿವದ್ರವ್ಯಸ್ಯ ಭಕ್ಷಣಾತ್।
ಶಿವಕೈಂಕರ್ಯವಿಷಯಶ್ರದ್ಧಾಲೋಪಾದಿದೋಷತಃ ॥
ತನ್ಮಲಾ ಇತ್ಯುದೀರ್ಯಂತೇ ಸರ್ವಶಾಸ್ತ್ರೇಷು ಗೀಷ್ಪತೇ ॥ ೧೮ ॥

ಪೂರ್ವಶೈವದ ಲಕ್ಷಣ

ಅವಿವಾಹಿತ ಕನ್ಯೆಯರಲ್ಲಿ ಹುಟ್ಟಿದ (ಕಾನೀನರಾದ) ಪಂಚಗೋತ್ರಗಳ (ಕೌಶಿಕಾದಿ ಗೋತ್ರಗಳ) ಶಿವದ್ವಿಜರನ್ನು ಪೂರ್ವಶೈವರೆಂದು ತಿಳಿಯಬೇಕು. (೧೧). ಶೈವಾಗಮಗಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂರ್ವಭಾಗದಲ್ಲಿ ಹೇಳಿದ ರೀತಿಯ ಶೈವೀ ದೀಕ್ಷೆಗಳನ್ನು ಹೊಂದುವುದು ಮತ್ತು ಹೊಂದದಿರುವುದು ಎಂಬ ಭೇದದಿಂದ ಆ ಶಿವದ್ವಿಜರು ಎರಡು ವಿಧ. (೧೨). ಆಗಮ ಪೂರ್ವಭಾಗದಲ್ಲಿ ಹೇಳಿದ ದೀಕ್ಷೆಗಳಿಂದ ಸಂಸ್ಕಾರವನ್ನು ಹೊಂದಿದ ಅವರು ಅಲಿಂಗಿಗಳು. ಸ್ವಂತಕ್ಕಾಗಿ ಅಥವಾ ಬೇರೆಯವರಿಗಾಗಿ ಯಜ್ಞಕರ್ಮವನ್ನು ಮಾಡುವುದು ಅಥವಾ ಮಾಡಿಸುವುದಕ್ಕೆ ಅವರು ಅಧಿಕಾರವುಳ್ಳವರು. (೧೩). ದೇವಪೂಜಿತನೇ, ಅವರು (ಗುಡಿಗಳಲ್ಲಿ) ದೇವರನ್ನು ಪೂಜಿಸಲು, ಕೈಂಕರ್ಯ ಮಾಡಲು, ಶಿವ-ದೇವಾಲಯಗಳನ್ನು ಶುದ್ಧವಾಗಿಡಲು ಅಧಿಕಾರವುಳ್ಳವರು. (೧೪). ಅವರು ದೀಕ್ಷಿತರಾಗಿದ್ದರೂ ಕಾನೀನರಾದ್ದರಿಂದ ನಿಃಸಂಶಯವಾಗಿ ಪ್ರತಿಷ್ಠೆ ಮುಂತಾದ ಕರ್ಮಗಳಲ್ಲಿ ಆಚಾರ್ಯತ್ವವನ್ನು ವಹಿಸಲು ಅಧಿಕಾರವುಳ್ಳವರಲ್ಲ. (೧೫). ಮತ್ತೆ ಯಾರೂ ದೀಕ್ಷೆಯನ್ನು ಹೊಂದದೆ ಬೇರೆಯವರಿಗಾಗಿ ಯಜ್ಞಮಾಡಿಸುವುದರಲ್ಲಿ ನಿರತ-ರಾಗಿರುವರೋ ಅವರು ಎಲ್ಲಾ ಕರ್ಮಗಳಿಗೆ ಅನರ್ಹರಾದ ದೇವಲಕರೆಂದು ಕರೆಯಲ್ಪಡುವರು. (೧೬). ಶಿವ ದೇವಾಲಯಗಳನ್ನು ಬಿಟ್ಟು ಬೇರೆ ಕಡೆ ಅವರನ್ನು ಮುಟ್ಟುವುದು ದೋಷಪ್ರದ. ಶಿವನನ್ನು ಅರ್ಚನೆ ಮಾಡುವವರಾದ್ದರಿಂದ ಅವರು ಶೈವರೆಂಬುದಂತೂ ಸ್ಪಷ್ಟವಾಗಿದೆ. (೧೭). ಶಿವದೀಕ್ಷೆಯಿಲ್ಲದವರಾದ್ದರಿಂದ, ಶಿವದ್ರವ್ಯವನ್ನು ತಿನ್ನುವವರಾದ್ದರಿಂದ, ಶಿವನ ಕೈಂಕರ್ಯ ಮಾಡುವ ವಿಷಯದಲ್ಲಿ ಶ್ರದ್ಧೆಯ ಲೋಪ ಮುಂತಾದ ದೋಷಗಳಿಂದ ಅವರು ಎಲ್ಲಾ ಶಾಸ್ತ್ರಗಳಲ್ಲಿ ಮಲಿನರೆಂದು ಕರೆಯಲ್ಪಡುತ್ತಾರೆ. (೧೮).

೪. ಮಿಶ್ರಶೈವಲಕ್ಷಣಮ್

ಮಿಶ್ರಶೈವಮಥೋ ವಕ್ಷ್ಯೇ ಸುರಾಚಾರ್ಯ ಸಮಾಶೃಣು।
ಆದಿತ್ಯಮಂಬಿಕಾಂ ವಿಷ್ಣುಂ ಗಣನಾಥಂ ಮಹೇಶ್ವರಮ್ ॥ ೧೯ ॥

ಏಕಪೀಠೇ ಸನ್ನಿವೇಶ್ಯ ಮಿಶ್ರೀಕೃತ್ಯಾರ್ಚಯಂತಿ ಯೇ।
ಮಿಶ್ರಶೈವಾ ಇತಿ ಹಿ ತೇ ಪ್ರೋಚ್ಯಂತೇ ಮಿಶ್ರಪೂಜನಾತ್ ॥ ೨೦ ॥

ನೈತೇಷಾಂ ಶಿವದೀಕ್ಷಾ ಸ್ಯಾನ್ನ ಶಿವಾಧಿಕ್ಯಭಾವನಾ।
ಭಸ್ಮರುದ್ರಾಕ್ಷಧರಣಾಚ್ಛೈವತ್ವಂ ಮಿಶ್ರಪೂಜನಾತ್ ॥
ಮಿಶ್ರತ್ವಂ ವಿದ್ಯತೇ ಯಸ್ಮಾನ್ಮಿಶ್ರಶೈವಾಃ ಪ್ರಕೀರ್ತಿತಾಃ ॥ ೨೧ ॥

ಅಂತಶ್ಶಾಕ್ತಂ ಬಹಿಶ್ಶೈವಂ ಸಭಾಮಧ್ಯೇ ತು ವೈಷ್ಣವಮ್।
ಮಿಶ್ರಿತಂ ದೃಶ್ಯಂತೇ ಯಸ್ಮಾನ್ಮಿಶ್ರಶೈವಾಃ ಪ್ರಕೀರ್ತಿತಾಃ ॥ ೨೨ ॥

ಮಿಶ್ರಶೈವದ ಲಕ್ಷಣ

ಸುರಗುರುವೇ, ಈಗ ಮಿಶ್ರಶೈವವನ್ನು ಕುರಿತು ಹೇಳುತ್ತೇನೆ. ಸರಿಯಾಗಿ ಕೇಳು. ಯಾರು ಆದಿತ್ಯ (ಸೂರ್ಯ), ಅಂಬಿಕೆ, ವಿಷ್ಣು, ಗಣಪತಿ ಮತ್ತು ಶಿವ - ಈ (ಐದು)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವತೆಗಳನ್ನು ಒಂದೇ ಪೀಠದಲ್ಲಿ ಸ್ಥಾಪಿಸಿ ಜೊತೆ ಜೊತೆಗೆ ಪೂಜಿಸುತ್ತಾರೋ ಅವರು ಮಿಶ್ರಪೂಜೆಯ ಕಾರಣದಿಂದ ಮಿಶ್ರಶೈವರೆಂದು ಕರೆಯಲ್ಪಡುತ್ತಾರೆ. (೧೯-೨೦). ಅವರಿಗೆ ಶಿವದೀಕ್ಷೆಯೂ ಇಲ್ಲ, ಶಿವಾಧಿಕ್ಯ ಭಾವನೆಯೂ ಇಲ್ಲ. ಭಸ್ಮ ಮತ್ತು ರುದ್ರಾಕ್ಷಗಳನ್ನು ಧರಿಸುವುದರಿಂದ ಶೈವತ್ವ ಮತ್ತು ಮಿಶ್ರಪೂಜೆಯ ಕಾರಣದಿಂದ ಮಿಶ್ರತ್ವ ಎಂಬ ಕಾರಣದಿಂದ ಅವರು ಮಿಶ್ರಶೈವರೆಂದು ಕರೆಯಲ್ಪಡುವರು. (೨೧). ಆಂತರ್ಯದಲ್ಲಿ ಶಾಕ್ತ, ಬಾಹ್ಯದಲ್ಲಿ ಶೈವ, ಸಭೆಯ ಮಧ್ಯದಲ್ಲಿ ವೈಷ್ಣವ, ಹೀಗೆ ಮಿಶ್ರವಾಗಿ ಕಾಣುವವರಾದ್ದರಿಂದ ಇವರು ಮಿಶ್ರಶೈವರೆಂದು ಹೇಳಲ್ಪಟ್ಟಿದ್ದಾರೆ. (೨೨).

೫. ಶುದ್ಧಶೈವಲಕ್ಷಣಮ್

ಶುದ್ಧಶೈವಮತೋ ವಕ್ಷ್ಯೇ ಪ್ರಸಿದ್ಧಂ ಸುಮನೋರ್ಚಿತ।
ಭಸ್ಮರುದ್ರಾಕ್ಷಧರಣಾತ್ಮಕಪೌರಾಣದೀಕ್ಷಯಾ॥
ದೀಕ್ಷಿತಾಃ ಶಿವಲಿಂಗೈಕಪೂಜಾತತ್ಪರಚೇತಸಃ ॥ ೨೩ ॥

ಶಿವಪಾರಮ್ಯವಿಶ್ವಾಸಾಃ ಶಿವಭಾವಾನುಭಾವಿನಃ।
ಶುದ್ಧಶೈವಾ ಇತಿ ಭುವಿ ನಿಗದ್ಯಂತೇ ಬೃಹಸ್ಪತೇ ॥ ೨೪ ॥

ಶುದ್ಧ ಶೈವದ ಲಕ್ಷಣ

ಶುದ್ಧಶೈವವನ್ನು ಕುರಿತು ಹೇಳುತ್ತೇನೆ. ದೇವತೆಗಳಿಂದ ಪೂಜಿತನೇ, ಬೃಹಸ್ಪತಿಯೇ, ಇದು ಪ್ರಸಿದ್ಧ. ಭಸ್ಮರುದ್ರಾಕ್ಷಧಾರಣೆಯೆಂಬ ಪೌರಾಣಿಕ ದೀಕ್ಷೆಯಿಂದ ದೀಕ್ಷಿತರೂ, ಶಿವಲಿಂಗವನ್ನೇ ಪೂಜಿಸುವುದರಲ್ಲಿ ಮಗ್ನವಾದ ಮನಸ್ಸುಳ್ಳವರೂ, ಶಿವಾಧಿಕ್ಯದಲ್ಲಿ ವಿಶ್ವಾಸವುಳ್ಳವರೂ, ಸದಾ ಶಿವಭಾವವನ್ನೇ ಭಾವನೆ ಮಾಡುವವರೂ ಆದ ಅವರು ಭೂಮಿಯಲ್ಲಿ ಶುದ್ಧಶೈವರೆಂದು ಕರೆಯಲ್ಪಡುತ್ತಾರೆ.

೬. ಮಾರ್ಗಶೈವಲಕ್ಷಣಮ್

ಮಾರ್ಗಶೈವಂ ಪ್ರವಕ್ಷ್ಯಾಮಿ ಮುಕ್ತಿಸನ್ನಿಧಿಮಾರ್ಗಕಮ್।
ವೇದಾಗಮಾಂತಗದಿತದೀಕ್ಷಾತ್ರಯಪರಿಗ್ರಹಃ ॥
ಷಟ್‌ಸ್ಥಲಜ್ಞಾನಸಂಪತ್ತಿಃ ಷಟ್‌ಕಾಲಶಿವಪೂಜನಮ್ ॥ ೨೫ ॥

ಏಕವಿಂಶತಿಸಾಹಸ್ರಯುತಷಟ್ಛತಸಂಖ್ಯಯಾ
ಷಡಕ್ಷರೀಜಪೋ ನಿತ್ಯಂ ಲಿಂಗೈಕ್ಯವಿಭಾವನಮ್॥
ಧರ್ಮೋಽಯಂ ಮಾರ್ಗಶೈವಾನಾಮೀಶ್ವರೇಣ ಪ್ರಕೀರ್ತಿತಃ ॥ ೨೬ ॥

ಆದಿಶೈವೇನ ತೌಲ್ಯೇಽಪಿ ದೀಕ್ಷಾದೀನಾಂ ಪರಿಗ್ರಹೇ।
ವಿಶಿಷ್ಟಾನಾಂ ಹಿ ಧರ್ಮಾಣಾಂ ಶೀಘ್ರಮುಕ್ತಿಪ್ರದಾಯಿನಾಮ್॥
ನಿರಂತರಾನುಷ್ಠಾನಸು ಯನ್ಮಾರ್ಗಶೈವೇ ವಿಶಿಷ್ಯತೇ ॥ ೨೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾರ್ಗಶೈವದ ಲಕ್ಷಣ

ಈಗ ಮಾರ್ಗಶೈವವನ್ನು ಕುರಿತು ಹೇಳುತ್ತೇನೆ. ಅದು ಮುಕ್ತಿಗೆ ಹತ್ತಿರವಾದ ಮಾರ್ಗವುಳ್ಳದ್ದು. ವೇದ ಮತ್ತು ಆಗಮೋತ್ತರ ಭಾಗದಲ್ಲಿ ಹೇಳಿದ ಮೂರು ವಿಧವಾದ ದೀಕ್ಷೆಗಳನ್ನು ಹೊಂದುವುದು, ಷಟ್‌ಸ್ಥಲ ಜ್ಞಾನದ ಸಂಪತ್ತನ್ನು ಪಡೆದಿರುವುದು, ಆರು ವೇಳೆ ಶಿವಪೂಜೆಯನ್ನು ಮಾಡುವುದು, ಇಪ್ಪತ್ತೊಂದು ಸಾವಿರದ ಆರುನೂರು ಸಾರಿ ನಿತ್ಯವೂ ಷಡಕ್ಷರೀ ಮಂತ್ರವನ್ನು ಜಪಿಸುವುದು, ಲಿಂಗೈಕ್ಯ ಭಾವನೆಯನ್ನು ತಾಳುವುದು, ಇದಿಷ್ಟು ಈಶ್ವರನಿಂದ ಹೇಳಲ್ಪಟ್ಟ ಮಾರ್ಗಶೈವರ ಧರ್ಮ. (೨೫-೨೬). ಇದು ಆದಿಶೈವರೊಂದಿಗೆ ಸದೃಶವಾಗಿದ್ದರೂ ದೀಕ್ಷಾ ಮುಂತಾದವುಗಳನ್ನು ತೆಗೆದು ಕೊಳ್ಳುವುದರಲ್ಲಿ ಶೀಘ್ರವೇ ಮುಕ್ತಿಪ್ರದವಾದ ವಿಶಿಷ್ಟ ಧರ್ಮಗಳ ಅನುಷ್ಠಾನದಲ್ಲಿ ಮಾರ್ಗಶೈವವು ವಿಶಿಷ್ಟವಾಗಿದೆ. (೨೭).

ಟಿಪ್ಪಣಿ : ಭಕ್ತಸ್ಥಲ, ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ ಮತ್ತು ಐಕ್ಯಸ್ಥಲವೆಂದು ಆರು ಸ್ಥಲಗಳು ವೀರಶೈವದಲ್ಲಿ ಅಂಗೀಕೃತವಾಗಿವೆ. ಪ್ರಸ್ತುತ ಆಗಮದ ೧೧.೭೪ರಲ್ಲಿ ಅರುಣೋದಯ, ಸೂರ್ಯೋದಯ, ಸಂಗವ (ಹಸುಗಳನ್ನು ಕರೆದುಕೊಂಡ ಮೇಲೆ ಮೇಯಲು ಬಿಡುವ ವೇಳೆ), ಮಧ್ಯಾಹ್ನ, ಸಾಯಾಹ್ನ ಮತ್ತು ಅರ್ಧರಾತ್ರಿ ಎಂಬ ಆರು ಕಾಲಗಳಲ್ಲಿ ಪೂಜೆ ಮಾಡುವುದು ಷಟ್ಕಾಲ ಪೂಜೆ.

೭. ಸಾಮಾನ್ಯಶೈವಲಕ್ಷಣಮ್

ಸಾಮಾನ್ಯಶೈವಂ ವಕ್ಷ್ಯಾಮಿ ತಚ್ಛೃಣುಷ್ವಾವಧಾನತಃ।
ಶಾಕ್ತಾದ್ಯಾಃ ಸರ್ವ ಏವೈತೇ ಮತಪಂಚಕವರ್ತಿನಃ ॥ ೨೮ ॥

ಅಧ್ವಶೋಧನಸಂಸ್ಕಾರಾದ್ ಗಾಯತ್ರೀಗ್ರಹಣಾದಪಿ।
ಸಾಮಾನ್ಯಶೈವಾ ಇತಿ ಹಿ ನಿಗದ್ಯಂತೇ ಧರಾತಲೇ ॥ ೨೯ ॥

ಸಾಮಾನ್ಯಶೈವದ ಲಕ್ಷಣ

ಸಾಮಾನ್ಯಶೈವವನ್ನು ಕುರಿತು ಹೇಳುತ್ತೇನೆ. ಅದನ್ನು ಏಕಾಗ್ರಚಿತ್ತನಾಗಿ ಕೇಳು. ಮೇಲೆ ಹೇಳಿದ ಶಾಕ್ತರು ಮತ್ತು ಎಲ್ಲಾ ಐದು ಮತಸ್ಥರು ಷಡಧ್ವಶೋಧನ ಪ್ರಕ್ರಿಯೆಯಿಂದ ಸಂಸ್ಕಾರ ಹೊಂದುವುದರಿಂದ ಮತ್ತು ಗಾಯತ್ರೀ ಮಂತ್ರದ ಸ್ವೀಕಾರದಿಂದ ಸಾಮಾನ್ಯಶೈವರೆಂದು ಲೋಕದಲ್ಲಿ ಕರೆಯಲ್ಪಡುತ್ತಾರೆ. (೨೮-೨೯).

೮. ವೀರಶೈವಲಕ್ಷಣಮ್

ವೀರಶೈವಂ ಪ್ರವಕ್ಷ್ಯಾಮಿ ವಿದಿತಂ ಶ್ರುತಿತಂತ್ರಯೋಃ।
ಶ್ರೌತಂ ಸ್ವತಂತ್ರಮಿತಿ ಚ ದ್ವಿವಿಧಂ ಪರಿಕೀರ್ತಿತಮ್ ॥ ೩೦ ॥

ವರ್ಣಾಶ್ರಮೀಯಧರ್ಮಾಢ್ಯಂ ಶ್ರೌತಮಿತ್ಯಭಿಧೀಯತೇ।
ತದೀಯಧರ್ಮರಹಿತಂ ಸ್ವತಂತ್ರಮಿತಿ ಕಥ್ಯತೇ ॥ ೩೧ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಗಮೋತ್ತರಕಾಂಡೋಕ್ತದೀಕ್ಷಾಣಾಂ ಯಃ ಪರಿಗ್ರಹಃ।
ಸಮಾನ ಆದಿಶೈವೇನ ವಿಶೇಷಮಿಹ ಸಂಶೃಣು ॥ ೩೨ ॥

ಇಷ್ಟಲಿಂಗವಿಯೋಗೇ ವಾ ವ್ರತನಾಂ ವಾ ಪರಿಚ್ಯುತೌ।
ತೃಣವತ್ ಪ್ರಾಣಸಂತ್ಯಾಗ ಇತಿ ವೀರವ್ರತಂ ಮತಮ್ ॥ ೩೩ ॥

ಭಕ್ತ್ಯುತ್ಸಾಹವಿಶೇಷೋಽಪಿ ವೀರತ್ವಮಿತಿ ಕಥ್ಯತೇ।
ವೀರವ್ರತಸಮಾಯೋಗಾದ್ ವೀರಶೈವಂ ಪ್ರಕೀರ್ತಿತಮ್ ॥ ೩೪ ॥

ವೀರಶೈವದ ಲಕ್ಷಣ

ವೀರಶೈವವನ್ನು ಕುರಿತು ಹೇಳುತ್ತೇನೆ. ಇದು ವೇದ ಮತ್ತು ಆಗಮಗಳಲ್ಲಿ ಪ್ರಸಿದ್ಧವಾಗಿದೆ. ಅದು ಶ್ರೌತ ಮತ್ತು ಸ್ವತಂತ್ರವೆಂದು ಎರಡು ವಿಧವೆಂದು ಹೇಳಲಾಗಿದೆ. (೩೦). ವರ್ಣ ಮತ್ತು ಆಶ್ರಮ ಧರ್ಮದ ಆಚರಣೆಯಿಂದ ಸಂಪನ್ನವಾದುದು ಶ್ರೌತವೆಂದು ಕರೆಯಲ್ಪಡುವುದು. ಆ ಧರ್ಮದ ಆಚರಣೆಯಿಲ್ಲದುದು ಸ್ವತಂತ್ರವೆಂದು ಹೇಳಲ್ಪಡುವುದು. (೩೧). ಆಗಮೋತ್ತರ ಭಾಗದಲ್ಲಿ ಹೇಳಿದ ದೀಕ್ಷೆಗಳನ್ನು ಹೊಂದುವುದರಲ್ಲಿ ಆದಿಶೈವದೊಂದಿಗೆ ಸಮಾನತೆಯಿದ್ದರೂ ಇಲ್ಲಿ ವಿಶೇಷವನ್ನು ಕೇಳು. ಇಷ್ಟಲಿಂಗವು ಕಳೆದು ಹೋದರೆ ಮತ್ತು ವ್ರತಗಳ ಆಚರಣೆಯಲ್ಲಿ ಚ್ಯುತಿಯುಂಟಾದರೆ ತೃಣದ ಹಾಗೆ ಪ್ರಾಣವನ್ನು ತ್ಯಜಿಸುವುದು ವೀರವ್ರತವೆಂದು ಅಭಿಮತವಿದೆ. (೩೨-೩೩). ಭಕ್ತಿಯ ಉತ್ಸಾಹ ವಿಶೇಷವೂ ಕೂಡ ವೀರತ್ವವೆಂದು ಹೇಳಲ್ಪಡುತ್ತದೆ. ಅಂತಹ ವೀರವ್ರತದ ಸಂಬಂಧದಿಂದ ವೀರಶೈವವೆಂದು ಪ್ರಶಂಸಿಸಲ್ಪಡುತ್ತದೆ. (೩೪).

ವೀರಶೈವಭೇದಾಃ

ಪುನಃ ತ್ರಿವಿಧಮೇತದ್ಧಿ ಸಾಮಾನ್ಯಾದಿಭೇದತಃ।
ಸಾಮಾನ್ಯಶ್ಚ ವಿಶೇಷಶ್ಚ ನಿರಾಭಾರೀತಿ ಚ ತ್ರಿಧಾ ॥ ೩೫ ॥

ವೀರಶೈವ ಭೇದಗಳು

ಮತ್ತೆ ಇದು (ವೀರಶೈವವು) ಸಾಮಾನ್ಯ ಮುಂತಾದ ಭೇದದಿಂದ ಮೂರು ವಿಧ. ಸಾಮಾನ್ಯ, ವಿಶೇಷ ಮತ್ತು ನಿರಾಭಾರಿಯೆಂದು ಮೂರು ವಿಧ. (೩೫).

ಟಿಪ್ಪಣಿ : ಸೂಕ್ಷ್ಮಾಗ್ರಮ, ೭.೩೦; ಪಾರಮೇಶ್ವರಾಗಮ, ೧೫.೩೨ ಇದಕ್ಕೆ ಸಂವಾದಿಯಾದ ವಿಚಾರವಿದೆ.

ಸಾಮಾನ್ಯವೀರಶೈವಲಕ್ಷಣಮ್

ಅಥ ಲಕ್ಷಣಮೇತೇಷಾಂ ಕ್ರಮಾದ್ ವಕ್ಷ್ಯಾಮಿ ಸಂಶೃಣು।
ಇಷ್ಟಾದಿಲಿಂಗತ್ರಿತಯಸ್ಯೈಕೀಭಾವೇನ ಚಾರ್ಚನಮ್॥
ಗುರೌ ಮಾಹೇಶ್ವರೇ ಸ್ವೇಷ್ಟಲಿಂಗೇ ಚ ಸಮಭಾವನಾ ॥ ೩೬ ॥
ತ್ರಿಕಾಲಂ ಲಿಂಗಪೂಜಾ ಚ ಸಂಭವದ್ಭಿಃ ಪದಾರ್ಥಕೈಃ।
ಸಾಮಾನ್ಯವೀರಶೈವಸ್ಯ ಧರ್ಮೋಽಯಂ ಪರಿಕೀರ್ತಿತಃ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಮಾನ್ಯವೀರಶೈವದ ಲಕ್ಷಣ

ಈಗ ಕ್ರಮವಾಗಿ ಇವುಗಳ ಲಕ್ಷಣಗಳನ್ನು ಹೇಳುತ್ತೇನೆ, ಕೇಳು. ಇಷ್ಟಲಿಂಗ ಮುಂತಾದ ಮೂರು ಲಿಂಗಗಳನ್ನು ಒಂದೇ ಭಾವನೆಯಿಂದ ಪೂಜಿಸುವುದು, ಗುರುವಿನಲ್ಲಿ, ಜಂಗಮನಲ್ಲಿ ಮತ್ತು ತನ್ನ ಇಷ್ಟಲಿಂಗದಲ್ಲಿ ಸಮಾನವಾದ ಭಕ್ತಿ, ಮೂರು ಕಾಲ ಉಪಲಬ್ಧವಾದ ವಸ್ತುಗಳಿಂದ ಲಿಂಗಪೂಜೆ, ಇದಿಷ್ಟು ಸಾಮಾನ್ಯವೀರಶೈವನ ಧರ್ಮವೆಂದು ಹೇಳಲ್ಪಟ್ಟಿದೆ. (೩೬).

ಟಿಪ್ಪಣಿ : ಸೂಕ್ಷ್ಮಾಗ್ರಮ, ೭.೩೧-೩೮; ಪಾರಮೇಶ್ವರಾಗಮ, ೧೫.೩೪-೪೧ ಹೆಚ್ಚು ವಿವರಗಳಿವೆ.

ವಿಶೇಷವೀರಶೈವಲಕ್ಷಣಮ್

ವಿಶೇಷಧರ್ಮಾನುಷ್ಠಾನಾದ್ ವಿಶೇಷಶ್ಚ ಸ ಏವ ಹಿ ॥ ೩೭ ॥
ಏಕಂ ಮಾಹೇಶ್ವರಂ ವಾಪಿ ದ್ವೌ ವಾ ತ್ರೀನ್ ಪ್ರತಿವಾಸರಮ್।
ಭೋಜಯಿತ್ವಾ ತಚ್ಛೇಷಂ ಭುಂಜೀಯಾದಪ್ರಮಾದತಃ॥
ಷಟ್‌ಕಾಲಂ ಲಿಂಗಪೂಜಾ ಚ ನಿಯತೈಸ್ತು ಪದಾರ್ಥಕೈಃ ॥ ೩೮ ॥

ದ್ರೋಣಪುಷ್ಪಂ ಬಿಲ್ವಪತ್ರಂ ಕರವೀರಮಥಾಪಿ ವಾ।
ಮಲ್ಲಿಕೋತ್ಪಲಪುನ್ನಾಗಜಾತ್ಯಾದಿಕುಸುಮಾನಿ ವಾ ॥ ೩೯ ॥

ಏಷ್ವೇಕಂ ತ್ರೀಣಿ ದ್ವೌ ವಾಪಿ ಹ್ಯರ್ಪಯೇನ್ನಿಯಮಾನ್ವಿತಃ।
ಏವಂ ಚರಿಷ್ಯೇ ನಿಯಮಾನಹಮಾಪ್ರಾಣಸಂಚರಾತ್ ॥ ೪೦॥

ನಾನ್ಯಥಾ ಬಿಭೃಯಾಂ ಪ್ರಾಣಾನಿತಿ ಯೋ ನಿಯಮಃ ಸ್ಮೃತಃ।
ಇತ್ಯಾದಿ ನಿಯಮೈರ್ಯುಕ್ತೋ ವಿಶೇಷ ಇತಿ ಕಥ್ಯತೇ ॥ ೪೧ ॥

ವಿಶೇಷವೀರಶೈವ ಲಕ್ಷಣ

ವಿಶೇಷ ಧರ್ಮದ ಅನುಷ್ಠಾನದಿಂದ ಅದೇ ವೀರಶೈವ ವಿಶೇಷವೀರಶೈವವಾಗುತ್ತದೆ. (೩೭). ಪ್ರತಿದಿನವೂ ಒಬ್ಬ ಜಂಗಮ (ಮಾಹೇಶ್ವರ) ಅಥವಾ ಇಬ್ಬರು ಅಥವಾ ಮೂವರು ಮಾಹೇಶ್ವರರನ್ನು ಊಟ ಮಾಡಿಸಿ ಉಳಿದುದನ್ನು ಊಟಮಾಡಬೇಕು. ಆಲಸ್ಯವಿಲ್ಲದೆ ಆರು ಕಾಲಗಳಲ್ಲಿ ನಿಯತವಾದ ಪದಾರ್ಥಗಳಿಂದ ಲಿಂಗಪೂಜೆಯನ್ನು ಮಾಡಬೇಕು. (೩೮). ತುಂಬೆ ಹೂವು, ಬಿಲ್ವಪತ್ರ, ಕಣಗಿಲೆ, ಮಲ್ಲಿಗೆ, ನೈದಿಲೆ, ಪುನ್ನಾಗ, ಜಾಜಿ ಮುಂತಾದ ಹೂವುಗಳಲ್ಲಿ ಒಂದು, ಎರಡು ಅಥವಾ ಮೂರನ್ನು ನಿಯಮಾನುಸಾರವಾಗಿ ಅರ್ಪಿಸಬೇಕು. 'ಹೀಗೆ ಪ್ರಾಣಸಂಚಾರವಿರುವವರೆಗೆ ನಿಯಮಗಳನ್ನು ನಡೆಸುತ್ತೇನೆ; ಇಲ್ಲವಾದರೆ ಪ್ರಾಣಗಳನ್ನು ಧರಿಸಿರುವುದಿಲ್ಲ'ಎಂದು ಯಾವ ನಿಯಮವಿದೆಯೋ ಅಂತಹ ನಿಯಮಗಳಿಂದ ಕೂಡಿದವನು ವಿಶೇಷನೆಂದು ಕರೆಯಲ್ಪಡುವನು. (೩೯-೪೧).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಸೂಕ್ಷ್ಮಾಗ್ರಮ, ೭.೩೯-೪೭; ಪಾರಮೇಶ್ವರಾಗಮ, ೧೫.೪೨-೫೩ ಹೆಚ್ಚು ವಿವರಗಳಿವೆ.

ನಿರಾಭಾರಿವೀರಶೈವಲಕ್ಷಣಮ್

ತುರೀಯಾಶ್ರಮಸೇವೀ ತು ನಿರಾಭಾರೀತಿ ಚೋಚ್ಯತೇ।
ಸ್ವತಂತ್ರೋ ತ್ಯಕ್ತದಾರಾದಿರ್ನಿರಾಭಾರೀತಿ ಕಥ್ಯತೇ ॥ ೪೨ ॥

ನಿರಾಭಾರಿ ವೀರಶೈವ ಲಕ್ಷಣ

ನಾಲ್ಕನೆಯ ಆಶ್ರಮ (ಸಂನ್ಯಾಸ)ವನ್ನು ಸ್ವೀಕರಿಸಿದವನು ನಿರಾಭಾರಿಯೆಂದು ಕರೆಯಲ್ಪಡುತ್ತಾನೆ. ಹೆಂಡತಿ, ಮಕ್ಕಳು ಮುಂತಾದುದನ್ನು ಬಿಟ್ಟವನು ಸ್ವತಂತ್ರ ನಿರಾಭಾರಿಯೆಂದು ಹೇಳಲ್ಪಡುತ್ತಾನೆ. (೪೨).

ಸ್ವತಂತ್ರನಿರಾಭಾರಿಲಕ್ಷಣಮ್

ಮುಂಡೀ ವಾ ಜಟಿಲೋ ವಾಪಿ ದಂಡಕಾಷಾಯಸಂಯುತಃ।
ಸ್ವತಂತ್ರೇ ವೀರಶೈವೇ ತು ನಿರಾಭಾರೀ ಚರೇನ್ಮಹೀಮ್ ॥ ೪೩ ॥

ಸ್ವತಂತ್ರ ನಿರಾಭಾರಿ ಲಕ್ಷಣ

ಸ್ವತಂತ್ರ ವೀರಶೈವ ನಿರಾಭಾರಿಯು ತಲೆ ಬೋಳಿಸಿಕೊಂಡು ಅಥವಾ ಜಟಾಧಾರಣೆ ಮಾಡಿ, ದಂಡ ಕಾವಿಬಟ್ಟೆಯನ್ನು ಧರಿಸಿಕೊಂಡು ಭೂಮಿಯ ಮೇಲೆ ಸಂಚರಿಸುತ್ತಾ ಇರುವನು. (೪೩).

ವೈದಿಕೋ ನಿರಾಭಾರೀ

ಶಿಖಾಯಜ್ಞೋಪವೀತಾಢ್ಯೋ ದಂಡಕಾಷಾಯಚೇಲವಾನ್।
ವೈದಿಕೇ ವೀರಶೈವೇ ತು ನಿರಾಭಾರೀ ಸ ಸ್ಮೃತಃ ॥
ಸ್ವೇಷ್ಟಲಿಂಗಾವಿಯೋಗಸ್ತು ಸಮಾನ ಉಭಯೋಃ ಸ್ಮೃತಃ ॥ ೪೪ ॥

ವೈದಿಕ ನಿರಾಭಾರಿ

ವೈದಿಕ ವೀರಶೈವದಲ್ಲಿ ಶಿಖೆ, ಜನಿವಾರಗಳಿಂದ ಕೂಡಿದವನು ಮತ್ತು ದಂಡ ಹಾಗೂ ಕಾವಿಬಟ್ಟೆಯನ್ನು ಧರಿಸಿದವನು ನಿರಾಭಾರಿಯೆಂದು ಪರಿಗಣಿಸಲ್ಪಡುವನು. ಇಷ್ಟಲಿಂಗವನ್ನು ಬಿಡದೆ ಧರಿಸುವುದು ಇಬ್ಬರಿಗೂ ಸಮಾನವೆಂದು ಹೇಳಲಾಗಿದೆ. (೪೪).

ನಿರಾಭಾರಿಸಾಮಾನ್ಯಲಕ್ಷಣಮ್

ನಿಸ್ಪೃಹೋ ನಿಜಲಿಂಗೈಕ್ಯೋ ಭಿಕ್ಷಾಶೀ ಭಯವರ್ಜಿತಃ।
ಮೌನೀ ಭೂತದಯಾಯುಕ್ತೋ ನಿರಾಭಾರ ಇತಿ ಸ್ಮೃತಃ ॥ ೪೫ ॥
ಕಂಥಾಕಮಂಡಲುಧರೋ ಭೂತಿರುದ್ರಾಕ್ಷಸಂಯುತಃ।
ದಂಡಕೌಪೀನಧಾರೀ ಚ ನಿರಾಭಾರೀತಿ ಗೀಯತೇ ॥ ೪೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿರಾಭಾರಾಶ್ರಮಸ್ಥಸ್ಯ ಸಂಭವೇ ತಸ್ಯ ಸನ್ನಿಧೌ।
ಗ್ರಾಹ್ಯೋಽಯಮಾಶ್ರಮಸ್ತಸ್ಯ ಮುಖಾದ್ಧಿ ಪ್ರಣವೋಽಪಿ ಚ ॥ ೪೭ ॥

ಅಸಂಭವೇ ತಾದೃಶಸ್ಯ ಶಿವಾಗಾರೇಽಥವಾ ಪುನಃ।
ಬಿಲ್ವಮೂಲೇ ಪರಿಗ್ರಾಹ್ಯೋ ಭವತೀಶ್ವರಶಾಸನಾತ್ ॥ ೪೮ ॥

ಪ್ರಣವೇ ಜಾಪ್ಯಮಾನೇಽಪಿ ಸೂಕ್ಷ್ಮ ಪ್ರಂಚಾಕ್ಷರಾತ್ಮನಿ।
ಸ್ಥೂಲಪಂಚಾಕ್ಷರಃ ಶೈವೋ ನ ವರ್ಜ್ಯೋ ಯತಿಭಿಃ ಸದಾ ॥ ೪೯ ॥

ನಿರಾಭಾರಿಯ ಸಾಮಾನ್ಯ ಲಕ್ಷಣ

ಯಾರು ನಿಸ್ಪೃಹನು, ಇಷ್ಟಲಿಂಗದಲ್ಲಿ ಏಕತ್ವಭಾವದಿಂದಿರುವವನು, ಭಿಕ್ಷಾನ್ನವನ್ನು ಉಣ್ಣುವವನು, ಭಯವಿಲ್ಲದವನು, ಮೌನಿಯು, ಪ್ರಾಣಿಗಳಲ್ಲಿ ದಯೆಯುಳ್ಳವನು ನಿರಾಭಾರಿಯೆಂದು ಪರಿಗಣಿತನಾಗಿದ್ದಾನೆ. (೪೫). ಕಂಥಾ ಕಮಂಡಲುಗಳನ್ನು ಧರಿಸಿದವನು, ವಿಭೂತಿ ರುದ್ರಾಕ್ಷಗಳನ್ನು ಧರಿಸಿದವನು ಮತ್ತು ದಂಡ ಮತ್ತು ಲಂಗೋಟಿಗಳನ್ನು ಧರಿಸಿದವನು ನಿರಾಭಾರಿಯೆಂದು ವರ್ಣಿಸಲ್ಪಡುವನು. (೪೬). ಈ ನಿರಾಭಾರಿ ಆಶ್ರಮದಲ್ಲಿ ಇರುವವನು ಕಾಲಬಂದಾಗ ಅದೇ ಆಶ್ರಮದ ದೀಕ್ಷೆಯನ್ನು ತೆಗೆದುಕೊಳ್ಳಬೇಕು ಮತ್ತು ಅವನ ಮುಖದಿಂದ ಪ್ರಣವ (ಓಂಕಾರ) ಹೊಮ್ಮುತ್ತಿರಬೇಕು. (೪೭). ಅದು ಸಂಭವವಾಗದಿದ್ದರೆ ಶಿವಾಲಯದಲ್ಲಿ ಅಥವಾ ಬಿಲ್ವವೃಕ್ಷದ ಅಡಿಯಲ್ಲಿ ಈಶ್ವರನ ಆಜ್ಞಾನುಸಾರ ಅದರ (ಪ್ರಣವದ) ಸ್ವೀಕಾರವನ್ನು ಮಾಡಬೇಕು. (೪೮). ಸೂಕ್ಷ್ಮ ಪ್ರಂಚಾಕ್ಷರ ಸ್ವರೂಪದ ಪ್ರಣವವನ್ನು ಜಪಿಸುತ್ತಿದ್ದಾಗಲೂ ಯತಿಗಳು ಯಾವಾಗಲೂ ಸ್ಥೂಲಶೈವಪಂಚಾಕ್ಷರೀ ಮಂತ್ರವನ್ನು ಬಿಡಬಾರದು. (೪೯).

ಟಿಪ್ಪಣಿ: ಸೂಕ್ಷ್ಮಾಗ್ರಮ, ೭.೬೪-೬೭; ಪಾರಮೇಶ್ವರಾಗಮ, ೧೫.೫೪-೬೯.

ದರ್ಶನಾಚಾರಾದಿಪ್ರಯುಕ್ತಾ ಇಮೇ ಶೈವಭೇದಾಃ

ಆದೇಃ ಪೂರ್ವಸ್ಯ ಶುದ್ಧಸ್ಯ ತಥೈವಂ ಮಾರ್ಗವೀರಯೋಃ।
ಸವಿಶೇಷಃ ಶಿವಾದ್ವೈತಃ ಶ್ರುತೀನಾಂ ಸಂಮತೋ ಮತಃ ॥ ೫೦ ॥

ಮಿಶ್ರಸ್ಯ ಶುದ್ಧಾದ್ವೈತಾಖ್ಯೋ ಮತಸ್ತು ಪರಿಕಲ್ಪಿತಃ।
ಸಾಮಾನ್ಯಸ್ಯ ವಿಶಿಷ್ಟೋಽಯಂ ಶಕ್ತ್ಯಾದ್ಯದ್ವೈತ ಏವ ಹಿ ॥ ೫೧ ॥

ಆದೇರ್ಮಾರ್ಗಸ್ಯ ವೀರಸ್ಯ ಪ್ರೇತಕರ್ಮ ನ ವಿದ್ಯತೇ।
ದಹನಂ ಚೈವ ಸಾಪಿಂಡ್ಯಂ ನೈತೇಷಾಂ ಸಂಮತೇ ತತಃ ॥ ೫೨ ॥

ಪೂರ್ವಾದೀನಾಂ ತು ಪ್ರೇತತ್ವಂ ತತ್ಪ್ರಯುಕ್ತಂ ಹಿ ಕರ್ಮ ಚ।
ವಿಶಿಷ್ಯತೇ ಯತಸ್ತೇಷಾಂ ನ ದೀಕ್ಷಾ ಶಾಂಭವೀ ಪರಾ ॥ ೫೩ ॥

ಆಚಾರಭೇದಮೂಲಾಸ್ತೇ ಶೈವಭೇದಾಃ ಸಮೀರಿತಾಃ।
ಪ್ರಧಾನಮೇಕಮೇವ ಸ್ಯಾತ್ಸರ್ವವಿದ್ಯಾಸಮನ್ವಿತಮ್ ॥ ೫೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯದಾಗಮಾಂತವಿಶ್ರಾಂತಶೈವದೀಕ್ಷಾಭಿಶೋಭಿತಮ್।
ಅಂಗತ್ರಿತಯಸಂಬದ್ಧಲಿಂಗತ್ರಯವಿರಾಜಿತಮ್ ॥ ೫೫ ॥

ವರ್ಣಾಶ್ರಮೀಯಧರ್ಮಾಢ್ಯಂ ಷಟ್‌ಸ್ಥಲಜ್ಞಾನಸಂಯುತಮ್।
ವಿಶಿಷ್ಟಮಷ್ಟಾವರಣೈಃ ಪಂಚಾಚಾರಾಭಿಮಂಡಿತಮ್ ॥ ೫೬ ॥

ಸದ್ಯಃ ಪಾಶಕ್ಷಯಕರಂ ಕರ್ಮಜ್ಞಾನಸಮುಚ್ಚಯಮ್।
ಮಹೇಶ್ವರಪ್ರತಿಷ್ಠಾದಿಕೃತ್ಯಾಚಾರ್ಯತ್ವಶೋಭಿತಮ್ ॥ ೫೭ ॥

ಅಥಾಪೀದಂ ತತ್ರ ತತ್ರ ಬಹುಧೈವಾಭಿಧೀಯತೇ।
ತತ್ತದ್ಗುಣಸಮಾಯೋಗಾತ್ತತ್ತನ್ನಾಮಾಂಕಿತಂ ಭವೇತ್ ॥ ೫೮ ॥

ಅನಾದಿಸರ್ಗಸಂಚಾರಾದನಾದೀದಂ ನಿಗದ್ಯತೇ।
ಮತಾನಾಮಿಹ ಸರ್ವೇಷಾಮಾದ್ಯತ್ವಾದಪಿ ಗೀಷ್ಪತೇ
ಆದಿಶೈವಮಿತಿ ಖ್ಯಾತಂ ಕ್ವಚಿದ್ವೇದವಿದುತ್ತಮ ॥ ೫೯ ॥

ಮುಕ್ತಿಮಾರ್ಗಪ್ರಧಾನತ್ವಾದ್ ಮಾರ್ಗಶೈವಮಿತಿ ಶ್ರುತಮ್।
ದೇವತಾಂತರಸಂಬಂಧವರ್ಜನಾಚ್ಛುದ್ಧಮಿತ್ಯಪಿ ॥ ೬೦ ॥

ಸ್ಮಾರ್ತಕರ್ಮಾಭಿಸಂಬಂಧಾನ್ಮಿಶ್ರಮಿತ್ಯಪಿ ಚ ಕ್ವಚಿತ್।
ವೀರವ್ರತಸಮಾಯೋಗಾದ್ವೀರಶೈವಮಿತಿ ಸ್ಮೃತಮ್ ॥ ೬೧ ॥

ಇತಿ ತೇ ಗೀಷ್ಪತೇ ಸಮ್ಯಕ್ ಶೈವಭೇದಃ ಸಮೀರಿತಃ।
ಪ್ರಧಾನಮಪಿ ಶೈವಂ ಚ ಕಿಮನ್ಯಚ್ಛ್ರೋತುಮಿಚ್ಛಸಿ ॥ ೬೨ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರಬೃಹಸ್ಪತಿ-
ಸಂವಾದೇ ಶಿವಶಾಸನೇ ಕ್ರಿಯಾಪಾದೇ ಶೈವಭೇದೋ
ನಾಮ ದಶಮಃ ಪಟಲಃ ॥ ೧೦॥

ದರ್ಶನ ಮತ್ತು ಆಚಾರಾದಿಗಳಿಂದ ಪ್ರಯುಕ್ತ ಶೈವಭೇದಗಳು

ಆದಿಶೈವ, ಪೂರ್ವಶೈವ, ಶುದ್ಧಶೈವ, ಮಾರ್ಗಶೈವ ಮತ್ತು ವೀರಶೈವದ ವಿಷಯದಲ್ಲಿ ಶ್ರುತಿಗೆ ಅನುಗುಣವಾಗಿ ಸವಿಶೇಷ ಶಿವಾದ್ವೈತವು ಮಾನ್ಯವಾಗಿದೆ. (೫೦). ಮಿಶ್ರಶೈವಕ್ಕೆ ಶುದ್ಧಾದ್ವೈತವೆಂಬ ಮತವು ಪರಿಕಲ್ಪಿತವಾಗಿದೆ. ಸಾಮಾನ್ಯಶೈವಕ್ಕೆ ಶಕ್ತಿವಿಶಿಷ್ಟಾದ್ವೈತವು ಮಾನ್ಯವಾಗಿದೆ. (೫೧). ಆದಿಶೈವ, ಮಾರ್ಗಶೈವ ಮತ್ತು ವೀರಶೈವರಿಗೆ ಪ್ರೇತಕರ್ಮವಿಲ್ಲ. ಇವುಗಳಲ್ಲಿ ಸತ್ತವರಿಗೆ ದಹನವಿಲ್ಲ ಮತ್ತು ಪಿಂಡ ಹಾಕುವ ಕರ್ಮವಿಲ್ಲ. (೫೨). ಪೂರ್ವಶೈವ ಮುಂತಾದವರಿಗೆ ಪ್ರೇತತ್ವ ಮತ್ತು ತತ್ಸಂಬಂಧಿಯಾದ ಕರ್ಮವು ವಿಶೇಷವಾಗಿದೆ. ಏಕೆಂದರೆ ಅವರಿಗೆ ಶ್ರೇಷ್ಠವಾದ ಶಾಂಭವೀ ದೀಕ್ಷೆಯಿರುವುದಿಲ್ಲ. (೫೩). ಬೃಹಸ್ಪತಿಯೇ, ಮುನಿಶ್ರೇಷ್ಠ, ಆ ಶೈವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೇದಗಳು ಆಚಾರ ಭೇದದ ಕಾರಣದಿಂದ ಎಂದು ಹೇಳಲ್ಪಡುತ್ತವೆ. ಪ್ರಧಾನ ಸ್ವರೂಪ ಒಂದೇ ಆಗಿದೆ, ಏಕೆಂದರೆ ಅದು ಎಲ್ಲಾ ವಿದ್ಯೆಗಳಿಂದ ಸುಶೋಭಿತವಾಗಿದೆ. ಅದು ಯಾವುದೇ ಉಪಪದವಿಲ್ಲದೆ ಕೇವಲ ಶೈವದ ಹೆಸರಿನಿಂದ ತಿಳಿಯಲ್ಪಡುತ್ತದೆ. (೫೪). ಯಾವುದು ಆಗಮದ ಉತ್ತರ ಭಾಗದಲ್ಲಿ ಹೇಳಲ್ಪಟ್ಟ ಶೈವ ದೀಕ್ಷೆಯಿಂದ ಶೋಭಿಸಲ್ಪಟ್ಟದ್ದೋ, ಮೂರು ಶರೀರಗಳಿಗೆ ಸಂಬಂಧಿಸಿದ ಮೂರು ಲಿಂಗಗಳಿಂದ ಶೋಭಿಸುವುದು, ವರ್ಣಾಶ್ರಮ ಧರ್ಮದಿಂದ ಸಂಪನ್ನವಾದುದು, ಷಟ್‌ಸ್ಥಲ ಜ್ಞಾನದಿಂದ ಕೂಡಿದುದು, ಅಷ್ಟಾವರಣಗಳಿಂದ ವಿಶಿಷ್ಟವಾದುದು, ಪಂಚಾಚಾರಗಳಿಂದ ಅಲಂಕೃತವಾದುದು, ಕೂಡಲೇ ಪಾಶಗಳನ್ನು ನಾಶಮಾಡುವಂತಹದು, ಕರ್ಮ-ಜ್ಞಾನಗಳ ಸಮುಚ್ಚಯದಿಂದ ಕೂಡಿಗುದು, ಶಿವಲಿಂಗ ಪ್ರತಿಷ್ಠೆ ಮುಂತಾದ ಆಚರಣೆಗಳಿಗೆ ಆಚಾರ್ಯತ್ವದಿಂದ ಶೋಭಿತವಾದುದು, ಇತ್ಯಾದಿ ಲಕ್ಷಣಗಳಿಂದ ಕೂಡಿದವುಗಳಾದರೂ ಆಯಾಯ ಶಾಸ್ತ್ರಗಳಲ್ಲಿ ಈ ಶೈವಗಳು ಅನೇಕ ವಿಧವಾಗಿ ವರ್ಣಿಸಲ್ಪಟ್ಟಿವೆ. ಮುಂದೆ ಹೇಳಿದ ಆಯಾಯ ಗುಣಗಳ ಸಮಾವೇಶದ ಕಾರಣ ಈ ಶೈವಗಳು ಅನಾದಿ, ಆದಿ ಮುಂತಾಗಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಡುತ್ತವೆ. (೫೫-೫೮). ಬೃಹಸ್ಪತಿಯೆ, ಈ ಎಲ್ಲಾ ಮತಗಳಿಗೆ ಆದಿಯಾದುದರಿಂದ ಆದಿಶೈವವೆಂದು ಪ್ರಸಿದ್ಧ. ವೇದಜ್ಞರಲ್ಲಿ ಶ್ರೇಷ್ಠನೇ, ಮತ್ತೊಂದು ಮುಕ್ತಿಮಾರ್ಗವನ್ನು ಪ್ರಧಾನವಾಗಿಟ್ಟು ಕೊಂಡಿರುವುದರಿಂದ ಮಾರ್ಗಶೈವವೆಂದು ಪ್ರಸಿದ್ಧ. ಬೇರೆ ದೇವತೆಗಳ ಸಂಬಂಧವಿಲ್ಲದಿರುವುದರಿಂದ ಇನ್ನೊಂದು ಶುದ್ಧವೆಂದು ಪ್ರಸಿದ್ಧವಾಗಿದೆ. ಸ್ಮಾರ್ತ ಕರ್ಮದ ಸಂಬಂಧವಿರುವುದರಿಂದ ಮತ್ತೊಂದಕ್ಕೆ ಮಿಶ್ರವೆಂದು ಹೆಸರು. ವೀರವ್ರತದ ಸಂಬಂಧವಿರುವುದರಿಂದ ಇನ್ನೊಂದಕ್ಕೆ ವೀರಶೈವವೆಂದು ಖ್ಯಾತಿ. (೫೯-೬೧). ಬೃಹಸ್ಪತಿಯೇ, ನಿನಗೆ ಶೈವಭೇದವನ್ನು ಸರಿಯಾಗಿ ಹೇಳಿದ್ದೇನೆ. ಪ್ರಧಾನವಾದ ಶೈವವನ್ನೂ ಹೇಳಿದ್ದೇನೆ. ಮತ್ತೆ ಇನ್ನೇನನ್ನು ಕೇಳಲು ಇಚ್ಛಿಸುವೆ? (೬೨).

ಇಲ್ಲಿಗೆ ಶ್ರೀ ಚಂದ್ರಜ್ಞಾನಾಗಮದ ಉತ್ತರ ಭಾಗದಲ್ಲಿ ಅನಂತರುದ್ರ-ಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಕ್ರಿಯಾಪಾದದಲ್ಲಿ ಶೈವಭೇದವೆಂಬ ದಶಮ ಪಟಲವು ಮುಗಿಯಿತು. (೧೦).

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಕಾದಶಃ ಪಟಲಃ

।। ಆಹ್ನಿಕವಿಧಿಃ।।

ಬೃಹಸ್ಪತಿರುವಾಚ

ಕಂಕಾಲಧರ ಸರ್ವಜ್ಞ ಕಾಲಕಾಲ ಕೃಪಾನಿಧೇ।
ಅನಂತರುದ್ರ ಭಗವನ್ ನತೋಽಸ್ಮ್ಯನುಗೃಹಾಣ ಮಾಮ್ ।। ೧ ।।

ಶಾಂಭವವ್ರತನಿಷ್ಠಾನಾಂ ಶೈವಾನಾಂ ಪ್ರಯತಾತ್ಮನಾಮ್।
ಆಹ್ನಿಕಂ ಶ್ರೋತುಮಿಚ್ಛಾಮಿ ವಿಧಾನಂ ಬ್ರೂಹ್ಯಶೇಷತಃ ।। ೨ ।।

ಬೃಹಸ್ಪತಿಯು ಹೇಳಿದನು

ಕಂಕಾಲಧರ, ಸರ್ವಜ್ಞ, ಕಾಲಕಾಲ, ಕೃಪಾನಿಧಿಯೇ, ಭಗವನ್, ಅನಂತರುದ್ರ, ನಾನು ನಿನಗೆ ನಮಿಸುವೆನು. ನನಗೆ ಅನುಗ್ರಹಿಸು. (೧). ಶಾಂಭವವ್ರತಕ್ಕೆ ನಿಷ್ಠರಾದ, ಪವಿತ್ರಾತ್ಮರಾದ ಶೈವರ ಆಹ್ನಿಕವನ್ನು (ದೈನಂದಿನ ಆಚರಣೆಯನ್ನು) ಕುರಿತು ಕೇಳಲಿಚ್ಛಿಸುವೆ. ಆ ವಿಧಾನವನ್ನು ಸಂಪೂರ್ಣವಾಗಿ ಹೇಳು. (೨).

ಅನಂತರುದ್ರ ಉವಾಚ

ಶಾಂಭವವ್ರತನಿಷ್ಠಾನಾಮ್ ಆಹ್ನಿಕಮ್

ಬ್ರಾಹ್ಮೇ ಮುಹೂರ್ತೇ ಉತ್ಥಾಯ ನೇತ್ರಯೋರಿಷ್ಟಲಿಂಗಕಮ್।
ಸ್ಪರ್ಶಯನ್ನೀಶ್ವರಂ ಸಾಂಬಂ ಕಾರ್ಯಂ ವಿಚಾರ್ಯ ಚ।।
ಬಹಿರ್ವಿದಿಶಮಾಗ್ನೇಯೀಂ ಗಚ್ಛೇದಾರಾದತಂದ್ರಿತಃ ।। ೩ ।।

ಅನಂತರುದ್ರ ಹೇಳಿದನು

ಶಾಂಭವವ್ರತನಿಷ್ಠರ ದೈನಂದಿನ ಆಚರಣೆ

ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು, ಕಣ್ಣುಗಳಿಗೆ ಇಷ್ಟಲಿಂಗದ ಸ್ಪರ್ಶ ಮಾಡಿಸಿ, ಅಂಬಾ ಸಹಿತ ಈಶ್ವರನನ್ನು ಧ್ಯಾನ ಮಾಡುತ್ತಾ, ಕಾರ್ಯದ ಬಗ್ಗೆ ಚಿಂತಿಸಿ, ನಿರಾಲಸ್ಯ ಭಾವದಿಂದ ಮನೆಯಿಂದ ಹೊರಗೆ ಆಗ್ನೇಯ ದಿಕ್ಕಿಗೆ ದೂರದವರೆಗೆ (ಶೌಚಾದಿಗಳ ಸಲುವಾಗಿ) ಹೋಗಬೇಕು. (೩).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಬ್ರಾಹ್ಮೇ ಮುಹೂರ್ತೇ - ರಾತ್ರಿಯ ಕಡೆಯ ಯಾಮ, ದಿನದ ಅರುಣೋದಯಕ್ಕಿಂತ ಪೂರ್ವದ ಸಮಯ. "ರಾತ್ರೇಶ್ಚ ಪಶ್ಚಿಮೇ ಯಾಮೇ ಮುಹೂರ್ತೇ ಬ್ರಾಹ್ಮ ಉಚ್ಯತೇ।" ಅರುಣೋದಯಕ್ಕಿಂತ ೪೮ ನಿಮಿಷ ಮೊದಲಿನ ಸಮಯ. ಆಗ್ನೇಯ ವಿದಿಕ್-ಮಲಮೂತ್ರ ವಿಸರ್ಜನೆಗೆ ಅಗ್ನಿದಿಕ್ಕಿಗೆ ಹೋಗಬೇಕೆಂದು ಶಾಸ್ತ್ರಗಳು ಹೇಳುತ್ತವೆ. ಕಾರಣಾಗಮ, ಕ್ರಿ.ಪಾ. ೩.೨-೪ನ್ನು ಮತ್ತು ಮಕುಟಾಗಮ, ಕ್ರಿ.ಪಾ. ೨.೩ನ್ನು ನೋಡಿರಿ.

ಶೌಚಾಚಾರನಿರೂಪಣಮ್

ಶಿವಸೂತ್ರಂ ಯಜ್ಞಸೂತ್ರಂ ಮೂರ್ಧ್ನಿ ವಿನ್ಯಸ್ಯ ವಾಸಸಾ।
ಪ್ರಾವೃತ್ಯ ಚ ಶಿರೋಽನ್ಯತ್ರ ಜಲಪಾತ್ರಂ ನಿಧಾಯ ಚ ॥
ವಿಸೃಜ್ಯ ಚೈವ ವಿಣ್ಮೂತ್ರೇ ಶೌಚಂ ಕುರ್ಯಾದ್ವಿಧಾನತಃ ॥ ೪ ॥
ತತೋ ದಂತಾನ್ ಧಾವಯೇಚ್ಚ ಕ್ಷೀರಿಕಂಟಕಿಶಾಖಯಾ।
ಅಲಾಭೇ ದಂತಕಾಷ್ಠಾನಾಂ ಸದಾಚಾರಸಮನ್ವಿತಃ ॥ ೫ ॥
ಅಪಾಂ ದ್ವಾದಶಗಂಡೂಷೈಃ ಕುರ್ಯಾದಾಸ್ಯವಿಶೋಧನಮ್।
ಆಚಮ್ಯ ಚಾಥ ನದ್ಯಾದೌ ವಾರುಣಸ್ನಾನಮಾಚರೇತ್ ॥ ೬ ॥

ಶೌಚಾಚಾರದ ನಿರೂಪಣೆ

ಶಿವದಾರವನ್ನು ಮತ್ತು ಜನಿವಾರವನ್ನು ಶಿರಸ್ಸಿನಲ್ಲಿ ವಸ್ತ್ರದೊಂದಿಗೆ ಇರಿಸಿ, ಒಂದು ಕಡೆ ನೀರಿನ ಪಾತ್ರೆಯನ್ನು ಇಟ್ಟು, ಶಿರಸ್ಸಿಗೆ ಬಟ್ಟೆ ಸುತ್ತಿಕೊಂಡು ಮಲ-ಮೂತ್ರಗಳನ್ನು ವಿಸರ್ಜಿಸಿ ಶಾಸ್ತ್ರವಿಧಾನದಂತೆ ಶೌಚವಿಧಿಯನ್ನು ಪೂರೈಸಿಕೊಳ್ಳಬೇಕು. (೪). ಅನಂತರ ಕ್ಷೀರವುಳ್ಳ ಅಥವಾ ಮುಳ್ಳುಳ್ಳ ವೃಕ್ಷದ ಶಾಖೆಯಿಂದ ಹಲ್ಲುಗಳನ್ನು ಉಜ್ಜಿ ತೊಳೆಯಬೇಕು. ಹಲ್ಲುಜ್ಜುವ ಕಡ್ಡಿ ದೊರೆಯದಿದ್ದರೆ ಸದಾಚಾರ ಯುಕ್ತನಾದವನು ನೀರಿನಿಂದ ಹನ್ನೆರಡು ಸಾರಿ ಮುಕ್ಕುಳಿಸುವ ಮೂಲಕ ಬಾಯಿಯನ್ನು ಶುದ್ಧಗೊಳಿಸಿಕೊಳ್ಳಬೇಕು. ಆಚಮನ ಮಾಡಿ ನದಿ ಮುಂತಾದವುಗಳಲ್ಲಿ ಜಲಸ್ನಾನವನ್ನು ಮಾಡಬೇಕು. (೫-೬).

ಟಿಪ್ಪಣಿ : ಕಾರಣಾಗಮ, ಕ್ರಿ.ಪಾ. ೩.೮-೨೦; ಮಕುಟಾಗಮ, ಕ್ರಿ.ಪಾ. ೨.೯.

ವಾರುಣಸ್ನಾನಾದಿಕಮ್

ಸೋಪವೀತಃ ಶಿಖಾಂ ಬದ್ಧ್ವಾ ಪ್ರವಿಶ್ಯ ಚ ಜಲಾಂತರಮ್।
ಶಿವತೀರ್ಥಂ ವಿಧಾಯಾಥ ತನ್ಮಧ್ಯೇ ಸ್ನಾನಮಾಚರೇತ್ ॥ ೭ ॥

ಶಿವಬ್ರಹ್ಮಾಂಗವಿದ್ಯಾಂಗೈಃ ಸ್ನಾನಂ ಕೃತ್ವಾ ವಿಧಾನತಃ।
ಪಂಚಬ್ರಹ್ಮಶಿವಾಂಗೈಶ್ಚ ತ್ರಿಃ ಪಠೇದಘಮರ್ಷಣಮ್ ॥ ೮ ॥
ದೇವಾದೀಂಸ್ತರ್ಪಯಿತ್ವಾಥ ಶಿವತೀರ್ಥಂ ತು ಸಂಹರೇತ್।
ಅಥಾರ್ದ್ರವಸನೇ ತ್ಯಕ್ತ್ವಾ ಬಿಭೃಯಾದ್ ಧೌತವಾಸಸೀ ॥ ೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಲಸ್ನಾನ ಇತ್ಯಾದಿ

ಜನಿವಾರ ಧರಿಸಿದ ಸಾಧಕ ತನ್ನ ಶಿಖೆಯನ್ನು ಕಟ್ಟಿಕೊಂಡು ನೀರಿನೊಳಕ್ಕೆ ಹೋಗಿ, ಶಿವತೀರ್ಥದ ಭಾವನೆ ಮಾಡಿ ಅದರ ಮಧ್ಯದಲ್ಲಿ ಸ್ನಾನವನ್ನು ಮಾಡಬೇಕು. (೭). ಶಿವ, ಬ್ರಹ್ಮ, ವಿದ್ಯಾಂಗ ಮಂತ್ರಗಳಿಂದ ವಿಧಿಗನುಸಾರವಾಗಿ ಸ್ನಾನ ಮಾಡಿ ಶಿವ ಪಂಚಬ್ರಹ್ಮ ಮಂತ್ರಗಳಿಂದ ಮೂರು ಸಾರಿ ಅಘಮರ್ಷಣ ಮಾಡಬೇಕು. (೮). ದೇವಗಣ, ಋಷಿಗಣ ಮತ್ತು ಪಿತೃಗಣಗಳಿಗೆ ತರ್ಪಣ ನೀಡಿ ಶಿವತೀರ್ಥವನ್ನು (ಆ ಜಲಾಶಯವನ್ನು) ಬಿಟ್ಟು ಹೊರಗೆ ಬರಬೇಕು. ಆ ನಂತರ ಒದ್ದೆಯಾದ ಬಟ್ಟೆಗಳನ್ನು ಬಿಟ್ಟು ತೊಳೆದ (ಮಡಿ) ಬಟ್ಟೆಗಳನ್ನು ಧರಿಸಬೇಕು. (೯).

ಟಿಪ್ಪಣಿ : ಮೀನು, ಕಪ್ಪೆ, ಸರ್ಪ ಮುಂತಾದ ಅನೇಕ ಜಲಜಂತುಗಳು ನಿತ್ಯ ಸೇವಿಸಿರುವುದರಿಂದ ನದಿ ಮುಂತಾದವುಗಳ ಜಲವು ದೋಷ ಪೂರ್ಣವಾಗಿರುತ್ತದೆ. ಆ ದೋಷವನ್ನು ದೂರ ಮಾಡಲು ಅದನ್ನು ಮಂತ್ರದಿಂದ ಶಿವತೀರ್ಥವನ್ನಾಗಿ ಮಾಡಿಕೊಳ್ಳಬೇಕು (ಕಾರಣಾಗಮ, ಕ್ರಿ.ಪಾ. ೩.೨೬) "ಸರ್ವೈನಸಾಮಪಧ್ವಂಸಿ ಜಪ್ಯಂ ತ್ರಿಷ್ವಘಮರ್ಷಣಮ್" ಎಂಬ ಅಮರಕೋಶದ (೨.೭.೪೭) ವಚನಾನುಸಾರ ಎಲ್ಲಾ ಪಾಪಗಳ ಪರಿಹಾರಕ್ಕಾಗಿ ಮೂರು ಸಂಧ್ಯೆಗಳಲ್ಲಿ "ಋತಂ ಚ ಸತ್ಯಂ ಚ" ಮುಂತಾದ ಮೂರು ವೈದಿಕ ಅಘಮರ್ಷಣ ಮಂತ್ರಜಪ ಮಾಡುತ್ತಾ ಪ್ರಾರ್ಥನೆ ಮಾಡುವುದಕ್ಕೆ ಅಘಮರ್ಷಣವೆನ್ನುವರು. ಇಲ್ಲಿ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಎಂಬ ಪಂಚಬ್ರಹ್ಮರ ಮಂತ್ರಗಳಿಂದ ಪ್ರಾರ್ಥನೆ ಮಾಡಬೇಕು ಎಂದು ಹೇಳಿದೆ. "ಋತಂ ಚ ಸತ್ಯಂ ಚ" (ಋಗ್ವೇದ, ೧೦.೧೯೦ ಎಂಬುದರ ಮಂತ್ರಗಳು; ಇದಕ್ಕೆ ಅಘಮರ್ಷಣ ಸೂಕ್ತವೆಂದು ಹೆಸರು). ಬಲಗೈಯಲ್ಲಿ ನೀರಿನ ಪಾತ್ರೆಯನ್ನು ಹಿಡಿದು ಎಡಗೈಯಿಂದ ಮುಚ್ಚಿ ಆ ಮೂರು ಮಂತ್ರಗಳನ್ನು ಪಠಿಸುತ್ತಾ ತನ್ನ ಬಲಭಾಗದಿಂದ ಆರಂಭಿಸಿ ತನ್ನ ಸುತ್ತಲೂ ಚೆಲ್ಲವುದು ಅಘಮರ್ಷಣ ಕ್ರಿಯೆ. ಇದು ಸ್ನಾನದ ಐದು ಅಂಗಗಳಲ್ಲಿ ಒಂದು. ನೋಡಿರಿ: "ಸಂಕಲ್ಪಃ ಸೂಕ್ತಪಠನಂ ಮಾರ್ಜನಂ ಚಾಘಮರ್ಷಣಮ್। ದೇವತಾತರ್ಪಣಂ ಚೈವ ಸ್ನಾನಂ ಪಂಚಾಂಗ ಮುಚ್ಯತೇ॥" (ಕಾರಣಾಗಮ, ಕ್ರಿ.ಪಾ. ೩.೨೫ ಮತ್ತು ಮಕುಟಾಗಮ, ಕ್ರಿ.ಪಾ. ೨.೧೦) ದೇವಾದೀಂಸ್ತರ್ಪಯಿತ್ವಾ-ಕಾರಣಾಗಮ, ಕ್ರಿ.ಪಾ. ೩.೩೯ನ್ನೂ ಮಕುಟಾಗಮ, ಕ್ರಿ.ಪಾ. ೨.೧೧ನ್ನೂ ನೋಡಿರಿ. ಪಂಚ ಬ್ರಹ್ಮಮಂತ್ರಗಳೆಂದರೆ ಸದ್ಯೋಜಾತಾದಿ ಮಂತ್ರಗಳು. ಹಿಂದೆ ೬.೧೪-೧೯ರ ಟಿಪ್ಪಣಿಯನ್ನು ನೋಡಿರಿ.

ಭಸ್ಮಸ್ನಾನಾದಿಕಮ್

ಮಜ್ಜಯಿತ್ವೇಷ್ಟಲಿಂಗಂ ಚ ಗೃಹೀತ್ವಾ ಭಸಿತಂ ತತಃ।
ಭಸ್ಮಸ್ನಾನಂ ತತಃ ಕುರ್ಯಾತ್ ಸರ್ವದೋಷನಿವೃತ್ತಯೇ ॥ ೧೦ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರ್ವಾಂಗೋದ್ಧೂಲನಂ ಕುರ್ಯಾಚ್ಚುಷ್ಕೇಣ ಸಿತಭಸ್ಮನಾ।
ಸಜಲೇನ ಚ ತೇನಾಥ ಸರ್ವಾಂಗಮವಗುಂಠಯೇತ್ ॥ ೧೧ ॥

ಮೂಲತೋ ಮಂತ್ರಿತೇನಾಥ ಸಜಲೇನೈವ ಭಸ್ಮನಾ।
ಬಿಭೃಯಾಚ್ಚ ತ್ರಿಪುಂಡ್ರಾಣಿ ದ್ವಾತ್ರಿಂಶತ್ ಸ್ಥಾನಕೇಷು ಹಿ ॥ ೧೨ ॥

ಭಸ್ಮಸ್ನಾನ ಮುಂತಾದವು

(ಅನಂತರ ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಆಸನದ ಮೇಲೆ ಕುಳಿತುಕೊಳ್ಳಬೇಕು). ಇಷ್ಟಲಿಂಗಕ್ಕೆ ಜಲಾಭಿಷೇಕ ಮಾಡಿ, ಭಸ್ಮವನ್ನು ತೆಗೆದುಕೊಂಡು ಎಲ್ಲಾ ದೋಷಗಳ ಪರಿಹಾರಕ್ಕಾಗಿ ಭಸ್ಮಸ್ನಾನವನ್ನು ಮಾಡಬೇಕು. (೧೦). ಒಣಗಿದ ಬಿಳಿಯ ಭಸ್ಮದಿಂದ ಎಲ್ಲಾ ಅಂಗಗಳಿಗೆ ಉದ್ಧೂಲನವನ್ನು ಮಾಡಿಕೊಳ್ಳಬೇಕು. ಆನಂತರ ಸಜಲ ಭಸ್ಮದಿಂದ ಎಲ್ಲಾ ಅಂಗಗಳಿಗೆ ಅವಗುಂಠನ ಮಾಡಿಕೊಳ್ಳಬೇಕು (ಹಚ್ಚಿಕೊಳ್ಳಬೇಕು). (೧೧). ಮೂಲಮಂತ್ರವನ್ನು ಜಪಿಸುತ್ತಾ ಸಜಲ ಭಸ್ಮದಿಂದ ಮೂವತ್ತೆರಡು ಸ್ಥಾನಗಳಲ್ಲಿ ತ್ರಿಪುಂಡ್ರಗಳನ್ನು ಧರಿಸಿಕೊಳ್ಳಬೇಕು. (೧೨).

ಟಿಪ್ಪಣಿ : ಕಾರಣಾಗಮ, ಕ್ರಿ.ಪಾ. ೩.೪೧-೪೪, ಮಕುಟಾಗಮ, ಕ್ರಿ.ಪಾ. ೨.೧೨-೧೩ ಇವುಗಳೊಂದಿಗೆ ಹೋಲಿಸಿರಿ. ಇಲ್ಲಿ ಭಸ್ಮಸ್ನಾನದಲ್ಲಿ ಉದ್ಧೂಲನ ಮತ್ತು ಅವಗುಂಠನಗಳನ್ನು ಹೇಳಿದ್ದಾರೆ. ಒಣ ಭಸ್ಮದಿಂದ ತೊಡೆದುಕೊಳ್ಳುವುದು ಉದ್ಧೂಲನ ಮತ್ತು ಸಜಲ ಭಸ್ಮವನ್ನು ಹಚ್ಚಿಕೊಳ್ಳುವುದು ಅವಗುಂಠನ. ನೋಡಿರಿ: ಇದೇ ಚಂದ್ರಜ್ಞಾನಾಗಮ, ಕ್ರಿ.ಪಾ. ೬.೪೧-೪೨. ಅಲ್ಲಿ ಇದಕ್ಕೆ ಸಂಬಂಧಿಸಿದ ಮಂತ್ರಗಳನ್ನೂ ಹೇಳಿದ್ದಾರೆ.

ತ್ರಿಪುಂಡ್ರಧಾರಣಮ್

ಉತ್ತಮಾಂಗೇ ಲಲಾಟೇ ಚ ಕರ್ಣಯೋರ್ನೇತ್ರಯೋರ್ದ್ವಯೋಃ।
ನಾಸಾವಕ್ತ್ರಗಲೇಷ್ವೇವಮ್ ಅಂಸದ್ವಿತಯಕೇ ತಥಾ ॥ ೧೩ ॥

ಕೂರ್ಪರೇ ಮಣಿಬಂಧೇ ಚ ಹೃದಯೇ ಪಾರ್ಶ್ವಯೋರ್ದ್ವಯೋಃ।
ನಾಭೌ ಗುಹ್ಯದ್ವಯೇ ಚೈವ ಊರ್ವೋಃ ಸ್ಫಿಗ್‌ಬಿಂಬಜಾನುಷು ॥ ೧೪ ॥

ಜಂಘಾದ್ವಯೇ ಚ ಪದಯೋರ್ದ್ವಾತ್ರಿಂಶತ್ ಸ್ಥಾನಮುತ್ತಮಮ್।
ಧೃತ್ವಾ ಚೈವ ತ್ರಿಪುಂಡ್ರಾಣಿ ರುದ್ರಾಕ್ಷಾನ್ ಬಿಭೃಯಾತ್ತತಃ ॥ ೧೫ ॥

ತ್ರಿಪುಂಡ್ರಧಾರಣೆ

ಶಿರಸ್ಸಿನಲ್ಲಿ (೧), ಹಣೆಯ ಮೇಲೆ (೨), ಎರಡೂ ಕಿವಿಗಳಲ್ಲಿ (೩-೪), ಎರಡೂ ಕಣ್ಣುಗಳಲ್ಲಿ (೫-೬), ಮೂಗಿನ ಹೊಳ್ಳೆಗಳ ಮೇಲೆ (೭-೮), ಮುಖದ ಮೇಲೆ (೯), ಕತ್ತಿನ ಮೇಲೆ (೧೦), ಎರಡೂ ಭುಜಗಳ ಮೇಲೆ (೧೧-೧೨), ಎರಡೂ ಮೊಣಕೈಗಳ ಮೇಲೆ (೧೩-೧೪), ಎರಡೂ ಮಣಿಕಟ್ಟುಗಳ ಮೇಲೆ (೧೫-೧೬),

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎದೆಯ ಮೇಲೆ (೧೭), ಎರಡೂ ಪಕ್ಕೆಗಳಲ್ಲಿ (೧೮-೧೯), ಹೊಕ್ಕಳ ಮೇಲೆ (೨೦), ಗುದ ಮತ್ತು ಗುಹ್ಯ ಭಾಗಗಳಲ್ಲಿ (೨೧-೨೨), ಎರಡೂ ತೊಡೆಗಳಲ್ಲಿ (೨೩-೨೪), ಎರಡೂ ನಿತಂಬಗಳ ಮೇಲೆ (೨೫-೨೬), ಎರಡೂ ಮೊಣಕಾಲುಗಳಲ್ಲಿ (೨೭-೨೮), ಎರಡೂ ಮೀನಗಂಡಗಳಲ್ಲಿ (೨೯-೩೦) ಮತ್ತು ಎರಡೂ ಪಾದಗಳಲ್ಲಿ (೩೧-೩೨), ಹೀಗೆ ಮೂವತ್ತೆರಡು ಸ್ಥಾನಗಳು ಉತ್ತಮ, ಅವುಗಳಲ್ಲಿ ತ್ರಿಪುಂಡ್ರಗಳನ್ನು ಧರಿಸಿ ಅನಂತರ ರುದ್ರಾಕ್ಷಗಳನ್ನು ಧರಿಸಬೇಕು. (೧೩-೧೫).

ಟಿಪ್ಪಣಿ : ಕಾರಣಾಗಮ, ಕ್ರಿ.ಪಾ. ೩.೪೭-೪೯; ಮಕುಟಾಗಮ, ಕ್ರಿ.ಪಾ. ೨.೧೪-೧೯ನ್ನೂ ನೋಡಿರಿ. ಇದೇ ಚಂದ್ರಜ್ಞಾನಾಗಮ, ಕ್ರಿ.ಪಾ. ೬. ೪೩-೪೭ರಲ್ಲಿ ಈ ಮೂವತ್ತೆರಡು ಸ್ಥಾನಗಳನ್ನು ಹೇಳಿದೆ. ಅಲ್ಲದೆ ಅದೇ ಕ್ರಿ.ಪಾ. ೬. ೪೮-೫೩, ೫೪-೫೭ರಲ್ಲಿ ೧೬ ಸ್ಥಾನಗಳು, ೮ ಸ್ಥಾನಗಳನ್ನು ಮತ್ತು ೫ ಸ್ಥಾನಗಳನ್ನು ಹೇಳಿದೆ. ರುದ್ರಾಕ್ಷಾನ್ ಬಿಭೃಯಾತ್ತತಃ -ಎಂದು ಇಲ್ಲಿ ಹೇಳಿದ್ದರೂ ನಿರೀಕ್ಷೆಯಂತೆ ರುದ್ರಾಕ್ಷ ಧಾರಣೆಯ ವಿವರಗಳು ಇಲ್ಲಿ ಬಂದಿಲ್ಲ. ಆದರೆ ಹಿಂದೆ ಕ್ರಿ.ಪಾ. ೭.೧೮-೨೨ರಲ್ಲಿ ಸ್ಥಾನಗಳು ಮತ್ತು ರುದ್ರಾಕ್ಷಗಳ ಸಂಖ್ಯೆಗಳ ವಿವರಗಳು ಬಂದಿವೆ. ರುದ್ರಾಕ್ಷ ಧಾರಣಕ್ಕೆ ಸಂಬಂಧಿಸಿದಂತೆ ಸ್ಥಾನಗಳು ಮತ್ತು ರುದ್ರಾಕ್ಷ ಸಂಖ್ಯೆಗಳ ವಿವರಗಳನ್ನು ಕಾರಣಾಗಮ, ಕ್ರಿ.ಪಾ. ೩.೫೦-೫೪ ಮತ್ತು ಮಕುಟಾಗಮ, ಕ್ರಿ.ಪಾ. ೨. ೧೭-೨೨ರಲ್ಲಿ ನೋಡಬಹುದು.

ಸಂಧ್ಯೋಪಾಸನಮ್

ಸಂಧ್ಯಾದ್ವಯಮುಪಾಸೀತ ಸಾವಿತ್ರೀಮೂಲಮಂತ್ರಗಮ್।
ಅರ್ಚಾಂ ನಿರ್ವರ್ತಯೇತ್ ಪಶ್ಚಾದರುಣೋದಯಕಾಲಿಕೀಮ್ ॥ ೧೬ ॥

ಜಪಿತ್ವಾಥ ಚ ಸಾವಿತ್ರೀಂ ಪ್ರಸಿದ್ಧಾಂ ಮಂತ್ರಮಾತರಮ್।
ಉಪತಿಷ್ಠೇನ್ಮಹಾದೇವಂ ಭಾನುಮಂಡಲಮಧ್ಯಗಮ್॥
ಷಡಕ್ಷರೀಂ ಜಪೇಚ್ಚಾಪಿ ಸಮಾಹಿತಮನಾ ಯಥಾ ॥ ೧೭ ॥

ಧ್ಯಾಯೇದ್ ದೇವಂ ಚ ದೇವೀಂ ಚ ಪ್ರಾಙ್ಮುಖೋ ವಾಪ್ಯುದಙ್ಮುಖಃ।
ಸ್ವಗುರುಂ ಚ ಪುನರ್ದೇವಂ ತತೋ ನಾಮಾಷ್ಟಕಂ ಜಪೇತ್ ॥ ೧೮ ॥

ಸಂಧ್ಯೋಪಾಸನೆ

ಅನಂತರ ಸಾವಿತ್ರೀ ಮಂತ್ರಗತವಾದ ಮತ್ತು ಮೂಲ (ಪಂಚಾಕ್ಷರ) ಮಂತ್ರಗತವಾದ ಎರಡೂ ಸಂಧ್ಯೋಪಾಸನೆಗಳನ್ನು ಮಾಡಬೇಕು. ಅನಂತರ ಅರುಣೋದಯ ಕಾಲದ ಪೂಜೆಯನ್ನು ನಡೆಸಬೇಕು. (೧೬). ಪ್ರಸಿದ್ಧವಾದ ಮತ್ತು ಮಂತ್ರಗಳ ತಾಯಿಯಾದ ಸಾವಿತ್ರಿಯನ್ನು ಮೊದಲು ಜಪಿಸಿದ ಅನಂತರ ಸೂರ್ಯಮಂಡಲ ಮಧ್ಯಸ್ಥನಾಗಿರುವ ಮಹಾದೇವನನ್ನು ಎದುರುಗೊಂಡು ಏಕಾಗ್ರ ಚಿತ್ತನಾಗಿ ಷಡಕ್ಷರೀ ಮಂತ್ರವನ್ನು ಜಪಿಸಬೇಕು. (೧೭). ಪೂರ್ವಾಭಿಮುಖವಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಥವಾ ಉತ್ತರಾಭಿಮುಖವಾಗಿ ಮಹಾದೇವನನ್ನು ಮತ್ತು ಪಾರ್ವತೀ (ಶಕ್ತಿ) ದೇವಿಯನ್ನು ಕುರಿತು ಧ್ಯಾನಿಸಬೇಕು. ಮತ್ತೆ ಗುರು ಮತ್ತು ಇಷ್ಟದೇವನ ಧ್ಯಾನ ಮಾಡಿ ಶಿವನ ಪ್ರಸಿದ್ಧ ಎಂಟು ನಾಮಗಳನ್ನು ಜಪಿಸಬೇಕು. (೧೮).

ಟಿಪ್ಪಣಿ : ಅಂತಃಕರಣದಲ್ಲಿ ಬೆಳಗುವ ಜ್ಞಾನಸೂರ್ಯನ ಉಪಾಸನೆಯನ್ನು ಮನಃಪೂರ್ವಕವಾಗಿ ಮಾಡುವುದೇ ವೀರಶೈವರ ಸಂಧ್ಯಾವಂದನ- "ಅಂತಃ ಪ್ರಕಾಶ-ಮಾನಸ್ಯ ಸಂವಿತ್‌ಸೂರ್ಯಸ್ಯ ಸಂತತಮ್। ಮನಸಾ ಯದುಪಸ್ಥಾನಂ ತತ್ಸಂಧ್ಯಾ-ವಂದನಂ ವಿದುಃ॥" (ಸುಪ್ರಭೇದಾಗಮ, ೭.೧೦). ಇಲ್ಲಿ ಸಾವಿತ್ರೀ ಮಂತ್ರ ಮತ್ತು ಪಂಚಾಕ್ಷರೀ (ಷಡಕ್ಷರೀ) ಮಂತ್ರಗಳೆರಡರಿಂದಲೂ ಸಂಧ್ಯೋಪಾಸನೆಯನ್ನು ಮಾಡುವ ವಿಧಾನವನ್ನು ಹೇಳಿದ್ದಾರೆ. 'ಸಾವಿತ್ರೀ' ಎಂಬ ಹೆಸರು ಆ ಮಂತ್ರಕ್ಕೆ ದೇವತೆಯ ದೃಷ್ಟಿಯಿಂದ, ಏಕೆಂದರೆ ಆ ಮಂತ್ರದ ದೇವತೆ ಸವಿತೃ. ಅದಕ್ಕೆ ಛಂದಸ್ಸಿನ ದೃಷ್ಟಿಯಿಂದ ಗಾಯತ್ರೀ ಮಂತ್ರವೆಂದು ಪ್ರಸಿದ್ಧ ಹೆಸರು, ಏಕೆಂದರೆ ಆ ಮಂತ್ರದ ಛಂದಸ್ಸು ಗಾಯತ್ರಿ. ಆ ಮಂತ್ರ ಹೀಗಿದೆ: "ತತ್ಸವಿತುರ್ವರೇಣ್ಯಂ, ಭರ್ಗೋದೇವಸ್ಯ ಧೀಮಹಿ। ಧಿಯೋ ಯೋ ನಃ ಪ್ರಚೋದಯಾತ್॥" (ಋಗ್ವೇದ, ೩.೬೨.೧೦). ಅದರ ಅರ್ಥ-ತತ್= ವೇದಾಗಮಗಳಲ್ಲಿ ಉಕ್ತವಾದ ಆ ಪರಶಿವ ಬ್ರಹ್ಮ ಸವಿತುಃ=ಸವಿತೃವಿನ (ಸೂರ್ಯನ), ವರೇಣ್ಯಂ=ವಂದನೀಯನು; ಭರ್ಗಃ=ತೇಜಸ್ಸು, ದೇವಸ್ಯ=ದೇವತೆಯ, ಧೀಮಹಿ= ಧ್ಯಾನಿಸುತ್ತೇವೆ; ಧಿಯಃ=ಬುದ್ಧಿಯನ್ನು, ಯಃ=ಯಾವ ದಿವ್ಯ ಪ್ರಕಾಶವು, ನಃ=ನಮ್ಮನ್ನು, ಪ್ರಚೋದಯಾತ್=(ಪರಮಪದದತ್ತ) ಪ್ರೇರೇಪಿಸಲಿ. ಈ ಉಭಯಾತ್ಮಕವಾದ ಸಂಧ್ಯೋಪಾಸನೆಯು ಶಿವನ ಸಂಧ್ಯೋಪಾಸನೆಯೇ ಹೊರತು ಬೇರೆಯಲ್ಲ, ಏಕೆಂದರೆ ಸವಿತೃ (ಸೂರ್ಯ) ಮಂಡಲದ ಸ್ವಾಮಿಯಾದ ಸಾವಿತ್ರೀ ದೇವತೆಯು ಶಿವನೇ- "ಮದೀಯ ಸಾಂಧ್ಯಕೋಪಾಸ್ತಿಃ ಸಂಧ್ಯೋಪಾಸ್ತಿಃ ಪ್ರಕೀರ್ತಿತಾ। ಸವಿತುರ್ಮಂಡಲ ಸ್ವಾಮೀ ಸಾವಿತ್ರೀ ದೇವತಾಽಸ್ಮ್ಯಹಮ್॥" (ಕಾರಣಾಗಮ, ಕ್ರಿ.ಪಾ. ೩.೫೫). "ಉಪತಿಷ್ಠೇಚ್ಚ ಸವಿತುರಂತರಂ ಮಾಮನನ್ಯಧೀಃ॥" (ಅದೇ, ೩.೬೦). "ಉಪತಿಷ್ಠೇನ್ ಮಹಾದೇವೀಂ ಭಾನುಮಂಡಲಮಧ್ಯಗಮ್" ಎಂಬ ಇಲ್ಲಿನ ಮಾತು ಇದನ್ನೇ ಹೇಳುತ್ತದೆ. ನಾಮಾಷ್ಟಕಮ್-ಭವ, ಶರ್ವ, ಮೃಡ, ರುದ್ರ, ಹರ, ಶಂಭು, ಮಹೇಶ್ವರ ಮತ್ತು ಶಿವ. ಮುಂದೆ ಬರುವ ಶ್ಲೋಕದಲ್ಲಿ ಎಂಟು ನಾಮಗಳನ್ನು ಕೊಟ್ಟಿದ್ದಾರೆ. ಶಿವ, ಮಹೇಶ್ವರ, ಶಂಭು, ರುದ್ರ -ಇವು ನಾಲ್ಕು ಸಮಾನವಾಗಿವೆ. ಭವ, ಶರ್ವ, ಮೃಡ ಮತ್ತು ಹರ ಎಂಬ ಹೆಸರುಗಳಿಗೆ ಬದಲಾಗಿ ಉಮಾಪತಿ, ಸಂಸಾರ ವೈದ್ಯ, ಸರ್ವಜ್ಞ ಮತ್ತು ಪರಮಾತ್ಮ ಎಂಬ ಹೆಸರುಗಳಿವೆ.

ಶಿವನಾಮಾಷ್ಟಕಮ್

ಶಿವೋ ಮಹೇಶ್ವರಶ್ಚೈವ ರುದ್ರಃ ಶಂಭುರುಮಾಪತಿಃ।
ಸಂಸಾರವೈದ್ಯಃ ಸರ್ವಜ್ಞಃ ಪರಮಾತ್ಮೇತಿ ಚಾಷ್ಟಕಮ್ ॥ ೧೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಶ್ಚಾತ್ ಕರೌ ಚ ಪ್ರಕ್ಷಾಲ್ಯ ಕೃತ್ವಾ ಚಂದನಚರ್ಚಿತೌ।
ಕರನ್ಯಾಸಂ ಪ್ರಕುರ್ವೀತ ಕರಶುದ್ಧಿಪುರಸ್ಸರಮ್ ॥ ೨೦ ॥

ಶಿವನ ಎಂಟು ನಾಮಗಳು

ಶಿವ, ಮಹೇಶ್ವರ, ರುದ್ರ, ಶಂಭು, ಉಮಾಪತಿ, ಸಂಸಾರವೈದ್ಯ, ಸರ್ವಜ್ಞ ಮತ್ತು ಪರಮಾತ್ಮ -ಇವು ಎಂಟು ಹೆಸರುಗಳು. (೧೯). ಅನಂತರ ಹಸ್ತಗಳನ್ನು ತೊಳೆದುಕೊಂಡು ಅವುಗಳಿಗೆ ಚಂದನವನ್ನು ಹಚ್ಚಿಕೊಂಡು ಕರಶುದ್ಧಿ ಪೂರ್ವಕವಾಗಿ ಕರನ್ಯಾಸವನ್ನು ಮಾಡಬೇಕು. (೨೦).

ಕರನ್ಯಾಸಾದಿಕಮ್

ಸ್ಥಿತ್ಯುತ್ಪತ್ತಿಲಯಾಭಿಖ್ಯಃ ಕರನ್ಯಾಸಸ್ತ್ರಿಧಾ ಮತಃ।
ಗೃಹಸ್ಥಾನಾಂ ಸ್ಥಿತಿನ್ಯಾಸ ಉತ್ಪತ್ತಿರ್ಬ್ರಹ್ಮಚಾರಿಣಾಮ್॥
ಯತೀನಾಂ ಚ ವನಸ್ಥಾನಾಂ ಸಂಹೃತಿನ್ಯಾಸ ಇಷ್ಯತೇ ॥ ೨೧ ॥

ವಿಭರ್ತೃಕಾಯಾಶ್ಚ ತಥಾ ಸಂಹಾರನ್ಯಾಸ ಉಚ್ಯತೇ।
ಉತ್ಪತ್ತಿರುಕ್ತಃ ಕನ್ಯಾಯಾಃ ಸುವಾಸಿನ್ಯಾಃ ಸ್ಥಿತಿರ್ಭವೇತ್ ॥ ೨೨ ॥

ಅಂಗುಷ್ಠಾದಿಕನಿಷ್ಠಾಂತಂ ಸ್ಥಿತಿನ್ಯಾಸ ಇತಿ ಸ್ಮೃತಃ।
ದಕ್ಷಿಣಾಂಗುಷ್ಠಮಾರಭ್ಯ ವಾಮಾಂಗುಷ್ಠಾಂತಮೇವ ಚ ॥
ಉತ್ಪತ್ತಿನ್ಯಾಸ ಆಖ್ಯಾತೋ ವಿಪರೀತಸ್ತು ಸಂಹೃತಿಃ ॥ ೨೩ ॥

ವರ್ಣಾನನುಕ್ರಮಾನ್ನ್ಯಸ್ಯೇನ್ನಕಾರಾದೀನ್ ಸಬಿಂದುಕಾನ್।
ಅಂಗುಲೀಷು ಶಿವಂ ನ್ಯಸ್ಯ ತಲಯೋರಪಿ ಪೃಷ್ಠಯೋಃ॥
ಅಸ್ತ್ರನ್ಯಾಸಂ ತತಃ ಕುರ್ಯಾದ್ ದಶದಿಕ್ಷ್ವಸ್ತ್ರಮಂತ್ರತಃ ॥ ೨೪ ॥

ಕರನ್ಯಾಸ ಮುಂತಾದವು

ಇಲ್ಲಿ ಕರನ್ಯಾಸವು ಸ್ಥಿತಿ, ಉತ್ಪತ್ತಿ (ಸೃಷ್ಟಿ) ಮತ್ತು ಲಯ (ಸಂಹಾರ)ವೆಂಬ ಹೆಸರುಗಳಿಂದ ಮೂರು ವಿಧವಾಗಿದೆ. ಗೃಹಸ್ಥರಿಗೆ ಸ್ಥಿತಿನ್ಯಾಸ, ಬ್ರಹ್ಮಚಾರಿಗಳಿಗೆ ಉತ್ಪತ್ತಿ (ಸೃಷ್ಟಿ) ನ್ಯಾಸ ಮತ್ತು ಯತಿ (ಸಂನ್ಯಾಸಿ) ಹಾಗೂ ವನಸ್ಥ (ವಾನಪ್ರಸ್ಥ)ರಿಗೆ ಸಂಹೃತಿ (ಲಯ ಅಥವಾ ಸಂಹಾರ) ನ್ಯಾಸ. ಹಾಗೆಯೇ ವಿಧವೆಯರಿಗೆ ಸಂಹಾರನ್ಯಾಸವು ಹೇಳಲ್ಪಟ್ಟಿದೆ. ಕನ್ಯೆಯರಿಗೆ ಉತ್ಪತ್ತಿ ನ್ಯಾಸ (ಸೃಷ್ಟಿನ್ಯಾಸ) ಮತ್ತು ಮುತ್ತೈದೆಯರಿಗೆ ಸ್ಥಿತಿನ್ಯಾಸ ವಿಹಿತವಾಗಿವೆ.(೨೧-೨೨). ಅಂಗುಷ್ಠದಿಂದ ಆರಂಭಿಸಿ ಕನಿಷ್ಠದವರೆಗೆ ಸ್ಥಿತಿನ್ಯಾಸವೆಂದು ಮಾನ್ಯವಾಗಿದೆ. ಬಲದ ಅಂಗುಷ್ಠದಿಂದ ಆರಂಭಿಸಿ ಎಡದ ಅಂಗುಷ್ಠದವರೆಗೆ ಉತ್ಪತ್ತಿ (ಸೃಷ್ಟಿ)ನ್ಯಾಸವೆಂದು ಕರೆಯಲ್ಪಟ್ಟಿದೆ. ಇದಕ್ಕೆ ವಿಪರೀತವಾದುದು (ಅಂದರೆ ಎಡದ ಅಂಗುಷ್ಠದಿಂದ ಆರಂಭಿಸಿ ಬಲದ ಅಂಗುಷ್ಠದವರೆಗೆ) ಸಂಹಾರನ್ಯಾಸ (ಲಯನ್ಯಾಸ). (೨೩). ನಮಃ ಶಿವಾಯ ಎಂಬ ಐದು ವರ್ಣಗಳನ್ನು ಬಿಂದುವಿನೊಂದಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(ಅನುಸ್ವಾರದೊಂದಿಗೆ) ಉಚ್ಚರಿಸುತ್ತಾ ಕ್ರಮವಾಗಿ ಅಂಗುಷ್ಠದಿಂದ ಕನಿಷ್ಠದವರೆಗೆ ಐದು ಕೈಬೆರಳುಗಳು ನ್ಯಾಸ ಮಾಡಬೇಕು. ಕರತಲ (ಹಸ್ತ) ಮತ್ತು ಕರಪೃಷ್ಠ (ಹಸ್ತದ ಹಿಂಬಾಗ)ಗಳಲ್ಲಿ ಶಿವನನ್ನು ನ್ಯಾಸ ಮಾಡಬೇಕು. ಇದರ ಅನಂತರ ಹತ್ತು ದಿಕ್ಕುಗಳಲ್ಲಿ ಅಸ್ತ್ರ ಮಂತ್ರದಿಂದ ಅಸ್ತ್ರನ್ಯಾಸವನ್ನು ಮಾಡಬೇಕು. (೨೪).

ಟಿಪ್ಪಣಿ : ಇಲ್ಲಿ ಹೇಳಿದ ಪ್ರಕಾರ ಕರನ್ಯಾಸದ ಪದ್ಧತಿ ಹೀಗಿರಬೇಕು ಎನಿಸುತ್ತದೆ-

ಸ್ಥಿತಿಕರನ್ಯಾಸಃ

ನಂ ಅಂಗುಷ್ಠಾಭ್ಯಾಂ ನಮಃ। ಮಂ ತರ್ಜನೀಭ್ಯಾಂ ನಮಃ।
ಶಿಂ ಮಧ್ಯಮಾಭ್ಯಾಂ ನಮಃ। ವಾಂ ಅನಾಮಿಕಾಭ್ಯಾಂ ನಮಃ।
ಯಂ ಕನಿಷ್ಠಿಕಾಭ್ಯಾಂ ನಮಃ।
ಶಿವಂ ಕರತಲಕರಪೃಷ್ಠಾಭ್ಯಾಂ ನಮಃ॥

ಸೃಷ್ಟಿ (ಉತ್ಪತ್ತಿ) ಕರನ್ಯಾಸಃ

ನಂ ದಕ್ಷಿಣಾಂಗುಷ್ಠಾಯ ನಮಃ। ಮಂ ದಕ್ಷಿಣತರ್ಜನ್ಯೈ ನಮಃ।
ಶಿಂ ದಕ್ಷಿಣ ಮಧ್ಯಮಾಯೈ ನಮಃ। ವಾಂ ದಕ್ಷಿಣಾನಾಮಿಕಾಯೈ ನಮಃ।
ಯಂ ದಕ್ಷಿಣಕನಿಷ್ಠಿಕಾಯೈ ನಮಃ।
ಯಂ ವಾಮಕನಿಷ್ಠಿಕಾಯೈ ನಮಃ। ವಾಂ ವಾಮಾನಾಮಿಕಾಯೈ ನಮಃ।
ಶಿಂ ವಾಮಮಧ್ಯಮಾಯೈ ನಮಃ । ಮಂ ವಾಮತರ್ಜನ್ಯೈ ನಮಃ।
ನಂ ವಾಮಾಂಗುಷ್ಠಾಯ ನಮಃ।
ಶಿವಂ ಕರತಲಕರಪೃಷ್ಠಾಭ್ಯಾಂ ನಮಃ॥

ಸಂಹಾರಕರನ್ಯಾಸಃ

ನಂ ವಾಮಾಂಗುಷ್ಠಾಯ ನಮಃ । ಮಂ ವಾಮತರ್ಜನ್ಯೈ। ನಮಃ।
ಶಿಂ ವಾಮಮಧ್ಯಮಾಯೈ ನಮಃ। ವಾಂ ವಾಮಾನಾಮಿಕಾಯೈ ನಮಃ।
ಯಂ ವಾಮಕನಿಷ್ಠಿಕಾಯೈ ನಮಃ।
ಯಂ ದಕ್ಷಿಣಕನಿಷ್ಠಿಕಾಯೈ ನಮಃ। ವಾಂ ದಕ್ಷಿಣಾನಾಮಿಕಾಯೈ ನಮಃ।
ಶಿಂ ದಕ್ಷಿಣಮಧ್ಯಮಾಯೈ ನಮಃ। ಮಂ ದಕ್ಷಿಣತರ್ಜನ್ಯೈ ನಮಃ।
ನಂ ದಕ್ಷಿಣಾಂಗುಷ್ಠಾಯ ನಮಃ।
ಶಿವಂ ಕರತಲಕರಪೃಷ್ಠಾಭ್ಯಾಂ ನಮಃ॥

(ನ್ಯಾಸಗಳ ಬೇರೆ ರೀತಿಯ ವಿವರಗಳಿಗೆ ಪರಿಶಿಷ್ಟ-೧ನ್ನು ನೋಡಿರಿ). ಇಲ್ಲಿ ಆರು ಅಸ್ತ್ರಗಳು ಮತ್ತು ಅವುಗಳ ಮಂತ್ರಗಳು ಹೀಗಿವೆ ೧. ಶಿವಾಸ್ತ್ರ-ಮಂತ್ರ-'ಓಂ ಶಿವಾಸ್ತ್ರಾಯ ಫಟ್', ೨. ಪಾಶುಪತಾಸ್ತ್ರ-ಮಂತ್ರ-'ಓಂ ಶ್ರೀಂ ಪಶು ಹುಂ ಫಟ್',

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩. ಬ್ರಹ್ಮಾಸ್ತ್ರ ಮಂತ್ರ- 'ಓಂ ಬ್ರಹ್ಮಾಸ್ತ್ರಾಯ ಫಟ್', ೪. ಕ್ಷುರಿಕಾಸ್ತ್ರ- 'ಓಂ ಕ್ಷುರಿಕಾಸ್ತ್ರಾಯ ಫಟ್' ೫. ವ್ಯೋಮಾಸ್ತ್ರ-ಮಂತ್ರ-'ಓಂ ಮಾಂ ಮೀಂ ಮೂಂ ವ್ಯೋಮವ್ಯಾಪಿನೇ ಓಂ' ಮತ್ತು ೬. ಅಘೋರಾಸ್ತ್ರ-ಮಂತ್ರ-'ಓಂ ಹ್ರಾಂ ಹ್ರೀಂ ಪ್ರಸ್ಫುರ-ಸ್ಫುರ ಘೋರ ಘೋರತರ ತನುರೂಪ ಚಟ ಚಟ ಪ್ರಚಟ ಪ್ರಚಟ ಕಹ ಕಹಮ ಮಮ ಘಾತಯ ಘಾತಯ ಹುಂ ಫಟ್ ಸ್ವಾಹಾ' (ವಾತುಲಶುದ್ಧಾಗ್ಗಮ, ಅ.೪೧-೫೦).

ನಿವೃತ್ತ್ಯಾದಿಕಲಾಧ್ಯಾನಮ್

ಪಂಚಭೂತಾತ್ಮಿಕಾಃ ಪಂಚ ನಿವೃತ್ತ್ಯಾದಿಕಲಾಃ ಪುನಃ।
ತತ್ತಚ್ಚಿಹ್ನಯುತಾಃ ಸಮ್ಯಕ್ ಪಂಚಭೂತಾಧಿಪೈಃ ಸಹ ॥ ೨೫ ॥

ಹೃತ್ಕಂಠತಾಲುಭ್ರೂಮಧ್ಯಬ್ರಹ್ಮರಂಧ್ರೇಷು ಭಾವಯೇತ್।
ವಿದ್ಯಾಂ ಪಂಚಾಕ್ಷರೀಂ ತಾಸಾಂ ಶೋಧನಾರ್ಥಾಯ ಸಂಜಪೇತ್ ॥ ೨೬ ॥

ನಿವೃತ್ತಿ ಮುಂತಾದ ಕಲೆಗಳ ಧ್ಯಾನ

ಪೃಥಿವಿ, ಅಪ್, ತೇಜಸ್, ವಾಯು ಮತ್ತು ಆಕಾಶಗಳೆಂಬ ಪಂಚಭೂತ ಸ್ವರೂಪಿಗಳಾದ ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ ಮತ್ತು ಶಾಂತ್ಯಾತೀತಾ ಎಂಬ ಐದು ಕಲೆಗಳನ್ನು ಆಯಾಯ ಚಿಹ್ನೆಗಳೊಂದಿಗೆ ಮತ್ತು ಪಂಚಭೂತಗಳ ಅಧಿಪತಿಗಳೊಂದಿಗೆ ಹೃದಯ, ಕಂಠ, ತಾಲು, ಭ್ರೂಮಧ್ಯ ಮತ್ತು ಬ್ರಹ್ಮರಂಧ್ರಗಳಲ್ಲಿ ಧ್ಯಾನಿಸಬೇಕು (ಭಾವಿಸಿಕೊಳ್ಳಬೇಕು). ಆ ಕಲೆಗಳ ಶೋಧನೆಗಾಗಿ ಪಂಚಾಕ್ಷರೀ ವಿದ್ಯೆಯನ್ನು (ಮಂತ್ರವನ್ನು) ಜಪಿಸಬೇಕು.

ಟಿಪ್ಪಣಿ : ನಿವೃತ್ತ್ಯಾದಿ ಕಲೆಗಳ ಚಿಹ್ನೆಗಳು ಯಾವುವು? ಈ ಪ್ರಶ್ನೆಗೆ ಉತ್ತರವನ್ನು ಹುಡುಕಬೇಕಾಗಿದೆ. ಪಂಚಭೂತಗಳ ಅಧಿಪತಿಗಳೆಂದರೆ ಪೃಥಿವಿಗೆ ವಿಘ್ನೇಶ್ವರ, ಅಪ್‌ಗೆ ಚತುರ್ಮುಖ ಬ್ರಹ್ಮ, ತೇಜಸ್ಸಿಗೆ ವಿಷ್ಣು, ವಾಯುವಿಗೆ ರುದ್ರ ಮತ್ತು ಆಕಾಶಕ್ಕೆ ಪಂಚಮುಖ ಪರಶಿವ.

ವಿದ್ಯಾಮಯೋ ದೇಹಃ ಸಂಪಾದನೀಯಃ

ಪ್ರಾಣವಾಯುಂ ನಿರುದ್ಧ್ಯಾಥ ಗುಣಸಂಖ್ಯಾನುಸಾರತಃ।
ಭೂತಗ್ರಂಥಿಂ ತತಶ್ಛಿಂದ್ಯಾದಸ್ತ್ರೇಣೈವಾಸ್ತ್ರಮುದ್ರಯಾ ॥ ೨೭ ॥

ನಾಡ್ಯಾ ಸುಷುಮ್ನಯಾಽಽತ್ಮಾನಂ ಪ್ರೇರಿತಂ ಪ್ರಾಣವಾಯುನಾ।
ನಿರ್ಗತಂ ಬ್ರಹ್ಮರಂಧ್ರೇಣ ಯೋಜಯೇಚ್ಛಿವತೇಜಸಾ॥
ವಾಯುನಾ ಚ ವಿಶೋಷ್ಯೈವ ದೇಹಂ ಕಾಲಾಗ್ನಿನಾ ದಹೇತ್ ॥ ೨೮ ॥

ಅಮೃತಪ್ಲಾವನಂ ಕೃತ್ವಾ ಭಸ್ಮೀಭೂತಸ್ಯ ತಸ್ಯ ವೈ।
ತತೋ ವಿದ್ಯಾಮಯಂ ದೇಹಂ ಸಂಭೂತಮಿತಿ ಭಾವಯೇತ್ ॥ ೨೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತತೋ ವಿದ್ಯಾಮಯೇ ತಸ್ಮಿನ್ ದೇಹೇ ದೀಪಶಿಖಾಕೃತಿಮ್।
ಶಿವಾನ್ನಿರ್ಗತಮಾತ್ಮಾನಂ ಬ್ರಹ್ಮರಂಧ್ರೇಣ ಯೋಜಯೇತ್ ॥ ೩೦ ॥

ಅಂತರ್ದೇಹಂ ಪ್ರವಿಷ್ಟಂ ತಂ ಧ್ಯಾತ್ವಾ ಹೃದಯಪಂಕಜೇ।
ಪುನಶ್ಚಾಮೃತವರ್ಷೇಣ ಸಿಂಚೇದ್ವಿದ್ಯಾಮಯಂ ವಪುಃ ॥ ೩೧ ॥

ಪುನಃ ಕುರ್ಯಾತ್ ಕರನ್ಯಾಸಂ ಕರಶುದ್ಧಿಪುರಸ್ಸರಮ್।
ದೇಹನ್ಯಾಸಂ ತತಃ ಕುರ್ಯಾದಂಗನ್ಯಾಸಂ ಯಥಾವಿಧಿ ॥ ೩೨ ॥

ವರ್ಣನ್ಯಾಸಂ ತತಃ ಕುರ್ಯಾದ್ಧಸ್ತಪಾದಾದಿಸಂಧಿಷು।
ಷಡಂಗಾನಿ ತತೋ ನ್ಯಸ್ಯ ದಿಗ್ಬಂಧಂ ಚ ತದಾಚರೇತ್ ॥ ೩೩ ॥

ಏವಂ ಸಮಾಸರೂಪೇಣ ಕೃತ್ವಾ ದೇಹಾತ್ಮಶೋಧನಮ್।
ಶಿವಭಾವಮುಪಾಗಮ್ಯ ಶೈವಪಂಚಾಕ್ಷರಂ ಜಪೇತ್ ॥ ೩೪ ॥

ದೇಹವನ್ನು ವಿದ್ಯಾಮಯವಾಗಿಸಿಕೊಳ್ಳಬೇಕು

(ಪ್ರಾಣಾಯಾಮದ ಮೂಲಕ) ಪ್ರಾಣವಾಯುವನ್ನು ನಿರುದ್ಧಗೊಳಿಸಿ ಗುಣಗಳ ಸಂಖ್ಯೆಗೆ ಅನುಸಾರವಾಗಿ ಅಸ್ತ್ರಮಂತ್ರದ ಜಪವನ್ನು ಮಾಡುತ್ತಾ ಮತ್ತು ಅಸ್ತ್ರ ಮುದ್ರೆಗಳನ್ನು ಪ್ರದರ್ಶಿಸುತ್ತಾ (ಪಂಚ) ಭೂತಗಳ ಗ್ರಂಥಿಗಳನ್ನು ಭೇದಿಸಬೇಕು. (೨೭). ಪ್ರಾಣವಾಯುವಿನ ಮೂಲಕ ಪ್ರೇರಿತವಾದ ತನ್ನ ಆತ್ಮವನ್ನು ಸುಷುಮ್ನಾ ನಾಡಿಯ ಸಹಾಯದಿಂದ ಬ್ರಹ್ಮರಂಧ್ರದಿಂದ ಹೊರಗೆ ತಂದು ಶಿವನ ತೇಜಸ್ಸಿನೊಂದಿಗೆ ಸಂಯೋಜಿಸಬೇಕು. ಅಲ್ಲಿ ತನ್ನ (ಪಾಪಮಯ) ಶರೀರವನ್ನು ವಾಯುವಿನಿಂದ ಒಣಗಿಸಿ ಕಾಲಾಗ್ನಿಯಿಂದ ಅದನ್ನು ಭಸ್ಮವಾಗಿಸಿದಂತೆ ಭಾವಿಸಬೇಕು. (೨೮). ಅನಂತರ (ಕಾಲಾಗ್ನಿಯಿಂದ) ಭಸ್ಮೀಭೂತವಾದ ಆ ಭೌತಿಕ ಶರೀರವನ್ನು ಅಮೃತದಿಂದ ಆಪ್ಯಾಯಿತಗೊಳಿಸಿ (ತೋಯಿಸಿ) ಅದರಿಂದ ವಿದ್ಯಾಮಯವಾದ ಶರೀರವು ಪ್ರಾಪ್ತವಾದಂತೆ ಭಾವಿಸಬೇಕು. (೨೯). ಶಿವನಿಂದ ಹೊಮ್ಮಿದ್ದ ದೀಪದ ಶಿಖೆಯಂತೆ ಹೊಳೆಯುವ ಆತ್ಮವನ್ನು ಬ್ರಹ್ಮರಂಧ್ರದ ಮೂಲಕ ಪ್ರವೇಶಿಸುವಂತೆ ಮಾಡಿ ಆ ವಿದ್ಯಾಮಯ ಶರೀರದಲ್ಲಿ ಯೋಜಿಸಬೇಕು. (೩೦). ತನ್ನ ದೇಹವನ್ನು ಪ್ರವೇಶಿಸಿದ (ಶಿವತೇಜಾಂಶವಾದ) ಆತ್ಮವನ್ನು ಹೃದಯ ಕಮಲದಲ್ಲಿ ಧ್ಯಾನಿಸಬೇಕು. ಮತ್ತೆ ಆ ವಿದ್ಯಾಮಯ ಶರೀರವನ್ನು ಅಮೃತವರ್ಷದಿಂದ ಆಪ್ಯಾಯಿತಗೊಳಿಸಬೇಕು. (೩೧). ಮತ್ತೆ ಕರಶುದ್ಧಿಪೂರ್ವಕವಾಗಿ ಕರನ್ಯಾಸವನ್ನು ಮಾಡಬೇಕು. ಅನಂತರ ದೇಹನ್ಯಾಸವನ್ನು, ವಿಧಿಯಂತೆ ಅಂಗನ್ಯಾಸವನ್ನು ಮಾಡಬೇಕು. (೩೨). ಆ ಬಳಿಕ ವರ್ಣನ್ಯಾಸವನ್ನು ಹಸ್ತ, ಪಾದ ಮುಂತಾದವುಗಳ ಸಂಧಿಗಳಲ್ಲಿ (ಕೀಲುಗಳಲ್ಲಿ) ಮಾಡಬೇಕು. ಮತ್ತೆ ಷಡಂಗನ್ಯಾಸವನ್ನು ಮಾಡಿ ದಿಗ್ಬಂಧನವನ್ನು ಮಾಡಬೇಕು. (೩೩). ಹೀಗೆ ಸಂಕ್ಷಿಪ್ತವಾಗಿ ದೇಹ ಮತ್ತು ಆತ್ಮಗಳನ್ನು ಶುದ್ಧಗೊಳಿಸಿ ಶಿವಭಾವವನ್ನು ಹೊಂದಿ ಶೈವ ಪಂಚಾಕ್ಷರ ಮಂತ್ರವನ್ನು ಜಪಿಸಬೇಕು. (೩೪).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಹಿಂದೆ ೮.೫೨-೫೫ರಲ್ಲಿ ಈ ಪ್ರಕ್ರಿಯೆಯ ವರ್ಣನೆಯಿದೆ. ಅಲ್ಲಿ ಕೊಟ್ಟಿರುವ ಟಿಪ್ಪಣಿಯನ್ನು ನೋಡಿರಿ. ಕರನ್ಯಾಸ, ದೇಹನ್ಯಾಸ ಮತ್ತು ಅಂಗನ್ಯಾಸಗಳ ವಿಧಿಯನ್ನು ಪರಿಶಿಷ್ಟ-೧ರಿಂದ ತಿಳಿದುಕೊಳ್ಳಬಹುದು. ವರ್ಣನ್ಯಾಸದ (ಅಂದರೆ ಮಾತೃಕಾಕ್ಷರನ್ಯಾಸ ಅಥವಾ ಮಾತೃಕಾನ್ಯಾಸದ) ವಿಧಿಯನ್ನು ವೀರಶೈವಾಚಾರ ಪ್ರದೀಪಿಕೆಯಲ್ಲಿ ಹೀಗೆ ಹೇಳಲಾಗಿದೆ. ಅಕಾರ ಮತ್ತು ಆಕಾರಗಳನ್ನು ಶಿರಸ್ಸಿನಲ್ಲಿ ಮತ್ತು ಹಣೆಯಲ್ಲಿ, ಇಕಾರ ಮತ್ತು ಈಕಾರಗಳನ್ನು ಬಲ ಮತ್ತು ಎಡ ಕಣ್ಣುಗಳಲ್ಲಿ, ಉಕಾರ ಮತ್ತು ಊಕಾರಗಳನ್ನು ಬಲ ಮತ್ತು ಎಡಗಿವಿಗಳಲ್ಲಿ, ಋಕಾರ ಮತ್ತು ೠಕಾರಗಳನ್ನು ಬಲ ಮತ್ತು ಎಡ ಕಪೋಲಗಳಲ್ಲಿ, ಲೃಕಾರ ಲೄಕಾರಗಳನ್ನು ಮೂಗಿನ ಬಲ ಮತ್ತು ಎಡ ಹೊಳ್ಳೆಗಳಲ್ಲಿ, ಏಕಾರ ಮತ್ತು ಐಕಾರಗಳನ್ನು ಮೇಲಿನ ಮತ್ತು ಕೆಳಗಿನ ತುಟಿಗಳಲ್ಲಿ, ಓಕಾರ ಮತ್ತು ಔಕಾರಗಳನ್ನು ಮೇಲಿನ ಮತ್ತು ಕೆಳಗಿನ ದಂತ ಪಂಕ್ತಿಗಳಲ್ಲಿ, ಅಂ ಮತ್ತು ಅಃಗಳನ್ನು ತಾಲುಗಳಲ್ಲಿ, ಕಕಾರದಿಂದ ಙಕಾರದವರೆಗಿನ ಐದು ಅಕ್ಷರಗಳನ್ನು ಬಲಹಸ್ತದ ಐದು ಬೆರಳುಗಳಲ್ಲಿ, ಚಕಾರದಿಂದ ಞಕಾರದವರೆಗಿನ ಐದು ಅಕ್ಷರಗಳನ್ನು ಎಡಹಸ್ತದ ಐದು ಬೆರಳುಗಳಲ್ಲಿ, ಟಕಾರದಿಂದ ಣಕಾರದವರೆಗಿನ ಐದು ಅಕ್ಷರಗಳನ್ನು ಬಲಪಾದದ ಐದು ಬೆರಳುಗಳಲ್ಲಿ, ತಕಾರದಿಂದ ನಕಾರದವರೆಗಿನ ಐದು ಅಕ್ಷರಗಳನ್ನು ಎಡಪಾದದ ಐದು ಬೆರಳುಗಳಲ್ಲಿ, ಪಕಾರವನ್ನು ಉದರದಲ್ಲಿ, ಫಕಾರ ಮತ್ತು ಭಕಾರಗಳನ್ನು ಬಲ ಮತ್ತು ಎಡಪಕ್ಕೆಗಳಲ್ಲಿ, ಭಕಾರವನ್ನು ಹೆಗಲಿನಲ್ಲಿ, ಮಕಾರವನ್ನು ಹೃದಯದಲ್ಲಿ, ಯಕಾರದಿಂದ ಸಕಾರದವರೆಗಿನ ಏಳು ಅಕ್ಷರಗಳನ್ನು ತ್ವಕ್ (ಚರ್ಮ) ಮುಂತಾದ ಏಳು ಧಾತುಗಳಲ್ಲಿ (ಇನ್ನೊಂದು ಮೂಲದ ಪ್ರಕಾರ ರಸ, ರುಧಿರ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜ ಮತ್ತು ಶುಕ್ಲ ಎಂಬವು ಸಪ್ತಧಾತುಗಳು, ಅವುಗಳಲ್ಲಿ), ಹಕಾರವನ್ನು ಆತ್ಮದಲ್ಲಿ ಮತ್ತು ಕ್ಷಕಾರವನ್ನು ಜನ್ಮಾದಿರಿಪುವಿಷಯಕ ಕ್ರೋಧದಲ್ಲಿ ನ್ಯಾಸ ಮಾಡಬೇಕು. ಈ ಪ್ರಕಾರವಾಗಿ ಲಿಂಗಮಧ್ಯದಲ್ಲಿ ಈ ಮಾತೃಕಾಕ್ಷರಗಳನ್ನು ಸ್ಮರಿಸಿಕೊಳ್ಳಬೇಕು. (ಪು.೫೬-೫೭). ಅಲ್ಲಿಯೇ ಷಡಂಗನ್ಯಾಸದ ಕ್ರಮವು ಹೀಗಿದೆ- ಓಂ ಹ್ರಾಂ ಹೃದಯಾಯ ನಮಃ। ಓಂ ನಂ ಹ್ರೀಂ ಶಿರಸೇ ಸ್ವಾಹಾ। ಓಂ ಮಂ ಹ್ರೂಂ ಶಿಖಾಯೈ ವಷಟ್ । ಓಂ ಶಿಂ ಹ್ರೈಂ ಕವಚಾಯ ಹುಮ್। ಓಂ ವಾಂ ಹ್ರೌಂ ನೇತ್ರತ್ರಯಾಯ ವೌಷಟ್। ಓಂ ಯಂ ಹ್ರಃ ಅಸ್ತ್ರಾಯ ಫಟ್। (ಪು.೫೪-೫೫).

ನ್ಯಾಸಾಂತರಾಣಿ

ಅಥ ಯಸ್ಯಾಸ್ತ್ಯವಸರೋ ನಾಸ್ತಿ ವಾ ಮತಿವಿಭ್ರಮಃ।
ಸ ವಿಸ್ತೀರ್ಣೇನ ಕಲ್ಪೇನ ನ್ಯಾಸಕರ್ಮ ಸಮಾಚರೇತ್ ॥ ೩೫ ॥

ತತ್ರಾದ್ಯೋ ಮಾತೃಕಾನ್ಯಾಸೋ ಬ್ರಹ್ಮನ್ಯಾಸಸ್ತತಃ ಪರಮ್।
ತೃತೀಯಃ ಪ್ರಣವನ್ಯಾಸೋ ಹಂಸನ್ಯಾಸಸ್ತದುತ್ತರಃ॥
ಪಂಚಮಃ ಕಥ್ಯತೇ ಸದ್ಭಿರ್ನ್ಯಾಸಃ ಪಂಚಾಕ್ಷರಾತ್ಮಕಃ ॥ ೩೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏತೇಷ್ವೇಕಮನೇಕಂ ವಾ ಕುರ್ಯಾತ್ ಪೂಜಾದಿಕರ್ಮಸು।
ಯಥಾ ಪೂರ್ವೋಕ್ತಮಾರ್ಗೇಣ ಶಿವತ್ವಂ ಯೇನ ಜಾಯತೇ ॥ ೩೭ ॥
ನಾಶಿವಃ ಶಿವಮಭ್ಯಸ್ಯೇನ್ನಾಶಿವಃ ಶಿವಮರ್ಚಯೇತ್।
ನಾಶಿವಸ್ತು ಶಿವಂ ಧ್ಯಾಯೇನ್ನಾಶಿವಃ ಶಿವಮಾಪ್ನುಯಾತ್ ॥ ೩೮ ॥

ಬೇರೆ ನ್ಯಾಸಗಳು

ಈಗ ಯಾರಿಗೆ ಸಮಯವಿದೆಯೋ, ಮತಿ ವಿಭ್ರಮವಾಗಿಲ್ಲವೋ, ಅವನು ವಿಸ್ತಾರವಾದ ವಿಧಾನದಿಂದ ನ್ಯಾಸಕರ್ಮವನ್ನು (ವಿಧಿಯನ್ನು) ಆಚರಿಸಬಹುದು. (೩೫). ನ್ಯಾಸಗಳಲ್ಲಿ ಮೊದಲಿನದು ಮಾತೃಕಾನ್ಯಾಸ, ಅನಂತರ ಬ್ರಹ್ಮನ್ಯಾಸ, ಮೂರನೆಯದು ಪ್ರಣವನ್ಯಾಸ, ಮುಂದಿನದು ಹಂಸನ್ಯಾಸ ಮತ್ತು ಐದನೆಯದೆಂದು ಸಜ್ಜನರಿಂದ ಹೇಳಲ್ಪಟ್ಟಿದೆ ಪಂಚಾಕ್ಷರಾತ್ಮಕ ನ್ಯಾಸ. (೩೬). ಇವುಗಳಲ್ಲಿ ಯಾವುದಾದರೂ ಒಂದನ್ನೋ, ಅನೇಕವನ್ನೋ ಪೂಜಾದಿಕರ್ಮಗಳಲ್ಲಿ ಮಾಡಬೇಕು. ಇದರಿಂದ ಮೇಲೆ ಹೇಳಿದ ರೀತಿಯಲ್ಲಿ ಶಿವತ್ವವು ಪ್ರಾಪ್ತವಾಗುತ್ತದೆ. (೩೭). ಶಿವನಾಗದೆ ಶಿವಮಂತ್ರದ ಅಭ್ಯಾಸವನ್ನು ಮಾಡಲಾಗದು, ಶಿವನಾಗದೆ ಶಿವನ ಪೂಜೆ ಮಾಡಲಾಗದು, ಶಿವನಾಗದೆ ಶಿವನ ಧ್ಯಾನ ಮಾಡಲಾಗದು ಮತ್ತು ಶಿವನಾಗದೆ ಶಿವನನ್ನು ಹೊಂದಲಾಗದು. (೩೮).

ಟಿಪ್ಪಣಿ : ಮಾತೃಕಾನ್ಯಾಸವೆಂದರೆ ವರ್ಣನ್ಯಾಸ ಅಥವಾ ಮಾತೃಕಾಕ್ಷರ ನ್ಯಾಸ. ಇದರ ಕ್ರಮವನ್ನು ಹಿಂದಿನ ಟಿಪ್ಪಣಿಯಲ್ಲಿ ಕೊಟ್ಟಿದೆ. ಪಂಚಾಕ್ಷರ ನ್ಯಾಸವನ್ನು ಪರಿಶಿಷ್ಟ-೧ರಲ್ಲಿ ನೋಡಿರಿ. ನಾಶಿವಃ ಶಿವಮಭ್ಯಸ್ಯೇತ್- "ನಾಶಿವಸ್ಯ ಶಿವೋಪಾಸ್ತಿಃ" "ನಾರುದ್ರೋ ರುದ್ರಮರ್ಚಯೇತ್" ಇತ್ಯಾದಿಗಳಿಗೆ ಸಂವಾದಿಯಾಗಿದೆ.

ಷಡಕ್ಷರ-ಪಂಚಾಕ್ಷರಾತ್ಮಿಕೇ ದೇವ್ಯೌ

ತತಃ ಶೈವೀ ತನುಂ ಕೃತ್ವಾ ಜಪೇತ್ ಸಾಂಗಾಂ ಷಡಕ್ಷರೀಮ್।
ಓಂಕಾರವದನಾ ದೇವೀ ವಾಯಕಾರಭುಜದ್ವಯೀ॥
ಶಿಕಾರದೇಹಮಧ್ಯಾ ಚ ನಮಃಕಾರಪದದ್ವಯೀ ॥ ೩೯ ॥
ಪಂಚಾಕ್ಷರೀ ಪರಾ ವಿದ್ಯಾ ಸತಾರಾ ಲಿಂಗರೂಪಿಣೀ।
ಅಧಿಕಾರಯುಜಾಂ ತಾರೇ ಧ್ಯೇಯಾ ಸಾ ಮಂತ್ರರೂಪಿಣೀ ॥ ೪೦ ॥
ತತ್ರಾನಧಿಕೃತಾನಾಂ ತು ಮಂತ್ರಂ ವಕ್ಷ್ಯಾಮಿ ಸಂಶೃಣು।
ಶಿಕಾರವದನಾ ದೇವೀ ವಾಯಕಾರಭುಜದ್ವಯೀ ॥ ೪೧ ॥
ಪಂಚಾಕ್ಷರೀ ಪರಾ ವಿದ್ಯಾ ವಿತಾರಾ ಲಿಂಗರೂಪಿಣೀ॥
ತಾರೇಽಧಿಕಾರರಹಿತೈರ್ಧ್ಯೇಯಾ ಸೇಯಂ ಭವೇದ್‌ದ್ವಿಷ್ಟೈ ॥ ೪೨ ॥

ಷಡಕ್ಷರ-ಪಂಚಾಕ್ಷರ ಸ್ವರೂಪದ ದೇವಿಯರು

ಅನಂತರ ಶೈವ ಸ್ವರೂಪವನ್ನು ಹೊಂದಿ ಷಡಕ್ಷರೀ ಮಂತ್ರವನ್ನು ಜಪಿಸಬೇಕು. ಓಂಕಾರವೇ ಮುಖವಾಗಿರುವವಳೂ, ವಾ-ಯ ಕಾರಗಳನ್ನು ಎರಡು ಭುಜಗಳಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಳ್ಳವಳೂ, ಶಿಕಾರವೇ ಮಧ್ಯದೇಹವಾದವಳೂ, ನ-ಮಃ ಕಾರಗಳನ್ನು ಎರಡು ಪಾದಗಳಾಗಿ ಉಳ್ಳವಳೂ ಆದ ದೇವಿ ಷಡಕ್ಷರೀ ವಿದ್ಯೆಯು ಸತಾರೆ (ಓಂಕಾರ ಸಹಿತಳು) ಆಗಿ ಲಿಂಗಸ್ವರೂಪಿಣಿ. ಯಾರು ಪ್ರಣವಕ್ಕೆ ಅಧಿಕಾರಿಗಳೋ ಅವರು ಅವಳನ್ನು ಮಂತ್ರ-ರೂಪಿಣಿಯಾಗಿ ಧ್ಯಾನಿಸಬೇಕು. (೩೯-೪೦). ಆದಕ್ಕೆ ಅಧಿಕಾರವಿಲ್ಲದವರ ಸಲುವಾಗಿ ಮಂತ್ರವನ್ನು ಹೇಳುತ್ತೇನೆ, ಸರಿಯಾಗಿ ಕೇಳು. ಶಿಕಾರವೇ ಮುಖವಾಗಿರುವವಳೂ ವಾ-ಯ ಕಾರಗಳನ್ನು ಎರಡು ಭುಜಗಳಾಗಿ ಉಳ್ಳವಳೂ, ವಿಸರ್ಗವೇ ಮಧ್ಯ ದೇಹ-ವಾಗಿರುವವಳೂ ಮತ್ತು ನ-ಮಃ ಕಾರಗಳೇ ಎರಡು ಪಾದಗಳಾಗಿರುವವಳೂ ಆದ ದೇವಿಯು ವಿತಾರಾ (ಓಂಕಾರ ರಹಿತ) ಪಂಚಾಕ್ಷರೀ ವಿದ್ಯೆಯು ಲಿಂಗರೂಪಿಣಿಯಾಗಿದೆ. ಓಂಕಾರಕ್ಕೆ ಅಧಿಕಾರವಿಲ್ಲದ ದ್ವಿಜರು ಇದನ್ನೇ ಧ್ಯಾನಿಸಬೇಕು. (೪೨).

ಟಿಪ್ಪಣಿ : ಪಂಚಾಕ್ಷರೀ ಮತ್ತು ಷಡಕ್ಷರೀ ಮಂತ್ರಗಳು ದೇವಿಯ ಸ್ವರೂಪವೆಂದು ವರ್ಣಿಸಿದಂತೆ ಶಿವನ ಸ್ವರೂಪ ಮತ್ತು ಪಂಚಬ್ರಹ್ಮಸ್ವರೂಪವೂ ಆಗಿವೆ- "ಓಂಕಾರೋ ಮಮ ದೇಹಃ ಸ್ಯಾನ್ನಕಾರಾದ್ಯಸ್ತಥೈವ ಚ। ಸದ್ಯಾದಿ ಪಂಚವಕ್ತ್ರಾಣಿ ಕ್ರಮಾದೇವಂ ವರಾನನೇ॥ ಪಂಚಬ್ರಹ್ಮಾತ್ಮಕೋ ಮಂತ್ರಃ ಪ್ರಣವಾದ್ಯಃ ಷಡಕ್ಷರಃ॥ (ಸೂಕ್ಷ್ಮಾಗಮ, ಕ್ರಿ.ಪಾ. ೪.೩೬-೩೭)." ಓಂಕಾರವೆಂಬುದು ಪರಮಾತ್ಮನ ಶರೀರ. ನಕಾರದಿಂದ ಯಕಾರದವರೆಗಿನ ಐದು ಅಕ್ಷರಗಳು ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಪಂಚಮುಖಗಳು. ಹೀಗೆ ಪಂಚಬ್ರಹ್ಮಾತ್ಮಕವಾದ ಮಂತ್ರವು ಪ್ರಣವದಿಂದ ಆರಂಭವಾದರೆ ಷಡಕ್ಷರ ಮಂತ್ರ.

ಸ್ಥೂಲಸೂಕ್ಷ್ಮಪಂಚಾಕ್ಷರೌ

ಅಉಮಾಶ್ಚೈವ ನಾದಶ್ಚ ಕಲಾ ಚೇತ್ಯಂಶಪಂಚಕಮ್।
ಮಿಲಿತ್ವಾ ಪ್ರಣವೋ ಜಜ್ಞೇ ಸೂಕ್ಷ್ಮಪಂಚಾಕ್ಷರಾತ್ಮಕಃ ॥ ೪೩ ॥

ತಥಾ ನಮಃ ಶಿವಾಯೇತಿ ಸ್ಥೂಲಪಂಚಾಕ್ಷರೋ ಭವೇತ್।
ಪ್ರತಿಪಾದ್ಯೋ ಮಹತ್ತ್ವೇಽಪಿ ನಾನಯೋರ್ವಿದ್ಯತೇ ಭಿದಾ ॥ ೪೪ ॥

ಸೂಕ್ಷ್ಮಂ ಮೂಲಂ ಭವೇದಸ್ಯ ಸ್ಥೂಲಂ ವಿವರಣಂ ಮತಮ್।
ತಾರೇಽಧಿಕಾರಯುಕ್ತಸ್ತು ತಾರಯುಕ್ತಂ ಮನುಂ ಜಪೇತ್॥
ಜಪನ್ನನಧಿಕಾರೀ ತು ತಾರಂ ಗಚ್ಛೇದಧೋಗತಿಮ್ ॥ ೪೫ ॥

ತಾರೇಣ ತುಲ್ಯಸಾರೋಽಪಿ ಸೋಽಯಂ ಪಂಚಾಕ್ಷರೋ ಮನುಃ।
ಶಾಸನಾದ್ದೇವದೇವಸ್ಯ ಲೋಕಾನುಗ್ರಹಕಾಂಕ್ಷಿಣಃ॥
ಆಸೀಜ್ಜಪ್ಯಸ್ತು ಸರ್ವೇಷಾಮಾಜ್ಞಾ ಶಂಭೋರ್ಗರೀಯಸೀ ॥ ೪೬ ॥

ಸ್ಥೂಲ ಮತ್ತು ಸೂಕ್ಷ್ಮ ಪಂಚಾಕ್ಷರ

ಅ ಉ ಮ ನಾದ ಮತ್ತು ಕಲಾ ಎಂಬ ಐದು ಅಂಶ ಕೂಡಿ ಪ್ರಣವವು ಹುಟ್ಟಿತು. ಅದೇ ಸೂಕ್ಷ್ಮ ಪಂಚಾಕ್ಷರಾತ್ಮಕವಾದುದು. (೪೩). ಹಾಗೆಯೇ ನಮಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಾಯ ಎಂಬುದು ಸ್ಥೂಲ ಪಂಚಾಕ್ಷರವಾಗಿದೆ. ಪ್ರತಿಪಾದ್ಯ ವಿಷಯದಲ್ಲಿ ಮತ್ತು ಮಹತ್ತ್ವದ ವಿಷಯದಲ್ಲಿ ಕೂಡ ಅವೆರಡರಲ್ಲಿ ಭೇದವಿಲ್ಲ. (೪೪). ಸೂಕ್ಷ್ಮವು ಮೂಲ ಸ್ವರೂಪವಾದರೆ ಸ್ಥೂಲವು ಅದರ ವಿವರಣೆ. ಓಂಕಾರಕ್ಕೆ ಅಧಿಕಾರವುಳ್ಳವನು ಓಂಕಾರ ಯುಕ್ತವಾದ ಮಂತ್ರವನ್ನು ಜಪಿಸಬೇಕು. ಓಂಕಾರಯುಕ್ತವಾದದ್ದರೊಂದಿಗೆ ಸಮಾನ ಸಾಮರ್ಥ್ಯವುಳ್ಳದ್ದಾದರೂ ಈ ಪಂಚಾಕ್ಷರ ಮಂತ್ರವು ಲೋಕಕ್ಕೆ ಅನುಗ್ರಹಿಸುವ ಇಚ್ಛೆಯುಳ್ಳ ದೇವದೇವನ ಶಾಸನದಿಂದ ಉಪದೇಶಿಸಲ್ಪಟ್ಟಿತು. ಇದು ಎಲ್ಲರ ಜಪಕ್ಕೂ ಯೋಗ್ಯ. ಶಂಭುವಿನ ಆಜ್ಞೆಯು ಎಲ್ಲದಕ್ಕಿಂತ ಹೆಚ್ಚು ಮಾನ್ಯ. (೪೬).

ಅಗ್ನಿಕಾರ್ಯವಿಧಾನಮ್

ಶ್ರೀರುದ್ರಾದೀಂಶ್ಚ ಜಪ್ತ್ವಾಽಥ ವಹ್ನ್ಯಾಗಾರಂ ಪ್ರವಿಶ್ಯ ತು।
ಹೋಮಂ ಶಿವಾಗ್ನೌ ಕುರ್ವೀತ ಶೈವಸಂಸ್ಕಾರಸಂಸ್ಕೃತೇ ॥ ೪೭ ॥

ಸ್ಥಾಲೀಪಾಕೇ ಪ್ರವೃತ್ತೇ ತು ಗೃಹ್ಯಾಗ್ನಿಂ ಪುರತೋಽಪಿ ವಾ।
ಶೈವಂ ಸಂಪಾದ್ಯ ಸಂಸ್ಕಾರೈಸ್ತತ್ರ ನಿರ್ವರ್ತಯೇತ್ ಕ್ರಿಯಾಃ ॥ ೪೮ ॥

ವೈತಾನಿಕಂ ಚ ವಿಧಿನಾ ಶೈವಂ ಸಂಪಾದಯೇನ್ಮಖೀ।
ನಿತ್ಯಮೌಪಾಸನಂ ಕರ್ಮ ಶ್ರೌತಂ ತತ್ರೈವ ಚೇಷ್ಯತೇ॥
ವೈಶ್ವದೇವಾದಿಗಾರ್ಹ್ಯಾಣಿ ಗೃಹಶೈವೇ ಸಮಾಚರೇತ್ ॥ ೪೯ ॥

ಅಗ್ನಿಕಾರ್ಯದ ವಿಧಾನ

ಶ್ರೀರುದ್ರ ಮುಂತಾದ ಮಂತ್ರಗಳನ್ನು ಜಪಿಸಿ ಯಜ್ಞಶಾಲೆಯನ್ನು ಪ್ರವೇಶಿಸಿ ಶೈವ ಸಂಸ್ಕಾರಗಳಿಂದ ಪವಿತ್ರಗೊಳಿಸಲ್ಪಟ್ಟ ಶಿವಾಗ್ನಿಯಲ್ಲಿ ಹವನ ಮಾಡಬೇಕು. (೪೭). ಅಡಿಗೆ ಮಾಡಲು ತೊಡಗಿದಾಗ ಗೃಹ್ಯಾಗ್ನಿಯನ್ನು ಸುತ್ತಲೂ ಸಂಸ್ಕಾರಗಳ ಮೂಲಕ ಶಿವಾಗ್ನಿಯನ್ನಾಗಿ ಪರಿವರ್ತಿಸಿ ಅದರಲ್ಲಿ ಎಲ್ಲಾ ಕ್ರಿಯೆಗಳನ್ನು ನಡೆಸಬೇಕು. (೪೮). ಅದೇ ರೀತಿ ಶಿವಯಾಜಿಯು ವೈತಾನಿಕ ಅಗ್ನಿಯನ್ನು ವಿಧಿಯಿಂದ ಶಿವಾಗ್ನಿಯನ್ನಾಗಿ ಮಾಡಿಕೊಳ್ಳಬೇಕು. ಇದರಲ್ಲಿ ನಿತ್ಯ ಔಪಾಸನ ಮತ್ತು ಶ್ರೌತಕರ್ಮಗಳನ್ನು ಮಾಡಬೇಕು. ವೈಶ್ವದೇವ ಮೊದಲಾದ ಗೃಹ್ಯಾಗ್ನಿಯಲ್ಲಿ ಆಗಬೇಕಾದ ಕರ್ಮಗಳನ್ನು ಗೃಹ್ಯ ಶೈವಾಗ್ನಿಯಲ್ಲಿ ಆಚರಿಸಬೇಕು. (೪೯).

ಟಿಪ್ಪಣಿ : ಆವಸಥ್ಯ, ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ ಮತ್ತು ಸಭ್ಯ ಎಂಬ ಹೆಸರಿನ ಐದು ಅಗ್ನಿಗಳಲ್ಲಿ ಆವಸಥ್ಯವು ಸ್ಮಾರ್ತಾಗ್ನಿ, ಮಿಕ್ಕ ನಾಲ್ಕು ಶ್ರೌತಾಗ್ನಿಗಳು. ಆವಸಥ್ಯ ಅಗ್ನಿಗೇನೆ ಗೃಹ್ಯಾಗ್ನಿಯೆನ್ನುತ್ತಾರೆ. ಗೃಹಸ್ಥನು ಸ್ಥಾಲೀಪಾಕವನ್ನು ಅಂದರೆ ಭಗವಂತನಿಗೆ ಎಡೆ ಮಾಡಲು ಮತ್ತು ಅನ್ಯ ಧಾರ್ಮಿಕ ಕೃತ್ಯಗಳನ್ನು ಮಾಡುವ ಸಂದರ್ಭದಲ್ಲಿ ಅಡಿಗೆಯನ್ನು ಇದೇ ಅಗ್ನಿಯಲ್ಲಿ ಮಾಡುತ್ತಾನೆ ಅಥವಾ ಮಾಡಿಸುತ್ತಾನೆ. "ವೈತಾನಾಸ್ತ್ವಾಂ ವಹ್ನಯಃ ಪಾವಯಂತು," (ಅಭಿಜ್ಞಾನ ಶಾಕುನ್ತಲ ೪.೭) ಎಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಳಿದಾಸನು ಮೇಲೆ ಹೇಳಿದ ಶ್ರೌತ ಅಗ್ನಿಗಳಿಗೆ ವೈತಾನ ಶಬ್ದವನ್ನು ಪ್ರಯೋಗಿಸಿದ್ದಾನೆ. ಔಪಾಸನ ಹೋಮ, ವೈಶ್ವದೇವ, ಪಾರ್ವಣ, ಅಷ್ಟಕಾಶ್ರಾದ್ಧ, ಮಾಸಿಕಶ್ರಾದ್ಧ, ಶ್ರವಣಾಕರ್ಮ ಮತ್ತು ಶೂಲಗವ ಎಂಬ ಏಳು ಪಾಕ ಸಂಸ್ಥೆಗಳಿವೆ. ಇವುಗಳ ಅನುಷ್ಠಾನವನ್ನು ಗೃಹಸ್ಥನು ಗೃಹ್ಯಾಗ್ನಿ (ಸ್ಮಾರ್ತಾಗ್ನಿ)ಯಲ್ಲಿ ಮಾಡುತ್ತಾನೆ. ಇವುಗಳ ವಿವರಣೆಯನ್ನು 'ಕಾತ್ಯಾಯನಯಜ್ಞಪದ್ಧತಿ ವಿಮರ್ಶ' (ಪು.೫೯-೬೧)ದಲ್ಲಿ ನೋಡಿರಿ. ಪ್ರಸ್ತುತ ಆಗಮದಲ್ಲಿ ಇವೆಲ್ಲವುಗಳ ಆಚರಣೆಯನ್ನು ಶಿವಾಗ್ನಿಯಲ್ಲಿ ಮಾಡಬೇಕೆಂದು ವಿಧಿಸಲಾಗಿದೆ.

ಸಮಿಧಾದಿ ಪ್ರಮಾಣಮ್

ಸಮಿಧೋ ಹೋಮಯೋಗ್ಯಾಸ್ತು ವಕ್ಷ್ಯಾಮಿ ಶೃಣು ಗೀಷ್ಪತೇ।
ಪಾಲಾಶಖಾದಿರಾಶ್ವತ್ಥಶಮ್ಯುದುಂಬರಜಾ ಸಮಿತ್॥
ಅಪಾಮಾರ್ಗಕದೂರ್ವಾಶ್ಚ ಕುಶಶ್ಚೇತ್ಯಪರೇ ವಿದುಃ ॥ ೫೦ ॥

ಸತ್ವಚಃ ಸಮಿಧಃ ಕಾರ್ಯಾ ಋಜುಶ್ಶ್ಲಕ್ಷ್ಣಸಮಾಸ್ತಥಾ।
ಶಸ್ತಾ ದಶಾಂಗುಲಾಸ್ತಾಸ್ತು ದ್ವಾದಶಾಂಗುಲಕಾಸ್ತಥಾ ॥ ೫೧ ॥

ಆರ್ದ್ರಾಃ ಶುಷ್ಕಾ ಸಮಚ್ಛೇದ್ಯಾಸ್ತರ್ಜನ್ಯಂಗುಲವರ್ತುಲಾಃ।
ಅಪಾತಿತಾಶ್ಚಾಽದ್ವಿಶಾಖಾಃ ಕೃಮಿದೋಷವಿವರ್ಜಿತಾಃ ॥ ೫೨ ॥

ಸಮಿತ್ಪವಿತ್ರಂ ವೇದಶ್ಚ ತ್ರಯಂ ಪ್ರಾದೇಶಸಂಮಿತಮ್।
ಇಧ್ಮಸ್ತು ದ್ವಿಗುಣಃ ಕಾರ್ಯಸ್ತ್ರಿಗುಣಃ ಪರಿಧಿಃ ಸ್ಮೃತಃ ॥
ಸ್ಮಾರ್ತೇ ಪ್ರಾದೇಶ ಇಧ್ಮೋ ವಾ ದ್ವಿಗುಣಃ ಪರಿಧಿಃ ಸ್ಮೃತಃ ॥ ೫೩ ॥

ಸಮಿತ್ತು ಮುಂತಾದವುಗಳ ಅಳತೆ

ಬೃಹಸ್ಪತಿಯೇ, ಈಗ ನಾನು ಹೋಮಕ್ಕೆ ಯೋಗ್ಯವಾದ ಸಮಿತ್ತುಗಳ ಬಗ್ಗೆ ಹೇಳುತ್ತೇನೆ. ಪಲಾಶ (ಮುತ್ತುಗ), ಖದಿರ (ಬಿಳಿಕಗ್ಗಲಿ), ಅಶ್ವತ್ಥ (ಅರಳಿ), ಶಮೀ (ಬನ್ನಿ), ಉದುಂಬರ (ಅತ್ತಿ)ಗಳ ಸಮಿತ್ತುಗಳು ಅಂತಹವು. ಕೆಲವರು ಅಪಾಮಾರ್ಗ (ಉತ್ತರೇಣಿ), ದೂರ್ವಾ (ಗರಿಕೆ ಹುಲ್ಲು), ಕುಶ (ದರ್ಭೆ)ಗಳನ್ನು ಇವುಗಳಲ್ಲಿ ಪರಿಗಣಿಸುತ್ತಾರೆ. (೫೦). ಸಮಿತ್ತುಗಳು ತೊಗಟೆಯಿಂದ ಕೂಡಿರಬೇಕು, ನೇರವಾಗಿರಬೇಕು, ನುಣುಪಾಗಿರಬೇಕು, ಸಮನಾಗಿರಬೇಕು. ಹತ್ತು ಅಂಗುಲಗಳ ಮತ್ತು ಹನ್ನೆರಡು ಅಂಗುಲಗಳ ಸಮಿತ್ತುಗಳು ಪ್ರಶಸ್ತ. (೫೧). ಅರ್ಧ ಹಸಿ, ಅರ್ಧ ಒಣಗಿರಬೇಕು, ಸಮಾನ ರೂಪದಲ್ಲಿ ಕತ್ತರಿಸಿದವುಗಳಾಗಿರಬೇಕು, ತರ್ಜನೀ ಬೆರಳಷ್ಟು ದಪ್ಪವಿರಬೇಕು (ದುಂಡಾಗಿರಬೇಕು), ಕಡಿದು ಕೆಳಗೆ ಹಾಕಿದವುಗಳಾಗಿರಬಾರದು, ಕವಲೊಡೆದವುಗಳಾಗಿರಬಾರದು ಮತ್ತು ಹುಳು ತಿಂದು ದೋಷಯುಕ್ತವಾಗಿರಬಾರದು. (೫೨). ಸಮಿತ್ತು, ಪವಿತ್ರ ಮತ್ತು ವೇದ (ಕುಶಮುಷ್ಟಿ) ಇವು ಮೂರು ಪ್ರಾದೇಶ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಮಾಣದವುಗಳಾಗಿರಬೇಕು. ಇಧ್ಮವು ಪ್ರಮಾಣದಲ್ಲಿ ಅದರ ಎರಡರಷ್ಟಿರಬೇಕು. ಮತ್ತೆ ಪರಿಧಿಯು ಮೂರರಷ್ಟಿರಬೇಕು ಅಥವಾ ಸ್ಮಾರ್ತಕರ್ಮದಲ್ಲಿ ಇಧ್ಮವು ಪ್ರಾದೇಶ ಪ್ರಮಾಣ ಮತ್ತು ಪರಿಧಿ ಅದರ ಎರಡರಷ್ಟು ಇರಬೇಕು. (೫೩).

ಟಿಪ್ಪಣಿ : ಸಮಿತ್ತು, ಪವಿತ್ರ ಮತ್ತು ವೇದ (ಕುಶಮುಷ್ಟಿ) - ಹವನದಲ್ಲಿ ಪಲಾಶ ಮುಂತಾದ ಯಜ್ಞೀಯ ಕಟ್ಟಿಗೆಗಳಿಗೆ ಸಮಿತ್ತುಗಳು ಎನ್ನುತ್ತಾರೆ. ಅವು ಕೈ ಬೆರಳಿನ ದಪ್ಪಕ್ಕಿಂತ ಹೆಚ್ಚು ದಪ್ಪವಿರುವುದಿಲ್ಲ. ಉದ್ದ ಪ್ರಾದೇಶ (ಒಂದು ಚೋಟು). ಪವಿತ್ರವು ದರ್ಭೆಯಿಂದ ಮಾಡಲ್ಪಡುತ್ತದೆ. ಮೊದಲು ಪೂರ್ವಕ್ಕೆ ತುದಿಯಿರುವಂತೆ ಎರಡು ದರ್ಭೆಗಳನ್ನು ತೆಗೆದುಕೊಂಡು ಅವುಗಳ ಮೇಲೆ ಪಶ್ಚಿಮಕ್ಕೆ ತುದಿಯಿರುವಂತೆ ಮೂರು ದರ್ಭೆಗಳನ್ನು ಇಟ್ಟು ಕಟ್ಟಿ, ಬಲಗಡೆಗೆ ಸುರುಳಿ ಮಾಡಿ ಹೆಣೆದು ಉಂಗುರದ ಆಕಾರಕ್ಕೆ ತರಬೇಕು. ಧಾರ್ಮಿಕ ಕಾರ್ಯಗಳಲ್ಲಿ ಅನಾಮಿಕ ಬೆರಳಿನಲ್ಲಿ ಉಂಗುರದಂತೆ ಇಟ್ಟುಕೊಳ್ಳುತ್ತಾರೆ. ವೇದ ಎಂದರೆ ಕುಶದಮುಷ್ಟಿ. ಅದನ್ನು ಮಾಡಲು ೫೦ ದರ್ಭೆಗಳನ್ನು ತೆಗೆದುಕೊಂಡು, ತುದಿಯಲ್ಲಿ ಗಂಟು ಹಾಕಿ, ಮೂರು ಭಾಗ ಮಾಡಿ, ಜಡೆಯ ತರಹ ಹೆಣೆಯಬೇಕು. ಯಜ್ಞಕ್ರಿಯೆಗಳಲ್ಲಿ ಇದನ್ನು ಎಡಗೈಯಲ್ಲಿ ಇಟ್ಟುಕೊಳ್ಳುವ ವಿಧಾನವಿದೆ. ಸಮಿತ್ತು ಮತ್ತು ಇಧ್ಮ - ಅಮರಕೋಶ (೨.೪.೧೩)ರಲ್ಲಿ ಇಧ್ಮ ಸಮಿತ್ ಮುಂತಾದ ಶಬ್ದಗಳು ಪರ್ಯಾಯ ಪದಗಳು. ಆದರೆ ಇಲ್ಲಿ ಪರಿಮಾಣ (ಅಳತೆ) ಭೇದದಿಂದ ಅವುಗಳಲ್ಲಿ ಭೇದವನ್ನು ಗುರುತಿಸಲಾಗಿದೆ. ಸಮಿತ್ತುಗಳು ಪ್ರಾದೇಶ ಪ್ರಮಾಣ; ಇಧ್ಮಗಳು ಅದರ ಎರಡರಷ್ಟು. ಪ್ರಾದೇಶ ಪ್ರಮಾಣವೆಂದರೆ ಒಂದು ಚೋಟು ಉದ್ದ (ತರ್ಜನೀ ಬೆರಳು ಮತ್ತು ಹೆಬ್ಬೆರಳನ್ನು ಚಾಚಿದಷ್ಟು ಉದ್ದ). ಪರಿಧಿ- ಆಹವನೀಯ ಅಗ್ನಿಯ ಪಶ್ಚಿಮ, ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲಿ ಪಲಾಶ (ಮುತ್ತುಗದ) ಸಮಿತ್ತುಗಳನ್ನು ಇಡುವುದಕ್ಕೆ ಪರಿಧಿಯೆಂದು ಹೆಸರು. ಗ್ರಾರ್ಹಪತ್ಯ ಅಗ್ನಿಕುಂಡದ ನಾಲ್ಕೂ ಕಡೆ ಕಟ್ಟಲಾಗುವ ಹನ್ನೆರಡು ಅಂಗುಲ ಉದ್ದ ಮತ್ತು ನಾಲ್ಕು ಅಂಗುಲ ಅಗಲವಾದ ಗೋಡೆಗೂ ಪರಿಧಿಯೆಂದು ಕರೆಯುತ್ತಾರೆ. ಇಲ್ಲಿ ಅದರ ಪ್ರಸಂಗವಿಲ್ಲ.

ಅಗ್ನೇರಂಗಾನಿ

ಅಗ್ನೇರಂಗಾನಿ ವಕ್ಷ್ಯಾಮಿ ನ ಹೋತವ್ಯಂ ಚ ಯೇಷು ವೈ।
ಅಗ್ನಿಕರ್ಣೇ ಹುತೇ ರೋಗೋ ನಾಸಿಕಾಯಾಂ ಮನಃಕ್ಷಯಃ ॥ ೫೪ ॥

ಚಕ್ಷುಷೋರ್ನಿಧನಂ ಪ್ರೋಕ್ತಂ ಕೇಶೇ ದಾರಿದ್ರ್ಯಕೃದ್ಭವೇತ್।
ಹುತಂ ಶಿರಸಿ ಪಾಪಂ ಸ್ಯಾತ್ ತಸ್ಮಾಜ್ಜಿಹ್ವಾಸು ಹೋಮಯೇತ್ ॥೫೫ ॥

ಯತ್ರ ಕಾಷ್ಠಂತು ತಚ್ಛ್ರೋತ್ರಂ ಯತ್ರ ಧೂಮಸ್ತು ನಾಸಿಕಾ।
ಯತ್ರಾಲ್ಪಜ್ವಲನಂ ನೇತ್ರಂ ಯತ್ರ ಭಸ್ಮಾನಿ ತಚ್ಛಿರಃ॥
ಯತ್ರೈವ ಜ್ವಲಿತೋ ವಹ್ನಿರ್ಜಿಹ್ವಾ ತತ್ರೈವ ಕೀರ್ತಿತಾ ॥ ೫೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಗ್ನಿಕಾರ್ಯಂ ವಿಧಾಯ್ಯೆವಂ ಕರ್ತವ್ಯಮಭಿವಾದನಮ್।
ಆದ್ಯಮಷ್ಟಾಂಶಕಂ ತ್ವೇಭಿಃ ಕೃತ್ಯೈರಹ್ನಃ ಸಮಾಪಯೇತ್ ॥ ೫೭ ॥

ಅಗ್ನಿಯ ಅಂಗಗಳು

ಯಾವ ಅಂಗಗಳಲ್ಲಿ ಹೋಮ ಮಾಡಬಾರದೋ ಅಂತಹ ಅಗ್ನಿಯ ಅಂಗಗಳನ್ನು ಹೇಳುತ್ತೇನೆ. ಅಗ್ನಿಯ ಕರ್ಣದಲ್ಲಿ ಹೋಮ ಮಾಡಿದರೆ ರೋಗ, ಮೂಗಿನಲ್ಲಾದರೆ ಮನಸ್ಸು ಪಲ್ಲಟವಾಗುತ್ತದೆ, ಚಕ್ಷುಷ್‌ಗಳಲ್ಲಾದರೆ ಸಾವು, ಕೇಶದಲ್ಲಾದರೆ ದ್ರಾರಿದ್ರ್ಯ ಬರುವುದು, ಶಿರಸ್ಸಿನಲ್ಲಿ ಹೋಮ ಮಾಡುವುದರಿಂದ ಪಾಪ ಬರುತ್ತದೆ. ಆದ್ದರಿಂದ ಜಿಹ್ವೆಗಳಲ್ಲಿ ಹೋಮ ಮಾಡಬೇಕು. (೫೪-೫೫). ಎಲ್ಲಿ ಕಾಷ್ಠವಿದೆಯೋ ಅದು ಅಗ್ನಿಯ ಶ್ರೋತ್ರ, ಎಲ್ಲಿ ಧೂಮವಿದೆಯೋ ಅದು ನಾಸಿಕ, ಎಲ್ಲಿ ಮಂದವಾದ ಉರಿಯಿದೆಯೋ ಅದು ನೇತ್ರ, ಎಲ್ಲಿ ಬೂದಿಯಿದೆಯೋ ಅದು ಶಿರಸ್ಸು, ಎಲ್ಲಿ ಉರಿಯುವ ಜ್ವಾಲೆಗಳಿವೆಯೋ ಅದೇ ಜಿಹ್ವೆ ಎಂದು ಹೇಳಲ್ಪಟ್ಟಿದೆ. (೫೬). ಹೀಗೆ ಅಗ್ನಿ ಕಾರ್ಯವನ್ನು ಮಾಡಿ ಅಭಿವಾದನೆಯನ್ನು ಮಾಡಬೇಕು. ಹೀಗೆ ಈ ಕಾರ್ಯಗಳನ್ನು ಮಾಡುತ್ತಾ ದಿನದ ಆರಂಭದ ಭಾಗ (ಎಂಟರಲ್ಲಿ ಒಂದು ಭಾಗ)ವನ್ನು ಕಳೆಯಬೇಕು.

ಟಿಪ್ಪಣಿ : ಆದ್ಯಮಷ್ಟಾಂಶಕಮ್ ಅಹ್ನಃ - ಎಂಟು ಭಾಗಗಳಾಗಿ ವಿಭಾಗಿಸಲ್ಪಟ್ಟ ದಿನದ ಮೊದಲನೆಯ ಅಷ್ಟಾಂಶ ಭಾಗವೆಂದರೆ ಅರುಣೋದಯದ ವೇಳೆ. ದಿನದಲ್ಲಿ ೬೦ ಘಟಿಕೆಗಳನ್ನು ಎಂಟು ಭಾಗ ಮಾಡಿದರೆ ಒಂದು ಭಾಗ ಎಂದರೆ ಏಳೂವರೆ ಘಟಿಕೆ. ಒಂದು ಘಟಿಕೆ ಎಂದರೆ ಅಂದಾಜು ೨೪ ನಿಮಿಷಗಳು. ಒಂದು ಭಾಗವೆಂದರೆ ೨ ಗಂಟೆ ೪೮ ನಿಮಿಷಗಳು.

ಅಹ್ನೋ ದ್ವಿತೀಯಭಾಗಕರ್ತವ್ಯಾನಿ

ಭಾಗೇ ದ್ವಿತೀಯೇ ನಿಗಮಾನಭ್ಯಸೇದಾಗಮಾನಪಿ।
ಅಧ್ಯಾಪಯೇಚ್ಚ ಶಾಸ್ತ್ರಾಣಿ ಸಮಿಧಾದೀನಿ ಚಾಹರೇತ್॥
ಪುಷ್ಪಾಣಿ ಬಿಲ್ವಪತ್ರಾಣಿ ಶ್ರೀಗಂಧಪ್ರಮುಖಾನಿ ಚ ॥ ೫೮ ॥

ದಿನದ ಎರಡನೇ ಭಾಗದ ಕರ್ತವ್ಯಗಳು

ದಿನದ ಎರಡನೆಯ ಭಾಗದಲ್ಲಿ ವೇದಗಳನ್ನು ಮತ್ತು ಆಗಮಗಳನ್ನು ಅಭ್ಯಾಸ ಮಾಡಬೇಕು. ಶಾಸ್ತ್ರಗಳನ್ನು ಬೋಧಿಸಬೇಕು. ಸಮಿತ್ತು ಮುಂತಾದವುಗಳನ್ನು ತರಬೇಕು. ಪುಷ್ಪಗಳು, ಬಿಲ್ವಪತ್ರಗಳು ಮತ್ತು ಶ್ರೀಗಂಧ ಮುಂತಾದವುಗಳನ್ನು ತರಬೇಕು. (೫೮).

ಟಿಪ್ಪಣಿ : ಕಾರಣಾಗಮ, ಕ್ರಿ.ಪಾ. ೩.೬೩-೬೫; ಮಕುಟಾಗಮ, ಕ್ರಿ.ಪಾ. ೨.೩೫-೩೭.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೃತೀಯಚತುರ್ಥಭಾಗಕೃತ್ಯಾನಿ

ಅರ್ಥಸಿದ್ಧ್ಯೈ ಚ ಕುರ್ವೀತ ಯತ್ನಂ ಭಾಗೇ ತೃತೀಯಕೇ।
ಚತುರ್ಥೇ ಚ ತಥಾ ಭಾಗೇ ಮಧ್ಯಾಹ್ನಸ್ನಾನಮಾಚರೇತ್ ॥ ೫೯ ॥

ಭಸ್ಮಸ್ನಾನಂ ವಿಧಾಯಾಥ ತ್ರಿಪುಂಡ್ರಾಣಿ ಯಥಾವಿಧಿ।
ಯಥಾಸ್ಥಾನಂ ಚ ರುದ್ರಾಕ್ಷಾನ್ ಧೃತ್ವಾ ಚ ತದನಂತರಮ್ ॥ ೬೦ ॥

ಸಂಧ್ಯಾದ್ವಯಮುಪಾಸೀತ ಸಾವಿತ್ರೀಮೂಲಮಂತ್ರಗಮ್।
ಕರ್ತವ್ಯಾಃ ಪಂಚಯಜ್ಞಾಶ್ಚ ಗೃಹಿಣಾ ಸ್ವಹಿತೈಷಿಣಾ ॥ ೬೧ ॥

ತತೋ ಮಾಧ್ಯಾಹ್ನಿಕೀಂ ಪೂಜಾ ಗುರ್ವೀ ವಾ ಮಹತೀ ಲಘುಃ।
ಕರ್ತವ್ಯಾ ತು ಯಥಾಶಕ್ತಿ ಭಕ್ತಿಸಂಸಕ್ತಚೇತಸಾ ॥ ೬೨ ॥

ಮೂರನೆಯ ಮತ್ತು ನಾಲ್ಕನೆಯ ಭಾಗಗಳ ಕರ್ತವ್ಯಗಳು

ದಿನದ ಮೂರನೆಯ ಭಾಗದಲ್ಲಿ ಅರ್ಥದ ಗಳಿಕೆಗಾಗಿ ಉದ್ಯಮವನ್ನು ಮಾಡಬೇಕು. ನಾಲ್ಕನೆಯ ಭಾಗದಲ್ಲಿ ಮಧ್ಯಾಹ್ನದ ಸ್ನಾನವನ್ನು ಮಾಡಬೇಕು. (೫೯). ಭಸ್ಮಸ್ನಾನವನ್ನು ಮಾಡಿ ಅನಂತರ ವಿಧಿಗನುಸಾರವಾಗಿ ತ್ರಿಪುಂಡ್ರ ಧಾರಣೆಯನ್ನು ಮಾಡಿಕೊಳ್ಳಬೇಕು. ಶಾಸ್ತ್ರದಲ್ಲಿ ಹೇಳಿದ ಸ್ಥಾನಗಳಲ್ಲಿ ರುದ್ರಾಕ್ಷಗಳನ್ನು ಧರಿಸಿಕೊಳ್ಳಬೇಕು. (೬೦). ಅನಂತರ ಸಾವಿತ್ರೀ ಮತ್ತು ಮೂಲ ಪಂಚಾಕ್ಷರೀ ಮಂತ್ರಗಳಿಂದ ಎರಡು ವಿಧವಾದ ಸಂಧ್ಯೋಪಾಸನೆಯನ್ನು ಮಾಡಬೇಕು. ಸ್ವಹಿತವನ್ನು ಬಯಸುವ ಗೃಹಸ್ಥನು ಪಂಚಯಜ್ಞಗಳನ್ನು ಅವಶ್ಯವಾಗಿ ಆಚರಿಸಬೇಕು. (೬೧). ಅದಾದ ಬಳಿಕ ಶಕ್ತಿಗೆ ಅನುಗುಣವಾಗಿ ಭಕ್ತಿಭಾವದಿಂದ ತುಂಬಿದ ಮನಸ್ಸುಳ್ಳವನಾಗಿ ಗುರ್ವಿಯೋ, ಮಹತಿಯೋ, ಲಘುವೋ ಆದ ಮಧ್ಯಾಹ್ನದ ಪೂಜೆಯನ್ನು ಆಚರಿಸಬೇಕು. (೬೨).

ಟಿಪ್ಪಣಿ : ಕಾರಣಾಗಮ, ಕ್ರಿ.ಪಾ. ೩.೬೬-೬೭, ೭೨; ಮಕುಟಾಗಮ, ಕ್ರಿ.ಪಾ. ೨.೩೭-೩೮, ೪೦. ಭಸ್ಮಸ್ನಾನ, ರುದ್ರಾಕ್ಷಧಾರಣ ಮತ್ತು ಸಂಧ್ಯಾದ್ವಯೋಪಾಸನೆಗಳ ವಿವರಗಳಿಗೆ ಇದೇ ಪಟಲದಲ್ಲಿ ಹಿಂದೆ ೧೦-೨೦ವರೆಗಿನ ಶ್ಲೋಕಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಟಿಪ್ಪಣಿಗಳನ್ನು ನೋಡಿರಿ. ಮಹತೀ, ಗುರ್ವೀ, ಲಘ್ವೀ ಎಂದು ಮೂರು ವಿಧವಾದ ಪೂಜೆಗಳ ಉಲ್ಲೇಖವಿದ್ದರೂ, ಅವುಗಳ ವಿವರಣೆ ಇಲ್ಲಿ ಬಂದಿಲ್ಲ. ಅವುಗಳ ವಿವರಣೆಯನ್ನು ಕಾರಣಾಗಮ, ಕ್ರಿ.ಪಾ. ೪ನೇ ಪಟಲದಲ್ಲಿ ಮತ್ತು ಮಕುಟಾಗಮ, ಕ್ರಿ.ಪಾ. ೩ನೇ ಪಟಲದಲ್ಲಿ ನೋಡಬಹುದು. ಅಲ್ಲಿ ಹೇಳಿರುವ ಪ್ರಕಾರ ಮಹತೀ ಪೂಜೆಯನ್ನು ಉತ್ತಮನು, ಗುರ್ವೀ ಪೂಜೆಯನ್ನು ಮಧ್ಯಮನು ಮತ್ತು ಲಘ್ವೀ ಪೂಜೆಯನ್ನು ಅಶಕ್ತನೂ ಮಾಡಬೇಕು (ಕಾರಣಾಗಮ, ಕ್ರಿ.ಪಾ. ೪.೫; ಮಕುಟಾಗಮ, ಕ್ರಿ.ಪಾ. ೩.೩). 'ಅವಸರಾ' ಎಂಬ ಇನ್ನೊಂದು ಪೂಜೆಯ ಪ್ರಕಾರವೂ ಇದೆ. ಇವುಗಳ ಭೇದವನ್ನು ಹೀಗೆ ಗುರುತಿಸಬೇಕು. ಮೊದಲನೆಯದಾಗಿ ಅವಸರಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂಜೆಯಲ್ಲಿ ಪದ್ಮಮಂಡಲ, ಲಘ್ವೀ ಪೂಜೆಯಲ್ಲಿಯೂ ಪದ್ಮಮಂಡಲ, ಗುರ್ವೀ ಪೂಜೆಯಲ್ಲಿ ತತ್ತ್ವಮಂಡಲವನ್ನು ರಚಿಸಬೇಕು. ಇವು ಉತ್ತರೋತ್ತರ ಶ್ರೇಷ್ಠ. ಪೂಜೆಗೆ ಯೋಗ್ಯವಾದ ಪಾತ್ರೆಗಳನ್ನು ಇರಿಸುವ ಸಲುವಾಗಿ ಇವುಗಳನ್ನು ಹೇಳಲಾಗಿದೆ. (ಕಾರಣಾಗಮ, ಕ್ರಿ.ಪಾ. ೪.೨೬ ಮತ್ತು ೧೭) ಮಕುಟಾಗಮ ಕ್ರಿ.ಪಾ. ೩.೫) **ಪದ್ಮಮಂಡಲದ ರಚನೆ :** ಬಿಳಿಯ ಅಕ್ಕಿ ಹಿಟ್ಟಿನಿಂದ ಅಷ್ಟದಲ ಪದ್ಮವನ್ನು ರಚಿಸಬೇಕು. ಪೂರ್ವದ ಕಡೆಗೆ ಎಂಟು ಉದ್ದರೇಖೆಗಳನ್ನು ಎಳೆಯಬೇಕು. ಮತ್ತೆ ಅಡ್ಡಲಾಗಿ ಎಂಟು ರೇಖೆಗಳನ್ನು ಹಾಕಬೇಕು. ಈ ರೀತಿ ೪೯ ಕೋಷ್ಠಕಗಳ ಒಂದು ಚಕ್ರವು ಸಿದ್ಧವಾಗುತ್ತದೆ. ೩೬ ಕೋಷ್ಠಕಗಳಲ್ಲಿ ಸೂಕ್ಷ್ಮ ಪದ್ಮಗಳನ್ನು ರಚಿಸಬೇಕು. ಮಧ್ಯದ ೧೩ ಕೋಷ್ಠಕಗಳಲ್ಲಿ ಎಂಟು ದಲದ ಕಮಲವನ್ನು ಬರೆಯಬೇಕು. ಮಂಡಲದ ನಾಲ್ಕೂ ಬದಿ ಹತ್ತು ಆಯುಧಗಳನ್ನು ರಚಿಸಬೇಕು. ಪೂರ್ವದಲ್ಲಿ ಸ್ವಸ್ತಿಕ ಮತ್ತು ಶಂಖ, ಆಗ್ನೇಯದಲ್ಲಿ ಕಮಲ, ದಕ್ಷಿಣದಲ್ಲಿ ಚಾಮರ ಮತ್ತು ಛತ್ರ, ನೈಋತ್ಯದಲ್ಲಿ ಪಂಚಕೋಣಾಕೃತಿ, ಪಶ್ಚಿಮದಲ್ಲಿ ನಾಗಬಂಧ, ವಾಯವ್ಯದಲ್ಲಿ ಷಟ್‌ಕೋಣಾಕೃತಿ, ಉತ್ತರದಲ್ಲಿ ಡಮರು ಮತ್ತು ಶೂಲ ಮತ್ತು ಈಶಾನ್ಯದಲ್ಲಿ ಅಷ್ಟಕೋಣಾಕೃತಿ, ಇವುಗಳನ್ನು ರಚಿಸಬೇಕು. (ಕಾರಣಾಗಮ, ಕ್ರಿ.ಪಾ. ೪.೧೮-೨೧). **ಭದ್ರಮಂಡಲದ ರಚನೆ :** ೩೭ ರೇಖೆಗಳನ್ನು ಮೇಲೆ-ಕೆಳಗೆ ಮತ್ತು ಅಡ್ಡಡ್ಡಲಾಗಿ ೩೭ ರೇಖೆಗಳನ್ನು ರಚಿಸಬೇಕು. ೧೨೯೬ ಕೋಷ್ಠಕಗಳ ಚಕ್ರ ಸಿದ್ಧವಾಗುತ್ತದೆ. ಅದರ ಮಧ್ಯದಲ್ಲಿ ೩೬ ದಲಗಳ ಕಮಲವನ್ನು ಬರೆಯಬೇಕು. ಸುತ್ತಲೂ ಎಲ್ಲಾ ಕೋಷ್ಠಕಗಳಲ್ಲಿ ಸೂಕ್ಷ್ಮ ಪದ್ಮಗಳನ್ನು ರಚಿಸಬೇಕು. ಮಂಡಲದ ಸುತ್ತ ೧೦ ಆಯುಧಗಳನ್ನು ರಚಿಸಬೇಕು. (ಕಾರಣಾಗಮ, ಕ್ರಿ.ಪಾ. ೪.೨೩-೨೪). **ತತ್ತ್ವಮಂಡಲ ರಚನೆ**ಯ ಬಗ್ಗೆ ವಿವರವನ್ನು ಕೊಡದೆ ಕಾರಣಾಗಮ, ಕ್ರಿ.ಪಾ. ೪.೨೫ ಇಷ್ಟನ್ನು ಮಾತ್ರ ಹೇಳಿದೆ- "ಇಷ್ಟಲಿಂಗಾರ್ಚನಪಾತ್ರವಿನ್ಯಾಸಾಯೋತ್ತಮಮ್। ತತ್ತ್ವಮಂಡಲ ಮಾಖ್ಯಾತಂ ತತ್ತ್ವಾನುಭವಸಾಧನಮ್॥" (ಇಷ್ಟಲಿಂಗದ ಪೂಜೆಗಾಗಿ ಪಾತ್ರೆಗಳನ್ನಿರಿಸಲು ತತ್ತ್ವಮಂಡಲವು ಸರ್ವಶ್ರೇಷ್ಠವೆಂದು ಹೇಳಲಾಗಿದೆ ಇದು ತತ್ತ್ವಾನುಭವಕ್ಕೆ ಸಾಧನವಾಗಿದೆ). ಎರಡನೆಯದಾಗಿ ಅವಸರಾ ಅಥವಾ ಲಘು ಪೂಜೆಯಲ್ಲಿ ಒಂದು ದೀಪವನ್ನು ಹಾಗೂ ಗುರ್ವೀ ಪೂಜೆಯಲ್ಲಿ ಮತ್ತು ಮಹತೀ ಪೂಜೆಗಳಲ್ಲಿ ಎರಡು ಅಥವಾ ನಾಲ್ಕು ದೀಪಗಳನ್ನು ಉರಿಸಬೇಕು. (ಕಾರಣಾಗಮ, ಕ್ರಿ.ಪಾ. ೪.೨೭; ಮಕುಟಾಗಮ, ಕ್ರಿ.ಪಾ. ೩.೮). ಮೂರನೆಯದಾಗಿ ಅವಸರಾ ಪೂಜೆಯಲ್ಲಿ ದರ್ಶನ, ಮಜ್ಜನ ಮತ್ತು ಅವಸರವೆಂಬ ಮೂರು ಆರತಿಗಳು (ಕಾರಣಾಗಮ, ಕ್ರಿ.ಪಾ. ೪.೨೮; ಮಕುಟಾಗಮ ಕ್ರಿ.ಪಾ. ೩.೧೦ರಲ್ಲಿ ಮಜ್ಜನವೆಂಬ ಆರತಿಯ ಬದಲಿಗೆ ಉತ್ತರ ಎಂಬ ಆರತಿ. ಮಜ್ಜನ ಎಂಬುದು ಲಘ್ವೀ ಪೂಜೆಯ ಒಂಬತ್ತರಲ್ಲಿ ಬಂದಿದೆ); ಲಘ್ವೀ ಪೂಜೆಯಲ್ಲಿ ಒಂಬತ್ತು ಆರತಿಗಳು- ದರ್ಶನ, ಅವಸರ, ಮಜ್ಜನ, ಮಾಂಗಲ್ಯ, ಕರ್ಪೂರ, ಶೃಂಗಾರ, ಮಹಾನೀರಾಜನ, ಆನಂದ ಮತ್ತು ಅಸಂಖ್ಯಾತ. (ಕಾರಣಾಗಮ, ಕ್ರಿ.ಪಾ. ೪.೨೯-೩೧; ಮಕುಟಾಗಮ, ಕ್ರಿ.ಪಾ. ೩.೧೧-೧೨); ಗುರ್ವೀ ಮತ್ತು ಮಹತೀ ಪೂಜೆಗಳಲ್ಲಿ ಹನ್ನೊಂದು ಆರತಿಗಳು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿ ಲಕ್ಷ್ಮೀ ಪೂಜೆಯಲ್ಲಿ ಹೇಳಿದ ಒಂಬತ್ತಕ್ಕೆ ಸಾನುರಾಗ ಮತ್ತು ತಾಂಬೂಲ ಎಂಬ ಎರಡು ಆರತಿಗಳನ್ನು ಸೇರಿಸಬೇಕು. (ಕಾರಣಾಗಮ, ಕ್ರಿ.ಪಾ. ೪.೩೨; ಮಕುಟಾಗಮ, ಕ್ರಿ.ಪಾ. ೩.೧೩). ನಾಲ್ಕನೆಯದಾಗಿ ಅವಸರಾ ಪೂಜೆಯಲ್ಲಿ ಮೂರು ಬತ್ತಿಗಳು, ಲಕ್ಷ್ಮೀ ಪೂಜೆಯಲ್ಲಿ ಒಂಬತ್ತು ಇಲ್ಲವೆ ಹನ್ನೆರಡು, ಗುರ್ವೀ ಪೂಜೆಯಲ್ಲಿ ಹದಿನೆಂಟು ಅಥವಾ ಮೂವತ್ತಾರು, ಮಹತೀ ಪೂಜೆಯಲ್ಲಿ ಒಂಬತ್ತರಿಂದ ಕ್ರಮವಾಗಿ ತೊಂಬತ್ತಾರು, ಒಂದು ನೂರಾ ಎಂಟು ಅಥವಾ ಮೂರು ನೂರು ಅಥವಾ ಒಂದು ಸಾವಿರ ಬತ್ತಿಗಳು (ಕಾರಣಾಗಮ, ಕ್ರಿ.ಪಾ. ೪.೩೩-೩೫; ಮಕುಟಾಗಮ, ಕ್ರಿ.ಪಾ. ೩.೬-೭). **ಪಂಚಯಜ್ಞಗಳು:** ಈ ಆಗಮದಲ್ಲಿ ಪಂಚಯಜ್ಞಗಳ ಉಲ್ಲೇಖವಿದ್ದರೂ, ಅವುಗಳ ಬಗ್ಗೆ ವಿವರಗಳಿಲ್ಲ. ಇತರ ಶೈವಾಗಮಗಳ ಉತ್ತರಭಾಗಗಳಲ್ಲಿ ಮೂರು ಪ್ರಕಾರದ ಪಂಚಯಜ್ಞಗಳನ್ನು ಹೇಳಿರುವುದನ್ನು ಕಾಣುತ್ತೇವೆ. ಮೊದಲನೆಯ ಪ್ರಕಾರದ ಪಂಚಯಜ್ಞಗಳು ಪ್ರಸಿದ್ಧವಾದ ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮನುಷ್ಯ ಯಜ್ಞ ಮತ್ತು ಬ್ರಹ್ಮಯಜ್ಞ. ಸಮಿತ್ ಮುಂತಾದವುಗಳಿಂದ ಅಗ್ನಿಗೆ ಹವಿಸ್ಸನ್ನು ಅರ್ಪಿಸುವುದು ದೇವಯಜ್ಞ, ಪಿತೃಗಳಿಗೆ ಜಲತರ್ಪಣವನ್ನು ಕೊಡುವುದು ಪಿತೃಯಜ್ಞ; ಭೂತಗಳಿಗೆ ಬಲಿಯನ್ನು ನೀಡುವುದು ಭೂತಯಜ್ಞ, ಬ್ರಾಹ್ಮಣರಿಗೆ ಅನ್ನ ಕೊಡುವುದು ಮನುಷ್ಯಯಜ್ಞ ಮತ್ತು ವೇದಾಧ್ಯಯನ ಮಾಡುವುದು ಬ್ರಹ್ಮಯಜ್ಞ. (ಕಾರಣಾಗಮ, ಕ್ರಿ.ಪಾ. ೩.೬೮-೭೦). ಸರ್ವವರ್ಣದವರೂ ಇಷ್ಟಲಿಂಗ ಧಾರಣೆಯಿಂದ ವೀರಶೈವರಲ್ಲಿ ಒಂದಾದರೂ ತ್ರೈವರ್ಣಿಕರ ಪೂರ್ವಾಶ್ರಯ ಸಂಪ್ರದಾಯಗಳ ಪುನರಾವರ್ತನೆಯಾದಂತೆ ಶೈವಾಗಮಗಳ ಉತ್ತರ ಭಾಗಗಳಲ್ಲಿ (ವೀರಶೈವ ಭಾಗಗಳಲ್ಲಿ) ದೇವಯಜ್ಞ ಮುಂತಾದ ಪಂಚಯಜ್ಞಗಳ ನಿಯಮಗಳು ಉಳಿದುಕೊಂಡು ಬಂದಂತೆ ತೋರುತ್ತದೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ ವೀರಶೈವರಲ್ಲಿ ಇವುಗಳ ರೂಪಾಂತರಗಳನ್ನು ಆಚರಣೆಗಳಲ್ಲಿ ಕಾಣಬಹುದು. ಉದಾಹರಣೆಗೆ-ಹೋಮ ಮಾಡುವುದು; ದೀಕ್ಷೆ, ವಿವಾಹ, ಮುಂತಾದವುಗಳಲ್ಲಿ ಸರ್ವದೋಷ ನಿವಾರಣೆಗೆ ಇದನ್ನು ಮಾಡುತ್ತಾರೆ. ಇದು ದೇವಯಜ್ಞದ ರೂಪಾಂತರ. ಪಿತೃಯಜ್ಞವು ವೀರಶೈವರಲ್ಲಿ ಹಿರಿಯರನ್ನು ಮಾಡುವುದು; ಹೊಸ ಬಟ್ಟೆ ತಂದು ಗದ್ದಿಗೆಗೆ ಹಾಕಿ ಗುರುಗಳ ಪಾದ ಪೂಜೆ ಮಾಡಿ ಹಿರಿಯರಿಗೆ ತೀರ್ಥ-ಪ್ರಸಾದಗಳನ್ನು ಅರ್ಪಿಸುತ್ತಾರೆ. (ಪಿಂಡ ಪ್ರಧಾನ, ತರ್ಪಣಗಳಿಲ್ಲ). ಗೋವು, ಪಕ್ಷಿಗಳಿಗೆ ಆಹಾರ ನೀಡುವುದು ಭೂತಯಜ್ಞದ ಅವಶೇಷ (ಭೂತ=ಜೀವಿಗಳು). ಶಿವಗಣಾರಾಧನೆ ಮುಂತಾದವು ಮನುಷ್ಯಯಜ್ಞದ ರೂಪಾಂತರ. ರುದ್ರಾಧ್ಯಾಯದ ಪಠನ ಮುಂತಾದವು, ಆಗಮಗಳ, ಶಾಸ್ತ್ರ ಗ್ರಂಥಗಳ ಅಧ್ಯಯನ ಬ್ರಹ್ಮಯಜ್ಞ, ಎರಡನೆಯ ಪ್ರಕಾರದ ಪಂಚಯಜ್ಞಗಳನ್ನು ಸೂಕ್ಷ್ಮಾಗ್ರಮವು ಹೇಳಿದೆ; ಅವು ಕರ್ಮಯಜ್ಞ, ತಪೋಯಜ್ಞ, ಜಪಯಜ್ಞ, ಧ್ಯಾನಯಜ್ಞ ಮತ್ತು ಜ್ಞಾನಯಜ್ಞ (ಕ್ರಿ.ಪಾ. ೬.೨೬). ಕರ್ಮಯಜ್ಞವೆಂದರೆ ಪೂಜಾದಿಗಳು; ಅದು ಸಕಾಮ ಅಕಾಮ ಎಂದು ಎರಡು ವಿಧ; ಸಕಾಮದಿಂದ ಸ್ವರ್ಗ, ಅಕಾಮದಿಂದ ಮೋಕ್ಷ. ಹಿಂಸೆ ಮುಂತಾದ ದೋಷಗಳಿಲ್ಲದೆ, ರಾಗ ಮುಂತಾದ ಗುಣಗಳಿಲ್ಲದ ತಪೋಯಜ್ಞವು ಮೋಕ್ಷಫಲವುಳ್ಳದ್ದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜಪಯಜ್ಞವು ಜ್ಞಾನ-ಧ್ಯಾನ-ಮೋಕ್ಷಗಳನ್ನು ಕೊಡುತ್ತದೆ; ಜಪವೆಂದರೆ ಅಂತರ್ಯಾಗ. ಶ್ರೀ ಗುರುವಿನಿಂದ ಪಡೆದ ಪರಜ್ಞಾನದಿಂದ ಧ್ಯಾನಯೋಗದಲ್ಲಿ ನಿರತನಾಗುವುದು ಧ್ಯಾನಯಜ್ಞ, ಶಿವನನ್ನು ಚಿತ್ತದಲ್ಲಿ ಪ್ರತಿಷ್ಠಿಸಿ ಧ್ಯಾನಿಸುತ್ತಾ ಪಂಚಾಕ್ಷರ ಮಂತ್ರವನ್ನು ಜಪಿಸಿ ಇಷ್ಟಲಿಂಗವನ್ನು ಪೂಜಿಸುವುದು ಜ್ಞಾನಯಜ್ಞ. (ಸೂಕ್ಷ್ಮಾಗ್ರಮ, ಕ್ರಿ.ಪಾ. ೬.೨೭-೩೬). ಇದಕ್ಕೆ ಅನುಗುಣವಾಗಿ ಬೆಳೆದ ಪಂಚಯಜ್ಞಗಳ ಮೂರನೆಯ ಪ್ರಕಾರವು ಸುಪ್ರಭೇದಾಗಮದಲ್ಲಿ ಬಂದಿದೆ. ತಪಸ್ಸು, ಕರ್ಮ, ಜಪ, ಧ್ಯಾನ ಮತ್ತು ಜ್ಞಾನ -ಇವು ವೀರಶೈವರ ಪಂಚಯಜ್ಞಗಳೆಂದು ಪ್ರಸಿದ್ಧವಾಗಿವೆ. ಶಿವನಿಗಾಗಿ ದೇಹವನ್ನು ದಂಡಿಸುವುದು **ತಪಸ್ಸು**, ಕೃಚ್ಛ್ರವಾದ ಚಾಂದ್ರಾಯಣಾದಿ ವ್ರತಗಳಲ್ಲ; ಶಿವಪೂಜೆಯೇ **ಕರ್ಮ**, ಬಾಹ್ಯ ಯಜ್ಞಾದಿಗಳಲ್ಲ; ಪ್ರಣವಸಹಿತ ಪಂಚಾಕ್ಷರ ಮಂತ್ರದ ಉಚ್ಚಾರ, ರುದ್ರಾಧ್ಯಾಯ ಮುಂತಾದವುಗಳ ಪಾರಾಯಣ **ಜಪ**, ಕರ್ಮಕಾಂಡ ಬೋಧಕವಾದ ವೇದಾಧ್ಯಯನವಲ್ಲ; ಶಿವನ ಸ್ವರೂಪ ಚಿಂತನೆಯೇ **ಧ್ಯಾನ**, ಆತ್ಮಾದಿ ಚಿಂತನವಲ್ಲ; ಶಿವಾಗಮಾದಿಗಳ ಅರ್ಥ ಗ್ರಹಣವೇ ಜ್ಞಾನ, ಇತರ ಶಾಸ್ತ್ರಾಭ್ಯಾಸವಲ್ಲ. (ಸುಪ್ರಭೇದಾಗಮ, ೭.೬-೮; ಪಾರಮೇಶ್ವರಾಗಮ, ೧೭. ೮೦-೮೨-ಇಲ್ಲಿ ನಾಲ್ಕು ಯಜ್ಞಗಳ ವಿವರಣೆ ಮಾತ್ರ ಬಂದಿದೆ; ಶ್ರೀ ಸಿದ್ಧಾಂತ ಶಿಖಾಮಣಿ, ೯.೨೨-೨೪).

ಷಟ್ಸು ಕಾಲೇಷ್ವಿಷ್ಟಲಿಂಗಾರಾಧನಮ್

ಷಟ್ಸು ಕಾಲೇಷು ಸಂಪೂಜ್ಯಂ ತ್ರಿಸಂಧ್ಯಮಥವಾ ಪುನಃ।
ಇಷ್ಟಲಿಂಗಂ ಮಹೇಶಸ್ಯ ಸರ್ವಾನಿಷ್ಟನಿಷೂದನಮ್ ॥ ೬೩ ॥

ಅರುಣಸ್ಯೋದಯೇ ಭಾನೋರುದಯೇ ಸಂಗವೇ ತಥಾ।
ಮಧ್ಯಾಹ್ನೇ ಚ ತಥಾ ಸಾಯಮರ್ಧರಾತ್ರೌ ಬೃಹಸ್ಪತೇ॥
ಷಟ್ಕಾಲಮರ್ಚನೀಯಂ ಸ್ಯಾಚ್ಛಿವಲಿಂಗಮನಾಮಯಮ್ ॥ ೬೪ ॥

ಆರು ಕಾಲಗಳಲ್ಲಿ ಇಷ್ಟಲಿಂಗದ ಆರಾಧನೆ

ಆರು ಸಮಯಗಳಲ್ಲಿ ಅಥವಾ ಮೂರು ಸಂಧ್ಯೆಗಳಲ್ಲಿ ಭಗವಾನ್ ಮಹೇಶ್ವರನ ಸ್ವರೂಪ ಭೂತವಾದ ಮತ್ತು ಎಲ್ಲಾ ಅನಿಷ್ಟಗಳನ್ನು ದೂರ ಮಾಡುವ ಇಷ್ಟಲಿಂಗದ ಪೂಜೆಯನ್ನು ಮಾಡಬೇಕು. (೬೩). ಬೃಹಸ್ಪತಿಯೇ, ಅರುಣೋದಯ, ಸೂರ್ಯೋದಯ, ಸಂಗವ, ಮಧ್ಯಾಹ್ನ, ಸಾಯಂಕಾಲ ಮತ್ತು ಅರ್ಧರಾತ್ರಿ ಎಂಬ ಆರು ಕಾಲಗಳಲ್ಲಿ ಎಲ್ಲಾ ಆಪತ್ತುಗಳನ್ನು ದೂರ ಮಾಡುವ ಶಿವಲಿಂಗವನ್ನು ಪೂಜಿಸಬೇಕು. (೬೪).

ಟಿಪ್ಪಣಿ : ಹಿಂದೆ ೧೦.೨೫-೨೭ರ ಟಿಪ್ಪಣಿಯನ್ನು ನೋಡಿರಿ. ಸಂಗವವೆಂದರೆ ಗೋವುಗಳ ಹಾಲು ಕರೆದುಕೊಂಡು ಮೇಯುವುದಕ್ಕೆ ಬಿಡುವ ಕಾಲ. ಮಕುಟಾಗಮ, ಕ್ರಿ.ಪಾ. ೨.೪೦; ಕಾರಣಾಗಮ, ಕ್ರಿ.ಪಾ. ೩.೫೮ನ್ನೂ ನೋಡಿರಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವಸರಾ ಪೂಜಾ

ಅಭೋಜನೇ ತ್ವವಸರಾ ವಿಧೇಯಾ ಹ್ಯನ್ಯಥಾ ಪರಾ।
ಲಘುರ್ಗುರುರ್ವಾ ಮಹತೀ ಪೂಜಾ ಶಕ್ತ್ಯನುಸಾರತಃ ॥ ೬೫ ॥

ಅವಸರಾ ಪೂಜೆ

ಅವಸರಾ ಪೂಜೆಯನ್ನು ಊಟ ಮಾಡದೆ ಮಾಡಬೇಕು. ಇದಕ್ಕೆ ಭಿನ್ನವಾಗಿ ಬೇರೆ ಲಘ್ವೀ, ಗುರ್ವೀ ಅಥವಾ ಮಹತೀ ಪೂಜೆಯನ್ನು ಶಕ್ತಿಗೆ ಅನುಸಾರವಾಗಿ ಮಾಡಬೇಕು. (೬೫).

ಟಿಪ್ಪಣಿ : ಮಕುಟಾಗಮ, ಕ್ರಿ.ಪಾ. ೨.೪೧ನ್ನೂ ನೋಡಿರಿ.

ಅತಿಥಿಜಂಗಮಪೂಜನಮ್

ಪಂಡಿತೋ ವಾಽಥವಾ ಮೂರ್ಖಃ ಪ್ರಿಯೋ ವಾ ದ್ವೇಷ್ಯ ಏವ ವಾ।
ಸಂಪ್ರಾಪ್ತೋ ಯಸ್ತು ಪೂಜಾಂತೇ ಸ ವೈ ಶಂಭುರ್ನ ಸಂಶಯಃ ॥ ೬೬ ॥

ಮಾಹೇಶ್ವರಂ ಹಿ ಸದ್ಭಕ್ತ್ಯಾ ಪೂಜಯೇದ್ ಗೃಹಮಾಗತಮ್।
ಜಂಗಮಂ ಚ ಸಮಾರಾಧ್ಯ ಪ್ರಸಾದಮುಪಭುಜ್ಯ ಚ ॥ ೬೭ ॥

ಸುಖಮಾಸ್ಥಾಯ ನಿಶ್ಚಿಂತಸ್ತದನ್ನಂ ಪರಿಣಾಮಯನ್।
ಸ್ತೋತ್ರಾಣಿ ಚ ಮಹೇಶಸ್ಯ ಪುರಾಣಾನಿ ಪಠೇತ್ ಪುನಃ॥
ಆಸಾಯಮಥ ಕುರ್ವೀತ ಯತ್ನಂ ಪೋಷ್ಯಾರ್ಥಸಿದ್ಧಯೇ ॥ ೬೮ ॥

ಅತಿಥಿ ಜಂಗಮ ಪೂಜೆ

ಪಂಡಿತನಾಗಲಿ ಅಥವಾ ಮೂರ್ಖನಾಗಲಿ, ಪ್ರಿಯನಾಗಲಿ ಅಥವಾ ವೈರಿಯಾಗಲಿ, ಯಾರೇ ಆಗಲಿ ಪೂಜೆಯ ಕೊನೆಯಲ್ಲಿ ಯಾರು ಮನೆಗೆ ಬರುತ್ತಾನೋ ಅವನೇ ಶಂಭುವು, ಸಂಶಯವಿಲ್ಲ. (೬೬). ಮನೆಗೆ ಬಂದ ಮಾಹೇಶ್ವರನನ್ನು ಸದ್ಭಕ್ತಿಯಿಂದ ಪೂಜಿಸಬೇಕು. ಜಂಗಮನನ್ನು ಪೂಜಾದಿಗಳಿಂದ ಸತ್ಕರಿಸಿ, ಪ್ರಸಾದವನ್ನು ಉಂಡು ಸುಖವಾಗಿ ಕುಳಿತು ನಿಶ್ಚಿಂತನಾಗಿ ಉಂಡ ಅನ್ನವನ್ನು ಅರಗಿಸಿಕೊಳ್ಳುತ್ತಾ ಮಹೇಶ್ವರನ ಸ್ತೋತ್ರಗಳನ್ನು, ಪುರಾಣಗಳನ್ನು ಪಠಿಸಬೇಕು. ಅನಂತರ ಸಾಯಂಕಾಲದ ವರೆಗೆ ಜೀವನ ಪೋಷಣೆಗೆ ಅರ್ಥವನ್ನು ಗಳಿಸುವ ಪ್ರಯತ್ನವನ್ನು ಮಾಡಬೇಕು. (೬೭-೬೮).

ಟಿಪ್ಪಣಿ : ಕಾರಣಾಗಮ, ಕ್ರಿ.ಪಾ. ೩.೭೩-೭೬; ಮಕುಟಾಗಮ ಕ್ರಿ.ಪಾ. ೨. ೪೩-೪೬ನ್ನು ನೋಡಿರಿ.

ಸಾಯಂಕೃತ್ಯಾನಿ

ಸಾಯಂ ತು ವಾರುಣಂ ಸ್ನಾನಂ ನಿರ್ವರ್ತ್ಯಾಗ್ನೇಯಮೇವ ವಾ।
ಉಪಾಸ್ಯ ಪಶ್ಚಿಮೇ ಸಂಧ್ಯೇ ವಹ್ನಿಕಾರ್ಯಂ ಸಮಾಪ್ಯ ಚ॥
ವೈಶ್ವದೇವಂ ವಿಧಾಯಾಥ ರಾತ್ರಿಪೂಜಾಂ ಸಮಾಚರೇತ್ ॥ ೬೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅತಿಥಿಂ ಚ ಸಮಾರಾಧ್ಯ ಪ್ರಸಾದಮುಪಭುಜ್ಯ ಚ।
ಪಠನ್ ಸ್ತೋತ್ರಾಣಿ ವೈ ಶಂಭೋಸ್ತದನ್ನಂ ಪರಿಣಾಮಯನ್ ॥ ೭೦ ॥
ಅಧಿಶಯ್ಯಾಭಿಸರುಚಿತಾಂ ಶಯ್ಯಾಂ ಶಂಭುಂ ಶುಚಿಃ ಸ್ಮರನ್।
ಧ್ಯಾಯನ್ ಶಯೀತ ನಿಶ್ಚಿಂತಸ್ತತೋ ನಿದ್ರಾಸುಖಂ ವ್ರಜೇತ್ ॥ ೭೧ ॥
ಶಾಂಭವಾನಾಮನುಷ್ಠೇಯೋ ಧರ್ಮಸ್ತೇ ವಿನಿಬೋಧಿತಃ।
ಏವಂ ಸಮಾಚರನ್ ಮರ್ತ್ಯೋ ಮುಚ್ಯತೇ ಸರ್ವಕಿಲ್ಬಿಷೈಃ ॥ ೭೨ ॥
ನಾಸಿಕ್ಯಾದಥ ಬಾಲಿಶ್ಯಾದ್ ಯೋ ಧರ್ಮಂ ನ ನಿಷೇವತೇ।
ಸ ಗರ್ಹಾಮಿಹ ಸಂಪ್ರಾಪ್ಯ ಹೀನಯೋನಿಷು ಜಾಯತೇ ॥ ೭೩ ॥

**ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರಬೃಹಸ್ಪತಿ-
ಸಂವಾದೇ ಶಿವಶಾಸನೇ ಕ್ರಿಯಾಪಾದೇ ಆಹ್ನಿಕವಿಧಿರ್ನಾಮ
ಏಕಾದಶಃ ಪಟಲಃ ॥ ೧೧ ॥**

ಸಾಯಂಕಾಲದ ಕರ್ತವ್ಯಗಳು

ಸಾಯಂಕಾಲ ಜಲಸ್ನಾನವನ್ನೋ ಅಥವಾ ಆಗ್ನೇಯ (ಭಸ್ಮ) ಸ್ನಾನವನ್ನೋ ಮಾಡಿ ಪಶ್ಚಿಮ (ಸಾಯಂಕಾಲೀನ) ಎರಡೂ ಸಂಧ್ಯೋಪಾಸನೆಗಳನ್ನು ಮಾಡಿ ಅಗ್ನಿಕಾರ್ಯವನ್ನು ಪೂರ್ತಿ ಮಾಡಿ ವೈಶ್ವದೇವ ವಿಧಿಯನ್ನು ಪೂರೈಸಿ, ರಾತ್ರಿ ಪೂಜೆಯನ್ನು ಮಾಡಬೇಕು. (೬೯). ಬಂದಂತಹ ಅತಿಥಿಯ ಸತ್ಕಾರವನ್ನು ಮಾಡಿ ಪ್ರಸಾದವನ್ನು ಉಂಡು ಶಂಭುವಿನ ಸ್ತೋತ್ರಗಳನ್ನು ಹಾಡುತ್ತಾ, ಉಂಡ ಅನ್ನವನ್ನು ಅರಗಿಸಿಕೊಳ್ಳುತ್ತಾ, ಮನಸ್ಸಿಗೆ ಹಿಡಿಸಿದ ಹಾಸಿಗೆಯ ಮೇಲೆ ಶುದ್ಧ ಮನಸ್ಸಿನಿಂದ ಶಂಭುವನ್ನು ಸ್ಮರಿಸುತ್ತಾ, ಧ್ಯಾನಿಸುತ್ತಾ ಮಲಗಬೇಕು ಮತ್ತು ನಿದ್ರಾಸುಖವನ್ನು ಅನುಭವಿಸಬೇಕು. (೭೦-೭೧). ನಿನಗೆ ಈಗ ಶಾಂಭವವ್ರತನಿಷ್ಠರಾದವರು ಮಾಡಬೇಕಾದ ಧರ್ಮವನ್ನು ಬೋಧಿಸಿದ್ದೇನೆ. ಹಾಗೆ ಆಚರಿಸಿದ ಮನುಷ್ಯನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ. (೭೨). ಯಾರು ನಾಸ್ತಿಕತ್ವದ ಕಾರಣದಿಂದಲೋ ಅಥವಾ ಮೂರ್ಖತ್ವದ ಕಾರಣದಿಂದಲೋ ಧರ್ಮವನ್ನು ಆಶ್ರಯಿಸುವುದಿಲ್ಲವೋ (ಆಚರಿಸುವುದಿಲ್ಲವೋ) ಅವನು ಇಹದಲ್ಲಿ ನಿಂದೆಯನ್ನು ಹೊಂದಿ ನೀಚ ಜಾತಿಗಳಲ್ಲಿ ಹುಟ್ಟುತ್ತಾನೆ. (೭೩).

**ಇಲ್ಲಿಗೆ ಶ್ರೀ ಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ
ಅನಂತರುದ್ರ-ಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಕ್ರಿಯಾಪಾದದಲ್ಲಿ
ಆಹ್ನಿಕವಿಧಿಯೆಂಬ ಏಕಾದಶ ಪಟಲ ಮುಗಿಯಿತು. (೧೧)**

ಟಿಪ್ಪಣಿ : ಪಶ್ಚಿಮೇ ಸಂಧ್ಯೆ-ಹಿಂದೆ ೧೧. ೧೬-೧೭, ೬೧ನ್ನು ನೋಡಿರಿ. ಮಕುಟಾಗಮ, ಕ್ರಿ.ಪಾ. ೨.೪೭-೫೦; ಕಾರಣಾಗಮ, ಕ್ರಿ.ಪಾ. ೩.೭೭-೮೧ನ್ನೂ ನೋಡಿರಿ.

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವಾದಶಃ ಪಟಲಃ

॥ ವರ್ಣಾಶ್ರಮಧರ್ಮಾವಶ್ಯಕತಾಕಥನಮ್॥

ಬೃಹಸ್ಪತಿರುವಾಚ

ಭಗವನ್ ಸರ್ವಧರ್ಮಜ್ಞ ಸರ್ವಭೂತಹಿತೇರತ।
ಶಾಂಭವಾನಾಂ ಮುಮುಕ್ಷೂಣಾಂ ಶಂಭುಪಾದಾಬ್ಜಸೇವಿನಾಮ್ ॥ ೧ ॥
ವರ್ಣಾಶ್ರಮೋಚಿತಾ ಧರ್ಮಾಃ ಕಥಮಾವಶ್ಯಕಾ ವಿಭೋ।
ಶಾಂಭವವ್ರತಮೇವೋಕ್ತಂ ಪರಮಂ ಮುಕ್ತಿಸಾಧನಮ್। ॥ ೨ ॥
ಸತ್ಯೇವಂ ವಿವಿಧೈರ್ಧರ್ಮೈರ್ಜ್ಞಾನಪ್ರತ್ಯೂಹಕಾರಿಭಿಃ।
ಭಕ್ತಾನಾಂ ದೇವದೇವಸ್ಯ ಕಿಂ ಫಲಂ ಸಮನುಷ್ಠಿತೈಃ ॥ ೩ ॥

ಬೃಹಸ್ಪತಿಯು ಹೇಳಿದನು

ಭಗವನ್ ಸರ್ವಧರ್ಮಜ್ಞನೇ, ಎಲ್ಲಾ ಪ್ರಾಣಿಗಳ ಹಿತನಿರತನೇ, ಪ್ರಭುವೇ, ಮೋಕ್ಷಾಪೇಕ್ಷಿಗಳಾದ, ಶಂಭುವಿನ ಪಾದಕಮಲದ ಸೇವೆ ಮಾಡುವವರಾದ ಶಾಂಭವರಿಗೆ ವರ್ಣಾಶ್ರಮಗಳಿಗೆ ಉಚಿತವಾದ ಧರ್ಮಗಳು (ಆಚರಣೆಗಳು) ಹೇಗೆ ತಾನೇ ಆವಶ್ಯಕವಾದಾವು? ಶಾಂಭವವ್ರತವನ್ನು ಶ್ರೇಷ್ಠ ಮುಕ್ತಿಸಾಧನವೆಂದು ಹೇಳಲಾಗಿದೆ. (೧-೨). ಹೀಗಿರುವಾಗ ದೇವದೇವನೇ ಜ್ಞಾನಮಾರ್ಗಕ್ಕೆ ವಿಘ್ನವನ್ನುಂಟು ಮಾಡುವ ಈ ವಿವಿಧ ಧರ್ಮಗಳ ಅನುಷ್ಠಾನದಿಂದ ಭಕ್ತರಿಗೆ ಏನು ಫಲ? (೩).

ಅನಂತರುದ್ರ ಉವಾಚ

ಗೀಷ್ಪತೇ ಪ್ರವಕ್ಷ್ಯಾಮಿ ಸಾವಧಾನಮನಾಃ ಶೃಣು।
ಇದಂ ರಹಸ್ಯಂ ಪರಮಂ ಪರಂ ಸಂದಿಹತೇ ಬುಧಾಃ ॥ ೪ ॥

ಅನಂತರುದ್ರನು ಹೇಳಿದನು

ಬೃಹಸ್ಪತಿಯೆ, ನಾನು ನಿನಗೆ ಹೇಳುತ್ತೇನೆ. ಏಕಾಗ್ರಚಿತ್ತದಿಂದ ಕೇಳು. ಇದು ಪರಮ ರಹಸ್ಯ, ವಿದ್ವಾಂಸರು ಹೆಚ್ಚಾಗಿ ಸಂದೇಹ ಪಡುತ್ತಾರೆ. (೪).

ಜ್ಞಾನಕರ್ಮಸಮುಚ್ಚಯಃ

ಜ್ಞಾನಂ ಹಿ ಪರಮೇಶಸ್ಯ ಗದಿತಂ ಮುಕ್ತಿದಂ ಮುನೇ।
ತತ್ ಕರ್ಮಸಹಿತಂ ಪ್ರೋಕ್ತಂ ಮುಕ್ತಿದಾನಕ್ಷಮಂ ಕ್ಷಿತಿ ॥ ೫ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಪಶ್ಯನ್ನಂಧಕೋ ದಗ್ಧಃ ಪಶ್ಯನ್ ದಹತಿ ಪಂಗುಲಃ।
ಅಂಧಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೀ ॥ ೬ ॥

ಕರ್ಮ ವೈದಿಕಮಪ್ಯೇಕೇ ಮನ್ಯಂತೇ ಬಂಧಕಂ ಜನಾಃ।
ತತ್ತಥಾ ಜ್ಞಾನರಹಿತಂ ಮುಕ್ತಿದಂ ಜ್ಞಾನಸಂಯುತಮ್ ॥ ೭ ॥

ಯದಪೀಶ್ವರನಿಧ್ಯಾನನಿಷ್ಠಾವಿವಶಚೇತಸಃ।
ನ ಕರ್ಮಣಾ ವಿನಿರ್ಬಂಧೋ ವಿದ್ಯತೇ ಪರಮಾರ್ಥತಃ ॥ ೮ ॥

ಜ್ಞಾನ-ಕರ್ಮ ಸಮುಚ್ಚಯ

ಮುನಿಯೇ, ಪರಮೇಶ್ವರನ ಜ್ಞಾನವೇ ಮುಕ್ತಿಯನ್ನು ಕೊಡುವಂತಹದು ಎಂದು ಹೇಳಲಾಗಿದೆ. ಆದರೆ ಆದು ಕರ್ಮದೊಂದಿಗೆ ಕೂಡಿದಾಗ ಮಾತ್ರ ಮುಕ್ತಿಯನ್ನು ಕೊಡಲು ಸಮರ್ಥವೆಂದು ಉಕ್ತವಾಗಿದೆ. (೫). ನೋಡದೆಯೇ ಕುರುಡನು ಸುಟ್ಟು ಹೋದ. ನೋಡಿದರೂ ಕುಂಟನು ಸುಟ್ಟು ಹೋಗುವನು. ಕುರುಡ ಮತ್ತು ಕುಂಟರಂತೆ ಜ್ಞಾನ ಮತ್ತು ಕರ್ಮಗಳು ಪರಸ್ಪರ ಸಾಪೇಕ್ಷ (ಅವಲಂಬಿತ)ವಾಗಿವೆ. (೬). ಕೆಲ ಜನರು ವೈದಿಕಕರ್ಮವನ್ನು ಬಂಧನಕ್ಕೆ ಕಾರಣವೆಂದು ತಿಳಿದ್ದುತ್ತಾರೆ. ಜ್ಞಾನರಹಿತವಾಗಿದ್ದರೆ ಅದು ಹಾಗೆ; ಜ್ಞಾನಸಹಿತವಾಗಿದ್ದರೆ ಮುಕ್ತಿಯನ್ನು ಕೊಡುವಂತಹದು. (೭). ವಾಸ್ತವವಾಗಿ ಪರಮೇಶ್ವರನ ನಿರಂತರ ಧ್ಯಾನದಲ್ಲಿ ನಿಷ್ಠವಾಗಿ ಆದರಲ್ಲಿಯೇ ಮನಸ್ಸು ಪರವಶ (ಶಿವವಶ) ವಾದಾಗ ಕರ್ಮದಿಂದ ಯಾವುದೇ ಬಂಧನವಿರಲಾರದು. (೮).

ಟಿಪ್ಪಣಿ : "ಅಪಶ್ಯನ್ನಂಧಕೋದಗ್ಧಃ ಪಶ್ಯನ್ ದಹತಿ ಪಂಗುಲಃ" ಈ ಶ್ಲೋಕಾರ್ಧವು ಶ್ರೀಸಿದ್ಧಾಂತಶಿಖಾಮಣಿ, ೧೬.೧೧ ರಲ್ಲಿ ಬಂದಿದೆ. ಇಲ್ಲಿ ಜ್ಞಾನ-ಕರ್ಮಗಳ ಸಮುಚ್ಚಯವನ್ನು ಅಂಧ-ಪಂಗು ನ್ಯಾಯದಿಂದ ವಿವರಿಸಲಾಗಿದೆ. ಕಾಣದೆ ಕುರುಡನು ಸುಟ್ಟು ಹೋಗುತ್ತಾನೆ, ಕಂಡೂ ಓಡಲಾಗದೆ ಕುಂಟನು ಸುಟ್ಟುಹೋದ. ಕುರುಡ ಮತ್ತು ಕುಂಟರು ಪರಸ್ಪರ ಸಹಕಾರವನ್ನು ಹೊಂದಿದರೆ ಪಾರಾಗಬಹುದು. ಹಾಗೆಯೇ ಮೋಕ್ಷವೆಂಬ ಗುರಿಯನ್ನು ತಲುಪಲು ಜ್ಞಾನ ಮತ್ತು ಕರ್ಮಗಳು ಪರಸ್ಪರ ಸಾಪೇಕ್ಷ. ಜ್ಞಾನವಿಲ್ಲದೆ ಕರ್ಮ ಕುರುಡು, ಕರ್ಮವಿಲ್ಲದೆ ಜ್ಞಾನ ಹೆಳವ. ಪರಸ್ಪರ ಪೂರಕವಾದರೆ ಗುರಿ ಮುಟ್ಟಬಹುದು. ಷಟ್‌ಸ್ಥಲ ಮಾರ್ಗದಲ್ಲಿ ಭಕ್ತ, ಮಾಹೇಶ್ವರ ಮತ್ತು ಪ್ರಸಾದಿಯೆಂಬ ಮೊದಲು ಮೂರು ಸ್ಥಲಗಳಲ್ಲಿ ಶ್ರೀಗುರುವಿನ ಉಪದೇಶದಿಂದ ದೊರೆತ ಶಿವ, ಜೀವ, ಜಗತ್ತುಗಳ ಸ್ವರೂಪ ಜ್ಞಾನವು ಶ್ರದ್ಧಾ, ನಿಷ್ಠಾ, ಅವಧಾನ ಭಕ್ತಿಗಳಿಗೆ ಮತ್ತು ಅವುಗಳಿಂದ ವಿಶಿಷ್ಟವಾದ ಶಿವಪೂಜೆಗೆ ಪ್ರೇರಕವಾಗಿ, ಪೋಷಕವಾಗಿ ಬರುತ್ತದೆ. ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಸ್ಥಲಗಳಲ್ಲಿ ನೆಲೆಯಿಂದ ನೆಲೆಗೆ ಬಾಹ್ಯ ಪೂಜೆ (ಇಷ್ಟಲಿಂಗ ಪೂಜೆ)ಯ ಸಂಸ್ಕಾರದಿಂದ ಬಂದ ಅನುಭವದಿಂದ ಅನುಭಾವವು ಸಿದ್ಧಿಸಿ ಅನುಭಾವ, ಆನಂದ, ಸಮರಸ ಭಕ್ತಿಗಳಿಂದ ವಿಶಿಷ್ಟವಾದ ಆಂತರಿಕ ಶಿವಪೂಜೆ (ಪ್ರಾಣಲಿಂಗಪೂಜೆ)ಯು ಭಾವಾತ್ಮಕವಾಗುತ್ತಾ 'ಶಿವೋಽಹಂ' ಭಾವದ ಸಾಕ್ಷಾತ್ಕಾರವಾಗಿ ಶಿವ-ಜೀವರ ಸಮರಸೈಕ್ಯದಲ್ಲಿ ಪರ್ಯವಸಾನವಾಗುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರ್ಮ ನೈವ ಸಂತ್ಯಾಜ್ಯಮ್

ತದಪೀಶ್ವರನಿಧ್ಯಾನನಿಷ್ಠಾಭ್ಯಾಸಪರಸ್ಯ ಚ।
ಅವಿಸ್ಮೃತಪ್ರಪಂಚಸ್ಯ ಸಾಧಕಸ್ಯ ಹಿತೈಷಿಣಃ॥
ನ ಭವೇತ್ ಕರ್ಮ ಸಂತ್ಯಾಜ್ಯಂ ವರ್ಣಾಶ್ರಮನಿಯಂತ್ರಿತಮ್ ॥ ೯ ॥
ಅನರ್ಪಿತಂ ಯದೀಶಾಯ ಯದಜ್ಞಾನವಿಚೇಷ್ಟಿತಮ್।
ಫಲಾಭಿಸಂಧಿಸಹಿತಂ ಯತ್ತದ್ ಬಂಧಕರಂ ಮತಮ್ ॥ ೧೦ ॥
ಅರ್ಪಿತಂ ಯನ್ಮಹೇಶಾಯ ಯಚ್ಚ ಜ್ಞಾನಸಮನ್ವಿತಮ್।
ಫಲಾಭಿಸಂಧಿರಹಿತಂ ಯತ್ತನ್ಮುಕ್ತಿಕರಂ ಮತಮ್ ॥ ೧೧ ॥
ನ ಕರ್ಮಣಾಮನಾರಂಭೋ ಮುಕ್ತ್ಯೈ ಸ್ಯಾನ್ಮುನಿಪುಂಗವ।
ಬುದ್ಧ್ಯಾ ಯಃ ಕರ್ಮಸಂತ್ಯಾಗಃ ಸ ದೋಷಾಯ ಭವೇದ್ಧ್ರುವಮ್॥
ಜಹಾತಿ ಕರ್ಮ ಧ್ಯಾನಸ್ಥಂ ಸುಪ್ತಹಸ್ತಸ್ಥಪುಷ್ಪವತ್ ॥ ೧೨ ॥
ನ ಯಾವಲ್ಲಯಮಾಪ್ನೋತಿ ಚಿತ್ತಂ ಶಂಭೌ ಪರಾತ್ಮನಿ।
ನ ತಾವತ್ ಕರ್ಮ ಸಂಯುಕ್ತಂ ಯುಜ್ಯತೇ ಸುರಸನ್ನುತ ॥ ೧೩ ॥
ತಸ್ಮಾದ್ ಧೀಕುಶಲೈರ್ಧರ್ಮಾಃ ಸ್ವಸ್ವವರ್ಣಾಶ್ರಮೋಚಿತಃ।
ಸಾದರಂ ಸಮನುಷ್ಠೇಯಸ್ತ್ವನ್ಯಥಾ ಪತತಿ ಧ್ರುವಮ್ ॥ ೧೪ ॥
ತ್ಯಕ್ತವರ್ಣಾಶ್ರಮಾಚಾರಸ್ತ್ವಸಿದ್ಧಜ್ಞಾನವೈಭವಃ।
ಪತತ್ಯೇವ ನ ಸಂದೇಹಶ್ಛಿನ್ನಸ್ವಾಧಾರಶಾಖಿವತ್ ॥ ೧೫ ॥
ಅತೋ ವರ್ಣಾಶ್ರಮಾಚಾರೋ ನಿಗಮಾಗಮಚೋದಿತಃ।
ಅವಶ್ಯಂ ಸಮನುಷ್ಠೇಯಃ ಸತತಂ ಭಕ್ತಿತತ್ಪರೈಃ ॥ ೧೬ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರ-ಬೃಹಸ್ಪತಿ-ಸಂವಾದೇ ಶಿವಶಾಸನೇ ಕ್ರಿಯಾಪಾದೇ ವರ್ಣಾಶ್ರಮಧರ್ಮಾವಶ್ಯಕತಾಕಥನಂ ನಾಮ ದ್ವಾದಶಃ ಪಟಲಃ ॥ ೧೨ ॥

ಕರ್ಮವನ್ನು ಬಿಡಬಾರದು

ಈಶ್ವರನ ನಿರಂತರ ಧ್ಯಾನ ನಿಷ್ಠೆಯನ್ನು ಅಭ್ಯಾಸ ಮಾಡುವವನಾದ, ಪ್ರಪಂಚದ ವ್ಯವಹಾರವನ್ನು ಮರೆಯದವನಾದ, ತನ್ನ ಹಿತವನ್ನು ಬಯಸುವವನಾದ ಸಾಧಕನಿಗೆ ವರ್ಣಾಶ್ರಮ ನಿಯಂತ್ರಿತವಾದ ಕರ್ಮವನ್ನು ಬಿಡಲು ಸಾಧ್ಯವಿಲ್ಲ. (೯). ಯಾವುದು ಈಶ್ವರನಿಗೆ ಅರ್ಪಿತವಲ್ಲವೋ, ಯಾವುದು ಅಜ್ಞಾನದಿಂದ ಆಚರಿಸಲ್ಪಡುವುದೋ, ಫಲಾಭಿಲಾಷೆಗೆ ಸಂಬಂಧಪಟ್ಟಿರುವುದೋ ಅಂತಹ ಕರ್ಮವು ಬಂಧನಕ್ಕೆ ಕಾರಣವಾಗುತ್ತದೆ. (೧೦). ಯಾವುದು ಮಹೇಶ್ವರನಿಗೆ ಅರ್ಪಿತವೋ, ಯಾವುದು ಜ್ಞಾನದಿಂದ ಕೂಡಿದುದೋ, ಯಾವುದು ಫಲಾಭಿಲಾಷೆಯ ಸಂಬಂಧವಿಲ್ಲದಿರುವುದೋ ಅದು ಮುಕ್ತಿಗೆ ಕಾರಣವೆಂದು ನಂಬಿಕೆ. (೧೧). ಮುನಿಶ್ರೇಷ್ಠನೇ, ಕರ್ಮವನ್ನು ಆರಂಭಿಸದೇ ಇರುವುದು ಮುಕ್ತಿಗೆ ಸಾಧನವಲ್ಲ, ಬುದ್ಧಿಪೂರ್ವಕವಾಗಿ ಕರ್ಮವನ್ನು ಮಾಡದಿರುವುದು ನಿಶ್ಚಿತವಾಗಿ ದೋಷಕ್ಕೆ ದಾರಿಯಾಗುತ್ತದೆ. ಕರ್ಮವು ಮಲಗಿದವನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೈಯಲ್ಲಿನ ಹೂವಿನಂತೆ ಧ್ಯಾನಮಗ್ನನಾದವನಿಂದ ದೂರವಾಗುತ್ತದೆ. (೧೨). ದೇವಸನ್ನುತನೇ, ಎಲ್ಲಿಯವರೆಗೆ ಚಿತ್ತವು ಪರಮಾತ್ಮ ಶಂಭುವಿನಲ್ಲಿ ಲಯ ಹೊಂದುವುದಿಲ್ಲವೋ ಅಲ್ಲಿಯವರೆಗೆ ಕರ್ಮವನ್ನು ಬಿಡುವುದು ಯೋಗ್ಯವಲ್ಲ. (೧೩). ಆದ್ದರಿಂದ ಬುದ್ಧಿಶಾಲಿಗಳು ತಮ್ಮ ತಮ್ಮ ವರ್ಣಾಶ್ರಮಗಳಿಗೆ ಉಚಿತವಾದ ಧರ್ಮವನ್ನು ಆದರ ಪೂರ್ವಕವಾಗಿ ಆಚರಿಸಬೇಕು. ಇಲ್ಲವಾದರೆ ನಿಶ್ಚಿತವಾಗಿ ಪತಿತನಾಗುವನು. (೧೪). ವರ್ಣಾಶ್ರಮಾಚಾರಗಳನ್ನು ಬಿಟ್ಟ ಜ್ಞಾನದ ವೈಭವವೂ ಸಿದ್ಧಿಸದ ವ್ಯಕ್ತಿಯು (ಆಧಾರ ಭೂತವಾದ) ಬುಡವು ಕಡಿಯಲ್ಪಟ್ಟ ಮರದ ಹಾಗೆ ಬಿದ್ದು ಹೋಗುತ್ತಾನೆ. (೧೫). ಆದ್ದರಿಂದ ಭಕ್ತಿ ತತ್ಪರನಾದವನು ನಿಗಮಾಗಮಗಳಿಂದ ವಿಧಿಸಲ್ಪಟ್ಟ ವರ್ಣಾಶ್ರಮಾಚಾರವನ್ನು ಸತತವಾಗಿ, ಅವಶ್ಯವಾಗಿ ಆಚರಿಸಬೇಕು. (೧೬).

ಇಲ್ಲಿಗೆ ಶ್ರೀಚಂದ್ರಜ್ಞಾನಾಗಮದಲ್ಲಿ ಉತ್ತರ ಭಾಗದಲ್ಲಿ ಅನಂತರುದ್ರ-ಬೃಹಸ್ಪತಿ ಸಂವಾದದಲ್ಲಿ ಶಿವಶಾಸನದಲ್ಲಿ ಕ್ರಿಯಾಪಾದದಲ್ಲಿ ವರ್ಣಾಶ್ರಮಧರ್ಮಾವಶ್ಯಕತಾ ಕಥನವೆಂಬ ದ್ವಾದಶ ಪಟಲವು ಮುಗಿಯಿತು. (೧೨).

ಟಿಪ್ಪಣಿ : ಭಗವದ್ಗೀತೆಯ ನಿಷ್ಕಾಮ ಕರ್ಮಯೋಗದ ಉಪದೇಶವನ್ನು ಜ್ಞಾಪಕಕ್ಕೆ ತರುವಂತಿದೆ. ಫಲದ ಅಭಿಲಾಷೆಯಿಂದ ಕರ್ಮ ಮುಕ್ತಿಕರ. ಭಗವದ್ಗೀತೆಯಲ್ಲಿ (೩.೧೯) ಹೀಗೆ ಹೇಳಿದೆ "ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ। ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ॥" ಹೀಗೆ ಕರ್ಮ ಮಾಡುವ ಮರ್ಮವನ್ನು ತಿಳಿದು ಕರ್ಮವನ್ನು ಆಚರಿಸಬೇಕು. ಕರ್ಮದ ಫಲವನ್ನೇ ಉದ್ದೇಶ- ವಾಗಿಟ್ಟುಕೊಂಡು ಕರ್ಮ ಮಾಡಬಾರದು, ಕರ್ಮವನ್ನು ಮಾಡದೆಯೂ ಇರಬಾರದು- "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ। ಮಾ ಕರ್ಮಫಲಹೇತುರ್ಭೂಃ ಮಾ ತೇ ಸಂಗೋಽಸ್ತ್ವಕರ್ಮಣಿ॥" (ಭಗವದ್ಗೀತೆ, ೨.೪೭). ಇದನ್ನೇ "ನ ಕರ್ಮಣಾಮನಾರಂಭೋ ಮುಕ್ತ್ಯೈ ಸ್ಯಾತ್" ಎಂಬ ಮಾತು ಹೇಳುತ್ತದೆ. "ಜಹಾತಿ ಕರ್ಮ ಧ್ಯಾನಸ್ಥಂ ಸುಪ್ತಹಸ್ತಸ್ಥಪುಷ್ಪವತ್" ಎಂಬ ಮಾತಿನಲ್ಲಿ ಸುಂದರವಾದ ಅರ್ಥವತ್ತಾದ ಉಪಮೆಯಿದೆ. ಕೈಯಲ್ಲಿ ಹೂವನ್ನು ಹಿಡಿದುಕೊಂಡ ವ್ಯಕ್ತಿ ನಿದ್ದೆ ಹೋದಾಗ ಆ ಹೂವು ತಾನಾಗಿಯೇ ಬಿದ್ದು ಹೋಗುತ್ತದೆ. ಹಾಗೆಯೇ ಧ್ಯಾನಸ್ಥ (ಅಂತರ್ಮುಖ)ನಾದ ಸಾಧಕನ ಕರ್ಮ ತನ್ನಷ್ಟಕ್ಕೆ ತಾನೇ ಜಾರಿ ಹೋಗುತ್ತದೆ. ಇದೇ ಯೋಗ. ಭಗವದ್ಗೀತೆ ಹೇಳುತ್ತದೆ- "ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ। ತಸ್ಮಾದ್ಯೋಗಾಯ ಯುಜ್ಯಸ್ವ ಯೋಗಃ ಕರ್ಮಸು ಕೌಶಲಮ್॥" (೨.೫೦); "ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ। ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ॥" (೨.೪೮). ಮೇಲು-ಕೀಳು ಭಾವನೆಗಳಿಲ್ಲದ ತನ್ನ ತನ್ನ ಕರ್ತವ್ಯದಲ್ಲಿ ಶ್ರದ್ಧೆ, ತನ್ನ ಉದ್ಯೋಗದಲ್ಲಿ ಪೂಜ್ಯಭಾವ, ಇತ್ಯಾದಿ ಆದರ್ಶಗಳಿಂದ ಕೂಡಿದ ವರ್ಣ ಧರ್ಮ, ಕರ್ತವ್ಯಗಳನ್ನು ಆಧರಿಸಿದ ಧರ್ಮ ಎಲ್ಲರಿಗೂ ಮಾನ್ಯವೇ. ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸ ಎಂಬ ನಾಲ್ಕು ಆಶ್ರಮಗಳ ವ್ಯವಸ್ಥೆಯನ್ನು ಬಿಡಬೇಕೆಂದರೂ ಬಿಡಲಾದೀತೇ? ಪ್ರತಿಯೊಬ್ಬನ ಜೀವನದಲ್ಲಿ ಆ ಹಂತಗಳು ಬಂದೇ ಬರುತ್ತವೆ.

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚರ್ಯಾಪಾದಃ

ಪ್ರಥಮಃ ಪಟಲಃ

॥ ಶಿವಮೇಧಪ್ರಶಂಸಾ ॥

ಬೃಹಸ್ಪತಿರುವಾಚ

ಅನಂತವಿದ್ಯಾನಿಲಯ ವಿಲಸತ್ಕರುಣಾಲಯ।
ಅನಂತರುದ್ರ ಭಗವನ್ ಪ್ರಣತೋಽಸ್ಮಿ ಜಗದ್ಗುರೋ ॥ ೧ ॥

ಶಾಂಭವವ್ರತಮಾಹಾತ್ಮ್ಯಮಾಗಮಾಂತಗತಂ ಶ್ರುತಮ್।
ಶಾಂಭವವ್ರತಿನಾಂ ಧರ್ಮಾಃ ಕ್ರಿಯಾಪಾದೇ ಹ್ಯಶೇಷತಃ ॥
ಶ್ರೀಮನ್ಮುಖಾದಧಿಗತಾ ಮಯಾಽವಹಿತಚೇತಸಾ ॥ ೨ ॥

ಅಥೈತದ್ವ್ರತನಿಷ್ಠಾನಾಂ ದ್ವಿಜಾನಾಂ ಲಿಂಗಧಾರಿಣಾಮ್।
ಕರ್ತವ್ಯಮಖಿಲಂ ಬ್ರೂಹಿ ವಿಧಾನಂ ತ್ವೌರ್ಧ್ವದೇಹಿಕಮ್ ॥ ೩ ॥

ಬೃಹಸ್ಪತಿಯು ಹೇಳಿದನು

ಅನಂತ ವಿದ್ಯೆಗಳ ಆಶ್ರಯನೇ, ಉಕ್ಕುತ್ತಿರುವ ಕರುಣೆಯ ನಿಲಯವೇ, ಜಗದ್ಗುರುವೇ, ಭಗವನ್ ಅನಂತರುದ್ರನೇ, ನಿನಗೆ ನಮಸ್ಕರಿಸುತ್ತೇನೆ. (೧). ಆಗಮೋತ್ತರ ಭಾಗದಲ್ಲಿ ಬರುವ ಶಾಂಭವವ್ರತದ ಮಹಿಮೆಯನ್ನು ಕೇಳಿದ್ದಾಯಿತು. ಕ್ರಿಯಾಪಾದದಲ್ಲಿ ಶಾಂಭವವ್ರತನಿಷ್ಠರ ಧರ್ಮಗಳನ್ನು (ಆಚರಣೆಗಳನ್ನು) ಸಮಗ್ರವಾಗಿ ನಿನ್ನ ಶ್ರೀ ಮುಖದಿಂದ ತಿಳಿದುಕೊಂಡೆನು. (೨). ಇನ್ನು ವ್ರತನಿಷ್ಠರಾದ ಲಿಂಗಧಾರಿ ದ್ವಿಜರ ಔರ್ಧ್ವದೇಹಿಕ (ಮರಣಾನಂತರದ ಅಥವಾ ಅಂತ್ಯಸಂಸ್ಕಾರದ) ಕ್ರಿಯೆಗಳೆಲ್ಲವುಗಳ ವಿಧಾನವನ್ನು ಹೇಳು. (೩).

ಅನಂತರುದ್ರ ಉವಾಚ

ಗೀಷ್ಪತೇ ತೇ ಪ್ರವಕ್ಷ್ಯಾಮಿ ಶೃಣುಷ್ವೈಕಮನಾ ಮುನೇ।
ಶಾಂಭವವ್ರತನಿಷ್ಠಾನಾಮವಸಾನವಿಧಿಂ ಪರಮ್ ॥ ೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯೇನೈವ ಸಂಸ್ಕೃತೋ ಮುಕ್ತಿಂ ವ್ರತೀ ಗಚ್ಛೇದಸಂಭವಮ್।
ಯೇನೈವ ಸಂಸ್ಕೃತೋ ಮುಚ್ಯೇದ್ಧರ್ಮಹೀನೋಽಪಿ ತತ್ ಕ್ಷಣಾತ್ ॥ ೫ ॥

ಮುನಿ ಬೃಹಸ್ಪತಿಯೇ, ಯಾವುದರ ಸಂಸ್ಕಾರದಿಂದ ವ್ರತನಿಷ್ಠನ ಪುನರ್ಜನ್ಮವಿಲ್ಲದ ಮುಕ್ತಿಯನ್ನು ಹೊಂದುವನೋ, ಯಾವುದರ ಸಂಸ್ಕಾರದಿಂದ ಧರ್ಮಹೀನನೂ ಕೂಡ ತತ್ ಕ್ಷಣವೇ ಮುಕ್ತನಾಗುವನೋ ಶಾಂಭವವ್ರತನಿಷ್ಠರ ಅಂತಹ ಶ್ರೇಷ್ಠವಾದ ಅವಸಾನ ವಿಧಿಯನ್ನು ಕುರಿತು ಹೇಳುತ್ತೇನೆ, ಏಕಾಗ್ರಚಿತ್ತನಾಗಿ ಕೇಳು. (೪-೫).

ಟಿಪ್ಪಣಿ : ಆಗಮೋತ್ತರ ಭಾಗಗಳಲ್ಲಿ ಅಂತ್ಯಸಂಸ್ಕಾರಕ್ಕೆ ಔರ್ಧ್ವದೇಹಿಕ ವಿಧಿ, ಅವಸಾನವಿಧಿ, ಶಿವಮೇಧವಿಧಿ; ವೀರಶೈವರ ವಿಶಿಷ್ಟವಾದ ಪಿತೃಮೇಧಕ್ಕೆ ಶಿವಮೇಧವೆನ್ನುತ್ತಾರೆ. ಮಕುಟಾಗಮದಲ್ಲಿ ಅವಸಾನವಿಧಿ ಶಬ್ದದ ಪ್ರಯೋಗವೂ ಇದೆ; ನೋಡಿರಿ ಚರ್ಯಾಪಾದ, ೧.೬,೭. ಶಿವಮೇಧ ಶಬ್ದವು ಅಲ್ಲಿಯೇ ೧.೮ರಲ್ಲೂ ಬಂದಿದೆ. ಮೇಲೆ ಹೇಳಿದ ಅವಸಾನ ವಿಧಿಯ ಮಹತ್ತ್ವವು ಮಕುಟಾಗಮ, ಚ.ಪಾ. ೧.೮ರಲ್ಲೂ ಬಂದಿದೆ.

ಶಿವಮೇಧನಿರೂಪಣಮ್

ಶಾಂಭವವ್ರತನಿಷ್ಠಾನಾಮಿಷ್ಟಲಿಂಗೈಕಸೇವಿನಾಮ್।
ದೇಹಾವಸಾನೇ ಕರ್ತವ್ಯಃ ಶಿವಮೇಧವಿಧಿರ್ಮಹಾನ್ ॥ ೬ ॥

ಶಿವೇ ಪರೇ ಪ್ರವಿಷ್ಟಾನಾಂ ಮೇಧ ಆರಾಧನಾತ್ಮಕಃ।
ಶಿವಮೇಧ ಇತಿ ಖ್ಯಾತಃ ಕರಣೀಯೋ ಮುಮುಕ್ಷುಭಿಃ॥
ವಿಶಿಷ್ಟಃ ಪಿತೃಮೇಧೋಽಯಂ ಶಿವಮೇಧ ಇತೀರ್ಯತೇ ॥ ೭ ॥

ಶಿವಮೇಧದ ನಿರೂಪಣೆ

ಇಷ್ಟಲಿಂಗವೊಂದರದೇ ಪೂಜೆಯಲ್ಲಿ ಮಗ್ನರಾದ ಶಾಂಭವವ್ರತನಿಷ್ಠರ ದೇಹದ ಅವಸಾನವಾದಾಗ ಮಹಿಮಾನ್ವಿತವಾದ ಶಿವಮೇಧ ವಿಧಿಯನ್ನು ಆಚರಿಸಬೇಕು. (೬). ಪರಮ ಪರಮೇಶ್ವರ ಶಿವನಲ್ಲಿ ಪ್ರವೇಶಿಸಿದವರ (ಐಕ್ಯ ಹೊಂದಿದವರ) ಆರಾಧನಾ ಸ್ವರೂಪದ ಮೇಧ (ಯಜ್ಞ)ವು ಶಿವಮೇಧವೆಂದು ಪ್ರಸಿದ್ಧವಾಗಿದೆ. ಮೋಕ್ಷಾಪೇಕ್ಷಿಗಳು ಅದನ್ನು ಆಚರಿಸಬೇಕು. ವಿಶಿಷ್ಟವಾದ ಈ ಪಿತೃಮೇಧವು ಶಿವಮೇಧವೆಂದು ಕರೆಯಲ್ಪಟ್ಟಿದೆ. (೭).

ಟಿಪ್ಪಣಿ : ಇದೇ ವಿಷಯ ಇವೇ ಶಬ್ದಗಳಲ್ಲಿ ಮಕುಟಾಗಮ, ಚ.ಪಾ., ೧.೧೦ರಲ್ಲಿ ಬಂದಿದೆ. ಶುಕ್ಲಯಜುರ್ವೇದಿಯ ಮಾಧ್ಯಂದಿನ ಸಂಹಿತೆಯ ೩೫ನೇ ಅಧ್ಯಾಯದಲ್ಲಿ ಪಿತೃಮೇಧದ ವಿಧಿಯು ವರ್ಣಿಸಲ್ಪಟ್ಟಿದೆ. ಭಾಷ್ಯಕಾರ ಮಹೀಧರನು ಇಲ್ಲಿಯ ಪ್ರಥಮ ಮಂತ್ರದ ವ್ಯಾಖ್ಯಾನದಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾನೆ. ಅದೇ ವಿಧಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲಿ ಶಿವಮೇಧವೆಂದು ಕರೆಯಲಾಗಿದೆ. ಈ ಎರಡೂ ವಿಧಿಗಳಲ್ಲಿ ಭೇದವಿದೆ. ಸ್ಪಷ್ಟವಾದ ಭೇದವೆಂದರೆ ದಹನ ಮತ್ತು ಖನನ (ಸುಡುವುದು ಮತ್ತು ಹೂಳುವುದು); ವೀರಶೈವರಲ್ಲಿ ಖನನ (ಸಮಾಧಿ) ಮಾಡುವ ಪದ್ಧತಿಯಿದೆ. ಪಿತೃಮೇಧದಲ್ಲಿ ದಹನ ಪದ್ಧತಿಯನ್ನು ವಿಧಿಸಲಾಗಿದೆ. ಆದ್ದರಿಂದ ವೀರಶೈವರ ಈ ವಿಶಿಷ್ಟವಾದ ಪಿತೃಮೇಧಕ್ಕೆ ಶಿವಮೇಧವೆಂಬ ಹೆಸರು ಪ್ರಸಿದ್ಧವಾಗಿದೆ.

ಶಿವಮೇಧಾದಿಷು ಶ್ರದ್ಧಾಹೀನಸ್ಯ ನರಕಪ್ರಾಪ್ತಿಃ

ಶಿವಭಕ್ತೌ ಶಿವಾರ್ಚಾಯಾಂ ಶಿವಮೇಧೇ ಶಿವವ್ರತೇ।
ಶ್ರದ್ಧಾಹೀನೋ ವಸೇನ್ನಿತ್ಯಂ ನರಕೇ ಕಾಲಮಕ್ಷಯಮ್ ॥ ೮ ॥

ಶಿವಮೇಧಾದಿಗಳಲ್ಲಿ ಶ್ರದ್ಧೆಯಿಲ್ಲದವನಿಗೆ ನರಕ ಪ್ರಾಪ್ತಿ

ಶಿವಭಕ್ತಿಯಲ್ಲಿ, ಶಿವಪೂಜೆಯಲ್ಲಿ, ಶಿವಮೇಧದಲ್ಲಿ ಮತ್ತು ಶಿವವ್ರತದಲ್ಲಿ ಶ್ರದ್ಧೆಯಿಲ್ಲದವನು ನಿರಂತರವಾಗಿ ಅನಂತಕಾಲದವರೆಗೆ ನರಕದಲ್ಲಿರುವನು. (೮).

ಟಿಪ್ಪಣಿ : ಇದೇ ವಿಷಯ ಮಕುಟಾಗಮ, ಚ.ಪಾ. ೧.೧೩-೧೪ರಲ್ಲಿ

ಶಿವಲಿಂಗಧರಸ್ಯ ದಹನನಿಷೇಧಃ

ಶಿವಲಿಂಗಧರೋ ವಿಪ್ರೋ ವಿಪನ್ನಸ್ತಂ ನ ದಾಹಯೇತ್।
ಯದಿ ವಾ ದಾಹಯೇತ್ತಸ್ಯ ಬ್ರಹ್ಮಹತ್ಯಾ ಸದಾ ಭವೇತ್ ॥ ೯ ॥

ಪ್ರಾಕೃತಾನಾಂ ಮನುಷ್ಯಾಣಾಂ ದೀಕ್ಷಾವಿರಹಿತಾತ್ಮನಾಮ್।
ದಹನೋಪಸ್ಕೃತಃ ಕಾರ್ಯಃ ಸಂಸ್ಕಾರೋ ಹ್ಯವಸಾನಗಃ ॥ ೧೦ ॥

ಶಿವಲಿಂಗಧಾರಿಗೆ ದಹನನಿಷೇಧ

ಶಿವಲಿಂಗವನ್ನು ಧರಿಸಿದ ದ್ವಿಜನು ಸತ್ತಾಗ ಅವನನ್ನು ಸುಡಬಾರದು. ಒಂದು ಪಕ್ಷ ಸುಟ್ಟಿದ್ದಾದರೆ ಹಾಗೆ ಮಾಡಿದವನಿಗೆ ತಪ್ಪದೆ ಬ್ರಹ್ಮಹತ್ಯಾ ದೋಷವು ಬರುತ್ತದೆ. (೯). ದೀಕ್ಷೆಯಾಗದೆಯಿರುವಂತಹ ಸಂಸ್ಕಾರ ರಹಿತ (ಪ್ರಾಕೃತ) ಜನರ ಅವಸಾನ-ವಾದಾಗ ದಹನ ಸಂಸ್ಕಾರವನ್ನು ಮಾಡಬೇಕು. (೧೦).

ಟಿಪ್ಪಣಿ : ಮಕುಟಾಗಮ, ಚ.ಪಾ., ೧.೧೫, ೧೭ನ್ನು ನೋಡಿರಿ.

ಶಿವಲಿಂಗಧರಸ್ಯ ಸಮಾಧಿವಿಧಿಃ

ಶಾಂಭವಾನಾಂ ಮುಮುಕ್ಷೂಣಾಂ ಸಂಸ್ಕಾರಾಯೈವ ಚೋದಿತಃ।
ಪಿತೃಮೇಧೇ ಶ್ರೂಯತೇಽಸೌ ಸಮಾಧಿವಿಧಿರುತ್ತಮಃ ॥ ೧೧ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮೇಶೋಪಾಸಕಾನಾಮನಾವೃತ್ತಿಮತಾಂ ನೃಣಾಮ್।
ಅವಸಾನವಿಧಿಃ ಕಾರ್ಯಃ ಸಮಾಧಿವಿಧಿಸಂಯುತಃ ॥ ೧೨ ॥

ಗೃಹೀ ವಾಽಥ ಯತಿರ್ವಾಪಿ ಲಿಂಗಧಾರೀ ತನುಂ ತ್ಯಜೇತ್।
ನ ದಹೇತ್ತಸ್ಯ ದೇಹಂ ತು ಸಮಾಧೌ ಗೋಪಯೇತ್ತದಾ ॥ ೧೩ ॥

ಸಮಾಧಿರ್ಮೋಕ್ಷಧರ್ಮೋಽಯಂ ಪ್ರೇತಧರ್ಮಾಪವಾದಕಃ।
ಸಮಾಧಿಸಂಸ್ಕೃತೇಷ್ವಸ್ಮಾದ್ಧರ್ಮಲೋಪೋ ನ ಶಂಕ್ಯತೇ ॥ ೧೪ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರ-ಬೃಹಸ್ಪತಿ-ಸಂವಾದೇ ಶಿವಶಾಸನೇ ಚರ್ಯಾಪಾದೇ ಶಿವಮೇಧ-ಪ್ರಶಂಸಾ ನಾಮ ಪ್ರಥಮಃ ಪಟಲಃ ॥ ೧ ॥

ಶಿವಲಿಂಗಧರನಿಗೆ ಸಮಾಧಿ ವಿಧಿ

ಮೋಕ್ಷಾಪೇಕ್ಷಿಗಳಾದ ಶಾಂಭವವ್ರತಿಗಳಿಗೆ ಪಿತೃಮೇಧದಲ್ಲಿ ಸಂಸ್ಕಾರಕ್ಕಾಗಿ ವಿಧಿಸಲ್ಪಟ್ಟ ಈ ಉತ್ತಮ ಸಮಾಧಿ ವಿಧಿಯು ಪ್ರಸಿದ್ಧವಾಗಿದೆ. (೧೧). ಪುನರಾವೃತ್ತಿಯಿಲ್ಲದ ಪರಮೇಶ್ವರನ ಉಪಾಸಕರಾದ ಜನರಿಗೆ ಸಮಾಧಿ ವಿಧಿ ಪ್ರಯುಕ್ತವಾದ ಅವಸಾನ ವಿಧಿಯನ್ನು ನಡೆಸಬೇಕು. (೧೨). ಗೃಹಸ್ಥನಾಗಲಿ, ಸಂನ್ಯಾಸಿಯಾಗಲಿ ಲಿಂಗಧಾರಿಯಾದ ಅವನು ದೇಹವನ್ನು ತ್ಯಜಿಸಿದರೆ ಅವನ ದೇಹವನ್ನು ಸುಡಬಾರದು, ಸಮಾಧಿಯಲ್ಲಿ ಮುಚ್ಚಬೇಕು. (೧೩). ಈ ಸಮಾಧಿಯು ಪ್ರೇತಧರ್ಮಕ್ಕೆ ಅಪವಾದವಾದ ಮೋಕ್ಷ ಧರ್ಮ. ಈ ಸಮಾಧಿ ಸಂಸ್ಕಾರದಲ್ಲಿ ಯಾವುದೇ ತರಹದ ಧರ್ಮಲೋಪದ ಶಂಕೆಯಿಲ್ಲ. (೧೪).

ಟಿಪ್ಪಣಿ : ಮಕುಟಾಗಮ ಚ.ಪಾ. ೧.೧೮-೨೨ನ್ನೂ ನೋಡಿರಿ.

ಇಲ್ಲಿಗೆ ಶ್ರೀ ಚಂದ್ರಜ್ಞಾನಾಗಮದ ಉತ್ತರ ಭಾಗದಲ್ಲಿ ಅನಂತರುದ್ರ-ಬೃಹಸ್ಪತಿ ಸಂವಾದದಲ್ಲಿ ಶಿವಶಾಸನದಲ್ಲಿ ಚರ್ಯಾಪಾದದಲ್ಲಿ ಶಿವಮೇಧಪ್ರಶಂಸಾ ಎಂಬ ಪ್ರಥಮ ಪಟಲವು ಮುಗಿಯಿತು. (೧).

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವಿತೀಯಃ ಪಟಲಃ

॥ ಉತ್ಕ್ರಾಂತಿ-ಸಮಯಾಚಾರವರ್ಣನಮ್॥

ಬೃಹಸ್ಪತಿರುವಾಚ

ಅನಂತರುದ್ರ ಭಗವನ್ನನಂತಮಹಿಮೋನ್ನತ।
ಉಚ್ಚಿಕ್ರಮಿಷುಣಾ ಪುಂಸಾ ಕರ್ತವ್ಯಂ ಕಿಂ ನಿಬೋಧ ಮೇ ॥ ೧ ॥

ಬೃಹಸ್ಪತಿಯು ಹೇಳಿದನು

ಭಗವನ್ ಅನಂತರುದ್ರನೇ, ಅನಂತ ಮಹಿಮೋನ್ನತನೇ, 'ಉತ್ಕ್ರಮಣ' ಮಾಡಲು ಇಚ್ಛಿಸುವ ವ್ಯಕ್ತಿಯು ಮಾಡಬೇಕಾದ ಕರ್ತವ್ಯಗಳೇನು ಎಂಬುದನ್ನು ನನಗೆ ಬೋಧಿಸು. (೧).

ಟಿಪ್ಪಣಿ : ಸಾಧಕನು ಮುಕ್ತಿ ಮಾರ್ಗದ ಕಡೆಗೆ ಹೋಗುವುದಕ್ಕಾಗಿ ವಿಶೇಷವಾದ ರೀತಿಯಲ್ಲಿ ಪ್ರಾಣ ಬಿಡುವುದಕ್ಕೆ ಉತ್ಕ್ರಮಣವೆಂದು ಹೆಸರು.

ಅನಂತರುದ್ರ ಉವಾಚ

ಉತ್ಕ್ರಾಂತಿಮಿಚ್ಛತಃ ಪುರುಷಸ್ಯ ಕರ್ತವ್ಯಾನಿ

ಉಚ್ಚಿಕ್ರಮಿಷುಣಾ ಪುಂಸಾ ನಿವೇಶ್ಯೇಶೇ ನಿಜಂ ಮನಃ।
ದಾನಾದಿ ಕರ್ತುಂ ಸ್ನಾತವ್ಯಂ ಭಸ್ಮನಾ ವಾ ಜಲೇನ ವಾ ॥ ೨ ॥

ಧೃತಧೌತಾಂಬರೇಣೋರ್ವ್ಯಾಮಾಸೀನೇನ ಕುಶಾಸನೇ।
ರುದ್ರಾಕ್ಷಾಣಿ ಚ ಧಾರ್ಯಾಣಿ ಯಥೋಕ್ತಂ ಮುನಿಪುಂಗವ ॥ ೩ ॥

ಭಸ್ಮರುದ್ರಾಕ್ಷಧಾರೀ ತು ಮ್ರಿಯತೇ ಯೋ ಮಹೀತಲೇ।
ರುದ್ರತ್ವಮಾಪ್ನುತೇ ಸೋಽಯಂ ವಾಕ್ಪತೇ ನಾತ್ರ ಸಂಶಯಃ ॥ ೪ ॥

ಉತ್ಕ್ರಾಂತಿಯನ್ನು ಇಚ್ಛಿಸುವ ಪುರುಷನ ಕರ್ತವ್ಯಗಳು

ಮುನಿಶ್ರೇಷ್ಠನೇ, ಉತ್ಕ್ರಾಂತಿಯನ್ನು ಇಚ್ಛಿಸುವ ವ್ಯಕ್ತಿಯು ತನ್ನ ಮನಸ್ಸನ್ನು ಈಶ್ವರನಲ್ಲಿ ಕೇಂದ್ರೀಕರಿಸಿ, ದಾನ ಮುಂತಾದವುಗಳನ್ನು ಮಾಡುವುದಕ್ಕಾಗಿ ಭಸ್ಮದಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಥವಾ ನೀರಿನಿಂದ ಸ್ನಾನ ಮಾಡಬೇಕು, ಶುಭ್ರವಾದ ಬಟ್ಟೆಯನ್ನು ತೊಟ್ಟು ಭೂಮಿಯಲ್ಲಿ ದರ್ಭಾಸನದ ಮೇಲೆ ಕುಳಿತುಕೊಂಡು ಭಸ್ಮದಿಂದ ಉದ್ಧೂಳನವನ್ನು, ತ್ರಿಪುಂಡ್ರ ಧಾರಣೆಯನ್ನೂ ಮಾಡಿಕೊಂಡು ಶಾಸ್ತ್ರದಲ್ಲಿ ಹೇಳಿದ ರೀತಿಯಲ್ಲಿ ರುದ್ರಾಕ್ಷಗಳನ್ನು ಧರಿಸಬೇಕು. (೨೩). ಬೃಹಸ್ಪತಿಯೇ, ಭಸ್ಮ-ರುದ್ರಾಕ್ಷಗಳನ್ನು ಧರಿಸಿದವನು ಭೂಮಿಯ ಮೇಲೆ ಜೀವ ಬಿಟ್ಟರೆ ರುದ್ರತ್ವವನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ. (೪).

ಟಿಪ್ಪಣಿ : ಮಕುಟಾಗಮ, ಚ.ಪಾ. ೨.೨-೪ನ್ನೂ ನೋಡಿರಿ.

ಸ್ವಾತ್ಮನ್ಯಗ್ನ್ಯಾರೋಪಣಮ್

ಉತ್ಕ್ರಾಂತಿಂ ಭಾವಿನೀಂ ಜ್ಞಾತ್ವಾ ನಿಮಿತ್ತೈಃ ಸಮನಂತರಮ್।
ಯಾತೇ ಅಗ್ನ ಇತಿ ಸ್ವಾತ್ಮನ್ಯಗ್ನೀನಾರೋಪಯೇದ್ ಗೃಹೀ ॥ ೫ ॥

ಅಗ್ನಿರಿತ್ಯಾದಿಭಿರ್ಮಂತ್ರೈರ್ಭಸ್ಮನಾಽಂಗಾನಿ ಸಂಸ್ಪೃಶೇತ್।
ಆತ್ಮನ್ಯಾರೋಪಿತಸ್ಯಾಸ್ಯ ವಹ್ನೇಃ ಸಂಶಮನಾಯ ವೈ॥
ಷಡಧ್ವಶುದ್ಧ್ಯಾ ಕರ್ತವ್ಯೋ ಹ್ಯಪ್ಸು ಹೋಮೋ ಯಥಾವಿಧಿ ॥ ೬ ॥

ತನ್ನಲ್ಲಿ ಅಗ್ನಿಯನ್ನು ಆರೋಪಿಸಿಕೊಳ್ಳುವುದು

ನಿಮಿತ್ತಗಳ ಆಧಾರದಿಂದ ಮುಂದಾಗುವ ಉತ್ಕ್ರಾಂತಿಯನ್ನು ತಿಳಿದು ಕೂಡಲೇ ಗೃಹಸ್ಥನು 'ಯಾ ತೇ ಅಗ್ನೇ' ಇತ್ಯಾದಿ ಮಂತ್ರದಿಂದ ತನ್ನಲ್ಲಿ ಅಗ್ನಿಗಳನ್ನು ಆರೋಪಿಸಿ ಕೊಳ್ಳಬೇಕು. (೫). 'ಅಗ್ನಿರಿತಿ' ಇತ್ಯಾದಿ ಮಂತ್ರಗಳಿಂದ ಭಸ್ಮದಿಂದ ಅಂಗಾಂಗಗಳನ್ನು ಸ್ಪರ್ಶಿಸಿಕೊಳ್ಳಬೇಕು ಮತ್ತು ತನ್ನಲ್ಲಿ ಆರೋಪಿಸಿಕೊಂಡ ಆ ಅಗ್ನಿಯ ಉಪಶಮನಕ್ಕಾಗಿ ಷಡಧ್ವ ಶುದ್ಧಿಯಿಂದ ಯುಕ್ತನಾಗಿ ನೀರಿನಲ್ಲಿ ವಿಧಿಯಂತೆ ಹೋಮಮಾಡಬೇಕು. (೬).

ಟಿಪ್ಪಣಿ : ಮಕುಟಾಗಮ, ಚ.ಪಾ. ೨.೫ನ್ನೂ ನೋಡಿರಿ. ಶಿವಪುರಾಣದ ಉಮಾಸಂಹಿತೆ ೨೫-೨೮ ಅಧ್ಯಾಯಗಳಲ್ಲಿ ಮೃತ್ಯುಕಾಲದ ನಿಮಿತ್ತಗಳ ಜ್ಞಾನ, ಕಾಲವಂಚನ, ಛಾಯಾಪುರುಷ ಲಕ್ಷಣ ಮುಂತಾದ ವಿಷಯಗಳ ವರ್ಣನೆಯಿದೆ. ಸ್ಕಂದಪುರಾಣ ಸೂತಸಂಹಿತೆ, ೪.೧.೪೬ ಅಧ್ಯಾಯವನ್ನೂ ನೋಡಿರಿ. 'ಯಾ ತೇ ಅಗ್ನೇ' ಇತ್ಯಾದಿ ಮಂತ್ರ- "ಯಾ ತೇ ಅಗ್ನೇ ರುದ್ರಿಯಾ ತಮಾಸ್ತಯಾ ನಃ ಪಾಹಿ। ಯಾ ತೇ ಅಗ್ನೇ ದುರಾಶಯಾ... ತಸ್ಯಾಸ್ತೇ ಸ್ವಾಹಾ॥" (ತೈತ್ತಿರೀಯ ಸಂಹಿತಾ, ೧.೨. ೧೧.೨) 'ಅಗ್ನಿರಿತಿ' ಇತ್ಯಾದಿ ಮಂತ್ರ- "ಅಗ್ನಿರಿತಿ ಭಸ್ಮ। ವಾಯುರಿತಿ ಭಸ್ಮ। ಜಲಮಿತಿ ಭಸ್ಮ। ಸ್ಥಲಮಿತಿ ಭಸ್ಮ। ವ್ಯೋಮೇತಿ ಭಸ್ಮ। ಸರ್ವಂ ಹ ವಾ ಇದಂ ಭಸ್ಮ।" (ಅಥರ್ವ ಶಿರಸ್ ಉಪನಿಷತ್, ೫; ಭಸ್ಮಜಾಬಾಲೋಪನಿಷತ್, ೧.೩). ಷಡಧ್ವಶುದ್ಧಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಕ್ರಿಯೆಯು ವೀರಶೈವ ಲಿಂಗಿಬ್ರಾಹ್ಮಣ ದಶಕರ್ಮ ಪದ್ಧತಿ, ವೀರಶೈವ ದೀಕ್ಷಾವಿಧಿ ಪ್ರಕರಣದಲ್ಲಿ ಬಂದಿದೆ. (ಪು. ೮೧-೮೩).

ಮಾಹೇಶ್ವರೇಭ್ಯೋ ಗೋಭೂಮಿಹಿರಣ್ಯಾದಿದಾನಮ್

ಹಿರಣ್ಯಮಥ ಗಾಂ ಭೂಮಿಂ ಶಿವಲಿಂಗಂ ಸುಪಾವನಮ್।
ಮಾಹೇಶ್ವರೇಭ್ಯೋ ದೇಯಾನಿ ಶಿವಸಾಯುಜ್ಯಕಾಂಕ್ಷಿಣಾ ॥ ೭ ॥

ಅತ್ಯುತ್ಕ್ರಾಂತೌ ಪ್ರವೃತ್ತಸ್ಯ ಸುಖೋತ್ಕ್ರಮಣಸಿದ್ಧಯೇ।
ತುಭ್ಯಂ ಸಂಪ್ರದದೇ ಧೇನುಮಿಮಾಮುತ್ಕ್ರಾಂತಿಸಂಜ್ಞಿತಾಮ್ ॥ ೮ ॥

ಹಿರಣ್ಯಗರ್ಭಸೇವ್ಯಸ್ಯ ಮಹಾದೇವಸ್ಯ ತೃಪ್ತಯೇ।
ಹಿರಣ್ಯಂ ಪ್ರದದೇ ತುಭ್ಯಂ ಹೇಮಬೀಜಂ ಮಹಾಫಲಮ್ ॥ ೯ ॥

ಪುನರಾವೃತ್ತಿರಹಿತಶಿವಸಾಯುಜ್ಯಸಿದ್ಧಯೇ।
ಇದಂ ಸಂಪ್ರದದೇ ತುಭ್ಯಂ ಶಿವಲಿಂಗಂ ಸುಪಾವನಮ್ ॥ ೧೦ ॥

ವಿಶ್ವಂಭರಾಶತಾಂಗಸ್ಯ ವಿಶ್ವನಾಥಸ್ಯ ತೃಪ್ತಯೇ।
ಇಮಾಂ ಸಂಪ್ರದದೇ ತುಭ್ಯಂ ಪರಾಂ ವಿಶ್ವಂಭರಾಂ ಸ್ಥಿರಾಮ್
ದಾನಾನ್ಯೇವಂ ಯಥಾಶಕ್ತಿ ಕೃತ್ವಾ ತತ್ತ್ವಾನಿ ಯೋಜಯೇತ್ ॥ ೧೧ ॥

ಮಾಹೇಶ್ವರರಿಗೆ ಹಸು, ಭೂಮಿ, ಚಿನ್ನ ಮುಂತಾದವುಗಳ ದಾನ

ಚಿನ್ನ, ಗೋ, ಭೂಮಿ, ಸುಪವಿತ್ರ ಶಿವಲಿಂಗ, ಇವುಗಳನ್ನು ಶಿವಸಾಯುಜ್ಯವನ್ನು ಅಪೇಕ್ಷಿಸುವವನು ಮಾಹೇಶ್ವರನಿಗೆ ದಾನಮಾಡಬೇಕು. (೭). ಅಂತಿಮ ಉತ್ಕ್ರಾಂತಿಯ ಸಮಯದಲ್ಲಿ ಸುಖವಾದ ಉತ್ಕ್ರಮಣವು ಸಿದ್ಧಿಸುವುದಕ್ಕಾಗಿ ನಿನಗೆ ಉತ್ಕ್ರಾಂತಿ ಎಂಬ ಹೆಸರಿನ ಗೋವನ್ನು ದಾನ ಮಾಡುತ್ತೇನೆ. ಹಿರಣ್ಯಗರ್ಭಬ್ರಹ್ಮನಿಂದ ಪೂಜಿಸಲ್ಪಡುವ ಮಹಾದೇವ ಶಿವನ ತೃಪ್ತಿಗಾಗಿ ಅತ್ಯಂತ ಕಾಂತಿಪ್ರದವಾದ, ಮಹಾಫಲವನ್ನು ಕೊಡುವ ಚಿನ್ನವನ್ನು ನಿನಗೆ ದಾನ ಮಾಡುತ್ತೇನೆ. ಪುನರಾವೃತ್ತಿಯಿಲ್ಲದ ಶಿವಸಾಯುಜ್ಯದ ಸಿದ್ಧಿಗೆ ಸುಪವಿತ್ರವಾದ ಶಿವಲಿಂಗವನ್ನು ನಿನಗೆ ದಾನ ಮಾಡುತ್ತೇನೆ. ವಿಶ್ವಂಭರಾ (ಪೃಥ್ವಿ) ಶತರುದ್ರ ರೂಪಿ ಭಗವಾನ್-ವಿಶ್ವನಾಥನ ತೃಪ್ತಿಗೋಸ್ಕರ ಶ್ರೇಷ್ಠವಾದ ಸ್ಥಿರವಾದ ಭೂಮಿಯನ್ನು ನಿನಗೆ ದಾನ ಮಾಡುತ್ತೇನೆ. ಹೀಗೆ ಶಕ್ತಿಗೆ ಅನುಗುಣವಾಗಿ ದಾನಗಳನ್ನು ಮಾಡಿ ತತ್ತ್ವಗಳನ್ನು ಯೋಜಿಸಬೇಕು.

ಟಿಪ್ಪಣಿ : ತತ್ತ್ವಯೋಜನ ಪ್ರಕ್ರಿಯೆಯನ್ನು ಲಿಂಗಧಾರಣಚಂದ್ರಿಕಾ ಪು.೨೭೪-೨೭೭ರಲ್ಲಿ ನೋಡಿರಿ. ಅವಿದ್ಯಾಕಲ್ಪಿತ ಜೀವಭಾವದ ನಿವೃತ್ತಿಗೋಸ್ಕರ ಪಿತೃ, ಪಿತಾಮಹ, ಪ್ರಪಿತಾಮಹ ಸ್ವರೂಪರಾದ ಈಶ್ವರ, ಸದಾಶಿವ, ಪರಮಶಿವರನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಮಿತ್ತ ಮಾಡಿಕೊಂಡು ತತ್ತ್ವ ಸಂಯೋಜನೆಯನ್ನು ಮಾಡಬೇಕು. ಇಲ್ಲಿ ತತ್ತ್ವಗಳೆಂದರೆ ೩೬ ತತ್ತ್ವಗಳು. ಮಕುಟಾಗಮ, ಚ.ಪಾ.೨.೮-೧೪ನ್ನೂ ನೋಡಿರಿ. ಮುಂದೆ ಇದೇ ಆಗಮದ ಚ.ಪಾ., ೪.೩೮-೪೪ ಮತ್ತು ಮಕುಟಾಗಮ, ಚ.ಪಾ., ೭.೮-೧೨ರಲ್ಲಿ ತತ್ತ್ವ ಸಂಯೋಜನೆಯ ವಿಷಯ ಮತ್ತೆ ಬಂದಿದೆ. ಇದೇ ಆಗಮದಲ್ಲಿ ಮುಂದೆ ೪.೧೫-೧೬ನ್ನೂ ನೋಡಿರಿ.

ಸರ್ವಾಂಗಲಿಂಗಸಾಹಿತ್ಯಕಥನಮ್

ಆಯುಷಃ ಪ್ರಾಣಮಿತ್ಯಾದಿ ಮಂತ್ರಾನ್ ಸಮ್ಯಗನುಸ್ಮರನ್।
ಸರ್ವಾಂಗಲಿಂಗಸಾಹಿತ್ಯಂ ತತಃ ಕುರ್ಯಾತ್ ಪ್ರಯತ್ನತಃ ॥ ೧೨ ॥

ಸರ್ವೇಷ್ವಂಗೇಷು ಸರ್ವತ್ರ ಸರ್ವದಾ ಸರ್ವತೋಮುಖಮ್।
ಲಿಂಗಂ ಗುರೂಪದೇಶೇನ ಜ್ಞಾತಂ ಯತ್ತತ್ ಪ್ರಕಾಶತೇ ॥ ೧೩ ॥

ಏಕಮೇವ ಪರಂ ಲಿಂಗಮಂಗೇಽಸ್ಮಿನ್ ಸುಪ್ರತಿಷ್ಠಿತಮ್।
ಸರ್ವತೋಮುಖಮಾಭಾತಿ ನಾಮರೂಪಕ್ರಿಯಾತ್ಮನಾ ॥ ೧೪ ॥

ಇಷ್ಟಲಿಂಗಂ ತು ಬಾಹ್ಯಾಂಗೇ ಪ್ರಾಣಲಿಂಗಂ ತಥಾಂತರೇ।
ಭಾವಲಿಂಗಂ ತಥೈವಾಸ್ಮಿನ್ನಾತ್ಮಾಂಗೇ ಸುಪ್ರತಿಷ್ಠಿತಮ್ ॥ ೧೫ ॥

ಹೃದಯಾಂಗೇ ಮಹಾಲಿಂಗಂ ಶ್ರೋತ್ರಾಂಗೇ ತು ಪ್ರಸಾದಕಮ್।
ತ್ವಗಂಗೇ ಚರಲಿಂಗಂ ತು ದೃಗಂಗೇ ಶಿವಲಿಂಗಕಮ್ ॥ ೧೬ ॥

ಜಿಹ್ವಾಂಗೇ ಗುರುಲಿಂಗಂ ತು ನಾಸಿಕಾಂಗೇ ತಥೈವ ಚ।
ಆಚಾರಲಿಂಗಮಶ್ರಾಂತಂ ಸುಪ್ರತಿಷ್ಠಿತಮೇವ ಹಿ ॥ ೧೭ ॥

ಯಥಾ ಜ್ಞಾನೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಮ್।
ತಥಾ ಕರ್ಮೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಮ್ ॥ ೧೮ ॥

ಅಪ್ರತರ್ಕ್ಯಮನಿರ್ದೇಶ್ಯಮವಾಙ್ಮಾನಸಗೋಚರಮ್।
ಸಸರ್ವಶಕ್ತಿ ಸರ್ವಜ್ಞಂ ಸಚ್ಚಿದಾನಂದಲಕ್ಷಣಮ್ ॥ ೧೯ ॥

ಭಾವಯನ್ನೇತಿ ತದ್ಭಾವಂ ಭಾವಪೂತೇನ ಚೇತಸಾ।
ಗಣಾನ್ ಶಂಭೋರನುಜ್ಞಾಪ್ಯ ಪ್ರಾಯಶ್ಚಿತ್ತಂ ಸಮಾಚರೇತ್ ॥ ೨೦ ॥

ಸರ್ವಾಂಗಲಿಂಗ ಸಾಹಿತ್ಯ

'ಆಯುಷಃ ಪ್ರಾಣಮ್' ಇತ್ಯಾದಿ ಮಂತ್ರಗಳನ್ನು ಸರಿಯಾಗಿ ಸ್ಮರಿಸಿಕೊಳ್ಳುತ್ತಾ ಪ್ರಯತ್ನ ಪೂರ್ವಕವಾಗಿ ತನ್ನ ಸರ್ವ ಅಂಗಗಳೊಂದಿಗೆ ಲಿಂಗಗಳ ಸಾಂಗತ್ಯವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಬೇಕು. (೧೨). ಶ್ರೀ ಗುರುವಿನ ಉಪದೇಶದಿಂದ ಅರಿವಿಗೆ ಬಂದಂತೆ ಎಲ್ಲಾ ಅಂಗಗಳಲ್ಲಿ ಎಲ್ಲಾ ಕಡೆ ಯಾವಾಗಲೂ ಸರ್ವತೋಮುಖವಾಗಿ ಯಾವ ಲಿಂಗವಿದೆಯೋ ಅದು ಸಾಧಕನ ಸಮಕ್ಷದಲ್ಲಿ (ಒಳಗಿನ ಕಣ್ಣಿಗೆ) ಪ್ರಕಾಶಿಸುತ್ತದೆ. (೧೩). ಒಂದೇ ಪರಮಲಿಂಗವು ಈ ಅಂಗದಲ್ಲಿ ಪ್ರತಿಷ್ಠಿತವಾಗಿದೆ. ಅದೇ ನಾಮ, ರೂಪ ಮತ್ತು ಕ್ರಿಯಾತ್ಮಕ ಭೇದದಿಂದ ಸರ್ವತೋಮುಖವಾಗಿ ವಿರಾಜಿಸುತ್ತಿದೆ. (೧೪). ಬಾಹ್ಯ ಶರೀರದಲ್ಲಿ ಇಷ್ಟಲಿಂಗ, ಒಳಗಿನ ಅಂಗದಲ್ಲಿ ಪ್ರಾಣಲಿಂಗ ಮತ್ತು ಆತ್ಮಾಂಗದಲ್ಲಿ ಭಾವಲಿಂಗ ಸುಪ್ರತಿಷ್ಠಿತವಾಗಿದೆ. (೧೫). ಹೃದಯದಲ್ಲಿ ಮಹಾಲಿಂಗ, ಶ್ರೋತ್ರಾಂಗದಲ್ಲಿ ಪ್ರಸಾದಲಿಂಗ, ತ್ವಗಂಗದಲ್ಲಿ (ಚರ್ಮ) ಚರಲಿಂಗ, ದೃಗಂಗದಲ್ಲಿ (ಕಣ್ಣು) ಶಿವಲಿಂಗ, ಜಿಹ್ವಾಂಗದಲ್ಲಿ (ನಾಲಿಗೆ) ಗುರುಲಿಂಗ ಮತ್ತು ನಾಸಿಕಾಂಗದಲ್ಲಿ (ಮೂಗು) ಹಾಗೆಯೇ ಆಚಾರಲಿಂಗ ಸುಪ್ರತಿಷ್ಠಿತವಾಗಿವೆ. (೧೬-೧೭). ಜ್ಞಾನೇಂದ್ರಿಯ ಅಂಗಗಳಲ್ಲಿ ಹೇಗೆ ಲಿಂಗಗಳು ಕ್ರಮವಾಗಿ ಪ್ರತಿಷ್ಠಿತವಾಗಿವೆಯೋ ಹಾಗೆಯೇ ಕರ್ಮೇಂದ್ರಿಯ ಅಂಗಗಳಲ್ಲಿ ಕ್ರಮವಾಗಿ ಪ್ರತಿಷ್ಠಿತವಾಗಿವೆ. (೧೮). ಸಾಧಕನು ತರ್ಕಿಸಲಾಗದ, ತೋರಿಸಲಾಗದ, ವಾಕ್ ಮತ್ತು ಮನಸ್ಸಿಗೆ ಗೋಚರವಾಗದ, ಸರ್ವಶಕ್ತಿಯುಕ್ತನಾದ, ಸರ್ವಜ್ಞನಾದ, ಸತ್-ಚಿತ್-ಆನಂದ ಸ್ವರೂಪನಾದ ಶಿವನ ಭಾವವನ್ನು ಭಕ್ತಿಭಾವ ಪವಿತ್ರಿತವಾದ ಮನಸ್ಸಿನಿಂದ ಭಾವಿಸುತ್ತಾನೆ. ಶಂಭುವಿನ ಗಣಗಳನ್ನು ಸಂಬೋಧಿಸಿ ಒಪ್ಪಿಗೆ ಪಡೆದು ಪ್ರಾಯಶ್ಚಿತ್ತ ವಿಧಿಯನ್ನು ಪೂರೈಸಬೇಕು. (೧೯-೨೦).

ಟಿಪ್ಪಣಿ : ಮಕುಟಾಗಮ, ಚ.ಪಾ. ೨.೨೩-೩೧ನ್ನೂ ನೋಡಿರಿ (ಇದೇ ವಿಷಯ). 'ಆಯುಷಃ ಪ್ರಾಣಮ್' ಇತ್ಯಾದಿ- "ಆಯುಷಃ ಪ್ರಾಣಂ ಸಂತನು। ಪ್ರಾಣಾದಪಾನಂ ಸಂತನು।" (ತೈತ್ತಿರೀಯಸಂಹಿತಾ, ೧.೫.೭). ಕರ್ಮೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಮ್ - ವಾಕ್‌ನಲ್ಲಿ ಪ್ರಸಾದಲಿಂಗ, ಪಾಣಿಯಲ್ಲಿ ಚರಲಿಂಗ, ಪಾದದಲ್ಲಿ ಶಿವಲಿಂಗ, ಪಾಯುವಿನಲ್ಲಿ ಗುರುಲಿಂಗ ಮತ್ತು ಉಪಸ್ಥ (ಜನನೇಂದ್ರಿಯ)ದಲ್ಲಿ ಆಚಾರಲಿಂಗ ಪ್ರತಿಷ್ಠಿತವಾಗಿವೆ.

ಪ್ರಾಯಶ್ಚಿತ್ತವಿಧಾನಮ್

ಯೇ ವರ್ಣಾಶ್ರಮಧರ್ಮಾಣಾಮನಾಚರಣಸಂಭವಾಃ।
ಯೇ ತ್ವಷ್ಟಾವರಣನ್ಯೂನತಾಶ್ರಿತಾ ವ್ರತಲೋಪಜಾಃ॥
ಯೇ ಚ ಪಂಚಾಚಾರಲೋಪಸಂಭೂತಾ ಭಕ್ತಿಲೋಪಜಾಃ ॥ ೨೧ ॥

ಮನೋವಾಕ್ಕರ್ಮಜಾ ದೋಷಾಸ್ತೇಷಾಂ ಹಿ ವಿನಿವೃತ್ತಯೇ।
ಮಾಹೇಶಸನ್ನಿಧೌ ಸರ್ವಪ್ರಾಯಶ್ಚಿತ್ತಂ ಕರೋಮ್ಯಹಮ್ ॥ ೨೨ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇತಿ ಸಂಕಲ್ಪ್ಯ ಸಂಪೂಜ್ಯ ಭಕ್ತ್ಯಾ ಗುರುಚರೇಶ್ವರಾನ್।
ಸಂತರ್ಪ್ಯ ಧನವಸ್ತ್ರಾದ್ಯೈಃ ಪಿಬೇತ್ತತ್ಪಾದತೀರ್ಥಕಮ್ ॥ ೨೩ ॥

ಯಸ್ಯ ವಕ್ತ್ರೇಽಂತ್ಯಕಾಲೇ ತು ಮಾಹೇಶ್ವರಪದೋದಕಮ್।
ದೀಯತೇ ಸ ಹಿ ಪೂತಾತ್ಮಾ ಶಿವಸಾಯುಜ್ಯಮಾಪ್ನುಯಾತ್ ॥ ೨೪ ॥

ಪ್ರಾಯಶ್ಚಿತ್ತದ ವಿಧಾನ

ವರ್ಣಾಶ್ರಮ ಧರ್ಮಗಳನ್ನು ಆಚರಿಸದಿರುವುದರಿಂದ ಉಂಟಾದ, ಅಷ್ಟಾವರಣದಲ್ಲಿ (ಅವುಗಳ ಪಾಲನೆಯಲ್ಲಿ) ನ್ಯೂನತೆಗಳನ್ನು ಅವಲಂಬಿಸಿದ, ಪಂಚಾಚಾರದಲ್ಲಿ ಲೋಪಗಳಿಂದ ಉಂಟಾದ, ಭಕ್ತಿಯ ಲೋಪದಿಂದ ಉಂಟಾದ, ಯಾವ ದೋಷಗಳು ಇವೆಯೋ ಮತ್ತು ಮನಸ್ಸು, ಮಾತು ಮತ್ತು ಕರ್ಮಗಳಿಂದ ಉಂಟಾದ ಯಾವ ದೋಷಗಳಿವೆಯೋ ಅವುಗಳ ನಿವಾರಣೆಗಾಗಿ ಮಹೇಶ್ವರನ ಸನ್ನಿದಿಯಲ್ಲಿ ಎಲ್ಲಾ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವೆನು. (೨೧-೨೨). ಹೀಗೆ ಸಂಕಲ್ಪವನ್ನು ಮಾಡಿ ಭಕ್ತಿ ಪೂರ್ವಕವಾಗಿ ಗುರು, ಜಂಗಮ ಮತ್ತು ಲಿಂಗಗಳ ಪೂಜೆಮಾಡಿ, ಧನ ಮತ್ತು ವಸ್ತ್ರಗಳಿಂದ ಸಂತೃಪ್ತಿಗೊಳಿಸಿ, ಅವರ ಪಾದತೀರ್ಥವನ್ನು ಸೇವಿಸಬೇಕು. ಅಂತ್ಯ ಕಾಲದಲ್ಲಿ ಯಾರ ಬಾಯಲ್ಲಿ ಮಾಹೇಶ್ವರ (ಜಂಗಮ) ಪಾದೋದಕವನ್ನು ಹಾಕಲಾಗುತ್ತದೆಯೋ ಅವನು ಪವಿತ್ರಾತ್ಮನಾಗಿ ಶಿವಸಾಯುಜ್ಯವನ್ನು ಹೊಂದುತ್ತಾನೆ. (೨೩-೨೪).

ಟಿಪ್ಪಣಿ : ಮಕುಟಾಗಮ, ಚ.ಪಾ., ೨.೩೩ರಲ್ಲಿ ಹೇಳಿದಂತೆ ಮಹಾ ಮಹಿಮೆಯುಳ್ಳ ಶಿವವ್ರತವನ್ನು ಪಾಲಿಸುವವರಿಗೆ ವಿಶೇಷವಾಗಿ ಶಿವನ ಭಕ್ತರಿಗೆ ಶಿವಸ್ವರೂಪಿಗಳಾದ ಗುರು, ಲಿಂಗ, ಜಂಗಮರ ಪಾದತೀರ್ಥ ಸೇವನೆಗಿಂತಲೂ ಮಿಗಿಲಾದ ಪ್ರಾಯಶ್ಚಿತ್ತವಿಲ್ಲ- "ಮಹಾಶೈವವ್ರತಸ್ಥಾನಾಂ ಮದ್ಭಕ್ತಾನಾಂ ವಿಶೇಷತಃ। ನಿಷ್ಕೃತ್ಯಂತರಂ ಮುಖ್ಯಂ ಮತ್ತೀರ್ಥಪ್ರಾಶನಾದೃತೇ॥" ಗುರು-ಲಿಂಗ-ಜಂಗಮ ಪಾದತೀರ್ಥದ ಸೇವನೆಯೇ ಎಲ್ಲಾ ಪಾಪಗಳಿಗೂ ಪ್ರಾಯಶ್ಚಿತ್ತ.

ಮಹಾಲಿಂಗ ವಿಭಾವನಮ್

ಶಿವನಾಮ ಪಠನ್ ದಿವ್ಯಂ ಮಹಾಲಿಂಗಂ ವಿಭಾವಯನ್।
ಪ್ರಾಯೋಪವೇಶಂ ಕುರ್ವೀತ ಶಿವಲೀನಮನಾಃ ಸ್ವಯಮ್ ॥ ೨೫ ॥

ಅನಂತರಂ ಕರ್ಣಮಂತ್ರಾನ್ ಶ್ರಾವಯೇಯುಃ ಸುತಾದಯಃ।
ಷಡಕ್ಷರಂ ದಕ್ಷಕರ್ಣೇ ತಥೋಪನಿಷದಃ ಶಿವಾಃ ॥ ೨೬ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರ್ಪೂರಂ ಜ್ವಾಲಯೇತ್ ಪಶ್ಚಾದುತ್ಕ್ರಾಂತಸಮಯೇ ತದಾ।
ಅಣುಃ ಪಂಥೇತ್ಯರ್ಚಿರಾದಿಗತಿಮಂತ್ರಂ ಸಮುಚ್ಚರನ್ ॥ ೨೭ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರ-ಬೃಹಸ್ಪತಿಸಂವಾದೇ ಶಿವಶಾಸನೇ ಚರ್ಯಾಪಾದೇ ಉತ್ಕ್ರಾಂತಿ-ಸಮಯಾಚಾರವರ್ಣನಂ ನಾಮ ದ್ವಿತೀಯಃ ಪಟಲಃ ॥ ೨ ॥

ಮಹಾಲಿಂಗದ ವಿಭಾವನೆ

ದಿವ್ಯ ಶಿವನಾಮವನ್ನು ಪಠಿಸುತ್ತಾ ಮಹಾಲಿಂಗವನ್ನು ಭಾವಿಸಿಕೊಂಡು ಶಿವನಲ್ಲಿ ಲೀನವಾಗುವ ಮನಸ್ಸಿನಿಂದ ಸ್ವಯಂ ಪ್ರಾಯೋಪವೇಶವನ್ನು ಮಾಡಬೇಕು. (೨೫). ಅನಂತರ ಸುತರು ಮುಂತಾದವರು ಕರ್ಣ ಮಂತ್ರಗಳನ್ನು ಕೇಳಿಸಬೇಕು. ಬಲಗಿವಿಯಲ್ಲಿ ಷಡಕ್ಷರ ಮಂತ್ರವನ್ನು ಮಂಗಲಕರಗಳಾದ ಉಪನಿಷತ್ತುಗಳನ್ನು ಕೇಳಿಸಬೇಕು. (೨೬). ಅನಂತರ ಪ್ರಾಣದ ಉತ್ಕ್ರಾಂತಿಯ ಸಮಯದಲ್ಲಿ ಕರ್ಪೂರವನ್ನು 'ಅಣುಃ ಪಂಥಾಃ' ಇತ್ಯಾದಿ ಅರ್ಚಿರಾದಿ (ಉತ್ತರಾಯಣ) ಗತಿಯನ್ನು ಮುಟ್ಟಿಸುವ ಮಂತ್ರಗಳನ್ನು ಉಚ್ಚರಿಸುತ್ತಾ ಕರ್ಪೂರವನ್ನು ಬೆಳಗಬೇಕು. (೨೭).

ಟಿಪ್ಪಣಿ : ಪ್ರಾಣತ್ಯಾಗದ ನಿರ್ಧಾರ ತೆಗೆದುಕೊಂಡ ಮೇಲೆ ಯಾವುದಾದರೂ ನಿಶ್ಚಿತ ಸ್ಥಾನದಲ್ಲಿ ಕುಳಿತುಕೊಳ್ಳುವುದೇ 'ಪ್ರಾಯೋಪವೇಶನ'. "ಅಣುಃ ಪಂಥಾಃ ವಿತತಃ ಪುರಾಣೋ ಮಾಂ ಸ್ಪೃಷ್ಟೋಽನುವೃತ್ತೋ ಮಯ್ಯೆವ। ತೇ ನ ಧೀರಾ ಅಪಿ ಯಂತಿ ಬ್ರಹ್ಮವಿದಃ ಸ್ವರ್ಗಂ ಲೋಕಮಿತಿ ಊರ್ಧ್ವಂ ವಿಮುಕ್ತಾಃ॥ ಮಕುಟಾಗಮ, ಚ.ಪಾ. ೨.೩೭ನ್ನೂ ನೋಡಿರಿ. (ಬೃಹದಾರಣ್ಯಕೋಪನಿಷತ್, ೪.೪.೧೧)."

ಇಲ್ಲಿಗೆ ಶ್ರೀ ಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ ಅನಂತರುದ್ರ-ಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಚರ್ಯಾಪಾದದಲ್ಲಿ ಉತ್ಕ್ರಾಂತಿಸಮಯಾಚಾರವರ್ಣನವೆಂಬ ದ್ವಿತೀಯ ಪಟಲ ಮುಗಿಯಿತು. (೨).

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೃತೀಯಃ ಪಟಲಃ

॥ ಉತ್ಕ್ರಾಂತ್ಯನಂತರಕಾರ್ಯಕರ್ತೃಕ್ರಮನಿರ್ಣಯಃ ॥

ಬೃಹಸ್ಪತಿರುವಾಚ

ಅಂತರುದ್ರ ಭಗವನ್ನಖಿಲಜ್ಞಾನಭಾಸುರ।
ಅನಂತರಂ ಸಮುತ್ಕ್ರಾಂತೇಃ ಕಾರ್ಯಂ ಕರ್ತುರ್ವದಸ್ವ ಮೇ ॥ ೧ ॥

ಬೃಹಸ್ಪತಿಯು ಹೇಳಿದನು

ಸಮಸ್ತ ಜ್ಞಾನದಿಂದ ಪ್ರಕಾಶಿಸುವ ಭಗವನ್ ಅನಂತರುದ್ರನೇ, ಸಮುತ್ಕ್ರಾಂತಿಯ ಅನಂತರದ ಕರ್ತೃವಿನ ಕಾರ್ಯವನ್ನು ಕುರಿತು ನನಗೆ ಹೇಳು. (೧).

ಟಿಪ್ಪಣಿ : ಮಕುಟಾಗಮ, ಚ.ಪಾ. ೩.೧ನ್ನೂ ನೋಡಿರಿ.

ಉತ್ಕ್ರಾಂತಿಕಾರ್ಯಕರ್ತೃಕ್ರಮಃ

ಆದೌ ಕರ್ತೃಕ್ರಮಂ ವಕ್ಷ್ಯೇ ತಚ್ಛೃಣು ತ್ರಿದಶಾರ್ಚಿತ।
ಪುತ್ರಃ ಪೌತ್ರಃ ಪ್ರಪೌತ್ರಶ್ಚ ಪುತ್ರಿಕಾಪುತ್ರ ಏವ ಚ ॥ ೨ ॥

ತತ್ಸುತೋ ವಾಽಥವಾ ದತ್ತಸ್ತತ್ಸಂತಾನಸ್ತಥೈವ ಚ।
ಧನಹಾರೀ ಪತಿಃ ಪತ್ನೀ ಸಪತ್ನೀಪುತ್ರ ಏವ ಚ ॥ ೩ ॥

ಪುತ್ರೀ ಭ್ರಾತಾ ಚ ತತ್ಪುತ್ರಃ ಪಿತಾ ಮಾತಾ ಸ್ನುಷಾ ತಥಾ।
ಪೌತ್ರೀ ದೌಹಿತ್ರಿಕಾ ಚಾಪಿ ಪೌತ್ರಪತ್ನೀ ಚ ತತ್ಸುತಾ ॥ ೪ ॥

ದತ್ತಸ್ಯ ಪತ್ನೀ ಭಗಿನೀ ಭಾಗಿನೇಯಶ್ಚ ಸೋದಕಃ।
ಮಾತುಃ ಸೋದಕ ಏವಾಪಿ ಸಗೋತ್ರಃ ಶಿಷ್ಯ ಏವ ಚ ॥ ೫ ॥

ಋತ್ವಿಗ್ ಭೃತ್ಯೋ ಗುರುಶ್ಚೈವ ಸಹಾಧ್ಯಾಯೀ ತಥೈವ ಚ।
ಜಾಮಾತಾ ಚ ಸಖಾ ಚೈವ ರಾಜಾ ಚ ಕ್ರಮಶಃ ಸ್ಮೃತಾಃ ॥ ೬ ॥

ಉತ್ಕ್ರಾಂತಿ ಕಾರ್ಯಮಾಡುವ ಕರ್ತೃಗಳ ಕ್ರಮ

ಮಗ, ಮೊಮ್ಮಗ, ಮರಿಮಗ, ಮಗಳ ಮಗ (ದೌಹಿತ್ರ), ದೌಹಿತ್ರನ ಮಗ, ದತ್ತಕ ಪುತ್ರ ಮತ್ತು ಅವನ ಸಂತಾನ, ಹಣ ಕೊಟ್ಟವನು, ಪತಿ, ಪತ್ನಿ, ಸಪತ್ನಿಯ ಮಗ, ಪುತ್ರಿ, ಸಹೋದರ, ಸಹೋದರನ ಮಗ, ಪಿತೃ, ಮಾತೃ, ಸಹೋದರಿ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊಮ್ಮಗಳು, ಮಗಳ ಮಗನ ಮಗಳು, ಮೊಮ್ಮಗನ ಹೆಂಡತಿ ಮತ್ತು ಅವಳ ಮಗಳು, ದತ್ತಕ ಪುತ್ರನ ಹೆಂಡತಿ ಮತ್ತು ಅವನ ಭಗಿನಿ, ಭಗಿನಿಯ ಮಗ, ಸೋದಕ, ತಾಯಿಯ ಸೋದಕ, ಸಗೋತ್ರ ಶಿಷ್ಯ, ಋತ್ವಿಕ್, ಆಳು (ನೌಕರ), ಗುರು, ಸಹಪಾಠಿ, ಅಳಿಯ, ಗೆಳೆಯ ಮತ್ತು ರಾಜ, ಇವರು ಕ್ರಮಶಃ ಕರ್ತೃಗಳು. (೨-೬).

ಟಿಪ್ಪಣಿ : ಸೋದಕ - ಧರ್ಮಶಾಸ್ತ್ರದಲ್ಲಿ ಕುಲಪರಂಪರೆಯನ್ನು ಸಪಿಂಡ, ಸೋದಕ ಮತ್ತು ಸಗೋತ್ರ ಎಂಬ ಹೆಸರುಗಳಿಂದ ಕರೆಯುತ್ತಾರೆ. ಏಳು ಪೀಳಿಗೆಗಳವರೆಗೆ ಸಪಿಂಡ, ಏಳನೆಯ ಪೀಳಿಗೆಯಿಂದ ಹದಿನಾಲ್ಕನೆ ಪೀಳಿಗೆಯವರೆಗೆ ಸೋದಕ ಮತ್ತು ಅಲ್ಲಿಂದ ಇಪ್ಪತ್ತೊಂದನೆ ಪೀಳಿಗೆಯವರೆಗೆ ಸಗೋತ್ರ ಎಂದು ಕರೆಯುತ್ತಾರೆ. ಇಲ್ಲಿ ಕೊಟ್ಟ ಕ್ರಮದಲ್ಲಿ ಪುತ್ರನಿಂದ ಹಿಡಿದು ರಾಜನವರೆಗೆ ಅಂತ್ಯೇಷ್ಟಿ (ಉತ್ಕ್ರಮಣಾನಂತರದ ಕಾರ್ಯದ) ಅಧಿಕಾರಿಗಳು (ಕರ್ತೃಗಳು).

ಉತ್ಕ್ರಾಂತ್ಯನಂತರಕಾರ್ಯವಿವರಣಮ್

ಉತ್ಕ್ರಾಂತಪ್ರಾಣಮಾಲೋಕ್ಯ ಕರ್ತಾ ಸ್ನಾತ್ವಾ ಧೃತಾಂಬರಃ।
ಧೃತತ್ರಿಪುಂಡ್ರರುದ್ರಾಕ್ಷಃ ಕರ್ಮಾಧಿಕೃತಿಸಿದ್ಧಯೇ॥
ಕುರ್ಯಾದ್ ಗಣನಮಸ್ಕಾರಂ ದದ್ಯಾಚ್ಚ ದ್ರವಿಣಂ ತತಃ ॥ ೭ ॥

ದೀಯತೇ ಯನ್ಮೃತಾಹೇ ತತ್ ಸರ್ವಪರ್ವಸು ದಾನತಃ।
ವಿಶಿಷ್ಯತೇ ತದ್ಯಥಾಶಕ್ತಿ ದದ್ಯಾದ್ ದ್ರವಿಣಮಾತ್ಮಜಃ ॥ ೮ ॥

ಉತ್ಕ್ರಾಂತಿಯ ಅನಂತರದ ಕಾರ್ಯದ ವಿವರಣೆ

ಪ್ರಾಣದ ಉತ್ಕ್ರಮಣವಾಗಿರುವುದನ್ನು ಕಂಡು ಕರ್ತೃವು ಸ್ನಾನಮಾಡಿ ಬಟ್ಟೆಯನ್ನು ಧರಿಸಿ, ಭಸ್ಮತ್ರಿಪುಂಡ್ರ ಮತ್ತು ರುದ್ರಾಕ್ಷಗಳನ್ನು ಧರಿಸಿ, (ಶಿವಮೇಧ) ಕರ್ಮದ ಅಧಿಕಾರ ಸಿದ್ಧಿಯಾಗಲು (ಜಂಗಮ) ಗಣಗಳಿಗೆ ನಮಸ್ಕರಿಸಬೇಕು ಮತ್ತು ಅವರಿಗೆ ಹಣವನ್ನು ದಕ್ಷಿಣಾ ರೂಪದಲ್ಲಿ ಕೊಡಬೇಕು. (೭). ಮರಣದ ದಿನ ಯಾವುದನ್ನು ದಾನವಾಗಿ ಕೊಡಲಾಗುತ್ತದೆಯೋ ಅದು ಎಲ್ಲಾ ಪರ್ವಗಳಲ್ಲಿ ಮಾಡಿದ ದಾನಕ್ಕಿಂತ ವಿಶಿಷ್ಟವಾಗಿದೆ. ಆದ್ದರಿಂದ ಶಕ್ತಿಯಿದ್ದಷ್ಟು ಹಣವನ್ನು ಮಗನು ದಕ್ಷಿಣೆಯಾಗಿ ಕೊಡಬೇಕು. (೮).

ಟಿಪ್ಪಣಿ : ಇದೇ ವಿಷಯಕ್ಕೆ ಮಕುಟಾಗಮ, ಚ.ಪಾ.೩.೨-೩ರನ್ನೂ ನೋಡಿರಿ.

ಊರ್ಧ್ವೋಚ್ಛಿಷ್ಟಾದಿದೋಷಪ್ರಾಪ್ತೌ ಪ್ರಾಯಶ್ಚಿತಮ್

ಊರ್ಧ್ವೋಚ್ಛಿಷ್ಟಾದಿಸಂಪ್ರಾಪ್ತೌ ವಿದಧ್ಯಾನ್ನಿಷ್ಕೃತಿಂ ತದಾ।
ಪ್ರಾಜಾಪತ್ಯಪ್ರತಿನಿಧಿಂ ದ್ರವ್ಯಂ ದೇಯಂ ಹಿತೈಷಿಣಾ ॥ ೯ ॥

ಪ್ರಾಸಾದೇ ವಾಪಿ ಖಟ್ವಾಯಾಂ ಮೃತೌ ಕುರ್ಯಾಚ್ಚ ನಿಷ್ಕೃತಿಮ್।
ಗಾಂ ವಾ ಹಿರಣ್ಯಂ ದದ್ಯಾಚ್ಚ ಪ್ರಾಜಾಪತ್ಯಮಥಾಪಿ ವಾ ॥ ೧೦ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಊರ್ಧ್ವೋಚ್ಛಿಷ್ಟ ಮುಂತಾದ ದೋಷ ಬಂದಾಗ ಪ್ರಾಯಶ್ಚಿತ್ತ

ಈ ಉತ್ಕ್ರಾಂತಿ ಸಮಯದಲ್ಲಿ ಉಚ್ಛಿಷ್ಟ (ಎಂಜಲು) ಮುಂತಾದವುಗಳ ದೋಷ ಉಂಟಾದರೆ ಪ್ರಾಯಶ್ಚಿತ್ತವನ್ನು ಮಾಡಬೇಕು. (೯). ಪ್ರಾಜಾಪತ್ಯ ಕರ್ಮದ ಪ್ರತಿನಿಧಿಯಾಗಿ ಹಿತೈಷಿಗಳು ಹಣವನ್ನು ದಕ್ಷಿಣೆಯಾಗಿ ಕೊಡಬೇಕು. ಮಾಳಿಗೆಯ ಮಹಡಿಯ ಮೇಲೆ, ಮಂಚದ ಮೇಲೆ ಸಾವುಂಟಾದರೆ ಅದಕ್ಕೂ ಪ್ರಾಯಶ್ಚಿತ್ತವನ್ನು ಮಾಡಬೇಕು. ಗೋದಾನ ಅಥವಾ ಸುವರ್ಣದಾನ ಮಾಡಬೇಕು ಅಥವಾ ಪ್ರಾಜಾಪತ್ಯ ವ್ರತವನ್ನು ಆಚರಿಸಬೇಕು. (೧೦).

ಟಿಪ್ಪಣಿ : ಪ್ರಾಜಾಪತ್ಯ ಕರ್ಮವು ಒಂದು ಪ್ರಾಯಶ್ಚಿತ್ತ ಪ್ರಕಾರ. ಮನುಸ್ಮೃತಿ, ೧೧. ೨೧೧ರ ಪ್ರಕಾರ ಮೊದಲ ಮೂರು ದಿನಗಳು ಕೇವಲ ದಿನದಲ್ಲಿ ಒಂದು ಸಾರಿ, ಮುಂದಿನ ಮೂರು ದಿನ ಕೇವಲ ರಾತ್ರಿಯಲ್ಲಿ ಒಂದು ಸಾರಿ, ಪುನಃ ಮೂರು ದಿನ ಊಟ ಕೇಳದೆ ಮತ್ತು ಮುಂದಿನ ಮೂರು ದಿನ ಪೂರ್ಣ ಉಪವಾಸ. ಇದು ಪ್ರಾಜಾಪತ್ಯ. ಮಕುಟಾಗಮ, ಚ.ಪಾ. ೩. ೫-೬ನ್ನೂ ನೋಡಿರಿ.

ಸಿದ್ಧಿಂ ಗತಸ್ಯ ಸಂಸ್ಕಾರಸಮಯಃ

ಸಿದ್ಧಿಂ ಗತಸ್ಯ ತು ದಿವಾ ಕುರ್ಯಾತ್ ಸಂಸ್ಕಾರಮಾತ್ಮಜಃ।
ಪಂಚವಿಂಶಘಟೀ ಪೂರ್ವಮಥ ಪರ್ಯುಷಿತಂ ಭವೇತ್ ॥ ೧೧ ॥

ದಿವಾ ವಾ ಯದಿ ವಾ ನಕ್ತಂ ವಪುಸ್ತದ್ಯದಸಂಸ್ಕೃತಮ್।
ಸ್ಯಾತ್ಪರ್ಯುಷಿತಮಸ್ಯೈವಂ ಕುರ್ಯಾತ್ ಸಂಸ್ಕಾರಮಾದಿತಃ ॥ ೧೨ ॥

ಪಂಚಗವ್ಯೇನ ಸಂಸ್ನಾಪ್ಯ ಪಾವಮಾನ್ಯಾಭಿಮಂತ್ರ್ಯ ಚ ।
ಜಲೇನ ಸ್ನಾಪಯಿತ್ವಾ ಚ ವಿಧಿವನ್ನಿಖನೇತ್ ತತಃ ॥ ೧೩ ॥

ಮೃತದೇಹದ ಸಂಸ್ಕಾರದ ಅವಧಿ

ದಿನದಲ್ಲಿ ಸಿದ್ಧಿಯನ್ನು (ಅಂದರೆ ಮೃತ್ಯುವನ್ನು) ಹೊಂದಿದವನನ್ನು ಮಗನು ಇಪ್ಪತ್ತೈದು ಘಟಿಕೆಗಳೊಳಗೆ (ಅಂದರೆ ಹತ್ತು ಗಂಟೆಗಳೊಳಗೆ) ಸಂಸ್ಕಾರ ಮಾಡಬೇಕು, ಇಲ್ಲದೆ ಹೋದರೆ ದೇಹವು ಕೆಟ್ಟು ಹೋಗುತ್ತದೆ. (೧೧). ಹಗಲಾಗಲಿ, ರಾತ್ರಿಯಾಗಲಿ ಸಂಸ್ಕಾರ ಮಾಡದೇ ಹೋದ ದೇಹವು ಕೆಟ್ಟು ಹೋಗುತ್ತದೆ, ಅದರೊಳಗೆ ಸಂಸ್ಕಾರವನ್ನು ಮಾಡಬೇಕು. (೧೨). ಇಂತಹ ಸ್ಥಿತಿಯಲ್ಲಿ ಪಂಚಗವ್ಯದಿಂದ ಸ್ನಾನ ಮಾಡಿಸಿ, ಪವಮಾನ ಋಕ್ಕಿನಿಂದ ಅಭಿಮಂತ್ರಿಸಿ, ನೀರಿನಿಂದ ಮತ್ತೆ ಸ್ನಾನ ಮಾಡಿಸಿ ವಿಧಿಗನುಸಾರವಾಗಿ ಭೂಮಿಯಲ್ಲಿ ಹೂಳಬೇಕು. (೧೩).

ಟಿಪ್ಪಣಿ : ಪಂಚಗವ್ಯ- ಗೋವಿನ ಹಾಲು, ಮೊಸರು, ತುಪ್ಪ, ಮೂತ್ರ ಮತ್ತು ಸೆಗಣಿ (ಗೋಮಯ) - 'ಕ್ಷೀರಂ ದಧಿ ತಥಾ ಚಾಜ್ಯಂ ಮೂತ್ರಗೋಮಯಮೇವ ಚ।' **ಪವಮಾನೀ**- ಪವಮಾನ ಸೋಮನನ್ನು ಸ್ತುತಿಸುವ ಋಕ್ಕು - "ಯಾತೇ ಅಗ್ನೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರುದ್ರಿಯಾ ತಮಾಸ್ತಯಾ ನಃ ಪಾಹಿ। ಯಾತೇ ಅಗ್ನೇ ಗುಹಾಶಯಾ... ತಸ್ಯಾಸ್ತೇ ಸ್ವಾಹಾ॥" ಇತ್ಯಾದಿಗಳು (ತೈತ್ತಿರೀಯಸಂಹಿತಾ, ೧.೨.೧೧.೨)

ಗತಪ್ರಾಣಸ್ಯ ಸಮಾಧಿಸಂಸ್ಕಾರಃ

ಗತಪ್ರಾಣಶರೀರಂ ತು ಶ್ರೀರುದ್ರಾದಿಮನೂನ್ ಪಠನ್।
ಸಂಸ್ನಾಪ್ಯ ಚಾಪ್ಯಲಂಕೃತ್ಯ ರುದ್ರಾಕ್ಷೈರ್ಭಸ್ಮನಾऽಪಿ ಚ ॥ ೧೪ ॥
ಇಷ್ಟಲಿಂಗಂ ಕರೇ ನ್ಯಸ್ಯ ಸಂಪೂಜ್ಯ ಸಮನಂತರಮ್।
ಪೇಟಿಕಾಯಾಂ ಚ ವಿನ್ಯಸ್ಯ ವೃಣುಯಾದ್ವಾಹಕಾಂಸ್ತತಃ ॥ ೧೫ ॥

ನಿಷ್ಪ್ರಾಣ ಶರೀರದ ಸಮಾಧಿ ಸಂಸ್ಕಾರ

ನಿಷ್ಪ್ರಾಣ ದೇಹವನ್ನು ಶ್ರೀರುದ್ರ ಮುಂತಾದ ಮಂತ್ರಗಳನ್ನು ಪಠಿಸುತ್ತಾ ಸ್ನಾನ ಮಾಡಿಸಿ, ರುದ್ರಾಕ್ಷ ಮತ್ತು ಭಸ್ಮದಿಂದ ಅಲಂಕರಿಸಿ, ಇಷ್ಟಲಿಂಗವನ್ನು ಕರದಲ್ಲಿಟ್ಟು ಪೂಜಿಸಿ ಅನಂತರ ಕರಡಿಗೆಯಲ್ಲಿಟ್ಟು ವಾಹಕರನ್ನು (ಹೊರುವ ಜನರನ್ನು) ಕರೆಯಬೇಕು. (೧೪-೧೫).

ಟಿಪ್ಪಣಿ : ಮಕುಟಾಗಮ, ಚ.ಪಾ. ೩.೮-೯ನ್ನೂ ನೋಡಿರಿ.

ವಿಮಾನೇ ವಿನ್ಯಸ್ಯ ಶಿವಾರಾಮನಯನಮ್

ಮಹೋಕ್ಷೋ ವೃಷಭಶ್ಚೈವ ನಂದೀಶೋ ನಂದಿಕೇಶ್ವರಃ।
ಏತೈಶ್ಚ ನಾಮಭಿರ್ಯುಕ್ತಾಂಶ್ಚತುರಸ್ತೈಃ ಶರೀರಕಮ್॥
ವಿಮಾನೇ ಸನ್ನಿವೇಶ್ಯಾಥ ಶಿವಾರಾಮಂ ನಯೇತ್ತದಾ ॥ ೧೬ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇऽನಂತರುದ್ರಬೃಹಸ್ಪತಿ-ಸಂವಾದೇ ಶಿವಶಾಸನೇ ಚರ್ಯಾಪಾದೇ ಉತ್ಕ್ರಾಂತ್ಯನಂತರಕಾರ್ಯಕರ್ತೃಕ್ರಮ-ನಿರ್ಣಯೋ ನಾಮ ತೃತೀಯಃ ಪಟಲಃ ॥ ೩ ॥

ವಿಮಾನದಲ್ಲಿ ದೇಹವನ್ನು ಇರಿಸಿ ಶಿವೋದ್ಯಾನಕ್ಕೆ ಕೊಂಡೊಯ್ಯುವುದು

ಮಹೋಕ್ಷ, ವೃಷಭ, ನಂದೀಶ ಮತ್ತು ನಂದಿಕೇಶ್ವರ ಎಂಬ ಹೆಸರಿನ ನಾಲ್ಕು ಜನರನ್ನು ಕರೆದು ಅವರಿಂದ ಮೃತಶರೀರವನ್ನು ವಿಮಾನದಲ್ಲಿ ಇರಿಸಿ ಶಿವೋದ್ಯಾನಕ್ಕೆ ಕೊಂಡೊಯ್ಯಬೇಕು. (೧೬).

ಟಿಪ್ಪಣಿ : ಮಕುಟಾಗಮ, ಚ.ಪಾ. ೩.೧೦-೧೧ನ್ನೂ ನೋಡಿರಿ.

ಇಲ್ಲಿಗೆ ಶ್ರೀ ಚಂದ್ರಜ್ಞಾನಾಗಮದ ಉತ್ತರ ಭಾಗದಲ್ಲಿ ಅನಂತರುದ್ರ ಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಚರ್ಯಾಪಾದದಲ್ಲಿ ಉತ್ಕ್ರಾಂತ್ಯನಂತರಕಾರ್ಯಕರ್ತೃಕ್ರಮನಿರ್ಣಯವೆಂಬ ತೃತೀಯ ಪಟಲ ಮುಗಿಯಿತು (೩)

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚತುರ್ಥಃ ಪಟಲಃ

॥ ಔರ್ಧ್ವದೇಹಿಕವಿಧಿಕಥನಮ್ ॥

ಬೃಹಸ್ಪತಿರುವಾಚ

ಪ್ರಮಥಪ್ರವರಾನೀಕ ಸೇವ್ಯಮಾನಪದಾಂಬುಜ।
ಅನಂತರುದ್ರ ವಿಶ್ವಾತ್ಮನ್ ನೀಲಕಂಠ ನಮೋಽಸ್ತುತೇ ॥ ೧ ॥
ಅನಂತರಾಣಿ ಕೃತ್ಯಾನಿ ಕರ್ತವ್ಯಾನ್ಯಖಿಲಾನ್ಯಪಿ।
ನಿಬೋಧಯ ಮಹೇಶಾನ ಶಿವಾರಾಮಪ್ರವೇಶನಾತ್ ॥ ೨ ॥

ಬೃಹಸ್ಪತಿಯು ಹೇಳಿದನು

ಪ್ರಮಥ ಆದಿ ಶಿವಗಣ ಸಮುದಾಯದಿಂದ ಉಪಚರಿಸಲ್ಪಡುವ ಪಾದ-ಕಮಲಗಳುಳ್ಳ ವಿಶ್ವಾತ್ಮ ನೀಲಕಂಠ ಅನಂತರುದ್ರನೇ, ನಿನಗೆ ನಮಸ್ಕಾರ. (೧). ಮಹೇಶ್ವರನೇ, ಶಿವೋದ್ಯಾನ ಪ್ರವೇಶದ ಅನಂತರ ಮಾಡಬೇಕಾದ ಎಲ್ಲಾ ಕರ್ತವ್ಯಗಳನ್ನು ತಿಳಿಯಪಡಿಸು. (೨).

ಅನಂತರುದ್ರ ಉವಾಚ

ಮೃತಸ್ಯ ಶಿವಾರಾಮಪ್ರವೇಶನಮ್

ಶಿವಾಲಯಸಮೀಪೇ ವಾ ಶಿವಾರಾಮೇಽಥವಾ ಪುನಃ।
ಬಿಲ್ವವೃಕ್ಷಸ್ಯ ಮೂಲೇ ವಾ ಶಿವತೀರ್ಥಸಮೀಪಕೇ ॥ ೩ ॥
ಸಮಾಧಿಂ ಕಾರಯಿತ್ವಾ ತಾಂ ತನುಂ ತತ್ರ ಯಥಾವಿಧಿ।
ನಿಧಾಯ ಪೂರಯೇತ್ ಗರ್ತಂ ಭಸ್ಮನಾ ಮೃತ್ಸ್ನಯಾಪಿ ಚ ॥
ವಸ್ತ್ರಂ ತು ಧಾರಯಿತ್ವಾತಃ ಸಚೇಲಸ್ನಾನಮಾಚರೇತ್ ॥ ೪ ॥

ಅನಂತರುದ್ರನು ಹೇಳಿದನು

ಮೃತದೇಹವನ್ನು ಶಿವೋದ್ಯಾನದೊಳಗೆ ತರುವುದು

ಶಿವಾಲಯದ ಸಮೀಪದಲ್ಲಿ, ಶಿವೋದ್ಯಾನದಲ್ಲಿ, ಬಿಲ್ವವೃಕ್ಷದ ಬುಡದಲ್ಲಿ ಅಥವಾ ಶಿವತೀರ್ಥದ ಬಳಿಯಲ್ಲಿ ಸಮಾಧಿಯ ಗುಂಡಿಯನ್ನು ತೆಗೆಯಿಸಿ ಆ ದೇಹವನ್ನು ವಿಧಿಗೆ ಅನುಸಾರವಾಗಿ ಅದರಲ್ಲಿಟ್ಟು ಗುಂಡಿಯನ್ನು ಭಸ್ಮದಿಂದ ಮತ್ತು ಮಣ್ಣಿನಿಂದ ತುಂಬಿಸಿ, ಅನಂತರ ಧರಿಸಿದ ಬಟ್ಟೆಗಳಲ್ಲಿಯೇ ತಲೆಯಿಂದ ಸ್ನಾನಮಾಡಬೇಕು. (೩-೪).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಸಮಾಧಿಯನ್ನು ಎಲ್ಲಿ ತೋಡಿಸಬೇಕು ಎಂಬುದನ್ನು ಇದೇ ರೀತಿಯಲ್ಲಿ ಮಕುಟಾಗಮ, ಚ.ಪಾ. ೪.೨ರಲ್ಲೂ ನೋಡಬಹುದು. ಅಲ್ಲಿ ನದಿಯ ದಡವನ್ನೂ ಹೇಳಿದೆ. ಸಮಾಧಿ ತೋಡಿಸಲು ಅದರ ಆಳತೆ ಮತ್ತು ಆಕಾರಗಳ ಹಾಗೂ ಶರೀರವನ್ನು ಇಡುವ ಮತ್ತು ಗುಂಡಿ ಮುಚ್ಚುವ ಬಗ್ಗೆ ಮಕುಟಾಗಮ, ಚ.ಪಾ., ೪. ೩.-೧೦ನ್ನೂ ನೋಡಿರಿ.

ಕೇಶವಪನಮ್

ಬ್ರಾಹ್ಮಣಸ್ವರ್ಣಘಾತಾದಿ ಪಾಪಾನಿ ವಿವಿಧಾನಿ ಚ।
ಕೇಶಾನಾಶ್ರಿತ್ಯ ತಿಷ್ಠಂತಿ ತಸ್ಮಾತ್ ಕೇಶಾನ್ವಪಾಮ್ಯಹಮ್ ॥ ೫ ॥
ಮೇರುಮಂದರತುಲ್ಯಾನಿ ಪಾಪಾನಿ ವಿವಿಧಾನಿ ಚ।
ಕೇಶಾನಾಶ್ರಿತ್ಯ ತಿಷ್ಠಂತಿ ತಸ್ಮಾತ್ ಕೇಶಾನ್ವಪಾಮ್ಯಹಮ್॥
ಇತಿ ಮಂತ್ರೇಣ ಸಂಕಲ್ಪ್ಯ ಕೇಶಶ್ಮಶ್ರೂಣಿ ವಾಪಯೇತ್ ॥ ೬ ॥
ಅಗ್ನೇರಿವ ಶಿಖಾ ಯಸ್ಯ ವಿದ್ಯಾ ಜ್ಞಾನಮಯೀ ಶಿಖಾ।
ಸ ಶಿಖೀತ್ಯುಚ್ಯತೇ ವಿದ್ವನ್ನಿತರೇ ಕೇಶಧಾರಿಣಃ ॥ ೭ ॥

ಕೇಶಮುಂಡನ

ಬ್ರಹ್ಮಹತ್ಯಾ, ಸ್ವರ್ಣಸ್ತೇಯ ಮುಂತಾದವುಗಳಿಂದ ಉಂಟಾದ ನಾನಾ ಪ್ರಕಾರದ ಪಾಪಗಳು ಕೇಶಗಳನ್ನು ಆಶ್ರಯಿಸಿರುತ್ತವೆ. ಆದ್ದರಿಂದ ಆ ಕೇಶಗಳನ್ನು ಮುಂಡನ ಮಾಡಿಸಿಕೊಳ್ಳುತ್ತೇನೆ. (೫). ಮೇರು ಮತ್ತು ಮಂದರ ಪರ್ವತಗಳಷ್ಟು ಬೃಹತ್ತಾದ ವಿವಿಧ ಪಾಪಗಳು ಕೇಶಗಳನ್ನು ಆಶ್ರಯಿಸಿರುತ್ತವೆ. ಆದ್ದರಿಂದ ಕೇಶಗಳನ್ನು ಮುಂಡನ ಮಾಡಿಸಿ ಕೊಳ್ಳುತ್ತೇನೆ. ಹೀಗೆ ಈ ಮಂತ್ರದಿಂದ ಸಂಕಲ್ಪ ಮಾಡಿ ತಲೆಯ ಕೂದಲು ಮತ್ತು ಮೀಸೆಗಳನ್ನು ಬೋಳಿಸಿಕೊಳ್ಳಬೇಕು. (೬). ಯಾವ ಶಿಖೆಯು ಅಗ್ನಿಯ ಜ್ವಾಲೆಯಂತೆ ಇದೆಯೋ, ಯಾರಲ್ಲಿ ಜ್ಞಾನಮಯ ಶಿಖೆಯಿದೆಯೋ ಅವನು 'ಶಿಖೀ' ಎಂದು ಕರೆಯಲ್ಪಡುತ್ತಾನೆ. ಮಿಕ್ಕವರು ಕೇವಲ ಕೇಶಧಾರಿಗಳು. (೭).

ಟಿಪ್ಪಣಿ : ಇವೇ ಮಂತ್ರಗಳು ಮತ್ತು ಕ್ರಿಯೆ ಮಕುಟಾಗಮ, ಚ.ಪಾ. ೪.೧೧-೧೪ರಲ್ಲಿ ಹೇಳಲ್ಪಟ್ಟಿವೆ. ಬ್ರಹ್ಮಹತ್ಯೆ, ಸ್ವರ್ಣಸ್ತೇಯ, ಸುರಾಪಾನ, ಗುರುತಲ್ಪಗಮನ (ಗುರುಪತ್ನಿಯ ಸಂಬಂಧ) ಮತ್ತು ಮಹಾಪಾತಕಿಯ ಸಂಪರ್ಕ ಇವುಗಳನ್ನು ಮನುಸ್ಮೃತಿ, ೧೧.೫೪ರಲ್ಲಿ ಮಹಾಪಾತಕಗಳೆಂದು ಕರೆಯಲಾಗಿದೆ.

ವಪನಾನಂತರಕೃತ್ಯಾನಿ-ಲಿಂಗಸ್ಥಾಪನಮ್

ವಪನಾನಂತರಂ ಸ್ನಾತ್ವಾ ಭೂತಿರುದ್ರಾಕ್ಷಸಂಯುತಃ।
ಗೃಹೀತ್ವಾ ಗಣಾನುಜ್ಞಾಂ ದಿವ್ಯರೂಪಾಪ್ತಯೇ ಪಿತುಃ ॥ ೮ ॥
ನವಭಿಃ ಪಂಚಭಿರ್ವಾಪಿ ಶೋಭಿತಂ ವೃಷಭೈಃ ಪರಮ್।
ಲಿಂಗಂ ತು ಪಿತೃನಾಮಾಂಕಂ ಸಮಾಧೌ ಸ್ಥಾಪಯೇತ್ತದಾ
ದಶದಾನಾನಿ ದದ್ಯಾಚ್ಚ ಲಿಂಗಂ ಚ ಪರಿಪೂಜಯೇತ್ ॥ ೯ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂಡನದ ಅನಂತರ ಮಾಡುವ ಕ್ರಿಯೆಗಳು - ಲಿಂಗಸ್ಥಾಪನೆ

ಮುಂಡನ ಮಾಡಿಸಿಕೊಂಡ ಅನಂತರ ವಿಭೂತಿ-ರುದ್ರಾಕ್ಷಗಳನ್ನು ಧರಿಸಿಕೊಂಡು ಗಣಂಗಳ ಒಪ್ಪಿಗೆಯನ್ನು ತೆಗೆದುಕೊಂಡು ತಂದೆಯು (ಮೃತವ್ಯಕ್ತಿಯು) ದಿವ್ಯರೂಪವನ್ನು ಹೊಂದಲೋಸುಗ ಒಂಬತ್ತು ಅಥವಾ ಐದು ವೃಷಭಗಳಿಂದ ಶೋಭಿತವಾದ ಲಿಂಗವನ್ನು ಪಿತೃವಿನ (ಮೃತವ್ಯಕ್ತಿಯ) ನಾಮಾಂಕಿತಗೊಳಿಸಿ ಸಮಾಧಿಯ ಮೇಲೆ ಸ್ಥಾಪಿಸಬೇಕು ಮತ್ತು ಹತ್ತು ವಿಧ ದಾನಗಳನ್ನು ಮಾಡಬೇಕು ಮತ್ತು ಲಿಂಗವನ್ನು ಪೂಜಿಸಬೇಕು. (೮-೯).

ಟಿಪ್ಪಣಿ : ಇದೇ ವಿಷಯ ಮಕುಟಾಗಮ, ಚ.ಪಾ. ೨.೪ರಲ್ಲಿಯೂ ಬಂದಿದೆ. ದಶವಿಧದಾನ - ಗೋವು, ಭೂಮಿ, ಎಳ್ಳು, ಚಿನ್ನ, ತುಪ್ಪ, ವಸ್ತ್ರ, ಧಾನ್ಯ, ಬೆಲ್ಲ, ಬೆಳ್ಳಿ ಮತ್ತು ಉಪ್ಪು.

ಕ್ಷೀರಾದಿನಾ ತರ್ಪಣಮ್

ಮೃದ್ಘಟ್ಟನೋಪಜನಿತಸಂತಾಪಸ್ಯೋಪಶಾಂತಯೇ।
ಕ್ಷೀರಾದಿತರ್ಪಣಂ ಕಾರ್ಯಮಾದಶಾಹಂ ತಥಾಽನ್ವಹಮ್ ॥ ೧೦ ॥
ಇಷ್ಟಾದೀನಿ ಚ ಲಿಂಗಾನಿ ಪಿತರಂ ಚಾಪಿ ತರ್ಪಯೇತ್।
ಪಿತ್ರೇ ನಿತ್ಯಂ ಪ್ರದದ್ಯಾಚ್ಚ ತ್ರಿಸಂಖ್ಯಾನುದಕಾಂಜಲೀನ್ ॥ ೧೧ ॥

ಕ್ಷೀರಾದಿಗಳ ತರ್ಪಣ

ಇದಾದ ಮೇಲೆ ಹತ್ತು ದಿನಗಳವರೆಗೆ ಪ್ರತಿದಿನ, ಸಮಾಧಿ ಮಾಡುವಾಗ ಮಣ್ಣನ್ನು ಹಾಕಿ ತಟ್ಟಿದ್ದರಿಂದ ಉಂಟಾದ ಸಂತಾಪವನ್ನು ಉಪಶಮನಗೊಳಿಸಲು ಕ್ಷೀರ ಮುಂತಾದವುಗಳಿಂದ ತರ್ಪಣವನ್ನು ಮಾಡಬೇಕು. (೧೦). ಇಷ್ಟಾದಿ ಲಿಂಗಗಳಿಗೆ ಮತ್ತು ಪಿತೃಗಳಿಗೆ ತರ್ಪಣ ಕೊಡಬೇಕು. ಪಿತೃವಿಗೆ ನಿತ್ಯವೂ ಮೂರು ಬೊಗಸೆ ನೀರನ್ನು ತರ್ಪಣವಾಗಿ ಕೊಡಬೇಕು. (೧೧).

ಟಿಪ್ಪಣಿ : ಮಕುಟಾಗಮ, ಚ.ಪಾ. ೫.೫-೬ರಲ್ಲಿ ಇದನ್ನೇ ಹೇಳಿದೆ. ಅಲ್ಲಿ ವಾಸೋದಕವನ್ನು ಪಿತೃವಿಗೆ ತರ್ಪಣವಾಗಿ ಕೊಡಬಾರದು ಎಂದು ಹೇಳಿದೆ. ವಾಸೋದಕವೆಂದರೆ ಬಟ್ಟೆಯನ್ನು ಹಿಂಡಿದಾಗ ಹೊರ ಹೊಮ್ಮುವ ನೀರು.

ನಗ್ನಪ್ರಚ್ಛಾದನಾರಾಧನಮ್

ಪ್ರವಿಶ್ಯ ದೀಪಸಹಿತಂ ಭವನಂ ಜ್ಞಾತಿಭಿಃ ಸಹ।
ನಗ್ನಪ್ರಚ್ಛಾದನಾಭಿಖ್ಯಂ ಕುರ್ಯಾದಾರಾಧನಂ ತತಃ ॥ ೧೨ ॥

ನಗ್ನಪ್ರಚ್ಛಾದನಾರಾಧನ

ಬಂಧುಗಳೊಂದಿಗೆ ದೀಪವನ್ನು ಹಿಡಿದುಕೊಂಡು ಮನೆಯನ್ನು ಪ್ರವೇಶ ಮಾಡಿ ನಗ್ನಪ್ರಚ್ಛಾದನವೆಂಬ ಆರಾಧನೆಯನ್ನು ಮಾಡಬೇಕು. (೧೨).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಮಕುಟಾಗಮ, ಚ.ಪಾ. ೫.೭ರಲ್ಲಿ ಇದನ್ನೇ ಹೇಳಿದೆ. ನಗ್ನಪ್ರಚ್ಛಾದನ ಆರಾಧನೆಯಲ್ಲಿ ಮೂರು ಪಾತ್ರೆಗಳನ್ನು ತೆಗೆದುಕೊಂಡು ಒಂದರಲ್ಲಿ ದವಸ-ಧಾನ್ಯಗಳನ್ನು, ಇನ್ನೊಂದರಲ್ಲಿ ತುಪ್ಪ, ಮತ್ತೊಂದರಲ್ಲಿ ಶಕ್ತ್ಯನುಸಾರ ಚಿನ್ನದ ಚೂರು, ಬೆಳ್ಳಿ ಮತ್ತಿತರ ಲೋಹಗಳ ನಾಣ್ಯಗಳನ್ನು ತುಂಬಬೇಕು. ದವಸ ಧಾನ್ಯದ ಪಾತ್ರೆ ಬಾಯಿಗೆ ಬಟ್ಟೆ ಕಟ್ಟಬೇಕು. ಎಲ್ಲಾ ಪಾತ್ರೆಗಳನ್ನು ಬಡವನಾದ ಬ್ರಾಹ್ಮಣನಿಗೆ ಕೊಡಬೇಕು.

ಸಮಾಧಿಸ್ಥಾಪಿತಲಿಂಗಸ್ಯ ರಕ್ಷಣಂ ಪೂಜನಂ ಚ

ಸಮಾಧಿಸ್ಥಾಪಿತಂ ಲಿಂಗಮಾದಶಾಹಂ ನ ಚಾಲಯೇತ್।
ಜಂತ್ವಾದಿಭಿಶ್ಚಾಲಿತೇಽಸ್ಮಿನ್ ಯಥಾಸ್ಥಾನಂ ನಿಧಾಯ ತತ್॥
ಪ್ರಾಣಾಯಾಮತ್ರಯಂ ಕೃತ್ವಾ ಸ್ಪೃಷ್ಟ್ವಾ ತದ್ ವ್ಯಾಹೃತೀರ್ಜಪೇತ್॥ ೧೩ ॥
ಸಮಾಧಿಸ್ಥಾಪಿತಂ ಲಿಂಗಮಾದಶಾಹಂ ಪ್ರಪೂಜಯೇತ್।
ದಶಾಹಪೂಜಾವಿಧಿನಾ ದಿವ್ಯರೂಪಂ ಪ್ರಜಾಯತೇ ॥ ೧೪ ॥

ಸಮಾಧಿಯಲ್ಲಿ ಸ್ಥಾಪಿಸಿದ ಲಿಂಗದ ರಕ್ಷಣೆ ಮತ್ತು ಪೂಜೆ

ಸಮಾಧಿಯಲ್ಲಿ ಸ್ಥಾಪಿಸಿದ ಲಿಂಗವನ್ನು ಹತ್ತು ದಿನಗಳವರೆಗೆ ಅಲುಗಾಡಿಸ ಬಾರದು. ಪ್ರಾಣಿಗಳಿಂದ ಅದರ ಚಾಲನೆಯಾಗಿದ್ದರೆ ಅದೇ ಸ್ಥಾನದಲ್ಲಿ ಅದನ್ನು ಸ್ಥಾಪಿಸಿ ಮೂರು ಪ್ರಾಣಾಯಾಮಗಳನ್ನು (ಪೂರಕ, ಕುಂಭಕ ಮತ್ತು ರೇಚಕಗಳನ್ನು) ಮಾಡಿ, ಅದನ್ನು ಸ್ಪರ್ಶಿಸಿ, ವ್ಯಾಹೃತಿಗಳನ್ನು ಜಪಿಸಬೇಕು. (೧೩). ಆ ಸಮಾಧಿಯಲ್ಲಿ ಸ್ಥಾಪಿಸಿದ ಲಿಂಗವನ್ನು ಹತ್ತು ದಿನಗಳವರೆಗೆ ಪೂಜಿಸಬೇಕು. ಈ ಹತ್ತು ದಿನಗಳ ಪೂಜಾ ವಿಧಿಯಿಂದ (ಪಿತೃವಿಗೆ) ದಿವ್ಯ ರೂಪವುಂಟಾಗುತ್ತದೆ. (೧೪).

ಟಿಪ್ಪಣಿ : ವ್ಯಾಹೃತಯಃ- ಓಂ ಭೂಃ, ಓಂ ಭುವಃ, ಓಂ ಸ್ವಃ, ಓಂ ಮಹಃ, ಓಂ ಜನಃ, ಓಂ ತಪಃ, ಓಂ ಸತ್ಯಮ್. ಮಕುಟಾಗಮ, ಚ.ಪಾ. ೫. ೮-೯ರಲ್ಲಿ ಇದೇ ವಿಷಯ; ಮುಂದೆ ಹೇಗೆ ಹತ್ತು ದಿನಗಳಲ್ಲಿ ದಿವ್ಯರೂಪ ಬರುತ್ತದೆ ಎಂಬುದರ ವರ್ಣನೆ ಬಂದಿದೆ (೫.೧೦-೧೩ ರಲ್ಲಿ ನೋಡಿರಿ). ಮೊದಲನೆಯ ದಿನ ತಲೆ; ಎರಡನೆಯ ದಿನ ಮೂಗು, ಕಿವಿ ಮತ್ತು ಕಣ್ಣುಗಳು; ಮೂರನೆಯ ದಿನ ಕುತ್ತಿಗೆ, ವಕ್ಷಸ್ಥಲ, ಭುಜಗಳು; ನಾಲ್ಕನೆಯ ದಿನ ನಾಭಿ, ಲಿಂಗ, ಗುದಸ್ಥಾನ; ಐದನೆಯ ದಿನ ತೊಡೆಗಳು; ಆರನೆಯ ದಿನ ಚರ್ಮ; ಏಳನೆಯ ದಿನ ಎಲ್ಲಾ ನರಗಳು; ಎಂಟನೆಯ ದಿನ ರೋಮಗಳು; ಒಂಬತ್ತನೆಯ ದಿನ ವೀರ್ಯ, ಹತ್ತನೆಯ ದಿನ ಸರ್ವತೃಪ್ತಿ-ಹೀಗೆ ದಿವ್ಯ ದೇಹದ ರಚನೆ.

ಆರಾಧನವಿಧಿನಿರೂಪಣಮ್

ಆರಾಧನಂ ತತಃ ಕಾರ್ಯಂ ದಿವ್ಯರೂಪವತಃ ಪಿತುಃ।
ಏಕೋದ್ದಿಷ್ಟವಿಧಾನೇನ ರುದ್ರತ್ವಂ ಭವತಿ ಧ್ರುವಮ್॥
ತತ್ತ್ವಸಂಯೋಜನೇನೈವ ಮಹೇಶತ್ವಂ ಪುನರ್ಭವೇತ್ ॥ ೧೫ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಥಮೇಽಹ್ನಿ ತೃತೀಯೇ ಚ ಪಂಚಮೇ ಸಪ್ತಮೇ ತಥಾ॥
ನವಮ್ಯೇಕಾದಶಾಹ್ನೋಶ್ಚ ನವಾರಾಧನಮಾಚರೇತ್ ॥ ೧೬ ॥

ಆರಾಧನ ವಿಧಿಯ ನಿರೂಪಣೆ

ಅನಂತರ ದಿವ್ಯ ರೂಪವನ್ನು ಧರಿಸಿದ ಪಿತೃವಿನ (ಮೃತವ್ಯಕ್ತಿಯ) ಆರಾಧನೆಯನ್ನು ಮಾಡಬೇಕು. ಇದನ್ನು ಏಕೋದ್ದಿಷ್ಟ ವಿಧಾನದಿಂದ ಮಾಡಿದರೆ ಅವನಿಗೆ ನಿಶ್ಚಿತ ವಾಗಿಯೂ ರುದ್ರತ್ವವು ದೊರೆಯುತ್ತದೆ. ತತ್ತ್ವ ಸಂಯೋಜನ ವಿಧಿಯಿಂದ ಮತ್ತೆ ಮಹೇಶತ್ವವು ಪ್ರಾಪ್ತವಾಗುತ್ತದೆ. (೧೫). ಮೊದಲನೆಯ, ಮೂರನೆಯ, ಐದನೆಯ, ಏಳನೆಯ, ಒಂಬತ್ತನೆಯ ಮತ್ತು ಹನ್ನೊಂದನೆಯ ದಿನಗಳಂದು ನವಾರಾಧನೆಯನ್ನು ಮಾಡಬೇಕು. (೧೬).

ಟಿಪ್ಪಣಿ : ಮಕುಟಾಗಮ, ಚ.ಪಾ. ೫.೧೪-೧೫ರಲ್ಲಿ ಇದೇ ವಿಷಯ ಬಂದಿದೆ. ಏಕೋದ್ದಿಷ್ಟವಿಧಾನ- ಒಬ್ಬನೇ ಮೃತವ್ಯಕ್ತಿಯನ್ನು ಉದ್ದೇಶಿಸಿದುದು ಏಕೋದ್ದಿಷ್ಟ. ಅದರಲ್ಲಿ ಒಬ್ಬನೇ ಮೃತವ್ಯಕ್ತಿಯ ಆವಾಹನೆಯಿರುತ್ತದೆ. ಒಬ್ಬನೇ ವ್ಯಕ್ತಿಯ ಕಲ್ಯಾಣವು ನಿರ್ದಿಷ್ಟವಾಗುತ್ತದೆ. ಇದರ ಲಕ್ಷಣವನ್ನು ಮುಂದೆ ೨೮ನೇ ಶ್ಲೋಕದಲ್ಲಿ, ಮಕುಟಾಗಮ, ಚ.ಪಾ. ೬.೭ರಲ್ಲಿ ನೋಡಿರಿ. ತತ್ತ್ವಸಂಯೋಜನೆಯ ಪ್ರಕ್ರಿಯೆಯ ವಿವರಕ್ಕೆ ಲಿಂಗಧಾರಣ ಚಂದ್ರಿಕೆ, ಪು.೨೭೧-೭೭ನ್ನು ನೋಡಿರಿ. ಹಿಂದೆ ಚ.ಪಾ. ೨.೭-೧೧ರ ಕೆಳಗಿನ ಟಿಪ್ಪಣಿಯಲ್ಲೂ ಇದರ ಉಲ್ಲೇಖವಿದೆ. ಮುಂದೆ ೩೮-೪೪ರಲ್ಲಿ ಮತ್ತು ಮಕುಟಾಗಮ, ಚ.ಪಾ. ೭.೮-೧೨ರಲ್ಲಿ ಇದೇ ವಿಷಯ ಬಂದಿದೆ. ನವಾರಾಧನ- ಧರ್ಮಶಾಸ್ತ್ರಗಳಲ್ಲಿ ನವಶ್ರಾದ್ಧದ ಸ್ವರೂಪದಲ್ಲಿ ಇದರ ವರ್ಣನೆಯಿದೆ. ಶ್ರಾದ್ಧಕ್ಕೆ ಬದಲಾಗಿ ಇಲ್ಲಿ ಆರಾಧನೆಯನ್ನು ಹೇಳಲಾಗಿದೆ.

ದಶಮದಿನಕೃತ್ಯಮ್

ಆಸಪ್ತಮಾ ಜ್ಞಾತಯಶ್ಚ ಕರ್ತಾಚ ದಶಮೇಽಹನಿ।
ವಾಪಯಿತ್ವಾ ಚ ಸ್ನಾತ್ವಾ ಚ ತೇ ಕುರ್ಯುಃ ಕ್ಷೀರತರ್ಪಣಮ್॥
ದದ್ಯಾದೇವ ಯಥಾಶಕ್ತಿ ದಶದಾನಾನಿ ಸಂಯುತಃ ॥ ೧೭ ॥

ಹತ್ತನೆಯ ದಿನದ ಕರ್ತವ್ಯ

ಹತ್ತನೆಯ ದಿನ ಏಳನೆಯ ಪೀಳಿಗೆಯವರೆಗಿನ ಜ್ಞಾತಿ ಬಂದುಗಳು ಮತ್ತು ಕರ್ತೃವು ಮುಂಡನ ಮಾಡಿಸಿಕೊಂಡು ಸ್ನಾನ ಮಾಡಿ ಕ್ಷೀರತರ್ಪಣವನ್ನು ನೀಡಬೇಕು. ಅವರೊಂದಿಗೆ ಕರ್ತೃವು ಶಕ್ತಿಗೆ ಅನುಗುಣವಾಗಿ ಹತ್ತು ದಾನಗಳನ್ನು ನೀಡಬೇಕು. (೧೭).

ಟಿಪ್ಪಣಿ : ಮಕುಟಾಗಮ, ಚ.ಪಾ., ೫.೨೨-೨೩ರಲ್ಲಿ ಇದೇ ವಿಷಯ ಬಂದಿದೆ. ದಶದಾನಗಳಿಗೆ ಹಿಂದೆ ೮-೯ ಶ್ಲೋಕಗಳ ಕೆಳಗಿನ ಟಿಪ್ಪಣಿಯನ್ನು ನೋಡಿರಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸವೃಷಲಿಂಗೋದ್ವಾಸನಮ್

ಉದ್ವಾಸ್ಯ ಸವೃಷಂ ಲಿಂಗಂ ವಸನೇ ಚ ನಿಧಾಯ ತತ್।
ತೀರ್ಥಮಾನೀಯ ಪೃಥಿವೀಂ ಯಚ್ಛೇತಿ ಚ ಮನುಂ ಪಠನ್॥
ವಿಸೃಜೇತ್ತತ್ರ ಲಿಂಗಂ ಚ ದಿವ್ಯರೂಪಮನುಸ್ಮರನ್ ॥ ೧೮ ॥

ಸವೃಷಲಿಂಗದ ವಿಸರ್ಜನೆ

ವೃಷಭಗಳಿಂದ ಕೂಡಿದ ಲಿಂಗವನ್ನು ಸಡಲಿಸಿ ಬಟ್ಟೆಯಲ್ಲಿ ಇಟ್ಟುಕೊಂಡು, ಕೆರೆ ಮುಂತಾದ ತೀರ್ಥಸ್ಥಾನಕ್ಕೆ ತಂದು 'ಪೃಥಿವೀಂ ಯಚ್ಛ' ಎಂಬ ಮಂತ್ರವನ್ನು ಪಠಿಸುತ್ತಾ ಅಲ್ಲಿ ಅದರ ದಿವ್ಯಸ್ವರೂಪವನ್ನು ಸ್ಮರಿಸಿಕೊಳ್ಳುತ್ತಾ ವಿಸರ್ಜಿಸಬೇಕು. (೧೮).

ಟಿಪ್ಪಣಿ : ಮಕುಟಾಗಮ, ಚ.ಪಾ., ೫.೨೪ರಲ್ಲಿ ಇದೇ ವಿಷಯ ಬಂದಿದೆ.

ಗಾಣಪತ್ಯಹೋಮ ಆನಂದಹೋಮಶ್ಚ

ಏವಮುದ್ವಾಸ್ಯ ಚ ಸ್ನಾತ್ವಾ ತಿಲಾಮಲಕವಾರಿಭಿಃ।
ಗಾಣಪತ್ಯಾಭಿಧಂ ಹೋಮಂ ತಥೈವಾನಂದಸಂಜ್ಞಕಮ್॥
ಕುರ್ಯಾತ್ ಪಿತೃಗಣೈಃ ಸಾಕಮಾನಂದಸಮವಾಪ್ತಯೇ ॥ ೧೯ ॥

ಗಾಣಪತ್ಯಹೋಮ ಮತ್ತು ಆನಂದಹೋಮ

ಹೀಗೆ (ಸವೃಷಭಲಿಂಗವನ್ನು) ವಿಸರ್ಜಿಸಿ ಎಳ್ಳು ಮತ್ತು ನೆಲ್ಲಿಕಾಯಿ ಹಾಕಿದ ನೀರಿನಿಂದ ಸ್ನಾನ ಮಾಡಿ ಗಾಣಪತ್ಯ ಹೋಮವನ್ನು ಮತ್ತು ಆನಂದವೆಂಬ ಹೆಸರಿನ ಹೋಮವನ್ನು ಪಿತೃಗಣಗಳೊಂದಿಗೆ ಆನಂದವನ್ನು ಪಡೆಯುವುದಕ್ಕೋಸ್ಕರ ಮಾಡಬೇಕು. (೧೯).

ಟಿಪ್ಪಣಿ : ಮಕುಟಾಗಮ, ಚ.ಪಾ., ೫.೨೫-೨೬ರಲ್ಲಿ ಇದೇ ವಿಷಯ ಬಂದಿದೆ.

ಏಕಾದಶೇಽಹನಿ ವೃಷೋತ್ಸರ್ಜನಮ್

ಏಕಾದಶೇಽಹನಿ ಸ್ನಾತ್ವಾ ವಿಪ್ರಾನ್ ವಿಜ್ಞಾನ್ನಿಮಂತ್ರ್ಯ ಚ।
ರುದ್ರಹೋಮಂ ವಿಧಾಯಾಥ ವೃಷೋತ್ಸರ್ಜನಮಾಚರೇತ್ ॥ ೨೦ ॥
ಉತ್ಸೃಜೇದ್ ವೃಷಭಂ ಶ್ವೇತಂ ರೋಹಿತಂ ನೀಲಮೇವ ವಾ।
ತೃಪ್ತ್ಯೈ ವೈ ನಂದಿಕೇಶಸ್ಯ ಶಿವಸಾನ್ನಿಧ್ಯಸಿದ್ಧಯೇ ॥ ೨೧ ॥

ಹನ್ನೊಂದನೆಯ ದಿನ ಹೋರಿಬಿಡುವುದು

ಹನ್ನೊಂದನೆಯ ದಿನ ಸ್ನಾನ ಮಾಡಿ ವಿದ್ವಾಂಸರಾದ ಬ್ರಾಹ್ಮಣರನ್ನು ಆಮಂತ್ರಿಸಿ, ರುದ್ರಹೋಮವನ್ನು ಮಾಡಿ ಅನಂತರ ವೃಷೋತ್ಸರ್ಜನ (ಹೋರಿಬಿಡುವ) ಕರ್ಮವನ್ನು ಆಚರಿಸಬೇಕು. (೨೦). ನಂದಿಕೇಶ್ವರನ ತೃಪ್ತಿಯ ಮೂಲಕ ಶಿವಸಾನ್ನಿಧ್ಯವನ್ನು ಹೊಂದಲು ಬಿಳಿಯ, ಕೆಂಪು ಅಥವಾ ನೀಲಿ ಹೋರಿಯನ್ನು ಬಿಡಬೇಕು. (೨೧).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಮಕುಟಾಗಮ, ಚ.ಪಾ., ೬.೨-೩ನ್ನೂ ನೋಡಿರಿ. ವೃಷೋತ್ಸರ್ಗ-ವೆಂದರೆ ಹೋರಿಯನ್ನು ಸ್ವತಂತ್ರವಾಗಿ ಬಿಡುವುದು. ಈ ಕ್ರಿಯೆಯು ಶಿವಮೇಧದ ಅಂಗವಾಗಿ ಬರಬಹುದು ಅಥವಾ ಬೇರೆ ಯಾವುದೇ ಧಾರ್ಮಿಕ ಕಾರ್ಯಾಚರಣೆಯ ಅಂಗವಾಗಿ ಯಾವುದಾದರೂ ದೇವರಿಗೆ ಅರ್ಪಿಸಿಬಿಡಬಹುದು. ಅದನ್ನು ದಾನವಾಗಿಯೂ ಕೊಡಬಹುದು. ದಾನ ತೆಗೆದುಕೊಂಡವನು ಅದನ್ನು ಕಟ್ಟಿ ಹಾಕುವಂತಿಲ್ಲ. ಈ ಹಿನ್ನೆಲೆಯಲ್ಲಿ ನಿರಾಭಾರಿಗೆ 'ವೃಷೋತ್ಸರ್ಗ' ಮಾಡಬಾರದು ಎಂದು ಹೇಳಿದ ಮಕುಟಾಗಮದ ಮಾತನ್ನು (ಚ.ಪಾ., ೬.೩) ಅರ್ಥಮಾಡಿಕೊಳ್ಳಬೇಕು.

ಷೋಡಶಾರಾಧನಕ್ರಮಃ

ಆದ್ಯಮಾಸಿಕಮುಖ್ಯಾನಿ ಷೋಡಶಾರಾಧನಾನಿ ಚ।
ರುದ್ರಗಣಾರಾಧನಂ ಚ ವೃಷೋತ್ಸರ್ಗಾಭಿದಂ ತಥಾ ॥ ೨೨ ॥

ಆಚಾರಾದಿಕಷಡ್‌ಲಿಂಗಸ್ಥಲಷಟ್ಕಸಮಾಶ್ರಯಮ್।
ಅನುತ್ತರಂ ಚ ಪಂಚಾಶದ್ ರುದ್ರಾರಾಧನಮಾಚರೇತ್ ॥ ೨೩ ॥

ಆದ್ಯಮೇಕಾದಶೇಽಹ್ನಿ ಸ್ಯಾದೂನೇ ಮಾಸ್ಯೂನಮಾಸಿಕಮ್।
ತ್ರೈಪಕ್ಷಿತಂ ತ್ರಿಪಕ್ಷೇ ಸ್ಯಾದೂನಷಾಣ್ಮಾಸಿಕಂ ತಥಾ ॥ ೨೪ ॥

ಮಾಸಿಷಷ್ಠೇ ಕಿಂಚಿದೂನೇ ಕರ್ತವ್ಯಂ ಸಂಪ್ರಕೀರ್ತಿತಮ್।
ಪ್ರತಿಮಾಸಂ ಮೃತಾಹಸ್ಸು ಊನಾಬ್ದಂ ಚೇತಿ ಷೋಡಶ ॥ ೨೫ ॥

ಆಷೋಡಶಾನ್ನ ವೈ ತಸ್ಯ ಜೀವಭಾವೋ ನಿವರ್ತತೇ।
ಷೋಡಶಾರಾಧನಂ ಕಾರ್ಯಮೇಕೋದ್ದಿಷ್ಟವಿಧಾನತಃ ॥ ೨೬ ॥

ಹದಿನಾರು ಆರಾಧನೆಗಳ ಕ್ರಮ

ಅನಂತರ ಆದ್ಯಮಾಸಿಕ ಮುಂತಾದ ಹದಿನಾರು ಆರಾಧನೆಗಳು, ರುದ್ರಗಣದ ಆರಾಧನೆ ಮತ್ತು ವೃಷೋತ್ಸರ್ಗ ಇವುಗಳನ್ನು ಮಾಡಬೇಕು. (೨೨). ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮ (ಚರ) ಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗಗಳೆಂದು ಆರು ಲಿಂಗಗಳುಳ್ಳ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಆರು ಸ್ಥಲಗಳನ್ನು ಆಶ್ರಯಿಸಿದ ಶ್ರೇಷ್ಠ ಐವತ್ತು ರುದ್ರರನ್ನೊಳಗೊಂಡ ಗಣಾರಾಧನೆಯನ್ನು ಮಾಡಬೇಕು. (೨೩). ಮೊದಲನೆಯ ಆರಾಧನೆ ಹನ್ನೊಂದನೆಯ ದಿನ (ಏಕಾದಶಾಹ), ಮಾಸದ ಸಮಾಪ್ತಿಯಾಗುವುದರೊಳಗೆ ಊನಮಾಸಿಕ, ಮೂರು ಪಕ್ಷಗಳಾದಾಗ ತ್ರೈಪಕ್ಷಿಕ, ಆರನೇ ಮಾಸದೊಳಗೆ ಊನಷಾಣ್ಮಾಸಿಕ, ಪ್ರತ್ಯೇಕ ಮಾಸದಲ್ಲಿ ಮೃತ್ಯುವಿನ ದಿನ (೧೧) ಮತ್ತು ವರ್ಷಾಂತ್ಯವಾಗುವುದರೊಳಗೆ ಊನಾಬ್ದವೆಂದು ಹದಿನಾರು ಆರಾಧನೆಗಳು. (೨೪-೨೫). ಈ ಹದಿನಾರು ಆರಾಧನೆಗಳನ್ನು ಪೂರೈಸುವವರೆಗೆ ಮೃತನ ಜೀವಭಾವವು ನಿವೃತ್ತವಾಗುವುದಿಲ್ಲ. ಈ ಷೋಡಶ ಆರಾಧನೆಗಳನ್ನು ಏಕೋದ್ದಿಷ್ಟ ವಿಧಾನದಂತೆ ಮಾಡಬೇಕು. (೨೬).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟಿಪ್ಪಣಿ : ಮಕುಟಾಗಮ, ಚ.ಪಾ., ೬.೪-ಅನ್ನೂ ನೋಡಿರಿ. ಇದೇ ವಿಷಯ ಪಂಚಾಶತ್ ರುದ್ರಾರಾಧನಮ್ - ಐವತ್ತು ರುದ್ರರ ಹೆಸರುಗಳನ್ನು ಮಕುಟಾಗಮವು (ಚ.ಪಾ., ೧೪-೨೦) ಕೊಟ್ಟಿದೆ - ಚಂಡೇಶ, ಬಕೇಶ, ಶ್ವೇತ, ಭೃಂಗೀಶ್ವರ, ಭಗಲಂಡೇಶ, ದ್ವಿರಂಡೇಶ, ಮಹಾಕಾಲೀಶ್ವರ, ಭುಜಂಗೇಶ, ಪಿನಾಕೀಶ, ದಾರುಕೇಶ, ಅರ್ಧನಾರೀಶ, ಉಮಾಕಾಂತ, ಆಷಾಢೀಶ, ದಂಡೀಶ, ಅತ್ರೀಶ, ಮಿತ್ರೇಶ, ಮೇಷೇಶ, ಲೋಹಿತೇಶ್ವರ, ಶಿಖೀಶ್ವರ, ಕ್ರೋಧೇಶ, ಚಂಡ, ಪಂಚಾಂತಕೇಶ್ವರ, ಶಿವೋತ್ತಮ, ಏಕರುದ್ರೇಶ, ಕೂರ್ಮೇಶ, ಏಕನೇತ್ರ, ಚತುರಾನನೇಶ್ವರ, ಅಜೇಶ, ಶರ್ವ, ಸೋಮೇಶ್ವರ, ಲಾಂಗಲೀಶ, ಸಂವರ್ತಕೇಶ, ಶ್ರೀಕಂಠ, ಅನಂತೇಶ, ಸೂಕ್ಷ್ಮೇಶ, ತ್ರಿಮೂರ್ತೀಶ, ಅಮರೇಶ, ಅರ್ಘೇಶ, ಭಾರಭೂತೇಶ್ವರ, ಅತಿಥೀಶ, ಸ್ಥಾಣ್ವೀಶ, ಹರ, ಝಿಂಟೀಶ್ವರ, ಭೌತಿಕೇಶ, ಸದ್ಯೋಜಾತೇಶ, ಅನುಗ್ರಹೇಶ್ವರ, ಅಕ್ರೂರೇಶ, ಮಹಾಸೇನ, ಲಕುಲೀಶ ಮತ್ತು ಶಿವೇಶ್ವರ. ಪ್ರಪಂಚಸಾರದಲ್ಲಿ (೩.೩೯-೪೪) ಶ್ರೀಕಂಠನಿಂದ ಹಿಡಿದು ಸಂವರ್ತಕ ಪರ್ಯಂತ ೫೦ ರುದ್ರರ ಹೆಸರುಗಳಿವೆ. ಮೇಲೆ ಕೊಟ್ಟಿರುವ ಪಟ್ಟಿಗೂ ಈ ಪಟ್ಟಿಗೂ ಬಹುಮಟ್ಟಿಗೆ ಸಾಮ್ಯವಿದೆ. ಆಚಾರಾದಿ ಲಿಂಗಗಳ ಸಂಬಂಧವುಳ್ಳ ಭಕ್ತಾದಿ ಷಟ್‌ಸ್ಥಲಗಳಿಗೆ ಸಂಬಂಧಿಸಿದ ಐವತ್ತು ರುದ್ರರು ಎಂದು ಮೇಲೆ ೨೩ನೇ ಶ್ಲೋಕದಲ್ಲಿ ಮತ್ತು ಮುಂದೆ ೩೨ನೇ ಶ್ಲೋಕದಲ್ಲಿ ಹೇಳಿರುವುದಕ್ಕೆ ವಿವರಣೆಯು ಮುಂದಿನ ೩೩ನೇ ಶ್ಲೋಕದಲ್ಲಿ ಮತ್ತು ಮಕುಟಾಗಮ, ಚ.ಪಾ., ೬.೧೩ರಲ್ಲಿ ದೊರೆಯುತ್ತದೆ- "ಚತ್ವಾರಃ ಷಡ್‌ದಶ ತಥಾ ರುದ್ರಾ ದ್ವಾದಶ ಷೋಡಶ। ದ್ವಾವಿತ್ಯಾಚಾರಲಿಂಗಾದಿ ಸ್ಥಲಷಟ್ಕಸಮಾಶ್ರಯಾಃ॥" ಆಚಾರಲಿಂಗಕ್ಕೆ ನಾಲ್ಕು, ಗುರುಲಿಂಗಕ್ಕೆ ಆರು, ಶಿವಲಿಂಗಕ್ಕೆ ಹತ್ತು, ಜಂಗಮಲಿಂಗಕ್ಕೆ ಹನ್ನೆರಡು, ಪ್ರಸಾದ ಲಿಂಗಕ್ಕೆ ಹದಿನಾರು ಮತ್ತು ಮಹಾಲಿಂಗಕ್ಕೆ ಎರಡು -ಹೀಗೆ ಐವತ್ತು ರುದ್ರರು ಷಡ್‌ಲಿಂಗಗಳುಳ್ಳ ಷಟ್‌ಸ್ಥಲಗಳಿಗೆ ಸಂಬಂಧಿಸಿದ್ದಾರೆ.

ತತ್ತ್ವಸಂಯೋಜನಮ್

ಅಕೃತ್ವಾ ಷೋಡಶವಿಧಿಂ ನ ಕಾರ್ಯಂ ತತ್ತ್ವಯೋಜನಮ್।
ದ್ವಾದಶೇಽಹ್ನಿ ಪಿತುಸ್ತತ್ತ್ವಸಂಯೋಜನಚಿಕೀರ್ಷಣಾ॥
ಅವಶ್ಯಂ ಹಿ ವಿಧೇಯಾನಿ ಷೋಡಶಾರಾಧನಾನ್ಯಪಿ ॥ ೨೭ ॥

ಏಕೋದ್ದಿಷ್ಟವಿಧಾನೇನ ತತ್ತ್ವಸಂಯೋಜನಸಿದ್ಧಯೇ।
ಕ್ರಿಯತೇ ಯದೇಕಮುದ್ದಿಶ್ಯ ಚೈಕೋದ್ದಿಷ್ಟಂ ಪ್ರಕೀರ್ತಿತಮ್ ॥ ೨೮ ॥

ವಿಶ್ವೇದೇವಾವಾಹನಂ ಚ ನಾಭಿಶ್ರವಣಕೀರ್ತನಮ್।
ಪ್ರದಕ್ಷಿಣವಿಸರ್ಗೌ ವಾ ಸೀಮಾಂತಗಮನಂ ನಹಿ ॥ ೨೯ ॥

ತತ್ತ್ವಸಂಯೋಜನ

ಷೋಡಶಾರಾಧನ ವಿಧಿಗಳನ್ನು ಮಾಡದೆ ತತ್ತ್ವಯೋಜನವನ್ನು ಮಾಡಬಾರದು. ಹನ್ನೆರಡನೆಯ ದಿನ ಪಿತೃವಿನ ತತ್ತ್ವ ಸಂಯೋಜನೆಯನ್ನು ಮಾಡುವ ಇಚ್ಛೆಯುಳ್ಳವನಾದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರ್ತೃವಿನಿಂದ (ಅದಕ್ಕೂ ಪೂರ್ವದಲ್ಲಿ) ಹದಿನಾರು ಆರಾಧನೆಗಳೂ ಅವಶ್ಯವಾಗಿ ಮಾಡಲ್ಪಡಬೇಕು. (೨೭). ತತ್ತ್ವಸಂಯೋಜನೆಯ ಸಿದ್ಧಿಗೋಸ್ಕರ ಏಕೋದ್ದಿಷ್ಟ ವಿಧಾನದಂತೆ ಏಕವ್ಯಕ್ತಿಯನ್ನು ಉದ್ದೇಶಿಸಿ ಅನುಷ್ಠಾನ ಮಾಡುವುದಕ್ಕೆ ಏಕೋದ್ದಿಷ್ಟ ವೆಂದು ಕರೆಯಲಾಗುತ್ತದೆ. (೨೮). ಇಲ್ಲಿ ವಿಶ್ವೇದೇವರುಗಳ ಆವಾಹನೆಯಿಲ್ಲ, ಅಭಿಶ್ರವಣ ಮತ್ತು ಕೀರ್ತನೆಯಿಲ್ಲ. ಹಾಗೆಯೇ ಪ್ರದಕ್ಷಿಣೆ, ವಿಸರ್ಜನೆ ಅಥವಾ ಸೀಮಾಂತಗಮನ ಮುಂತಾದ ಕಾರ್ಯಗಳೂ ಇಲ್ಲ. (೨೯).

ಟಿಪ್ಪಣಿ : ಷೋಡಶ ಆರಾಧನೆಗಳನ್ನು ಮಾಡದೆ ತತ್ತ್ವಸಂಯೋಜನೆಯನ್ನು ಮಾಡಬಾರದಾದ್ದರಿಂದ ಮತ್ತು ಹನ್ನೆರಡನೇ ದಿನ ಪಿತೃವಿನ ತತ್ತ್ವಸಂಯೋಜನೆಯನ್ನು ಮಾಡಬೇಕಾಗಿರುವುದರಿಂದ, ಅದಕ್ಕೂ ಮೊದಲೇ ಅಂದರೆ ಹನ್ನೊಂದನೆಯ ದಿನವೇ ಏಕಾದಶಾಹವೆಂಬ ಆರಾಧನೆಯ ಜೊತೆಗೆ ಏಕೋದ್ದಿಷ್ಟ ವಿಧಾನದಿಂದ ಸಾಂಕೇತಿಕವಾಗಿ ವಿಶ್ವೇದೇವಾಹನಾದಿಗಳಿಲ್ಲದೆ, ಪ್ರದಕ್ಷಿಣಾದಿಗಳಿಲ್ಲದೆ ಹದಿನಾರೂ ಆರಾಧನೆಗಳನ್ನು ಆಚರಿಸಬೇಕು, ಮುಂದೆ ಈಗಾಗಲೇ ಹೇಳಿದ ರೀತಿ ತ್ರೈಪಕ್ಷಿಕ ಮುಂತಾದ ೧೫ ಆರಾಧನೆಗಳನ್ನು ಆಯಾಯ ಕಾಲದಲ್ಲಿ ಮಾಡಬಹುದು ಎಂಬ ಅಭಿಪ್ರಾಯವಿಲ್ಲಿ ಅಡಗಿದೆ. "ಏಕಾದಶೇಽಹ್ನಿ ವೈ ಕುರ್ಯಾತ್ ಷೋಡಶಾರಾಧನಾನ್ಯಪಿ। ದ್ವಾದಶಾಹೇ ತದಾ ಕುರ್ಯಾತ್ ತತ್ತ್ವಸಂಯೋಜನಂ ಸುತಃ" ಎಂದು ಹೇಳಿ, ಮಕುಟಾಗಮ, ಚ.ಪಾ., ೬.೭ರಲ್ಲಿ ಹೇಳಿ, ಏಕೋದ್ದಿಷ್ಟವಿಧಾನ (೬.೮) ಮತ್ತು ವಿಶ್ವೇದೇವರ ಅವಾಹನಾದಿಗಳಿಲ್ಲದಿರುವುದನ್ನು (೬.೯)ರಲ್ಲಿ ತಿಳಿಸಿ ಇದನ್ನೇ ಸಮರ್ಥಿಸುತ್ತದೆ. ವಿಶ್ವೇದೇವರುಗಳೆಂದರೆ- "ಋತುರ್ದಕ್ಷೋ ವಸುಃ ಸತ್ಯಃ ಕಾಲಃ ಕಾಮಸ್ತಥೈವ ಚ। ಧುರಿಶ್ಚಾರೋಚನಶ್ಚೈವ ತಥಾ ಚೈವ ಪುರೂರವಾಃ। ಆರ್ದ್ರವಶ್ಚ ದಶೈತೇ ತು ವಿಶ್ವೇದೇವಾಃ ಪ್ರಕೀರ್ತಿತಾಃ॥" (ಋತು, ದಕ್ಷ, ವಸು, ಸತ್ಯ, ಕಾಲ, ಕಾಮ, ಧುರಿ, ಆರೋಚನ, ಪುರೂರವಸ್ ಮತ್ತು ಆರ್ದ್ರವ -ಇವರು ಹತ್ತು ವಿಶ್ವೇದೇವರುಗಳು). ವಿಶ್ವೇದೇವರುಗಳ ಆವಾಹನ, ಅಭಿಶ್ರವಣ, ಕೀರ್ತನ, ಪ್ರದಕ್ಷಿಣ, ವಿಸರ್ಜನಗಳಿಲ್ಲ ಎಂದು ಹೇಳುವ ಮೂಲಕ ವೀರಶೈವರಲ್ಲಿ ಈ ರೀತಿ ಅನೇಕ ವಿಧಾನಗಳನ್ನು ಬಿಡಲಾಗಿದೆ ಎಂದು ಸೂಚಿಸಲಾಗಿದೆ.

ರುದ್ರಾರಾಧನಮ್

ಏಕಾದಶೇಽಹ್ನಿ ಮಾಹೇಶಾನ್ ರುದ್ರರೂಪತಯಾಽರ್ಚಯೇತ್।
ಯಥಾಸಂಭವಮೇತದ್ಧಿ ರುದ್ರಾರಾಧನಮುಚ್ಯತೇ ॥ ೩೦ ॥

ವೃಷೋತ್ಸರ್ಗಫಲಾವಾಪ್ತ್ಯೈ ವಿಪ್ರಮೇಕಂ ಸಮರ್ಚಯೇತ್।
ವೃಷೋತ್ಸರ್ಗಾಖ್ಯಮಾರಾಧನಮಿತೀದಂ ಸಂಪ್ರಚೋದಿತಮ್ ॥ ೩೧ ॥

ಆಚಾರಾದಿಕಷಡ್ಲಿಂಗಸ್ಥಲಷಟ್ಕಸಮಾಶ್ರಯಮ್।
ಖಡ್ಗೇಶಾದಿಕಪಂಚಾಶದ್ ರುದ್ರಾರಾಧನಮಾಚರೇತ್ ॥ ೩೨ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚತ್ವಾರಃ ಷಡ್ ದಶ ತಥಾ ರುದ್ರಾ ದ್ವಾದಶ ಷೋಡಶ।
ದ್ವಾವಿತ್ಯಾಚಾರಲಿಂಗಾದಿಸ್ಥಲಷಟ್ಕಸಮಾಶ್ರಯಾಃ ॥ ೩೩ ॥
ಆಧಾರಾದಿಕಷಟ್‌ಚಕ್ರವರ್ತಿಷಡ್‌ಲಿಂಗಸಂಶ್ರಯಾಃ।
ಚತುರಾದಿಕಸಂಖ್ಯಾದ್ಯಾಸ್ತತ್ತಚ್ಚಕ್ರದಲಾಶ್ರಿತಾಃ ॥ ೩೪ ॥
ಷಟ್‌ಸ್ಥಲೇಷೂಪಾಸ್ಯಮಾನಾ ವರ್ಣರೂಪತಯಾ ಸ್ಥಿತಾಃ।
ಅರ್ಚನೀಯಾ ಹಿ ಪಂಚಾಶದ್ ರುದ್ರಾಃ ಷಟ್‌ಲಿಂಗತೃಪ್ತಯೇ ॥ ೩೫ ॥
ಪುರುಷಸ್ಯ ಚತುರ್ಥಸ್ಯ ನಿವೃತ್ತ್ಯರ್ಥಂ ಪ್ರಯತ್ನತಃ॥
ತತ್ತ್ವಾದಿಯೋಜನೇನೈವ ಚತುರ್ಥೋ ಹಿ ನಿವರ್ತತೇ ॥ ೩೬ ॥

ರುದ್ರಾರಾಧನೆ

ಹನ್ನೊಂದನೆಯ ದಿನ ಮಾಹೇಶ್ವರರನ್ನು (ಜಂಗಮರನ್ನು) ರುದ್ರರ ರೂಪದಲ್ಲಿ ಪೂಜಿಸಬೇಕು. ಯಥಾಶಕ್ತಿ ನಡೆಸುವ ಈ ಪೂಜೆಗೆ ರುದ್ರಾರಾಧನೆಯೆಂದು ಕರೆಯಲಾಗಿದೆ. (೩೦). ವೃಷೋತ್ಸರ್ಗದ ಫಲವನ್ನು ಪಡೆಯಲು ಒಬ್ಬ ಲಿಂಗಿ ವಿಪ್ರನನ್ನು ಪೂಜಿಸಬೇಕು. ಇದಕ್ಕೆ ವೃಷೋತ್ಸರ್ಗ ಆರಾಧನೆಯೆಂದು ಕರೆಯಲಾಗಿದೆ. (೩೧). ಆಚಾರಲಿಂಗ ಮುಂತಾದ ಆರು ಲಿಂಗಗಳುಳ್ಳ ಆರು ಸ್ಥಲಗಳನ್ನು ಆಶ್ರಯಿಸಿದ ಖಡ್ಗೇಶನೇ ಮುಂತಾದ ಐವತ್ತು ರುದ್ರರ ಆರಾಧನೆಯನ್ನು ಆಚರಿಸಬೇಕು. (೩೨). ನಾಲ್ವರು, ಆರು, ಹತ್ತು, ಹನ್ನೆರಡು, ಹದಿನಾರು, ಇಬ್ಬರು ಹೀಗೆ ಕ್ರಮವಾಗಿ ಆಚಾರಾದಿಲಿಂಗವುಳ್ಳ ಭಕ್ತಾದಿ ಷಟ್‌ಸ್ಥಲಗಳಿಗೆ ಸಂಬಂಧಿಸಿದ ರುದ್ರರು. (೩೩). ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞಾ ಎಂಬ ಆರು ಚಕ್ರಗಳಲ್ಲಿರುವ ಆಚಾರಾದಿ ಆರು ಲಿಂಗಗಳಲ್ಲಿ ಮೇಲೆ ಹೇಳಿದ ನಾಲ್ವರು ಇತ್ಯಾದಿ ಸಂಖ್ಯೆಗಳಿಗೆ ಅನುಸಾರವಾಗಿ ನಾಲ್ಕು ಮುಂತಾದ ಸಂಖ್ಯೆಗಳ ಚಕ್ರದ ದಲಗಳನ್ನು ಆಶ್ರಯಿಸಿದ ರುದ್ರರು ಅವುಗಳ ವರ್ಣ ಮತ್ತು ರೂಪಕ್ಕೆ ಅನುಗುಣವಾಗಿ ಭಕ್ತಾದಿ ಷಟ್‌ಸ್ಥಲಗಳಲ್ಲಿ ಪೂಜೆಗೊಳ್ಳುತ್ತಾ ನೆಲೆಸಿರುವವರು. ಆರು ಲಿಂಗಗಳ ತೃಪ್ತಿಗೆ ಈ ಐವತ್ತು ರುದ್ರರನ್ನು ಪೂಜಿಸಬೇಕು. (೩೪-೩೫). ಹನ್ನೆರಡನೆಯ ದಿನ ನಾಲ್ಕನೆಯ ಪುರುಷನ (ನಾಲ್ಕನೆಯ ಭಾವದ) ನಿವೃತ್ತಿಗೋಸ್ಕರ ತಂದೆಯ ತತ್ತ್ವಸಂಯೋಜನೆಯನ್ನು ಮಾಡಬೇಕು. ತತ್ತ್ವ ಸಂಯೋಜನದ ಪ್ರಕ್ರಿಯೆಯಿಂದಲೇ ಚತುರ್ಥ ಭಾವವು ನಿವೃತ್ತವಾಗುವುದು. (೩೬).

ಟಿಪ್ಪಣಿ : ಖಡ್ಗೇಶಾದಿಕಪಂಚಾಶತ್-ಖಡ್ಗೇಶ ಮುಂತಾದ ಐವತ್ತು ರುದ್ರರ ಹೆಸರುಗಳಿಗೆ ಹಿಂದೆ ೨೨-೨೬ ಶ್ಲೋಕಗಳ ಕೆಳಗಿನ ಟಿಪ್ಪಣಿಯನ್ನು ನೋಡಿರಿ. ಆರು ಚಕ್ರಗಳಲ್ಲಿ ಆರುಲಿಂಗಗಳಿವೆ. ನಾಲ್ಕು ಮುಂತಾದ ಸಂಖ್ಯೆಯ ರುದ್ರರು ಆ ಚಕ್ರಗಳಲ್ಲಿನ ಅಷ್ಟೇ ಸಂಖ್ಯೆಯ ದಳಗಳಲ್ಲಿ ನೆಲೆಸಿದ್ದಾರೆ. ಅವರು ಷಟ್‌ಸ್ಥಲಗಳಲ್ಲಿ ಉಪಾಸಿಸ-ಲ್ಪಡುತ್ತಾರೆ. **ಚತುರ್ಥ ಪುರುಷ ನಿವೃತ್ತಿ-** ಸತ್ತವ್ಯಕ್ತಿಯ ಪ್ರೇತರೂಪದೊಂದಿಗೆ ಅದರ ಮೂರು ರೂಪಗಳಾದ ಪಿತೃ, ಪಿತಾಮಹ ಮತ್ತು ಪ್ರಪಿತಾಮಹರ ರೂಪಗಳಿರುತ್ತವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸತ್ತವ್ಯಕ್ತಿಯ ಪಿತೃ, ಪಿತಾಮಹ ಮತ್ತು ಪ್ರಪಿತಾಮಹರೆಂಬ ಮೂರು ರೂಪಗಳ ದೃಷ್ಟಿಯಿಂದ ಅವನ ಪ್ರೇತರೂಪವು ನಾಲ್ಕನೆಯ ರೂಪ (ಪುರುಷ). ಆ ಪ್ರೇತರೂಪವು ಪಿತೃ ಮುಂತಾದ ಮೂರು ರೂಪಗಳಲ್ಲಿ ಲಯ ಹೊಂದುವುದೇ ನಾಲ್ಕನೆಯ (ಚತುರ್ಥ) ಪುರುಷನ ನಿವೃತ್ತಿ. ಇದಕ್ಕೆ ತತ್ತ್ವಸಂಯೋಜನೆಯ ಪ್ರಕ್ರಿಯೆಯು ಆವಶ್ಯಕ. ಈ ಪ್ರಕ್ರಿಯೆಯಿಂದ ಪ್ರೇತದ ಮೂವತ್ತಾರು ತತ್ತ್ವಗಳು ಮತ್ತು ಮೂವತ್ತೆಂಟು ಕಲೆಗಳು ಪಿತೃ, ಪಿತಾಮಹ ಮತ್ತು ಪ್ರಪಿತಾಮಹರ ಮೂವತ್ತಾರು ತತ್ತ್ವಗಳು ಮತ್ತು ಮೂವತ್ತೆಂಟು ಕಲೆಗಳೊಂದಿಗೆ ಸಂಯೋಜಿತವಾದರೆ ಆಗ ನಾಲ್ಕನೇ (ಚತುರ್ಥ) ಭಾವವು (ಪ್ರೇತ ಪುರುಷ ಭಾವವು) ನಿವೃತ್ತವಾಗುತ್ತದೆ. ತತ್ತ್ವಸಂಯೋಜನೆಯ ವಿಷಯವು ಮುಂದೆ ಬರುತ್ತದೆ. ಇದನ್ನೇ ಮಕುಟಾಗಮ, ಚ.ಪಾ., ೭.೨೮ರಲ್ಲಿ ಹೇಳುತ್ತದೆ- "ಚತರ್ಥಸ್ಯ ನಿವೃತ್ತ್ಯರ್ಥಂ ಜೀವಭಾವನಿವೃತ್ತಿತಃ। ತತ್ತ್ವಾದಿಯೋಜನಾದೂರ್ಧ್ವಂ ಚತುರ್ಥೋಽಪಿ ನಿವರ್ತತೇ॥" (ಜೀವ ಭಾವ ನಿವೃತ್ತಿಯ ಮೂಲಕ ಮೃತವ್ಯಕ್ತಿಯ ಚತುರ್ಥ ಭಾವದ ನಿವೃತ್ತಿಗಾಗಿ ತತ್ತ್ವಸಂಯೋಜನ ವಿಧಿಯನ್ನು ಅನುಷ್ಠಾನಗೊಳಿಸಬೇಕು. ಇದರಿಂದ ಚತುರ್ಥ ಭಾವವು ನಿವೃತ್ತವಾಗುತ್ತದೆ).

ಲಿಂಗಾಂಗಸಂಗಿನಃ ಸಾಪಿಂಡ್ಯನಿಷೇಧಃ

ಲಿಂಗಾಂಗಸಂಗಿನಿ ಮೃತೇ ಸಾಪಿಂಡ್ಯಂ ನ ವಿಧೀಯತೇ।
ಶಿವಲಿಂಗಾಂಗಯೋಗೇನ ಶಿವಭಾವಯುಜಃ ಪಿತುಃ॥
ನ ಯೋಜ್ಯಮೇವ ಸಾಪಿಂಡ್ಯಂ ಪ್ರೇತಭಾವನಿವರ್ತಕಮ್ ॥ ೩೭ ॥

ಲಿಂಗಾಂಗಸಂಗಿಗೆ ಸಾಪಿಂಡ್ಯವಿಲ್ಲ

ಲಿಂಗಾಂಗಸಂಗಿಯಾದ ವೀರಶೈವನು ಮೃತನಾದಾಗ ಅವನ ಸಾಪಿಂಡ್ಯ ವಿಧಿಯನ್ನು ಮಾಡಲಾಗುವುದಿಲ್ಲ. ಶಿವನೊಂದಿಗೆ ಸಾಮರಸ್ಯವನ್ನು ಹೊಂದುವುದರಿಂದ ಶಿವಭಾವಯುಕ್ತನಾದ ಪಿತೃವಿಗೆ ಪ್ರೇತಭಾವವನ್ನು ನಿವೃತ್ತಿಗೊಳಿಸುವ ಸಾಪಿಂಡ್ಯಕರ್ಮದ ಅವಶ್ಯಕತೆಯಿಲ್ಲ. (೩೭).

ಟಿಪ್ಪಣಿ : ಕೀಟವು (ಭಯದಿಂದ) ದುಂಬಿಯನ್ನೇ ನಿರಂತರ ಸ್ಮರಿಸುತ್ತಾ ದುಂಬಿಯೇ ಆಗಿ ಪರಿಣಮಿಸುವಂತೆ (ದ್ವಿರೇಫ ಕೀಟ ನ್ಯಾಯದಂತೆ), ಜೀವನು (ಭಕ್ತಿಯಿಂದ) ಶಿವನನ್ನೇ ಸತತವಾಗಿ ಸ್ಮರಿಸುತ್ತಾ ಶಿವನೇ ಆಗಿ ಪರಿಣಮಿಸುವನು. ಇದಕ್ಕೆ ಗುರುವು ಅನುಗ್ರಹಿಸಿದ ಇಷ್ಟಲಿಂಗವನ್ನು ಅಂಗದಲ್ಲಿ ಧರಿಸಿರುವುದೇ ಕಾರಣ- "ಗುರುದೀಕ್ಷಾಪರಿಪ್ರಾಪ್ತಶಿವಲಿಂಗಾಂಗಯೋಗತಃ। ದ್ವಿರೇಫಕೀಟನ್ಯಾಯೇನ ಶಿವೈಕ್ಯಂ ಪ್ರಾಪ್ತವಾನ್ ದ್ವಿಜಃ॥" ಎಂಬ ಮಕುಟಾಗಮದ (ಚ.ಪಾ., ೭.೩) ಉಕ್ತಿಯಂತೆ ಲಿಂಗಾಂಗಿಯಾದ ಜೀವನು ಶಿವಭಾವವನ್ನು ಹೊಂದುತ್ತಾನೆ, ಪ್ರೇತಭಾವವನ್ನಲ್ಲ; ಆದ್ದರಿಂದ ಪ್ರೇತಭಾವ ನಿವರ್ತಕವಾದ ಸಾಪಿಂಡ್ಯ ಕರ್ಮವನ್ನು ವೀರಶೈವನ ವಿಷಯದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಬೇಕಾದ್ದಿಲ್ಲ. ಶ್ರಾದ್ಧಾದಿಗಳಿಗೆ ಬದಲಾಗಿ ತತ್ತ್ವಾದಿ ಸಂಯೋಜನ ವಿಧಿಯನ್ನು ವೀರಶೈವರಿಗೆ ಹೇಳಿದ್ದಾರೆ. ಅದನ್ನೇ ಮಕುಟಾಗಮ, ಚ.ಪಾ., ೭.೪ರಲ್ಲಿ ಹೇಳಲಾಗಿದೆ.

ತತ್ತ್ವಾದಿಯೋಜನವಿಧಿಃ

ಮಹೇಶ್ವರಾದ್ಯಭಿನ್ನೇಭ್ಯಃ ಪಿತೃಭ್ಯಸ್ತತ್ತ್ವಸಂಯುತಾಃ||
ಕಲಾ ಆವಾಹ್ಯ ಪಾತ್ರೇ ತು ಸಮಭ್ಯರ್ಚ್ಯ ಪಿತುಸ್ತದಾ||
ವರ್ಗತ್ರಯೈಕ್ಯಸಿದ್ಧ್ಯರ್ಥಂ ತತ್ತ್ವಾದೀನ್ ಯೋಜಯೇತ್ಸುತಃ || ೩೮ ||

ತತ್ತ್ವಸಂಯೋಗವಿಧಿನಾಽನುಷ್ಠಿತೇನ ಯಥಾವಿಧಿ।
ಮಹೇಶತತ್ತ್ವಾದಿಸಂಸಿದ್ಧಿಃ ಪಿತ್ರಾದೇಃ ಸ್ಯಾದಸಂಶಯಮ್ || ೩೯ ||

ಅಹನಿ ದ್ವಾದಶೇ ಕರ್ತಾ ನಿಮಂತ್ರ್ಯ ವಿದುಷೋ ದ್ವಿಜಾನ್।
ಗಣಾಭ್ಯನುಜ್ಞಾಂ ಸಂಗೃಹ್ಯ ಚೈವಂ ಸಂಕಲ್ಪಮಾಚರೇತ್ || ೪೦ ||

ಪಿತುಸ್ತದೀಯಪಿತ್ರಾದ್ಯೈಃ ಕರಿಷ್ಯನ್ ತತ್ತ್ವಯೋಜನಮ್।
ನಂದಿಕೇಶಮಹಾಕಾಲಸಂಜ್ಞಿನೋರ್ವಿಶ್ವದೇವಯೋಃ || ೪೧ ||

ಪಿತುಃ ಪಿತಾಮಹಾದೀನಾಂ ಮಹೇಶಾದಿಸ್ವರೂಪಿಣಾಮ್।
ಷಟ್‌ತ್ರಿಂಶತಾಂ ಚ ತತ್ತ್ವಾನಾಂ ಕಲಾನಾಮಷ್ಟತ್ರಿಂಶತಾಮ್||
ಆರಾಧನಂ ಕರಿಷ್ಯಾಮೀತ್ಯೇವಂ ಸಂಕಲ್ಪಮಾಚರೇತ್ || ೪೨ ||

ವಿಶ್ವೇದೇವೌ ಚ ಪಿತ್ರಾದೀನ್ ತತ್ತ್ವಾನಿ ಚ ಕಲಾಸ್ತದಾ।
ಆವಾಹ್ಯ ಚಾಭಿಸಂಪೂಜ್ಯ ಚಿಕೀರ್ಷುಸ್ತತ್ತ್ವಯೋಜನಮ್||
ಗವಾದಿ-ದಶದಾನಾನಿ ಕುರ್ಯಾತ್ ಸಂತೃಪ್ತಯೇ ಪಿತುಃ || ೪೩ ||

ತತ್ತ್ವಾನಾಂ ಚ ಕಲಾನಾಂ ಚ ಸಂಯೋಜನಮತಃ ಪರಮ್।
ಕೃತ್ವೋನಮಾಸಿಕಾದೀನಿ ಯಥಾಕಾಲಂ ಸಮಾಚರೇತ್ || ೪೪ ||

ಇತ್ಯೌರ್ಧ್ವದೇಶಿಕವಿಧಿಃ ಶಿವಾಶ್ರಮನಿಷೇವಿಣಾಮ್।
ಬೋಧಿತಸ್ತವ ವಾಗೀಶ ನಿಗಮಾಗಮಸಂಮತಃ || ೪೫ ||

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರಬೃಹಸ್ಪತಿ-ಸಂವಾದೇ ಶಿವಶಾಸನೇ ಚರ್ಯಾಪಾದೇ ಔರ್ಧ್ವದೇಹಿಕವಿಧಿಕಥನಮ್ ನಾಮ ಚತುರ್ಥಃ ಪಟಲಃ || ೪ ||

ತತ್ತ್ವಾದಿಗಳ ಯೋಜನೆಯ ವಿಧಾನ

ಮಹೇಶ್ವರಾದಿಗಳಿಗಿಂತ ಭಿನ್ನರಲ್ಲದ ಪಿತೃಗಳಿಗೆ ತತ್ತ್ವಗಳೊಂದಿಗೆ ಕಲೆಗಳನ್ನು ಪಿತೃಪಾತ್ರದಲ್ಲಿ ಆವಾಹನೆ ಮಾಡಿ ಅದನ್ನು ಪೂಜಿಸಿ ಪುತ್ರನು ತನ್ನ ಪಿತೃವಿನ ಪಿತೃ, ಪಿತಾಮಹ ಮತ್ತು ಪ್ರಪಿತಾಮಹ (ತಂದೆ, ಅಜ್ಜ ಮತ್ತು ಮುತ್ತಜ್ಜ) ಎಂಬ ಮೂವರ ಐಕ್ಯಸಿದ್ಧಿಗೋಸ್ಕರ ತತ್ತ್ವ ಮುಂತಾದವನ್ನು (ತತ್ತ್ವಗಳು ಮತ್ತು ಕಲೆಗಳನ್ನು) ಯೋಜನೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಬೇಕು. (೩೮). ತತ್ತ್ವಸಂಯೋಗವಿಧಿಯನ್ನು ಶಾಸ್ತ್ರೋಕ್ತ ವಿಧಾನದಂತೆ ಮಾಡಿದಾಗ ಪಿತೃ, ಪಿತಾಮಹ ಮತ್ತು ಪ್ರಪಿತಾಮಹರಿಗೆ ನಿಃಸಂಶಯವಾಗಿ ಮಹೇಶ್ವರತ್ವ, ಸದಾಶಿವತ್ವ ಮತ್ತು ಶಿವತ್ವಗಳು ಸಿದ್ಧಿಸುತ್ತವೆ. (೩೯). ಕರ್ತೃವಿನ (ಮೃತನ) ಪುತ್ರನು ಹನ್ನೆರಡನೆಯ ದಿನ ವಿದ್ವಾಂಸರಾದ ಲಿಂಗಿದ್ವಿಜರನ್ನು ಕರೆದು, ಗಣಂಗಳ ಆಜ್ಞೆಯನ್ನು ಪಡೆದು ಹೀಗೆ ಸಂಕಲ್ಪ ಮಾಡಬೇಕು. (೪೦). 'ನನ್ನ ತಂದೆಯ ತತ್ತ್ವಕಲೆಗಳನ್ನು ಅವನ ತಂದೆ, ಪಿತಾಮಹ ಮತ್ತು ಪ್ರಪಿತಾಮಹರ ತತ್ತ್ವಕಲೆಗಳೊಂದಿಗೆ ಸಂಯೋಜನೆ ಮಾಡುವವನಾಗಿ ನಂದಿಕೇಶ್ವರ ಮತ್ತು ಮಹಾಕಾಲರೆಂಬ ವಿಶ್ವದೇವರನ್ನು ಹಾಗೂ ಮಹೇಶ್ವರ, ಸದಾಶಿವ ಮತ್ತು ಶಿವ ಸ್ವರೂಪಿಗಳಾದ ನನ್ನ ಪಿತೃವಿನ ಪಿತೃ, ಪಿತಾಮಹ ಮತ್ತು ಪ್ರಪಿತಾಮಹರ ಮೂವತ್ತಾರು ತತ್ತ್ವಗಳನ್ನು ಮತ್ತು ಮೂವತ್ತೆಂಟು ಕಲೆಗಳನ್ನು ಆರಾಧಿಸುತ್ತೇನೆ' -ಹೀಗೆಂದು ಸಂಕಲ್ಪವನ್ನು ಮಾಡಬೇಕು. (೪೧-೪೨). ಆಗ ವಿಶ್ವೇದೇವರಿಬ್ಬರನ್ನು (ಮೇಲೆ ಹೇಳಿದ ನಂದಿ ಮತ್ತು ಮಹಾಕಾಲರನ್ನು), ಪಿತೃವಿನ ಪಿತೃ, ಪಿತಾಮಹ ಮತ್ತು ಪ್ರಪಿತಾಮಹರನ್ನು, ಅವರ ಮೂವತ್ತಾರು ತತ್ತ್ವಗಳನ್ನು ಹಾಗೂ ಮೂವತ್ತೆಂಟು ಕಲೆಗಳನ್ನು ಆವಾಹನೆ ಮಾಡಿ, ಪೂಜಿಸಿ, ತತ್ತ್ವಯೋಜನೆಯನ್ನು ಮಾಡುವ ಇಚ್ಛೆಯುಳ್ಳವನಾಗಿ ಪಿತೃವಿನ ತೃಪ್ತಿಗಾಗಿ ಗೋವು ಮುಂತಾದ ಹತ್ತು ದಾನಗಳನ್ನು ಮಾಡಬೇಕು. (೪೩). ಅನಂತರ ಹೇಳಿದ ಹಾಗೆ ತತ್ತ್ವಗಳನ್ನು ಮತ್ತು ಕಲೆಗಳನ್ನು ಸಂಯೋಜನೆ ಮಾಡಿ ಕಾಲಾನುಗುಣವಾಗಿ ಊನಮಾಸಿಕ ಮುಂತಾದ ಆರಾಧನೆಗಳನ್ನು ಆಚರಿಸಬೇಕು. (೪೪). ವಾಗೀಶ, ಹೀಗೆ ಶಿವಾಶ್ರಮ ನಿವಾಸಿಗಳಿಗೆ ವಿಹಿತವಾದ ಔರ್ಧ್ವದೇಹಿಕ ವಿಧಿಯನ್ನು ನಿಗಮ ಮತ್ತು ಆಗಮಗಳಿಗೆ ಸಮ್ಮತವಾದ ರೀತಿಯಲ್ಲಿ ನಿನಗೆ ಬೋಧಿಸಿದ್ದೇನೆ. (೪೫).

ಇಲ್ಲಿಗೆ ಶ್ರೀ ಚಂದ್ರಜ್ಞಾನಾಗಮದ ಉತ್ತರ ಭಾಗದಲ್ಲಿ ಅನಂತರುದ್ರ-ಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಚರ್ಯಾಪಾದದಲ್ಲಿ ಔರ್ಧ್ವದೇಹಿಕವಿಧಿಕಥನವೆಂಬ ಚತುರ್ಥ ಪಟಲ ಮುಗಿಯಿತು (೪).

ಟಿಪ್ಪಣಿ : ಮಕುಟಾಗಮ, ಚ.ಪಾ., ೭.೮-೧೨ನ್ನೂ ನೋಡಿರಿ. ಈಗಾಗಲೇ ಹೇಳಿದ ಹಾಗೆ ತತ್ತ್ವಗಳ ಮತ್ತು ಕಲೆಗಳ ಯೋಜನೆಯ ವಿವರಗಳಿಗೆ ಲಿಂಗಧಾರಣ ಚಂದ್ರಿಕೆ, ಪು.೨೭೧-೭೭ರವರೆಗಿನ ಭಾಗವನ್ನು ನೋಡಿರಿ. ದ್ವಿವಿಧ ವಿಶ್ವದೇವರು ಮತ್ತು ಪಿತೃ ಮುಂತಾದವರ ಮಹೇಶ್ವರತ್ವ ಮುಂತಾದ ವಿಷಯದಲ್ಲಿ ಮುಂದಿನ ಪಟಲದ ೩-೫ ಶ್ಲೋಕಗಳನ್ನು ನೋಡಿರಿ. ಹಿಂದೆ ೨೭-೨೯ ಶ್ಲೋಕಗಳ ಕೆಳಗಿನ ಟಿಪ್ಪಣಿಯಲ್ಲಿ ಕೊಟ್ಟ ಹತ್ತು ವಿಶ್ವೇದೇವರುಗಳ ಹೆಸರುಗಳಿಗೂ ಇವುಗಳಿಗೂ ವ್ಯತ್ಯಾಸವಿದೆ. **೩೬ ತತ್ತ್ವಗಳು-** ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ, ಮಾಯಾ, ಕಲಾ, ವಿದ್ಯಾ, ರಾಗ, ಕಾಲ, ನಿಯತಿ, ಪುರುಷ, ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು, ಶ್ರೋತ್ರ, ತ್ವಕ್, ನೇತ್ರ, ಜಿಹ್ವಾ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ಅಗ್ನಿ, ಜಲ ಮತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೃಥಿವಿ. ಸೃಷ್ಟಿ ಪ್ರಕ್ರಿಯೆಯಲ್ಲಿ ಈ ಮೂವತ್ತಾರು ತತ್ತ್ವಗಳ ವಿಕಾಸವಾದ ಬಗೆಯನ್ನು 'ಚಂದ್ರಜ್ಞಾನಾಗಮ ವಿಚಾರರಶ್ಮಿ' ಎಂಬ ಪುಸ್ತಕದಲ್ಲಿ (ವೀರಶೈವ ಅನುಸಂಧಾನ ಸಂಸ್ಥಾನ, ೨೦೦೧) ಪು ೩-೪ ನೋಡಿರಿ. **೩೮ ಕಲೆಗಳೆಂದರೆ-** ಈಶಾನ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜಾತರೆಂಬ ಪಂಚಬ್ರಹ್ಮರಲ್ಲಿನ ಒಟ್ಟು ಕಲೆಗಳು. ಈಶಾನ ಬ್ರಹ್ಮದಲ್ಲಿ ಕಲೆಗಳು ೫-ಶಶಿನೀ, ಅಂಗದಾ, ಇಷ್ಟದಾ, ಮರೀಚೀ ಮತ್ತು ಜ್ವಲಿನೀ; ತತ್ಪುರುಷ ಬ್ರಹ್ಮದಲ್ಲಿ ಕಲೆಗಳು ೪-ಶಾಂತಿ, ವಿದ್ಯಾ, ಪ್ರತಿಷ್ಠಾ ಮತ್ತು ನಿವೃತ್ತಿ; ಅಘೋರ ಬ್ರಹ್ಮದಲ್ಲಿ ಕಲೆಗಳು ೮-ತಾಮಸೀ, ಮೋಹಾ, ಕ್ಷುಧಾ, ನಿದ್ರಾ, ಮೃತ್ಯು, ಮಾಯಾ, ಅಭಯಾ ಮತ್ತು ಜರಾ; ವಾಮದೇವ ಬ್ರಹ್ಮದಲ್ಲಿ ಕಲೆಗಳು ೧೩-ರಾಜಸೀ, ರಕ್ಷಾ, ರತಿ, ಪಾಲಿನೀ, ಕಾಮಾ, ಸಂಯಮಿನೀ, ಕ್ರಿಯಾ, ಬುದ್ಧಿ, ಬ್ರಾಹ್ಮಣೀ, ಧಾತ್ರೀ, ಭ್ರಾಮಿಣೀ, ಮೋಹಿನೀ ಮತ್ತು ಗ್ರಾಮೀಣೀ; ಮತ್ತು ಸದ್ಯೋಜಾತಬ್ರಹ್ಮದಲ್ಲಿ ಕಲೆಗಳು ೮-ಸಿದ್ಧಿ, ಋದ್ಧಿ, ದ್ಯುತಿ, ಲಕ್ಷ್ಮೀ, ಮೇಧಾ, ಶಾಂತಿ, ಸ್ವಧಾ ಮತ್ತು ಧೃತಿ. ಒಟ್ಟು ೫+೪+೮+೧೩+೮=೩೮ ಕಲೆಗಳು. ಈ ಮೂವತ್ತೆಂಟು ಕಲೆಗಳಿಂದ ಕೂಡಿದುದೇ ಕಲಾಬ್ರಹ್ಮ. (ವಾತುಲಶುದ್ಧಾಗಮದ ೭ನೆಯ ಬ್ರಹ್ಮಭೇದ ಪಟಲವನ್ನು ನೋಡಿರಿ; ಶಿವಾಗಮ ಸೌರಭ ಸಂ॥ ಎಂ.ಜಿ. ನಂಜುಂಡಾರಾಧ್ಯ, ಪು.೨೨೦-೨೨೨ರಲ್ಲಿ ಪಟ್ಟಿ ಮಾಡಿ ಕೊಟ್ಟಿದ್ದಾರೆ). ಮಕುಟಾಗಮ, ಚ.ಪಾ., ೭.೧೬ರಲ್ಲಿ ಇದರ ದಿಶಾನಿರ್ದೇಶವನ್ನು ಮಾಡಲಾಗಿದೆ. ನೋಡಿರಿ- "ಈಶಾನಃ ಸರ್ವವಿದ್ಯಾನಾಮಿತ್ಯಾ-ದ್ಯಾನುಚ್ಚರನ್ ಮನೂನ್। ಶಶಿನ್ಯಾದಿಕಲಾಶ್ಚಾಪಿ ಕ್ರಮಶಸ್ತತ್ರ ಯೋಜಯೇತ್॥" ೭.೧೩-೧೫, ೧೭-೨೦ರಲ್ಲಿ ತತ್ತ್ವಸಂಯೋಜನೆಯ ಕ್ರಮವನ್ನು ಹೇಳಿದೆ. ಇನ್ನು ಷೋಡಶಾರಾಧನದ ವಿಷಯದಲ್ಲಿ ಎರಡು ಪಕ್ಷಗಳಿದ್ದಂತೆ ಕಾಣುತ್ತದೆ. ಇದೇ ಪಟಲದ ೨೭ನೇ ಶ್ಲೋಕದಲ್ಲಿ ಷೋಡಶಾರಾಧನಗಳನ್ನು ಮಾಡದೆ ತತ್ತ್ವಯೋಜನೆ ಪ್ರಕ್ರಿಯೆಯನ್ನು ಮಾಡಬಾರದು ಎಂದು ಹೇಳಿದೆ. ಇಲ್ಲಿ ತತ್ತ್ವ ಸಂಯೋಜನೆಯ ಅನಂತರ ಯಥಾಕಾಲ ಷೋಡಶಾರಾಧನೆಗಳನ್ನು ಮಾಡಬೇಕೆಂದು ಹೇಳಿದೆ. ಈ ಎರಡೂ ಪಕ್ಷಗಳ ಸಮನ್ವಯವನ್ನು ೨೮-೨೯ ಶ್ಲೋಕಗಳ ಕೆಳಗಿನ ಟಿಪ್ಪಣಿಯಲ್ಲಿ ಮಾಡಿ ತೋರಿಸಲಾಗಿದೆ. ಮುಂದಿನ ಪಟಲದಲ್ಲಿ ೧೩ನೇ ಶ್ಲೋಕ ಮತ್ತು ೧೭-೨೧ ಶ್ಲೋಕಗಳಲ್ಲಿ ಈ ಪಕ್ಷಗಳ ಸಮನ್ವಯವನ್ನು ನೋಡಬಹುದು.

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಚಮಃ ಪಟಲಃ

॥ ಪ್ರಕೀರ್ಣವಿಧಿಕಥನಮ್॥

ಬೃಹಸ್ಪತಿರುವಾಚ

ಅನಂತಗುಣವಾರಾಶೇ ಅನಂತಕರುಣಾಕರ।
ಅನಂತರುದ್ರ ಭಗವನ್ ಪ್ರಣತೋಽಸ್ಮ್ಯನುಗೃಹಾಣ ಮಾಮ್॥
ಪ್ರಕೀರ್ಣಕವಿಧಿಂ ಬ್ರೂಹಿ ವಿಧಾನೇ ಹ್ಯೌರ್ಧ್ವದೇಹಿಕೇ ॥ ೧ ॥

ಬೃಹಸ್ಪತಿಯು ಹೇಳಿದನು

ಅನಂತಗುಣಗಳ ಸಾಗರನೇ, ಅನಂತಕರುಣೆಯ ಆಶ್ರಯನೇ, ಭಗವನ್ ಅನಂತರುದ್ರ, ನಾನು ನಿನಗೆ ನಮಸ್ಕರಿಸುತ್ತೇನೆ. ನನಗೆ ಅನುಗ್ರಹಿಸು. ಔರ್ಧ್ವದೇಹಿಕ ವಿಧಾನದಲ್ಲಿನ ಪ್ರಕೀರ್ಣಕ ವಿಧಿಯನ್ನು ಹೇಳು. (೧).

ಅನಂತರುದ್ರ ಉವಾಚ

ಪ್ರಕೀರ್ಣವಿಧಿನಿರೂಪಣಮ್

ಗೀಷ್ಪತೇ ತೇ ಪ್ರವಕ್ಷ್ಯಾಮಿ ಪ್ರಕೀರ್ಣಕವಿಧಿಂ ಪರಮ್।
ಯೇನ ಸಮ್ಯಕ್ ನಿವರ್ತೇರನ್ ಕರ್ತೄಣಾಂ ಸರ್ವಸಂಶಯಾಃ ॥ ೨ ॥

ಪ್ರಕೀರ್ಣ ವಿಧಿಯ ನಿರೂಪಣೆ

ಬೃಹಸ್ಪತಿಯೇ, ಯಾವುದರಿಂದ ಕರ್ತೃಗಳ ಎಲ್ಲಾ ಸಂಶಯಗಳು ಪರಿಹರಿಸಲ್ಪಡಬಹುದೋ ಅಂತಹ ಪಕೀರ್ಣ ವಿಧಿಯನ್ನು ಸರಿಯಾಗಿ ನಿನಗೆ ಹೇಳುತ್ತೇನೆ. (೨).

ಪೂರ್ವಶ್ಚೈವಾದ್ಯುಕ್ತಪಿತೃಗಣಃ

ವಿಶ್ವದೇವೌ ಪೂರ್ವಶ್ಚೈವೇ ರುದ್ರಾನಂತಸಮಾಹ್ವಯೌ।
ಸ್ಕಂದಶ್ಚಂಡೋ ಗಣೇಶಶ್ಚ ಪಿತರಃ ಪರಿಕೀರ್ತಿತಾಃ ॥ ೩ ॥

ನಂದೀ ಚೈವ ಮಹಾಕಾಲೋ ವಿಶ್ವೇದೇವೌ ತದುತ್ತರೇ।
ಪಿತರಃ ಸ್ಯುರ್ಮಹೇಶಶ್ಚ ಸದಾಶಿವಶಿವೌ ಮತೌ ॥ ೪ ॥

ವಸ್ವಾದಿರೂಪಾಃ ಪಿತರಃ ಪಿತೃಲೋಕನಿವಾಸಿನಃ।
ಮಹೇಶ್ವರಾದಿರೂಪಾಃ ಸ್ಯುರ್ಮಮಲೋಕನಿವಾಸಿನಃ ॥ ೫ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೂರ್ವಶೈವ ಮುಂತಾದವರ ಪಿತೃಗಣ

ಪೂರ್ವಶೈವ ಮತದಲ್ಲಿ ರುದ್ರ ಮತ್ತು ಅನಂತರೆಂಬುವವರು ವಿಶ್ವದೇವರುಗಳು ಹಾಗೂ ಪಿತೃ, ಪಿತಾಮಹ ಮತ್ತು ಪ್ರಪಿತಾಮಹರು ಸ್ಕಂದ, ಚಂಡ ಮತ್ತು ಗಣೇಶ ಸ್ವರೂಪರೆಂದು ಹೇಳಲ್ಪಟ್ಟಿದ್ದಾರೆ. ಉತ್ತರಶೈವದಲ್ಲಿ (ವೀರಶೈವದಲ್ಲಿ) ನಂದಿ ಮತ್ತು ಮಹಾಕಾಲರು ವಿಶ್ವದೇವರು. ಹಾಗೂ ಪಿತೃ, ಪಿತಾಮಹ ಮತ್ತು ಪ್ರಪಿತಾಮಹರು ಮಹೇಶ್ವರ, ಸದಾಶಿವ ಮತ್ತು ಶಿವ ಸ್ವರೂಪರು. (೪). ಪಿತೃಲೋಕ ನಿವಾಸಿಗಳಾದ ಪಿತೃ ಮುಂತಾದವರು ವಸು ಮುಂತಾದವರ ಸ್ವರೂಪಿಗಳು. ಆದರೆ ಶಿವಲೋಕ ನಿವಾಸಿಗಳಾದ ಪಿತೃ ಮುಂತಾದವರು ಮಹೇಶ್ವರ ಮುಂತಾದವರ ಸ್ವರೂಪಿಗಳು. (೫).

ಟಿಪ್ಪಣಿ : ಮಕುಟಾಗಮ, ಚ.ಪಾ. ಲ.೧೫ರಲ್ಲಿ ಕೇವಲ ಉತ್ತರ ಶೈವರಿಗೆ ಹೇಳಿದ ವಿಶ್ವದೇವರು ಮುಂತಾದವುಗಳ ಹೆಸರುಗಳಿವೆ. ಮತ್ತೆ ಅದೇ ಆಗಮದ ೯.ಲನ್ನೂ ನೋಡಿರಿ.

ಶೈವಶ್ರಾದ್ಧೇಷು ವರ್ಜ್ಯಾನಿ

ಅಪಸವ್ಯಂ ತಿಲಾನ್ ಪಿಂಡಂ ವಿಕಿರಂ ಚಾಗ್ನಿಕರ್ಮ ಚ।
ಅರ್ಘ್ಯಪಾತ್ರಂ ಚ ಮತಿಮಾನ್ ಶೈವಶ್ರಾದ್ಧೇಷು ವರ್ಜಯೇತ್ ॥ ೬ ॥

ಶೈವಶ್ರಾದ್ಧಗಳಲ್ಲಿ ನಿಷಿದ್ಧವಾದವುಗಳು

ಅಪಸವ್ಯೀಕರಣ, ಎಳ್ಳು, ಪಿಂಡ, ವಿಕಿರ, ಅಗ್ನಿಕರ್ಮ ಮತ್ತು ಅರ್ಘ್ಯಪಾತ್ರ, ಇವುಗಳನ್ನು ತಿಳಿದವನು ಶೈವಶ್ರಾದ್ಧಗಳಲ್ಲಿ ಬಿಡಬೇಕು. (೬).

ಟಿಪ್ಪಣಿ : ಮಕುಟಾಗಮ, ಚ.ಪಾ., ಲ.೧೯ರಲ್ಲಿ ಅಗ್ನಿಕರ್ಮಕ್ಕೆ ಹೋಮವೆಂದು ಕರೆಯಲಾಗಿದೆ; ಅಲ್ಲಿ ದರ್ಭೆಯನ್ನೂ ವರ್ಜ್ಯವೆಂದು ಹೇಳಿದೆ. ಇಲ್ಲಿ ಮುಂದಿನ ಶ್ಲೋಕ ನೋಡಿರಿ. ಆ ಅಭಿಪ್ರಾಯದಂತೆ ಏಳು ವರ್ಜ್ಯಗಳು. **ಅಪಸವ್ಯ**-ವೈದಿಕ ವಿಧಿಯ ಪ್ರಕಾರ ಪಿತೃಕಾರ್ಯವನ್ನು ಮಾಡುವಾಗ ಯಜ್ಞೋಪವೀತವನ್ನು ಎಡಗಡೆ ಹೆಗಲಿನ ಮೇಲಿಂದ ಧರಿಸುವ ಪದ್ಧತಿಗೆ ಅಪಸವ್ಯವೆನ್ನುತ್ತಾರೆ. ಪಿತೃಪೂಜೆಯಲ್ಲಿ ಅಕ್ಷತೆಗೆ ಬದಲು **ಎಳ್ಳನ್ನು** ಉಪಯೋಗಿಸುತ್ತಾರೆ. ಪಿತೃಗಳಿಗೆ ಅಕ್ಕಿಯ ಹಿಟ್ಟಿನಿಂದ ತಯಾರಿಸಿದ ರೊಟ್ಟಿ (ಅಪೂಪ) **ಪಿಂಡ**ವಾಗಿ ನೀಡಲಾಗುತ್ತದೆ. ಸಂಸ್ಕಾರವಿಲ್ಲದೆ ಸತ್ತ ವ್ಯಕ್ತಿಗಳಿಗೆ ದರ್ಭೆಯ ಮೇಲೆ ನೈವೇದ್ಯ ಮಾಡುವುದಕ್ಕೆ **ವಿಕಿರ** ಎನ್ನುತ್ತಾರೆ. ಆಹಿತಾಗ್ನಿಗಾಗಿ ಶ್ರಾದ್ಧದಲ್ಲಿ ಅಗ್ನಿಗೆ ಆಹುತಿ ಕೊಡುತ್ತಾರೆ. ಇದು ಕರ್ಮ ಅಥವಾ **ಅಗ್ನಿಕಾರ್ಯ**. ಪಿತೃಗಳ ಪೂಜೆಯಲ್ಲಿ ತಿಲಮಿಶ್ರಿತ ನೀರಿನಿಂದ ಅರ್ಘ್ಯ ಕೊಡುತ್ತಾರೆ. ಅದಕ್ಕಾಗಿ **ಅರ್ಘ್ಯಪಾತ್ರೆ** ಇರುತ್ತದೆ. ಇವು ಇಲ್ಲಿ ವರ್ಜ್ಯ. ಮಕುಟಾಗಮ, ಚ.ಪಾ., ಲ.೭ರಲ್ಲಿ ಮತ್ತೆ ಇದನ್ನೇ ಹೇಳಿದೆ.

ಗ್ರಾಹ್ಯದ್ರವ್ಯಾಣಿ

ನಿಷಿಧ್ಯಂತೇ ಕ್ವಚಿದ್ದರ್ಭಾ ಆಗಮೇ ಯದ್ಯಪಿ ಕ್ವಚಿತ್।
ತದತ್ಯಾವಶ್ಯಕತ್ವಸ್ಯ ನಿಷೇಧಸ್ತೇನ ಗೃಹ್ಯತಾಮ್ ॥ ೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಗಂಧಶ್ಚಾಕ್ಷತೋ ಧೂಪೋ ದೀಪಃ ಸಜ್ಯಾಕ್ಯ ವರ್ತಿಕಾಃ।
ಪುಷ್ಪಾಣಿ ಬಿಲ್ವಪತ್ರಾಣಿ ದಕ್ಷಿಣಾ ವಸನಾನಿ ಚ॥
ತಾಂಬೂಲಂ ಭಸ್ಮಘುಟಿಕಾ ದ್ರವ್ಯಾಣ್ಯಾರಾಧನೇ ಸ್ಮೃತಾಃ ॥ ೮ ॥

ಬೇಕಾದ ದ್ರವ್ಯಗಳು

ಕೆಲ ಆಗಮಗಳಲ್ಲಿ ದರ್ಭೆಯೂ ನಿಷೇಧಿಸಲ್ಪಟ್ಟಿದೆ. ಅದು ಅಷ್ಟೊಂದು ಅವಶ್ಯಕವಲ್ಲವೆಂಬುದು ಆ ನಿಷೇಧದ ತಾತ್ಪರ್ಯ. (೭). ಶ್ರೀಗಂಧ, ಅಕ್ಷತೆ, ಧೂಪ, ದೀಪ, ತುಪ್ಪದ ಬತ್ತಿಗಳು, ಪುಷ್ಪಗಳು, ಬಿಲ್ವಪತ್ರೆ, ದಕ್ಷಿಣೆ, ವಸ್ತ್ರಗಳು, ತಾಂಬೂಲ, ಭಸ್ಮದ ಗಟ್ಟಿ -ಇವು ಪಿತೃಗಳ ಆರಾಧನೆಯಲ್ಲಿ ಬೇಕು. (೮).

ತತ್ತ್ವಸಂಯೋಜನಕ್ರಮಃ

ದಂಪತ್ಯೋಃ ಸಹ ಲಿಂಗೈಕ್ಯೇ ಸಮಾಧ್ಯಾದಿಕ್ರಿಯಾಃ ಸಹ।
ಪ್ರಾಕ್‌ಸಮಾಧೇರನ್ಯಸಿದ್ಧೌ ತದೂರ್ಧ್ವಂ ಚೇತ್ ಕ್ರಿಯಾಃ ಪುನಃ ॥ ೯ ॥

ಅನುಜೇನ ಪಿತುಃ ಕರ್ಮ ಕೃತಂ ಚೇಜ್ಜ್ಯೇಷ್ಠ ಆಗತಃ।
ಏಕೋದ್ದಿಷ್ಟಂ ವಿನಾ ಕುರ್ಯಾತ್ ತತ್ತ್ವಸಂಯೋಜನಂ ಪುನಃ ॥ ೧೦ ॥

ಜ್ಯೇಷ್ಠೇನ ತು ಪಿತುಃ ಕರ್ಮ ಕೃತಂ ಚೇತ್ತತ್ರ ಆಗತಃ।
ದಶಾಹಾಂತೇಽನುಜಃ ಕುರ್ಯಾತ್ ಪಾರ್ವಣಾರಾಧನಂ ಪುನಃ॥
ಕನಿಷ್ಠೋಽಪ್ಯಾಹಿತಾಗ್ನಿಸ್ತು ಕುರ್ಯಾದ್ವೈ ತತ್ತ್ವಯೋಜನಮ್ ॥ ೧೧ ॥

ದಶಾಹಮಧ್ಯೇ ಚೇತ್ಕರ್ತುಃ ಶಾವಾಶೌಚಾಂತರಾಗಮಃ।
ತಸ್ಯ ಶುದ್ಧಿಃ ಪೂರ್ವಶೇಷಾದೇಕೋದ್ದಿಷ್ಟಂ ಯಥೋದಿತಮ್ ॥ ೧೨ ॥

ತತ್ತ್ವಸಂಯೋಜನಂ ಕುರ್ಯಾತ್ ಪಿತ್ರಾದೇಃ ಪ್ರಯತಃ ಸುತಃ।
ತತಃ ಸಂವತ್ಸರೇ ಪೂರ್ಣೇ ದ್ವಾದಶಾಹೇಽಥವಾ ಸುಧೀಃ ॥ ೧೩ ॥

ತತ್ತ್ವಸಂಯೋಜನಂ ಕುರ್ಯಾದ್ ವತ್ಸರಾಂತೇ ಯದಾ ಪುನಃ।
ಊನಾಬ್ದಿಕಾತ್ ಪರಂ ಕುರ್ಯಾದಾಬ್ದಿಕಾತ್ ಪೂರ್ವವಾಸರೇ ॥ ೧೪ ॥

ದ್ವಾದಶಾಹಪ್ರಭೃತಿಷು ಷಟ್‌ಸು ಕುರ್ಯಾದ್ದಿನೇಷು ವಾ।
ತ್ರಿಪಕ್ಷೇ ಮಾಸಿ ಷಷ್ಠೇ ವಾ ವತ್ಸರಾಂತೇ ಶುಭಾಗಮೇ ॥ ೧೫ ॥

ಏಕಾದಶಾಹ ಏವಾಥ ಯದಿ ದರ್ಶಃ ಸಮಾಪತೇತ್।
ತದೈವ ತದ್ವಿಧಾಯಾದೌ ಪಿತೃಯಜ್ಞಂ ಸಮಾಚರೇತ್॥
ಪಿತುರ್ಮಹಾಗುರೋಃ ಕುರ್ಯಾತ್ ತ್ರಯೋದಶದಿನೇ ಯಥಾ ॥ ೧೬ ॥

ತತ್ತ್ವ ಸಂಯೋಜನಕ್ರಮ

ದಂಪತಿಗಳು ಒಟ್ಟಿಗೆ ಲಿಂಗೈಕ್ಯರಾದರೆ ಸಮಾಧಿ ಮುಂತಾದ ಕ್ರಿಯೆಗಳು ಜೊತೆಯಲ್ಲೇ ಆಗಬೇಕು. ಸಮಾಧಿ ಗುಂಡಿಯನ್ನು ಅಗಿಯುವುದಕ್ಕಿಂತ ಮುಂಚೆ ಆದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಾಗೆ. ಇಲ್ಲವಾದರೆ ಅನಂತರ ಎಲ್ಲಾ ಕ್ರಿಯೆಗಳನ್ನು ಮತ್ತೆ ಆಚರಿಸಬೇಕು. (೯). ತಮ್ಮನು ತಂದೆಯ ಕರ್ಮವನ್ನು ಮಾಡಿದ್ದಾದರೆ, ಆಮೇಲೆ ಬಂದ ಅಣ್ಣನು ಏಕೋದ್ದಿಷ್ಟ ವಿಧಿಯನ್ನು ಬಿಟ್ಟು ತತ್ತ್ವ ಸಂಯೋಜನೆಯ ಪ್ರಕ್ರಿಯೆಯನ್ನು ಮತ್ತೆ ಮಾಡಬೇಕು. (೧೦). ಅಣ್ಣನು ತಂದೆಯ ಕರ್ಮವನ್ನು ಮಾಡಿದ್ದಾದರೆ, ಅನಂತರ ಬಂದ ತಮ್ಮನು ಹತ್ತು ದಿನಗಳ ಅನಂತರ ಪಾರ್ವಣಾರಾಧನೆಯನ್ನು ಮತ್ತೆ ಮಾಡಬೇಕು. ಆಹಿತಾಗ್ನಿಯಾದ ಕಡೆಯ ತಮ್ಮನು ತತ್ತ್ವಯೋಜನೆಯನ್ನು ಮಾಡಬೇಕು. (೧೧). ಹತ್ತು ದಿನಗಳಲ್ಲಿಯೇ ಕರ್ತೃವಿಗೆ ಶಾವಾಶೌಚ (ಮರಣಾಶೌಚ) ಬಂದರೆ ಅವನ ಶುದ್ಧಿಯು ಪೂರ್ವ ಆಶೌಚದ ಮಿಕ್ಕ ದಿನಗಳಲ್ಲಿ ಆಗುತ್ತದೆ, ಏಕೋದ್ದಿಷ್ಟಕ್ಕೆ ಸಂಬಂಧಪಟ್ಟಂತೆ ಹೇಳಿದ ಹಾಗೆ. (೧೨). ಮಗನು ಪವಿತ್ರ ಮನಸ್ಸಿನಿಂದ ಪಿತೃ ಮುಂತಾದವರ ತತ್ತ್ವಸಂಯೋಜನೆಯನ್ನು ಮಾಡಬೇಕು. ಅನಂತರ ವರ್ಷ ಪೂರ್ಣವಾದ ಮೇಲೆ ಅಥವಾ ಹನ್ನೆರಡನೆಯ ದಿನ ಎಲ್ಲಾ ಕ್ರಿಯೆಗಳು ಮುಗಿದ ಮೇಲೆ ಮಾಡಬಹುದು. (೧೩). ಮತ್ತೆ ವರ್ಷದ ಕೊನೆಯಲ್ಲಿ ತತ್ತ್ವಸಂಯೋಜನೆಯನ್ನು ಮಾಡಬೇಕಿದ್ದರೆ, ಊನಾಬ್ದಿಕ ಆರಾಧನೆಯ ಅನಂತರ ಅಬ್ದಿಕ ಕರ್ಮಕ್ಕೆ ಹಿಂದಿನ (ವರ್ಷ ಪೂರ್ತಿಯಾಗುವ ಹಿಂದಿನ) ದಿನ ಮಾಡಬೇಕು. (೧೪). ಅಥವಾ ದ್ವಾದಶಾಹ ಇತ್ಯಾದಿ ಆರು ದಿನಗಳಲ್ಲಿ ಯಾವುದಾದರೂ ಒಂದು ದಿನ ಈ ತತ್ತ್ವ ಸಂಯೋಜನೆಯ ಪ್ರಕ್ರಿಯೆಯನ್ನು ಮಾಡಬೇಕು ಅಥವಾ ಮೂರನೆಯ ಪಕ್ಷದಲ್ಲಿ, ಆರನೆಯ ತಿಂಗಳಲ್ಲಿ, ಅಥವಾ ವರ್ಷದ ಕೊನೆಯ ಶುಭದಿನದಲ್ಲಿ ಮಾಡಬೇಕು. (೧೫). ಏಕದಶಾಹದಂದು ಮಾಡಬಹುದು ಅಥವಾ ಆ ಮಧ್ಯೆ ದರ್ಶ (ಅಮಾವಾಸ್ಯೆ) ತಿಥಿ ಬಂದರೆ ಮೊದಲೇ ತತ್ತ್ವಸಂಯೋಜನೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಅನಂತರ ಪಿತೃಯಜ್ಞವನ್ನು ಮಾಡಬೇಕು. ಪಿತೃವಿನ ಅಥವಾ ಮಹಾಗುರುವಿನ ತತ್ತ್ವ ಸಂಯೋಜನೆಯನ್ನು ಹದಿಮೂರನೆಯ ದಿನ ಮಾಡಲಾಗುತ್ತದೆ. (೧೬).

ಟಿಪ್ಪಣಿ : ಪಾರ್ವಣಾರಾಧನ-ಪಿತೃ, ಪಿತಾಮಹ ಮತ್ತು ಪ್ರಪಿತಾಮಹರನ್ನು ಉದ್ದೇಶಿಸಿ ಮಾಡಿದ ಶ್ರಾದ್ಧಕ್ಕೆ (ಆರಾಧನೆಗೆ) ಪಾರ್ವಣ ಎನ್ನುತ್ತಾರೆ. ಇದು ಎಲ್ಲಕ್ಕಿಂತ ಪ್ರಧಾನವಾದ ಶ್ರಾದ್ಧ (ಆರಾಧನೆ). ಇದಕ್ಕೆ ಬದಲಾಗಿ ವೀರಶೈವರು ತತ್ತ್ವ ಸಂಯೋಜನೆಯನ್ನು ಮಾಡಬೇಕು. ಇಲ್ಲಿ ತತ್ತ್ವಸಂಯೋಜನೆಯನ್ನು ಮಾಡಲು ಅನೇಕ ರೀತಿಯಲ್ಲಿ ಐಚ್ಛಿಕತೆಯನ್ನು ವ್ಯಕ್ತ ಪಡಿಸಿದ್ದಾರೆ. ಮುಂದೆ ತತ್ತ್ವಸಂಯೋಜನೆ ಮತ್ತು ಷೋಡಶಾರಾಧನೆಗಳನ್ನು ಮಾಡುವುದರಲ್ಲಿ ಇರುವ ಮತಭೇದಕ್ಕೆ ಪರಿಹಾರವನ್ನು ಹೇಳಲಾಗಿದೆ.

ತತ್ತ್ವಸಂಯೋಜನ-ಷೋಡಶಾರಾಧನಯೋರ್ವ್ಯವಸ್ಥಾ

ತತ್ತ್ವಸಂಯೋಜನಮ್ಮೃತೇ ಷೋಡಶಾರಾಧನೇ ಕೃತೇ।
ಸಂವತ್ಸರೇ ವ್ಯತೀತೇ ತು ಪುನಃ ಕುರ್ವೀತ ಷೋಡಶಮ್ ॥ ೧೭ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತತ್ತ್ವಸಂಯೋಜನಾದರ್ವಾಕ್ ಷೋಡಶಾರಾಧನಾನಿ ಚ।
ಏಕೋದ್ದಿಷ್ಟವಿಧಾನೇನ ಕುರ್ಯಾತ್ ಸರ್ವಾಣ್ಯತಂದ್ರಿತಃ ॥ ೧೮ ॥
ತತ್ತ್ವಸಂಯೋಜನಾದೂರ್ಧ್ವಂ ಯದಾ ಕುರ್ಯಾತ್ತದಾ ಪುನಃ।
ಪ್ರತ್ಯಬ್ದಂ ಯೋ ಯಥಾ ಕುರ್ಯಾತ್ತಥಾ ಕುರ್ಯಾದ್ವಿಚಕ್ಷಣಃ ॥ ೧೯ ॥
ತತ್ತ್ವಸಂಯೋಜನಂ ಕೃತ್ವಾ ಕುರ್ಯಾತ್ ಪಾರ್ವಣವತ್ತತಃ।
ಪ್ರತ್ಯಾಬ್ದಿಕಾರಾಧನಾದೀನ್ ವಿಧಿರೇಷ ಸನಾತನಃ ॥ ೨೦ ॥
ತತ್ತ್ವಸಂಯೋಜನಾದೂರ್ಧ್ವಮೇಕೋದ್ದಿಷ್ಟಂ ವಿಧೀಯತೇ।
ಯತ್ರ ತದ್ ದೈವಯುಕ್ತಂ ಸ್ಯಾದ್ದೈವಹೀನಂ ವೃಥಾ ಭವೇತ್ ॥ ೨೧ ॥

ತತ್ತ್ವಸಂಯೋಜನೆ ಮತ್ತು ಷೋಡಶಾರಾಧನೆಗಳ ವ್ಯವಸ್ಥೆ

ತತ್ತ್ವಸಂಯೋಜನ ವಿಧಿಯನ್ನು ಪೂರ್ಣಮಾಡದೆ ಷೋಡಶಾರಾಧನೆಯನ್ನು ಮಾಡಿದರೆ, ಅಂತಹ ಸ್ಥಿತಿಯಲ್ಲಿ ವರ್ಷಪೂರ್ತಿಯಾದ ಮೇಲೆ ಮತ್ತೆ ಷೋಡಶಾರಾಧನೆಯನ್ನು ಮಾಡಬೇಕು. (೧೭). ತತ್ತ್ವಸಂಯೋಜನೆಗಿಂತ ಮೊದಲು ಷೋಡಶಾರಾಧನೆಗಳನ್ನು ಎಲ್ಲವನ್ನೂ ಆಲಸ್ಯವಿಲ್ಲದೆ ಏಕೋದ್ದಿಷ್ಟ ವಿಧಾನದಿಂದ ಮಾಡಬೇಕು. (೧೮). ಒಂದು ಪಕ್ಷ ಯಾರಾದರೂ ತತ್ತ್ವಸಂಯೋಜನೆಯ ಅನಂತರ ಷೋಡಶಾರಾಧನೆಗಳನ್ನು ಮಾಡಿದರೆ ಅವನು ಪ್ರತಿವರ್ಷವೂ ಅದೇ ಪದ್ಧತಿಯನ್ನು ಅನುಸರಿಸುವುದರಲ್ಲಿ ಬುದ್ಧಿವಂತಿಕೆಯಿದೆ. (೧೯). ತತ್ತ್ವಸಂಯೋಜನೆಯನ್ನು ಮಾಡಿ ಅನಂತರ ಪಾರ್ವಣ ಶ್ರಾದ್ಧದಂತೆ ಪ್ರತಿ ವರ್ಷದ ಆರಾಧನೆ ಮುಂತಾದವುಗಳನ್ನು ಮಾಡುವುದು ಹಿಂದಿನಿಂದ ನಡೆದು ಕೊಂಡು ಬಂದ (ಸನಾತನ) ವಿಧಾನ. (೨೦). ಯಾವಾಗ ತತ್ತ್ವಸಂಯೋಜನೆಯ ಅನಂತರ ಏಕೋದ್ದಿಷ್ಟ ವಿಧಾನದ ಆರಾಧನೆಯು ಹೇಳಲ್ಪಟ್ಟರೆ ಆಗ ದೈವವಿದ್ದರೆ ಫಲ ಕೊಡುತ್ತದೆ, ದೈವ ಬಲವಿಲ್ಲದಿದ್ದರೆ ನಿಷ್ಫಲವಾಗುತ್ತದೆ. (೨೧).

ಟಿಪ್ಪಣಿ : ಹಿಂದಿನ ಪಟಲದ ೨೭-೨೯ರ ಮತ್ತು ೩೮-೪೫ರ ಕೆಳಗಿನ ಟಿಪ್ಪಣಿಗಳನ್ನು ನೋಡಿರಿ.

ತತ್ತ್ವಸಂಯೋಜನಾಕರಣೇ ಪ್ರತ್ಯವಾಯಃ

ತತ್ತ್ವಸಂಯೋಜನವಿಧಿಮಕೃತ್ವಾ ಶುಭಕರ್ಮಕೃತ್।
ಪ್ರತ್ಯವೈತಿ ಧ್ರುವಂ ಶ್ರೇಯೋ ನಾಪ್ನುಯಾದಿತಿ ನಿಶ್ಚಯಃ॥
ಮುಖ್ಯೇಽನ್ಯಸ್ಮಿನ್ ಕರ್ತರಿ ತು ಶುಭಂ ಕರ್ಮ ಸಮಾಚರೇತ್ ॥ ೨೨ ॥
ದ್ವಾದಶಾಹಂ ಸಮಾರಭ್ಯ ತೃಪ್ತಯೇ ವತ್ಸರಾವಧಿ।
ದದ್ಯಾದಹರಹಃ ಕುಂಭಂ ಸಜಲಂ ಸಪ್ರಸಾದಕಮ್ ॥ ೨೩ ॥
ಪಿತುಃ ಶಿವಪದಪ್ರಾಪ್ತ್ಯೈ ತತ್ತ್ವಸಂಯೋಜನಾತ್ ಪರಮ್।
ಆಹಿತಾಗ್ನಿಸ್ತು ಕುರ್ವೀತ ಪಿತೃಯಜ್ಞಂ ವಿಧುಕ್ಷಯೇ ॥ ೨೪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತತ್ತ್ವಸಂಯೋಜನೆಯನ್ನು ಮಾಡದಿದ್ದರೆ ಪಾಪ

ತತ್ತ್ವಸಂಯೋಜನ ವಿಧಿಯನ್ನು ಪೂರೈಸದೆ ಯಾರು ಶುಭ ಕಾರ್ಯಗಳನ್ನು ಮಾಡುತ್ತಾನೋ ಅವನು ನಿಶ್ಚಿತವಾಗಿಯೂ ಪಾಪಿಯಾಗುವನು; ಅವನು ಶ್ರೇಯಸ್ಸನ್ನು ಖಂಡಿತ ಹೊಂದುವುದಿಲ್ಲ. ಅವನು ಮುಖ್ಯ ಕರ್ತೃವಾಗಿದ್ದರೆ ಹಾಗೆ. ಬೇರೆಯ ಕರ್ತೃವಾಗಿದ್ದರೆ ಅವನು ಶುಭ ಕರ್ಮವನ್ನು ಮಾಡಬಹುದು. (೨೨). ಪಿತೃಗಣದ ತೃಪ್ತಿಗಾಗಿ ದ್ವಾದಶಾಹದಿಂದ ಒಂದು ವರ್ಷಕಾಲ ಪ್ರತಿದಿನ ನೀರಿನಿಂದ ತುಂಬಿದ ಕೊಡವನ್ನು ಪ್ರಸಾದದೊಂದಿಗೆ ಕೊಡಬೇಕು. (೨೩). ಪಿತೃವಿನ ಶಿವಪದ ಪ್ರಾಪ್ತಿಗಾಗಿ ಆಹಿತಾಗ್ನಿಯಾದ ಕರ್ತೃವು ತತ್ತ್ವಸಂಯೋಜನೆಯ ಅನಂತರ ಚಂದ್ರಕ್ಷಯದ ದಿನ ಅಂದರೆ ಅಮಾವಾಸ್ಯೆಯ ದಿನ ಪಿತೃಯಜ್ಞವನ್ನು ಮಾಡಬೇಕು. (೨೪).

ದ್ವಿವಿಧಮಾರಾಧನಂ ತಸ್ಯ ತ್ರೈವಿಧ್ಯಂ ಚ

ಏಕೋದ್ದಿಷ್ಟಂ ಪಾರ್ವಣಂ ಚೇತ್ಯುಕ್ತಮಾರಾಧನಂ ದ್ವಿಧಾ।
ನಿತ್ಯಂ ನೈಮಿತ್ತಿಕಂ ಕಾಮ್ಯಮಿತಿ ತತ್ತ್ರಿವಿಧಂ ಪುನಃ ॥ ೨೫ ॥

ಆಬ್ದಿಕಂ ದಾರ್ಶಿಕಂ ಚೈವ ತನ್ಮಹಾಲಯಸಂಜ್ಞಕಮ್।
ದೈನಂದಿನಂ ಚ ನಿಯತೋಪಾಧಿಕಂ ನಿತ್ಯಮುಚ್ಯತೇ ॥ ೨೬ ॥

ಸಂಕ್ರಾಂತೌ ಗ್ರಹಣೇ ಚೋಕ್ತಂ ತತ್ತ್ವಸಂಯೋಜನಂ ತಥಾ।
ಏಕೋದ್ದಿಷ್ಟಂ ವೃದ್ಧಿಸಂಜ್ಞಂ ನೈಮಿತ್ತಿಕಮುದಾಹೃತಮ್ ॥ ೨೭ ॥

ಮನ್ವಾದೌ ಚ ಯುಗಾದೌ ಚ ತಥಾ ಲಭ್ಯೇಷು ಪ್ರಾಯಶಃ।
ಯೋಗೇಷು ಕ್ರಿಯತೇ ಯತ್ತತ್ ಕಾಮ್ಯಮಿತ್ಯಭಿಧೀಯತೇ ॥ ೨೮ ॥

ಆರಾಧನೆಯು ದ್ವಿವಿಧ, ಅದರ ತ್ರೈವಿಧ್ಯ

ಏಕೋದ್ದಿಷ್ಟ ಮತ್ತು ಪಾರ್ವಣವೆಂದು ಆರಾಧನೆಯು ಎರಡು ವಿಧ. ನಿತ್ಯ, ನೈಮಿತ್ತಿಕ ಮತ್ತು ಕಾಮ್ಯವೆಂದು ಮತ್ತೆ ಅದು ಮೂರು ವಿಧ. (೨೫). ಪ್ರತಿಯೊಂದು ಸಂವತ್ಸರದಲ್ಲಿ ನಡೆಯುವ, ಅಮಾವಾಸ್ಯೆಯ ದಿನ ನಡೆಯುವ, ಮಹಾಲಯ ಎಂಬ ಹೆಸರಿನ, ದಿನವೂ ನಡೆಯುವ ಮತ್ತು ನಿಯತೋಪಾಧಿಕವಾದ ಆರಾಧನೆಯು ನಿತ್ಯವೆನಿಸುವುದು. (೨೬). ಸಂಕ್ರಾಂತಿಯಂದು, ಗ್ರಹಣದಂದು, ತತ್ತ್ವಸಂಯೋಜನೆಯ ಸಮಯದಲ್ಲಿ ನಡೆಯುವ ಏಕೋದ್ದಿಷ್ಟ ಮತ್ತು ವೃದ್ಧಿಯೆಂಬ ಹೆಸರಿನ ಆರಾಧನೆಯು ನೈಮಿತ್ತಿಕವೆಂದು ಕರೆಯಲ್ಪಡುತ್ತದೆ. (೨೭). ಸಮಯ ಸಮಯಕ್ಕೆ ಒದಗಿ ಬರುವ ಮನ್ವಾದಿ ಮತ್ತು ಯುಗಾದಿ ಯೋಗಗಳ ಸಂದರ್ಭದಲ್ಲಿ ಯಾವ ಆರಾಧನೆಯು ಮಾಡಲ್ಪಡುವುದೋ ಅದಕ್ಕೆ ಕಾಮ್ಯವೆಂದು ಹೆಸರು. (೨೮).

ಟಿಪ್ಪಣಿ : ವೃದ್ಧಿಶ್ರಾದ್ಧ ಮತ್ತು ನಾಂದೀಶ್ರಾದ್ಧ ಎರಡೂ ಒಂದೇ. ಯಾಜ್ಞವಲ್ಕ್ಯ ಸ್ಮೃತಿ ೧.೧೫೦ರಲ್ಲಿ ವೃದ್ಧಿ ಅಂದರೆ ಶುಭ ಸಂದರ್ಭದಲ್ಲಿ, ಉದಾಹರಣೆಗೆ ಪುತ್ರೋತ್ಸವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂತಾದ ಸಂದರ್ಭದಲ್ಲಿ ನಾಂದಿ ಮುಖ ಪಿತೃಗಳನ್ನು ಪಿಂಡದೊಂದಿಗೆ ಪೂಜಿಸುವುದು ವೃದ್ಧಿಶ್ರಾದ್ಧ ಅಥವಾ ನಾಂದೀಶ್ರಾದ್ಧ. ಆಭ್ಯುದಯಿಕ ಶ್ರಾದ್ಧವೆಂದರೂ ಅದೇ. ಮನ್ವಾದಿ ಎಂದರೆ ೧೪ ಮನುಗಳ ಅಥವಾ ಮನ್ವಂತರಗಳ ಪ್ರಥಮ ತಿಥಿಯೆಂದು ಅರ್ಥ. ಆ ತಿಥಿಗಳು ಹೀಗಿವೆ- (೧) ಆಶ್ವಯುಜ ಶುಕ್ಲ ನವಮೀ, (೨) ಕಾರ್ತೀಕ ಶುಕ್ಲ ದ್ವಾದಶೀ, (೩-೪) ಚೈತ್ರ ಹಾಗೂ ಭಾದ್ರಪದ ಶುಕ್ಲ ತೃತೀಯಾ, (೫) ಫಾಲ್ಗುಣ ಅಮಾವಾಸ್ಯಾ, (೬) ಪುಷ್ಯ ಶುಕ್ಲ ಏಕಾದಶೀ, (೭-೮) ಆಷಾಢ ಶುಕ್ಲ ದಶಮೀ ಹಾಗೂ ಮಾಘ ಶುಕ್ಲ ಸಪ್ತಮೀ, (೯) ಶ್ರಾವಣ ಶುಕ್ಲ ಅಷ್ಟಮೀ, (೧೦-೧೪) ಆಷಾಢ, ಕಾರ್ತೀಕ, ಫಾಲ್ಗುಣ, ಚೈತ್ರ ಹಾಗೂ ಜ್ಯೇಷ್ಠ ಪೂರ್ಣಿಮಾ. ಹದಿನಾಲ್ಕು ಮನುಗಳು (ಮನ್ವಂತರಗಳು): ಸ್ವಾಯಂಭುವ, ಸ್ವಾರೋಚಿಷ, ಔತ್ತಿಮಿ, ತಾಮಸ, ರೈವತ, ಚಾಕ್ಷುಷ, ವೈವಸ್ವತ, ಸಾವರ್ಣಿ, ದಕ್ಷಸಾವರ್ಣಿ, ಬ್ರಹ್ಮಸಾವರ್ಣಿ, ಧರ್ಮಸಾವರ್ಣಿ, ರುದ್ರಸಾವರ್ಣಿ, ರೌಚ್ಯದೇವಸಾವರ್ಣಿ ಮತ್ತು ಇಂದ್ರಸಾವರ್ಣಿ. ಯುಗಾದಿ- ಎಂದರೆ ನಾಲ್ಕು ಯುಗಗಳ ಆರಂಭದ ತಿಥಿ- ವೈಶಾಖ ಶುಕ್ಲ ತೃತೀಯಾ (ಕೃತ), ಕಾರ್ತೀಕ ಶುಕ್ಲ ನವಮೀ (ತ್ರೇತಾ), ಭಾದ್ರಪದ ಕೃಷ್ಣ ತ್ರಯೋದಶೀ (ದ್ವಾಪರ) ಮತ್ತು ಮಾಘ ಅಮಾವಾಸ್ಯಾ. ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಚೈತ್ರ ಶುದ್ಧ ಪ್ರತಿಪದವು ಮಾನ್ಯವಾಗಿದೆ. ವತ್ಸರಾರಂಭವನ್ನೇ ಈ ರೂಪದಲ್ಲಿ ಆಚರಿಸುವುದು ರೂಢಿಗೆ ಬಂದಂತೆ ತೋರುತ್ತದೆ.

ಶ್ರಾದ್ಧಪದನಿರುಕ್ತಿಃ

ಪಿತ್ರೋರಾರಾಧನಂ ಸರ್ವಮಾಸ್ತಿಕ್ಯಮತಿನಿರ್ಭರೈಃ।
ಶ್ರದ್ಧಯಾ ಕ್ರಿಯತೇ ಯಸ್ಮಾಚ್ಛ್ರಾದ್ಧಮಿತ್ಯಭಿಧೀಯತೇ ॥ ೨೯ ॥

ಅಪೇಕ್ಷಿತಂ ನ ಪ್ರಯಚ್ಛೇತ್ ಸಂಪಾದಿತಪದಾರ್ಥಕೇ।
ನ ಸ ತತ್ಫಲಮಾಪ್ನೋತಿ ಕೃಪಣೋ ಗರ್ಹ್ಯಚೇತನಃ ॥ ೩೦ ॥

ಶ್ರಾದ್ಧಪದದ ನಿಷ್ಪತ್ತಿ

ಆಸ್ತಿಕ ಬುದ್ಧಿಯಿಂದ ತುಂಬಿದ ವ್ಯಕ್ತಿಗಳಿಂದ ಶ್ರದ್ಧಾ ಭಕ್ತಿಯಿಂದ ಎಲ್ಲಾ ಪಿತೃಗಳ ಆರಾಧನೆಯು ಆಚರಿಸಲ್ಪಡುತ್ತದೆಯೆಂದು ಇದು ಶ್ರಾದ್ಧವೆಂದು ಕರೆಯಲ್ಪಡುತ್ತದೆ. (೨೯). ಶ್ರಾದ್ಧದ ಸಂದರ್ಭದಲ್ಲಿ ಸಂಪಾದಿಸಲ್ಪಟ್ಟ ಪದಾರ್ಥಗಳಲ್ಲಿ ಅಪೇಕ್ಷಿತ ಪದಾರ್ಥವನ್ನು ನಿಮಂತ್ರಿತರಿಗೆ ಕೊಡುವುದಿಲ್ಲವೋ ಅಂತಹ ನಿಂದನೀಯ ಚೇತನನಾದ ಕೃಪಣನು ಯಾವುದೇ ಫಲವನ್ನು ಹೊಂದುವುದಿಲ್ಲ. (೩೦).

ಶ್ರಾದ್ಧಭೋಕ್ತೄಣಾಂ ನಿಯಮಾಃ

ಸಾಧಿತೇಷು ಪದಾರ್ಥೇಷು ಯಾಚಿತವ್ಯಮಪೇಕ್ಷಿತಮ್।
ಅನ್ಯಥಾ ಸ ಪಿತೃಘ್ನಃ ಸ್ಯಾದಸಂತೃಪ್ತಾನ್ನಭೋಜನಃ ॥ ೩೧ ॥

ಭೋಕ್ತಾ ತು ದಕ್ಷಿಣಾಂ ನೇಚ್ಛೇತ್ ಕರ್ತಾ ದದ್ಯಾಚ್ಚ ದಕ್ಷಿಣಾಮ್।
ಕೃತಾರ್ಥೌ ತಾವುಭೌ ಸ್ಯಾತಾಮನ್ಯಥಾ ದೋಷಭಾಜನೌ ॥ ೩೨ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರ್ಮಮಧ್ಯೇ ತು ಯೋ ಬ್ರೂತೇ ನಾಲಂ ಮೇ ದಕ್ಷಿಣೇತಿ ಚ।
ಕರ್ತಾಪಿ ಚೇನ್ನ ಪ್ರಯಚ್ಛೇತ್ ತೌ ದುರ್ಗತಿಮವಾಪ್ನುತಃ ॥ ೩೩ ॥

ಶ್ರಾದ್ಧದ ಊಟ ಮಾಡುವವರಿಗೆ ನಿಯಮಗಳು

ಮಾಡಿದ ಪದಾರ್ಥಗಳಲ್ಲಿ ತನ್ನ ಅಪೇಕ್ಷಿತ ಪದಾರ್ಥವನ್ನೇ ಕೇಳಬೇಕು. ಇಲ್ಲದೇ ಹೋದರೆ ಸಂತೃಪ್ತಿ ನೀಡದ ಅನ್ನವನ್ನುಂಡವನಾಗಿ (ಪಿತೃಗಳಿಗೆ ಅತೃಪ್ತಿಯನ್ನುಂಟು ಮಾಡುವುದರಿಂದ) ಪಿತೃಹಂತಕನಾಗುವನು. (೩೧). ಊಟ ಮಾಡುವವನು ದಕ್ಷಿಣೆಯನ್ನು ಬಯಸಬಾರದು, ಕರ್ತೃವು ತಾನೇ ದಕ್ಷಿಣೆಯನ್ನು ಕೊಡಬೇಕು. ಅವರಿಬ್ಬರೂ ಕೃತಕೃತ್ಯರು, ಇಲ್ಲದೆ ಹೋದರೆ ಇಬ್ಬರೂ ದೋಷಿಗಳು. (೩೨). ಕರ್ಮದ ಮಧ್ಯದಲ್ಲಿ ಯಾರು ಮಾತನಾಡುತ್ತಾ ನನಗೆ ದಕ್ಷಿಣೆ ಸಾಕಾಗಲಿಲ್ಲ ಎನ್ನುತ್ತಾನೋ, ಯಾವ ಕರ್ತೃವು ಅದನ್ನು ಕೊಡುವುದಿಲ್ಲವೋ ಅವರಿಬ್ಬರೂ ದುರ್ಗತಿಯನ್ನು ಹೊಂದುತ್ತಾರೆ. (೩೩).

ದೇಶಕಾಲಾದಿಷು ವಿಶೇಷಃ

ವಿಪ್ಲವೇ ದೇಶಕಾಲಾಭ್ಯಾಂ ವಿದೇಶಗಮನಾದಿಷು।
ಚಂದ್ರಸೂರ್ಯೋಪರಾಗೇ ಚ ಹೇಮ್ನಾ ವಾಽಽಮೇನ ವಾ ಪುನಃ॥
ಕಾರ್ಯಮಾರಾಧನಂ ಪ್ರತ್ಯಾಬ್ದಿಕಮಾಸಿಕವರ್ಜಿತಮ್ ॥ ೩೪ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರ-
ಬೃಹಸ್ಪತಿಸಂವಾದೇ ಶಿವಶಾಸನೇ ಚರ್ಯಾಪಾದೇ ಪ್ರಕೀರ್ಣಕವಿಧಿಕಥನಂ
ನಾಮ ಪಂಚಮಃ ಪಟಲಃ ॥ ೫ ॥

ದೇಶ-ಕಾಲಾದಿಗಳಲ್ಲಿ ವಿಶೇಷ

ವಿದೇಶಗಮನ ಇತ್ಯಾದಿ ಕಾರಣದಿಂದ ಪರಿಸ್ಥಿತಿಯಿಂದ ಗೊಂದಲವಾದಾಗ, ಚಂದ್ರ-ಸೂರ್ಯಗ್ರಹಣಗಳಾದಾಗ ಸಾಂವತ್ಸರಿಕ ಮತ್ತು ಮಾಸಿಕ ಆರಾಧನೆಗಳನ್ನು ಬಿಟ್ಟು ಮಿಕ್ಕವುಗಳಲ್ಲಿ ಚಿನ್ನದಿಂದ ಅಥವಾ ಬೇಯಿಸದ ಪದಾರ್ಥದಿಂದ ಆರಾಧನೆಯನ್ನು ನಡೆಸಬೇಕು. (೩೪).

ಇಲ್ಲಿಗೆ ಶ್ರೀ ಚಂದಜ್ಞಾನಾಗಮದ ಉತ್ತರ ಭಾಗದಲ್ಲಿ
ಅನಂತರುದ್ರ-ಬೃಹಸ್ಪತಿಗಳ ಸಂವಾದದಲ್ಲಿ ಶಿವಶಾಸನದಲ್ಲಿ ಚರ್ಯಾಪಾದದಲ್ಲಿ
ಪ್ರಕೀರ್ಣಕವಿಧಿ ಕಥನವೆಂಬ ಪಂಚಮ ಪಟಲ ಮುಗಿಯಿತು. (೫).

*

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಷಷ್ಠಃ ಪಟಲಃ

॥ ಆಶೌಚಶುದ್ಧಿಕಥನಮ್॥

ಬೃಹಸ್ಪತಿರುವಾಚ

ಅನಂತರುದ್ರ ಸರ್ವಜ್ಞ ಸರ್ವಾಗಮವಿಶಾರದ।
ಆಶೌಚಶುದ್ಧಿಂ ವದ ಮೇ ಕೃಪಯಾ ಕರುಣಾಕರ ॥ ೧ ॥

ಬೃಹಸ್ಪತಿಯು ಹೇಳಿದನು

ಸರ್ವಜ್ಞನಾದ, ಎಲ್ಲಾ ಆಗಮಗಳಲ್ಲಿ ಪರಿಣತನಾದ ಅನಂತರುದ್ರನೇ, ಕರುಣಾಕರನೇ, ಸೂತಕ ಶುದ್ಧೀಕರಣದ ಬಗ್ಗೆ ಕೃಪೆಯಿಟ್ಟು ಹೇಳು. (೧).

ಅನಂತರುದ್ರ ಉವಾಚ

ದ್ವಿವಿಧಮಾಶೌಚಂ ಪುನಶ್ಚತುರ್ಧಾ

ಆಶೌಚಶುದ್ಧಿಂ ವಕ್ಷ್ಯಾಮಿ ಶೃಣುಷ್ವಾವಹಿತೋ ಮುನೇ।
ಜನಿಜಂ ಮೃತಿಜಂ ಚೇತಿ ಪ್ರೋಕ್ತಮಾಶೌಚಕಂ ದ್ವಿಧಾ॥
ತದಲ್ಪಮಧಿಕಂ ಪೂರ್ಣಮಪೂರ್ಣಂ ಚ ಚತುರ್ವಿಧಮ್ ॥ ೨ ॥

ಕಾಲತೋಽಲ್ಪಾಧಿಕಂ ಜ್ಞೇಯಮಪೂರ್ಣಂ ತ್ರಿರಾತ್ರಕಮ್।
ಪೂರ್ಣಂ ದಶಾಹಂ ವಿಜ್ಞೇಯಂ ಸುರಲೋಕಾಭಿವಂದಿತ ॥ ೩ ॥

ಸೂತಕ ಎರಡು ವಿಧ, ಮತ್ತೆ ನಾಲ್ಕು ವಿಧ

ಮುನಿಯೇ, ಸೂತಕ ಶುದ್ಧೀಕರಣದ ಬಗ್ಗೆ ಹೇಳುತ್ತೇನೆ ಏಕಾಗ್ರತೆಯಿಂದ ಕೇಳು. ಜನ್ಮಜ ಮತ್ತು ಮರಣಜವೆಂದು ಸೂತಕವು ಎರಡು ವಿಧ. ಅದೇ ಮತ್ತೆ ಅಲ್ಪ, ಅಧಿಕ, ಪೂರ್ಣ ಮತ್ತು ಅಪೂರ್ಣವೆಂದು ನಾಲ್ಕು ವಿಧ. (೨). ಸುರಲೋಕದಲ್ಲಿ ಪೂಜಿತನೇ, ಕಾಲದ ದೃಷ್ಟಿಯಿಂದ ಅಲ್ಪ ಅಥವಾ ಅಧಿಕವೆಂದು ತಿಳಿಯಬೇಕು. ಅಪೂರ್ಣ ಸೂತಕವೆಂದರೆ ಮೂರು ರಾತ್ರಿಯದು ಮತ್ತು ಪೂರ್ಣ ಸೂತಕವೆಂದರೆ ಹತ್ತು ದಿನಗಳದ್ದು. (೩).

ಟಿಪ್ಪಣಿ : ಮಕುಟಾಗಮ, ಚ.ಪಾ., ೧೦. ೧೧-೧೨-ಇದೇ ವಿಷಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಶೌಚೇ ದಿವಸವ್ಯವಸ್ಥಾ

ಮಾತುಸ್ತ್ರಿರಾತ್ರಂ ಸ್ರಾವೇ ಸ್ಯಾತ್ ತಜ್‌ಜ್ಞಾತೀನಾಂ ನ ವಿದ್ಯತೇ।
ಮಾಸಸಂಖ್ಯಂ ಹಿ ಮಾತುಃ ಸ್ಯಾತ್ ಪಾತೇ ತಂ ತ್ರಿದಿನಂ ಪಿತುಃ ॥ ೪ ॥
ವಿಪ್ರಾಣಾಂ ತು ದಶಾಹಂ ಸ್ಯಾನ್ನೃಪಾಣಾಂ ದ್ವಾದಶಾಹಕಮ್।
ವಿಶಾಂ ಪಂಚದಶಾಹಂ ಸ್ಯಾನ್ಮಾಸಃ ಶೂದ್ರಸ್ಯ ಚೋದಿತಮ್ ॥ ೫ ॥
ಅತಿಕ್ರಾಂತೇ ದಶಾಹೇ ತು ಜಾತಾಶೌಚಂ ನ ವಿದ್ಯತೇ

ಸೂತಕದಲ್ಲಿ ದಿನಗಳ ವ್ಯವಸ್ಥೆ

ಗರ್ಭಸ್ರಾವವಾದ ಮೇಲೆ ಮಾತೃವಿಗೆ ಮೂರು ರಾತ್ರಿ ಸೂತಕ. ಬಂಧು ಜನರಿಗೆ ಸೂತಕ ಇರುವುದಿಲ್ಲ. ಎಷ್ಟನೇ ಮಾಸದಲ್ಲಿ ಆಯಿತು ಎಂಬುದರ ಮೇಲೆ ಮಾತೃವಿಗೆ ಅಷ್ಟೇ ದಿನದ ಮತ್ತು ತಂದೆಗೆ ಮೂರು ದಿನದ ಸೂತಕ. (೪). ಬ್ರಾಹ್ಮಣರಿಗೆ ಹತ್ತು ದಿನ, ಕ್ಷತ್ರಿಯರಿಗೆ ಹನ್ನೆರಡು ದಿನ, ವೈಶ್ಯರಿಗೆ ಹದಿನೈದು ದಿನ ಮತ್ತು ಶೂದ್ರರಿಗೆ ಒಂದು ತಿಂಗಳು ಸೂತಕವೆಂದು ನಿಯಮವಿದೆ. ಹತ್ತು ದಿನಗಳು ಕಳೆದ ಮೇಲೆ ಜನನ ಸೂತಕವಿರುವುದಿಲ್ಲ. (೫)

ಟಿಪ್ಪಣಿ : ಮಕುಟಾಗಮ, ಚ.ಪಾ., ೧೦. ೧೩-೧೫ ಇದೇ ವಿಷಯ.

ಜ್ಞಾತೀನಾಂ ಶುದ್ಧಿವ್ಯವಸ್ಥಾ

ಮೃತೇ ಜಾತೇ ಹಿ ಜ್ಞಾತೀನಾಂ ಶುದ್ಧಿಃ ಸ್ಯಾತ್ ಸ್ನಾನಮಾತ್ರತಃ।
ಸೋದರಾಣಾಂ ಚ ದಂಪತ್ಯೋರ್ವಿಶುದ್ಧಿಃ ಸ್ಯಾದ್ದಶಾಹತಃ ॥ ೬ ॥

ಮೃತಾವನುಪನೀತಸ್ಯ ಪಿತ್ರೋಸ್ತು ತ್ರಿದಿನಂ ಸ್ಮೃತಮ್।
ಉಪನೀತಸ್ಯ ತು ಮೃತೌ ದಶಾಹಂ ಸಂಪ್ರಕೀರ್ತಿತಮ್ ॥ ೭ ॥

ಆಸಪ್ತಮಂ ದಶಾಹಂ ಸ್ಯಾತ್ತ್ರಿರಾತ್ರಂ ತ್ವಾಚತುರ್ದಶಮ್।
ಸ್ನಾನಮಾತ್ರಂ ತ್ವೇಕವಿಂಶಮಾಶೌಚಂ ವಿದ್ಯತೇ ಮುನೇ ॥ ೮ ॥

ಮಾತುಲಾದಿಮೃತೌ ಜ್ಞೇಯಂ ತ್ರಿರಾತ್ರಂ ಸುರಸನ್ನುತ।
ಬಾಂಧವಾನಾಂ ತು ಮರಣೇ ಪಕ್ಷಿಣೀ ವಿಹಿತಾ ಪುನಃ ॥ ೯ ॥

ತ್ರಿರಾತ್ರಮಾತ್ರಿಮಾಸಂ ಸ್ಯಾದಾಷಣ್ಮಾಸಂ ತು ಪಕ್ಷಿಣೀ।
ಆವತ್ಸರಮಹೋರಾತ್ರಂ ತತಃ ಸ್ನಾತ್ವಾ ವಿಶುದ್ಧ್ಯತಿ ॥ ೧೦ ॥

ಬಂಧುಗಳ ಶುದ್ಧಿ ವ್ಯವಸ್ಥೆ

ಹುಟ್ಟುತ್ತಲೇ ಮಗು ಸತ್ತರೆ ಬಂಧುಗಳಿಗೆ ಸ್ನಾನ ಮಾತ್ರದಿಂದ ಶುದ್ಧಿ. ಸಹೋದರರಿಗೆ ಮಾತಾ ಪಿತೃಗಳಿಗೆ ಹತ್ತುದಿನಗಳ ಅನಂತರ ಸೂತಕ ಪರಿಹಾರ. (೬). ಉಪನಯನವಾಗದವನು ಸತ್ತರೆ ತಂದೆ-ತಾಯಿಗಳಿಗೆ ಮೂರುದಿನ ಸೂತಕ, ಉಪನಯನವಾದವನು ಸತ್ತರೆ ಹತ್ತು ದಿನಗಳ ಸೂತಕವೆಂದು ಹೇಳಲಾಗಿದೆ. (೭). ಏಳನೆಯ ಪೀಳಿಗೆಯವರಿಗೆ ಹತ್ತು ದಿನ, ಹದಿನಾಲ್ಕನೆಯ ಪೀಳಿಗೆಯವರೆಗೆ ಮೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾತ್ರಿ, ಇಪ್ಪತ್ತನೆಯ ಪೀಳಿಗೆಯವರೆಗೆ ಸ್ನಾನ ಮಾತ್ರದಿಂದ ಹೋಗುವ ಸೂತಕವು ಇರುತ್ತದೆ. (೮). ಸುರಪೂಜಿತನೇ, ಸೋದರ ಮಾವ ಮುಂತಾದವರು ಸತ್ತರೆ ಮೂರು ರಾತ್ರಿ, ಬಾಂಧವರ ಮರಣವಾದಾಗ ಪಕ್ಷಿಣೀ ವಿಹಿತವಾಗಿದೆ. (೯). ಮೂರು ತಿಂಗಳವರೆಗೆ ಮೂರು ರಾತ್ರಿ, ಆರು ತಿಂಗಳವರೆಗೆ ಪಕ್ಷಿಣೀ ಪರ್ಯಂತ ಮತ್ತು ವರ್ಷದವರೆಗೆ ಅಹೋರಾತ್ರ (ಒಂದು ಹಗಲು ಮತ್ತು ಒಂದು ರಾತ್ರಿ) ಸೂತಕವಿರುತ್ತದೆ. (೧೦).

ಟಿಪ್ಪಣಿ : ಮಕುಟಾಗಮ, ಚ.ಪಾ., ೧೦.೧೭-೨೦ ಇದೇ ವಿಷಯ. ಪಕ್ಷಿಣೀ "ಆಗಾಮಿವರ್ತಮಾನಹರ್ಯುಕ್ತಾಯಾಂ ನಿಶಿ ಪಕ್ಷಿಣೀ" (ಅಮರ ಕೋಶ, ೧.೪.೫)- ಬರುವ ಮತ್ತು ವರ್ತಮಾನ ದಿನಗಳೊಂದಿಗೆ ರಾತ್ರಿಯು ಪಕ್ಷಿಣೀ.

ಆಶೌಚಾನಾಂ ತಂತ್ರೇಣ ನಿವೃತ್ತಿಃ

ತಂತ್ರೇಣೈವ ವಿಶುದ್ಧಿಃ ಸ್ಯಾದನೇಕೇಷಾಂ ಸಮಾಗಮೇ।
ಅಲ್ಪಂ ಸಮಾನಮಪಿ ಚ ಪ್ರಥಮೇನ ನಿವರ್ತತೇ॥
ಆಶೌಚಮನ್ಯದೀಯಂ ತು ಪಿತ್ರಾಶೌಚೇನ ಬಾಧ್ಯತೇ ॥ ೧೧ ॥
ಶವಾನುಗಮನೇ ವಿಪ್ರಃ ಸ್ನಾತ್ವೋದ್ಧೂಲ್ಯ ಚ ಭಸ್ಮನಾ।
ಪ್ರಾಣಾನಾಯಮ್ಯ ಷಟ್ಕೃತ್ವಃ ಶಿವಂ ದೃಷ್ಟ್ವಾ ವಿಶುಧ್ಯತಿ ॥ ೧೨ ॥

ತಂತ್ರದಿಂದ ಸೂತಕದ ನಿವಾರಣೆ

ಅನೇಕ ಸೂತಕಗಳು ಸೇರಿದಾಗ ಎಲ್ಲವೂ ಒಂದೇ ಸಾರಿಗೆ ಶುದ್ಧಿಯನ್ನು ಹೊಂದುತ್ತವೆ. ಕೆಲವೇ ದಿನದ ಅಥವಾ ಸಮಾನ ದಿನದ ಸೂತಕವು ಮೊದಲನೆ ಸೂತಕದೊಂದಿಗೆ ನಿವೃತ್ತವಾಗುತ್ತದೆ. ಮಾತಾ-ಪಿತೃಗಳ ಸೂತಕದಿಂದ ಅನ್ಯ ಸೂತಕವು ಬಾಧಿತವಾಗುತ್ತದೆ. (೧೧). ಶವವನ್ನು ಹಿಂಬಾಲಿಸಿದ ದ್ವಿಜನು ಸ್ನಾನ ಮಾಡಿ, ಭಸ್ಮದಿಂದ ಉದ್ಧೂಲನ ಮಾಡಿಕೊಂಡು, ಪ್ರಾಣಯಾಮ ಮಾಡಿ, ಶಿವನ ದರ್ಶನ ಮಾಡಿ ಶುದ್ಧನಾಗುತ್ತಾನೆ. (೧೨).

ಟಿಪ್ಪಣಿ : ಮಕುಟಾಗಮ, ಚ.ಪಾ., ೧೦.೨೧-೨೫ನ್ನೂ ನೋಡಿರಿ.

ಆಶೌಚಾಪ್ರವೃತ್ತಿಃ

ಯತೀನಾಂ ಚ ವನಸ್ಥಾನಾಂ ನೈಷ್ಠಿಕಾನಾಂ ಚ ವರ್ಣಿನಾಮ್।
ಜನಿಜಂ ಮೃತಿಜಂ ವಾಪಿ ನಾಶೌಚಮಿಹ ವಿದ್ಯತೇ ॥ ೧೩ ॥

ಸೂತಕ ಬರದಿರುವುದು

ಸಂನ್ಯಾಸಿಗಳಿಗೆ, ವಾನಪ್ರಸ್ಥರಿಗೆ, ನೈಷ್ಠಿಕ ಬ್ರಹ್ಮಚಾರಿಗಳಿಗೆ ಜನನ ಸೂತಕವಾಗಲಿ ಮರಣ ಸೂತಕವಾಗಲಿ ಇರುವುದಿಲ್ಲ. (೧೩).

ಟಿಪ್ಪಣಿ : ಮಕುಟಾಗಮ, ಚ.ಪಾ., ೧೦-೨೬ ಇದೇ ವಿಷಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸದ್ಯಃ ಶೌಚವ್ಯವಸ್ಥಾ

ಯಜ್ಞೇ ವಿವಾಹೇ ದಾನೇ ಚ ಸಂಗ್ರಾಮೇ ದೇಶವಿಪ್ಲವೇ।
ಆಪದ್ಯಪಿ ಚ ಕಷ್ಟಾಯಾಂ ಸದ್ಯಃಶೌಚಂ ವಿಧೀಯತೇ ॥ ೧೪ ॥
ದೈವೇಷು ರಾಜಕೀಯೇಷು ಸಾಂಘಿಕೇಷು ಚ ಕರ್ಮಸು।
ನಿಯುಕ್ತಾನಾಂ ತು ಸರ್ವೇಷಾಂ ಸದ್ಯಃ ಶೌಚಂ ವಿಧೀಯತೇ ॥ ೧೫ ॥

ಸದ್ಯವೇ ಶುದ್ಧಿಯ ವ್ಯವಸ್ಥೆ

ಯಜ್ಞದಲ್ಲಿ, ವಿವಾಹದಲ್ಲಿ, ದಾನದಲ್ಲಿ, ಯುದ್ಧದಲ್ಲಿ, ದೇಶದಲ್ಲಿ ದಂಗೆಯಾದಾಗ, ಆಪತ್ತಿನಲ್ಲಿ, ಕಷ್ಟದಲ್ಲಿ ಸದ್ಯವೇ ಶುದ್ಧಿಯು ವಿಧಿಸಲ್ಪಟ್ಟಿದೆ. (೧೪). ದೇವಕಾರ್ಯದಲ್ಲಿ, ರಾಜಕೀಯದಲ್ಲಿ, ಸಂಘಿಕ ಕಾರ್ಯಗಳಲ್ಲಿ ನಿಯುಕ್ತರಾದವರಿಗೆ ಎಲ್ಲರಿಗೂ ಸದ್ಯವೇ ಶುದ್ಧಿಯು ವಿಧಿಸಲ್ಪಟ್ಟಿದೆ. (೧೫).

ಟಿಪ್ಪಣಿ : ಮಕುಟಾಗಮ, ಚ.ಪಾ., ೧೦-೨೭ನ್ನೂ ನೋಡಿರಿ.

ಸಂಧ್ಯಾದಿಷ್ವಾಶೌಚಾಪ್ರವೃತ್ತಿಃ

ಸ್ವಕರ್ಮಕಾಲೇ ಸಂಶುದ್ಧಿಃ ಸರ್ವಶಾಸ್ತ್ರೇಷು ಚೋದಿತಾ।
ಅತಃ ಸಂಧ್ಯಾಮರ್ಚನಮಪ್ಯಾಶೌಚೇ ನ ಪರಿತ್ಯಜೇತ್ ॥ ೧೬ ॥
ಸಂಶುದ್ಧಿಃ ಸಂಗ್ರಹೇಣೋಕ್ತಾ ಸಕಲಾಗಮಚೋದಿತಾ।
ಮುನಿವೃಂದಾರಕಸ್ತುತ್ಯ ಕಿಮನ್ಯಚ್ಛ್ರೋತುಮಿಚ್ಛಸಿ ॥ ೧೭ ॥

ಇತಿ ಶ್ರೀಚಂದ್ರಜ್ಞಾನಾಗಮೇ ಉತ್ತರಭಾಗೇಽನಂತರುದ್ರ-ಬೃಹಸ್ಪತಿಸಂವಾದೇ ಶಿವಶಾಸನೇ ಚರ್ಯಾಪಾದೇ ಆಶೌಚಶುದ್ಧಿಕಥನಂ ನಾಮ ಷಷ್ಠಃ ಪಟಲಃ ॥ ೬ ॥

ಸಂಧ್ಯಾವಂದನೆ ಮುಂತಾದವುಗಳಲ್ಲಿ ಸೂತಕದ ಅಪ್ರವೃತ್ತಿ

ನಿತ್ಯ ಕರ್ಮದ ಸಮಯ ಬಂದಾಗ ಶಾಸ್ತ್ರಗಳಲ್ಲಿ ತತ್ಕಾಲ ಶುದ್ಧಿಯು ಹೇಳಲ್ಪಟ್ಟಿದೆ. ಆದ್ದರಿಂದ ಸಂಧ್ಯಾವಂದನೆ ಮತ್ತು ಪೂಜೆಗಳನ್ನು ಸೂತಕಕಾಲದಲ್ಲಿ ಬಿಡಬಾರದು. (೧೬). ಎಲ್ಲಾ ಆಗಮಗಳಲ್ಲಿ ವಿಧಿಸಿದ ಸೂತಕ ಶುದ್ಧಿಯ ವಿಷಯವನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ಮುನಿ ಸಮೂಹಕ್ಕೆ ಸ್ತುತ್ಯನಾದವನೇ, ಮತ್ತಿನ್ನೇನನ್ನು ಕೇಳಲಿಚ್ಛಿಸುವೆ? (೧೭).

